ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ
ಮಾಲಿಕೆ

# ಶ್ರೀ ವೀರೇಂದ್ರ ಪಾಟೀಲ್


ಡಾ: ಎಸ್. ಎಚ್. ಕವಂಟೆ,
ಪ್ರಾಧ್ಯಾಪಕರು, ರಾಜ್ಯ ಶಾಸ್ತ್ರ ವಿಭಾಗ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಡಾ: ವಿ.ಜಿ. ಪೂಜಾರ್
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ



ಕರ್ನಾಟಕ ವಿಧಾನ ಸಭೆ ಸಚಿವಾಲಯ,

ವಿಧಾನ ಸೌಧ, ಬೆಂಗಳೂರು - 560 001.

*ಪ್ರತಿಭಾವಂತ ಸಂಸದೀಯ ಪಟುಗಳ*
*ಬದುಕು ಬರಹ ಮಾಲಿಕೆ*

# ವೀರೇಂದ್ರ ಪಾಟೀಲ್

**Eminent Parlimentarian Series**

# VEERENDRA PATIL

© ಮುದ್ರಣದ ಹಕ್ಕನ್ನು ಕಾಯ್ದಿರಿಸಲಾಗಿದೆ

ಮೊದಲ ಮುದ್ರಣ:
ಡಿಸೆಂಬರ್, 1999 - 1000 ಪ್ರತಿಗಳು

ಮುಖಪುಟ ವಿನ್ಯಾಸ:
ಸರ್ಕಾರಿ ಮುದ್ರಣಾಲಯ
ಬೆಂಗಳೂರು.

ಪ್ರಕಟಣೆ:
ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು - 560 001.

# ನಮ್ಮ ಮಾತು

ಕರ್ನಾಟಕ ರಾಜ್ಯದ ವಿಧಾನ ಮಂಡಲದ ಸಚಿವಾಲಯವು ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳನ್ನು ಕುರಿತು ಬದುಕು - ಬರಹ ಮಾಲಿಕೆಯ ಅಡಿಯಲ್ಲಿ ಪುಸ್ತಕಗಳನ್ನು ಪ್ರಕಟಿಸಲು ತೀರ್ಮಾನಿಸಿದ್ದು ನಿಜಕ್ಕೂ ಶ್ಲಾಘನೀಯವಾದ ಕಾರ್ಯವಾಗಿದೆ. ಇದರಿಂದ ಶಾಸನ ಸಭೆಗಳಲ್ಲಿ ಸೇವೆ ಸಲ್ಲಿಸಿದ ಹಿರಿಯ ಹಾಗೂ ಪ್ರತಿಭಾವಂತ ಸಂಸದೀಯ ಪಟುಗಳ ವಿಚಾರಗಳು ಮತ್ತು ಅನುಭವಗಳು ಮುಂದಿನ ಶಾಸಕರುಗಳಿಗೆ, ಅಧಿಕಾರಿಗಳಿಗೆ ದಾರಿ ದೀಪವಾಗುವುದರಲ್ಲಿ, ಸಂದೇಹವಿಲ್ಲ. ಈ ಯೋಜನೆಯ ಅಡಿಯಲ್ಲಿ ಈಗಾಗಲೇ ಕೆ. ಹನುಮಂತಯ್ಯ, ಎಸ್. ನಿಜಲಿಂಗಪ್ಪನವರ ಕೃತಿಗಳು ಪ್ರಕಟಗೊಂಡಿವೆ. ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ, ಶ್ರೇಷ್ಠ ರಾಜಕಾರಣಿ ವೀರೇಂದ್ರ ಪಾಟೀಲರನ್ನು ಕುರಿತು ಪುಸ್ತಕ ರಚಿಸುವ ಜವಾಬ್ದಾರಿಯನ್ನು ವಿಧಾನ ಮಂಡಲದ ಸಚಿವಾಲಯದ ಗ್ರಂಥಾಲಯ ಉಪ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ನಮಗೆ ಒಪ್ಪಿಸಿದಾಗ ನಾವು ಸಂತೋಷದಿಂದ ಒಪ್ಪಿಕೊಂಡುದರ ಫಲವಾಗಿ ಪ್ರಸ್ತುತ ಗ್ರಂಥವು ರಚಿಸಲ್ಪಟ್ಟಿದೆ.

ವೀರೇಂದ್ರ ಪಾಟೀಲರು ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಗಳಾಗಿ, ಕೇಂದ್ರದಲ್ಲಿ ವಿವಿಧ ಖಾತೆಗಳ ಮಂತ್ರಿಗಳಾಗಿ, ಲೋಕ ಸಭೆಯ ಸದಸ್ಯರಾಗಿ, ಅವಿಸ್ಮರಣೀಯ ಸೇವೆ ಸಲ್ಲಿಸಿದ ಶ್ರೇಷ್ಠ ಹಾಗೂ ಪ್ರಾಮಾಣಿಕ ತತ್ವಾಧಾರಿತ ಮುತ್ಸದ್ದಿಗಳು. ಸುಮಾರು ಮೂರು ದಶಕಗಳ ಕಾಲ ಅವರು ಸಂಸದೀಯ ಪಟುಗಳಾಗಿ, ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆ ಅಮೋಘವಾದದ್ದು. ಶ್ರೀ ವೀರೇಂದ್ರ ಪಾಟೀಲರು ಉತ್ತಮ ವಾಗ್ಮಿಗಳು, ವಿಚಾರವಂತರು, ಜನಪ್ರಿಯ ಧುರೀಣರು. ಅವರು ಶಾಸನ ಸಭೆಯಲ್ಲಿ ಮತ್ತು ಸಂಸತ್ತಿನಲ್ಲಿ, ಮಂಡಿಸಿದ ವಿಚಾರಗಳು, ಮಾಡಿದ ಭಾಷಣಗಳು ತುಂಬಾ ಮೌಲಿಕವಾದುದಾಗಿವೆ. ಇವನ್ನೆಲ್ಲಾ ನಾವು ಸಂಗ್ರಹಿಸಲು ವಿಧಾನ ಸೌಧದ ಗ್ರಂಥಾಲಯಕ್ಕೆ ಹೋದಾಗ, ವಿಧಾನ ಸಭೆ ಸಚಿವಾಲಯದ ಕಾರ್ಯದರ್ಶಿಯವರು ಹಾಗೂ ಅವರ ಸಿಬ್ಬಂದಿ ವರ್ಗದವರು ತುಂಬು ಮನಸ್ಸಿನ ಸಹಕಾರ ನೀಡಿದ್ದಾರೆ. ಅವರಿಗೆ ನಾವು ಕೃತಜ್ಞರು. ಶ್ರೀ ವೀರೇಂದ್ರ ಪಾಟೀಲರ ಆತ್ಮಕಥನ ರೂಪದ ಬರಹವನ್ನು ಹಾಗೂ ಅಮೂಲ್ಯವಾದ ಮಾಹಿತಿಯನ್ನು ಒದಗಿಸಿದ ಅವರ ಪುತ್ರರು, ಚಿಂಚೋಳಿ ಕ್ಷೇತ್ರದ ವಿಧಾನ ಸಭೆಯ ಸದಸ್ಯರೂ ಆದ ಶ್ರೀ ಕೈಲಾಸ ನಾಥ ಪಾಟೀಲ, ಲೋಕಸಭೆಯ ಮಾಜಿ ಸದಸ್ಯರಾದ ಡಾ: ಬಿ.ಜಿ. ಜವಳಿ ಅವರಿಗೂ ಮತ್ತು ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರುದ್ರಪ್ಪ ಅವರಿಗೂ ನಮ್ಮ ಅನಂತ ಅನಂತ ವಂದನೆಗಳು.

ಪ್ರಸ್ತುತ ಕೃತಿ ರಚನೆಗೆ ಪ್ರೋತ್ಸಾಹಿಸಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಎಂ.ವಿ. ನಾಡಕರ್ಣಿಯವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ. ಪ್ರತ್ಯೇಕವಾಗಿ ಮತ್ತು ಪರೋಕ್ಷವಾಗಿ ಈ ಕೃತಿಯ ರಚನೆಗೆ ನೆರವು ನೀಡಿದ ಶ್ರೀ ಎಚ್.ಎಸ್. ಕವಂಟೆ ಹಾಗೂ ಇನ್ನುಳಿದ ಮಿತ್ರರಿಗೂ ಧನ್ಯವಾದಗಳು. ಮತ್ತು ಈ ಕೃತಿಯನ್ನು ಅಂದವಾಗಿ ಬೆರಳಚ್ಚು ಮಾಡಿದ ರಾಜ್ಯ ಶಾಸ್ತ್ರ ವಿಭಾಗದ ಸಂಶೋಧಕ ಮಿತ್ರರಾದ ಶ್ರೀ ಜಗದೀಶ ಆರ್. ಪಾಂಚಾಳ ಹಾಗೂ ಶ್ರೀ ಈರಣ್ಣಾ ಎನ್. ಇಟ್ಟಿಗಿ ಅವರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಡಾ. ಎಸ್. ಎಚ್. ಕವಂಟೆ,
ರಾಜ್ಯಶಾಸ್ತ್ರ ಪ್ರಾಧ್ಯಾಪಕರು,

ಗುಲಬರ್ಗಾ ವಿಶ್ವವಿದ್ಯಾಲಯ.
08-11-1999.

ಡಾ. ವಿ.ಜಿ. ಪೂಜಾರ,
ಕನ್ನಡ ಪ್ರಾಧ್ಯಾಪಕರು.

# ಪೀಠಿಕೆ

ದೇಶದ ಸ್ವಾತಂತ್ರ ಸುವರ್ಣ ಮಹೋತ್ಸವವನ್ನು ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದು ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿರುವ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಕಿರುಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರ ತಂದಿರುತ್ತಾರೆ. ಅವುಗಳಲ್ಲಿ ಡಾ: ರಾಂಮನೋಹರ ಲೋಹಿಯಾ ಮತ್ತು ಶೇಕ್ ಮಹಮದ್ ಅಬ್ದುಲ್ ಮತ್ತು ಕೃಷ್ಣ ಮೆನನ್ ಮೊದಲಾದ ಗಣ್ಯರ ಬಗ್ಗೆ ಆಂಗ್ಲ ಭಾಷೆಯಲ್ಲಿ ಪ್ರಕಟವಾಗಿದ್ದ ಕಿರುಹೊತ್ತಿಗೆಗಳನ್ನು ನಾವು ಕನ್ನಡದಲ್ಲಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸ ಬಯಸುತ್ತೇನೆ.

ಹಾಗಿದ್ದಲ್ಲಿ ಸಂಸದೀಯ ಪಟುಗಳಾದ ಅನೇಕ ಮಹನೀಯರ ಕುರಿತ ಕಿರುಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು ಈ ಕಾರ್ಯವನ್ನು ವಿಧಾನ ಸಭೆಯ ಸದಸ್ಯರಾದ ಶ್ರೀ. ಬಿ.ಬಿ. ಶಿವಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಧಾನ ಮಂಡಲದ ಗ್ರಂಥಾಲಯ ಉಪಸಮಿತಿಗೆ ವಹಿಸಲಾಗಿತ್ತು. ಈ ಉಪ ಸಮಿತಿಯು ಕಾರ್ಯ ಪ್ರವೃತ್ತವಾಗಿ ರಾಜ್ಯದ ವಿಶ್ವವಿದ್ಯಾನಿಲಯಗಳ ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿತು.

ಈ ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರ ಬಗೆಗಿನ ಪ್ರತಿಗಳನ್ನು ಹೊರತಲಾಗಿದೆ.

ಈಗ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಾದ ಡಾ|| ಎನ್.ಹೆಚ್. ಕವಂತೆ ಮತ್ತು ಶ್ರೀ ವಿ.ಜಿ. ಪೂಜಾರ್ ಅವರುಗಳು ರಚಿಸಿರುವ ಶ್ರೀ ವೀರೇಂದ್ರ ಪಾಟೀಲ್ ಅವರ ಬಗೆಗಿನ ಪುಸ್ತಕದ ಪ್ರತಿಯನ್ನು ತಮ್ಮ ಮುಂದಿಡಲು ಹೆಮ್ಮೆ ಎನಿಸುತ್ತದೆ. ಈ ಪುಸ್ತಕವನ್ನು ರಚಿಸಿದ್ದ ಈ ಲೇಖಕರುಗಳಿಗೆ ಹಾಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಸದಸ್ಯರುಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಕಿರುಹೊತ್ತಿಗೆಗಳು ಮಾನ್ಯ ಸದಸ್ಯರುಗಳಿಗೆ ಮತ್ತು ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಅನುಭವ ನೀಡುತ್ತವೆ ಮತ್ತು ಉಪಯುಕ್ತವಾಗುತ್ತವೆಂದು ಭಾವಿಸುತ್ತೇನೆ.

ಡಿ.ಬಿ.ಕಲ್ಮಣಕರ್
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಎಂ.ವಿ. ವೆಂಕಟಪ್ಪ,
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ಪ ರಿ ವಿ ಡಿ

## ಭಾ ಗ - 1


| | ಪುಟ ಸಂಖ್ಯೆ |
|---|---|
| ಶ್ರೀ ವೀರೇಂದ್ರ ಪಾಟೀಲರ ವ್ಯಕ್ತಿತ್ವ. | 3 |


## ಭಾ ಗ - 2

### ಪ್ರತಿಭಾವಂತ ಸಂಸದೀಯ ಪಟುವಾಗಿ


1. ಅನುದಾನಗಳ ಬೇಡಿಕೆಗಳ - ನಂ. 15 ನ್ಯಾಯ, ನಂ. 16 ಕಾರಾಗೃಹಗಳ ಆಡಳಿತ ಕುರಿತು ಪ್ರಶ್ನೆಗಳಿಗೆ ಮತ್ತು ಚರ್ಚೆಗಳಿಗೆ ಸ್ಪಷ್ಟೀಕರಣ. 1958 ಏಪ್ರಿಲ್ 10, ಗೃಹ ಮತ್ತು ಕೈಗಾರಿಕಾ ಸಚಿವರಾಗಿ. 29

2. ಹೇಮಾವತಿ ಪ್ರಾಜೆಕ್ಟ್ ಕುರಿತು ಸದಸ್ಯರ ಪ್ರಶ್ನೆಗಳಿಗೆ ನೀಡಿದ ಉತ್ತರಗಳು, 1968, ಮಾರ್ಚ್ 8 ಲೋಕೋಪಯೋಗಿ ಮಂತ್ರಿಗಳಾಗಿ. 40

3. ರಾಜ್ಯಕ್ಕೆ ಹಂಚಲಾದ ಕಾವೇರಿ ನೀರಿನ ಉಪಯೋಗ ಕುರಿತು ಪ್ರಶ್ನೆಗಳಿಗೆ ನೀಡಿದ ಉತ್ತರ - 1968, ಮಾರ್ಚ್ 8. 45

4. ಕನಕಪುರ ತಾಲೂಕಿನ ಮೇಕೆದಾಟಿನಲ್ಲಿ ಹೈಡ್ರೋಎಲೆಕ್ಟ್ರಿಕ್ ಯೋಜನೆ ಕುರಿತಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1968, ಮಾರ್ಚ್ 11. 51

5. ಶರಾವತಿ ಯೋಜನೆಯಲ್ಲಿ ಸ್ಟ್ಯಾಂಡ್ ಬೈ ಪವರ್ ಚಾನಲ್ ಕುರಿತಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1968, ಮಾರ್ಚ್ 12. 58

6. ನೀರಾವರಿಗಾಗಿ ಚಿಕ್ಕ ಹೊಳೆ ನೀರಿನ ಉಪಯೋಗ ಕುರಿತು ಕೇಳಲಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1968, ಮಾರ್ಚ್ 12. 62

7. ಹಾರಂಗಿ ಮತ್ತು ಹೇಮಾವತಿ ಅಣೆಕಟ್ಟೆಗೆ ತಾಂತ್ರಿಕ ವಿಮೋಚನೆ ಕುರಿತ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1968, ಮಾರ್ಚ್ 12. 65

8. ಲೋಕೋಪಯೋಗಿ ಹಾಗೂ ವಿದ್ಯುತ್ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಪ್ರಶ್ನೆಗಳಿಗೆ ಮತ್ತು ಚರ್ಚೆಗಳಿಗೆ ನೀಡಿದ ಸ್ಪಷ್ಟೀಕರಣ. 1968, ಮಾರ್ಚ್ 21. 73

9. ತ್ರಾವಣಕೋರದ ಎಲಿಯ ಮಹಾರಾಜರ ಅರಮನೆಯನ್ನು ಖರೀದಿಸಿದ ಬಗ್ಗೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1968, ಏಪ್ರಿಲ್ 5. 94

## ಭಾ ಗ - 3

## ರಾಜ್ಯದ ಮುಖ್ಯಮಂತ್ರಿಗಳಾಗಿ

1. ವಿಧಾನ ಸಭೆಯ ಅಧ್ಯಕ್ಷ ಶ್ರೀ ವೈಕುಂಠಾ ಬಾಳಿಗಾ ಅವರ ನಿಧನದ ಸಂತಾಪ ಸೂಚನೆಯ ಗೊತ್ತುವಳಿಯ ಮುಂಡನೆ ಮೇಲಿನ ಭಾಷಣ 1968, ಸೆಪ್ಟೆಂಬರ್ 2. 103

2. ರಾಜ್ಯದಲ್ಲಿ ಅಭಾವ ಪರಿಸ್ಥಿತಿಯನ್ನು ಕುರಿತು ವಿಧಾನ ಸಭೆಯಲ್ಲಿ ಮಾಡಿದ ಭಾಷಣ 1968, ಸೆಪ್ಟೆಂಬರ್ 3. 105

3. ರಾಜ್ಯದ ಕೆಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿಯ ಗೊತ್ತುವಳಿಯ ಕುರಿತಾದ ಚರ್ಚೆಯ ಮೇಲೆ ಸ್ಪಷ್ಟೀಕರಣ. 1968, ಸೆಪ್ಟೆಂಬರ್ 10. 110

4. ವೈದ್ಯಕೀಯ ಸೇವೆಗಳ ನಿರ್ದೇಶಕರ ವಿರುದ್ಧದ ದೂರುಗಳ ಬಗ್ಗೆ ಹೇಳಿಕೆ. 1969, ಜನವರಿ 17. 122

5. ವಿರೋಧ ಪಕ್ಷ ಮಂಡಿಸಿದ ಅವಿಶ್ವಾಸ ನಿರ್ಣಯದ ಮಂಡನೆಗೆ ಸಮರ್ಥನೆ 1969, ಜನವರಿ 22. 126

6. ಭ್ರಷ್ಟಾಚಾರದ ಬಗ್ಗೆ ಚರ್ಚೆ ಮತ್ತು ಸ್ಪಷ್ಟೀಕರಣ. 1969, ಜನವರಿ 23. 135

7. ರಾಜ್ಯಪಾಲರ ಭಾಷಣದ ಮೇಲೆ ಆಭಾರ ಸಲ್ಲಿಸುವ ನಿಲುವಳಿಯನ್ನು ಕುರಿತು ಸ್ಪಷ್ಟೀಕರಣ. 1969, ಜನವರಿ 23. 139

8. ಮಹಾರಾಷ್ಟ್ರದಲ್ಲಿ ಶಿವಸೇನೆಯ ಹಿಂಸಾತ್ಮಕ ಕಾರ್ಯ ಚಟುವಟಿಕೆಗಳನ್ನು ಕುರಿತು ಸ್ಪಷ್ಟೀಕರಣ. 1969 ಫೆಬ್ರವರಿ 25. 141

9. ನೀರಾವರಿ ಮತ್ತು ವಿದ್ಯುತ್‌ಚ್ಛಕ್ತಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ. 1969, ಮಾರ್ಚ್ 7. 149

10. ಗಡಿ ವಿಷಯಗಳ ಮೇಲೆ ಮಹಾಜನ ಸಮಿತಿಯ ವರದಿ ಕುರಿತು ಹೇಳಿಕೆ. 1969 ಮಾರ್ಚ್ 10. 156

11. ಹುಬ್ಬಳ್ಳಿಯಲ್ಲಾದ ಕೋಮು ಗಲಭೆ ಕುರಿತ ಚರ್ಚೆಯಲ್ಲಿ ನೀಡಿದ ಸ್ಪಷ್ಟೀಕರಣ, 1969 ಮಾರ್ಚ್ 10. 159

12. ಭ್ರಷ್ಟಾಚಾರದ ಕುರಿತ ಹೇಳಿಕೆ. 1969 ಮಾರ್ಚ್ 13. 161

13. ದಾವಣಗೆರೆಯಲ್ಲಿ - ವ್ಯವಸಾಯ ವಸ್ತುಪ್ರದರ್ಶನದಲ್ಲಿ, ಗೂಂಡಾಗಳಿಂದ ಉಂಟಾದ ಗಲಭೆಯ ಕುರಿತ ಅವಿಶ್ವಾಸ ಗೊತ್ತುವಳಿಯ ಮಂಡನೆಯ ಮೇಲೆ ಸ್ಪಷ್ಟೀಕರಣ. 1969 ಮಾರ್ಚ್ 21. 166

14. ರಾಷ್ಟ್ರಪತಿ ಜಾಕೀರ ಹುಸೇನರ ನಿಧನದ ನಂತರ ಸಂತಾಪ ಸೂಚಕ ಭಾಷಣ. 1969 ಆಗಷ್ಟ್ 14. 168

15. ಸದಸ್ಯರ ಬಂಧನದ ಬಗ್ಗೆ ಶ್ರೀ ವೀರೇಂದ್ರ ಪಾಟೀಲರ ವಿವರಣೆ 1970 ಮಾರ್ಚ್ 14. 170

## ಭಾ ಗ - 4

### ಕೇಂದ್ರ ಸಚಿವರಾಗಿ ಮತ್ತು ಲೋಕ ಸಭೆಯ ಸದಸ್ಯರಾಗಿ

1. ಸಮಾಚಾರ ಭಾರತಿಯ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಕೇಳಿದ ಕೆಲವು ಪ್ರಶ್ನೆಗಳಿಗೆ ನೀಡಿದ ಉತ್ತರಗಳು - 1984, ಏಪ್ರಿಲ್ 19, ಕಾರ್ಮಿಕ ಸಚಿವರು. 181

2. ರಾಸಾಯನಿಕ, ರಸಗೊಬ್ಬರ, ಉದ್ದಿಮೆ ಮತ್ತು ಕಂಪನಿ ವ್ಯವಹಾರಗಳ ಮಂತ್ರಿಯಾಗಿ, ಗ್ರಾಹಕರ ಉತ್ಪನ್ನಗಳ ತಯಾರಕರಿಂದ ಆಶ್ವಾಸನೆ ಕುರಿತ ಪ್ರಶ್ನೆಗಳಿಗೆ ನೀಡಿದ ಉತ್ತರಗಳು 1985, ಮಾರ್ಚ್ 26. 183

3. ಭೂಪಾಲ್ ಗ್ಯಾಸ್ ಲೀಕೇಜಿನ ಮೇಲೆ ಅಮೆರಿಕೆಯ ಯುನಿಯನ್ ಕಾರ್ಬೈಡ್ ಕಾರ್ಪೊರೇಷನ್ನಿನಿಂದ ವರದಿಯಾದ ತಾಂತ್ರಿಕ ವರದಿಯ ಬಿಡುಗಡೆ - 1985, ಮಾರ್ಚ್ 29. 186

4. ಕೇಂದ್ರ ಹಣಕಾಸಿನ ಮಂತ್ರಿ - ಶ್ರೀ ವಿ.ಪಿ. ಸಿಂಗರು ಮಂಡಿಸಿದ "ಹಣಕಾಸಿನ ಮಸೂದೆ" ಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ನೀಡಿದ ಸ್ಪಷ್ಟೀಕರಣ (ಗುಲಬರ್ಗಾ ಕ್ಷೇತ್ರದ ಲೋಕಸಭಾ ಸದಸ್ಯರಾಗಿ) 1986, ಏಪ್ರಿಲ್ 24. 188

## ಭಾ ಗ - 5

## 2 ನೇ ಬಾರಿಗೆ ಕರ್ನಾಟಕದ ಮುಖ್ಯ ಮಂತ್ರಿಗಳಾಗಿ

1. ನಿಲುವಳಿ ಸೂಚನೆಯ ಮಂಡನೆಗೆ ಅನುಮತಿ ಕೋರಿಕೆ - ರಾಜ್ಯದ ರೈತರ ಸಹಕಾರಿ ಸಂಘಗಳ ಸಾಲವನ್ನು ಮನ್ನಾ ಮಾಡುವಂತೆ ರಾಜ್ಯ ಸರಕಾರಕ್ಕೆ ಒತ್ತಾಯ. 1990, ಮಾರ್ಚ್ 20. 195

2. ಕಾವೇರಿ ಜಲ ವಿವಾದದ ಪ್ರಸ್ತಾವನೆ ಮತ್ತು ಚರ್ಚೆ 1990 ಜೂನ್ 4. 201

3. ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ - ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸ್ಪಷ್ಟೀಕರಣ 1990 ಜೂನ್ 6. 214

4. ಬೆಲೆ ಏರಿಕೆ ಮೇಲಿನ ಗಮನ ಸೆಳೆಯುವ ನಿಲುವಳಿ ಕುರಿತು ಚರ್ಚೆ ಮೇಲೆ ಸ್ಪಷ್ಟೀಕರಣ 1990 ಜೂನ್ 6. 217

5. ರೈತರ ಸಾಲ ಮನ್ನಾ ಕುರಿತು ಸ್ಪಷ್ಟೀಕರಣ. 1990 ಜೂನ್ 7. 225

6. ಟೆಲಿಫೋನ್ ಕದ್ದಾಲಿಕೆ ಹಗರಣದ ಬಗ್ಗೆ ಸ್ಪಷ್ಟೀಕರಣ 1990 ಜೂನ್ 26. 237

## ಭಾ ಗ - 6

ಶ್ರೀ ವೀರೇಂದ್ರ ಪಾಟೀಲ್ ಅವರು ತಮ್ಮ ಕ್ಷೇತ್ರದಲ್ಲಿ ಕೈಕೊಂಡಿದ್ದ ಅಭಿವೃದ್ಧಿ ಕಾರ್ಯಗಳು. 245

# ಭಾಗ - 1

# ಶ್ರೀ ವೀರೇಂದ್ರ ಪಾಟೀಲರ ವ್ಯಕ್ತಿತ್ವ

# ಭಾ ಗ - 1

## ಶ್ರೀ ವೀರೇಂದ್ರ ಪಾಟೀಲರ ವ್ಯಕ್ತಿತ್ವ

**ಪೀಠಿಕೆ:**

ಶ್ರೀ ವೀರೇಂದ್ರ ಪಾಟೀಲ ಅವರು ಕರ್ನಾಟಕದ ಹೆಮ್ಮೆಯ ಸುಪುತ್ರರು. ಶ್ರೇಷ್ಠ ರಾಜಕಾರಣಿಗಳು, ಮುತ್ಸದ್ದಿಗಳು, ಚತುರ ಸಂಸದೀಯ ಪಟುಗಳು. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಇವರ ಹೆಸರು ಚಿರಸ್ಥಾಯಿಯಾಗಿ ಉಳಿಯುವಂಥದ್ದು. ಕರ್ನಾಟಕದ ಹಿಂದುಳಿದ ಭಾಗವೆಂದೇ ಪ್ರಸಿದ್ಧಿ ಪಡೆದ ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿ ಹುಟ್ಟಿ ಬೆಳೆದು ಸ್ವಪ್ರಯತ್ನ, ಪ್ರತಿಭೆ, ಪ್ರಾಮಾಣಿಕತೆ ಹಾಗೂ ಸದ್ಗುಣಗಳನ್ನು ಮೈಗೂಡಿಸಿಕೊಂಡು ಒಬ್ಬ ನಿಷ್ಠಾವಂತ, ವರ್ಚಸ್ಸುಳ್ಳ ರಾಜಕಾರಣಿಯಾಗಿ ಬೆಳೆದರು. ರಾಜಕಾರಣದಲ್ಲಿ ಶುದ್ಧ ಪ್ರಾಮಾಣಿಕತೆ, ಸತ್ಯ ನಿಷ್ಠುರತೆ, ಸತತ ಪ್ರಯತ್ನ, ಜನೋಪಯೋಗಿ ಹಾಗೂ ಜನ ಕಲ್ಯಾಣ ಕಾರ್ಯಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡ ಮುತ್ಸದ್ದಿಗಳು. ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆಗಳಿಗೂ ಪ್ರೋತ್ಸಾಹ ನೀಡುತ್ತ ಬಂದುದರಿಂದ ಅವರು ಜನಪ್ರಿಯರಾದರು. ಸಜ್ಜನಿಕೆ ಹಾಗೂ ವಿಚಾರ ಪರತೆಗೆ ಹೆಸರಾದ ಶ್ರೀ ವೀರೇಂದ್ರ ಪಾಟೀಲ ಅವರು 1968 ರಲ್ಲಿ ಹಾಗೂ 1989 ರಲ್ಲಿ ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು. ಕಾಂಗ್ರೆಸ್ಸಿನ ಕಟ್ಟಾ ಅನುಯಾಯಿಗಳಾದ ಇವರು ಎಸ್. ನಿಜಲಿಂಗಪ್ಪ, ಸ್ವಾಮಿ ರಮಾನಂದ ತೀರ್ಥ ಹಾಗೂ ಚಂದ್ರಶೇಖರ ಪಾಟೀಲ ಅವರ ಗರಡಿಯಲ್ಲಿ ಬೆಳೆದರು. ಇವರದು ತತ್ವ ನಿಷ್ಠ ರಾಜಕಾರಣ. ಕರ್ನಾಟಕದಲ್ಲಿ ಕಾಂಗ್ರೆಸ್ಸ್ ತನ್ನ ವರ್ಚಸ್ಸನ್ನು ಕಡಿಮೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಅದಕ್ಕೆ ಮತ್ತೆ ನಾವಿನ್ಯತೆಯನ್ನು ತುಂಬಿ ಅದು ತಲೆ ಎತ್ತುವಂತೆ ಮಾಡುವಲ್ಲಿ ತುಂಬಾ ಪ್ರಯತ್ನಪಟ್ಟರು, ಯಶಸ್ವಿಯಾದರು. ರಾಜಕಾರಣದಲ್ಲಿ ಅನೇಕ ಕಹಿ ಪ್ರಸಂಗಗಳನ್ನು ಅವರು ಎದುರಿಸಬೇಕಾಯಿತು. ಅವರು ತುಂಬಾ ನಿಷ್ಠುರವಾದಿ, ತಮಗೆ ಸರಿ ಕಾಣದೇ ಇರುವುದನ್ನು ಟೀಕಿಸದೇ ಬಿಡುತ್ತಿರಲಿಲ್ಲ. ಶ್ರೀ ವೀರೇಂದ್ರ ಪಾಟೀಲ ಅವರು 1950ರಲ್ಲಿ ಆಳಂದ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಗೊಳ್ಳುವುದರ ಮೂಲಕ ರಾಜಕೀಯವನ್ನು ಪ್ರವೇಶಿಸಿದರು. ಈ ಹಿಂದೆಯೇ ಅವರು ಕಾಂಗ್ರೆಸ್ ಪಕ್ಷದ ವಿವಿಧ ಹುದ್ದೆಗಳಲ್ಲಿ ಸಕ್ರೀಯವಾಗಿ ಶ್ರಮಿಸಿದರು. ಕರ್ನಾಟಕದ ಏಕೀಕರಣದ ನಂತರ 1957 ರಲ್ಲಿ ಚಿಂಚೋಳಿ ಮತ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆಯನ್ನು ಪ್ರವೇಶಿಸಿದರು. ಆಗ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಗೃಹ ಕೈಗಾರಿಕೆ ಮತ್ತು ಉದ್ದಿಮೆ ಸಚಿವರಾಗಿ ಸೇವೆ ಸಲ್ಲಿಸಿದರು. 1962 ರಲ್ಲಿ ಪುನಃ ಆಯ್ಕೆಗೊಂಡು ಅಬಕಾರಿ ಗ್ರಾಮ ಅಭಿವೃದ್ಧಿ ಮತ್ತು ಲೋಕೋಪಯೋಗಿ ಖಾತೆಗಳನ್ನು ದಕ್ಷತೆ ಹಾಗೂ ಪ್ರಾಮಾಣಿಕತೆಗಳಿಂದ ನಿರ್ವಹಿಸಿ ರಾಜಕೀಯ ಕುಲುಮೆಯಲ್ಲಿ ಪುಟವಿಟ್ಟ ಚಿನ್ನದಂತೆ ಮಿನುಗಿದರು. ನಿಜಲಿಂಗಪ್ಪನವರಿಗೆ ಇವರು ತುಂಬಾ ಆತ್ಮೀಯರಾಗಿದ್ದರು. ರಾಜಕೀಯದಲ್ಲಿ ಅವರನ್ನು ಗುರುಸಮಾನರಾಗಿ ಕಂಡರು. ಅವರು ಜನ ಹಿತ ಕಾರ್ಯಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡರು. ಎಸ್. ನಿಜಲಿಂಗಪ್ಪನವರು 1968 ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆ ಗೊಂಡುದುದರಿಂದ ಮುಖ್ಯಮಂತ್ರಿಯ ಸ್ಥಾನಕ್ಕೆ ರಾಜನಾಮೆ ಸಲ್ಲಿಸಿದರು. ಆಗ ಅವರ ಉತ್ತರಾಧಿಕಾರಿಯಾಗಿ ಶ್ರೀ ವೀರೇಂದ್ರ ಪಾಟೀಲರು ಆಯ್ಕೆಗೊಂಡರು. 1969 ರಲ್ಲಿ ಕಾಂಗ್ರೆಸ್

ವಿಭಜನೆಗೊಂಡಾಗ ಶ್ರೀ ವೀರೇಂದ್ರ ಪಾಟೀಲರು, ಶ್ರೀ ನಿಜಲಿಂಗಪ್ಪನವರಿಗೆ ನಿಷ್ಠೆ ತೋರಿಸಿ ಸಂಸ್ಥಾ ಕಾಂಗ್ರೆಸ್‌ನಲ್ಲಿ ಉಳಿದರು. 1971 ರಲ್ಲಿ ಲೋಕಸಭೆಯ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ವಿಜಯಗಳಿಸಿದ ನಂತರ ನಡೆದ ಸಾಮೂಹಿಕ ಪಕ್ಷಾಂತರದ ಪರಿಣಾಮವಾಗಿ ಶ್ರೀ ವೀರೇಂದ್ರ ಪಾಟೀಲರು ಮಾರ್ಚ್ 18, 1971 ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರ 1972 ರಿಂದ 1978 ರವರೆಗೆ ಅವರು ರಾಜ್ಯ ಸಭೆಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

1977 ರಲ್ಲಿ ಸಂಸ್ಥಾ ಕಾಂಗ್ರೆಸ್ ಹಾಗೂ ಇತರ ಪಕ್ಷಗಳು ಸೇರಿ ಜನತಾ ಪಕ್ಷವನ್ನು ಕಟ್ಟಿದವು. ಆಗ ಶ್ರೀ ಪಾಟೀಲರು ಈ ಪಕ್ಷವನ್ನು ಸೇರಿ 1978 ರ ಸಾರ್ವತ್ರಿಕ ಚುನಾವಣೆಯಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಶ್ರೀಮತಿ ಇಂದಿರಾಗಾಂಧಿ ಅವರ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡರು. 1979ರಲ್ಲಿ ಅವರು ಜನತಾ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿ ಇಂದಿರಾ (ಐ) ಕಾಂಗ್ರೆಸ್ಸನ್ನು ಸೇರಿದರು. 1980ರ ಲೋಕಸಭಾ ಚುನಾವಣೆಯಲ್ಲಿ ಬಾಗಲಕೋಟೆಯ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಗೊಂಡು ಇಂದಿರಾ ಗಾಂಧಿ ಸಚಿವ ಸಂಪುಟದಲ್ಲಿ ಸಾರಿಗೆ ಹಾಗೂ ನೌಕೆ ಸಚಿವರಾಗಿ, ಅನಂತರ ಕಾರ್ಮಿಕ ಹಾಗೂ ಪುನರ್ವಸತಿ ಸಚಿವರಾಗಿ ಸೇವೆ ಸಲ್ಲಿಸಿದರು. ಹೀಗೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ತುಂಬಾ ಸಕ್ರೀಯ ಪಾತ್ರ ವಹಿಸಿ ಜನಪ್ರೀಯ ರಾಜಕಾರಣಿಗಳೆನಿಸಿದರು. ಶ್ರೀ ಪಾಟೀಲರು 1988 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವುದರ ಮೂಲಕ ಮತ್ತೆ ರಾಜಕಾರಣದಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. 1939 ರಲ್ಲಿ ಜನತಾ ಪಕ್ಷವು ಕರ್ನಾಟಕದಲ್ಲಿ ದುರ್ಬಲಗೊಂಡಾಗ ಶ್ರೀ ಪಾಟೀಲರ ಪ್ರಯತ್ನದಿಂದಾಗಿ ಕಾಂಗ್ರೆಸ್ ಪಕ್ಷವು ಬಹುಮತ ಪಡೆದು ಸರ್ಕಾರವನ್ನು ನಿರ್ಮಿಸಿತು. ಶ್ರೀ ವೀರೇಂದ್ರ ಪಾಟೀಲರು ಚಿಂಚೋಳಿ ಮತ ಕ್ಷೇತ್ರದಿಂದ ಆಯ್ಕೆಗೊಂಡು ಕಾಂಗ್ರೆಸ್ ಪಕ್ಷದ ಪ್ರಮುಖ ಸೂತ್ರದಾರರಾಗಿ ನಾಯಕರಾಗಿ, ಆಯ್ಕೆಗೊಂಡು ಎರಡನೇ ಬಾರಿಗೆ ಕರ್ನಾಟಕದ ಮುಖ್ಯ ಮಂತ್ರಿಗಳಾದರು. ಉತ್ತರ ಕರ್ನಾಟಕದ ಸಮಸ್ತ ಜನತೆಯ ಪ್ರೀತಿಗೆ ಪಾತ್ರರಾದ ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದಾಗ ಜನ ನೆಮ್ಮದಿಯ ಉಸಿರು ಬಿಟ್ಟರು. ಕಾಂಗ್ರೆಸ್ ಪಕ್ಷಕ್ಕೆ ಪುನಃ ಜೀವ ತುಂಬುವುದರ ಮೂಲಕ ನವಂಬರ್ 30, 1989 ರಂದು ರಾಜ್ಯದ ಮುಖ್ಯ ಮಂತ್ರಿಗಳಾಗಿ ಆಯ್ಕೆಗೊಂಡರು. ಈ ಸಂತೋಷ ಸಂಭ್ರಮ ಬಹು ಕಾಲ ಉಳಿಯಲಿಲ್ಲ. 1990 ರಲ್ಲಿ ಅವರಿಗೆ ಪಾರ್ಶ್ವವಾಯು ಕಾಯಿಲೆ ತಗುಲಿತು. ಆಗ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ರಾಜೀವಗಾಂಧಿಯವರಿಂದ ಶಾಸಕಾಂಗ ಪಕ್ಷದಿಂದ ಶ್ರೀ ವೀರೇಂದ್ರ ಪಾಟೀಲರು ವಜಾಮಾಡಲ್ಪಟ್ಟರು. ಪ್ರಜ್ಞಾವಂತ ಕರ್ನಾಟಕದ ಜನತೆ ಶ್ರೀ ವೀರೇಂದ್ರ ಪಾಟೀಲ ಅವರಿಗೆ ಇಂಥ ಪರಿಸ್ಥಿತಿ ಬರಬಾರದಾಗಿತ್ತೆಂದು ಮರುಗಿತು. ರಾಜಕೀಯದಲ್ಲಿ ಇಂಥ ಏರಿಳಿತಗಳು ಬರುವುದು ಸಾಮಾನ್ಯ. ಅವರಿಗೆ ಆರೋಗ್ಯವೂ ಕೈಕೊಟ್ಟಿತು. ಮತ್ತು ಅವರ ಅನೇಕ ಅನುಯಾಯಿಗಳು ಹೈಕಮಾಂಡನ ಆದೇಶದಂತೆ ನಡೆದುಕೊಂಡರು. ಇಂಥ ಅನಿರೀಕ್ಷಿತ ಘಟನೆಯಿಂದ ಶ್ರೀ ವೀರೇಂದ್ರ ಪಾಟೀಲರು ತುಂಬಾ ನೊಂದುಕೊಂಡರು. ಆದರೂ ಅವರು ಯಾರನ್ನೂ ಶಪಿಸಲಿಲ್ಲ. ತಮಗಿಂತಲೂ ಪಕ್ಷ ದೊಡ್ಡದು. ಪಕ್ಷದ ನಿರ್ಣಯವನ್ನು ಅವರು ತುಂಬಾ ಸ್ಥಿತ ಪ್ರಜ್ಞರಾಗಿ ಸ್ವೀಕರಿಸಿದರು. ಇತ್ತೀಚಿನ ರಾಜಕೀಯ ಚಟುವಟಿಕೆಗಳು ಅವರಿಗೆ ಹಿಡಿಸಲಿಲ್ಲ. ಅವರದು ತುಂಬಾ

ತತ್ವ ನಿಷ್ಠ ಪ್ರಾಮಾಣಿಕ ಹಾಗೂ ನಿಸ್ವಾರ್ಥ ರಾಜಕೀಯ ಬದುಕು. ಇಂಥ ಅಪರೂಪದ ಮುತ್ಸದ್ದಿ, ರಾಜಕಾರಣಿ ಅವರು. ಅವರ ಬದುಕು ಮುಂದಿನ ರಾಜಕಾರಣಿಗಳಿಗೆ ಅನುಕರಣೀಯವಾಗಿದೆ. ಇಂಥ ಅಪರೂಪದ ಗುಣಲಕ್ಷಣಗಳನ್ನು ಹೊಂದಿದ ಶ್ರೀ ವೀರೇಂದ್ರ ಪಾಟೀಲರು ಶ್ರೇಷ್ಠ ಸಂಸದೀಯ ಪಟುವೆಂದು ಖ್ಯಾತರಾದವರು. ರಾಜ್ಯದಲ್ಲಿ ಪ್ರಾಮಾಣಿಕ ಹಾಗೂ ಸಂಭಾವಿತ ರಾಜಕಾರಣಿಯಾಗಿ ಆಡಳಿತ ನಡೆಸಿದ ಮುತ್ಸದ್ದಿ. ಅವರ ಜೀವಿತದ ಕೊನೆಯ ದಿನಗಳು ಸುಖಕರವಾಗಿರಲಿಲ್ಲ. ಅವರು ಆರು ವರ್ಷ ಕಾಲ ಪಾರ್ಶ್ವವಾಯು ರೋಗ ಪೀಡಿತರಾಗಿ ಮಾರ್ಚ್ 14, 1997ರಂದು ನಿಧನರಾದರು.

ಕರ್ನಾಟಕದ ರಾಜಕಾರಣದ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನ ಗಳಿಸಿದ ಶ್ರೀ ವೀರೇಂದ್ರ ಪಾಟೀಲರ ಬದುಕು ಮುಂದಿನ ಜನಾಂಗಕ್ಕೆ ತುಂಬಾ ಪ್ರಯೋಜನಕಾರಿಯಾಗುವಂತಹದು. ಅವರ ಬದುಕಿನ ಪ್ರಮುಖ ಘಟ್ಟಗಳನ್ನು, ಅವರು ರಾಜಕಾರಣದಲ್ಲಿ ಕಂಡ ಏರಿಳಿತಗಳನ್ನು ಮಾಡಿದ ಜನಕಲ್ಯಾಣ ಕಾರ್ಯಗಳನ್ನು, ಇಲ್ಲಿ ವಿವರಿಸಲಾಗಿದೆ.

ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ:-

ಶ್ರೀ ವೀರೇಂದ್ರ ಪಾಟೀಲರ ತಂದೆ ಬಸಪ್ಪಾ, ತಾಯಿ ಚೆನ್ನಮ್ಮ. ಕ್ರಿ.ಶ.1924 ರ ಫೆಬ್ರುವರಿ 28 ರಂದು ಚಿಂಚೋಳಿ ತಾಲೂಕಿನ ಹೂಡದಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು. ಪಾಟೀಲರಿಗೆ ಒಬ್ಬ ಅಣ್ಣಾ, ಒಬ್ಬಳು ಅಕ್ಕ, ಒಬ್ಬಳು ತಂಗಿ ಇರುವರು. ಇವರು ತಮ್ಮ 8 ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ತಾಯಿ ಹಾಗೂ ಅಣ್ಣನವರ ಪೋಷಣೆಯಲ್ಲಿ ಬೆಳೆದರು. ಸೋದರ ಸಂಬಂಧಿ ಭೀಮಶೆಟ್ಟಿ ಪಾಟೀಲರು ವೀರೇಂದ್ರರನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ವೀರೇಂದ್ರ ಪಾಟೀಲರು ಪ್ರಾಥಮಿಕ ಶಿಕ್ಷಣವನ್ನು ಚಿಂಚೋಳಿಯಲ್ಲಿ ತಮ್ಮ ತಂದೆಯವರೇ ಪ್ರಾರಂಭಿಸಿದ ನ್ಯಾಷನಲ್ ಶಿಕ್ಷಣ ಸಂಸ್ಥೆಯಲ್ಲಿಯೇ ಪೂರೈಸಿದರು. ಚಿಂಚೋಳಿಯಲ್ಲಿ ಸರಕಾರಿ ಶಾಲೆ ಇತ್ತು. ಆದರೆ ಅಲ್ಲಿ ಉರ್ದು ಕಲಿಸುತ್ತಿರುವುದರಿಂದ, ಕನ್ನಡ ಮತ್ತು ಇಂಗ್ಲೀಷನ್ನು ಕಲಿಸುತ್ತಿದ್ದ ನ್ಯಾಷನಲ್ ಸ್ಕೂಲನ್ನು ಸೇರಬೇಕಾಯಿತು. ಪ್ರಾಥಮಿಕ ಶಿಕ್ಷಣ ಮುಗಿಸಿದ ನಂತರ ಪ್ರೌಢ ಶಿಕ್ಷಣಕ್ಕಾಗಿ ಬೇರೆ ಊರಿಗೆ ಹೋಗಬೇಕಾಯಿತು. ಏಕೆಂದರೆ ಚಿಂಚೋಳಿಯಲ್ಲಿ ಪ್ರೌಢ ಶಿಕ್ಷಣ ಇರಲಿಲ್ಲ. ಅದಕ್ಕಾಗಿ ಕಲಬುರ್ಗಿಗೆ ಬಂದರು. ಇಲ್ಲಿ ಉರ್ದು ಮತ್ತು ಇಂಗ್ಲೀಷ್ ವಿಭಾಗಗಳಿದ್ದವು. ಪಾಟೀಲರ ಸಹೋದರ ಇವರನ್ನು ಇಂಗ್ಲೀಷ್ ಸೆಕ್ಷನ್‌ಗೆ ಪ್ರವೇಶ ಕೊಡಿಸಿದರು. ಕಲಬುರ್ಗಿಯಲ್ಲಿ ಪ್ರೌಢ ಶಿಕ್ಷಣ ಪಡೆಯುತ್ತಿದ್ದ ಸಂದರ್ಭದಲ್ಲಿ ಆರ್ಯ ಸಮಾಜದವರು " ವಂದೇ ಮಾತರಂ " ಚಳುವಳಿ ಆರಂಭಿಸಿದ್ದರು. ಇತರ ವಿದ್ಯಾರ್ಥಿಗಳ ಜೊತೆ ಇವರೂ ಭಾಗವಹಿಸಿದರು. ಇದನ್ನು ನೋಡಿದ ಆ ಶಾಲೆಯ ಹೆಡ್ ಮಾಸ್ತರ್ (ಮುಖ್ಯೋಪಾಧ್ಯಾಯರು) ಅಪಾಲಜಿ ಬರೆದು ಕೊಟ್ಟರೆ ಮಾತ್ರ ಶಾಲೆಯಲ್ಲಿ ಕರೆದು ಕೊಳ್ಳುತ್ತೇವೆ, ಇಲ್ಲದಿದ್ದರೆ ಇಲ್ಲವೆಂದಾಗ ಕ್ಷಮಾಪಣೆ ಪತ್ರ ಬರೆಯದೆ ಹೈದ್ರಾಬಾದಿಗೆ ಬಂದರು. ಆಗ ಒಂದು ವರ್ಷದ ಶಿಕ್ಷಣ ಕುಂಠಿತ ಗೊಂಡಿತು. ಮುಂದೆ ಹೈದ್ರಾಬಾದನ ವಿವೇಕ ವರ್ಧಿನಿ ಪ್ರೌಢ ಶಾಲೆಗೆ ಸೇರಿ ಮೆಟ್ರಿಕ್ ಅನ್ನು ಅದೂ ಎರಡನೇ ಬಾರಿ ಪರೀಕ್ಷೆ ಕುಳಿತು ಪಾಸಾದರು. ಇವರು ಯಾವಾಗಲೂ ಗಣಿತದಲ್ಲಿ ಹಿಂದೆ ಬೀಳುತ್ತಿದ್ದರಂತೆ. ಇವರಿಗೆ ಕೊನೆಗೆ ಮೆಟ್ರಿಕ್‌ನಲ್ಲಿ ಗಣಿತ ಕೈಕೊಟ್ಟಿತು. ನಂತರ ಎರಡನೇ ಬಾರಿಯಲ್ಲಿ ತೇರ್ಗಡೆಯಾದರು.

ಮುಂದಿನ ಉನ್ನತ ವ್ಯಾಸಂಗಕ್ಕಾಗಿ ಉಸ್ಮಾನಿಯಾ ವಿಶ್ವವಿದ್ಯಾಲಯ ಸೇರಿದರು. ಈ ವಿಶ್ವವಿದ್ಯಾಲಯದಲ್ಲಿ ಮದ್ರಾಸ ಮತ್ತು ಉಸ್ಮಾನಿಯಾ ಎಂಬ ಎರಡು ವಿಭಾಗಗಳಿದ್ದವು. ಉಸ್ಮಾನಿಯಾ ವಿಭಾಗದಲ್ಲಿ ಉರ್ದು ಮಾಧ್ಯಮದಲ್ಲಿ ಶಿಕ್ಷಣ ಇದ್ದರೆ ಮದ್ರಾಸ್ ವಿಭಾಗದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನಡೆಯುತ್ತಿತ್ತು. ಮದ್ರಾಸ್ ವಿಭಾಗದಲ್ಲಿ ಶಿಕ್ಷಣ ಪಡೆಯಬೇಕಾದರೆ ದ್ವಿತೀಯ ದರ್ಜೆಯಲ್ಲಿ ಪಾಸಾಗಿರಬೇಕಿತ್ತು ಆದರೆ ಪಾಟೀಲರು ಥರ್ಡ್ ಕ್ಲಾಸಿನಲ್ಲಿ ಪಾಸಾಗಿದ್ದರಿಂದ ಉಸ್ಮಾನಿಯಾ ವಿಭಾಗದಲ್ಲಿ ಪ್ರವೇಶ ಪಡೆದುಕೊಂಡು ಎಕಾನಾಮಿಕ್ಸ್ (ಅರ್ಥಶಾಸ್ತ್ರ) ವಿಷಯವನ್ನು ಆರಿಸಿಕೊಂಡು ಬಿ.ಎ. ಪದವಿಯನ್ನು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾದರು. ಮುಂದೆ ಎಲ್.ಎಲ್.ಬಿ. ಯನ್ನು ಸಹ ದ್ವಿತೀಯ ದರ್ಜೆಯಲ್ಲಿ ಪಾಸು ಮಾಡಿದರು.

ವೈವಾಹಿಕ ಜೀವನ:-

ಇವರು ತಮ್ಮ 18 ನೇ ವಯಸ್ಸಿನಲ್ಲಿ ಮದುವೆಯಾದರು. ಇಂಟರ್ ಪರೀಕ್ಷೆ ಬರೆದು ಮನೆಗೆ ಬಂದ ಮೇಲೆ ಮದುವೆ ಮಾಡಿಕೊಳ್ಳಬೇಕೆಂಬ ಹಠ ಮತ್ತು ಮದುವೆ ಮಾಡಿಕೊಂಡರೆ ಉನ್ನತ ಶಿಕ್ಷಣ ಕಲಿಯಲು ಅನುಕೂಲವಾಗಬಹುದು, ಎಂಬ ಕಾರಣದಿಂದಲೂ ಮದುವೆ ಆಗಲು ಒಪ್ಪಿಗೆ ನೀಡಿದರು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಎ.ಬಿ.ಸಿ.ಡಿ. ಮತ್ತು ಇ ಎಂಬ ಹಲವು ಬಗೆಯ ವಸತಿ ನಿಲಯಗಳಿದ್ದವು ಎ.ಬಿ.ಸಿ. ವಸತಿ ನಿಲಯಗಳಲ್ಲಿ ಕೇವಲ ಶ್ರೀಮಂತರ ಮಕ್ಕಳು ಇರುತ್ತಿದ್ದರು. ಡಿ ಮತ್ತು ಇ ವಸತಿ ನಿಲಯಗಳಲ್ಲಿ ಬಡ ವಿದ್ಯಾರ್ಥಿಗಳು ಇರುತ್ತಿದ್ದರು. ಮೊದಲನೆಯ ಮೂರು ವಸತಿನಿಲಯಗಳಲ್ಲಿ ಯಾವುದಾದರೂ ಒಂದರಲ್ಲಿ ಇರಬೇಕೆಂಬ ಆಶೆ ಪಾಟೀಲರಲ್ಲಿ ಮೂಡಿತು. ಅದಕ್ಕಾಗಿ ಮದುವೆಗೆ ಇದು ಒಂದು ಕಾರಣವಾಗಿದೆ ಎನ್ನಬಹುದು. 1944 ರಲ್ಲಿ ಪಾಟೀಲರ ದೊಡ್ಡಪ್ಪನ ಮಗನಾದ ಭೀಮಶೆಟ್ಟಿ ಪಾಟೀಲರೇ ಇವರ ಮದುವೆ ಮಾಡಿದರು. ಎಲ್.ಎಲ್.ಬಿ. ಮುಗಿಯುವ ಹೊತ್ತಿಗೆ ತಂದೆಯಾದರು. ಮೊದಲು ಲಲಿತಾ ಹುಟ್ಟಿದಳು. 1950 ರಲ್ಲಿ ಮಗ ಕೈಲಾಸ ಪಾಟೀಲ, ನಾಲ್ಕು ವರ್ಷಗಳ ನಂತರ ಶಕುಂತಲಾ ಹುಟ್ಟಿದಳು. ಮುಂದೆ ಮಕ್ಕಳು ಬೆಳೆದು ದೊಡ್ಡವರಾದರು. ಲಲಿತಾಳನ್ನು ಡಾ: ಬಿ.ಜಿ. ಜವಳಿ ( ಮಾಜಿ ಲೋಕಸಭಾ ಸದಸ್ಯರು ) ಯವರಿಗೆ ಕೊಟ್ಟು ಮದುವೆ ಮಾಡಿದರು. 2ನೇ ಮಗಳನ್ನು ಸುಭಾಷ ಸುಗಂಧಿಯವರ ಜೊತೆ ಮದುವೆ ಮಾಡಿಕೊಟ್ಟರು. 1976 ರಲ್ಲಿ ಕೈಲಾಸ ಪಾಟೀಲರ ಮದುವೆ ಐನೂರ ಚೆನ್ನಬಸಪ್ಪನವರ ಮಗಳ ಜೊತೆಗೆ ಆಯಿತು.

ವಕೀಲಿ ವೃತ್ತಿಯ ಆರಂಭ:-

ಹೈದ್ರಾಬಾದನಲ್ಲಿ ಎಲ್.ಎಲ್.ಬಿ. ಪದವಿ ಪಡೆದುಕೊಂಡು ಚಿಂಚೋಳಿಗೆ ಬಂದು ವಕೀಲ ವೃತ್ತಿ ಆರಂಭಿಸಬೇಕೆಂಬ ವಿಚಾರದಲ್ಲಿದ್ದಾಗ, ಅವರ ಅಣ್ಣನವರು ಇವರಿಗೆ ಪದವಿಯಂತೂ ಮುಗಿಸಿರುವೆ, ನೌಕರಿ ಅಂತು ಸಿಗಲಿಲ್ಲ, ಪ್ರಾಕ್ಟೀಸನ್ನಾದರೂ ಪ್ರಾರಂಭಿಸು ಎಂದು ಹೇಳಿದರು. ಆಗ ಪಾಟೀಲರಿಗೆ ಒಂದು ದೊಡ್ಡ ಸಮಸ್ಯೆ ಎದುರಾಯಿತು. ಅದುವೇ ಭಾಷಾ ಸಮಸ್ಯೆ. ಈ ಪ್ರಾಂತ ಹೈದ್ರಾಬಾದ ನಿಜಾಮನಿಗೆ ಒಳಪಟ್ಟಿರುವದರಿಂದ ಆಡಳಿತ ಭಾಷೆ ಉರ್ದುವಾಗಿತ್ತು. ಆದರೆ ಪಾಟೀಲರಿಗೆ ಅಷ್ಟೊಂದು ಚೆನ್ನಾಗಿ ಉರ್ದು ಮಾತನಾಡಲು ಬರುತ್ತಿರಲಿಲ್ಲ. ಅದಕ್ಕಾಗಿ ಅವರು ವಕೀಲ ವೃತ್ತಿ ಆರಂಭಿಸುವುದು ಕಷ್ಟವಾಯಿತು. ಮತ್ತೆ ಹೈದ್ರಾಬಾದಕ್ಕೆ ಹೋಗಿ ಸೀನಿಯರ

ವಕೀಲರಲ್ಲಿ ಹಲವಾರು ತಿಂಗಳಿದ್ದರು. ಆದರೆ ಅವರ್‍ಯಾರು ಇವರಿಗೆ ಸರಿಯಾಗಿ ಹೇಳಿಕೊಡಲಿಲ್ಲ. ಕೊನೆಗೆ ಚಿಂಚೋಳಿಗೆ ಬಂದು ವಕಾಲತ್ ನಡೆಸಲು ಮುಂದಾದರು.

1950 ರ ಹೊತ್ತಿಗೆ ಪಾಟೀಲರು ಚಿಂಚೋಳಿಯಲ್ಲಿ ವಕಾಲತ್ತ ಪ್ರಾರಂಬಿಸಿದರು. ಇವರು ವಕಾಲತ್ತು ವಹಿಸಿದ ಮೊದಲ ಪ್ರಕರಣ ಟೆನೆಂಟಿನದು. ಮಿರಿಮಾನದ ಗೌಡರು ದೊಡ್ಡ ಜಮೀನುದಾರರು ಇವರ ಪರವಾಗಿ ಇಡೀ ಚಿಂಚೋಳಿಯ ಎಲ್ಲಾ ವಕೀಲರು ವಾದಕ್ಕಿಳಿದರು, ಆದರೆ ಪಾಟೀಲರೊಬ್ಬರೇ ಟೆನೆಂಟ ಕಕ್ಷಿದಾರನ ಕಡೆಯವರಾಗಿ ಆ ಕೇಸನ್ನು ಗೆದ್ದರು. ಆಗ ಅವರಿಗೆ ಎಲ್ಲಿಲ್ಲದ ಗೌರವ. ಮುಂದೆ ಪಟೀಲರಿಗೆ ವಕಾಲತ್ತ ನಡಿಸಲು ಸುಗಮವಾದ ದಾರಿ ಸಿಕ್ಕಿತು.

ಎರಡು ವರ್ಷಗಳ ಕಾಲ ನ್ಯಾಯಾಲಯದಲ್ಲಿ ಉತ್ತಮ ವಾಕ್ ಪಟುವಾಗಿ ತನ್ನ ಕಕ್ಷಿದಾರರಿಗೆ ನ್ಯಾಯ ಒದಗಿಸಿಕೊಡುವಲ್ಲಿ ಕಷ್ಟ ಪಟ್ಟು ಕೇಸ್‌ಗಳನ್ನು ಗೆಲ್ಲುತ್ತಿದ್ದರು. ಇವರು ಚಿಂಚೋಳಿಯಲ್ಲಿ ಒಬ್ಬ ಗಣ್ಯ ವಕೀಲರಾಗಿ ಹೆಸರು ಪಡೆದರು. ಆದರೆ ಪಾಟೀಲರ ಹಣೆ ಬರಹ ಬೇರೇಯೇ ಆಗಿತ್ತು. 1952 ರಲ್ಲಿ ಚುನಾವಣೆ ನಡೆದಾಗ ವೀರೇಂದ್ರ ಪಾಟೀಲರಿಗೆ ಚುನಾವಣಾ ಕಣಕ್ಕೆ ಬರಲು ಒತ್ತಾಯದ ಕರೆ ಬಂತು. ಸ್ನೇಹಿತರಾದ ಚಂದ್ರಶೇಖರ ಪಾಟೀಲರ ಒತ್ತಾಯದ ಮೇರೆಗೆ 1952 ರ ಚುನಾವಣೆಯಲ್ಲಿ ಆಳಂದದಿಂದ ಹೈದ್ರಾಬಾದ ಅಸೆಂಬ್ಲಿಗೆ ಆಯ್ಕೆಯಾದರು. ಪಾಟೀಲರ ವಕೀಲ ವೃತ್ತಿ ಐದೂವರೆ ವರ್ಷಗಳ ಕಾಲ ನಡೆಯಿತು. 1954 ರಲ್ಲಿ ಹೈದ್ರಾಬಾದ ಪ್ರದೇಶದ ಕಾಂಗ್ರೆಸ್ಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಕರೆ ಬಂತು. ಇದ್ಯಾವುದರಿಂದಲೂ ಇವರ ವಕೀಲ ವೃತ್ತಿಗೆ ತೊಂದರೆ ಬರಲಿಲ್ಲ. ಆದರೆ 1955 ರಲ್ಲಿ ಪ್ರದೇಶದ ಕಾಂಗ್ರೆಸ್ಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದಾಗ ವಕೀಲ ವೃತ್ತಿಗೆ ವಿದಾಯ ಹೇಳಬೇಕಾಗಿ ಬಂತು.

**ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸುವಿಕೆ:-**

ಹೈದ್ರಾಬಾದ ಹಿರಿಯ ವಕೀಲರ ಹತ್ತಿರ ಕಲಿಯುತ್ತಿದ್ದಾಗ ಹೈದ್ರಾಬಾದ ಸ್ವತಂತ್ರವಾಗಿ ಉಳಿಯಬಾರದು, ಹೈದ್ರಾಬಾದ ಯುನಿಯನ್‌ಗಳಲ್ಲಿ ಸೇರಬೇಕು ಎಂಬ ಚಳುವಳಿ ಆರಂಭವಾಯಿತು. ಇದಕ್ಕೆ ಕ್ವಿಟ್ ಕೋರ್ಟ್ ಚಳವಳಿ ಎಂದು ಕರೆಯುತ್ತಾರೆ. ಆಗ ಪಾಟೀಲರು ಕೋರ್ಟ್ ಬಿಟ್ಟು ಬಂದು ಕ್ವಿಟ್ ಕೋರ್ಟ್ ಚಳವಳಿಯಲ್ಲಿ ಭಾಗವಹಿಸಿದರು. ಮೊದಲು ಹೈದ್ರಾಬಾದ ಬಿ.ರಾಜ್ಯ ಮತ್ತು ಕಾಂಗ್ರೆಸ್ ಪಕ್ಷದ ಸ್ವಾತಂತ್ರ್ಯ ಚಳವಳಿ ಆರಂಭವಾಯಿತು. ಇದರಿಂದಾಗಿ ಕಾಂಗ್ರೆಸ್ ಚಳವಳಿಯು ಇವರನ್ನು ಬಲವಾಗಿ ಆಕರ್ಷಿಸಿತು. ಮುಂದೆ ಪಾಟೀಲರು ತಾಲೂಕು ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ರಾಜ್ಯದ ಗಡಿ ಪ್ರದೇಶದಲ್ಲಿ ಕೆಲಸ ಮಾಡುತ್ತಾ ತಿರುಗುತ್ತಿರುವಾಗ ನಮ್ಮವರು ಯಾರು ಪಾಟೀಲರಿಗೆ ಸಹಕಾರ ಕೊಡಲಿಲ್ಲ. ನಂತರ ಬಿಜಾಪುರ ಜಿಲ್ಲೆಯ ಕಾರ್ಯದರ್ಶಿಯಾಗಿ ಮತ್ತು ಸೋಲಾಪುರದಲ್ಲಿ ಒಂದು ಕಾರ್ಯಾಲಯ ತೆಗೆದು ಕಾರ್ಯ ಆರಂಭಿಸಿದರು. ಗಡಿ ಪ್ರದೇಶದಲ್ಲಿದ್ದ ಕ್ಯಾಂಪ್‌ಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಪಾಟೀಲರಿಗೆ ಬಿತ್ತು.

1952 ರಲ್ಲಿ ಚುನಾವಣೆ ನಡೆದಾಗ ಪಾಟೀಲರಿಗೆ ಚುನಾವಣೆಗೆ ನಿಲ್ಲಬೇಕೆಂಬ ಆಸೆ ಇರಲಿಲ್ಲ. ಆದರೆ ಕಾಂಗ್ರೆಸ್ಸ್ ಪಕ್ಷದವರಿಗೆ ಭಯ ಆವರಿಸಿತು. ಏಕೆಂದರೆ ವಕೀಲ ವೃತ್ತಿಯಿಂದ ಹೆಸರು ಗಳಿಸುತ್ತಿದ್ದ ಪಾಟೀಲರು ಎಲ್ಲಿ ಸ್ವತಂತ್ರ ಉಮೇದುವಾರನಾಗಿ ನಿಲ್ಲಬಹುದು ಎಂಬ ಭಯ ಅವರಲ್ಲಿತ್ತು. ಆದರೆ ಚಂದ್ರಶೇಖರ ಪಾಟೀಲರ ಒತ್ತಾಯದ ಮೇರೆಗೆ ಆಳಂದದಿಂದ ಹೈದ್ರಾಬಾದ ಆಸೆಂಬ್ಲಿಗೆ ಚುನಾವಣೆಗೆ ನಿಲ್ಲಿಸಿದರು. ಚುನಾವಣಾ ಪ್ರಚಾರಕ್ಕೆ ಕಾಂಗ್ರೆಸ್ ಪಕ್ಷದಿಂದ ಹಣ ಬರಬೇಕಾಗಿತ್ತು, ಆದರೆ ಬರಲಿಲ್ಲ. ವಕೀಲ ವೃತ್ತಿಯಿಂದ ಗಳಿಸಿದ ಹಣವನ್ನು ಚುನಾವಣೆಯಲ್ಲಿ ಖರ್ಚು ಮಾಡಿದರು. ಚುನಾವಣೆ ಪ್ರಚಾರ ಕಾರ್ಯಕ್ಕೆ ಹೋದಾಗ ವೀರೇಂದ್ರ ಪಾಟೀಲರು ಯಾರು? ನಾವು ಅವರ ಮುಖ ನೋಡಿಲ್ಲ, ಅವರು ನಮ್ಮ ಮತ ಕ್ಷೇತ್ರದವರೂ ಅಲ್ಲ ಹೊರಗಿನಿಂದ ಬಂದವರು, ಎಂದು ಜನ ಹೇಳುತ್ತಿದ್ದರು. ಪಾಟೀಲರು ವಿಧಾನ ಸಭೆ ಅಭ್ಯರ್ಥಿಯಾದರೆ ಸ್ವಾಮಿರಮಾನಂದ ತೀರ್ಥರು ಸಂಸತ್ತಿಗೆ ನಿಂತಿದ್ದರು. ಪ್ರಚಾರ ಸಭೆಗಳಲ್ಲಿ ಪಾಟೀಲರು ಈ ರೀತಿಯಲ್ಲಿಯೇ ಹೇಳುತ್ತಿದ್ದರು. ನಾನು ಪಕ್ಷದ ಸೇವಕನಾಗಿ ಬಂದಿದ್ದೇನೆ, ಆರಿಸುವುದು ಬಿಡುವುದು ನಿಮ್ಮ ಕೈಯಲ್ಲಿದೆ. ನೀವು ನನ್ನನ್ನು ಆರಿಸಲೇಬೇಕು ಎಂದು ನಾನು ಒತ್ತಾಯ ಮಾಡುತ್ತಿಲ್ಲ, ನಾನು ಕಾಂಗ್ರೆಸ್ಸಿಗೆ ಸೇರಿದವನು. ಆಳಂದದಿಂದ ನಿಲ್ಲಬೇಕು ಎಂದು ಹೇಳಿದ್ದರಿಂದ ಬಂದಿದ್ದೇನೆ. ನೀವು ಆರಿಸಿಕಳಿಸಿದರೆ ಆಸೆಂಬ್ಲಿಗೆ ಹೋಗುತ್ತೇನೆ. ಇಲ್ಲದಿದ್ದರೆ ನಮ್ಮ ಊರಿಗೆ ಹೋಗಿ ಪ್ರಾಕ್ಟೀಸ್ ಮಾಡುತ್ತೇನೆ ಎಂಬ ವಿಚಾರವನ್ನು ಮತದಾರರಲ್ಲಿ ಹೇಳಿದರು. ಚಂದ್ರಶೇಖರ ಪಾಟೀಲರು ಆಳಂದದವರು ಆದ ಕಾರಣ ಅವರ ಮಾತನ್ನು ಈ ಮತಕ್ಷೇತ್ರದ ಜನತೆ ಮೀರುತ್ತಿರಲಿಲ್ಲ. ಅದಕ್ಕಾಗಿ ವೀರೇಂದ್ರ ಪಾಟೀಲರು ಆಯ್ಕೆ ಆದರು. ಇದು ಒಂದು ಪಾಟೀಲರಿಗೆ ವಿಶಿಷ್ಟವಾದ ಅನುಭವವಾಗಿದೆ.

ಹೈದ್ರಾಬಾದ ಆಸೆಂಬ್ಲಿಯಲ್ಲಿ ಬಹುಸಂಖ್ಯಾತ ಸದಸ್ಯರು ಉರ್ದುವಿನಲ್ಲೇ ಮಾತನಾಡುತ್ತಿದ್ದರು. ಯಾವುದೇ ವಿಷಯ ಮಾತನಾಡಿದರು ಉರ್ದುವಿನಲ್ಲಿಯೇ, ಪಾಟೀಲರು ಅಷ್ಟೊತ್ತಿಗಾಗಲೇ ಉರ್ದು ಕಲಿತಿದ್ದರು. ಇದರಿಂದಾಗಿ ಪಾಟೀಲರಿಗೆ ಪ್ರತಿಯೊಂದು ಮಸೂದೆ ಮತ್ತು ವಿಷಯ ಚರ್ಚೆಯಲ್ಲಿ ಪ್ರಮುಖಸ್ಥಾನ ಸಿಕ್ಕಿತು. ಇದೆಲ್ಲವನ್ನು ನೋಡಿದ ಕಾಂಗ್ರೆಸ್ಸ್ ಪಕ್ಷದವರು ಪಾಟೀಲರನ್ನು ಹೈದ್ರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿದರು. ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಪಾಟೀಲರ ಜೊತೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ.ವಿ.ಎನ್. ಮುಂದೆ ಭಾರತದ ಪ್ರಧಾನ ಮಂತ್ರಿಯಾದರು. ಪಾಟೀಲರ ಜೊತೆಯಲ್ಲಿ ಚಂದ್ರಶೇಖರ ಪಾಟೀಲ, ಮಹಾದೇವಪ್ಪ ರಾಂಪುರೆ, ಕೊಲ್ಲೂರು ಮಲ್ಲಪ್ಪ, ಜಗನ್ನಾಥರಾವ ಚಂಡ್ರಿಕಿ, ಎನ್.ರುದ್ರಪ್ಪ ಮುಂತಾದವರಿದ್ದರು.

ಹೈದ್ರಾಬಾದ್ ಕರ್ನಾಟಕದ ಪ್ರದೇಶದಲ್ಲಿದ್ದ ನಮ್ಮ ಜನ ವಿಚಿತ್ರವಾದ ಪರಿಸ್ಥಿತಿಯಲ್ಲಿದ್ದರು. ನಿಜಾಮನ ಆಡಳಿತಕ್ಕೆ ಸೇರಿದ ನಮ್ಮ ಪ್ರದೇಶ ಮುಂದುವರಿಯಲು ಸಾಧ್ಯವಿಲ್ಲ. ನಮ್ಮ ಅಭಿವೃದ್ಧಿಗಾಗಿ ಯಾರೂ ನಿಗಾವಹಿಸುತ್ತಿಲ್ಲವೆಂಬ ಜನತೆಯ ಕೂಗು ಪಾಟೀಲರಿಗೆ ಕೇಳಿಸಿತು. ಇಂಥ ಸಮಯದಲ್ಲಿಯೇ ಸ್ವಾತಂತ್ರ್ಯ ಚಳವಳಿ, ಹೈದ್ರಾಬಾದ್ ವಿಲೀನ ಚಳವಳಿಯ ಜೊತೆಗೆ ಭಾಷವಾರು ಪ್ರಾಂತ ರಚನೆಗೆ ಒತ್ತಾಯಿಸುತ್ತಿದ್ದ ಚಳವಳಿಗಳು ನಡೆದರು. ನಮ್ಮ ದೇಶಕ್ಕೆ ಸ್ವತಂತ್ರ್ಯ ಸಿಗುವ ಪೂರ್ವದಲ್ಲಿಯೇ ಭಾಷವಾರು ಚಳವಳಿ ಆರಂಭವಾಯಿತು. ಸ್ವಾತಂತ್ರ್ಯ ನಂತರ ಈ ಚಳವಳಿಗೆ

ಒಂದು ಸ್ವರೂಪ ಸಿಕ್ಕಿತು. ಒಂದು ಕಡೆ ಮದ್ರಾಸ್ ಇನ್ನೊಂದು ಕಡೆ ಆಂಧ್ರ ಆಯಿತು. ಅದೇ ರೀತಿಯಲ್ಲಿಯೇ ನಮ್ಮ ಕರ್ನಾಟಕವು ಆಗುವುದೆಂಬ ಭಾವನೆ ಎಲ್ಲರ ಮನದಲ್ಲಿ ಮೂಡಿದಂತೆ, ಪಾಟೀಲರ ಮನದಲ್ಲಿಯೂ ಮೂಡಿತು. ಇಂಥ ಚಳವಳಿಗಳು ನಡೆದ ಸಂದರ್ಭಗಳಲ್ಲಿ, ಎಸ್. ನಿಜಲಿಂಗಪ್ಪ, ಜಿ.ವಿ.ಹಳ್ಳಿಕೇರಿ, ಕೆಂಗಲ್ ಹನುಮಂತಯ್ಯ, ಕಡಿದಾಳ ಮಂಜಪ್ಪ, ಇವರೆಲ್ಲರೂ " ನೀವೆಲ್ಲಾ ಒಂದಾಗಿ, ನಮ್ಮ ಜೊತೆ ಬನ್ನಿ " ಎಂದು ಹೇಳುತ್ತಿದ್ದರಂತೆ.

1954 ರ ಹೊತ್ತಿಗೆ ರಾಜ್ಯಗಳ ಪುನರ್ವಿಂಗಡಣೆ ಆಗುತ್ತವೆ ಎಂಬುದನ್ನು ತಿಳಿದುಕೊಂಡ ಪಾಟೀಲರು, ಕೇಂದ್ರ ಸರಕಾರ ನೇಮಿಸಿದ್ದ ಫಜಲ್ ಅಲಿ ಆಯೋಗ ಹೈದ್ರಾಬಾದ್ ರಾಜ್ಯವನ್ನು ಮೂರು ಭಾಗಗಳಾಗಿ ಯಾವ ರೀತಿಯಲ್ಲಿ ಮಾಡಬೇಕು ಎಂದು ವರದಿ ಒಪ್ಪಿಸಿತು. ಫಜಲ್ ಅಲಿ ವರದಿಯನ್ನು ಶಾಸಕರೆಲ್ಲ ಕೂಡಿ ಚರ್ಚಿಸಿ, ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸುವಲ್ಲಿ ವೀರೇಂದ್ರ ಪಾಟೀಲರ ಪಾತ್ರ ಮಹತ್ವದ್ದಾಗಿತ್ತು. ಕೊನೆಗೆ 1956 ರ ನವೆಂಬರ್ 1 ರಂದು ಕರ್ನಾಟಕ ಏಕೀಕರಣವಾಯಿತು. ಏಕೀಕರಣದ ಚಳುವಳಿಯಿಂದ ಒಂದು ಗೂಡಿದ ಕರ್ನಾಟಕದಲ್ಲಿ ಪಾಟೀಲರ ರಾಜಕೀಯ ಚಟುವಟಿಕೆಗಳು ಬಿರುಸಿನಿಂದ ಸಾಗಿದವು. ಮತ್ತು ಇವರು ಮೈಸೂರು ರಾಜ್ಯದ ಅಸೆಂಬ್ಲಿಗೆ ಸದಸ್ಯರಾದರು.

1956 ರಲ್ಲಿ ಏಕೀಕರಣವಾದಾಗ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದರು. ಹೈದ್ರಾಬಾದ - ಕರ್ನಾಟಕ ಕಡೆಯಿಂದ ಯಾರನ್ನಾದರೂ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬ ಆಲೋಚನೆಯಲ್ಲಿದ್ದರು. ಆ ಸಮಯದಲ್ಲಿ ವೀರೇಂದ್ರ ಪಾಟೀಲ ಮತ್ತು ಚಂದ್ರಶೇಖರ ಪಾಟೀಲ ಇಬ್ಬರು ಕೂಡಿಕೊಂಡು ನಿಜಲಿಂಗಪ್ಪನವರನ್ನು ಬೇಟಿ ಮಾಡಿ ದಯಾಮಾಡಿ ನಮ್ಮನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಬೇಡಿ ಯಾರನ್ನಾದರೂ ತೆಗೆದುಕೊಳ್ಳಬೇಕಾದರೆ, ಜಗನ್ನಾಥ ಚಂಡ್ರಿಕಿಯವರನ್ನು ತೆಗೆದುಕೊಳ್ಳಿ ಎಂದು ಪಾಟೀಲರು ಹೇಳಿದರು. ಇವರ ಮಾತನ್ನು ಕೇಳಿ ಎಸ್. ನಿಜಲಿಂಗಪ್ಪನವರಿಗೆ ಆಶ್ಚರ್ಯವಾಯಿತು. ಪಾಟೀಲರ ಮಾತಿನಂತೆ ಜಗನ್ನಾಥ ಚಂಡ್ರಿಕಿಯವರನ್ನು ಸಚಿವ ಸಂಪುಟದಲ್ಲಿ ಸೇರಿಸಿಕೊಂಡರು.

1957 ರಲ್ಲಿ ಮತ್ತೆ ಚುನಾವಣೆಗಳು ನಡೆದವು. ಆಗ ಪಾಟೀಲರು ತಮ್ಮ ಸ್ವಂತ ಮತ ಕ್ಷೇತ್ರವಾದ ಚಿಂಚೋಳಿಯಿಂದಲೇ ಸ್ಪರ್ಧೆಗಿಳಿದರು. ಇವರ ಪ್ರತಿಸ್ಪರ್ಧಿಯಾಗಿ ಹುಮ್ನಾಬಾದದಿಂದ ಬಂದಿದ್ದ ವೈದ್ಯರಾಜ ಎಂಬುವರು ನಿಂತರು. ಚಿಂಚೋಳಿ, ಗುಲಬರ್ಗಾ ಜಿಲ್ಲೆಯ ಒಂದು ತಾಲೂಕು ಆದರೂ ಅಲ್ಲಿ ರಸ್ತೆಗಳೇ ಇರಲಿಲ್ಲ. ಬಸ್ಸುಗಳಂತು ಇರಲೇ ಇಲ್ಲ. ಅಂಥ ಸಂದರ್ಭದಲ್ಲಿ ಪಾಟೀಲರು ಚುನಾವಣಾ ಪ್ರಚಾರವನ್ನು ಹೇಗೆ ಮಾಡುತ್ತಿದ್ದರು ಎಂಬುದೊಂದು ಇಂದಿನ ಜನತೆಗೆ ಕುತೂಹಲವಾದ ವಿಷಯವಾಗಿರುತ್ತದೆ. ಇಂದು ಚುನಾವಣಾ ಪ್ರಚಾರವೆಂದರೆ ಜೀಪು, ಕಾರು, ಬೈಕುಗಳೇ ತುಂಬಿರುತ್ತವೆ. ಆದರೆ ಅಂದು ಜೀಪು, ಕಾರು ತಂದು ಪ್ರಚಾರ ಮಾಡುವ ಶಕ್ತಿ ಪಾಟೀಲರಿಗೆ ಇರಲಿಲ್ಲವೆಂದೇ ಭಾವಿಸಬೇಕಾಗುತ್ತದೆ. ಅವರು ಕುದುರೆಯ ಮೇಲೆ ಹೋಗಿ ಚುನಾವಣಾ ಪ್ರಚಾರ ಮಾಡಿರುವರು. ಹಳ್ಳಿ ಹಳ್ಳಿಗೆ ಕುದುರೆಯ ಮೇಲೆ ಹೋಗಿ ಊರಿನ ಗ್ರಾಮಸ್ಥರನ್ನು ಭೇಟಿ ಮಾಡಿ ತಮ್ಮನ್ನು ಆಯ್ಕೆ ಮಾಡಿ ಕಳಿಸಿ ಎಂದು ವಿನಯದಿಂದ ಕೇಳುತ್ತಿದ್ದರು. ನೊಡ್ರೆಪ್ಪಾ ನಾನು ಮತ್ತೆ ತಮ್ಮಲ್ಲಿಗೆ ಬರಲು ಆಗುವುದಿಲ್ಲ, ಓಟಿನ ಜವಾಬ್ದಾರಿ ನಿಮ್ಮದು ಎಂದು ಹೇಳಿದಾಗ ವಿನಯ ಶೀಲರಾದ ಹಳ್ಳಿಯ ಜನತೆ ಪಾಟೀಲರನ್ನು ಹಳ್ಳದವರೆಗೆ ಬೀಳ್ಕೊಟ್ಟು

ಪಾಟೀಲರೆ ನೀವು ಹೇಳಿದಿರ ನಾವು ಎಲ್ಲಾ ಮಾಡತೀವಿ. ನೀವು ಅದರ ಬಗ್ಗೆ ಚಿಂತೆ ಮಾಡಬೇಡಿ. ಈ ಊರಿನ ಓಟು ನಿಮ್ಮ ಕಡೆ ಎಂದು ವಿನಯದಿಂದ ಹೇಳುತ್ತಿದ್ದರಂತೆ. ಅದರಂತೆ ಚಿಂಚೋಳಿಯಿಂದ 1957 ರ ಚುನಾವಣೆಯಲ್ಲಿ ಆಯ್ಕೆಯಾದರು.

1957 ರಲ್ಲಿ ಆಯ್ಕೆಯಾದ ಪಾಟೀಲರು ಎಸ್.ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಉಪ ಸಚಿವರಾಗಿ ಸಂಪುಟ ಸೇರಿದರು. ಉಪ ಸಚಿವರಾದ ಪಾಟೀಲರಿಗೆ ಗೃಹ ಕೈಗಾರಿಕೆ ಮತ್ತು ಗ್ರಾಮೀಣ ಕೈಗಾರಿಕೆ ಖಾತೆಯನ್ನು ಕೊಟ್ಟಿದ್ದರು. ಪೂಣಚ್ಚ ಅವರ ಕೈ ಕೆಳಗೆ ಒಂದು ವರ್ಷ ಉಪ ಸಚಿವರಾಗಿ ಕೆಲಸ ಮಾಡಿದರು. ಮುಂದೆ ನಿಜಲಿಂಗಪ್ಪನವರು ಅಧಿಕಾರ ಕಳೆದುಕೊಂಡಾಗ ಇವರೂ ಅಧಿಕಾರ ಕಳೆದುಕೊಂಡರು.

1957 ರಲ್ಲಿ ಉಪ ಸಚಿವರಾದಾಗ ತಮ್ಮ ಕುಟುಂಬವನ್ನು ಬೆಂಗಳೂರಿಗೆ ಕರೆ ತಂದಿದ್ದರು. ಆದರೆ 1958 ರಲ್ಲಿ ಅಧಿಕಾರ ಹೋದಾಗ ಮತ್ತೆ ಕುಟುಂಬವನ್ನು ಚಿಂಚೋಳಿಗೆ ವಾಪಸ್ ಕಳುಹಿಸಿದರು. ನಂತರ ಜಿಲ್ಲಾ ಸಮಿತಿಯ ಅಧ್ಯಕ್ಷರಾದಾಗ ಗುಲಬರ್ಗಾದಲ್ಲಿ ಮನೆ ಮಾಡಿದರು. 1961 ರಲ್ಲಿ ಶ್ರೀ ನೀಲಂ ಸಂಜೀವರೆಡ್ಡಿಯವರು, ಬಿ.ಡಿ.ಜತ್ತಿ ಮತ್ತು ಎಸ್.ನಿಜಲಿಂಗಪ್ಪನವರ ನಡುವಿನ ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸಿ ಜತ್ತಿ ಸಂಪುಟಕ್ಕೆ ನಾಲ್ಕು ಜನರ ಹೆಸರನ್ನು ಕೊಡಲು ಎಸ್.ಎನ್. ಅವರಿಗೆ ಕೇಳಿದರು. ಆಗ ಎಸ್.ಎನ್.ಕೊಟ್ಟ ನಾಲ್ಕು ಮಂದಿಯ ಹೆಸರುಗಳಲ್ಲಿ ಪಾಟೀಲರ ಹೆಸರೂ ಇತ್ತು. ಇದಾದ ನಂತರ ಪಕ್ಷದಲ್ಲಿಯ ಬಿಕ್ಕಟ್ಟು ಬಗೆ ಹರಿಯಿತು. 1961 ರಲ್ಲಿ ಪಾಟೀಲರು ಮತ್ತೆ ಅಬಕಾರಿ ಮತ್ತು ಗ್ರಾಮೀಣ ಕೈಗಾರಿಕೆಯ ಸಚಿವರಾದರು. ಈ ಎರಡು ಖಾತೆಗಳು ಇವರ ಅಧೀನದಲ್ಲಿಯೇ ಇದ್ದವು.

1962 ರಲ್ಲಿ ಮತ್ತೆ ಚುನಾವಣೆಗಳು ನಡೆದವು. ಪಾಟೀಲರು ಚಿಂಚೋಳಿ ಮತಕ್ಷೇತ್ರದಿಂದಲೇ ಸ್ಪರ್ಧಿಸಿದರು. ಪಾಟೀಲರನ್ನು ಹೇಗಾದರೂ ಮಾಡಿ ಸೋಲಿಸಬೇಕೆಂಬ ಒಂದು ಗುಂಪು ಏನೆಲ್ಲಾ ಪ್ರಯತ್ನ ಮಾಡಿತು. ಆದರೆ ಆ ಪ್ರಯತ್ನ ವಿಫಲವಾಯಿತು.

ಮತ್ತೆ ಪಾಟೀಲರು ಗೆಲುವು ಸಾಧಿಸಿದರು. 1962 ರ ಚುನಾವಣೆಯಲ್ಲಿ ಎಸ್.ಎನ್. ರವರು ಸೋತುದರಿಂದ ತಾತ್ಕಾಲಿಕವಾಗಿ ಮುಖ್ಯ ಮಂತ್ರಿಯನ್ನಾಗಿ ಎಸ್.ಆರ್. ಕಂಠಿಯವರನ್ನು ಆಯ್ಕೆ ಮಾಡಿದರು. ಕಂಠಿಯವರು ಪಾಟೀಲರನ್ನು ತಮ್ಮ ಸಚಿವ ಸಂಪುಟದಲ್ಲಿ ಸೇರಿಸಿಕೊಂಡು ಲೋಕೋಪಯೋಗಿ, ನೀರಾವರಿ, ವಿದ್ಯುತ್ ಮತ್ತು ಸಾರಿಗೆ ಖಾತೆಗಳನ್ನು ವಹಿಸಿದರು. ಕೆಲವು ತಿಂಗಳುಗಳ ನಂತರ ಕಂಠಿಯವರು ನಾನು ಇಲ್ಲಿಯವರೆಗೆ ತಾತ್ಕಾಲಿಕ ಮುಖ್ಯಮಂತ್ರಿಯಾಗಿದ್ದೆ. ಆದರೆ ಈಗ ನಿಜಲಿಂಗಪ್ಪನವರನ್ನು ಆರಿಸಿ ತರೋಣ ಎಂದು ಹೇಳಿದರು. ಆಗ ಎಸ್.ಎನ್. ರವರನ್ನು ಬಾಗಲಕೋಟೆ ಮತ ಕ್ಷೇತ್ರದಿಂದ ಆಯ್ಕೆ ಮಾಡುವಲ್ಲಿ ಪಾಟೀಲರು ಮಹತ್ವದ ಪಾತ್ರ ವಹಿಸಿದರು.

ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾದಾಗ ಪಾಟೀಲರಿಗೆ ರಸ್ತೆ, ಕಟ್ಟಡ ನಿರ್ಮಾಣ ಜವಾಬ್ದಾರಿಯನ್ನು ಕೊಟ್ಟರು. 1965 ರಲ್ಲಿ ಪಾಟೀಲರು ರಷ್ಯಾಕ್ಕೆ ಹೋಗುವಾಗ ನೀರಾವರಿ ಖಾತೆ ಕೊಟ್ಟರು. ಬಂದ ನಂತರ ವಿದ್ಯುತ್ ಖಾತೆ ಕೊಟ್ಟರು. ಈ ಎಲ್ಲಾ ಖಾತೆಗಳನ್ನು ಜವಾಬ್ದಾರಿಯಿಂದ ನ್ಯಾಯಯುತವಾಗಿ ನಿಭಾಯಿಸಿದ ಕೀರ್ತಿ ಪಾಟೀಲರಿಗೆ ಸಲ್ಲುತ್ತದೆ.

ಲೋಕೋಪಯೋಗಿ, ವಿದ್ಯುತ್ ಮತ್ತು ನೀರಾವರಿ ಸಚಿವರಾಗಿ

ಸಚಿವರಾದ ಆರು ವರ್ಷಗಳಲ್ಲಿ ವಿವಿಧ ಖಾತೆಗಳನ್ನು ನಿರ್ವಹಿಸುವ ಅನುಭವ ದೊರೆಯಿತು. ತಮ್ಮ ಖಾತೆಯು ಯಾವುದೇ ಕೆಲಸದ ಪರಿಶೀಲನೆಗಾಗಿ ರಾಜ್ಯದ ಎಲ್ಲಾ ಕಡೆಗೆ ಪ್ರವಾಸ ಮಾಡುತ್ತಿದ್ದರು. ಯೋಜನೆಗಳ ಖುದ್ದು ಪರಿಶೀಲನೆ ಮಾಡುವುದರೊಂದಿಗೆ ಜನತೆಯನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲಾರಂಭಿಸಿದರು. ಇವರು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ತುಂಬ ಶ್ರಮಿಸಿದರು. ಮಹತ್ವದ ಖಾತೆಗಳು ಇವರ ಹತ್ತಿರ ಇರುವುದರಿಂದಲೇ ಚಿಂಚೋಳಿಯ ಪ್ರಮುಖ ಪ್ರದೇಶಗಳಲ್ಲಿ ರಸ್ತೆ, ಸಣ್ಣ ಪುಟ್ಟ ಕೆರೆಗಳನ್ನು ಕಟ್ಟಿಸಿ ಹಳ್ಳಿಗಳಿಗೆ ವಿದ್ಯುತ್ ಪೂರೈಸಿದರು. 1962 ರಿಂದ 1968 ರವರೆಗೆ ಲೋಕೋಪಯೋಗಿ ಸಚಿವರಾಗಿದ್ದರು. ರಾಜ್ಯದ ಮಹತ್ವದ ಯೋಜನೆಗಳು ಈಗ ಆರಂಭವಾದವು. ಶರಾವತಿ ಯೋಜನೆ ಆರಂಭಿಸಿ ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯದ ಹೆಸರನ್ನು ಮೊದಲ ಸಾಲಿನಲ್ಲಿ ತಂದು ನಿಲ್ಲಿಸಿದ ಕೀರ್ತಿ ಪಾಟೀಲರಿಗೆ ಸಲ್ಲುತ್ತದೆ. ವಿದ್ಯುತ್ ಉತ್ಪಾದನೆ ವಿಪರೀತ ಹೆಚ್ಚಾಗಿ ನೆರ ರಾಜ್ಯಗಳಿಗೆ ಮಾರಾಟ ಮಾಡಿರುವುದು ಪಾಟೀಲರ ಕಾಲದಲ್ಲಿಯೇ. ಬೆಳಗಾವಿ ಅಲ್ಯುಮಿನಿಯಂ ಕಾರ್ಖಾನೆಯಂಥ ಅನೇಕ ಕಾರ್ಖಾನೆಗಳು ಆರಂಭವಾದವು. ಯಾವುದೇ ಕಾರ್ಖಾನೆಗಳು ವಿದ್ಯುತ್ ಬಳಸಿದರೂ ಅಗ್ಗದಲ್ಲಿ ಕೊಡುವಷ್ಟು ವಿದ್ಯುತನ್ನು ಪಾಟೀಲರು ತಮ್ಮ ಅವಧಿಯಲ್ಲಿ ಸಂಗ್ರಹಿಸಿದರು.

ಶರಾವತಿ ಯೋಜನೆಯ ಅನುಷ್ಠಾನ

ಶರಾವತಿ ಯೋಜನೆ ಕುರಿತು ಅನೇಕ ವಾದ ವಿವಾದ ಗೊಂದಲಗಳಿದ್ದರೂ ಪಾಟೀಲರು ನಿಷ್ಠೆಯಿಂದ ಎಲ್ಲವನ್ನು ತೋರಿಸಿದರು. ಅದಕ್ಕೂ ವಿರೋಧ ಪಕ್ಷದವರು ಒಪ್ಪಲಿಲ್ಲ. ಕೊನೆಗೆ ಶ್ವೇತ ಪತ್ರ ಹೊರಡಿಸಿಯೇ ಬಿಟ್ಟರು. ನಂತರ ತನಿಖೆ ನಡೆಸಲು ಸಹ ಸೂಚಿಸಿದರು. ಇದರಿಂದ ಪಾಟೀಲರ ವ್ಯಕ್ತಿತ್ವಕ್ಕೆ ಎಳ್ಳಷ್ಟು ಕಳಂಕ ಹತ್ತಲಿಲ್ಲ. ಆದರೆ ವರ್ಚಸ್ಸು ವೃದ್ಧಿಸಿತು.

1968 ರಲ್ಲಿ ಎಸ್.ಎನ್. ರವರು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಿ ಹೋದರು. ಈ ಸಂದರ್ಭದಲ್ಲಿ ಕರ್ನಾಟಕದ ಮುಖ್ಯ ಮಂತ್ರಿಯಾರು ಆಗಬೇಕೆಂಬ ದೊಡ್ಡ ಸಮಸ್ಯೆ ತಲೆದೋರಿತು. ಆಗ ಕಾಂಗ್ರೆಸ್ ಪಕ್ಷದಲ್ಲಿಯೇ ಜತ್ತಿಯವರದು ಒಂದು ಗುಂಪಾದರೆ ಎಸ್.ಎನ್.ರವರದು ಮತ್ತೊಂದು ಗುಂಪು, ಎಸ್.ಎನ್.ಗುಂಪಿನಿಂದ ಮುಖ್ಯ ಮಂತ್ರಿ ಸ್ಥಾನಕ್ಕೆ ವೀರೇಂದ್ರ ಪಾಟೀಲರು ನಿಂತರೆ, ಜತ್ತಿಯವರ ಗುಂಪಿನಿಂದ ಜತ್ತಿಯವರೇ ಸ್ಪರ್ಧಿಸಬೇಕೆಂದು ದೇವರಾಜ ಅರಸು, ದಯಾನಂದ ಸಾಗರ ತಿಳಿಸಿದರು. ಆಗ ಎ.ಐ.ಸಿ.ಸಿ. ಗೆ ಡಾ: ಶಂಕರ ದಯಾಳ ಶರ್ಮಾ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ನಾಯಕನ ಆಯ್ಕೆಯ ಸಂದರ್ಭದಲ್ಲಿ ವೀಕ್ಷಕರಾಗಿ ಶರ್ಮಾರವರೇ ಬಂದಿದ್ದರು. ಪಕ್ಷದ ಸಭೆ ಆರಂಭವಾದಾಗ ಶರ್ಮಾರವರ ಪಕ್ಕದಲ್ಲಿ ಎಸ್.ಎನ್. ಕುಳಿತಿದ್ದರು. ಆದರೆ ಸಭೆಯಲ್ಲಿ ಗದ್ದಲ ಪ್ರಾರಂಭವಾಯಿತು. ಆಗ ಶರ್ಮಾರವರೇ ಈಗ ನಮ್ಮ ಪಕ್ಷ ಕಷ್ಟದಲ್ಲಿದೆ ನಮ್ಮ ನಮ್ಮಲ್ಲಿನ ವಿರಸಗಳನ್ನು ತೋರಿಸಿಕೊಳ್ಳಬಾರದು ಎಲ್ಲರೂ ಒಗ್ಗಟ್ಟಾಗಿ ಮುಂದುವರಿಯೋಣ ಎಂದರು. ಯಾವುದಕ್ಕೂ ಕೇಳದ ಜತ್ತಿಯವರ ಗುಂಪು ಚುನಾವಣೆ ನಡೆಯಲೇ ಬೇಕು ಎಂದು ಹಠಹಿಡಿದರು. ಅನಿವಾರ್ಯವಾಗಿ ಶರ್ಮಾ ಚುನಾವಣೆ ಎಂದು ಹೇಳಿದರು. ಎಲ್ಲಾ ಶಾಸಕರ ಕೈಗೆ ಬಿಳಿ ಹಾಳೆಯನ್ನು ಕೊಟ್ಟು ಅದರಲ್ಲಿ ಯಾರು ಮುಖ್ಯ

ಮಂತ್ರಿಯಾಗಬೇಕು, ಅವರ ಹೆಸರನ್ನು ಬರೆಯಲು ತಿಳಿಸಿದರು. ನಂತರ ಎಲ್ಲಾ ಚೀಟಿಗಳನ್ನು ಇಸಿದುಕೊಂಡು ಮತ್ತೊಂದು ಕೋಣೆಗೆ ಹೋಗಿ ಪಾಟೀಲರ ಹೆಸರಿನ ಚೀಟಿಯನ್ನು ಜತ್ತಿಯವರ ಕೈಯಲ್ಲಿ ಕೊಟ್ಟರು. ಜತ್ತಿಯವರ ಹೆಸರಿನಲ್ಲಿಯ ಚೀಟಿಯನ್ನು ಪಾಟೀಲರ ಕೈಗೆ ಕೊಟ್ಟು ಎಣಿಕೆ ಮಾಡಲು ಹೇಳಿದರು. ನಂತರ ಕೋಣೆಯಿಂದ ಹೊರಬಂದಾಗ ಎಲ್ಲರೂ ಫಲಿತಾಂಶಕ್ಕಾಗಿ ಕಾಯುತ್ತಿದ್ದಾಗ ಜತ್ತಿಯವರೇ ಪಾಟೀಲರ ಹೆಸರನ್ನು ಮುಖ್ಯಮಂತ್ರಿಯ ಸ್ಥಾನಕ್ಕೆ ಸೂಚಿಸಿದರು. ಉಳಿದವರು ಅನುಮೋದಿಸಿದರು. ಆಗ ವೀರೇಂದ್ರ ಪಾಟೀಲರೇ ಮುಖ್ಯ ಮಂತ್ರಿಯಾಗಿ ಆಯ್ಕೆ ಆಗಿ ಎಸ್.ಎನ್. ರಿಂದ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡರು.

**1968 ರಿಂದ 1971 ರವರೆಗೆ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾಗಿ:**

ಪಾಟೀಲರು ಮುಖ್ಯಮಂತ್ರಿಯಾದಾಗ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದರು. ಇವರು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲಿ ಇಂದಿರಾ ಗಾಂಧಿಯವರು ವಿದೇಶಕ್ಕೆ ಹೋಗಿದ್ದರು. ಹೀಗಾಗಿ ಮಂತ್ರಿಮಂಡಲದಲ್ಲಿ ಯಾರನ್ನು ಯಾರ‍್ಯಾರಿಗೆ ಯಾವ ಯಾವ ಖಾತೆಗಳನ್ನು ಕೊಡಬೇಕೆಂಬುದನ್ನು ಯೋಚಿಸಿ ಎಸ್.ಎನ್. ರವರ ಜೊತೆ ಸಮಾಲೋಚಿಸಿ ಖಾತೆಗಳನ್ನು ಹಂಚಿದರು. ಇಂದಿರಾವರು ವಿದೇಶದಿಂದ ಬಂದ ನಂತರ ಇನ್ನೂ ಒಬ್ಬರನ್ನು ತಮ್ಮ ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲು ಸೂಚಿಸಿದರು. ಅವರನ್ನು ಕೂಡ ಸಚಿವ ಸಂಪುಟದಲ್ಲಿ ಸೇರಿಸಿಕೊಂಡರು. ಮುಖ್ಯ ಮಂತ್ರಿಯಾದ ಮೇಲೂ ನೀರಾವರಿ, ವಿದ್ಯುತ್, ಗೃಹ ಖಾತೆ ಇನ್ನಿತರ ಖಾತೆಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡರು. ಎಸ್.ಎನ್. ಮತ್ತು ಪಾಟೀಲರು ಎಲ್ಲಾ ಸಚಿವ ಶಾಸಕರೊಂದಿಗೆ ಹೊಂದಾಣಿಕೆಯಿಂದ ರಾಜ್ಯಭಾರ ಪ್ರಾರಂಭಿಸಿದರು.

ಪಾಟೀಲರು ಮುಖ್ಯ ಮಂತ್ರಿಯಾಗುವುದಕ್ಕಿಂತ ಮೊದಲು ಇಂದಿರಾ ಗಾಂಧಿಯವರ ಜೊತೆಗೆ ಬಹಳ ನಿಕಟವಾದ ಸಂಪರ್ಕ ಹೊಂದಿರಲಿಲ್ಲ. ಆದರೆ ಮುಖ್ಯ ಮಂತ್ರಿಯಾದ ನಂತರ ಸಂಪರ್ಕ ನಿಕಟವಾಯಿತು. ಪಾಟೀಲರು ದೆಹಲಿಗೆ ಹೋದರೆ ಎಸ್.ಎನ್. ಮತ್ತು ಇಂದಿರಾ ಗಾಂಧಿಯವರಿಗೆ ಭೇಟಿಯಾಗಿಯೇ ಬರುತ್ತಿದ್ದರು. ಹಲವಾರು ತಿಂಗಳುಗಳ ನಂತರ ಇಂದಿರಾ ಮತ್ತು ಎಸ್.ಎನ್. ಮಧ್ಯೆ ವೈಷಮ್ಯದ ಹೊಗೆ ಆಡುತ್ತಿರುವುದನ್ನು ಪಾಟೀಲರು ತಿಳಿದುಕೊಂಡರು. ಕಾಂಗ್ರೆಸ್ ಪಕ್ಷ ಒಡೆಯಬಾರದು, ಅಂಥ ಪ್ರಸಂಗ ಬಂದರೆ ಯಾರಾದರೂ ಒಬ್ಬರು ತ್ಯಾಗ ಮಾಡುವ ಮನೋಭಾವವನ್ನು ಹೊಂದಬೇಕು ಎಂದು ಪಾಟೀಲರು ಇಬ್ಬರಿಗೂ ಹೇಳುತ್ತಿದ್ದರು. ಆದರೆ ಕೊನೆಗೆ ಇಬ್ಬರಲ್ಲಿಯೂ ವೈಮನಸ್ಸು ಉಂಟಾಯಿತು. ಪಾಟೀಲರು ಸಂಧಾನಕ್ಕೆ ಹಲವಾರು ಸಲ ಪ್ರಯತ್ನ ಪಟ್ಟರೂ ಸಹ ಪ್ರಯತ್ನ ಫಲ ಪ್ರದವಾಗಲಿಲ್ಲ. ಕೊನೆಗೆ ಪಾಟೀಲರು ಎಸ್.ಎನ್. ರವರಿಗೆ ಒಂದು ಕಿವಿ ಮಾತು ಸಹ ಹೇಳಿದರು ಇವತ್ತು ನಾನು ಮುಖ್ಯಮಂತ್ರಿಯಾಗಿದ್ದೇನೆ ಒಂದು ವೇಳೆ ಕಾಂಗ್ರೆಸ್ ಇಬ್ಭಾಗವಾಗುವಂತಹ ಪರಿಸ್ಥಿತಿ ಬಂದರೆ ನೀವು ಪಕ್ಷದೊಳಗೆ ಇದ್ದು ಬೆಂಗಳೂರಿಗೆ ಬನ್ನಿ, ನಿಮ್ಮ ಜಾಗ ತೆಗೆದುಕೊಂಡಿರುವ ನಾನು ನಿಮ್ಮ ಸಲುವಾಗಿ ಈ ಜಾಗ ಖಾಲಿ ಮಾಡುತ್ತೇನೆ ಎಂದು ಹೇಳಿದ ಪಾಟೀಲರ ಮಾತು ಎಷ್ಟು ಔದರ್ಯಯುತದಿಂದ ಕೂಡಿದೆ ಎಂದು ನಮಗನಿಸುತ್ತದೆ.

1969 ರಲ್ಲಿ ಬೆಂಗಳೂರಿನ ಲಾಲ್‌ಬಾಗದ ಗಾಜಿನ ಮನೆಯಲ್ಲಿ ಎ.ಐ.ಸಿ.ಸಿ.ಯ ಸಭೆ ನಡೆಯಿತು. ಪ್ರಧಾನಿ ಇಂದಿರಾ ಗಾಂಧಿಯವರಿಗೂ ಎ.ಐ.ಸಿ.ಸಿ. ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪನವರಿಗೂ ಆಗ ವೈಚಾರಿಕ ಹೊಂದಾಣಿಕೆ ಇರಲಿಲ್ಲ. ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಒಡೆಯಬೇಕು ಎನ್ನುವ ವಿಚಾರ ಎಲ್ಲರಲ್ಲೂ ಬಂದದ್ದಾಗಿತ್ತು. ಆದರೆ ಅಂದು ಆ ಸಭೆಗೆ ಇಂದಿರಾ ಗಾಂಧಿಯವರು ಬರಬೇಕಾಗಿತ್ತು. ಅವರು ಬರಲಿಲ್ಲ. ಒಂದು ಟಿಪ್ಪಣಿಯನ್ನು ಕಳುಹಿಸಿದರು ಅದರಲ್ಲಿ ಕಾಂಗ್ರೆಸ್ ಜನಪ್ರಿಯತೆ ಗಳಿಸಬೇಕಾದರೆ ಬ್ಯಾಂಕುಗಳ ರಾಷ್ಟ್ರೀಕರಣ ಆಗಬೇಕು ಎಂಬ ಮುಂತಾದ ವಿಚಾರಗಳಿದ್ದವು.

ಭಾರತದ ರಾಷ್ಟ್ರಪತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ದೊಡ್ಡ ಸಮಸ್ಯೆಯೇ ತಲೆದೋರಿತು. ಇಂದಿರಾ ಗಾಂಧಿಯವರು ವಿ.ವಿ. ಗಿರಿಯನ್ನು ನಿಲ್ಲಿಸಿದರೆ ಎಸ್.ಎನ್.ರವರು ಸಂಜೀವರೆಡ್ಡಿಯವರನ್ನು ನಿಲ್ಲಿಸಿದರು. ಆಗ ಇದನ್ನು ಸಹಿಸದ ಇಂದಿರಾ ಗಾಂಧಿಯವರು ನಿಜಲಿಂಗಪ್ಪನವರೊಂದಿಗೆ ಜಗಳವಾಡಲು ಪ್ರಾರಂಭಿಸಿದರು. ಇದನ್ನು ನೋಡುತ್ತಿದ್ದ ಪಾಟೀಲರಿಗೆ ಅಸಹ್ಯವೆನಿಸಿ ಎಸ್.ಎನ್.ರವರೆ ಇಲ್ಲಿ ಜಗಳ ಮಾಡಬೇಡಿ ಒಂದು ವೇಳೆ ಜಗಳ ಮಾಡುವುದೇ ಆದರೆ ದೆಹಲಿಗೆ ಹೋಗಿ ಜಗಳವಾಡಿ, ಇಲ್ಲವಾದರೆ ಕರ್ನಾಟಕಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಇಂದಿರಾ ಹಾಗೂ ಎಸ್.ಎನ್. ಅವರಿಗೆ ಹೇಳಿರುವ ಮಾತು ಅವಿಸ್ಮರಣೀಯವಾದುದು.

1969 ರಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾಯಿತು. ಪಾಟೀಲರು ಮಂತ್ರಿಯಾಗಿಯೇ ಮುಂದುವರಿದರು. ರಾಜ್ಯಕ್ಕಾಗಿ ಒಳ್ಳೆಯ ಯೋಜನೆಗಳನ್ನು ಹಾಕಿದರು. ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ಮುಂದುವರಿಯಬೇಕು ನೀರಾವರಿ ಸೌಕರ್ಯ, ವಿದ್ಯುತ್ ಉತ್ಪಾದನೆ ಹೆಚ್ಚಿಸಬೇಕು. ಕಾಳಿ ನದಿ ಪವರ್ ಕಾರ್ಪೋರೇಷನ್ ಸ್ಥಾಪನೆಗೆ ಆಸಕ್ತಿ ವಹಿಸಿ ಕೇಂದ್ರವು ಇದಕ್ಕೆ ದುಡ್ಡು ಕೊಡದಿದ್ದರೂ ನಿಗಮವನ್ನು ಸ್ಥಾಪಿಸಿ, ವಿ.ವಿ.ಗಿರಿಯವರಿಂದ ಉದ್ಘಾಟನೆ ಮಾಡಿಸಿದರು. ಕಾಳಿ ನದಿ ಯೋಜನೆಯನ್ನು ಸಹ ಆರಂಭಿಸಿದರು. ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ ಕಾವೇರಿ, ಘಟಪ್ರಭಾ, ಭೀಮಾ, ತುಂಗಭದ್ರಾ ಮುಂತಾದವುಗಳಿಗೆ ನೀರಾವರಿ ಯೋಜನೆಯನ್ನು, ರೂಪಿಸಲು ಶ್ರಮಿಸಿದರು. ಕಾವೇರಿ ಮತ್ತು ಕೃಷ್ಣಾ ಯೋಜನೆಗಳು ಕಾಂಗ್ರೆಸ್ ಆಡಳಿತದಲ್ಲಿಯೇ ಆರಂಭವಾದವು. ಕಬಿನಿ, ಹೇಮಾವತಿ, ಹಾರಂಗಿ, ಸುವರ್ಣಾವತಿ, ಮಂಚನಾಬೆಲೆ ಯೋಜನೆಗಳ ಕೆಲಸ ಕಾರ್ಯಗಳನ್ನು ಮುಂದುವರಿಸಿದರು. ಮತ್ತು ಸಾಕಷ್ಟು ಹೊಸ ಉದ್ದಿಮೆಗಳನ್ನು ಸಹ ಸ್ಥಾಪಿಸಿದರು.

ಮಂತ್ರಿಗಳು ಬಂದರೆ ಸಾಕು ಅವರ ಹಿಂದೆ ಅಧಿಕಾರಿಗಳ ದಂಡೇ ಬರುತ್ತಿತ್ತು. ಇದನ್ನು ತೀವ್ರವಾಗಿ ಅಲ್ಲಗಳೆದು ಸಂಬಂಧಪಟ್ಟ ಅಧಿಕಾರಿಗಳೇ ಹೋಗಬೇಕು, ಶಾಸಕರೇ ಆಗಲಿ, ಸಚಿವರೇ ಆಗಲಿ, ಮುಖ್ಯ ಮಂತ್ರಿಯೇ ಆಗಿರಲಿ ಎಲ್ಲರೂ ಸಾಮಾನ್ಯ ಪ್ರಜೆಯಂತೆ ಓಡಾಡಬೇಕು ಎಂದು ಹೇಳಿ ಈ ಕೆಲಸ ಮಾಡಿದರು. ಪ್ರಾಮಾಣಿಕರಿಗೆ ಮಾತ್ರ ಇವರ ಸಚಿವ ಸಂಪುಟದಲ್ಲಿ ಸ್ಥಾನ ಇತ್ತು ಪ್ರಾಮಾಣಿಕ ಅಧಿಕಾರಿಗಳಿಗೆ ಇವರು ಆದ್ಯತೆ ಕೊಡುತ್ತಿದ್ದರು. ಪ್ರಾಮಾಣಿಕ ವ್ಯಕ್ತಿಗಳು ಒಂದೊಂದು ಸಲ ತಪ್ಪು ಮಾಡಿದರೂ ಸಹ ಅವರನ್ನು ಕ್ಷಮಿಸಿ ಮುಂದೆ ಇಂತಹ ತಪ್ಪುಗಳಾಗದಂತೆ ನೋಡಿಕೊಂಡು ಹೋಗಲು ಸೂಚಿಸುತ್ತಿದ್ದರು. ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗ ಬಾರದು ಎಂದು ತಿಳಿ ಹೇಳುವವರೆಂದರೆ ರಾಜ್ಯದಲ್ಲಿ ಇವರನ್ನು ಬಿಟ್ಟರೆ ಮತ್ಯಾರೂ ಕಾಣುವುದಿಲ್ಲ. ಎಂಬುದು ಜನತೆಯ ಅನಿಸಿಕೆ.

1971 ರಲ್ಲಿ ಲೋಕಸಭಾ ಚುನಾವಣೆ ನಡೆದಾಗ ನಿಂತವರೆಲ್ಲರೂ ಸೋತರು 48 ತಾಸುಗಳಲ್ಲಿ 48 ವಿಧಾನ ಸಭೆಯ ಸದಸ್ಯರು ಪಾಟೀಲರ ಪಕ್ಷ ಬಿಟ್ಟು ಕಾಂಗ್ರೆಸ್ (ಆರ್)ಗೆ ಸೇರಿಕೊಂಡುದನ್ನು ನೋಡಿದ ಕೂಡಲೇ ಪಾಟೀಲರು 1971 ರಲ್ಲಿ ರಾಜೀನಾಮೆ ಸಲ್ಲಿಸಿದರು. ರಾಜೀನಾಮೆ ಕೊಡಿ ಎಂದು ಯಾರೂ ಕೇಳಿರಲಿಲ್ಲ. ಕೂಡಲೇ ಸಚಿವ ಸಂಪುಟದ ಸಭೆ ಕರೆದು ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಒಂದು ಸೀಟೂ ಬಂದಿರುವುದಿಲ್ಲಾ. ಅದಕ್ಕಾಗಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸುತ್ತೇನೆ ಎಂದು ತಿಳಿಸಿದರು. ಅದಕ್ಕೆ ಸಂಪುಟ ಸಚಿವರೆಲ್ಲರು ಒಪ್ಪಿಗೆ ಸೂಚಿಸಿದರು. ರಾಜ್ಯ ಪಾಲ ಧರ್ಮವೀರರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಇದರಿಂದಾಗಿ ರಾಷ್ಟ್ರಪತಿಯವರಿಗೆ ಏನೂ ತೋಚದಂತಾಗಿ ಏನು ಮಾಡಬೇಕು ಎಂದು ಕೇಳಿದಾಗ ಪಾಟೀಲರು ನನ್ನ ಕೆಲಸ ನಾನು ಮಾಡಿರುವೆ, ಮುಂದಿನದು ತಮ್ಮ ಕೆಲಸವೆಂದು ಹೇಳಿದರು. ಆಗ ವಿರೋಧ ಪಕ್ಷದವರು ತಮ್ಮ ಬೇಳೆ ಬೇಯಿಸಿಕೊಳ್ಳುವ ವಿಚಾರದಲ್ಲಿದ್ದರು ಆದರೆ ಅದು ಸಫಲವಾಗಲಿಲ್ಲ. ಅವರ ಕನಸು ನನಸಾಗದೇ ಉಳಿಯಿತು. ಕೊನೆಗೆ ವಿರೋಧ ಪಕ್ಷದವರೇ ಪಾಟೀಲರೇ ನಿಮಗೆ ನಾವು ಬೆಂಬಲ ನೀಡುತ್ತೇವೆ. ನೀವೇ ಪುನಃ ಮುಖ್ಯ ಮಂತ್ರಿಯಾಗಿರಿ ಎಂದು ವಿನಂತಿಸಿಕೊಂಡರೂ ಪ್ರಯೋಜನವಾಗಲಿಲ್ಲ. ರಾಷ್ಟ್ರಪತಿ ಆಡಳಿತ ಜಾರಿಗೆ ಬಂತು. ಅಧಿಕಾರ ಹೋದಾಗ ಪಾಟೀಲರಿಗೆ ದುಃಖವಾಗಲಿಲ್ಲ 48 ಜನ ಹೋಗದೇ ಇದ್ದರೆ ಮುಂದಿನ ಚುನಾವಣೆಗಾಗಿ ಕೆಲಸ ಮಾಡಬಹುದಿತ್ತು ಎಂದು ಕೊಂಡರು. ಪಾಟೀಲರು ತಾವು ಮುಖ್ಯ ಮಂತ್ರಿಯಾದಾಗ ಯಾವುದೇ ಭ್ರಷ್ಟಾಚಾರದ ಆರೋಪ ತಮ್ಮ ಮೇಲೆ ಇಲ್ಲವೆಂಬ ಒಂದೇ ಒಂದು ಸಮಾಧಾನದ ನಿಟ್ಟುಸಿರು ಬಿಟ್ಟರು.

ವೀರೇಂದ್ರ ಪಾಟೀಲರು 1972 ರಲ್ಲಿ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಇವರು 1972 ರ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ಇಷ್ಟು ವರ್ಷ ರಾಜಕೀಯ ಜೀವನದಲ್ಲಿ ಇದೇ ಮೊದಲ ಬಾರಿಗೆ ಸ್ಪರ್ಧಿಸದೇ ಉಳಿದದ್ದು 1972 ರಲ್ಲಿ ರಾಜ್ಯಸಭೆಗೆ ಆಯ್ಕೆಯಾದರು. ರಾಜ್ಯ ಸಭೆಗೆ ಆಯ್ಕೆಯಾಗುವಲ್ಲಿ, ಅನೇಕರು ಎದುರಾದರೂ ಕೊನೆಗೆ ವಿಜಯ ಇವರದೇ ಆಯಿತು. ಇಲ್ಲಿಂದ ಇವರ ಕಾರ್ಯ ಕ್ಷೇತ್ರ ದೆಹಲಿ ಆಯಿತು. ಪಾಟೀಲರ ಸಂಸದೀಯ ಜೀವನದ ಇನ್ನೊಂದು ಹೊಸ ಹಂತ ಇಲ್ಲಿಂದಲೇ ಆರಂಭವಾಯಿತು.

### ರಾಜ್ಯ ಸಭೆಯ ಸದಸ್ಯರಾಗಿ

1972 ರಲ್ಲಿ ರಾಜ್ಯ ಸಭೆಯ ಸದಸ್ಯರಾಗಿ ಆಯ್ಕೆಯಾಗಿ ದೆಹಲಿಗೆ ಹೋದರು. 1974-75ರ ಸಮಯದಲ್ಲಿ ಇಂದಿರಾ ಗಾಂಧಿಯವರ ಪ್ರಭಾವ ಇಳಿಮುಖವಾಗಹತ್ತಿತ್ತು. ಅಲಹಾಬಾದ ಹೈಕೋರ್ಟಿನ ತೀರ್ಪು ದೇಶದ ರಾಜಕೀಯಕ್ಕೆ ಒಂದು ಹೊಸ ತಿರುವನ್ನು ನೀಡಿತು. ಈ ತೀರ್ಪು ಇಂದಿರಾ ಗಾಂಧಿಯವರ ಚುನಾವಣಾ ನೀತಿಗೆ ಸಂಬಂಧಿಸಿದುದಾಗಿತ್ತು. ಅದಕ್ಕಾಗಿ ಮುಂದೇನು ಗತಿ ಎಂದು ವಿಚಾರಿಸುತ್ತಾ ತುರ್ತುಪರಿಸ್ಥಿತಿಯನ್ನು ಹೇರಿದರು. 18 ತಿಂಗಳ ತುರ್ತು ಪರಿಸ್ಥಿತಿಯಲ್ಲಿ ವಿರೋಧಿಗಳ ಬಂಧನವಾಯಿತು. ಆದರೆ ಪಾಟೀಲರ ಬಂಧನವಾಗಲಿಲ್ಲ. ತುರ್ತು ಪರಿಸ್ಥಿತಿಯನ್ನು ಹಿಂದಕ್ಕೆ ಪಡೆದುಕೊಂಡು ಬಂಧಿತವಾದವರನ್ನು ಬಿಡುಗಡೆ ಮಾಡಿದರು. ಲೋಕದಳ, ಜನಸಂಘ, ಸೋಷಲಿಸ್ಟ ಪಾರ್ಟಿ, ಸಂಸ್ಥಾ ಕಾಂಗ್ರೆಸ್ ಇವೆಲ್ಲರೂ ಸೇರಿ ಹಿಂದಿನ ವೈಷಮ್ಯವನ್ನು ದೂರ

ಮಾಡಿ ಎಲ್ಲರೂ ಒಂದಾಗಿ ಹೊಸ ಪಕ್ಷ ಹುಟ್ಟು ಹಾಕಲು ಮುಂದಾದರು. ಚರಣಸಿಂಗ್, ಜಾರ್ಜ್ ಫರ್ನಾಂಡೀಸ್, ಮಧು ದಂಡವತೆ, ಮುಂತಾದ ಪ್ರಸಿದ್ಧ ನಾಯಕರು ಸ್ಥಾಪನೆ ಮಾಡುವಲ್ಲಿ ಶ್ರಮ ವಹಿಸಿದರು. ಇದರಲ್ಲಿ ವೀರೇಂದ್ರ ಪಾಟೀಲರೂ ಭಾಗವಹಿಸಿದ್ದರು. ಅಖಿಲ ಭಾರತ ಮಟ್ಟದಲ್ಲಿ ಜನತಾ ಪಕ್ಷಕ್ಕೆ ಮುರಾರ್ಜಿ ದೇಸಾಯಿ ಅಧ್ಯಕ್ಷರಾದರೆ, ರಾಜ್ಯ ಜನತಾ ಪಕ್ಷಕ್ಕೆ ವೀರೇಂದ್ರ ಪಾಟೀಲರು ಅಧ್ಯಕ್ಷರಾದರು. ಹೆಚ್.ಡಿ. ದೇವೇಗೌಡರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿದವರು ಪಾಟೀಲರು. ಒಂದಿಲ್ಲ ಒಂದು ದಿನ ಈ ಮಹಾಶಯರು ತಿರುಗಿ ಬೀಳುವರು ಎಂಬ ಕನಸು ಕಂಡಿರಲಿಲ್ಲ ಕೊನೆಗೆ ತಿರಿಗಿ ಬಿದ್ದರು. ಮುಂದೆ ಪಾಟೀಲರ ಅಧ್ಯಕ್ಷಗಿರಿಯು ಹೋಯಿತು. ರಾಜ್ಯ ಸಭೆಯ ಸದಸ್ಯತ್ವವೂ ಮುಗಿಯಿತು. ಮುಂದೆ ಪಾಟೀಲರು ಈ ಪಕ್ಷವನ್ನೇ ಬಿಡಲು ಮುಂದಾದರು.

**ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಚಿಕ್ಕಮಗಳೂರು ಚುನಾವಣೆಯಲ್ಲಿ:**

**ಲೋಕಸಭೆಯ** ಸದಸ್ಯತ್ವ ಕಳೆದುಕೊಂಡಿದ್ದ ಇಂದಿರಾಗಾಂಧಿಯವರನ್ನು ಚಿಕ್ಕಮಗಳೂರ ಲೋಕ ಸಭಾ ಕ್ಷೇತ್ರದಿಂದ ಸ್ಪರ್ಧೆಗೆ ನಿಲ್ಲಿಸಿದರು. ಆದರೆ ಇವರಿಗೆ ವಿರೋಧವಾಗಿ ನಿಲ್ಲುವ ಧೈರ್ಯ ಯಾರಲ್ಲಿಯೂ ಇರಲಿಲ್ಲ. ನಿಂತರೆ ಠೇವಣಿ ಸಹ ಕಳೆದುಕೊಳ್ಳುವೆವು ಎಂಬ ಮತ್ತೊಂದು ಭಯ ಎಲ್ಲರಲ್ಲಿಯೂ ಕಾಣುತ್ತಿತ್ತು. ಆದರೆ ಪಕ್ಷದ ಎಲ್ಲಾ ಮುಖಂಡರು ಚರ್ಚಿಸಿ ಇದಕ್ಕೆ ಪಾಟೀಲರೇ ಯೋಗ್ಯವಾದ ವ್ಯಕ್ತಿ ಎಂದು ಪಾಟೀಲರಿಗೆ ಒಪ್ಪಿಸಲು ಮುಂದಾದರು. ಈ ಸಮಯದಲ್ಲಿ ಪಾಟೀಲರು ಕೆಲವು ಮಾತುಗಳನ್ನು ಮಾರ್ಮಿಕವಾಗಿಯೇ ನುಡಿದರು. " ಕಾಂಗ್ರೆಸ್‌ನಿಂದ ರಾಜ್ಯಸಭೆಯ ಸದಸ್ಯರಾಗಿದ್ದ ನನ್ನನ್ನು ತೆಗೆದು ಹಾಕಿ ಮೂಲೆ ಗುಂಪು ಮಾಡಿ ಬಿಟ್ಟಿರಿ, ಮತ್ತೆ ಈಗ ಚಿಕ್ಕಮಗಳೂರು ಮತ ಕ್ಷೇತ್ರದಿಂದ ನಿಲ್ಲಿಸಬೇಕೆಂಬ ವಿಚಾರ ಮಾಡುತ್ತಿರುವಿರಿ ಅದೂ ಸೋಲುವ ಜಾಗದಲ್ಲಿ, ನಾನು ನನ್ನ ಜೀವನದಲ್ಲಿ ಸೋತೇ ಇಲ್ಲ. ಇಂದಿರಾ ಗಾಂಧಿಯವರ ವಿರುದ್ಧ ನಿಲ್ಲಲು ನಾನು ತಯಾರಿಲ್ಲ ಎಂದು ನುಡಿದರು. ಆದರೂ ಮುರಾರ್ಜಿ, ಜಾರ್ಜ್ ಫರ್ನಾಂಡಿಸ್ ಮುಂತಾದವರು ಸೇರಿ ನೀವು ನಿಲ್ಲಲೇ ಬೇಕು, ನಮ್ಮ ಪಕ್ಷದವರು ಯಾರಾದರೂ ನಿಂತರೆ ಡಿಪಾಸಿಟ್ ಸಹ ಉಳಿಯುವುದಿಲ್ಲ ಎಂದು ವಿನಂತಿಸಿಕೊಂಡಾಗ ಮಾತ್ರ ಚುನಾವಣೆಗೆ ಸ್ಪರ್ಧಿಸಿದರು. ಚುನಾವಣೆ ಪ್ರಚಾರದಲ್ಲಿ ಹೆಗಡೆ, ದೇವೇಗೌಡ, ಫರ್ನಾಂಡೀಸ್ ಒಂದು ಕಡೆಯಾಗಿ ಪ್ರಚಾರ ಪ್ರಾರಂಭಿಸಿದರೆ, ಪಾಟೀಲರೊಬ್ಬರೇ ಜನತೆಯ ಬಳಿಗೆ ಹೋದರು. ಆದರೆ ಇಂದಿರಾಗಾಂಧಿಯವರಿಗೆ ಜಯ ಲಭಿಸಿತು. ಇದರಿಂದ ಪಾಟೀಲರ ಮೇಲೆ ಯಾವ ಪರಿಣಾಮ ಉಂಟಾಗಲಿಲ್ಲ, ಏಕೆಂದರೆ ಮೊದಲೇ ಸೋಲುವುದು ಖಚಿತ ಎಂದು ಕೊಂಡೇ ಸ್ಪರ್ಧಿಸಿದ್ದರು ಆದಕ್ಕಾಗಿ ಯಾವುದೇ ತರಹದ ಪರಿಣಾಮ ಆಗಲಿಲ್ಲ. ಇದು ಒಂದು ಪಾಟೀಲರ ಜೀವನದಲ್ಲಿ ಮರೆಯಲಾರದ ಘಟನೆ ಎಂದೇ ಹೇಳಬಹುದು.

**ಕಾಂಗ್ರೆಸ್ ಪಕ್ಷಕ್ಕೆ ಮರಳಿ ಆಹ್ವಾನ:**

**ಚಿಕ್ಕಮಗಳೂರು** (ಮತಕ್ಷೇತ್ರದಿಂದ) ಚುನಾವಣೆಯ ನಂತರ ಪಾಟೀಲರು ರಾಜಕೀಯದಿಂದ ದೂರ ಸರಿದರು. ಇವರು ಏನೇ ಮಾಡಿದರೂ ಎಲ್ಲರು ಇವರನ್ನು ಹೊರದಬ್ಬುವ ವಿಚಾರದವರೇ ಇದ್ದರು. ಇವರು ಜನತಾ ಪಕ್ಷದಿಂದ ದೂರ ಸರಿಯುತ್ತಿದ್ದಾರೆ ಎಂಬ ವಿಷಯ ತಿಳಿದ ತಕ್ಷಣವೇ

ಇಂದಿರಾಗಾಂಧಿಯವರು, ಪ್ರಣವ ಮುಖರ್ಜಿಯವರನ್ನು ಕಳಿಸಿ ತಮ್ಮ ಪಕ್ಷದಲ್ಲಿ ತಮಗೆ ಸ್ಥಾನವಿದೆ, ಬರಬೇಕು ಎಂಬ ಆಹ್ವಾನವನ್ನು ಕಳುಹಿಸಿದರು. ಪಾಟೀಲರು ಈ ಆಹ್ವಾನವನ್ನು ತಿರಸ್ಕರಿಸಲಿಲ್ಲ. ತನ್ನ ಬೆಂಬಲಿಗರೆಲ್ಲರೊಡನೆ ಕುಳಿತು ಚರ್ಚಿಸಿ ತೀರ್ಮಾನ ಕೈಗೊಂಡು ಪ್ರಣವ ಮುಖರ್ಜಿಯವರಿಗೆ ಈ ರೀತಿಯಾಗಿ ತಿಳಿಸಿದರು. ನಾನು ಮತ್ತು ನನ್ನ ಬೆಂಬಲಿಗರೆಲ್ಲರನ್ನು ಕರೆದು ಕೊಂಡು ಬರುವುದಾದರೆ ಮಾತ್ರ ತಮ್ಮ ಪಕ್ಷಕ್ಕೆ ಬರುತ್ತೇನೆ, ಇಲ್ಲವಾದರೆ ಇಲ್ಲ ಎಂದರು. ನಮ್ಮ ಪ್ರತಿನಿಧಿಯನ್ನು ಕಳುಹಿಸುತ್ತೇನೆ, ಅವರೊಂದಿಗೆ ಮಾತುಕತೆ ನಡೆಯಲಿ ಎಂದು ಮುಖರ್ಜಿಯವರಿಗೆ ತಿಳಿಸಿದರು.

ಪಾಟೀಲರ ಪ್ರತಿನಿಧಿಯಾಗಿ ವೈ. ರಾಮಕೃಷ್ಣ ದೆಹಲಿಗೆ ಹೋದರು. ಆಗ ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ತ್ರಿಪಾಠಿ ಕಾರ್ಯಾಧ್ಯಕ್ಷರಾಗಿದ್ದರು. ರಾಮಕೃಷ್ಣರು ತ್ರಿಪಾಠಿಯವರೊಂದಿಗೆ ಮಾತುಕತೆ ನಡೆಸಿದರು. ನಾವು ಮತ್ತು ನಮ್ಮ ಪಕ್ಷ ವೀರೇಂದ್ರ ಪಾಟೀಲ ಹಾಗೂ ಅವರ ಬೆಂಬಲಿಗರನ್ನು ಸ್ವಾಗತಿಸುತ್ತೇವೆ, ಎಂದು ತ್ರಿಪಾಠಿಯವರು ಹೇಳಿದರು. 1979ರಲ್ಲಿ ವೀರೇಂದ್ರ ಪಾಟೀಲ ಮತ್ತು ಅವರ ಬೆಂಬಲಿಗರು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡರು.

ಪಾಟೀಲರು ಕಾಂಗ್ರೆಸ್ ಪಕ್ಷ ಸೇರುವುದಕ್ಕಿಂತ ಮುಂಚಿತವಾಗಿ ಇಂದಿರಾಗಾಂಧಿಯವರನ್ನು ಕಾಣಲು ಹೋದರು. ಇಬ್ಬರು ತಮ್ಮ ತಮ್ಮ ಯೋಗ ಕ್ಷೇಮ ವಿಚಾರಿಸಿದ ನಂತರ ನೇರವಾಗಿ ವಿಷಯಕ್ಕೆ ಬರುತ್ತಾರೆ. ನಾನು ನಿಮ್ಮ ವಿರುದ್ಧ ಸ್ಪರ್ಧಿಸಿದ್ದೆ 10 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದವನು, ನಿಮ್ಮ ವಿರುದ್ಧ ಕೆಲಸ ಮಾಡಿದವನು, ಇಷ್ಟೆಲ್ಲಾ ಗೊತ್ತಿದ್ದೂ ನನಗೆ ತಮ್ಮ ಪಕ್ಷದಲ್ಲಿ ಬರಲು ಹೇಳುತ್ತಿರುವಿರಲ್ಲಾ ಎಂದಾಗ ಇಂದಿರಾಗಾಂಧಿಯವರು ಜನತಾ ಪಕ್ಷದಲ್ಲಿದ್ದ ನೀವು ಪಕ್ಷದ ಶಿಸ್ತಿಗೆ ಬದ್ಧರಾಗಿ ನನ್ನ ವಿರುದ್ಧ ಸ್ಪರ್ಧಿಸಿದ್ದೀರಿ. ಅದಕ್ಕೆ ನಾನು ಕೆಟ್ಟದಾಗಿ ಭಾವಿಸುವುದಿಲ್ಲ. ಕಾಂಗ್ರೆಸ್ ಇಬ್ಭಾಗವಾದಾಗ ನಿಜಲಿಂಗಪ್ಪನವರನ್ನು ಗುರುಗಳಾಗಿ ಒಪ್ಪಿ ಅವರ ಕಡೆಗೆ ಹೋಗಬೇಕಾಯಿತು. ಅದನ್ನು ನಾನು ತಪ್ಪು ಎಂದು ತಿಳಿದುಕೊಳ್ಳಬೇಕೇ? ರಾಜಕೀಯದಲ್ಲಿ ಇಂಥ " ಕ್ವಾಲಿಫಿಕೇಶನ್ " ಇರುವವರು ಕಡಿಮೆ, ನಾನು ಮಾತ್ರ ಇಂತಹವರನ್ನು ಮೆಚ್ಚುತ್ತೇನೆ ಎಂದು ಹೇಳಿದರು. ಇದರಿಂದ ಸಂತೋಷಗೊಂಡ ಪಾಟೀಲರು ತಮ್ಮ ಬೆಂಬಲಿಗರೊಡನೆ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡರು.

1980 ರಲ್ಲಿ ಲೋಕಸಭಾ ಚುನಾವಣೆಗಳು ಬಂದವು. ಪಾಟೀಲರಿಗೆ ಸ್ಪರ್ಧಿಸಬೇಕೆಂದು ಇಂದಿರಾಗಾಂಧಿಯವರು ತಿಳಿಸಿದರು. ಆಗ ಇವರಿಗೆ ಚಿಂತೆ ಶುರುವಾಯಿತು. ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ವಿಚಾರಗಳ ಸುಳಿಯಲ್ಲಿ ಸಿಲುಕಿದರು. ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ವಿಚಾರ ಮನದಲ್ಲಿ ಹೊಳೆಯಿತು. ಆದರೆ 10 ವರ್ಷಗಳ ಕಾಲ ಇಂದಿರಾಗಾಂಧಿಯವರ ಪಕ್ಷವನ್ನು ಟೀಕಿಸುತ್ತಿದ್ದ ನಾನು ಅದೇ ಪಕ್ಷದಿಂದ ನನಗೆ ಮತ ನೀಡಿ ಎಂದು ಕೇಳಲು ಹೋದರೆ, ಜನತೆ ಏನಾದರೂ ಕೊಂಕು ನುಡಿ, ಬಿಚ್ಚು ನುಡಿಗಳನ್ನಾಡಬಹುದು ಎಂದು ತಿಳಿದು ಕೊಂಡು ಹಿಂದೆ ಸರಿದರು. ಆದರೆ ಅವರ ಸ್ನೇಹಿತ ಎಸ್.ಎನ್. ಮೆಳ್ಳಿಗೇರಿಯವರ ಒತ್ತಾಯದ ಮೇರೆಗೆ ಬಾಗಲಕೋಟೆ ಮತ ಕ್ಷೇತ್ರದಿಂದ ಸ್ಪರ್ಧಿಸಿದರು. ಪಾಟೀಲರು ಹೆಚ್ಚಿನ ಬಹುಮತದಿಂದ ಆಯ್ಕೆಯಾದರು. 1980 ಇಂದಿರಾಗಾಂಧಿಯವರು ಮತ್ತೆ ಪ್ರಧಾನಿಯಾದರು. ಆಗ ಪಾಟೀಲರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಂಡರು.

### ಕೇಂದ್ರ ಸಚಿವರಾಗಿ ಪಾಟೀಲರು:

ಇಂದಿರಾಗಾಂಧಿಯವರು ವೀರೇಂದ್ರ ಪಾಟೀಲರನ್ನು ಕರ್ನಾಟಕದಿಂದ ದೆಹಲಿಗೆ ಕರೆಯಿಸಿಕೊಂಡು ಪೆಟ್ರೋಲಿಯಂ ಫರ್ಟಿಲೈಸರ್ ಮತ್ತು ಕೆಮಿಕಲ್ಸ್ ಖಾತೆಗಳನ್ನು ನೀಡಿದರು. ಪಾಟೀಲರು ಎರಡು ದಿವಸ ದೆಹಲಿಯಲ್ಲಿಯೇ ಉಳಿದರು. 3ನೇ ದಿವಸಕ್ಕೆ ಇಂದಿರಾಗಾಂಧಿಯವರೇ ಫೋನ್ ಮಾಡಿ ಇಂದು ಸಾಯಂಕಾಲ ಪ್ರಮಾಣ ವಚನ ಸ್ವೀಕರಿಸಲು ಬರಬೇಕೆಂದು ತಿಳಿಸಿದರು. ಸಾಯಂಕಾಲ ಪಾಟೀಲರೊಬ್ಬರೇ ಪ್ರಮಾಣ ವಚನ ಸ್ವೀಕರಿಸಿದರು.

### ಪೆಟ್ರೋಲಿಯಂ ಖಾತೆಯ ಸಚಿವರಾಗಿ:

ವೀರೇಂದ್ರ ಪಾಟೀಲರು ಈ ಖಾತೆಯನ್ನು ಸ್ವೀಕರಿಸಿ ನಿರ್ವಹಿಸಲು ಸಿದ್ಧವಾದಾಗ ಕ್ರೂಡ್ ಆಯಿಲ್ ಅಭಾವ ಇತ್ತು. ಹಣ ಕೊಟ್ಟರು ಸಿಗುತ್ತಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ಪಾಟೀಲರು ಧೈರ್ಯದಿಂದ ಎದುರಿಸಲು ಮುಂದಾದರು. ಒಂದು ದಿನ ಇಂದಿರಾಗಾಂಧಿಯವರು ಪಾಟೀಲರನ್ನು ಕರೆಯಿಸಿ ಕ್ರೂಡ್ ಆಯಿಲ್ ಅಭಾವ ಇದೆ ಅದನ್ನು ನೀಗಿಸಬೇಕಾದರೆ ಬೇರೆ ದೇಶದಿಂದ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನು ಕೊಂಡುಕೊಳ್ಳಬೇಕು. ಹೆಚ್ಚಿನ ಹಣ ಹೋದರು ಚಿಂತೆಯಿಲ್ಲ ಎಂದು ಹೇಳಿದರು. ಅದಕ್ಕೆ ಪಾಟೀಲರು ಯಾವುದೇ ಆಗಬೇಕಾದರೂ " ಓಪೇಕ್ " ಕೂಟದಿಂದಲೇ ಎಂದು ಹೇಳಿದರು. ಪಾಟೀಲರು ತಮ್ಮ ಅಧಿಕಾರಿಗಳೊಂದಿಗೆ ಸಮಾಲೋಚಿಸಿದರು. ಓಪೇಕ್‌ನವರು ಒಂದು ಬ್ಯಾರಲ್‌ಗೆ ಎಷ್ಟು ಬೆಲೆ ನಿಗದಿಪಡಿಸುತ್ತಾರೋ ಅಷ್ಟನ್ನು ಕೊಟ್ಟು ತರಬೇಕು, ಅದಕ್ಕಿಂತ ಹೆಚ್ಚಿನ ಹಣ ಕೊಟ್ಟರೆ ಹಗರಣ ಆಗುತ್ತದೆ ಎಂದು ತಿಳಿಸಿದರು. ಕಾನೂನು ಮತ್ತು ಅಧಿಕಾರಿಗಳು ಹೇಳಿದ ಪ್ರಕಾರ ಅಂದಂದಿನ ದರದಲ್ಲೇ ಖರೀದಿಸಬೇಕು. ಇದಕ್ಕೆ ತಮ್ಮ ಮಾರ್ಗದರ್ಶನ ಬೇಕು ಎಂದು ಒಂದು ಕಡತವನ್ನು ಪ್ರಧಾನಿಗೆ ಕಳುಹಿಸಿದರು. ಆದರೆ ಪ್ರಧಾನಿ ಪ್ರವಾಸದಲ್ಲಿದ್ದರು. ಆಗ ವೆಂಕಟರಾಮನ್ ಹಣಕಾಸು ಸಚಿವರಾಗಿದ್ದರು. ಅವರ ಜೊತೆ ಚರ್ಚಿಸಿ ಅಂದಂದಿನ ಬೆಲೆಯಲ್ಲಿಯೇ ತೆಗೆದುಕೊಳ್ಳಬೇಕು ಎಂದು ಹಣಕಾಸು ಸಚಿವರು ಮತ್ತು ಪಾಟೀಲರು ತೀರ್ಮಾನಿಸಿ ಸಹಿ ಹಾಕಿದರು. ಎಣ್ಣೆ ಬರ ನೀಗಿಸಲು ಮುಂದಾದರು. ಆದರೆ ಬಹಳ ದಿವಸಗಳ ಕಾಲ ಪಾಟೀಲರು ಈ ಖಾತೆಯಲ್ಲಿ ಉಳಿಯಲಿಲ್ಲ.

ಪಾಟೀಲರ ಜೀವನದಲ್ಲಿ ಸೆಪ್ಟೆಂಬರ್ ತಿಂಗಳು ಒಳ್ಳೆಯದಲ್ಲವೆಂದು ಹೇಳುತ್ತಾರೆ. ಏಕೆಂದರೆ ಪೆಟ್ರೋಲಿಯಂ ಖಾತೆ ಹೋದದ್ದು ಹಡಗು ಮತ್ತು ಸಾರಿಗೆ ಬಂದದ್ದು ಮತ್ತು ಹೋದದ್ದು ಈ ತಿಂಗಳಲ್ಲೇ ಅವರ ಧರ್ಮಪತ್ನಿ ಮುಂಬೈನ ಜೆಸ್‌ಲೋಕ ಆಸ್ಪತ್ರೆಗೆ ಸೇರಿದ್ದು ಈ ತಿಂಗಳಲ್ಲೇ ಅದಕ್ಕಾಗಿಯೇ ಈ ತಿಂಗಳು ಪಾಟೀಲರಿಗೆ ಒಳ್ಳೆಯದಾಗಿರಲಿಲ್ಲ.

### ಹಡಗು ಮತ್ತು ಸಾರಿಗೆ ಸಚಿವರಾಗಿ

ಈ ಖಾತೆಯ ಸಚಿವರಾಗಿ ಎರಡು ವರ್ಷಗಳ ಕಾಲ ಕೆಲಸ ಮಾಡಿದರು. ಇದು ಪ್ರಮುಖ ಖಾತೆಯೇ ಆಗಿತ್ತು. ಸಾರಿಗೆ ನೀತಿ ರೂಪಿಸಲು ಸಂಬಂಧಿಸಿದ ಸಚಿವರನ್ನೆಲ್ಲಾ ಕರೆಸುತ್ತಿದ್ದರು. ಕೆಲವು ದಿನ ಬೂಟಾಸಿಂಗ್, ಸೀತಾರಾಮ ಕೇಸರಿ, ಪಾಟೀಲರ ಜೊತೆಗೆ ಸ್ಟೇಟ್ ಸಚಿವರಾಗಿ ಕೆಲಸ ಮಾಡಿರುವರು. ಖಾತೆಯನ್ನು ಸರಿಯಾಗಿ ನಿಭಾಯಿಸಿಕೊಂಡು

ಹೋಗುತ್ತಿದ್ದರು. ಒಂದು ದಿನ ಪಾಟೀಲರು ವಿಶಾಖ ಪಟ್ಟಣಕ್ಕೆ ಹೋಗಿದ್ದರು. ಅಲ್ಲಿಗೆ ಸಂದೇಶ ಹೋಯಿತು. ಕಾರ್ಮಿಕ ಖಾತೆಯನ್ನು ಕೊಡಲಾಗಿದೆ ಎಂದು ತಿಳಿಸಿದರು. ಪಾಟೀಲರು ಕಾರ್ಮಿಕ ಖಾತೆಯ ಸಚಿವರಾಗಿ ಮುಂದುವರಿದರು.

ಕಾರ್ಮಿಕ ಸಚಿವರಾಗಿ

ವಿಶಾಖ ಪಟ್ಟಣದಿಂದ ದೆಹಲಿಗೆ ಬಂದ ನಂತರ ಇಂದಿರಾಗಾಂಧಿಯವರನ್ನು ಭೇಟಿ ಮಾಡಿ ನನಗೆ ಕಾರ್ಮಿಕ ಖಾತೆ ಏಕೆ ಕೊಟ್ಟಿರುವಿರಿ ನಾನೆಂದೂ ಕಾರ್ಮಿಕ ಸಂಘಟನೆಗಳಲ್ಲಿ ಕೆಲಸ ಮಾಡಿದವನಲ್ಲ. ಕಾರ್ಮಿಕ ರಂಗದ ಅರಿವು ನನಗಿಲ್ಲ ಎಂದು ಹೇಳಿದರು. ಆಗ ಇಂದಿರಾಗಾಂಧಿಯವರು ಕಾರ್ಮಿಕರ ಎಲ್ಲಾ ಟ್ರೇಡ್ ಯುನಿಯನ್ ಲೀಡರ್ಸ್‌ರವರೇ ನಿಮಗೆ ಈ ಖಾತೆಯನ್ನು ಕೊಡಲು ಹೇಳಿದರು. ಅದಕ್ಕಾಗಿ ಕೊಟ್ಟಿರುವೆ ಎಂದು ಹೇಳಿದರು. ಪಾಟೀಲರು ಕಾರ್ಮಿಕರ ಜೊತೆಗೂಡಿ ಒಳ್ಳೆಯ ಕೆಲಸ ಕಾರ್ಯಗಳನ್ನು ಕೈಗೊಂಡಿರುವರು.

1984ರ ಅಕ್ಟೋಬರ್ 30 ರಂದು ಕರಾಳ ದಿನ ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆ. ಅಂದು ಇಡೀ ದೇಶದ ಜನತೆ ದುಃಖದ ಸಾಗರದಲ್ಲಿ ಮುಳುಗಿತು. ಇವರ ನಂತರ ಉತ್ತರಾಧಿಕಾರಿಯಾಗಿ ರಾಜೀವ ಆಯ್ಕೆಯಾದರು.

ವೀರೇಂದ್ರ ಪಾಟೀಲರಿಗೆ ರಾಜೀವ ಗಾಂಧಿಯವರು ಸಚಿವ ಸಂಪುಟದಲ್ಲಿಯೂ ಕಾರ್ಮಿಕ ಖಾತೆ, ಹಡಗು ಮತ್ತು ರಾಸಾಯನಿಕ ಖಾತೆ ಕೊಟ್ಟರು. ಕೆಲವು ದಿವಸಗಳ ನಂತರ ಕೈಗಾರಿಕೆ ಖಾತೆಯನ್ನು ಸಹ ಕೊಟ್ಟರು. 1985ರ ಸೆಪ್ಟೆಂಬರ್‌ವರೆಗೆ ರಾಜೀವ ಸಂಪುಟದ ಸಚಿವರಾಗಿ ಮುಂದುವರೆದ ಪಾಟೀಲರು ಸೆಪ್ಟೆಂಬರ್‌ದಲ್ಲಿ ರಾಜೀನಾಮೆ ನೀಡಿದರು.

ಟೆಹರಾನ ಮತ್ತು ಲಂಡನ್‌ಗಳಲ್ಲಿ ನಡೆಯುವ ಎರಡು ಸಭೆಗಳಿಗೆ ಪಾಟೀಲರು ಹೋಗಿದ್ದರು. ಸಭೆಯನ್ನು ಮುಗಿಸಿಕೊಂಡು ದೆಹಲಿಗೆ ಬಂದಾಗ ತಮ್ಮ ಅಧಿಕಾರಿಗಳು ಖಾತೆಯಲ್ಲಿಯ ಕೆಲವು ಸಮಸ್ಯೆಗಳ ಕುರಿತು ತಿಳಿಸಿದರು. ಆಗ ಪಾಟೀಲರು ರಾಜೀವ್‌ಗಾಂಧಿಯವರನ್ನು ಕಾಣಲು ಹೋದಾಗ ರಾಜೀವರು " I am going to adminster some changes"ಎಂದು ಹೇಳಿ ಹೋದರು. ಆದರೆ ರಾತ್ರಿ ಫೋತದಾರರು ಮನೆಗೆ ಫೋನ್ ಮಾಡಿ ರಾಜೀನಾಮೆ ಯಾಕೆ ಕಳಿಸಲಿಲ್ಲ ಎಂದು ಕೇಳಿದಾಗ ಪಾಟೀಲರು ವಿಚಾರ ಶೂನ್ಯರಾದರು. ತಕ್ಷಣವೇ ರಾಜೀನಾಮೆಯ ಪತ್ರವನ್ನು ಕಳುಹಿಸಿದರು. ರಾಜೀವ ಸಂಪುಟದಿಂದ ಯಾಕೆ ಕೈ ಬಿಟ್ಟಿರುವರು ಎಂಬುದು ಪಾಟೀಲರಿಗೆ ಜೀವವಿರುವವರೆಗೂ ತಿಳಿಯಲಿಲ್ಲ.

1985 ರ ಕರ್ನಾಟಕ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಬರಲಿಲ್ಲ. ಜನತಾ ಪಕ್ಷಕ್ಕೆ ಬಹುಮತ ಲಭಿಸಿತು. ಹೆಗಡೆಯವರು ಮುಖ್ಯಮಂತ್ರಿಯಾದರು. ಆದರೆ ಈ ಎಲ್ಲಾ ರಾಜಕೀಯ ವಿದ್ಯಮಾನಗಳನ್ನು ಅರಿತು ರಾಜೀವರು ಪಾಟೀಲರನ್ನೇ ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

## ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಪಾಟೀಲರು

ಶ್ರೀ ವೀರೇಂದ್ರ ಪಾಟೀಲರು ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸತೊಡಗಿದರು. ಪಕ್ಷದ ಸಂಘಟನೆಗಾಗಿ ಹಗಲಿರುಳು ದುಡಿಯ ಹತ್ತಿದರು. ಇದೇ ಸಮಯದಲ್ಲಿ ಬೊಮ್ಮಾಯಿಯ ಸರಕಾರ ವಜಾ ಆಗಿ ರಾಷ್ಟ್ರಪತಿ ಆಡಳಿತ ಜಾರಿ ಆಯಿತು. ತಕ್ಷಣವೇ ಚುನಾವಣೆಗಳನ್ನು ಘೋಷಿಸಿದರು. ಮೊದಲು ಪಕ್ಷದ ಸಂಘಟನೆಗಾಗಿ ಎಲ್ಲ ಅಧಿಕಾರ ನಿಮ್ಮ ಕೈಯಲ್ಲಿದೆ ಎಂದು ಹೇಳಿದವರು ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲರೂ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ವರ್ತಿಸಹತ್ತಿದರು. ಇದರಿಂದ ಕೋಪಗೊಂಡ ಪಾಟೀಲರು ರಾಜೀನಾಮೆ ನೀಡುವ ವಿಚಾರದಲ್ಲಿದ್ದರು. ಆದರೆ ಗುಲಾಂ ನಬಿ ಆಜಾದ್ ಸಮಾಧಾನ ಗೊಳಿಸಿದರು. ನಂತರ ಇಬ್ಬರೂ ಕೂಡಿಕೊಂಡು ಉಮೇದುವಾರರ ಪಟ್ಟಿಯನ್ನು ಸಿದ್ಧಪಡಿಸಲು ದೆಹಲಿಗೆ ಹೋದರು. ಕೆಲವು ದಿವಸಗಳ ಹಿಂದೆ ರಾಜೀವರು ವಿದೇಶಕ್ಕೆ ಹೋಗಿದ್ದರು. ರಾಜೀವರು ಬಂದ ತಕ್ಷಣವೇ ಉಮೇದುವಾರರ ಪಟ್ಟಿಯನ್ನು ಸಲ್ಲಿಸಿದರು. ರಾಜೀವರು ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ ಪಾಟೀಲರಿಗೆ ತಲುಪಿಸಿದರು. ಪಾಟೀಲರು ಇದಕ್ಕೂ ಮೊದಲೇ ಎಲ್ಲಾ ಪತ್ರಿಕೆಗಳಿಗೆ ಫೋನ್ ಮಾಡಿ ಜಾಗ ಕಾಯ್ದಿರಿಸಲು ಹೇಳಿದ್ದರು. ಅಂತಿಮ ಪಟ್ಟಿಯನ್ನು ತೆಗೆದುಕೊಂಡ ತಕ್ಷಣವೇ ಪ್ರತಿಗಳನ್ನು ಬಿಡುಗಡೆ ಮಾಡಿದರು. ತಾವು ಸ್ಪೇಷಲ್ ವಿಮಾನಿನ ಮೂಲಕ ಹೈದ್ರಾಬಾದ್ ತಲುಪಿದರು. ಮುಂಜಾನೆ ಗುಲಬರ್ಗಾಕ್ಕೆ ಬಂದು ತಲುಪಿದರು. ಎಲ್ಲಾ ಉಮೇದುವಾರರ ಪಟ್ಟಿ ಪತ್ರಿಕೆಯಿಂದ ತಿಳಿಯಿತು. ಪಾಟೀಲರಿಗೆ ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಸ್ಪರ್ಧಿಸಲು ಸೂಚಿಸಿದರು. ತಾವು ವಿಧಾನ ಸಭೆಗೆ ಸ್ಪರ್ಧಿಸಿ ಅವರ ಅಳಿಯನಾದ ಡಾ: ಬಿ.ಜಿ. ಜವಳಿಯವರಿಗೆ ಲೋಕ ಸಭೆಗೆ ನಿಲ್ಲಿಸಿದರು. ಚುನಾವಣಾ ಪ್ರಚಾರ ಕಾರ್ಯ ಭರದಿಂದ ಸಾಗಿತು. ಅರ್ಭಟವಾದ ಪ್ರಚಾರದಿಂದ ಜನರನ್ನು ತಮ್ಮ ಕಡೆಗೆ ಆಕರ್ಷಿಸುವಲ್ಲಿ ಪಾಟೀಲರು ಮುಂದಾದರು. ಜನತೆಯ ಹತ್ತಿರ ಹೋಗಿ ವಿನಯದಿಂದ ತಮ್ಮನ್ನು ಆರ್ಶೀವದಿಸಿ ಎಂದು ಕೇಳಿಕೊಳ್ಳುತ್ತಿದ್ದರು. ಪಾಟೀಲರ ಮಾತಿಗೆ ಜನ ಮನ್ನಣೆ ನೀಡಿದರು. ಅಂದಿನ 224 ಸ್ಥಾನಗಳಲ್ಲಿ 179 ಸ್ಥಾನಗಳು ಗೆಲ್ಲಲು ಕಾರಣವಾಯಿತು. ಲೋಕಸಭೆಗೆ ಅಳಿಯನಾದ ಡಾ: ಬಿ.ಜಿ. ಜವಳಿಯವರು ಆಯ್ಕೆಯಾದರು.

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಯಾರು ಆಗಬೇಕು ಎನ್ನುವಂಥ ಸಂದರ್ಭದಲ್ಲಿ ರಾಜಕೀಯ ಬಿರುಸಿನ ಚಟುವಟಿಕೆಗಳೇ ಆರಂಭವಾದವು. ಬಂಗಾರಪ್ಪ, ಕೆ.ಹೆಚ್. ಪಾಟೀಲ್, ಮಾರ್ಗರೇಟ್ ಆಳ್ವ, ವೀರಪ್ಪ ಮೊಯಿಲಿ ಒಂದು ಕಡೆ ಹೈಕಮಾಂಡ್ ಮುಂದೆ ಕುಳಿತರೆ ಪಾಟೀಲರದು ಮತ್ತೊಂದು ಗುಂಪು. ಪಾಟೀಲರನ್ನು ಮುಖ್ಯ ಮಂತ್ರಿ ಸ್ಥಾನದಿಂದ ತಪ್ಪಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ವೀಕ್ಷಕರಾಗಿ ಗುಲಾಂ ನಬಿ ಆಜಾದ್, ಕಿದ್ವಾಯಿಯವರು ಬಂದಿದ್ದರು. ಇವರ ಮಾತನ್ನು ಯಾರೂ ಕೇಳಲಿಲ್ಲ. ಎಲ್ಲಾ ಶಾಸಕರು ಕೂಡಿಕೊಂಡು, ಪಾಟೀಲರೇ ನಮ್ಮ ನಾಯಕರು ಅವರೇ ನಮ್ಮ ಮುಖ್ಯ ಮಂತ್ರಿ ಎಂದು ಕೂಗಿದರು. ಕೊನೆಗೆ ರಾಜೀವರ ಜೊತೆ ಚರ್ಚಿಸಿ ಪಾಟೀಲರೇ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಎರಡನೇ ಬಾರಿ ಮುಖ್ಯ ಮಂತ್ರಿಯಾಗಿ ಮೌಲ್ಯಾಧಾರಿತ ರಾಜಕೀಯ ಆರಂಭ

ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ದೆಹಲಿಗೆ ಹೋಗಿ ರಾಜೀವರ ಜೊತೆ ಮಂತ್ರಿಮಂಡಲದ ಬಗ್ಗೆ ವಿಸ್ತೃತವಾದ ಚರ್ಚೆ ನಡೆಯಿಸಿ ಒಂದೇ ಕಂತಿನಲ್ಲಿ ಎಲ್ಲರನ್ನು ಮಂತ್ರಿಗಳನ್ನಾಗಿ ಮಾಡುವುದು ಬೇಡ, ಎರಡನೇ ಮೂರನೇ ಕಂತಿಗೂ ಕೆಲವು ಶಾಸಕರು ಇರಲಿ ಎಂದು ಹೇಳಿದರು. ಸಚಿವರ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಬಂದು ಖಾತೆಗಳನ್ನು ವಿಂಗಡಿಸಿದರು. ಶಾಸಕರಿಗೆ ಖಾತೆ ಹಂಚಿಕೆಯ ವಿಚಾರದಲ್ಲಿ ಹೈಕಮಾಂಡ್ ಕೈಹಾಕಲಿಲ್ಲ. ಯಾರಿಗೆ ಯಾವ ಯಾವ ಖಾತೆ ಕೊಡಬೇಕು ಎಂಬುದನ್ನು ತಿಳಿದ ಪಾಟೀಲರು ಎಲ್ಲರಿಗೂ ಸರಿಯಾದ ಖಾತೆಗಳನ್ನು ನೀಡಿದರು. ಯಾರೇ ಇರಲಿ, ಎಲ್ಲಿಂದಲಾದರೂ ಬರಲಿ, ಒಳ್ಳೆಯ ಕೆಲಸಗಳನ್ನು ಮಾಡಬೇಕು, ಎಲ್ಲಿಯವರೆಗೆ ನಾನು ನೀವು ದಕ್ಷತೆಯಿಂದ ಇರುತ್ತೇವೆಯೊ ಅಲ್ಲಿಯವರೆಗೆ ಪ್ರಜೆಗಳು ನಮಗೆ ನಿಷ್ಠರಾಗಿಯೇ ಇರುತ್ತಾರೆ ಎಂಬ ಭಾವನೆಯನ್ನು ಪಾಟೀಲರು ಹೊಂದಿದ್ದರು ಮತ್ತು ತಮ್ಮ ಮಂತ್ರಿಮಂಡಲಕ್ಕೆ ತಿಳಿಸಿದರು.

ಮಂತ್ರಿಮಂಡಲದ ಸಭೆಯಲ್ಲಿ ಪಾಟೀಲರು ಚರ್ಚೆಗೆ ಎಲ್ಲರಿಗೂ ಸಮಾನ ಅವಕಾಶ ಕೊಟ್ಟಿದ್ದರು. ಕೆಲಸ ಕಾರ್ಯ ಸುಗಮವಾಗಿ ಸಾಗಿದವು. ಯಾವುದೇ ನಿರ್ಣಯಗಳಿದ್ದರೂ ಅವು ಅವಿರೋಧವಾಗಿಯೇ ಆಗುತ್ತಿದ್ದವು. ಪ್ರಾಮಾಣಿಕ ಸರಕಾರ ಕೊಡುತ್ತೇನೆ ಎಂದು ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದ್ದರು. ಹೇಳಿದಂತೆ ಮಾಡಿ ತೋರಿಸಹತ್ತಿದರು. ಅಬಕಾರಿ ಲಾಬಿ, ಗ್ರಾನೈಟ್ ಲಾಬಿ, ಕ್ಯಾಪಿಟೇಶನ್ ಶುಲ್ಕ ಮುಂತಾದ ಎಲ್ಲಾ ಲಾಬಿಗಳಿಂದ ಮುಕ್ತ ಮಾಡಲು ಪಾಟೀಲರು ಶ್ರಮಿಸಿದರು.

ಇವರ ಕಾಲದಲ್ಲಿ ಆರ್ಥಿಕ ಸಮಸ್ಯೆಯು ಒಂದು ದೊಡ್ಡ ಸಮಸ್ಯೆಯಾಗಿತ್ತು. ರಾಜಶೇಖರ ಮೂರ್ತಿಯವರು ಹಣಕಾಸು ಸಚಿವರಾಗಿದ್ದರು. ಎಲ್ಲಿಯವರೆಗೆ ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲವೋ ಎಲ್ಲಿಯವರೆಗೆ ನಾವು ಒಳ್ಳೆಯ ಅಧಿಕಾರಿಗಳನ್ನು ಪ್ರೋತ್ಸಾಯಿಸುವುದಿಲ್ಲವೋ ಅಲ್ಲಿಯವರೆಗೂ ನಮ್ಮ ನಾಡಿನ ಅಭ್ಯುದಯವಂತೂ ಸಾಧ್ಯವಿಲ್ಲ ಎಂದು ಅರಿತು ಪಾಟೀಲರು ಸಂಪನ್ಮೂಲ ಅಭಿವೃದ್ಧಿಗೆ ಗಮನ ಕೊಡಿ ಎಂದು ಹೇಳಿದರು. ಆರ್ಥಿಕ ಸುಧಾರಣೆ ಮಾಡಿದರು. ಕೆಲವೇ ದಿನಗಳಲ್ಲಿ ರಿಸರ್ವಬ್ಯಾಂಕಿನಲ್ಲಿ ಹಣ ಇತ್ತೇ ಹೊರತು ಸಾಲ ಮಾಡುವಂತಿರಲಿಲ್ಲ. ಮಾರಾಟ ತೆರಿಗೆಯಿಂದ ಅಬಕಾರಿ, ತೆರಿಗೆಯಿಂದ ಆದಾಯ ಹೆಚ್ಚಿಗೆ ಬರುವಂತಾಯಿತು. ಕಠಿಣ ಪರಿಸ್ಥಿತಿಯಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದ್ದು ನೋಡಿದರೆ, ನಿಜಕ್ಕೂ ಪಾಟೀಲರ ಕಾರ್ಯ ಶ್ಲಾಘನೀಯವಾದುದಾಗಿದೆ. ಇವರ ಸಚಿವ ಸಂಪುಟದ ಎಲ್ಲಾ ಸಚಿವರು ಪಾಟೀಲರಿಗೆ ನಿಷ್ಠರಾಗಿ ಕೆಲಸ ಮಾಡಿದರೆಂದು ಅಭಿಮಾನದಿಂದ ಪಾಟೀಲರು ಹೇಳಿಕೊಳ್ಳುತ್ತಿದ್ದರು.

ಎರಡನೇ ಬಾರಿ ಸಚಿವ ಸಂಪುಟ ವಿಸ್ತರಿಸುವ ಸಂಬಂಧದ ವಿಷವಾಗಿ ಹೈಕಮಾಂಡಿಗೆ ತಿಳಿಸಿದರು. ತಮ್ಮ ಇಷ್ಟದ ಪ್ರಕಾರ ತೆಗೆದುಕೊಳ್ಳಲು ಹೈಕಮಾಂಡ್ ತಿಳಿಸಿತು. ಕೆಲವು ಪ್ರದೇಶಗಳಿಗೆ, ಜಾತಿಗಳಿಗೆ, ಪ್ರಾತಿನಿಧ್ಯಕೊಡಬೇಕಾಗಿತ್ತು. ಎರಡನೆಯ ಕಂತಿನಲ್ಲಿ ಹಲವಾರು ಸಚಿವರನ್ನು ನಿಗಮ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಿದರು.

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿ ಎರಡನೆಯ ಬಾರಿಗೆ ಅಧಿಕಾರ ವಹಿಸಿಕೊಂಡ ಪಾಟೀಲರು ಜನತೆ ತಮ್ಮ ಮೇಲೆ ಇಟ್ಟಿರುವ ವಿಶ್ವಾಸ, ನಂಬಿಕೆಯನ್ನು ಹುಸಿಗೊಳಿಸಬಾರದು ಅವರ ಆಶೋತ್ತರಗಳನ್ನು ಈಡೇರಿಸಬೇಕು. ಭ್ರಷ್ಟಾಚಾರವನ್ನು ತಡೆಯಬೇಕು, ಅನೇಕರಿಗೆ ಅಪ್ರೀಯವೆನಿಸಿದರೂ, ಜನಹಿತವೆನಿಸುವ ಕೆಲವು ಕ್ರಮಗಳನ್ನು ಪಾಟೀಲರು ಕೈಗೊಂಡರು. ಸರಕಾರದ ಯೋಜನೆಗಳು ಕಾರ್ಯಗತವಾಗಬೇಕಾದರೆ ದಕ್ಷ ಪ್ರಾಮಾಣಿಕ ಅಧಿಕಾರಿಗಳನ್ನು ಸರಕಾರ ಪ್ರೋತ್ಸಾಹಿಸಬೇಕು. ಬೆನ್ನು ತಟ್ಟಬೇಕು. ಅದಕ್ಷ ಅಪ್ರಾಮಾಣಿಕರನ್ನು ದಂಡಿಸಬೇಕು. ಈ ಎಲ್ಲಾ ದೃಷ್ಟಿಯಿಂದ ಡಿ.ಪಿ.ಎ.ಆರ್. ನಲ್ಲಿ ಎಫಿಷಿಯೆನ್ಸಿ ಆಡಿಟ್ ಬ್ಯೂರೋ ಎಂಬ ಒಂದು ಸಂಸ್ಥೆಯನ್ನು ಆರಂಭಿಸಿ ಎಲ್ಲಿ ಅನ್ಯಾಯ ಅತ್ಯಾಚಾರ ಕಂಡು ಬರುತ್ತಿದೆಯೋ ಅಲ್ಲಿ ಕಾನೂನಿನ ಪ್ರಕಾರ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಿದರು.

ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶಿಫಾರಸನ್ನು ಮಾಡಲು ಚಿನ್ನಪ್ಪರೆಡ್ಡಿ ಆಯೋಗವನ್ನು ನಿಯಮಿಸಿದ್ದರು. ಪಾಟೀಲರು ಮುಖ್ಯಮಂತ್ರಿ ಆದಾಗ ಈ ಸಮಿತಿಯ ವರದಿಯನ್ನು ಒಪ್ಪಿಸಿತು. ಈ ವರದಿಗೆ ಸಂಬಂಧಿಸಿದಂತೆ ಸಚಿವ ಸಂಪುಟದ ಮುಂದೆ ಇಟ್ಟು ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಪಾಟೀಲರೇ ಅಧ್ಯಕ್ಷರಾದರು. ವರದಿ ಕುರಿತು ವಿಧಾನ ಸಭೆಯಲ್ಲಿ ಚರ್ಚೆಯಾಯಿತು. ನಿಜವಾಗಿ ಹಿಂದುಳಿದವರಿಗೆ ಮೀಸಲಾತಿ ಸಿಗಬೇಕೇ ಹೊರತು ಸುಮ್ಮನೆ ಹಿಂದುಳಿದವರೆಂದು ಹೇಳಿಕೊಳ್ಳುವವರಿಗಲ್ಲ. ಇವರೆಲ್ಲರ ಜೊತೆಗೆ ಸಮಾಜದ ಪ್ರತಿಯೊಂದು ವರ್ಗವನ್ನು ನಾವು ಜೊತೆಗೆ ಕರೆದೊಯ್ಯಬೇಕು, ಎಂದು ವಿಧಾನ ಸಭೆಯ ಭಾಷಣದಲ್ಲಿ ಹೇಳಿದರು. ಚಿನ್ನಪ್ಪರೆಡ್ಡಿ ವರದಿಯನ್ನು ಅಂಗೀಕರಿಸಬೇಕೆಂಬುದೇ ಇವರ ನಿಲುವು ಆಗಿತ್ತು. ಆದರೂ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಲೋಪದೋಷಗಳನ್ನು ಸರಿಪಡಿಸಿಕೊಂಡು ಅಂಗೀಕರಿಸಬೇಕೆಂದು ತಿಳಿಸಿದರು. ಆದರೆ ಮುಂದೆ ಸೆಪ್ಟೆಂಬರ್ ತಿಂಗಳಲ್ಲಿಯೇ ಕೆಲವು ರಾಜಕೀಯ ಮುಖಂಡರ ಕುಟಿಲ ನೀತಿಯಿಂದಾಗಿ ಪಾಟೀಲರು ಕೆಳಗಿಳಿಯಬೇಕಾದ ಪ್ರಸಂಗ ಬಂದೊದಗಿತು.

ಅನಾರೋಗ್ಯ:

ಸೆಪ್ಟೆಂಬರ್ 24 ರಂದು ಬೆಳಿಗ್ಗೆ ಎಂದಿನಂತೆ ಸ್ನಾನ ಮುಗಿಸಿ ಫಲಹಾರ ತೆಗೆದು ಕೊಂಡರು. ಆರಾಮ ವಿಲ್ಲದಂತೆ ಅನಿಸಿತು. ವಿಧಾನ ಸೌಧದಲ್ಲಿ ಎರಡು ಪ್ರಮುಖ ಸಭೆಗಳಿದ್ದವು. ಅದಕ್ಕಾಗಿ ವಿಧಾನ ಸೌಧಕ್ಕೆ ಹೋಗಿ ಆ ಎರಡೂ ಸಭೆಗಳನ್ನು ಮುಗಿಸಿಕೊಂಡರು. ಇನ್ನೇನು ಮನೆಗೆ ಹೊರಡಬೇಕು ಎನ್ನುವಷ್ಟರಲ್ಲಿ ಇಂದ್ರಜಿತ ಗುಪ್ತರವರ ಫೋನ್ ಬಂತು ಅವರ ಯೋಗ ಕ್ಷೇಮ ವಿಚಾರಿಸಿ, ಬೆಂಗಳೂರಿಗೆ ಬಂದಿದ್ದೀರಿ. ಇಂದು ನಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಹೋಗಿರಿ ಎಂದು ಆಹ್ವಾನಿಸಿದರು. ಸಭೆಗಳನ್ನು ಮುಗಿಸಿ ತಮ್ಮ ಚೇಂಬರಿಗೆ ಬಂದು ಕುಳಿತು ಯಾವುದೋ ಕಡತಗಳಿಗೆ ಸಹಿ ಹಾಕಲು ಪೆನ್ನು ಹಿಡಿದಾಗ ಸಹಿ ಹಾಕಲು ಅವರಿಗೆ ಆಗಲೇ

ಇಲ್ಲ. ನನಗೆ ಏನೋ ಆಗಿದೆ ಎಂಬ ಸಂಶಯ ಅವರನ್ನು ಕಾಡುತ್ತಿತ್ತು. ತೀವ್ರವಾಗಿ ಕಾರ್ಯದರ್ಶಿಯನ್ನು ಕರೆದು ನನಗೆ ಮೈ ಹುಷಾರಿಲ್ಲ, ಮನೆಗೆ ಹೋಗುತ್ತೇನೆ ಎಂದು ಹೇಳಿ ಹೊರಟು ಹೋದರು. ಮನೆಯಲ್ಲಿ ಇವರಿಗಾಗಿ ಇಂದ್ರಜಿತ ಗುಪ್ತಾ ಕಾಯುತ್ತಿದ್ದರು. ಅವರಿಗೆ ಮಾತನಾಡಿಸಿ ನನಗೆ ಆರೋಗ್ಯ ಸರಿಯಾಗಿಲ್ಲ ನೀವು ಊಟ ಮಾಡಿ ಎಂದು ಹೇಳಿದರು. ಕೋಣೆಯಲ್ಲಿ ಮಲಗಬೇಕು ಎನ್ನುವಷ್ಟರಲ್ಲಿ ವಾಂತಿ ಶುರುವಾಯಿತು. ನಂತರ ಏನಾಯಿತೆಂಬುದು ಪಾಟೀಲರಿಗೆ ಗೊತ್ತಾಗಲಿಲ್ಲ. ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟರು. ತೀವ್ರವಾಗಿ ಆಸ್ಪತ್ರೆಗೆ ಒಯ್ದು ಸೇರಿಸಿದರು. ಆಸ್ಪತ್ರೆಯಲ್ಲಿ ಪಾಟೀಲರಿಗೆ ಪ್ರಜ್ಞೆ ಬಂದಾಗ ತುಂಬಾ ಗಾಬರಿಯಾದರು. ನಂತರ ವೈದ್ಯರು ತಮಗೆ ಪಾರ್ಶ್ವವಾಯು ಬಂದಿದೆ ಎಂದು ಹೇಳಿದರಂತೆ ಸೆಪ್ಟೆಂಬರ್ 24 ರಂದು ಆಸ್ಪತ್ರೆಗೆ ಸೇರಿದ ಪಾಟೀಲರು 29 ರವರೆಗೆ ಅಲ್ಲಿಯೇ ಉಳಿದರು. ಮೆದುಳಿನ ಸ್ಕ್ಯಾನಿಂಗ್ ಆಯಿತು. 29ರ ನಂತರ ನರ್ಸಿಂಗ್ ಹೋಮದಿಂದ ಮನೆಯಲ್ಲೇ ಚಿಕಿತ್ಸೆ ಪಡೆಯಹತ್ತಿದರು.

ಅಕ್ಟೋಬರ್ 7 ರಂದು ಬೆಂಗಳೂರಿಗೆ ರಾಜೀವರು ಪಾಟೀಲರ ಆರೋಗ್ಯ ವಿಚಾರಿಸಲು ಬರುವರು ಎಂಬ ವಿಚಾರ ತಿಳಿಯಿತು. 7 ನೇ ಅಕ್ಟೋಬರ್ ವಿಮಾನ ನಿಲ್ದಾಣದಿಂದ ನೇರವಾಗಿ ಪಾಟೀಲರ ಮನೆಗೆ ಬಂದು, ಪಾಟೀಲರ ಆರೋಗ್ಯದ ಬಗ್ಗೆ ವಿಚಾರಿಸಿ " ನೋಡಿ ಪಾಟೀಲರೆ ಸರಕಾರ ನಡೆದುಕೊಂಡು ಹೋಗುತ್ತದೆ. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ ನಿಮ್ಮ ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ. ಸರಕಾರಕ್ಕಿಂತ ಆರೋಗ್ಯ ಬಹಳ ಮುಖ್ಯ ಸಾಯಂಕಾಲದೊಳಗಾಗಿ ಕೆಲವು ಮುಖಂಡರೊಡನೆ ಚರ್ಚಿಸಿ ಪಾಟೀಲರಿಂದ ಅಧಿಕಾರ ಪಡೆಯಬೇಕು ಎಂದು ಹೇಳಿದ ರಾಜೀವ ವಿವಿಧ ರೀತಿಯ ಸುದ್ದಿ ಎಬ್ಬಿಸಿ ದೆಹಲಿಗೆ ಹೋದರು.

ಪಾಟೀಲರು ದಿನದಿಂದ ದಿನಕ್ಕೆ ಚೇತರಿಸಿಕೊಳ್ಳಹತ್ತಿದರು. ದೈಹಿಕವಾಗಿ ಒಂದು ಭಾಗ ದುರ್ಬಲವಾಗಿದ್ದರೂ, ಬೌದ್ಧಿಕವಾಗಿ, ಮಾನಸಿಕವಾಗಿ, ಸರಿಯಾಗಿಯೇ ಇದ್ದರು. ಮನೆಯಲ್ಲಿ ವ್ಯಾಯಾಮ, ಫಿಜಿಯೋ ಥೆರಪಿ, ಮುಂತಾದವುಗಳನ್ನು ಮಾಡುವುದರಿಂದ ಆರೋಗ್ಯವಂತರಾಗ ಹತ್ತಿದರು. ಆದರೆ ಕಿಡಿಗೇಡಿ ರಾಜಕೀಯ ಪ್ರಭಾವಿಗಳಿಂದ ಇವರು ಅನಾರೋಗ್ಯದಿಂದ ಇರುವರು. ಅದಕ್ಕಾಗಿ ಇವರನ್ನು ಕೆಳಗಿಸಬೇಕು ಇದೇ ಒಂದು ಸಮಯ ಎಂದು ಸಂಚು ಮಾಡಿ ಕುರ್ಚಿಯಿಂದ ಇಳಸಿಯೇ ಬಿಟ್ಟರು.

### ರಾಜಕೀಯ ಅವನತಿ ಹಾಗೂ ಲಿಂಗೈಕ್ಯ

ಪಾಟೀಲರ ಆರೋಗ್ಯ, ಯೋಗ ಕ್ಷೇಮ ವಿಚಾರಿಸಲು ಬಂದ ರಾಜೀವ ಪಾಟೀಲರ ರಾಜಕೀಯ ಅವನತಿಗೆ ಮೂಲ ಕಾರಣೀಭೂತರಾದರು. ಪಾಟೀಲರ ಆರೋಗ್ಯ ವಿಚಾರಿಸಿ ಸಾಯಂಕಾಲ ದೆಹಲಿಗೆ ಹೋಗುವಾಗ, ಪಾಟೀಲರ ಮನೆಗೆ ಬಂದು ನೀವು ಕಾಯಿಲೆ ಬಿದ್ದಿದ್ದೀರಿ ರಾಜ್ಯದ ಕೆಲಸ ಸರಿಯಾಗಿ ನಡೆಯುವುದಿಲ್ಲ. ನೀವು ರಾಜೀನಾಮೆ ಕೊಡಬೇಕೆಂದು ಹೇಳಿದರು. ಅದಕ್ಕೆ ಪಾಟೀಲರು ನಾನು ಮುಖ್ಯ ಮಂತ್ರಿ ಇದ್ದೇನೆ, ನಾನು ಪಕ್ಷದಿಂದ ಆಯ್ಕೆಯಾಗಿದ್ದೇನೆ,

ನಾನು ರಾಜೀನಾಮೆ ಕೊಡಬೇಕಾದರೆ ಪಕ್ಷ ನನ್ನ ರಾಜೀನಾಮೆ ಕೇಳಬೇಕು ಎಂದು ನೇರವಾಗಿ ನುಡಿದರು. " ಪಾಟೀಲರೇ ನೀವು ಏನೇ ಹೇಳಿದರೂ ನಾನು ಒಪ್ಪುತ್ತೇನೆ. ಆದರೆ ಪಾರ್ಟಿ ಸುಪ್ರೀಂ, ನಾನು ಸುಪ್ರೀಂ ಅಲ್ಲ, ಪಾರ್ಟಿ ಕೇಳಿದರೆ ನೀವು ರಾಜೀನಾಮೆ ಕೊಡಿ ಇಲ್ಲವಾದರೆ ಇಲ್ಲ " ಎಂದು ಹೇಳಿ ರಾಜೀವ ನೇರವಾಗಿ ವಿಮಾನ ನಿಲ್ದಾಣಕ್ಕೆ ಬಂದು ಪತ್ರಕರ್ತರ ಜೊತೆ ಮಾತನಾಡುವಾಗ ಮೂರನಾಲ್ಕು ದಿನಗಳಲ್ಲಿಯೇ " ಹೀ ವಿಲ್ ಬಿ ರಿಪ್ಲೇಸ್ಡ " ಅಂತ ಹೇಳಿದರು. ಹೊಸ ಮುಖ್ಯ ಮಂತ್ರಿ ಕರ್ನಾಟಕಕ್ಕೆ ಬರುತ್ತಾರೆ ಎಂದು ಹೇಳಿದಂತೆ, ತಕ್ಷಣವೇ ಪತ್ರಕರ್ತರು ಪಾಟೀಲರನ್ನು ಸಂಪರ್ಕಿಸಿ ಕೇಳಿದಾಗ ಕಾಯಿಲೆ ಬಂದು ಮಲಗಿದ್ದರೂ ಸಿಟ್ಟಿನಿಂದ " ನಾನು ರಾಜೀನಾಮೆ ಕೊಡುವುದಿಲ್ಲ. ಪಕ್ಷ ಕೇಳಿದರೆ ಈಗಲೇ ಕೊಡುವೆ " ಎಂದು ನುಡಿದರು.

ಭಾರತದಲ್ಲಿ ಯಾರು ಮಾಡದೇ ಇದ್ದ ಪ್ರತಿಭಟನೆ ಮಾಡಿದವರು ಪಾಟೀಲರೊಬ್ಬರೇ, ಒಳ್ಳೆಯದಕ್ಕಾಗಿ ಹೈಕಮಾಂಡ್ ಹೇಳಿದರೆ ಮಾತ್ರ ಕೇಳುವರು ಬೇರೆ ಯಾವುದೇ ವಿಷಯದ ಕುರಿತು ಹೇಳಿದರೆ ಸಾರಾಸಗಟಾಗಿ ಯಾವ ಮುಲಾಜು ಇಲ್ಲದೆ ತಳ್ಳಿಹಾಕುತ್ತಿದ್ದರು.

ಮುಂದೆ ಕೇವಲ ಕೆಲವೇ ದಿವಸಗಳಲ್ಲಿ ಪಾರ್ಟಿಯಿಂದ ಸಸ್ಪೆಂಡ್ ಮಾಡುವ ವಿಚಾರ ತಿಳಿಯಿತು. ಅದಕ್ಕೆ ಹಲವಾರು ಜನರು ಪ್ರಶ್ನಿಸಿದಾಗ ಆ ವಿಚಾರವನ್ನು ಅಲ್ಲಿಗೆ ಬಿಟ್ಟರು. ರಾಜೀವ ಗಾಂಧಿಯವರು ಮದ್ರಾಸಿಗೆ ಬಂದಾಗ ಪಾಟೀಲರನ್ನು ಸಸ್ಪೆಂಡ್ ಮಾಡುವ ಅಧಿಕಾರ ನನಗಿಲ್ಲವೆಂದು ಹೇಳಿ ನುಸುಳಿಕೊಂಡರು. ಆದರೆ ರಾಜ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಆಸ್ಕರ್ ಫರ್ನಾಂಡಿಸ್ ಅವರು ಪಾಟೀಲರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಸಸ್ಪೆಂಡ್ ಮಾಡಿರುವುದಾಗಿ ಹೇಳಿಕೆ ಕೊಟ್ಟರು. ಆಸ್ಕರ ಫರ್ನಾಂಡಿಸ್ ಅವರು ಈ ಬಗ್ಗೆ ಸ್ವಂತ ನಿರ್ಧಾರ ಕೈಗೊಂಡಿರಲಾರರು, ವೀರೇಂದ್ರ ಪಾಟೀಲರನ್ನು ಸಸ್ಪೆಂಡ್ ಮಾಡುವ ಸಲುವಾಗಿ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆ ಕರೆದಿದ್ದೇನೆ, ಎಂದು ರಾಜೀವಗಾಂಧಿ ಹೇಳಿದ್ದರಿಂದ ಆಸ್ಕರ್ ಫರ್ನಾಂಡಿಸ್ ಹಾಗೆ ಬರೆದು ಕೊಟ್ಟಿರಬಹುದು ಎಂಬ ಶಂಕೆಗಳು ಶುರುವಾದವು. ಹಲವಾರು ಶಾಸಕರು, ಯುವ ಕಾಂಗ್ರೆಸ್ ನಾಯಕರು ಪಾಟೀಲರ ವಿರುದ್ಧ ತಿರುಗಿ ಬಿದ್ದರು. ಪಾಟೀಲರು ನಿಷ್ಠ ಸಚಿವರ ಮೇಲೆ ಅತ್ಯಾಚಾರಗಳು ನಡೆದವು. ಪಾಟೀಲರ ಮನೆಯ ಮುಂದೆ ಅಸಹ್ಯ ಪ್ರದರ್ಶನಗಳು ಶುರುವಾದವು. ಪಾಟೀಲರನ್ನು ತೆಗೆಯಲು ಕೆಲವು ಹಿತಾಸಕ್ತರು ಮುಂದಾದರು. ಅದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಲು ಅನೇಕ ರಾಜಕೀಯ ಜನರು ಮುಂದೆ ಬಂದರು. ಈ ಎಲ್ಲಾ ವಿಷಯವನ್ನು ತಿಳಿದುಕೊಂಡ ಪಾಟೀಲರು ಸುಮ್ಮನೆ ಕುಳಿತುಕೊಂಡರು. ಕರ್ನಾಟಕಕ್ಕೆ ಮತ್ತೊಬ್ಬರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವುದರೊಂದಿಗೆ ವೀರೇಂದ್ರ ಪಾಟೀಲರನ್ನು ಮೂಲೆಗುಂಪು ಮಾಡಿದರು.

ಮುಂದೆ ವೀರೇಂದ್ರ ಪಾಟೀಲರು ಕಾಂಗ್ರೆಸ್ ಪಕ್ಷ ತ್ಯಜಿಸುವರೆಂದು ಜನ ಭಾವಿಸಿದ್ದರು. ಆದರೆ ಅವರು ಹಾಗೆ ಮಾಡಲಿಲ್ಲ. ಮುಂದೆ ಕೆಲವು ದಿನಗಳಲ್ಲಿ ಅವರು ಚಿಕಿತ್ಸೆಗಾಗಿ ಅಮೇರಿಕೆಗೆ

ಹೋದರು. ಅಲ್ಲಿ ಲಾಸ್ ಎಂಜಲ್ಸ್‌ನಲ್ಲಿ ಒಂದು ಸಬರ್ಬನ್ ಹೊರ ವಲಯದಲ್ಲಿದ್ದಾಗ ಬೆಂಗಳೂರಿಂದ ಅವರಿಗೆ ದೂರವಾಣಿ ಬಂತು. ರಾಜೀವಗಾಂಧಿ ಬಾಂಬ್ ಸ್ಫೋಟದಲ್ಲಿ ತೀರಿಕೊಂಡ ಸುದ್ದಿ ತಿಳಿಯಿತು. ಇದೆಂಥ ಅನಾಹುತವೆಂದು ಅಘಾತವಾಯಿತು. ರಾಜೀವಗಾಂಧಿಯಲ್ಲಿ ಏನೇ ದೌರ್ಬಲ್ಯಗಳಿದ್ದರೂ ಅವರು ಒಳ್ಳೆಯ ನಾಯಕರಾಗಿದ್ದರು. ಯುವಕರಾಗಿದ್ದ ಅವರು ಇನ್ನೂ ಮೂವತ್ತು, ನಲವತ್ತು ವರ್ಷ ದೇಶದ ಆಡಳಿತ ನಡೆಸಬಲ್ಲವರಾಗಿದ್ದರು ಎಂದು ಸಂತಾಪ ಪಟ್ಟರು. ಸಂತಾಪ ಸೂಚಕ ಪತ್ರವನ್ನು ಅವರ ಕುಟುಂಬದವರಿಗೆ ಬರೆದು ಕಳುಹಿಸಿದರು.

ಶ್ರೀ ವೀರೇಂದ್ರ ಪಾಟೀಲರು ಎಂಥ ವಿಶಾಲ ಮನೋಭಾವದವರು ಎಂಬುದು ಈ ಘಟನೆಯಿಂದ ತಿಳಿಯುವುದು. ಇತ್ತೀಚಿನ ರಾಜಕೀಯ ಅವರಿಗೆ ಹಿಡಿಸಲಿಲ್ಲ. ರಾಜಕಾರಣದಲ್ಲಿ ನೀತಿ, ನಿಷ್ಠೆ, ಪ್ರಾಮಾಣಿಕತೆ ಇರಬೇಕೆಂಬುದು ಅವರ ಆಶೆಯವಾಗಿತ್ತು. ಭ್ರಷ್ಟ ರಾಜಕಾರಣಿಗಳನ್ನು ಅವರು ಟೀಕಿಸದೇ ಬಿಡಲಿಲ್ಲ. ಆದರೆ ಬರಬರುತ್ತ ಅವರ ಆರೋಗ್ಯ ಕೆಡ ತೊಡಗಿತು. ಆರು ವರ್ಷಗಳ ಕಾಲ ಅವರು ಪಾರ್ಶ್ವವಾಯು ರೋಗದಿಂದ ಬಳಲಿ ಮಾರ್ಚ್ 14, 1997 ರ ಬೆಳಿಗ್ಗೆ ಅವರು ಕೊನೆಯುಸಿರೆಳೆದರು. ಅವರು ಕರ್ನಾಟಕವು ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ದಿಗಳು, ಸಂಸದೀಯ ಪಟುಗಳು, ಇಂಥ ಪ್ರಾಮಾಣಿಕ ರಾಜಕಾರಣಿಯನ್ನು ಕಳೆದು ಕೊಂಡು ಕರ್ನಾಟಕವು ಬಡವಾಯಿತು ಎಂದು ಅನೇಕ ಗಣ್ಯರು ಶೋಕಿಸಿದರು.

## ಭಾ ಗ - 2

# ಪ್ರತಿಭಾವಂತ ಸಂಸದೀಯ ಪಟುವಾಗಿ

## ಪ್ರತಿಭಾವಂತ ಸಂಸದೀಯ ಪಟುವಾಗಿ

1. 1958 ( ಏಪ್ರಿಲ್, 10 ) : ಗೃಹ ಮತ್ತು ಕೈಗಾರಿಕಾ ಉಪ ಸಚಿವರು.
   ವಿಷಯ : ಅನುದಾನಗಳ ಬೇಡಿಕೆಗಳ ನಂ.15 ನ್ಯಾಯ ಮತ್ತು ನಂ.16 ಕಾರಾಗೃಹಗಳ ಆಡಳಿತ, ಕುರಿತು ಪ್ರಶ್ನೆಗಳಿಗೆ ಮತ್ತು ಚರ್ಚೆಗಳಿಗೆ ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ.

2. 1968 ( ಮಾರ್ಚ್, 8 ) : ಲೋಕೋಪಯೋಗಿ ಮಂತ್ರಿ.
   ವಿಷಯ : ಹೇಮಾವತಿ ಪ್ರೊಜೆಕ್ಟ್ ಕುರಿತು ಸದಸ್ಯರ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

3. 1968 ( ಮಾರ್ಚ್, 8 ) : ಲೋಕೋಪಯೋಗಿ ಮಂತ್ರಿ.
   ವಿಷಯ : ರಾಜ್ಯಕ್ಕೆ ಹಂಚಲಾದ ಕಾವೇರಿ ನೀರಿನ ಉಪಯೋಗ ಕುರಿತು ಕೇಳಲಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

4. 1968 ( ಮಾರ್ಚ್, 11 ) : ಲೋಕೋಪಯೋಗಿ ಮಂತ್ರಿ.
   ವಿಷಯ : ಕನಕಪುರ ತಾಲೂಕಿನ ಮೇಕೇದಾಟಿನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಕುರಿತಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

5. 1968 ( ಮಾರ್ಚ್, 12 ) : ಲೋಕೋಪಯೋಗಿ ಮಂತ್ರಿ.
   ವಿಷಯ : ಶರಾವತಿ ಯೋಜನೆಯಲ್ಲಿ ಸ್ಟ್ಯಾಂಡ್ - ಬೈ - ಪವರ್ ಚಾನಲ್ ಕುರಿತಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

6. 1968 ( ಮಾರ್ಚ್, 12 ) : ಲೋಕೋಪಯೋಗಿ ಮಂತ್ರಿ.
   ವಿಷಯ : ನೀರಾವರಿಗಾಗಿ ಚಿಕ್ಕಹೊಳೆ ನೀರಿನ ಉಪಯೋಗ ಕುರಿತು ಕೇಳಲಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

7. 1968 ( ಮಾರ್ಚ್, 12 ) : ಲೋಕೋಪಯೋಗಿ ಮಂತ್ರಿ.
   ವಿಷಯ : ಹಾರಂಗಿ ಮತ್ತು ಹೇಮಾವತಿ ಆಣೆಕಟ್ಟಿಗೆ ತಾಂತ್ರಿಕ ವಿಮೋಚನೆ ಕುರಿತ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

8. 1968 ( ಮಾರ್ಚ್, 8 ) : ಲೋಕೋಪಯೋಗಿ ಮಂತ್ರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿ.
   ವಿಷಯ : ಲೋಕೋಪಯೋಗಿ ಹಾಗೂ ವಿದ್ಯುತ್ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಪ್ರಶ್ನೆಗಳಿಗೆ ಮತ್ತು ಚರ್ಚೆಗಳಿಗೆ ನೀಡಿದ ಸ್ಪಷ್ಟೀಕರಣ.

9. 1968 ( ಏಪ್ರಿಲ್, 21 ) : ಲೋಕೋಪಯೋಗಿ ಮಂತ್ರಿ.
   ವಿಷಯ : ತ್ರಾವಣಕೋರದ, ಎಲಿಯ ಮಹಾರಾಜರ ಅರಮನೆಯನ್ನು ಖರೀದಿಸಿದ ಬಗ್ಗೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

## 1. 1958-59ರ ಅನುದಾನಗಳ ಬೇಡಿಕೆಗಳಿಗೆ, ಸಂ.15 ನ್ಯಾಯ ಮತ್ತು ಕಾರಾಗೃಹಗಳ ಆಡಳಿತ ಸಂ.16ರ ಕುರಿತ ಪ್ರಶ್ನೆಗಳು ಮತ್ತು ಚರ್ಚೆಗಳಿಗೆ, ರಾಜ್ಯದ ಗೃಹ ಮತ್ತು ಕೈಗಾರಿಕೆ ಖಾತೆ ಉಪ ಸಚಿವರಾಗಿ ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ. 10.4.1958.

"ಮಾನ್ಯ ಸಭಾಪತಿಗಳೇ, ನಾನು ಇವತ್ತಿನ ದಿವಸ ಡಿಮ್ಯಾಂಡ್ ನಂಬರ್ 16, ಜೇಲು ಆಡಳಿತದ ಬಗ್ಗೆ ಇಲ್ಲಿ ನಡೆದಂತಹ ಚರ್ಚೆಗೆ ಉತ್ತರ ಕೊಡಲು ನಿಂತಿದ್ದೇನೆ. ನನ್ನ ತರುವಾಯ ನನ್ನ ಉಳಿದ ಮಾನ್ಯ ಮಿತ್ರರು ಇತರ ಚರ್ಚೆಗಳಿಗೆ ಉತ್ತರ ಕೊಡುತ್ತಾರೆ. ಜೈಲು ಆಡಳಿತದ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಾ ಅನೇಕ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸಲಹೆಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತರಬಹುದು ಎನ್ನುವುದರ ಬಗ್ಗೆ ನಾನು ಗಂಭೀರವಾಗಿ ವಿಚಾರ ಮಾಡಿದೆ. ಕೆಲವು ಮಾನ್ಯ ಸದಸ್ಯರು ಯಾವುದೂ ವಿಧಾಯಕವಾದ ಸಲಹೆಗಳನ್ನು ಕೊಡದೇ ಜೈಲು ಆಡಳಿತ ಸರಿಯಾಗಿ ನಡೆಯುತ್ತಿಲ್ಲ, ಬ್ರಿಟಿಷರು ಹಾಕಿಕೊಟ್ಟಂತಹ ಒಂದು ಪದ್ಧತಿಯಲ್ಲೇ ಇವತ್ತಿನ ದಿವಸವೂ ಆಡಳಿತ ನಡೆಯುತ್ತಾ ಇದೆ, ಇದರಲ್ಲಿ ಯಾವ ತರಹದ ಸುಧಾರಣೆಯೂ ಆಗಿಲ್ಲ ಎಂದು ಒಂದು ರೀತಿ ಆರೋಪಣೆ ಮಾಡಿದರೇ ಹೊರತು ವಿಧಾಯಕವಾಗಿ ಯಾವ ತರಹದ ಸಲಹೆಯನ್ನೂ ಕೊಟ್ಟಿಲ್ಲ.

ಆದರೂ ಕೂಡ ಜೈಲಿನ ಆಡಳಿತದಲ್ಲಿ ಸುಧಾರಣೆಯಾಗತಕ್ಕ ಬಗ್ಗೆ ಮತ್ತು ಜೈಲಿನಲ್ಲಿರತಕ್ಕವರ ರಕ್ಷಣೆಯ ಬಗ್ಗೆ ಹಾಗೂ ಜೈಲಿಗೆ ಬರತಕ್ಕ ಜನಗಳಿಗೆ ಅವರು ಜೈಲಿನಲ್ಲಿರುವ ಒಂದು ಅವಧಿಯಲ್ಲಿ ಅವರ ಮಾನಸಿಕ ಪರಿವರ್ತನೆಯಾಗಿ, ಅವರು ಜೈಲಿನಿಂದ ಹೊರಗೆ ಬಂದ ಅನಂತರ ಇವರೂ ಕೂಡ ಯೋಗ್ಯ ನಾಗರಿಕರಾಗಿ ಸಮಾಜದಲ್ಲಿ ಒಂದು ಮರ್ಯಾದೆ ಗಳಿಸುವಂಥ ರೀತಿಯಲ್ಲಿ ಸುಖವಾಗಿ ತಮ್ಮ ಜೀವನೋಪಾಯ ನಡೆಸಿಕೊಂಡು ಹೋಗಲು ಅವಕಾಶಗಳಿರಬೇಕೆಂಬ ಉದ್ದೇಶದಿಂದ ಅವರೆಲ್ಲರೂ ಟೀಕೆ ಮಾಡಿದ್ದಾರೆಂದು ತಿಳಿದುಕೊಂಡು ಈ ಜೈಲಿನ ಆಡಳಿತದ ಬಗ್ಗೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸಿದ್ದಂಥವರಿಗೆಲ್ಲ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನರ್ಪಿಸುತ್ತೇನೆ.

ಇನ್ನು ಜೈಲಿನ ಆಡಳಿತದ ಬಗ್ಗೆ ಸರ್ಕಾರದ ಧೋರಣೆ ಅಥವಾ ಅವರ ಒಂದು ಪಾಲಿಸಿ ಏನಿದೆ ಎಂಬುದರ ಬಗ್ಗೆ ಈವರೆಗೂ ಮಾನ್ಯ ಸದಸ್ಯರೆಲ್ಲ ಹೇಳಿರುವಂತೆ ಇದರಲ್ಲಿ ಯಾರಿಗೂ ಎರಡು ವಿಚಾರಗಳಿಲ್ಲ. ಮಾನ್ಯ ಸದಸ್ಯರಿಗೂ ಸರ್ಕಾರಕ್ಕೂ ಈ ವಿಚಾರಗಳಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಈಗ ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳೇನಿವೆ ಅವುಗಳಿಗೆ ಹೊಂದಾಣಿಕೆಯಾಗತಕ್ಕಂಥ ಪಾಲಿಸಿ ಮತ್ತು ಧೋರಣೆಗಳನ್ನು ಸರ್ಕಾರ ಕೈಗೊಂಡಿದೆ. ಸಾಮಾನ್ಯವಾಗಿ ಜೈಲಿಗೆ ಬರತಕ್ಕಂಥ ಜನರಲ್ಲಿ ಸಮಾಜದಲ್ಲಿರುವ ಮಧ್ಯಮ ವರ್ಗದವರು, ಹೈಕ್ಲಾಸ್‌ಗೆ ಸೇರಿದ ಜನರು ಬರುವುದು ಬಹಳ ಅಪರೂಪ. ಕೀಳು ತರಗತಿಯ ಜನರೇ

ಹೆಚ್ಚಾಗಿರುತ್ತಾರೆ. ಈ ಜನ ಜೈಲಿನಿಂದ ಹೊರಗಡೆ ಬಂದ ಮೇಲೆ ಸಮಾಜ ಇವರನ್ನು ದೂರವಿಟ್ಟು ಬಿಡುತ್ತದೆ. ಸಮಾಜದಿಂದಲೇ ಇವರನ್ನು ಹೊರಗೆ ಹಾಕಲಾಗುತ್ತಿದೆ. ಸಮಾಜ ಇವರನ್ನು ಒಳ್ಳೆಯ ಹಾದಿಗೆ ತರಲು ಪ್ರಯತ್ನ ಮಾಡುತ್ತಿಲ್ಲ. ಯಾರಾದರೂ ಏನೋ ಒಂದು ತಪ್ಪುಮಾಡಿ ಅಥವಾ ಏನೋ ಒಂದು ಕಾರಣನಿಂದ ಕಾನೂನು ಭಂಗಮಾಡಿ ಜೈಲಿಗೆ ಬರತಕ್ಕಂಥ ಜನಗಳಿಗೆ ಅವರು ಮಾಡಿರತಕ್ಕಂಥ ತಪ್ಪು ಕೃತ್ಯಗಳ ಬಗ್ಗೆ ಅಥವಾ ಅವರ ಒಂದು ದುಷ್ಟ ನಡತೆಯ ಬಗ್ಗೆ ಅವರು ಜೈಲಿನಲ್ಲಿ ವಾಸ ಮಾಡತಕ್ಕ ಅವಧಿಯೊಳಗೆ ಅವರ ಮನಸ್ಸಿಗೆ ಪಶ್ಚಾತ್ತಾಪ ಉಂಟಾಗಿ, ಇನ್ನು ಮುಂದಾದರೂ ನಾವು ಇಂಥ ಅಕೃತ್ಯಗಳನ್ನು ನಡೆಸಬಾರದು ಅವರಲ್ಲಿ ಮಾನಸಿಕ ಪರಿವರ್ತನೆಯಾದರೆ ಆಗ ಅವರು ಜೈಲಿನಿಂದ ಹೊರಗಡೆಗೆ ಬಂದಾಗ ಇತರ ಎಲ್ಲ ಯೋಗ್ಯ ನಾಗರಿಕರಂತೆ ಒಂದು ಸನ್ಮಾರ್ಗದಲ್ಲಿ ಜೀವನ ನಡೆಸಿಕೊಂಡು ಹೋಗಲು ಯೋಗ್ಯವಾಗಿರುವಂಥ ರೀತಿಯಲ್ಲಿ ಈ ಜೈಲಿನ ಆಡಳಿತವನ್ನು ನಡೆಸಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ಆದರೆ ನಮ್ಮ ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಜೈಲಿನ ಆಡಳಿತವೆಲ್ಲ ಈ ದಿವಸ ಸರಿಯಾಗಿ ನಡೆಯುತ್ತಿದೆ ಇದರಲ್ಲಿ ನ್ಯೂನತೆಗಳೇನೂ ಇಲ್ಲ ಎಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈಗ ತಾನೆ ಮಾತನಾಡಿದ ಶ್ರೀ ಸಿ.ಕೆ. ರಾಜಯ್ಯ ಶೆಟ್ಟರು ಜೈಲಿನ ಆಡಳಿತದ ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ. ಈ ಬಗ್ಗೆ ಅನೇಕ ಕುಂದು ಕೊರತೆಗಳಿರಬಹುದು. ಸದಸ್ಯರುಗಳು ಹೇಳಿರತಕ್ಕ ಅಂಶಗಳೆಲ್ಲ ಶುದ್ಧ ತಪ್ಪು, ಅವುಗಳೆಲ್ಲ ಸುಳ್ಳೆಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈ ಜೈಲುಗಳ ಬಗ್ಗೆ ಏನೇನು ಸುಧಾರಣೆಗಳಾಗಬೇಕಾಗಿದೆಯೋ, ಆಡಳಿತದ ಬಗ್ಗೆ ಏನೇನು ಮಾರ್ಪಾಡುಗಳಾಗಬೇಕಾಗಿದೆಯೋ ಅವೆಲ್ಲವನ್ನೂ ನಾವೂ ನೀವೂ ಒಟ್ಟಾಗಿ ಒಮ್ಮನಸ್ಸಿನಿಂದ ಕೂಡಿ ಮಾಡೋಣ. ಈ ಬಗ್ಗೆ ನಮಗೆ ನಿಮ್ಮ ನೆರವು ಇದ್ದೇ ಇರುತ್ತದೆಂಬ ಭರವಸೆಯಿಂದ ನಾನೀಗ ಈ ಜೈಲುಗಳ ಆಡಳಿತ ನಡೆಸುತ್ತಿದ್ದೇನೆ. ಈ ಒಂದು ಅಭಿಪ್ರಾಯದ ಮೇಲೆ ಈ ಆಡಳಿತವನ್ನು ಸಾಧ್ಯವಾದ ಮಟ್ಟಿಗೂ ಸುಧಾರಣೆ ಮಾಡುತ್ತೇವೆಂಬ ಭರವಸೆಯನ್ನು ನಾನೀಗ ತಮಗೆ ಕೊಡುತ್ತಿದ್ದೇನೆ. ಆದರೆ ನಾನಾಗಲೇ ತಿಳಿಸಿದಂತೆ ಶಿಕ್ಷೆಗೆ ಗುರಿಯಾಗಿ ಜೈಲುಗಳಿಗೆ ಖೈದಿಗಳಾಗಿ ಬರತಕ್ಕ ಜನರ ಬಗ್ಗೆ ಅವರಲ್ಲಿ ಎಷ್ಟು ಜನ ಮಧ್ಯಮ ತರಗತಿಗೆ ಸೇರಿರುತ್ತಾರೆ. ಎಷ್ಟು ಜನ ಉಚ್ಚ ತರಗತಿಗೆ ಸೇರಿರುತ್ತಾರೆ ಎಂಬುದರ ಬಗ್ಗೆ ನಮಗಿನ್ನೂ ಖಚಿತವಾದ ಅಂಕಿ ಅಂಶಗಳು ದೊರೆತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಜೈಲಿಗೆ ಬರತಕ್ಕವರಲ್ಲಿ ವಿದ್ಯಾವಂತರಾದ ಜನರ ಹಾಗೂ ಹೈಕ್ಲಾಸ್ ಜನರ ಸಂಖ್ಯೆ ತೀರ ಅಲ್ಪ. ಜೈಲಿಗೆ ಖೈದಿಗಳಾಗಿ ಬರತಕ್ಕ ಜನರಲ್ಲಿ ನೂರಕ್ಕೆ ಸುಮಾರು 80 ಜನ ಯಾರಿರುತ್ತಾರೆಂದರೆ ಯಾರಿಗೆ ಸರಿಯಾಗಿ ತಮ್ಮ ಜೀವನ ನಡೆಸಲಿಕ್ಕೆ ಮಾರ್ಗವಿಲ್ಲವೋ ಯಾರಿಗೊಂದು ದುಡಿಮೆ ಮಾಡಲು ಮಾರ್ಗವಿರುವುದಿಲ್ಲವೋ ಅಂಥ ಜನರೇ ಹೆಚ್ಚಾಗಿರುತ್ತಾರೆ. ಆ ಜನರು ಕಾನೂನು ಭಂಗ ಮಾಡತಕ್ಕಂಥ ಕಾರ್ಯಗಳನ್ನು ಮಾಡುತ್ತಾರೆ. ಇನ್ನು ಬೇರೆ ಕಾರಣಗಳಿಂದ ಶಿಕ್ಷೆಗೊಳಗಾಗ ತಕ್ಕವರ ಸಂಖ್ಯೆ ಬಹಳ ಕಡಿಮೆ ಜನಗಳಿಗೆ ಮೊದಲು ಹೊಟ್ಟೆಯ ಸಮಸ್ಯೆ. ಹೊಟ್ಟೆ ತುಂಬಿಕೊಳ್ಳಲು ಯಾವ ಉಪಾಯವೂ ಇಲ್ಲದೆ ಹೋದರೆ ಭಿಕ್ಷೆ ಬೇಡುತ್ತಾರೆ. ಸಮಾಜದಲ್ಲಿ ಅದಕ್ಕೂ ತಾಪತ್ರಯವಾದಾಗ ಅವರು ಅಕೃತ್ಯಗಳಿಗೆ ಕೈಹಾಕುತ್ತಾರೆ. ಸಮಾಜದಲ್ಲೂ ಕೆಲವು ಕೊರತೆಗಳಿವೆ. ಹೀಗೆ ಜನರು ದುರ್ದೈವದಿಂದ ನಾನಾ ರೀತಿಯಲ್ಲಿ ಕುಂದು ಕೊರತೆಗಳಿಗೊಳಗಾಗಿ ಜೈಲುವಾಸಕ್ಕೆ

ಬರುತ್ತಿದ್ದಾರೆ. ಇವರು ಜೈಲಿನಿಂದ ಹೊರಗೆ ಬಂದ ನಂತರವಾದರೂ ಇವರನ್ನು ಸಮಾಜ ಯಾವ ರೀತಿ ಕಾಣುತ್ತದೆ? ಈಗ ನಾನು ಹೇಳುತ್ತಿರುವ ವಿಚಾರಗಳೆಲ್ಲ ಕೇವಲ ನನ್ನ ವೈಯಕ್ತಿಕವಾದ ಅಭಿಪ್ರಾಯಗಳಾಗಿವೆ. ಆದುದರಿಂದ ಇವುಗಳು ಸರಿಯಾಗಿದ್ದರೂ ಇರಬಹುದು ಅಥವಾ ಸರಿಯಿಲ್ಲದಿದ್ದರೂ ಇರಬಹುದು. ಈ ಹಿಂದೆ ಇದೇ ವಿಧಾನ ಸೌಧ ಕಟ್ಟಡವನ್ನು ಕಟ್ಟುತ್ತಿದ್ದ ಕಾಲದಲ್ಲಿ ಕೆಲಸ ಮಾಡುತ್ತಿದ್ದ ಸಾಮಾನ್ಯ ಕೂಲಿಗಾರರ ಜೊತೆಗೆ ಈ ಕಟ್ಟಡದ ಕೆಲಸ ನಡೆಸಲು ಸೆಂಟ್ರಲ್ ಜೈಲಿನಲ್ಲಿದ್ದ ಖೈದಿಗಳನ್ನೂ ಸಹ ಕರೆದುಕೊಂಡು ಬಂದಿದ್ದ ವೇಳೆಯಲ್ಲಿ ಆ ಸಾಮಾನ್ಯ ಕೂಲಿಗಾರರೆಲ್ಲ ನಾವು ಈ ಖೈದಿಗಳ ಜೊತೆಯಲ್ಲಿ ಕೆಲಸ ಮಾಡಲು ತಯಾರಿಲ್ಲವೆಂದು ಒಂದು ಪ್ರತಿಭಟನೆ ನಡೆಸಲಾಗಿತ್ತೆಂಬ ಒಂದು ಸುದ್ದಿಯನ್ನು ನಾನು ಕೇಳಿದ್ದೆನು. ಆದರೆ ಆ ಕಾಲಕ್ಕೆ ನಾನು ಇಲ್ಲಿ ಇದ್ದಿಲ್ಲ ಆದುದರಿಂದ ಆ ಸುದ್ದಿ ಎಷ್ಟರಮಟ್ಟಿಗೆ ಸರಿಯಾದದ್ದು ಅಥವಾ ಅಲ್ಲ ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗ ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ ಖೈದಿಗಳಾಗಿದ್ದಂಥ ಜನರು ಜೈಲಿನಿಂದ ಹೊರಕ್ಕೆ ಬಂದ ಮೇಲೆ ಏನೋ ದುರ್ದೈವದಿಂದ ತಪ್ಪು ಮಾಡಿ ಶಿಕ್ಷೆಗೊಳಗಾಗಿದ್ದಾರೆ, ಇವರಿಗೂ ಸಮಾಜದಲ್ಲಿ ಒಂದು ಸ್ಥಾನಮಾನ ದೊರಕಿಸಿಕೊಡೋಣ ಎನ್ನುವಂಥಾ ಭಾವನೆ ಜನಗಳಲ್ಲಿಲ್ಲ. ಜೈಲಿನಿಂದ ಹೊರಗೆ ಬಂದ ಜನರನ್ನು ಯಾರೂ ಹತ್ತಿರ ಸೇರಿಸುವುದಿಲ್ಲ. ಎಲ್ಲಿಯೂ ಇವರಿಗೆ ಉದ್ಯೋಗಗಳು ದೊರೆಯುವುದಿಲ್ಲ. ಕೈಗಾರಿಕೆಗಳಲ್ಲಿ ಇವರಿಗೆ ಕೆಲಸ ಕೊಡಲು ಅವರಿಗೆ ಉತ್ತೇಜನವಿಲ್ಲ. ಹೀಗೆಲ್ಲಾ ಆಗಿ ಅವರ ಜೀವನವೇ ಒಂದು ಬಹಳ ದುಸ್ತರ ಸ್ಥಿತಿಯಲ್ಲಿರುತ್ತದೆಂಬುದನ್ನು ನಾನೀಗ ತಿಳಿಸುತ್ತಿದ್ದೇನೆ. ಇವರಿಗೆ ಎಲ್ಲಿಯೂ ಸಾಲ ದೊರೆಯುವುದಿಲ್ಲ. ಹೀಗೆಲ್ಲ ಸಮಾಜ ಈ ಜನರನ್ನು ಬಹಳ ಕೀಳು ದೃಷ್ಟಿಯಿಂದ ನೋಡುತ್ತಿದೆ. ಜೈಲಿನಿಂದ ಹೊರಗೆ ಬಂದ ಜನರು ಜೀವಂತರಾಗಿ ಬಾಳುವುದೇ ಬಹಳ ಕಷ್ಟವಾಗಿದೆ. ಈ ದಿವಸ ನಮ್ಮ ಸಮಾಜ ಈ ರೀತಿಯಲ್ಲಿರುತ್ತದೆಂದು ನನ್ನ ಭಾವನೆ. ಈ ದಿವಸ ಕೆಲವು ಕಡೆ ಜೈಲಿಗೆ ಬರತಕ್ಕ ಜನರಲ್ಲಿ ನಾಲ್ಕನೆಯ ಸಲಕ್ಕೆ, ಐದನೆಯ ಸಲಕ್ಕೆ, ಆರನೆಯ ಸಲಕ್ಕೆ, ಏಳನೆಯ ಸಲಕ್ಕೆ ಬರುತ್ತಿರುವಂಥಾ ಜನರೂ ಇದ್ದಾರೆ. ಮೊದಲನೆಯ ಸಲ ಜೈಲಿಗೆ ಬಂದಿರತಕ್ಕಂಥ ಜನರ ಸಂಖ್ಯೆ ಬಹಳ ಕಡಿಮೆ. ಜನರು ಹೀಗೆ ಏನೋ ಕಾರಣಾಂತರದಿಂದ ಒಂದು ಸಾರಿ ಜೈಲಿಗೆ ಹೋಗಬಹುದು. ಆದರೂ ಸಮಾಜ ಅವರನ್ನು ಪುನಃ ಮೇಲಕ್ಕೆತ್ತಿಕೊಳ್ಳಬೇಕು. ಅವರಿಗೂ ಸಮಾಜದಲ್ಲೊಂದು ಸ್ಥಾನಮಾನ ಕೊಡಬೇಕು. ಇಂಥ ಒಂದು ಸದ್ಭಾವನೆ ಸಮಾಜ ಬಾಂಧವರಲ್ಲಿ ಬರಬೇಕಾದುದು ಅತ್ಯಗತ್ಯ. ಈ ವಿಚಾರಗಳಲ್ಲೆಲ್ಲ ಸಮಾಜ ಮತ್ತು ಸರ್ಕಾರ ಒಟ್ಟಿಗೆ ಸೇರಿ ಒಂದು ಸುಧಾರಣೆ ತರಬೇಕಾಗಿದೆ ಎಂದು ಶ್ರೀ ಮಲ್ಲಾರಾಧ್ಯರವರು ಹೇಳಿದ್ದು ಸರಿ. ಈ ಕಾರ್ಯ ಬರಿಯ ಜೈಲಿನ ಅಡ್ಮಿನಿಸ್ಟ್ರೇಷನ್ನಿನ ಸುಧಾರಣೆಯೊಂದರಿಂದಲೇ ಆಗದು. ಈ ವಿಚಾರಗಳೆಲ್ಲ ಅಷ್ಟೇನೂ ಮಹತ್ತರವಾದುವುಗಳಲ್ಲ. ನಮ್ಮಲ್ಲಿ ಈ ದಿವಸ ಸಮಾಜದಲ್ಲಿ ಅಂಥ ಮಹತ್ತರವಾದ ಇನ್‌ಸ್ಟಿಟ್ಯೂಷನ್‌ಗಳಿಲ್ಲ. ಸಂಸ್ಥೆಗಳಾಗಲೀ ಸಮಾಜವಾಗಲಿ ಅಷ್ಟು ಕಡೆಗಣ್ಣಿನಿಂದ ನೋಡತಕ್ಕಂಥ ವಿಚಾರವಲ್ಲ ಇದು. ಈ ದಿವಸ ಸಮಾಜ ಏನೋ ಒಂದು ರೆಪ್ಯುಟೇಷನ್ ಸಲುವಾಗಿ ಈ ಕೀಳು ಭಾವನೆಯಿಂದ ಕಾಣುತ್ತಿದೆ. ಈ ಜನರನ್ನು ನಮ್ಮ ಸಮಾಜ ಮತ್ತು ಸಂಸ್ಥೆಗಳು ಅಭಿವೃದ್ಧಿಗೆ ತರಬೇಕಾಗಿದೆ. ಎಲ್ಲರೂ ಸೇರಿ ಮಾಡತಕ್ಕಂಥ ಒಂದು ಮಹತ್ಕಾರ್ಯ ಇದು ಎಂದು ತಿಳಿಸಲಿಚ್ಛಿಸುತ್ತೇನೆ. ಸರ್ಕಾರದವರಾದರೂ ಸಹ ಈ ವಿಚಾರವನ್ನು ಅಷ್ಟೇನೂ ಲಘುವಾಗಿ

ಕಾಣುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ - ಈ ವಿಚಾರ ಹಳೆಯ ಮೈಸೂರಿನವರಿಗೆ ಚೆನ್ನಾಗಿ ಗೊತ್ತಿದೆ. ಈ ಹಿಂದೆ ಮೈಸೂರಿನಲ್ಲಿ ಜೈಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಬ್ಬ ಪ್ರತ್ಯೇಕ ಇಲಾಖಾ ಮುಖ್ಯಸ್ಥರರು ಇದ್ದಿಲ್ಲ. ಬೇರೆ ಇಲಾಖೆಗಳ ಅಧಿಕಾರಿಗಳು ಈ ಬಾಬನ್ನು ಪಾರ್ಟ್ ಟೈಂ ವರ್ಕ್‌ನೋಪಾದಿಯಲ್ಲಿ ನೋಡಿಕೊಳ್ಳುತ್ತಿದ್ದರು. ಕೆಲವು ಕಾಲ ಮೆಡಿಕಲ್ ಇಲಾಖೆಯ ಮುಖ್ಯಸ್ಥರರೂ ಕೆಲವು ಕಾಲ ಡಿಸ್ಟ್ರಿಕ್ಟ್ ಜಡ್ಜರೂ ಹೀಗೆ ಇನ್ನೂ ಯಾರು ಯಾರೋ ಇದರ ಆಡಳಿತ ನೋಡಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ರಾಜ್ಯಗಳ ಪುನರ್ ನಿರ್ಮಾಣದ ನಂತರ ಸರ್ಕಾರ ಈ ಇಲಾಖೆಗೇ ಪ್ರತ್ಯೇಕವಾಗಿ ಒಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್‌ನ ಎಂಬ ಹುದ್ದೆಯನ್ನು ನೇಮಕ ಮಾಡಿದೆ. ಇತ್ತೀಚೆಗೆ ಹೊಸ ಮೈಸೂರು ರಾಜ್ಯವಾದ ಮೇಲೆ ದೇಶ ಮೊದಲಿದ್ದುದಕ್ಕಿಂತಲೂ ಎರಡು ಪಟ್ಟು ಹೆಚ್ಚಾಗಿದೆ. ಜೈಲುಗಳ ಮತ್ತು ಲಾಕಪ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಇವುಗಳ ಆಡಳಿತವನ್ನು ಒಂದು ಸುವ್ಯವಸ್ಥೆಯಿಂದ ನಡೆಸುವಂತೆ ಮಾಡಬೇಕೆಂಬ ಉದ್ದೇಶದಿಂದ ತಾರೀಖು ಒಂದನೇ, ನವೆಂಬರ್ 1956 ರಲ್ಲಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಜನ್‌ಸ (Inspector General of Prisons) ಎಂಬ ಉಚ್ಚ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಯಿತು. ಆದರೆ ಕೆಲವು ಕಾರಣಗಳಿಂದ ಅವರ ಮೇಲೆ ಯಾವುದೋ ಒಂದು ಎನ್‌ಕ್ವೈರಿ ನಡೆಯುತ್ತಿದೆ. ಆದ್ದರಿಂದ ಈಗ ಆ ಸ್ಥಳ ಖಾಲಿ ಇದೆ. ಆದರೆ ಇವರ ವಿಚಾರಣೆ ಆದಷ್ಟು ಬೇಗ ಪೂರೈಸಬಹುದು. ಆಗ ಅವರನ್ನೇ ಆ ಸ್ಥಾನಕ್ಕೆ ಹಾಕಿದರಾಗುತ್ತದೆಂಬ ಉದ್ದೇಶದಿಂದ ಬೇರೆ ಯಾರನ್ನೂ ಈ ಸ್ಥಾನಕ್ಕೆ ನೇಮಕ ಮಾಡಿಲ್ಲ. ಅವರ ಬಗ್ಗೆ ನಡೆಯಲಿರುವ ಎನ್‌ಕ್ವೈರಿ ಆದಷ್ಟು ಬೇಗ ಪೂರೈಸಿ ವಿಚಾರಗಳೆಲ್ಲ ಒಂದು ಹಾದಿಗೆ ಬರಬಹುದೆಂಬ ಆಸೆಯಿಂದ ಈ ಸ್ಥಾನವನ್ನು ಖಾಲಿ ಇದೆ. ಈ ಬಗ್ಗೆ ನಾವು ಆದಷ್ಟು ತ್ವರಿತದಿಂದ ವಿಚಾರ ಮಾಡುತ್ತೇವೆಂದು ತಮಗೆ ನಾನು ಆಶ್ವಾಸನೆ ಕೊಡಬಯಸುತ್ತೇನೆ.

ಇನ್ನು ಮುಂದೆ, ಮಾನ್ಯ ಸದಸ್ಯರು ಒಬ್ಬೊಬ್ಬರೂ ಇದರ ಆಡಳಿತದ ಬಗ್ಗೆ ಟೀಕೆಗಳನ್ನೂ ಸಲಹೆಗಳನ್ನೂ ಏನು ಹೇಳಿದ್ದರೋ ಅದಕ್ಕೆ ಉತ್ತರ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಮತ್ತು ಇನ್ನೂ ಅನೇಕ ವಿರೋಧ ಪಕ್ಷದ ಸದಸ್ಯರೂ ಈ ಸೋಷಿಯಲಿಸ್ಟರು ನಡೆಸುತ್ತಿರತಕ್ಕ ಸತ್ಯಾಗ್ರಹದ ಸಂಬಂಧದಲ್ಲಿ ಯಾರು ಯಾರು ಜೈಲಿನಲ್ಲಿದ್ದಾರೋ ಅವರನ್ನೂ ಕೂಡ ಸರಕಾರ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಅವರಿಗೆ ಸಾಕಷ್ಟು ಸೌಲಭ್ಯ, ಸೌಕರ್ಯಗಳನ್ನು ಕೊಡುತ್ತಿಲ್ಲ, ಅವರನ್ನೂ ಮನುಷ್ಯರಂತೆ ಕಾಣುವುದು ಸರ್ಕಾರದ ಧರ್ಮ ಎಂಬುದಾಗಿ ಟೀಕೆ ಮಾಡಿದ್ದಾರೆ. ಹಾಲಿ ಸೋಷಿಯಾಲಿಸ್ಟ್ ಖೈದಿಗಳಿಗೆ ಕೊಟ್ಟಿರತಕ್ಕ ಸೌಕರ್ಯಗಳೇನು ಮತ್ತು ಅವರು ನಮ್ಮ ಮುಂದಿಟ್ಟಿರತಕ್ಕ ಡಿಮಾಂಡ್ಸ್ ಏನು ಎಂಬುದನ್ನು ಸ್ವಲ್ಪದರಲ್ಲಿ ತಮ್ಮ ಮುಂದೆ ಇಡಬಯಸುತ್ತೇನೆ. ಸೋಷಿಯಾಲಿಸ್ಟ್ ಖೈದಿಗಳು 30ನೆಯ ಜನವರಿ 1958 ರಿಂದ ತಮ್ಮ ಚಳವಳಿ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಕಾರಣ ಅವರು ಕೊಟ್ಟಿದ್ದ 16 ಅಂಶಗಳ ಡಿಮ್ಯಾಂಡ್‌ಗಳಲ್ಲಿ ಏನೇನು ಹೇಳಿತ್ತೋ ಅದನ್ನು ಸರ್ಕಾರ ಒಪ್ಪಿಲ್ಲ ಎಂಬುದು. ಆದರ ಸಲುವಾಗಿ ಕಾನೂನು ಉಲ್ಲಂಘನೆ ಮಾಡಿ ಜೈಲಿಗೆ ಬರುವುದಕ್ಕೆ ಆರಂಭಿಸಿದರು.

ಈ ವಿಚಾರಗಳಲ್ಲಿ, ನಾವು ಜೈಲು ಮ್ಯಾನ್ಯುಯಲ್ ಪ್ರಕಾರ ಯಾವ ರೂಲ್ಸ್ ಹಾಕಿಕೊಂಡಿದ್ದೇವೋ ಅದನ್ನು ಅನುಸರಿಸುವುದು ಸ್ವಾಭಾವಿಕ. ಅವರು ಕೋರ್ಟಿನ ಮುಂದೆ

ಹೋದ ತರುವಾಯ ಶಿಕ್ಷೆಯಾಯಿತು. Under Trial Prisoner ಆಗಿದ್ದಾಗ ಅಥವಾ Convict ಆದ ತರುವಾಯ ಅವರಗೇನಾದರೂ special classification ಆಗಬೇಕಾದರೆ, ನಮ್ಮ ಸಮಾಜದ ಸ್ಥಾನಕ್ಕೆ, ಅಂತಸ್ತಿಗೆ ಅನುಸಾರವಾಗಿ ಹೀಗೆ ಇರಿಸಬೇಕು. ಇಂಥ ಸೌಲಭ್ಯಗಳು ಬೇಕು ಎಂದು ಅಪೇಕ್ಷಿಸುವುದಾದರೆ, ಆತನು ಕೋರ್ಟಿಗೆ ಹೋಗಿ apply ಮಾಡಿಕೊಳ್ಳಬೇಕು.

ಮಾನ್ಯ ಸದಸ್ಯರು :- **Then he could not be a sathagrahi.**

ಶ್ರೀ ವೀರೇಂದ್ರ ಪಾಟೀಲ್–

ಅವರು ಸತ್ಯಾಗ್ರಹಿ ಇರಬಹುದು. ಆದರೂ ಕ್ರಿಮಿನಲ್ ಪ್ರೋಸೀಜರ್ ಕೋಡ್, ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅವರಿಗೆ ಶಿಕ್ಷೆಯಾಗಿದೆ. ಶಿಕ್ಷೆ ಭೋಗಿಸುತ್ತಿದ್ದಾರೆ. ಆಗ್ಗ ಅವರು ತಮ್ಮ classification ಸಲುವಾಗಿ ಕೋರ್ಟಿಗೆ ಹೋಗಿ ಕೇಳಬಹುದಾಗಿತ್ತು. ತಾವು political prisoner ತಮ್ಮನ್ನು ಈ ರೀತಿಯಾಗಿ classify ಮಾಡಬೇಕು ಎಂದು ಹೇಳುವುದರಲ್ಲಿ ಯಾರಿಗೇನೂ ಅಡ್ಡಿಯಿಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಯಾರೂ ಹಾಗೆ ಅರ್ಜಿ ಹಾಕಿಲ್ಲ. ಅವರು ನೇರವಾಗಿ ಸೂಪರಿಂಟೆಂಟರನ್ನೂ ತರುವಾಯ ಅಲ್ಲಿರತಕ್ಕ ಅಧಿಕಾರಿಗಳನ್ನೂ ನಮಗೆ ಈ ರೀತಿಯಾದಂಥ ಸೌಲಭ್ಯಗಳು ಬೇಕು, ಅಷ್ಟನ್ನೂ ಒದಗಿಸದಿದ್ದರೆ ನಾವು ಉಪವಾಸದ ಮುಷ್ಕರ ಹೂಡುತ್ತೇವೆಂದು ಹೇಳಿದರು. ನಮ್ಮಲ್ಲೂ ಕೂಡ ಅನೇಕ ಜನರು ಸತ್ಯಾಗ್ರಹ ಮಾಡಿದ್ದೇವೆ. ಇದೇನೂ ನಮಗೆ ಹೊಸದಲ್ಲ. ಯಾವ ರೀತಿ ನಡೆದುಕೊಳ್ಳಬೇಕೆಂದು ತಮ್ಮಿಂದ ಬುದ್ಧಿವಾದ ಪಡೆದುಕೊಳ್ಳುವಂತಹ ಅವಶ್ಯಕತೆಯಿಲ್ಲ. ಅಲ್ಲದೆ ಅವರಿಗೀಗ ಕ್ಲಾಸ್‌ಗಿಂತ ಹೆಚ್ಚಿಗೆ ಅನುಕೂಲಗಳನ್ನು ಕೊಟ್ಟಿದೆ. ಅವರಿಗೆ ಕೊಟ್ಟಿರುವುದನ್ನು ಹೇಳುವುದಕ್ಕೆ ಮುನ್ನ ಖೈದಿಗಳಿಗೆ ಏನು ಕೊಡುತ್ತಾರೆ, ಜೈಲು ಮ್ಯಾನ್ಯುಯಲ್ ಪ್ರಕಾರ ಏನಿದೆ ಎಂದು ಹೇಳುತ್ತೇನೆ. ಕ್ಲಾಸ್ ಖೈದಿಗಳಿಗೆ.........

ಶ್ರೀ ಜೆ.ಬಿ. ಮಲ್ಲಾರಾಧ್ಯ :-

ನಾನು 840 ಜನ ಕಾಂಗ್ರೆಸ್ಸಿನವರನ್ನು convict ಮಾಡಿದ್ದೇನೆ!.....
840 congressmen including top ranking persons!

ಶ್ರೀ ವೀರೇಂದ್ರ ಪಾಟೀಲ್ :- ಕ್ಲಾಸ್ ಖೈದಿಗಳಿಗೆ ಒದಗಿಸುವ ಸೌಲಭ್ಯಗಳು.

**Morning** - Wheat bread, tea or coffee.

**Mid-day** - Rice and wheat chapathe, ghee, vegetable curry, pepper water, butter milk, curds.

**Evening** - Tea or coffee.

**Night** - Rice and wheat chapathi, two vegetable curries, ghee, pepper water, butter milk.

ಶ್ರೀ ಜಿ. ಶಿವಪ್ಪ :-

ಇದನ್ನೆಲ್ಲಾ ಕೊಟ್ಟರೂ ಕೂಡ P.S.P ಯವರು ಹೋರಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್ :-

ಇವು ಮೊದಲು ಬೇಡಿದ್ದು. ಮೊದಲು ಅವರು ಕೇಳಿದ್ದನ್ನು ಕೊಟ್ಟೆವು. ಆಮೇಲೆ ಇನ್ನೊಂದು ಬೇಕೆಂದು ಕೇಳಿದರು. ಅದನ್ನೂ ಕೊಟ್ಟೆವು. ಇದು ಕೊನೆಗೆ ಎಲ್ಲಿಗೆ ಬಂದಿದೆಯೆಂದು ಹೇಳುತ್ತೇನೆ: ಈಗ ಅವರು Soap, soapnut powder, tooth powder, daily hot water bath, one ounce of ghee, one coconut, toilet soap, news papers, beedis ಇತ್ಯಾದಿಗಳನ್ನು ಕೇಳುತ್ತಿದ್ದಾರೆ. ನಾವು ಮೇಲೆ ಹೇಳಿದಂತೆ ಸೌಲಭ್ಯಗಳನ್ನು ಒದಗಿಸಿದ ಅನಂತರವೂ ಸೆಂಟ್ರಲ್ ಜೈಲಿನ ಆರು ಏಳು ಜನರು ಸರ್ಕಾರಕ್ಕೆ 27ನೆಯ ಮಾರ್ಚ್ 1958 ರಲ್ಲಿ ಒಂದು ನೋಟೀಸ್ ಕೊಟ್ಟರು. ನಮ್ಮ ಈ ಬೇಡಿಕೆಗಳನ್ನು ಪೂರೈಸದಿದ್ದರೆ 10ನೆಯ ಏಪ್ರಿಲ್ 1958 ರಿಂದ ಮತ್ತೆ ....... ಮಾಡುತ್ತೇವೆಂದು ತಿಳಿಸಿದ್ದಾರೆ. ಇದನ್ನೇಕೆ ತಮ್ಮ ಮುಂದೆ ಹೇಳುತ್ತೇನೆಂದರೆ, ತಾವು ರಚನಾತ್ಮಕ ರೀತಿಯಿಂದ ಸಲಹೆ ಕೊಡುತ್ತೀರೆಂದು ನನಗೆ ಗೊತ್ತು ಅವರು ಕೇಳಿದ್ದಾರೆ :

ಅವರ ಡಿಮ್ಯಾಂಡುಗಳು ಏನು ಎಂಬುದನ್ನು ತಮ್ಮ ಮುಂದಿಟ್ಟಿದ್ದೇನೆ. ಪ್ರತಿಯೊಬ್ಬರಿಗೂ ಪ್ಲೇಯರ್ಸ್ ಸಿಗರೇಟ್ ಪ್ಯಾಕೆಟ್ ಬೇಕೆಂದು ಹೇಳಿದರೆ, ಆ ಬೇಡಿಕೆಗಳು ಎಷ್ಟು ಮಾತ್ರ ಯೋಗ್ಯವಾಗಿವೆ? ಎಲ್ಲಿಯವರೆಗೆ ನಾವು ಆ ಬೇಡಿಕೆಗಳನ್ನು ಪೂರೈಕೆ ಮಾಡಿಕೊಂಡು ಹೋಗಬೇಕು? ಇದಾದ ಮೇಲೆ ಅವರೇನು ಬೇಡುತ್ತಾರೆಂಬುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾಗಿ ದೇಶದಲ್ಲಿ ಸೋಷಿಯಾಲಿಸ್ಟ್ ಆರ್ಡರ್ ತರಬೇಕೆಂದು ಹೇಳುವ ಜನ, ಜನ ಸಾಮಾನ್ಯರ ಪರಿಸ್ಥಿತಿ ರೀತಿ ನೀತಿಗಳನ್ನು ಬದಲಾಯಿಸಬೇಕೆಂದು ಹೇಳುವ ಜನ, ಪ್ಲೇಯರ್ಸ್ ಸಿಗರೇಟ್ ಬೇಕು ಎಂದೆಲ್ಲಾ ಬೇಡುತ್ತಾ ಹೋದರೆ ಏನು ಹೇಳೋಣ. ನಾವು ತಮ್ಮನ್ನೇ ಕೇಳುತ್ತೇನೆ. ಇವತ್ತಿನ ದಿವಸ ನಮ್ಮ ಸಮಾಜದಲ್ಲಿ, ಈ ಮಾನ್ಯ ಸದಸ್ಯರಲ್ಲೇ ಇಷ್ಟು ಐಟಂಗಳನ್ನು, ಊಟ ಉಡಿಗೆ ತೊಡಿಗೆಗಳನ್ನು ಹೊಂದಿರುವವರು ಎಷ್ಟು ಜನರಿದ್ದಾರೆ?

ನಾವು ಸಿಗರೇಟ್ ಸೇದುವುದಿಲ್ಲ. ಇವರು ರಾಜಕೀಯ ಬಂದಿಗಳು.

ಶ್ರೀಮತಿ ಸುಶೀಲಾಬಾಯಿ :-

ತೆಂಗಿನಕಾಯಿಯನ್ನು ತೆಗೆದುಕೊಂಡು ಏನು ಮಾಡುತ್ತಾರೆ ?

ಶ್ರೀ ಜೆ.ಬಿ. ಮಲ್ಲಾರಾಧ್ಯ :-

ದೇವಸ್ಥಾನದಲ್ಲಿ ಒಡೆಯಲಿಕ್ಕೆ ತೆಗೆದುಕೊಂಡು ಹೋಗುತ್ತಾರೆ. (ನಗು).

ಶ್ರೀ ವೀರೇಂದ್ರ ಪಾಟೀಲ್ :-

ನಮ್ಮ ಲೀಡರ್ ಆಫ್ ದಿ ಅಪೋಜಿಷನ್ನಿನವರಾದ ಶ್ರೀ ಕೆ. ಕೆಂಚಪ್ಪನವರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಜೈಲುಗಳಲ್ಲಿರುವ ಲಾಕಪ್ಪುಗಳು ಇಂಗ್ಲೀಷರ

ಕಾಲದಲ್ಲಿ ಕಟ್ಟಿದ್ದಂತೆ ' ಬ್ಲಾಕು ಹೋಲ್ ಆಫ್ ಕಲ್ಕತ್ತಾ ' ಇದ್ದಂತಿವೆ ಎಂದು ಹೇಳುತ್ತಾ ಇಂತಹ ಜೈಲುಗಳಲ್ಲಿರುವುದು ಯೋಗ್ಯವಲ್ಲ. ಮತ್ತು ಯಾವ ಜೈಲುಗಳೂ ಇರಲು ಯೋಗ್ಯವಾಗಿಲ್ಲ. ಎಂದರು.

ಶ್ರೀ ಕೆ. ಕೆಂಚಪ್ಪ :-

ಕೆಲವು ಯೋಗ್ಯವಾದುವೂ ಇವೆ ಎಂದು ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್ :-

ದಾವಣಗೆರೆಯೊಂದನ್ನು ಬಿಟ್ಟರೆ ಮತ್ತಾವುದೂ ಇಲ್ಲವೆಂದು ತಾವು ಹೇಳಿದ್ದೀರಿ. ಲಾಕಪ್ ಮತ್ತು ಜೈಲುಗಳ ಪರಿಸ್ಥಿತಿಯನ್ನು ನೋಡಿಕೊಂಡು ಯಾವುದು ಕಟ್ಟಿಸುವುದಕ್ಕೆ ಸಾಧ್ಯವಿದೆ. ಅದನ್ನು ಕಟ್ಟಿಸುವುದಕ್ಕಾಗಿ ವಿಚಾರ ಮಾಡುತ್ತಿದ್ದೇವೆ. ಆದರೆ ನಾನು ತಮಗೆ ಈ ವಿಚಾರವನ್ನು ತಿಳಿಸುತ್ತೇನೆ. 1947 ನೆಯ ಇಸವಿಯ ಅನಂತರ ಮಂಡ್ಯದಲ್ಲಿರುವ ಡಿಸ್ಟ್ರಿಕ್ಟ್‌ನ ಲಾಕಪ್ಪುಗಳನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿಯಾಗಿ ಕೋಲಾರದ ಡಿಸ್ಟ್ರಿಕ್ಟ್‌ನ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿ ಕೆ.ಜಿ.ಎಫ್.ನಲ್ಲಿಯೂ ಕೂಡ ಸ್ಪೆಷಲ್ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು.

ಶ್ರೀ ಕೆ. ಕೆಂಚಪ್ಪ :-

ಪೋಲೀಸು ಸ್ಟೇಷನ್ನಿನಲ್ಲಿರುವ ಲಾಕಪ್ಪುಗಳ ವಿಚಾರ ಹೇಳಿ. ಎಲ್ಲ ಕಡೆಯೂ ಡಿಸ್ಟ್ರಿಕ್ಟ್‌ನ ಲಾಕಪ್ಪುಗಳಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :-

ಅನಂತರ ಚಿತ್ರದುರ್ಗದಲ್ಲಿರುವ ಡಿಸ್ಟ್ರಿಕ್ಟ್ ಲಾಕಪ್ಪನ್ನು ಸರಿಪಡಿಸಲು ಇತ್ತೀಚೆಗೆ ಕೆಲವು ಅಡಿಷನಲ್ ಮತ್ತು ಮೈನರ್ ಇಂಪ್ರೂವ್ ಮೆಂಟ್‌ಗಳನ್ನು ಮಾಡಲಾಗಿದೆ. ಮತ್ತೆ ಇನ್ನೂ ಕೆಲವು ಕಡೆಗಳಲ್ಲಿ ಈ ರೀತಿಯಾದ ರಿಪೇರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಮಾನ್ಯ ಸದಸ್ಯರು ಈ ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಕಟ್ಟಿರುವ ಸ್ಥಳವು ಲಾಯಕ್ಕಾಗಿಲ್ಲ. ಆದರಿಂದ ಈ ಸೆಂಟ್ರಲ್ ಜೈಲನ್ನು ಇಲ್ಲಿಂದ ತೆಗೆದುಹಾಕಿ ಮತ್ತೊಂದು ಕಡೆ ಕಟ್ಟಬೇಕು ಎಂದು ಹೇಳಿದರು. ಇದನ್ನು ಶ್ರೀ ಮಲ್ಲಾರಾಧ್ಯರೂ ಹೇಳಿದ ಹಾಗೆ ಜ್ಞಾಪಕವಿದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಿ ನಿರ್ಣಯವನ್ನು ತೆಗೆದುಕೊಂಡಿದೆ. ಬೆಂಗಳೂರಿನಲ್ಲಿ ಈಗಿರುವ ಸೆಂಟ್ರಲ್ ಜೈಲನ್ನು ತೆಗೆದು ಮೆಂಟಲ್ ಹಾಸ್ಪಿಟಲ್ ಹತ್ತಿರ ಕಟ್ಟಬೇಕೆಂದು ಈಗಾಗಲೇ ಒಂದು ಸೈಟನ್ನು ಕೊಂಡುಕೊಳ್ಳಲಾಗಿದೆ. ಮತ್ತು ಇದಕ್ಕಾಗಿ ಜಮೀನನ್ನೂ ಸಹ ಅಕ್ವೈರು ಮಾಡಲಾಗಿದೆ. ಇದಕ್ಕಾಗಿ ಪ್ಲಾನು, ಎಸ್ಟೀಮೇಟು ಇವುಗಳನ್ನೆಲ್ಲ ಪ್ರಿಪೇರ್ ಮಾಡಿ ನಮ್ಮ ಹತ್ತಿರ ಕಳಿಸಿದ್ದಾರೆ. ಅದಷ್ಟು ತೀವ್ರವಾಗಿ ಈ ಜೈಲನ್ನು ಕಟ್ಟಿಸಬೇಕೆಂದು ನಿರ್ಣಯವನ್ನು ತೆಗೆದುಕೊಂಡು ಗವರ್ನಮೆಂಟು ಆರ್ಡರನ್ನು ಪಾಸು ಮಾಡಿಸಿ ಪ್ಲಾನು, ಎಸ್ಟೀಮೇಟು ಬಂದ ತಕ್ಷಣ ಅಲ್ಲಿ ಜೈಲಿನ ಕಟ್ಟಡವನ್ನು ಕಟ್ಟಿ ಇದನ್ನು ಅಲ್ಲಿಗೆ ವರ್ಗಾಯಿಸಲಾಗುತ್ತದೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ.

ನನಗೆ ಬೊಂಬಾಯಿ ಸರಿಯಾದ ಮಾಹಿತಿ ಇಲ್ಲ ಮತ್ತು ಆ ಕಡೆಗೆ ಹೋಗಿಲ್ಲ ಮತ್ತು ಅಲ್ಲಿನ ಜೈಲುಗಳ ಪರಿಸ್ಥಿತಿಯನ್ನು ನಾನು ನೋಡಿಕೊಂಡಿಲ್ಲ. ಆದರೆ ನನ್ನ ಭಾಗದ ಜಿಲ್ಲೆಗಳ ಪರಿಸ್ಥಿತಿ ಗೊತ್ತು. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ಸೆಂಟ್ರಲ್ ಜೈಲು ಇದೆ. ಇದನ್ನು ಎಷ್ಟೋ ಜನ ಹೊರಗಿನಿಂದ ಬಂದು ನೋಡಿಕೊಂಡು ಹೋಗುತ್ತಿದ್ದರು. ಅಷ್ಟು ಚೆನ್ನಾಗಿದೆ ಅದು.

ಅಧ್ಯಕ್ಷರು :-

ಹಿಂದೆ ಬೆಳಗಾವಿಯಲ್ಲಿದ್ದ ಜೈಲಿನ ಹಾಗಿದೆಯೋ ?

ಶ್ರೀ ವೀರೇಂದ್ರ ಪಾಟೀಲ್ :-

ಈ ರೀತಿ ಜೈಲುಗಳು ಹೈದರಾಬಾದು ಕರ್ನಾಟಕದ ಭಾಗಗಳಲ್ಲಿ ಸಾಕಷ್ಟು ಚೆನ್ನಾಗಿ ಮತ್ತು ಸರಿಯಾದ ಸ್ಥಿತಿಯಲ್ಲಿವೆ. ಅಷ್ಟು ಕೆಟ್ಟ ಸ್ಥಿತಿಯಲ್ಲಿಲ್ಲ. ಆದರೂ ಕೂಡ ಶ್ರೀ ಕೆಂಚಪ್ಪ ನವರು ಹೇಳಿದ ಹಾಗೆ ಎಲ್ಲೆಲ್ಲಿ ರಿಪೇರಿಗಳು, ಆಡಿಷನ್ ಆಲ್ಟ್ರೇಷನ್ನು ಆಗಬೇಕಾಗಿದೆಯೋ ಅಲ್ಲೆಲ್ಲ ಮಾಡುವುದು ಅಗತ್ಯವಾಗಿದೆ. ಅದನ್ನೆಲ್ಲ ನಾವು ಮಾಡಲಿಕ್ಕೆ ತಯಾರಿದ್ದೇನೆ ಮತ್ತು ಅದನ್ನು ಮಾಡುತ್ತೇನೆ. ಇದನ್ನು ಮಾಡುವುದರ ಸಲುವಾಗಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ.

ಇದಾದ ಅನಂತರ ನಮ್ಮ ಲೀಡರ್ ಆಫ್ ದಿ ಅಪೋಜಿಷನ್‌ನವರು ಒಂದು ಮಾತು ಹೇಳಿದರು. ಜೈಲುಗಳನ್ನು ಸೆಲ್ಫ್ ಸಫಿಸಿಯಂಟ್ ಮಾಡುವುದರ ವಿಷಯದಲ್ಲಿ ಸರಕಾರದವರು ಗಂಭೀರವಾಗಿ ಆಲೋಚಿಸಬೇಕು ಎಂದು ಅವರು ಹೇಳಿದರು. ಪಿ.ಎಸ್.ಪಿ. ಯವರ ಕೈಯಲ್ಲಿ ಅಧಿಕಾರ ಬಂದ ಮೇಲೆ ಆ ರೀತಿಯಾಗಿ ಸೆಲ್ಫ್ ಸಫಿಷಿಯೆಂಟು ಆಗುವಂತಹ ಪ್ರೋಗ್ರಾಂ ಏನಾದರೂ ಇದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ಜೈಲುಗಳು ಕಮರ್ಷಿಯಲ್ ಕನ್‌ಸರ್ನ್‌ಗಳಂತೆ ನಡೆಯಬೇಕಾದ ಸಂಸ್ಥೆಗಳಲ್ಲ. ಅಲ್ಲಿ ಎಷ್ಟು ಖರ್ಚು ಹಾಕುತ್ತಾರೋ ಆದರ ಲೆಕ್ಕ ಪತ್ರ ಯಾವ ರೀತಿ ಇದೆ ಎನ್ನುವುದಕ್ಕೆ ತಕ್ಕಂತೆ ಒಬ್ಬ ಉದ್ಯೋಗಸ್ಥರಿದ್ದು ಅಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ನೋಡುವುದಕ್ಕೆ ಬರಹುದು. ಆದರೆ ಈ ಜೈಲುಗಳ ಆಡಳಿತವನ್ನು ಹೀಗೆ ನಡೆಸುವುದಕ್ಕಾಗುವುದಿಲ್ಲ. ಹೀಗಿರುವಾಗ ಇಲ್ಲಿ ಸೆಲ್ಫ್ ಸಫಿಷಿಯಂಟು ಆಗುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಕೆ. ಕೆಂಚಪ್ಪ :-

ನಾನು ಹೇಳಲಿಲ್ಲ. ಸಾಧ್ಯವಿದೆ ಎಂದು ಅನುಭವವಿದ್ದ ಮನುಷ್ಯರು ಹೇಳಿದರು.

ಶ್ರೀ ವೀರೇಂದ್ರ ಪಾಟೀಲ್ :-

ಶ್ರೀ ಮಲ್ಲಾರಾಧ್ಯರು ಕೋಲಾರ ಜಿಲ್ಲೆಯಲ್ಲಿರುವ ಜೈಲನ್ನು ಸೆಲ್ಫ್ ಸಫಿಷಿಯೆಂಟಾದ ಜೈಲನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಏಕೆಂದರೆ ನಮ್ಮ ಸ್ಟೇಟಿನಲ್ಲಿ ಮೇಜರು ಜೈಲುಗಳು ಇರುವುದೇ ಐದಾರು. ಉಳಿದವುಗಳೆಲ್ಲ ಲಾಕಪ್ಪುಗಳು, ಸ್ಪೆಷಲ್ ಲಾಕಪ್ಪುಗಳು ಮತ್ತು ಸಬ್ ಜೈಲುಗಳು. ಇದರಲ್ಲಿ ಯಾವ ತರಹ ಖೈದಿಗಳನ್ನು ಇಡುತ್ತಾರೆ ಎನ್ನುವುದೆಲ್ಲ ತಮಗೆಲ್ಲ

ಗೊತ್ತಿರಬಹುದು. ತಾಲ್ಲೂಕು ಲಾಕಪ್ಪುಗಳಿಗೂ ಡಿಸ್ಟ್ರಿಕ್ಟ್ ಲಾಕಪ್ಪುಗಳಿಗೂ ಒಂದೇ ತರಹ ಕಾರ್ಯಕ್ರಮ ಹಾಕಿಕೊಳ್ಳಲು ಅಲ್ಲಲ್ಲ ವಿಧ ವಿಧವಾದ ರೀತಿಯ ಖೈದಿಗಳಿರುತ್ತಾರೆ. ಒಂದೇ ತರಹದ ಖೈದಿಗಳು ಇರುವ ವ್ಯವಸ್ಥಿತವಾದ ಗುಂಪು ಇರುವುದಿಲ್ಲ. ಹೀಗಿರುವುದರಿಂದ ಇಲ್ಲಿರುವ ಖೈದಿಗಳಿಗೆ ಶಿಕ್ಷಣವನ್ನು ಕಲಿಸುವುದು ಹೇಗೆ ಸಾಧ್ಯ ? ಮತ್ತು ಯಾವ ರೀತಿಯಾದ ಟ್ರೇನಿಂಗ್‌ನ್ನು ಕೊಡಬಹುದು ? ಇವೆಲ್ಲವನ್ನೂ ತಾವೇ ವಿಚಾರ ಮಾಡಿ. ಈಗ ಸೆಂಟ್ರಲ್ ಜೈಲಿನಲ್ಲಿ ಟೈಲರಿಂಗು, ವೀವಿಂಗು, ಕಾರಪೆಂಟ್ರಿ ಇವುಗಳನ್ನು ಕಲಿಸಲು ಅವಕಾಶವಿದೆ.

ಇದೂ ಅಲ್ಲದೆ ಸಬ್ ಜೈಲ್ಸ್ ಮತ್ತು ಸ್ಪೆಷಲ್ ಲಾಕಪ್ ಮೂರು ನಾಲ್ಕು ಇರಬಹುದು. ನಮ್ಮ ಸ್ಟೇಟಿನಲ್ಲಿ ಮೂರು ತಿಂಗಳೊಳಗೆ ಅಥವಾ ಅದಕ್ಕಿಂತ ಕಡಿಮೆ ಅವಧಿಯೊಳಗೆ ಇರುವ ಖೈದಿಗಳಿಗೆ ಯಾವ ವಿಧವಾದ ವಿದ್ಯೆಯನ್ನು ಕಲಿಸುವುದಕ್ಕೆ ಸಾಧ್ಯ ? ಮತ್ತು ಯಾವ ದೊಡ್ಡ ಉದ್ಯಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ? ಇನ್ನು ಏನಾದರೂ ಕೆಲಸವನ್ನು ಕಲಿಯ ಬೇಕಾಗಿದ್ದರೆ ಮತ್ತು ಟ್ರೇನಿಂಗನ್ನು ಕೊಡುವ ಸಾಧ್ಯತೆ ಇದ್ದರೆ ಬೇರೆ ಮೇಜರು ಜೈಲುಗಳಲ್ಲಿ ಕೊಡುವುದಕ್ಕೆ ಸಾಧ್ಯವಿದೆ. ಆದರೆ ಅದೂ ಕೂಡ ಹಾಗೆಯೇ ವಿಚಾರ ಮಾಡಿ ನೋಡಿದರೆ ಅಲ್ಲಿರುವ ಅಂಡರ್ ಟ್ರಯಲ್ಸ್‌ಗಳಿಂದ ಕೆಲಸ ತೆಗೆದುಕೊಳ್ಳುವುದು ಸಾಧ್ಯವಿಲ್ಲ ಮತ್ತು ಅವರಿಂದ ಕೆಲಸವನ್ನು ತೆಗೆದುಕೊಳ್ಳಲಾಗದು. ಇದೇ ರೀತಿಯಾಗಿ " ಎ " ಮತ್ತು " ಬಿ " ಕ್ಲಾಸು ಪ್ರಿಜನರುಗಳಿದ್ದಾರೆ. ಇವರಿಂದ ಯಾವ ಕೆಲಸವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೂ ಬರಿಯ " ಸಿ " ಕ್ಲಾಸು ಪ್ರಿಜನರುಗಳಿಂದ ಮಾತ್ರ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅವರೂ ಕೂಡ ಎಷ್ಟು ದಿವಸಗಳಿರುತ್ತಾರೆ ಎಂದರೆ ಬಹಳ ಕಡಿಮೆ ಅವಧಿಯವರೆಗೆ ಇರುತ್ತಾರೆ. ಏನೋ ಲಾಂಗ್ ಟರ್ಮ ಪ್ರಿಜನರುಗಳಿದ್ದರೆ ಅವರಾಗಿಯೇ ಕೆಲಸಕ್ಕೆ ಹೋಗುತ್ತಾರೆ. ಮತ್ತು ಆ ರೀತಿಯಾಗಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಒಬ್ಬ ಸದಸ್ಯರು :-

" ಸಿ " ಕ್ಲಾಸು ಖೈದಿಗಳು ಎಷ್ಟು ಜನರಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್ :-

ಅವರು ಸಾಕಷ್ಟು ಮೇಜರು ಜೈಲುಗಳಲ್ಲಿದ್ದಾರೆ. ಎಷ್ಟು ಜೈಲುಗಳಲ್ಲಿ ಇಂಡಸ್ಟ್ರೀಸನ್ನು ಯಾವ ಯಾವುದು ನಡೆಸುವುದಕ್ಕೆ ಸಾಧ್ಯವಿದೆ ಅವನ್ನೆಲ್ಲ ನಾವು ಮಾಡುತ್ತಿದ್ದೇವೆ. ಅವು ಯಾವುವು ಎನ್ನುವುದನ್ನು ಸಂಕ್ಷೇಪವಾಗಿ ತಮ್ಮ ಮುಂದೆ ವರದಿ ಇಡುತ್ತೇನೆ. ನಮ್ಮಲ್ಲಿ ಈಗ ನಡೆಯುತ್ತಿರುವುದು, ವೀವಿಂಗು, ಕಾರಪೆಂಟ್ರಿ, ಕಾರ್ಪೆಟ್ಟು, ವೀವಿಂಗು ಜೂಟ್ ಪ್ರಾಡಕ್ಟ್ಸ್, ಲೆದರ್ ಇಂಡಸ್ಟ್ರೀ, ಕಾಯರ್ ಇಂಡಸ್ಟ್ರಿ, ರೋಪ್ ಮೇಕಿಂಗ್, ಸ್ಮಿತ್ರಿ, ಟೇಲರಿಂಗು, ಪ್ರಿಂಟಿಂಗ ಪ್ರೆಸ್, ಬೈಂಡಿಂಗ್ ಮತ್ತು ರೂಲಿಂಗ್, ಲಾಂಡ್ರಿ, ಸ್ಪಿನ್ನಿಂಗು, ರಬ್ಲಿ ವೀವಿಂಗು, ಟೆಂಟ್ ಮೇಕಿಂಗ್ ಹೀಗೆ ಎಲ್ಲ ಉದ್ಯಮಗಳೂ ನಡೆಯುತ್ತವೆ, ಈ ಬಗ್ಗೆ ವಿಚಾರ ಮಾಡುತ್ತ ಶ್ರೀ ಮಲ್ಲಾರಾಧ್ಯರೂ ಮತ್ತು ಸಿ.ಕೆ. ರಾಜಯ್ಯ ಶೆಟ್ಟಿಯವರೂ, ಈ ಜೈಲುಗಳಲ್ಲಿ ಮ್ಯಾನುಫ್ಯಾಕ್ಚರಿಗಾಗಿ ಒದಗಿಸಿರುವ ಹಣಕ್ಕೆ ತಕ್ಕಷ್ಟು ಪ್ರತಿಫಲ ದೊರೆಯದೆ ನಷ್ಟವಾಗುತ್ತಿದೆ. ಈ ಜೈಲುಗಳಿಗಾಗಿ ಒದಗಿಸಿರುವ ಹಣ 4,60,000

ರೂಪಾಯಿಗಳಲ್ಲಿ ಆದಾಯ ಬಂದಿರುವುದು 3,77,000 ಈ ರೀತಿಯಾಗಿ ಲಾಸ್ ಆಗುತ್ತಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ನೋಡುವವರಿಗೆ ಇದು ಹಾಗೆ ಕಾಣಬಹುದು. ಆದರೆ ನಾವು ನಾಲ್ಕು ಲಕ್ಷ ರೂಪಾಯಿಗಳಷ್ಟು ರಾ ಮೆಟೀರಿಯಲುಗಳನ್ನು ತೆಗೆದು ಇಟ್ಟು ಈ ರಾ-ಮೆಟೀರಿಯಲ್ಲುಗಳಿಂದ ತೆಗೆದುಕೊಂಡು ಇಷ್ಟೇ ಅವಧಿಯೊಳಗೆ ಫಿನಿಷಡ್ ಗುಡ್ಸ್ ತಯಾರು ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ತಯಾರು ಮಾಡುವುದಕ್ಕೆ ತಕ್ಕ ಸೌಕರ್ಯಗಳೂ ದೊರೆಯುವುದಿಲ್ಲ. ಇಲ್ಲಿ 3,77,000 ಆದಾಯ ತೋರಿಸಿರುವುದರಲ್ಲಿ ಖರ್ಚು ವೆಚ್ಚಗಳನ್ನು ಸೇರಿಸಿಲ್ಲ, ಅವನ್ನೂ ಸೇರಿಸಿದರೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆಯೋ ಹೊರತು ನಷ್ಟ ಬರುವುದಿಲ್ಲ. ಈ ರೀತಿಯಾಗಿ 4,60,000 ರೂಪಾಯಿಗಳಷ್ಟು ರಾ-ಮೆಟೀರಿಯಲುಗಳಿಗಾಗಿ ಇನ್‌ವೆಸ್ಟು ಮಾಡಿದರೆ ನಮಗೆ ಇನ್ನೂ 3,77,000 ರೂಪಾಯಿಗಳ ಹೆಚ್ಚು ಉತ್ಪನ್ನವಾಗುತ್ತದೆ ಎನ್ನುವ ಭಾವನೆಯಿಲ್ಲ.

ಶ್ರೀ ಕೆ. ರಾಜಯ್ಯ ಶೆಟ್ಟಿ :-

ಇಲ್ಲಿ ತಾವು ಒಂದು ವರ್ಷದ ಫಿಗರನ್ನು ಹೇಳುತ್ತೀರಿ ? If you take one lakh of last year plus that of this year, it comes to total loss of 1.9 lakhs.

ಶ್ರೀ ವೀರೇಂದ್ರ ಪಾಟೀಲ್ :-

ನಾನು ಅದನ್ನು ಹೇಳುತ್ತೇನೆ. ನಾನು ಈಗ ಹೇಳುತ್ತಿದ್ದುದು ಏನೆಂದರೆ ಇದರಲ್ಲಿ ಯಾವ ರೀತಿಯಲ್ಲಿಯೂ Loss ಆಗಲು ಸಾಧ್ಯವಿಲ್ಲ. Cost of production ಏನಿದೆ ಅದರ ಮೇಲೆ ಶೇಕಡ ಹತ್ತು Profit ಹಾಕಿ Sale price ನಿಗದಿಮಾಡಿರುವುದರಿಂದ ಅದರಲ್ಲಿ Loss ಇಲ್ಲವೆಂದು ಮಾತ್ರ ಸ್ಪಷ್ಟವಾಗಿ ಹೇಳುತ್ತೇವೆ. ವಿವರಗಳು ನನ್ನ ಹತ್ತಿರ ಇಲ್ಲದುದರಿಂದ ಹೆಚ್ಚು ಹೇಳಲು ಸಾಧ್ಯವಿಲ್ಲ ಮತ್ತು ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ.

Jail Reforms Committee ಯ ಬಗ್ಗೆ ಶ್ರೀಮಾನ್ ಮಲ್ಲಾರಾಧ್ಯರು ಹೇಳಿದರು. ಕಟ್ ಮೋಷನ್ಸ್ ಸಹ ಕೊಟ್ಟಿದ್ದಾರೆ. ಅವರು ಮತ್ತೊಂದು ಕಮಿಟಿಯನ್ನು ಮಾಡಬೇಕೆಂದು ಹೇಳಿದರು. ಈಗಾಗಲೇ ಒಂದು ಕಮಿಟಿಯನ್ನು ಮಾಡಿದ್ದೆವು ಮತ್ತು ಅವರ recommendation ಇವೆ. ಅವುಗಳ ಪೈಕಿ ಅನೇಕ recommendations implement ಮಾಡುವುದಕ್ಕೆ ಸಾಧ್ಯವಿದೆ. ಯೋಗ್ಯವಿದ್ದಂಥ recommendations ಏನಿವೆ ಅವನ್ನು ಕಾರ್ಯಗತ ಮಾಡುವುದರ ಸಲುವಾಗಿ ಸಿದ್ಧರಿದ್ದೇವೆ ಎಂದು ಮಾತ್ರ ಹೇಳಬಯಸುತ್ತೇನೆ.

ಶ್ರೀಮಾನ್ ರಾಜಯ್ಯ ಶೆಟ್ಟರು ಅನೇಕ ವಿಚಾರಗಳನ್ನು ಬೆಂಗಳೂರು ಸೆಂಟ್ರಲ್ ಜೈಲಿನ ಬಗ್ಗೆ ಹೇಳಿದರು. ಅದರಲ್ಲಿ ಒಂದು ವಿಚಾರವನ್ನು ಹೇಳಬೇಕಾದರೆ rattan industry ಇಟ್ಟುಕೊಂಡಿದ್ದಾರೆ, instructor ಇದ್ದಾನೆ ಏನೂ ಕೆಲಸ ಮಾಡುತ್ತಿಲ್ಲವೆಂದು ತಿಳಿಸಿದರು. ಅಲ್ಲಿ ಈಗ Rattan Instructor ಇಲ್ಲ. ಆತನು ರಿಟೈರ್ ಆಗಿದ್ದಾನೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

Regarding rattan industry, what I said was that there was no raw material.

ಶ್ರೀ ವೀರೇಂದ್ರ ಪಾಟೀಲ್ :-

ನಾವು ನಮಗೆ ಬೇಕಾದಂಥ ಮಾಲನ್ನು open market ನಲ್ಲಿ ತೆಗೆದುಕೊಳ್ಳುವ ಹಾಗಿಲ್ಲ. ಅದಕ್ಕೆ ಒಂದು ಪ್ರೊಸೀಜರ್ ಇದೆ. ಮಾರ್ಕೆಟನಲ್ಲಿ ಹೋಗಿ ನಮಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಬರುವ ಹಾಗಿಲ್ಲ. ನಮಗೆ ಏನೂ ಬೇಕಾಗಿದ್ದರೂ ಅದಕ್ಕೆ ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಗೆ ಬರೆಯಬೇಕು ಮತ್ತು ಅವರ ಮುಖಾಂತರವೇ ತೆಗೆದುಕೊಳ್ಳಬೇಕು. ಅಲ್ಲದೆ rattan ನಮಗೆ ಸಿಂಗಾಪುರದಿಂದ ಬರಬೇಕು. ಅಲ್ಲಿಂದ ಬಂದಿಲ್ಲ. ಆದುದರಿಂದ ಆ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಇದೇ ರೀತಿಯಾಗಿ ಅನೇಕ ಜನ ಸಲಹೆಗಳನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ನಾನು ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿ, ಜೈಲಿನ ಆಡಳಿತದಲ್ಲಿರತಕ್ಕ ಕುಂದುಕೊರತೆಗಳನ್ನು ನಿರ್ಮೂಲ ಮಾಡುವುದಕ್ಕಾಗಿ ನಾವು ಪ್ರಯತ್ನ ಮಾಡುತ್ತೇವೆ ಮತ್ತು ತಮ್ಮೆಲ್ಲರ ಸಹಕಾರ ಕೂಡ ಅದಕ್ಕೆ ಅಗತ್ಯವಾಗಿದೆ. ಈ ರೀತಿಯಾಗಿ ಕೆಲಸ ಮಾಡುವಂಥ ಒಂದು ಆಶ್ವಾಸನೆಯನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

## 2. ಹೇಮಾವತಿ ಪ್ರಾಜೆಕ್ಟ್ ಕುರಿತು ಸದಸ್ಯರ ಪ್ರಶ್ನೆಗಳಿಗೆ ಶ್ರೀ ವೀರೇಂದ್ರ ಪಾಟೀಲರು ಲೋಕೋಪಯೋಗಿ ಸಚಿವರಾಗಿ ನೀಡಿದ ಉತ್ತರಗಳು. 8ನೇ ಮಾರ್ಚ್ 1968.

ಶ್ರೀ ಎಚ್.ಎನ್. ನಂಜೇಗೌಡ ( ಅರಕಲಗೂಡು ) :-

(ಅ) ಬರಗಾಲ ಪೀಡಿತ ಪ್ರದೇಶಗಳಾದ ಅರಕಲಗೂಡು, ಹೊಳೆನರಸಿಪುರ ಮತ್ತು ಇತರ ತಾಲೂಕುಗಳಿಗೆ ನೀರಾವರಿಯನ್ನು ಪೂರೈಸಲು, ಹೇಮಾವತಿ ಪ್ರಾಜೆಕ್ಟಿಗೆ, ಉನ್ನತ ಮಟ್ಟದ ಕಾಲುವೆಯನ್ನು ತೋಡಲು, ಸರಕಾರವು ಯಾವುದೇ ಮನವಿಗಳನ್ನು ಸ್ವೀಕರಿಸಿದೆಯೇ ?

(ಬ) ಈ ಯೋಜನೆಯನ್ನು ಅವರು ಪರೀಕ್ಷಿಸಿ, ಆ ಕಾಲುವೆಯ ನಿರ್ಮಾಣದ ಕಾರ್ಯವನ್ನು ಕೈಗೆತ್ತಿಕೊಳ್ಳುವುದರ ಬಗ್ಗೆ ತಿಳಿಸುವಿರಾ ?

ಶ್ರೀ ವೀರೇಂದ್ರ ಪಾಟೀಲ್ ( ಲೋಕೋಪಯೋಗಿ ಮಂತ್ರಿ ):-

(ಅ) ಹೌದು

(ಬ) ಯೋಜನೆಯು ಪರಿಶೀಲನೆಯಲ್ಲಿದೆ.

ಶ್ರೀ ನಂಜೇಗೌಡ :-

(ಬ) ಗೆ ಉತ್ತರಿಸುವಲ್ಲಿ, ತಾವು ಹೇಳಿದಂತೆ, ಯೋಜನೆಯು ಪರಿಶೀಲನೆಯಲ್ಲಿದೆ. ಆ ಪರಿಶೀಲನೆಯ ಹಂತದ ಬಗ್ಗೆ ನಾನು ತಿಳಿದು ಕೊಳ್ಳಬಹುದೇ ?

ಶ್ರೀ ವೀರೇಂದ್ರ ಪಾಟೀಲ್ :-

ಅದು ಇನ್ನೂ ಪ್ರಾರಂಭದ ಹಂತದಲ್ಲಿದೆ.

ಶ್ರೀ ಹೆಚ್.ಡಿ. ದೇವೇಗೌಡ :-

ಹೇಮಾವತಿ ಯೋಜನೆಯ ದಕ್ಷಿಣ ಭಾಗದಲ್ಲಿ ಒಂದು ಹೈ ಲೆವೆಲ್ ಕೆನಾಲ್ ಮಾಡಬೇಕೆಂದು ಮನವಿಗಳು ಬಂದಿವೆಯೆಂದು ತಿಳಿಸಿದ್ದೀರಿ. ಹಿಂದೆ ಹಾರಂಗಿ ಅಣೆಕಟ್ಟೆಗೆ ಒಂದು ಪಿಕ್‌ಅಪ್ ಹಾಕಬೇಕೆಂಬ ಅಭಿಪ್ರಾಯ ಇತ್ತು, ಆಮೇಲೆ ಹಾರಂಗಿ ಅಣೆಕಟ್ಟು ಕಟ್ಟುವುದನ್ನು ಪುನರ್ ವಿಮರ್ಶೆ ಮಾಡಿ ಆ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡುವುದರಿಂದ ಅರಕಲಗೂಡು ಮತ್ತು ಹೊಳೆನರಸೀಪುರದ ಪ್ರದೇಶಗಳಿಗೆ ಹೋಗತಕ್ಕಂಥ ಸವಲತ್ತು ಕಳೆದು ಹೋಗಿದೆ. ಆದ್ದರಿಂದ ಈ ಹೈಲೆವೆಲ್ ಕೆನಾಲ್ ಅನ್ನು ಯಾವ ತರಹ ಮಾಡಿದರೆ ಆ ಎರಡು ಪ್ರದೇಶಗಳಿಗೂ ಅನುಕೂಲವಾಗುತ್ತದೆ ಎಂಬುದನ್ನು ತಿಳಿದು ಅದನ್ನು ಸರ್ಕಾರದವರು ಮಾಡುತ್ತಾರೆಯೇ, ಮತ್ತು ಆ ಎರಡು ಏರಿಯಾಗಳೂ ಕ್ಷಾಮ ಪೀಡಿತ ಪ್ರದೇಶವೆಂದು ಸರ್ಕಾರದವರಿಗೆ ಗೊತ್ತಿರುವುದರಿಂದ ಅಲ್ಲಿಗೆ ನೀರು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಆ ಯೋಜನೆಯ ಸೆಕೆಂಡ್ ಪ್ರಾಜೆಕ್ಟ್ ಕಟ್ಟುವಾಗ ಅಲ್ಲಿ ಹೈ ಲೆವೆಲ್ ಕೆನಾಲ್ ಮಾಡಿ ನೀರಾವರಿ ಅನುಕೂಲತೆಯನ್ನು ಒದಗಿಸಿ ಕೊಡಬೇಕೆಂಬ ಸಲಹೆ ಇದೆ. ಈಗ ಫಸ್ಟ್ ಸ್ಟೇಜ್ ಪ್ರಾಜೆಕ್ಟ್ ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸೆಕೆಂಡ್ ಸ್ಟೇಜ್ ಪ್ರಾಜೆಕ್ಟ್ ಕಟ್ಟುವುದಕ್ಕೆ ಇನ್ನೂ ಕಾಲಾವಕಾಶ ಇರುವುದರಿಂದ, ಅದಕ್ಕೆ ಮೂರು ಅಲ್ಟನೇಟೀವ್ ಇದೆ. ಅದನ್ನು ಡೀಟೈಲಾಗಿ ವರ್ಕೌಟ್ ಮಾಡಿ, ಅದರ ಅಂದಾಜನ್ನು ತಯಾರು ಮಾಡಿ ಅದರ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶಿವಪ್ಪ :-

ಈ ಯೋಜನೆಯ ದಕ್ಷಿಣ ಭಾಗದಲ್ಲಿ ಹೈ ಲೆವೆಲ್ ಕೆನಾಲಿನ ಕಟ್ಟಡದ ಸಂಬಂಧದಲ್ಲಿ ಇನ್‌ವೆಸ್ಟಿಗೇಷನ್ ಮಾಡತಕ್ಕ ಕಾಲದಲ್ಲಿ ಈ ಯೋಜನೆಯ ಉತ್ತರ ಭಾಗದಲ್ಲಿ ಒಂದು ಹೈ ಲೆವೆಲ್ ಕೆನಾಲನ್ನು ಕಟ್ಟಿ ಕ್ಷಾಮ ಪೀಡಿತ ಪ್ರದೇಶಗಳಾದ ನಾಗಮಂಗಲ ಮತ್ತು ಚೆನ್ನರಾಯಪಟ್ಟಣ ಪ್ರದೇಶಗಳಿಗೆ ನೀರನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಅದಕ್ಕೆ 3 ಆಲ್ಟರ್‌ನೇಟೀವ್ ಇದೆ, 8 ಟಿ.ಎಂ.ಸಿ. ಎಫ್.ಟಿ. ನೀರನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಿದೆಯೋ ಎಂದು ನಮ್ಮ ಇಂಜನಿಯರು ನೋಡುತ್ತಿದ್ದಾರೆ. ಎಲ್ಲಿ ನಾಲೆ ಮಾಡಿದರೆ ಕಡಿಮೆ ಜನಗಳಿಗೆ ಅನುಕೂಲವಾಗುತ್ತದೆ, ಎಲ್ಲಿ ನಾಲೆ ಮಾಡಿದರೆ ಹೆಚ್ಚು ಜನಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು, ದೀರ್ಘವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಅದನ್ನು ಮುಂಚೆಯೇ ಹೇಳುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅಂತಿಮ ನಿರ್ಧಾರಕ್ಕೆ ಬರಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :-

ನಾಗಮಂಗಲ ತಾಲ್ಲೂಕು ಕ್ಷಾಮ ಪೀಡಿತ ಪ್ರದೇಶ. ಅಲ್ಲಿಗೆ ನೀರಾವರಿ ಸೌಕರ್ಯವನ್ನು ಒದಗಿಸಲು ಸ್ವಲ್ಪ ಹೆಚ್ಚು ಖರ್ಚಾದರೂ ಸಹ ಆ ಕಾಮಗಾರಿಯನ್ನು ತೆಗೆದುಕೊಂಡು ಅವರಿಗೆ ಒಂದು ಶಾಶ್ವತವಾದ ಪರಿಹಾರವನ್ನು ಒದಗಿಸುವುದು ಅವಶ್ಯಕ. ಆದ್ದರಿಂದ ತಾವು ಪೂರ್ಣವಾದ ಗಮನವನ್ನು ಕೊಡುವುದಕ್ಕೆ ಸಾಧ್ಯವೇ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್ :-

ಅಲ್ಲಿ ಕ್ಷಾಮ ಇದೆಯೆಂದು ಎಲ್ಲಿನ ನೀರನ್ನು ಎಲ್ಲಿಗೋ ತೆಗೆದುಕೊಂಡು ಬರುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ. ಇದಕ್ಕೆ 3 ಆಲ್ಟರ್‌ನೇಟೀವ್ಸ್ ಇದೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಶಿಂಷಾ ವ್ಯಾಲಿಯಿಂದ ನೀರನ್ನು ಡೈವರ್ಟ್ ಮಾಡಿ ಅಲ್ಲಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಸಹ ನೋಡಬೇಕಾಗುತ್ತದೆ. ಇದು ಮೂರು ಆಲ್ಟರ್‌ನೇಟೀವ್ಸ್‌ಗಳಲ್ಲಿ ಒಂದಾಗಿದೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

ಹೇಮಾವತಿ ಯೋಜನೆಯ ಮೊದಲನೆಯ ಹಂತದಲ್ಲಿ ನೀರಾವರಿಗೆ ಒಳಪಡತಕ್ಕಂಥ ತಾಲ್ಲೂಕ್‌ಗಳು ಯಾವುವು ?

ಶ್ರೀ ವೀರೇಂದ್ರ ಪಾಟೀಲ್ :-

ನನಗೆ ಗೊತ್ತಿರುವ ಪ್ರಕಾರ ಅರಕಲಗೂಡು, ಹೊಳೆನರಸಿಪುರ, ಕೆ.ಆರ್. ಪೇಟೆ ಮತ್ತು ಶ್ರೀ ರಂಗಪಟ್ಟಣ.

ಶ್ರೀ ಎಚ್.ಎಸ್. ನಂಜೇಗೌಡ :-

ಹೇಮಾವತಿ ಯೋಜನೆಯ ನಾಲೆಗಳ ಪೈಕಿ, ಉತ್ತರದ ನಾಲೆಯಿಂದ 82 ಸಾವಿರ ಎಕರೆ ನೀರಾವರಿಯಾಗುತ್ತದೆ, ದಕ್ಷಿಣ ನಾಲೆಯಿಂದ 23 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಅಲ್ಲದೆ 18 ಸಾವಿರ ಎಕರೆ ಜಮೀನು ಅರಕಲಗೂಡಿನ ತಾಲ್ಲೂಕ್‌ನಲ್ಲಿ ಮುಳಗಡೆಯಾಗುತ್ತದೆ. ಹಾರಂಗಿ ಯೋಜನೆಯಿಂದ ನಮ್ಮ ಕಡೆಯ ಜಮೀನುಗಳಿಗೆ ಹೆಚ್ಚು ನೀರಾವರಿಯಾಗುವುದಿಲ್ಲವಾದ್ದರಿಂದ ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ಹೇಮಾವತಿ ಯೋಜನೆಯ ದಕ್ಷಿಣ ಭಾಗದಲ್ಲಿ ಒಂದು ಮೇಲ್ಮಟ್ಟದ ನಾಲೆಯನ್ನು ನಿರ್ಮಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಎಲ್ಲಾ ವಿಚಾರಗಳು ಇಂಜನೀಯರ್‌ಗಳ ಪರಿಶೀಲನೆಯಲ್ಲಿದೆ. ಅವರು ಪರಿಶೀಲನೆ ಮಾಡಿ ಸರ್ಕಾರಕ್ಕೆ ಸಲಹೆ ಮಾಡಬೇಕಾಗುತ್ತದೆ. ಅವರಿಂದ ಪೂರ್ತಿ ಪ್ರಾಜೆಕ್ಟ್ ರಿಪೋರ್ಟ್ ಬಂದ ಮೇಲೆ ಈ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಎಂ. ಬಸವರಾಜು :-

ಮೊದಲೆಯ ಹಂತದಲ್ಲಿ ಪಾಂಡವಪುರ ತಾಲ್ಲೂಕ್ ಸೇರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :-

ವಿವರಗಳು ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಎಂ. ಬಸವರಾಜು :-

ಹೇಮಾವತಿ ಬಲದಂಡೆ ನಾಲೆಯಿಂದ ಅರಕಲಗೂಡಿಗೆ ನೀರಾವರಿಯಾಗುವುದಲ್ಲದೆ, ಬರಗಾಲ ಪೀಡಿತ ಪ್ರದೇಶಗಳಾದ ಹೊಳೆನರಸೀಪುರ ತಾಲ್ಲೂಕ್ ಹಳ್ಳಿ ಮೈಸೂರು ಮತ್ತು ಕೆ.ಆರ್. ನಗರ ತಾಲ್ಲೂಕಿನ ಸಾಲಿಗ್ರಾಮದಲ್ಲಿ ಸುಮಾರು 15 ಸಾವಿರ ಎಕರೆ ಜಮೀನು ನೀರಾವರಿಗೆ ಒಳಪಡುತ್ತವೆ. ಆದ್ದರಿಂದ ಮೊದಲನೆಯ ಸ್ಟೇಜಿನಲ್ಲಿಯೇ ಬಲದಂಡೆ ನಾಲೆಯನ್ನು ಮುಗಿಸುವದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :-

ನಾನು ಹೇಳಿದೆ, ಆಲ್ಟರ್‌ನೇಟೀವ್ಸ್ ಬಗ್ಗೆ ಇಂಜನಿಯರ್‌ಗಳು ಪರಿಶೀಲನೆ ಮಾಡುತ್ತಿದ್ದಾರೆ. ಮೊದಲನೆಯ ಸ್ಟೇಜ್ ಮುಗಿಯುವುದಕ್ಕೆ ಇನ್ನೂ ಸ್ವಲ್ಪ ಕಾಲ ಬೇಕಾಗುತ್ತದೆ. ಆಲ್ಟರ್‌ನೇಟೀವ್ಸ್ ಮಾಡುವುದರಿಂದ ಎಷ್ಟು ಖರ್ಚು ಬರುತ್ತದೆ, ಎಷ್ಟು ಎಕರೆಗಳಿಗೆ ನೀರಾವರಿಯಾಗುತ್ತದೆ ಮತ್ತು ಯಾವ ಯಾವ ಪ್ರದೇಶಗಳಿಗೆ ಹೆಚ್ಚಿನ ಸೌಕರ್ಯಗಳು ಒದಗುತ್ತವೆ ಎಂಬುದನ್ನು ಇಂಜನಿಯರ್‌ಗಳು ಪರಿಶೀಲನೆ ಮಾಡಿ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ಸರ್ಕಾರಕ್ಕೆ ಕೊಡುತ್ತಾರೆ ನಂತರ ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಸ್. ಬಸವರಾಜು :-

ಸರ್ಕಾರಕ್ಕೆ ಯೋಜನೆಗಳನ್ನು ತೆಗೆದುಕೊಳ್ಳಲು ಹಣದ ಅನಾನುಕೂಲವಿರುವುದರಿಂದ ಬ್ಯಾಂಕ್‌ಗಳಿಂದ ಸಾಲವನ್ನು ರೈತರಿಗೆ ಕೊಡಿಸಿ, ಮುಖ್ಯವಾದ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಬ್ಯಾಂಕ್‌ಗಳಿಂದ ಆ ರೀತಿ ಸಾಲವನ್ನು ರೈತರ ಮೂಲಕ ತೆಗೆದುಕೊಂಡು ಮೊದಲನೆಯ ಸ್ಟೇಜ್‌ನಲ್ಲಿಯೇ ಹೇಮಾವತಿ ಬಲದಂಡೆ ನಾಲೆಯನ್ನು ಮುಗಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಮೊದಲನೆಯ ಸ್ಟೇಜ್‌ನಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮೊದಲನೆಯ ಸ್ಟೇಜ್ ಮುಗಿದ ನಂತರ ಎರಡನೆಯ ಸ್ಟೇಜಿನಲ್ಲಿ ಬಲದಂಡೆ ನಾಲೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ.ಕೆ. ಬೊಮ್ಮೆಗೌಡ :-

ಹೇಮಾವತಿ ಯೋಜನೆ ಕೆಲಸ ಬಹಳ ದಿನದಿಂದ ನಡೆಯುತ್ತಿದೆ. ಈ ಯೋಜನೆಯನ್ನು ಮುಗಿಸುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್ :-

ಸರ್ಕಾರದವರು 4-5 ವರ್ಷಗಳಲ್ಲಿ ಮುಗಿಸಬೇಕೆಂದಿದ್ದಾರೆ. ಹಣ ಯಾವ ರೀತಿ ಒದಗುತ್ತದೋ ಅದರ ಮೇಲೆ ಅವಲಂಬಿಸಿದೆ.

ಶ್ರೀ ಎಂ.ಕೆ. ಬೊಮ್ಮೆಗೌಡ :-

ನಮ್ಮ ಭಾಗವು ಕ್ಷಾಮ ಪೀಡಿತ ಪ್ರದೇಶದಲ್ಲಿರುವುದರಿಂದ, ಆ ಭಾಗಗಳಿಗೆ ಅನುಕೂಲವಾಗುವಂತೆ ಈ ಯೋಜನೆಯ ಕೆಲಸವನ್ನು ಎಮರ್‌ಜೆನ್ಸಿ ಎಂದು ತಿಳಿದುಕೊಂಡು ಮತ್ತು ಯುದ್ಧ ಕಾಲದ ಪರಿಸ್ಥಿತಿ ಎಂದು ತಿಳಿದುಕೊಂಡು ಈ ಯೋಜನೆಯನ್ನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಜಾಗ್ರತೆ ಮುಗಿಸಬೇಕೆಂಬುದೇ ನಮ್ಮ ಪ್ರಯತ್ನವಾಗಿದೆ. ಬೇಗ ಮುಗಿಸುವುದಕ್ಕೆ ಬೇಕಾಗಿರುವುದು ಹಣ. ಹಣ ಎಷ್ಟು ಒದಗುತ್ತದೋ ಅದರ ಮೇಲೆ ಅವಲಂಬಿಸಿದೆ.

ಶ್ರೀ ಎನ್. ಚೆನ್ನೇಗೌಡ :-

ಹಣದ ಕೊರತೆಯಿರುವುದರಿಂದ ಮೊದಲನೆಯ ಹಂತವನ್ನು ಮುಗಿಸುವದಕ್ಕೆ ಕಷ್ಟವಾಗಿದೆಯೆಂದು ಹೇಳಿದಿರಿ. ಆ ಭಾಗದ ಜಮೀನುಗಳನ್ನು ಆಧಾರವಾಗಿಟ್ಟು ಬ್ಯಾಂಕ್‌ಗಳಿಂದ ಸಾಲ ಪಡೆದು ಈ ಯೋಜನೆಯನ್ನು ಜಾಗ್ರತೆ ಮುಗಿಸಿದರೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :-

ಬ್ಯಾಂಕ್ ನವರು ಸರ್ಕಾರಕ್ಕೆ ಸಾಲವಾಗಿ ಹಣವನ್ನು ಕೊಡುವುದಿಲ್ಲ. ಅಚ್ಚುಕಟ್ಟುದಾರರು ತಮ್ಮ ಜಮೀನುಗಳನ್ನು ಬ್ಯಾಂಕ್‌ಗಳಿಗೆ ಆಧಾರವಾಗಿಟ್ಟು ಸಾಲಾವಾಗಿ ಹಣವನ್ನು ಪಡೆದು ಸರ್ಕಾರಕ್ಕೆ ಕೊಟ್ಟರೆ ಇನ್ನು [illegible] ವರ್ಷಗಳಲ್ಲಿ ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ.

## 3. ರಾಜ್ಯಕ್ಕೆ ಹಂಚಲಾದ ಕಾವೇರಿ ನೀರಿನ ಉಪಯೋಗದ ಕುರಿತು ಸದಸ್ಯರು ಕೇಳಿದ ಪ್ರಶ್ನೆಗಳಿಗೆ, ಲೋಕೋಪಯೋಗಿ ಮಂತ್ರಿಯಾಗಿ ಶ್ರೀ ವೀರೇಂದ್ರ ಪಾಟೀಲರು ನೀಡಿದ ಉತ್ತರಗಳು. 8ನೇ ಮಾರ್ಚ್ 1968.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ ( ಚಿಕ್ಕನಾಯಕನಹಳ್ಳಿ ) :-

ಅ) 1924ರ ಒಪ್ಪಂದದ ಪ್ರಕಾರ, ಮದ್ರಾಸ್ ಮತ್ತು ಮೈಸೂರು ರಾಜ್ಯಗಳ ನಡುವೆ ಕಾವೇರಿ ಜಲಾಶಯದಲ್ಲಿ ಮೈಸೂರು ರಾಜ್ಯಕ್ಕೆ ಹಂಚಲಾದ ನೀರಿನ ಪ್ರಮಾಣದ ಬಗ್ಗೆ.

ಬ) ಹಂಚಲಾದ ನೀರಿನ ಬಗ್ಗೆ ಮೈಸೂರು ರಾಜ್ಯದ ಕಾರ್ಯಕ್ರಮದ ಬಗ್ಗೆ.

ಕ) ಮರು ವಿಂಗಡನೆಯ ನಂತರ, ಮೈಸೂರು ರಾಜ್ಯಕ್ಕೆ ನೂತನ ಕಾವೇರಿ ಜಲಾಶಯವು ಬಂದಿರುವುದು ಸತ್ಯಾಂಶವೇ ? ಎಂಬುದರ ಬಗ್ಗೆ ( ಕೂರ್ಗ್ ಮತ್ತು ಕೊಳ್ಳೆಗಾಲ ತಾಲ್ಲೂಕುಗಳು).

ಡ) ಹಾಗಿದ್ದಲ್ಲಿ ಹೆಚ್ಚಿನ ನೀರಿನ ಪ್ರಮಾಣದ ಹಂಚಿಕೆಗಾಗಿ, ಸರಕಾರವು ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸುವಿರಾ ?

ಶ್ರೀ ವೀರೇಂದ್ರ ಪಾಟೀಲ್ : (ಲೋಕೋಪಯೋಗಿ ಸಚಿವ ) :-

ಅ) ಕೆಲವು ಷರತ್ತುಗಳ ಅನುಸಾರ, 1924 ನೇ ಒಪ್ಪಂದವು ನೀರಿನ ಉಪಯೋಗದ ವಿಧಾನ ಬಗ್ಗೆ ತಿಳಿಸುತ್ತದೆ.

ಬ) 44-827 ಟಿ.ಎಂ.ಸಿ. ಫೀಟಿನ ಸಾಮರ್ಥ್ಯದ ಕೆ.ಆರ್. ಸಾಗರವನ್ನು ಈಗಾಗಲೇ ನಿರ್ಮಿಸಲಾಗಿದೆ.

2. ಹೆಚ್ಚಿನ ಸಂಗ್ರಹಣೆಯ 45 ಟಿ.ಎಂ.ಸಿ. ಫೀಟಿನ ಅಡಿಯಲ್ಲಿ ಕೆಳಗಿನ ಯೋಜನೆಗಳನ್ನು ಸೂಚಿಸಲಾಗಿದೆ.

ಅ) 217 ಟಿ.ಎಂ.ಸಿ. ಫೀಟು ಸಾಮರ್ಥ್ಯದ ಹೇಮಾವತಿ ಪ್ರಾಜೆಕ್ಟ್ ನಿರ್ಮಾಣದ ಹಂತದಲ್ಲಿದೆ.

ಬ) 5 ಟಿ.ಎಂ.ಸಿ. ಫೀಟು ಸಾಮರ್ಥ್ಯದ ಕಂಬಡಾಕಡಾ (ಕಾವೇರಿ ಅಣೆಕಟ್ಟು), ಪರಿಶೀಲನೆಯಲ್ಲಿದೆ.

3. ಅ) ಮದ್ರಾಸಿನ ಭವಾನಿ ಜಲಾಶಯದ ವಿರುದ್ಧ 19.2 ಟಿ.ಎಂ.ಸಿ. ಫೀಟು ಸಾಮರ್ಥ್ಯದ ಕಬಿನಿ ಪ್ರಾಜೆಕ್ಟವು ನಿರ್ಮಾಣದ ಹಂತದಲ್ಲಿದೆ.

ಬ) ಮದ್ರಾಸಿನ ಅಮರಾವತಿಯ ಜಲಾಶಯದ ವಿರುದ್ಧ ಸಂಗ್ರಹಣೆಯ ಶಕ್ತಿಯ 1.1. ಟಿ.ಎಂ.ಸಿ. ಫೀಟಿನ ಸುವರ್ಣಾವತಿ ಅಣೆಕಟ್ಟು ನಿರ್ಮಾಣದ ಹಂತದಲ್ಲಿದೆ.

ಕ) ಹೌದು.

ಡ) ಈ ಎಲ್ಲ ಸತ್ಯಾಂಶಗಳನ್ನು ಪರಿಶೀಲಿಸಲು, ಒಂದು ಸಮಿತಿಯು ತನ್ನ ವರದಿಯನ್ನು ಸಲ್ಲಿಸಿರುತ್ತದೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

ಒಪ್ಪಂದದ ಅವಧಿ ಯಾವಾಗ ಅಂತ್ಯಗೊಳ್ಳುವುದು ?

ಶ್ರೀ ವೀರೇಂದ್ರ ಪಾಟೀಲ್ :-

ಒಪ್ಪಂದದ ಅವಧಿಯು 50 ವರ್ಷಗಳವರೆಗೆ ಇದೆ. ಅದು 1924 ರಿಂದ ಪ್ರಾರಂಭವಾಗಿ 1974 ರಲ್ಲಿ ಅಂತ್ಯಗೊಳ್ಳುವುದು.

ಶ್ರೀ ರಾಜಯ್ಯ ಶೆಟ್ಟಿ :-

ಬ) ಉತ್ತರದಲ್ಲಿ, ನಿರ್ಮಾಣದ ಹಂತದಲ್ಲಿರುವ ಹೇಮಾವತಿ ಅಣೆಕಟ್ಟು, 21.7 ಟಿ.ಎಂ.ಸಿ. ಫೀಟು ಸಾಮರ್ಥ್ಯ ಹೊಂದಿದೆ ಎಂದು ತಿಳಿಸಲಾಗಿದೆ. ಅದು ಪ್ರಥಮ ಮತ್ತು ದ್ವಿತೀಯ ಹಂತಗಳನ್ನೊಳಗೊಂಡಿರುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್ :-

ಒಪ್ಪಂದದ ಬಗ್ಗೆ ಇದು ಸಾಮಾನ್ಯ ಪ್ರಶ್ನೆಯಾಗಿದೆ. ಕೈಗೆತ್ತಿಕೊಳ್ಳಲಾದ ಅಣೆಕಟ್ಟುಗಳ ಬಗ್ಗೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದು ಸಮರ್ಪಕ.

ಶ್ರೀ ಎಚ್.ಡಿ. ದೇವೇಗೌಡ :-

ಈ ವಿಷಯವನ್ನು ಪರಿಶೀಲಿಸುವುದಕ್ಕಾಗಿ ನೇಮಕವಾಗಿದ್ದ ಸಮಿತಿಯವರು ಕೊಟ್ಟಿರತಕ್ಕ ವರದಿ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ. ಆ ವರದಿಯ ವಿವರಗಳೇನು? ಮತ್ತು ಆ ವರದಿಯಲ್ಲಿ ನಮ್ಮ ಈ ನದಿಯ ನೀರಿನಲ್ಲಿರತಕ್ಕ ಷೇರನ್ನು 1974 ನೇ ಇಸವಿಯ ನಂತರವೂ ಪಡೆಯುವ ಹಕ್ಕು ನಮಗಿದೆಯೇ ಎಂಬುದರ ಬಗ್ಗೆ ಅವರೇನು ತಿಳಿಸಿದ್ದಾರೆಂಬುದನ್ನು ಹೇಳುತ್ತೀರಾ ? ಅದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಕಮಿಟಿಯವರು ವರದಿ ಮಾಡಿದ್ದಾರೆ. ಅದು ಅನೇಕ ವಾಲ್ಯುಂಗಳಲ್ಲಿ ಬಂದಿದೆ. ಆ ರೀತಿಯಾಗಿ ದೊಡ್ಡ ರಿಪೋರ್ಟ್ ಬಂದಿರುವುದರಿಂದ ಅದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತಿದ್ದೇವೆ ಇನ್ನೂ ಪೂರ್ತಿ ಮುಗಿಸಿಲ್ಲ. ಕಮಿಟಿಯನ್ನು ನೇಮಕ ಮಾಡಿದಂಥ ಉದ್ದೇಶ 1974 ರಲ್ಲಿ ಇದು ತೀರ್ಮಾನವಾಗಬೇಕೆಂದು ಕರಾರು ಆಗಿದೆ. ಅದು ಪುನರ್‌ಪರಿಶೀಲನೆಗೆ ಬರುತ್ತದೆ. ಆಗ ಫ್ರೆಷ್ ಅಗ್ರಿಮೆಂಟ್ ಮಾಡುವುದಕ್ಕಾಗುತ್ತದೆ. ಆಗ ನಮ್ಮ ನಿಲುಮೆ ಇದರ ಬಗ್ಗೆ ಏನಿರಬೇಕು, ಯಾವ ರೀತಿಯಲ್ಲಿ ನಮ್ಮ ಹಕ್ಕು ಭಾಧ್ಯತೆಗಳನ್ನು ಪ್ರೊಟೆಕ್ಟ್ ಮಾಡುವ ಸಲುವಾಗಿ ಪ್ರಯತ್ನಗಳನ್ನು ಮಾಡಬೇಕು ಎಂಬ ಬಗ್ಗೆ ಕಮಿಟಿಯವರು ಬೇಕಾದಷ್ಟು ಸವಿಸ್ತಾರವಾಗಿ ಮಾಹಿತಿಗಳನ್ನು ಕೊಟ್ಟಿದ್ದಾರೆ. ಅವರ ಶಿಫಾರಸ್ಸುಗಳನ್ನೂ ಸಹ ಕೊಟ್ಟಿದ್ದಾರೆ. ನಾನೇ ಇನ್ನೂ ವರದಿಯನ್ನು ನೋಡಿಲ್ಲ. ಆ ವರದಿ ಇನ್ನೂ ತಜ್ಞರ ಪರಿಶೀಲನೆಯಲ್ಲಿಯೇ ಇರುತ್ತದೆ. ಅದರ ಬಗ್ಗೆ ಈಗ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್.ಎನ್. ನಂಜೇಗೌಡ :-

ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ಯಾವ ಒಂದು ಆಧಾರದ ಮೇಲೆ ಮೈಸೂರಿಗೆ ಕಾವೇರಿ ಬೇಸಿನ್‌ನಿಂದ ಹೊಸದಾಗಿ ಜಾಸ್ತಿ ಪ್ರದೇಶಗಳನ್ನು ಸೇರುವ ಕಾರಣವಿತ್ತೋ ಅದೇ ಒಂದು ಆಧಾರದ ಮೇಲೆ ಈಗ ಇರತಕ್ಕ ಕರಾರನ್ನು ರಿವೋಕ್ ಮಾಡಿ ನಮ್ಮ ಹಕ್ಕನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ :-

ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ನಾನಾ ರೀತಿಯಲ್ಲಿ ನಮಗೆ 1924 ರ ಅಗ್ರಿಮೆಂಟ್ ರಿವೈಸ್ ಮಾಡಬೇಕೆಂದು ಒತ್ತಾಯಪಡಿಸಿದ್ದೇವೆ. ಆದರೆ ಮದ್ರಾಸ್ ಸರ್ಕಾರದವರು ಅದಕ್ಕೆ ಒಪ್ಪಲಿಲ್ಲ. ಅದನ್ನು 1974 ರ ಮೇಲೇಯೇ ವಿಚಾರ ಮಾಡಬೇಕಾಗಿದೆ. ಅದರಿಂದ ಈಗ ಅದನ್ನು ಒಪ್ಪುವುದಿಲ್ಲವೆಂದು ಹೇಳಿದ ಮೇಲೆ, ನಮಗೆ ಎರಡನೆಯ ಹಾದಿ ಬೇರೆ ಇರಲಿಲ್ಲ. ಆದ್ದರಿಂದ 1974ರಲ್ಲಿ ನಮ್ಮ ಹಕ್ಕು ಬಾಧ್ಯತೆಗಳನ್ನು ಯಾವ ರೀತಿ ಉಳಿಸಿಕೊಳ್ಳಬೇಕು, ಅದರ ಬಗ್ಗೆ ನಮ್ಮ ನಿಲುಮೆ ಯಾವ ರೀತಿ ಇರಬೇಕೆಂಬುದನ್ನು ಕಮಿಟಿಯವರು ಇನ್ನೂ ವಿಚಾರಮಾಡುತ್ತಿದ್ದಾರೆ. ನಾವೂ ಅದರ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪಾ :-

ಕಾವೇರಿ ಜಲಾಶಯದ ಹೊಸ ಪ್ರದೇಶಗಳು ನಮಗೆ ಸೇರಿದ ಮೇಲೆ 1924 ರ ಅಗ್ರಿಮೆಂಟ್ ಪ್ರಕಾರ ನೀರಿನ ಪ್ರಮಾಣ ನಮಗೆ ಬರುವುದು ಎಷ್ಟಿತ್ತೋ ಅದಕ್ಕಿಂತ ಹೆಚ್ಚು ಈಗ ಎಷ್ಟು ನೀರನ್ನು ಕೊಟ್ಟಿದ್ದಾರೆ ಮತ್ತು ಎಷ್ಟು ಸ್ಟೋರೇಜ್ ಕೆಪಾಸಿಟಿಯನ್ನು ನೀವು ಒಪ್ಪಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ಎರಡು ಹೊಸ ಪ್ರದೇಶಗಳು ನಮ್ಮಲ್ಲಿ ಬಂದಿದ್ದರೂ ಕೊಳ್ಳೇಗಾಲದಲ್ಲಿ ಹರಿಯುವಂಥ ಗುಂಡ್ಲು ನದಿ, ಕೂರ್ಗಿನಲ್ಲಿ ಹರಿಯುವಂಥ ಹಾರಂಗಿ ನದಿ-ಇವು ಎರಡೂ ನಾನ್-ಷೆಡ್ಯೂಲ್ಡ್ ರಿವರ್ಸ್ ಆಗಿವೆ. ಇವೆರಡೂ ಈ ಅಗ್ರಿಮೆಂಟ್‌ನಲ್ಲಿ ಬರಲಾರದಂಥ ನದಿಗಳಾಗಿವೆ. ಅವುಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ ಅಗ್ರಿಮೆಂಟ್ ಅಡ್ಡಿ ಬರುತ್ತದೆಯೇ ಎನ್ನುವ ಬಗ್ಗೆ ಇನ್ನೂ ವಿಚಾರಮಾಡಬೇಕಾಗಿದೆ.

ಶ್ರೀ ಎನ್.ಎ. ಚೆನ್ನೇಗೌಡ :-

ಹಿಂದಿನ ಕರಾರಿನ ಪ್ರಕಾರ ಆ ನಾಲೆಗಳಲ್ಲಿರತಕ್ಕ ನೀರನ್ನು ಯಾರು ಉಪಯೋಗಿಸಬೇಕೆಂದು ಸರ್ಕಾರದ ಅಭಿಪ್ರಾಯ ?

ಶ್ರೀ ವೀರೇಂದ್ರ ಪಾಟೀಲ್ :-

ಕೆ.ಆರ್.ಎಸ್.ಕಮಿಟಿ ಎಂಬುದಾಗಿ ಇದೆ. ಅವರು ಅದನ್ನು ಉಪಯೋಗಿಸುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ :-

(ಅ) ಪ್ರಶ್ನೆಗೆ ಉತ್ತರವಾಗಿ (2) ರಲ್ಲಿ 45 ಟಿ.ಎಂ.ಸಿ.ಫೀಟ್ ಹೆಚ್ಚಿನ ನೀರನ್ನು ಶೇಖರಿಸಿ ಯೋಜನೆಗಳನ್ನು ಕೈಗೊಳ್ಳುವಾಗ, ಹೇಮಾವತಿ ಯೋಜನೆಗೆ 21.7 ಟಿ.ಎಂ.ಸಿ.ಫೀಟನಷ್ಟೂ ಕಂಬದ ಕಡ ಯೋಜನೆಗೆ 5 ಟಿ.ಎಂ.ಸಿ. ಫೀಟನಷ್ಟೂ, ಉಪಯೋಗಿಸುವ ಬಗ್ಗೆ ಸರ್ಕಾರದವರು ನಿರ್ಧಾರ ತೆಗೆದುಕೊಂಡಿದ್ದು ಆಯಿತು. ಉಳಿದ ನೀರನ್ನು ಉಪಯೋಗಿಸುವ ಬಗ್ಗೆ ಸರ್ಕಾರ ಏನು ನಿರ್ಧಾರ ಮಾಡಿದೆ ? ಯಾವ್ಯಾವ ನಿರ್ಣಯಗಳನ್ನು ಕೈಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್ :-

ಇವತ್ತು ಪ್ರಾರಂಭ ಮಾಡಿದ ಕೆಲಸಗಳ ಬಗ್ಗೆ ವಿವರವಾಗಿ ಹೇಳಿದ್ದೇನೆ. ಇದರ ಬಗ್ಗೆ ಅನೇಕ ಯೋಜನೆಗಳ ವಿಚಾರವನ್ನೂ ಸಹ ಮಾಡಿದ್ದೇನೆ ಕಾವೇರಿ ಬೇಸಿನ್‌ನಲ್ಲಿ ಎಷ್ಟು ಯೋಜನೆಗಳನ್ನು ಇನ್‌ವೆಸ್ಟಿಗೇಟ್ ಮಾಡಿದ್ದೇನೆ. ಎಷ್ಟು ಯೋಜನೆಗಳನ್ನು ನಾವು ಇನ್ನೂ ತೆಗೆದುಕೊಳ್ಳಬಹುದೆಂಬುದಕ್ಕೆ ಬೇರೆ ಪ್ರಶ್ನೆಗಳನ್ನು ಕೇಳಿದರೆ ಆಗ ಉತ್ತರ ಹೇಳಬಹುದು.

ಶ್ರೀ ಎಂ.ಕೆ. ಬೊಮ್ಮೇಗೌಡ :-

1924ನೇ ಇಸವಿಯ ಅಗ್ರಿಮೆಂಟ್ ಪ್ರಕಾರ 1974 ನೇ ಇಸವಿಯ ಹೊತ್ತಿಗೆ 50 ವರ್ಷಗಳಾಗುತ್ತದೆ. ಆದರೆ ಇದುವರೆಗೂ ಆ ನೀರನ್ನು ಇವರು ಉಪಯೋಗಿಸಿಕೊಂಡಿಲ್ಲ. ಅಂದ ಮೇಲೆ 1974 ನೇ ಇಸವಿಯವರೆಗೂ ಪೂರ್ತಿಯಾಗಿ ಇವರು ಆ ನೀರನ್ನು ಉಪಯೋಗಿಸುವ ಹಾಗೆ ಇಲ್ಲ. ಏಕೆಂದರೆ ಮದ್ರಾಸಿನಲ್ಲಿ ಭವಾನಿ ಜಲಾಶಯ ಮತ್ತು ಅಮರಾವತಿ ಜಲಾಶಯಗಳನ್ನು ಕಟ್ಟಿದ್ದಾರೆ. ಆದ್ದರಿಂದ ಮತ್ತೆ 1974 ನೇ ಇಸವಿಯಲ್ಲಿ ಈ ಒಂದು ಅಗ್ರಿಮೆಂಟಿಗೆ ಕೂತರೆ ನಮಗೆ ಬರುವ ನೀರಿನಲ್ಲಿ ಹೆಚ್ಚಿಗೆ ಅವರು ಪುನಃ ಪಾಲು ತೆಗೆದುಕೊಳ್ಳುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್ :-

ಆ ಅಗ್ರಿಮೆಂಟ್ ಪ್ರಕಾರ ನಾವು ನೀರನ್ನು ಉಪಯೋಗ ಮಾಡಬೇಕು. ನಮ್ಮ ನೀರನ್ನು ಉಪಯೋಗ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ಆ ನೀರನ್ನು ಉಪಯೋಗ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಂಡಿದ್ದೇನೆ.

ಶ್ರೀ ಎನ್. ಬಸವರಾಜು :-

(ಬಿ) ಗೆ ಉತ್ತರವಾಗಿ 44.827 ಸಹಸ್ರ ದಶಲಕ್ಷ ಘನ ಅಡಿಗಳಷ್ಟು ಧಾರಣಾಶಕ್ತಿಯುಳ್ಳ ಕೃಷ್ಣರಾಜಸಾಗರವನ್ನು ಈಗಾಗಲೇ ನಿರ್ಮಿಸಲಾಗಿದೆ, 45 ಸಹಸ್ರ ದಶಲಕ್ಷ ಘನ ಅಡಿಗಳಷ್ಟು ಹೆಚ್ಚಿನ ನೀರನ್ನು ಶೇಖರಿಸುವ ಬಗ್ಗೆ ಕೆಲವು ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ನಾನಾ ಅಡಚಣೆಗಳು ಇರುವುದರಿಂದ ಈಗ ಹಾಲಿ ಇರತಕ್ಕ ಪಿಕಪ್‌ಗಳ ಕೈಪಾಸಿಟಿಯನ್ನು ಹೆಚ್ಚು ಮಾಡಿದರೆ ಹೆಚ್ಚು ಪ್ರದೇಶ ನೀರಾವರಿಯಾಗುತ್ತದೆ. ಆದ್ದರಿಂದ ಈ ಬಗ್ಗೆ ತೀವ್ರವಾಗಿ ಕೆಲಸ ಮಾಡಲು ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಇಲ್ಲಿ ಬಂದಿರುವ ಪ್ರಶ್ನೆ ಬೇರೆ, ಅಗ್ರಿಮೆಂಟ್ ಪ್ರಕಾರ ನಮ್ಮ ನೀರನ್ನು ಉಪಯೋಗ ಮಾಡುವುದಕ್ಕೆ ಯಾವ ರೀತಿ ಮಾಡಬೇಕು ಎನ್ನುವುದು ಪ್ರಶ್ನೆ ಆದ್ದರಿಂದ ಆ ನೀರನ್ನು ಉಪಯೋಗ ಮಾಡುವುದಕ್ಕೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಬೇಕಾಗುತ್ತದೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

ರಾಜ್ಯಗಳ ಮರುವಿಂಗಡನೆಯ ನಂತರ, ತಾವು (ಡ) ಕ್ಕೆ ಉತ್ತರಿಸಿದಂತೆ, ಅದು ಈಗಲೂ ಪರಿಶೀಲನೆಯಲ್ಲಿದೆ. ತಾವು ಅದನ್ನು ಪರಿಶೀಲಿಸಲು, ತೆಗೆದುಕೊಳ್ಳುವ ಕಾಲವೆಷ್ಟು ಎಂಬುದರ ಬಗ್ಗೆ ನಾನು ತಿಳಿಯಬಹುದೇ ?

ಶ್ರೀ ವೀರೇಂದ್ರ ಪಾಟೀಲ್ :-

ರಾಜ್ಯಗಳ ಪುನರ್ ವಿಂಗಡಣೆ ಆದ ಮೇಲೆ ನಾವು ಮದ್ರಾಸ್ ಸರ್ಕಾರಕ್ಕೆ ಬರೆದಿದ್ದೇವೆ. ಹಿಂದೆ ಆದ ಅಗ್ರಿಮೆಂಟ್‌ನ್ನು ರಿವೈಜ್ ಮಾಡಬೇಕೆಂದು ನಾವು ಕೇಳಿದ್ದಕ್ಕೆ ಅವರು ಒಪ್ಪಲಿಲ್ಲ. ನೀವು ಏನಾದರೂ ಕೇಳಬೇಕಾದರೆ 1974ನೇ ಇಸವಿಯಲ್ಲಿ ಕೇಳಬೇಕು. ಅದರ ಒಳಗಡೆ ನಿಮ್ಮ ಜೊತೆಯಲ್ಲಿ ಮಾತುಕತೆಗೆ ನಾವು ತಯಾರಿಲ್ಲ ಎಂದು ಹೇಳಿದರು. ಅದಕ್ಕಾಗಿ ನಾವು ಎರಡನೇ ಪ್ರಯತ್ನ ಏನು ಮಾಡಬೇಕೆಂಬ ಬಗ್ಗೆ ಪರ್ಯಾಲೋಚಿಸಲು ಒಂದು ಕಮಿಟಿಯನ್ನು ನೇಮಕ ಮಾಡಿ ಅವರಿಂದ ವರದಿಯನ್ನು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪಾ :-

ಯಾವ ವೇಳೆಯಲ್ಲಿ ನೀರನ್ನು ಉಪಯೋಗಿಸದಿದ್ದಾಗ ಅದನ್ನು ಉಪಯೋಗಿಸಲು ಅನುಮತಿ ಕೊಡುವ ಬಗ್ಗೆ ಮದ್ರಾಸ್ ಸರಕಾರವು ಪ್ರಶ್ನಿಸಿದರೆ, 1974 ರ ನಂತರ, ಅಂಥ ವಿಪತ್ತನ್ನು ತಡೆಯಲು, ಮತ್ತು ಮೈಸೂರು ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಯಾವ ಕ್ರಮಗಳನ್ನು ಸೂಚಿಸುವಿರಿ ?

ಶ್ರೀ ವೀರೇಂದ್ರ ಪಾಟೀಲ್ :-

ಶಕ್ಯವಿದ್ದ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಕಾರ್ಯವು ಪ್ರಗತಿಯಲ್ಲಿದೆ. ಮೈಸೂರು ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಇಂಜನಿಯರರ ಒಂದು ಸಮಿತಿಯನ್ನು ನಾವು ರಚಿಸಿದ್ದೆವು. ಅವರು ಕೂಲಂಕುಷವಾಗಿ ಅಧ್ಯಯನ ನಡೆಸಿ, ತಮ್ಮ ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯು 4 ಅಥವಾ 5 ಸಂಪುಟಗಳಲ್ಲಿದೆ. ಆ ಎಲ್ಲ ಸಂಪುಟಗಳನ್ನು ಈಗಾಗಲೇ, ಸ್ವೀಕರಿಸಿ ಅವುಗಳನ್ನು ಪರೀಕ್ಷಿಸಲಾಗಿದೆ. 1974 ರ ವೇಳೆಗೆ, ನಾವು ವಿಪತ್ತನ್ನು ಎದುರಿಸಲು ಸಿದ್ಧರಿದ್ದೇವೆಂಬುದರ ಬಗ್ಗೆ ಆಶ್ವಾಸನೆ ನೀಡುತ್ತೇವೆ.

## 4. ಕನಕಪುರ ತಾಲ್ಲೂಕಿನ ಮೇಕೆದಾಟಿನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಕುರಿತು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ, ಲೋಕೋಪಯೋಗಿ ಸಚಿವರಾಗಿ ಶ್ರೀ ವೀರೇಂದ್ರ ಪಾಟೀಲರು ನೀಡಿದ ಉತ್ತರಗಳು. 11ನೇ ಮಾರ್ಚ್ 1968.

ಶ್ರೀ ಎಚ್. ಪುಟ್ಟದಾಸ ( ಸಾತನೂರು ) :-

ಅ) ಕನಕಪುರ ತಾಲೂಕಿನಲ್ಲಿ ಪ್ರಾರಂಭಿಸಲು, ಸೂಚಿಸಿದ್ದು, ಹೈಡ್ರೋ - ಎಲೆಕ್ಟ್ರಿಕ್ ಪ್ರೊಜೆಕ್ಟನ, ಸಮೀಕ್ಷೆ ಕೈಕೊಂಡುವುದರ ಬಗ್ಗೆ.

ಬ) ನೇಮಕಾತಿ ಮಾಡಿದ ಸಿಬ್ಬಂದಿ ವರ್ಗದ ಮಾಹಿತಿಯ ಬಗ್ಗೆ ಮತ್ತು ಸ್ಥಾಪನೆಯ ಬಗ್ಗೆ ಒಟ್ಟು ಖರ್ಚಿನ ಬಗ್ಗೆ.

ಕ) ತನಿಖೆಯ ಸಿಬ್ಬಂದಿಯನ್ನು ಯಾವಾಗ ನೇಮಕ ಮಾಡಲಾಯಿತು ಮತ್ತು ಅದು ಎಲ್ಲಿಯವರೆಗೆ ಮುಂದುವರೆಯುವುದರ ಬಗ್ಗೆ.

ಡ) ಹೊಗೆನಕಾಲದ ಜಂಟಿ ಯೋಜನೆಗೆ ಸಂಬಂಧಿಸಿದಂತೆ, ಅವರು ಮದ್ರಾಸ್ ಸರಕಾರದೊಂದಿಗೆ ಯಾವುದಾದರೂ ಒಪ್ಪಂದಕ್ಕೆ ಬಂದಿದ್ದಾರೆಯೇ ?

ಇ) ಹಾಗಿದ್ದಲ್ಲಿ, ಒಪ್ಪಂದದ ಷರತ್ತುಗಳ ಬಗ್ಗೆ ತಿಳಿಸುವಿರಾ ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಸಚಿವರು) :-

ಅ) ಹೌದು.

ಬ) ಅನುಬಂಧದಲ್ಲಿಯ ಹೇಳಿಕೆಯನ್ನು ನೋಡಿ.

ಕ) ಫೆಬ್ರವರಿ 1963 ರ ಅವಧಿಯಲ್ಲಿ ವಿಭಾಗವನ್ನು ರಚಿಸಲಾಯಿತು. 1-4-1968 ರಿಂದ ಈ ವಿಭಾಗವನ್ನು ರದ್ದು ಮಾಡುವುದು ಪರಿಶೀಲನೆಯಲ್ಲಿದೆ.

ಡ) ಇಲ್ಲ

ಇ) ಉದ್ಭವಿಸುವುದಿಲ್ಲ.

### ವಿವರಣಾ ಪಟ್ಟಿ

ಮೇಕೆದಾಟು ( ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗೆ ) ಗೆ ಸಂಬಂಧಿಸಿದ ಸಿಬ್ಬಂದಿಯನ್ನು ನೇಮಿಸಿದ ವಿವರ ಮತ್ತು ಅದರ ಸಿಬ್ಬಂದಿಗಾಗಿ ಖರ್ಚು ಮಾಡಿದ (ವಾರ್ಷಿಕ ) ಬಗ್ಗೆ -

| ಹುದ್ದೆಯ ಹೆಸರು - | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|
| ಎಗ್ಜಿಕ್ಯೂಟೀವ್ ಇಂಜನಿಯರ್ | 01 |
| ಸಹಾಯಕ ಇಂಜನಿಯರರು | 02 |

| | |
|---|---|
| ಕಿರಿಯ ಎಂಜನಿಯರರ | 10 |
| ಮೇಲ್ವಿಚಾರಕರು | 04 |
| ಡ್ರಾಫ್ಟಮೆನ್ | 02 |
| ಟ್ರೆಸರ್ಸ್ | 02 |
| ಪ್ರಥಮ ದರ್ಜೆಯ ಗುಮಾಸ್ತರು | 04 |
| ದ್ವಿತೀಯ ದರ್ಜೆಯ ಗುಮಾಸ್ತರು | 04 |
| ದ್ವಿತೀಯ ದರ್ಜೆಯ ಬೆರಳಚ್ಚುಗಾರರು | 01 |
| ಚಪರಾಶಿಗಳು ( ಜವಾನರು ) | 07 |
| ವಾಚ್‌ಮೆನ್ | 02 |
| ಲಸ್ಕರ್ಸ್ | 02 |

| ವರ್ಷ | | ಖರ್ಚು |
|---|---|---|
| 1963-64 | ರೂ. | 81,807-00 |
| 1964-65 | ರೂ. | 1,18,907-00 |
| 1965-66 | ರೂ. | 1,35,797-00 |
| 1966-67 | ರೂ. | 1,39,807-00 |
| 1967-68 (ಜನವರಿ ಅಂತ್ಯದವರೆಗೆ) | ರೂ. | 1,25,398-00 |
| | ಒಟ್ಟು | 6,01,716-00 |

ಶ್ರೀ ಎಚ್. ಪುಟ್ಟದಾಸ್ :-

ಮೇಕೆದಾಟಿನಲ್ಲಿ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಇದುವರೆಗೆ ಎಷ್ಟು ಸಾರಿ ಸರ್ವೆ ಆಗಿದೆ ಮತ್ತು ಪ್ರತಿ ಸಾರಿ ಸರ್ವೆ ನಡೆಸಿದಾಗಲೂ ಆದಂಥ ಎಸ್ಟಿಮೇಟ್ ಕಾಸ್ಟ್ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ :-

ಎಸ್ಟಿಮೇಟ್ ಇನ್ನೂ ಆಗಿಲ್ಲ. ಸಮೀಕ್ಷೆ ನಡೆಸಲಾಗುತ್ತಿದೆ. ಕೊನೆಗೆ ನಂತರ ಸಮೀಕ್ಷೆ ಪೂರೈಸಿದಂತೆ ಕಾಣುತ್ತದೆ.

ಶ್ರೀ ಎಂ. ಬಸವರಾಜು :-

ಹೊಗೇನಕಲ್ ಯೋಜನೆಯನ್ನು ಕಟ್ಟುವ ಬಗ್ಗೆ ಮದ್ರಾಸ್ ಸರ್ಕಾರದವರಿಗೆ ಆತುರವಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೋ ?

ಶ್ರೀ ವೀರೇಂದ್ರ ಪಾಟೀಲ್ :-

ಮದ್ರಾಸ್ ಸರ್ಕಾರದವರು ಹೊಗೇನಕಲ್ ಬಳಿ ಒಂದು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಕಟ್ಟಬೇಕೆಂದು ಇನ್‌ವೆಸ್ಟಿಗೇಟ್ ಮಾಡಿದ್ದಾರೆ. ನಾವು ಸಹ ನಮ್ಮ ಬೌಂಡರಿಯಲ್ಲಿ ಇನ್‌ವೆಸ್ಟಿಗೇಟ್ ಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್ :-

ರಾಯರೇ, ಯೋಜನಾ ಆಯೋಗದ ಸದಸ್ಯರಾದ ಶ್ರೀ ಆರ್. ವೆಂಕಟರಾಮನ್, ಹೇಳಿಕೆಯ ಪ್ರಕಾರ, ಸಾಕಷ್ಟು ವಿದ್ಯುಚ್ಛಕ್ತಿಯ ಲಭ್ಯವಿರುವುದರಿಂದ, ಯಾವುದೇ ವಿದ್ಯುಚ್ಛಕ್ತಿಯ ಯೋಜನೆಗಳನ್ನು ತೆಗೆದುಕೊಳ್ಳಬಾರದು. ಮುಂದೆ ಶ್ರೀ ರಾಮಕೃಷ್ಣ ಹೆಗಡೆಯವರು, ಹೇಳಿದಂತೆ ನಮ್ಮ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯು ಸಾಕಷ್ಟು ಇರುವುದು. ಅಂದಾಗ, ಈ ಯೋಜನೆಯನ್ನು ಕೈಬಿಡಬೇಕೆಂದು ಪರಿಗಣಿಸಬಹುದೇ ?

ಶ್ರೀ ವೀರೇಂದ್ರ ಪಾಟೀಲ್ :-

ರಾಯರೇ, ಯಾವುದೇ ಯೋಜನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ನಾಲ್ಕನೆಯ ಯೋಜನೆಯ ಅಂತಿಮ ರೂಪದ ಸಮಯದಲ್ಲಿ, ಆದ್ಯತೆಯ ಆಧಾರದ ಮೇಲೆ ಈ ಯೋಜನೆಯನ್ನು ತೆಗೆದುಕೊಳ್ಳಲಾಗುವುದು. ರಾಜ್ಯ ಸರಕಾರಕ್ಕೆ ಸಂಬಂಧಿಸಿದಂತೆ, ನಾವು ಕಾಳಿನದಿ ಅಣೆಕಟ್ಟನ್ನು ಬಿಟ್ಟು, ಈ ಯೋಜನೆಗೆ ಆದ್ಯತೆಯನ್ನು ಕೊಡುವುದಾಗುವುದಿಲ್ಲ. ಈ ಯೋಜನೆಯನ್ನು ಇನ್ನೂ ಅಂತಿಮವಾಗಿ ನಿರ್ಧರಿಸುವುದಿಲ್ಲ. ಏಕೆಂದರೆ, ನಾವು ಮದ್ರಾಸ್ ಸರಕಾರದಿಂದ ಮಾಹಿತಿಯನ್ನು ಪಡೆಯಬೇಕಾಗಿದೆ. ಆ ಮಾಹಿತಿಯು ಇನ್ನೂ ಸಿಗುತ್ತಿಲ್ಲ. ಅದಕ್ಕಾಗಿಯೇ, ಆ ಯೋಜನೆಯ ಬಗ್ಗೆ ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ.

ಶ್ರೀ ಎಂ.ಎಸ್. ಕೃಷ್ಣನ್ :-

ಇದು ಹೊಗೆನಕಲ್ ಅಣೆಕಟ್ಟಿಗೆ ಅನ್ವಯಿಸುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್ :-

ಹೌದು, ಈ ಅಣೆಕಟ್ಟು ಮದ್ರಾಸ್ ಮತ್ತು ಮೈಸೂರಿನ ಸರಹದ್ದಿನ ಬದಿಯಲ್ಲಿದೆ. ಎರಡು ರಾಜ್ಯಗಳು ಅದನ್ನು ಜಂಟಿಯಾಗಿ, ತೆಗೆದುಕೊಳ್ಳಬೇಕಾಗುತ್ತದೆ. ಅವರು ತನಿಖೆ ಮಾಡಿರುವರು. ಅದು ನಮಗೆ ಶಕ್ಯವಾಗುವುದೆಂದು ನಾವು ವಿಚಾರಿಸಿದ್ದೇವೆ. ನಮ್ಮ ಸರಹದ್ದಿನಲ್ಲಿ, ಅದಕ್ಕೆ ಬೇಕಾಗುವ ಸೂಕ್ತ ನಿವೇಶನಗಳು ನಮಗೆ ಲಭಿಸಿವೆ. ನಾವು ಮತ್ತು ಮದ್ರಾಸ್ ಸರಕಾರವು ಆ ರೀತಿಯ ತನಿಖೆ ನಡೆಸುತ್ತಿದ್ದೇವೆ. ಆದರೆ ಇನ್ನೂ ಯಾವ ನಿರ್ಧಾರಕ್ಕೆ ನಾವು ಬಂದಿರುವುದಿಲ್ಲ.

ಶ್ರೀ ಎಂ. ಬಸವರಾಜು :-

ಮದ್ರಾಸ್ ಸರ್ಕಾರದ ಹಾಗೂ ಮೈಸೂರು ಸರ್ಕಾರ ಇನ್‌ವೆಸ್ಟಿಗೇಷನ್ ಮಾಡುತ್ತಿವೆ ಎಂದು ಹೇಳಿದ್ದೀರಿ. ಇವೆರಡರಲ್ಲಿ ಯಾವುದು ಎಸ್ಟಿಮೇಟ್ ಕಡಿಮೆ ಬರುತ್ತದೆ ಅದನ್ನು

ತೆಗೆದುಕೊಂಡು ಕೊಳ್ಳುತ್ತೇವೆಂದು ಕೇಂದ್ರ ಸರ್ಕಾರದ ಅಭಿಪ್ರಾಯವಿದೆಯೆಂದು ನನ್ನ ಗಮನಕ್ಕೆ ಬಂದಿದೆ, ಇದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್ :-

ಇನ್ನೂ ನಾವು ಇನ್‌ವೆಸ್ಟಿಗೇಶನ್ ಪೂರ್ತಿ ಮಾಡಿಲ್ಲ. ಇನ್‌ವೆಸ್ಟಿಗೇಶನ್ ಮಾಡಿ ಡೇಟಾ ಕಲೆಕ್ಟ್ ಮಾಡಿದ ಮೇಲೆ ಪ್ಲಾನ್ ಎಸ್ಟಿಮೇಟ್ ಮಾಡುವ ಪ್ರಶ್ನೆ ಬರುತ್ತದೆ. ಇದುವರೆಗೂ ಪ್ರಾಜೆಕ್ಟ್ ರಿಪೋರ್ಟ್ ಕಳುಹಿಸುವುದಕ್ಕೆ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರಕ್ಕೆ ಕಳಿಸಿದ ಮೇಲೆ ಅವರ ಪ್ರಾಜೆಕ್ಟ್ ರಿಪೋರ್ಟ್ ಫೀಸಿಬಲ್ಲೋ, ನಮ್ಮ ರಿಪೋರ್ಟ್ ಫೀಸಿಬಲ್ಲೋ ಎಂದು ನಂತರ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ :-

ಆರು ಲಕ್ಷ ರೂಪಾಯಿ ಖರ್ಚು ಮಾಡಿ 5 ವರ್ಷವಾಗಿದ್ದರೂ ಎಸ್ಟಿಮೇಟ್ ಆಗದಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್ :-

ಇದೀಗ ಹೇಳಿದೆ. ನಮಗೆ ಬೇಕಾಗಿರತಕ್ಕಂತಹ ಮಾಹಿತಿ ಮದ್ರಾಸ್ ಸರ್ಕಾರದವರು ಒದಗಿಸದಿರುವ ಪರಿಸ್ಥಿತಿ ಇರುವುದರಿಂದ ನಮ್ಮ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವುದಕ್ಕೆ ಆಗಲಿಲ್ಲ. ಅವರು ನಮಗೆ ಬೇಕಾಗಿರತಕ್ಕಂತಹದ್ದನ್ನು ಸಪ್ಲೈ ಮಾಡಿದಾಗ ಪ್ರಾಜೆಕ್ಟ್ ರಿಪೋರ್ಟ್ ಫೈನಲೈಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ :-

ಮೇಕೆದಾಟಿನ ಜಲವಿದ್ಯುತ್ ಯೋಜನೆಯನ್ನು ಪರಿಶೀಲನೆ ಮಾಡುವುದಕ್ಕೆ ಸಿಬ್ಬಂದಿ ವರ್ಗಕ್ಕೆ 6,01,716 ರೂಪಾಯಿಯನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಈಗ ಇನ್ನೂ ಪರಿಶೀಲನೆಯಲ್ಲಿ ಇದೆ ಎಂದು ಹೇಳುತ್ತಿದ್ದೀರಿ. ಈ ಸಿಬ್ಬಂದಿ ವರ್ಗಕ್ಕೆ ಇಷ್ಟು ಖರ್ಚು ಮಾಡಿದ್ದು ಏಕೆ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. ನಾನು ಹೇಳಿದುದನ್ನು ಬಹುಶಃ ಸರಿಯಾಗಿ ಕೇಳಿದರೆ ಅರ್ಥವಾಗುತ್ತಿತ್ತು. ಈಗ ನಮಗೆ ಬೇಕಾಗಿರತಕ್ಕದ್ದು, ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಬೇಕಾದರೆ, ಅದಕ್ಕೆ ಅನೇಕ ಅಂಕಿ ಅಂಶಗಳು ಬೇಕಾಗುತ್ತದೆ. ಅದನ್ನು ಕಲೆಕ್ಟ್ ಮಾಡಬೇಕಾಗುತ್ತದೆ. ಈ ರೀತಿ ಎಲ್ಲಾ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಖರ್ಚಾಗುತ್ತದೆ. ಇಲ್ಲಿಯವರೆಗೂ ಕೆಲಸ ಮಾಡಿದ್ದಾರೆ ಆದರೆ ಮದ್ರಾಸ್ ಸರ್ಕಾರದಿಂದ ಸ್ವಲ್ಪ ಮಟ್ಟಿಗೆ ಮಾಹಿತಿ ಬರಬೇಕಾಗಿದೆ. ಉದಾಹರಣೆಗೆ ಮದ್ರಾಸ್ ಸರ್ಕಾರದವರು ಹೊಗೇನಕಲ್‌ನ ರಿಪೋರ್ಟ್ ತಯಾರು ಮಾಡಿದ್ದಾರೆ. ಎಗ್ಸಿಸ್ಟಿಂಗ್ ನೀರಿನ ಮೇಲೆ, ಈಗ ನೀರು ಏನು ಹರಿಯುತ್ತಿದೆ ಅದರ

ಮೇಲೆ ತಯಾರುಮಾಡಿದ್ದಾರೆ. ನಾವು ಕೇಳಿದ ಮಾಹಿತಿ ಇನ್ನೂ ಒದಗಿಸಿಲ್ಲ. ಅದು ಇಲ್ಲದೆ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

ರಾಯರೇ, ತಾವು ತಿಳಿಸಿದಂತೆ, ತಮಗೆ ಬೇಕಾದ ಅಂಕಿ ಸಂಖ್ಯೆಗಳನ್ನು ಮದ್ರಾಸ್ ಸರಕಾರವು ಒದಗಿಸಿಲ್ಲ. ಏಕೆಂದರೆ, ಅವರಿಗೆ ಹೊಗೆನಕಲ್ ಬೇಕಾಗಿದೆ. ಕಾರಣ ಅದರ ಎಲ್ಲಾ ಮಾಹಿತಿ ನೀಡಲು ಅವರು ಒಪ್ಪುವುದಿಲ್ಲ. ಇದಕ್ಕೆ ಪರ್ಯಾಯವೇನು ?

ಶ್ರೀ ವೀರೇಂದ್ರ ಪಾಟೀಲ್ :-

ಒಂದು ವೇಳೆ ಅವರು ಮಾಹಿತಿಯನ್ನು ನೀಡಲು ತಿರಸ್ಕರಿಸಿದರೆ, ನಾವು ಕೇಂದ್ರ ಸರಕಾರವನ್ನು ವಿನಂತಿಸಿಕೊಳ್ಳಬಹುದು. ಈ ಸದನದ ವಿಶ್ವಾಸವನ್ನು ಕಾಯ್ದುಕೊಂಡು ನಾನು ಹೇಳುವುದಾದರೆ, ಈ ಪ್ರಾಜೆಕ್ಟ್‌ಗಾಗಿ, ನಾವು ಅಷ್ಟು ಅವಸರದಲ್ಲಿಲ್ಲ. ಏಕೆಂದರೆ, ಈಗಾಗಲೇ ನಾವು ಕಾಳಿನದಿಗಾಗಿ, ನಮ್ಮ ಯೋಜನೆಯನ್ನು ತಯಾರಿಸಿದ್ದೇವೆ. ಒಂದು ವೇಳೆ, ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ, ನಾವು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಕೈಗೆತ್ತಿಕೊಳ್ಳುವ ಪರಿಸ್ಥಿತಿಯಲ್ಲಿದ್ದರೆ, ನಾವು ಕಾವೇರಿ ಪ್ರದೇಶದಲ್ಲಿನ ಯಾವುದೇ ಪ್ರಾಜೆಕ್ಟ್‌ನ್ನು ಕೈಗೊಳ್ಳದೆ, ಕೇವಲ ಕಾಳಿನದಿಗೆ ಪ್ರಾಶಸ್ತ್ಯ ಕೊಡಬಹುದು.

ಶ್ರೀ ಎಚ್. ಸಿದ್ಧವೀರಪ್ಪಾ :-

ಮದ್ರಾಸ್ ಸರಕಾರವು ಮಾಹಿತಿಯನ್ನು ನೀಡಲು, ಎಲ್ಲಿಯ ತನಕ ತಡಮಾಡಬಹುದು?

ಶ್ರೀ ವೀರೇಂದ್ರ ಪಾಟೀಲ್ :-

ನನಗೆ ಖಚಿತ ಸಮಯಗೊತ್ತಿಲ್ಲ. ಆದರೆ, ಇದು ಕಳೆದ 3 ಅಥವಾ 4 ವರ್ಷಗಳವರೆಗೆ ಹಾಗೆಯೇ ನಡೆಯುತ್ತಿದೆ.

ಶ್ರೀ ಎಚ್. ಸಿದ್ಧವೀರಪ್ಪಾ :-

ಶರಾವತಿ ವಿದ್ಯುಚ್ಛಕ್ತಿಯನ್ನು ಬಳಕೆಗಾಗಿ ಸಿದ್ಧವಿರುವಾಗ, ಅದನ್ನು ಉಪಯೋಗಿಸಲು, ನಮಗೆ ಸಾಧ್ಯವಾಗದಿದ್ದಾಗ, ಈ ತನಿಖೆಗಳು ಸಮಂಜಸವಲ್ಲ ಅದನ್ನು ತಮಗೂ ಉಪಯೋಗವಿಲ್ಲದಿದ್ದಾಗ ಮತ್ತು ಭಾರತದಲ್ಲಿ ಉಳಿದ ರಾಜ್ಯಗಳಿಗೂ ಉಪಯೋಗಿಸಲು, ಅನುಮತಿ ನೀಡದಿದ್ದಾಗ, ಅದು ಸ್ವಾರ್ಥದ ನೀತಿಯಲ್ಲವೇ ? ರಾಷ್ಟ್ರೀಯ ದೃಷ್ಟಿಯಿಂದ ಅದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್ :-

ಯಾವುದೇ ವಿದ್ಯುಚ್ಛಕ್ತಿಯನ್ನು ನಮಗೆ ಲಭ್ಯವಿದ್ದಲ್ಲಿ, ನಾವು ನಮ್ಮ ರಾಜ್ಯದಲ್ಲಿ ಉಪಯೋಗಿಸುತ್ತಿದ್ದೇವೆ. ಹೆಚ್ಚಿನ ವಿದ್ಯುಚ್ಛಕ್ತಿಯನ್ನು ನಾವು ನೆರೆ ರಾಜ್ಯಗಳಿಗೆ ಸರಬರಾಜು ಮಾಡುತ್ತಿದ್ದೇವೆ. ನಾವು ವಿದ್ಯುಚ್ಛಕ್ತಿಯನ್ನು ಹಾಳು ಮಾಡುತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :-

ಇದನ್ನು ಜಾಯಿಂಟ್ಸ್ ವೆಂಚರ್ ಆಗಿ ತೆಗೆದುಕೊಂಡು ಮಾಡಬೇಕೆಂದು ಹೇಳುತ್ತಿದ್ದೀರಿ, ಆದರೆ ಈಗಾಗಲೇ ವಿದ್ಯುಚ್ಛಕ್ತಿ ಉತ್ಪಾದನೆಗೆ ಬೇಕಾದ ಮೇಕೆದಾಟು ಯೋಜನೆ ಮಾಡಿರುವುದನ್ನು ಕೈ ಬಿಡುತ್ತಾರೆ ಎಂದು ಹೇಳುತ್ತಾರೆ ಇದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್ :-

ಹೊಗೇನಕಲ್ ಯೋಜನೆಯನ್ನು ಮಾಡಬೇಕಾದರೆ ಎರಡು ಸರಕಾರಗಳವರೂ ಒಪ್ಪಿದ ಮೇಲೆ ಅದನ್ನು ಯೋಜನೆ ಮಾಡಬೇಕಾಗುತ್ತದೆ. ಆದರೆ ಇಂತಹ ಒಂದು ಪ್ರಾಜೆಕ್ಟನ್ನು ತೆಗೆದುಕೊಳ್ಳುವಾಗ ನಮ್ಮ ಇರಿಗೇಷನ್ ರೈಟ್ಸ್‌ಗಳನ್ನು ಸ್ಯಾಕ್ರಿಫೈಸು ಮಾಡಬೇಕಾಗುತ್ತದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಇದಕ್ಕಾಗಿ ನಮಗೆ ಎಷ್ಟು ನೀರಾವರಿ ಬರುತ್ತದೆ ನಮ್ಮ ಅಗ್ರಿಮೆಂಟ್ ಪ್ರಕಾರ ಹಾಗೂ ಇನ್ನೂ ಕೆಲವು ವಿಚಾರಗಳೆಲ್ಲಾ ಇವೆ, ಇವನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆ. ಆದರೆ ಅವರು ನಮಗೆ ಬೇಕಾಗಿರುವ ವಿವರಗಳನ್ನು ಅಂಕಿ ಅಂಶಗಳನ್ನು ಇನ್ನೂ ಒದಗಿಸಿಕೊಟ್ಟಿಲ್ಲ. ಅದಕ್ಕಾಗಿ ಕಾಯುತ್ತಿದ್ದೇವೆ.

ಶ್ರೀ ಬಿ.ಪಿ. ಗಂಗಾಧರ್ :-

ಮದ್ರಾಸು ಸರಕಾರದವರು ಇನ್ನೂ ಅಂಕಿ ಅಂಶಗಳನ್ನು ಒದಗಿಸಿಲ್ಲ ಎಂದು ಹೇಳುತ್ತಿದ್ದೀರಿ. ಒಂದು ವೇಳೆ ಮದ್ರಾಸು ಸರಕಾರದವರು ಯಾವ ಉತ್ತರವನ್ನೂ ಕೊಡದೆ ಇದ್ದರೆ ಮುಂದೇನು ಮಾಡುತ್ತಿದೀರಿ ? ನಿಮ್ಮಲ್ಲಿರುವ ಅಂಕಿ ಅಂಶಗಳ ಸಂಖ್ಯೆಗಳ ಮೇಲೆ ಆದರೆ ಇನ್ನೆಷ್ಟು ದಿವಸದಲ್ಲಿ ಇದನ್ನು ಫೈನಾಲೈಸು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್ :-

ಮದ್ರಾಸು ಸರಕಾರ ಕೊಡದೇ ಹೋದರೆ ಕೇಂದ್ರ ಸರಕಾರಕ್ಕೆ ಬರೆಯುತ್ತೇವೆ. ಮತ್ತು ಅವರಿಂದ ಎಲ್ಲ ವಿವರಗಳನ್ನು ಪಡೆಯಲು ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ನಾನು ಹೇಳುತ್ತಿರುವುದು, ನಮ್ಮಲ್ಲಿ ಈಗ ಪವರಿಗೆ ಅಭಾವವೇನೂ ಇಲ್ಲ. ಶರಾವತಿಯನ್ನು ಕಮಿಷನ್ ಮಾಡಿರುವುದರಿಂದ ನಮಗೆ ಸಾಕಷ್ಟು ಪವರು ಸಿಗುತ್ತದೆ. ಮತ್ತೆ ಇನ್ನೂ ಹೆಚ್ಚು ಬೇಕಾಗುವುದಾಗಿದ್ದರೆ ಕಾಳೀ ಯೋಜನೆ ಪ್ರಾಜೆಕ್ಟ್ ತೆಗೆದುಕೊಂಡು ಕಾರ್ಯಗತ ಮಾಡಲು ಪ್ರಯತ್ನ ಮಾಡುತ್ತೇವೆ. ಇದರಲ್ಲಿ ನೀರು ಎಷ್ಟಿದೆ ಮತ್ತು ಎಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಬರಬಹುದು ಮತ್ತು ಇದರಿಂದ ಜನಕ್ಕೆ ಯಾವ ರೀತಿ ಹಂಚಿಕೊಳ್ಳಬಹುದು ಇವನ್ನೆಲ್ಲಾ ಪರಿಶೀಲನೆ ಮಾಡಿ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಇದು ನಮ್ಮದೇ ಆದ ಪ್ರಾಜೆಕ್ಟ್ ಅಲ್ಲ. ಜಾಯಿಂಟ್ ವೆಂಚರ್ ಆಗಿ ತೆಗೆದುಕೊಂಡು ಮಾಡಬೇಕಾಗಿದೆ. ಅದೂ ಅಲ್ಲದೆ ನಮಗೆ ಈಗ ವಿದ್ಯುಚ್ಛಕ್ತಿ ಅಭಾವವೇನೂ ಇಲ್ಲ. ಹಾಗೆ ಬೇಕಾದರೆ ಕಾಳೀ ನದಿ ಪ್ರಾಜೆಕ್ಟ್ ಮಾಡಬಹುದು ಇದಕ್ಕೆಲ್ಲಾ ಇನ್ನೂ ಸಮಯ ಇದೆ. ಆದರೆ ನಮ್ಮ ಏರಿಯಾದಲ್ಲಿ ಎಲ್ಲೆಲ್ಲಿ ಪ್ರಾಜೆಕ್ಟ್‌ಗಳನ್ನು ಮಾಡಲು ಸಾಧ್ಯ ಎನ್ನುವ ಬ್ಲೂ ಪ್ರಿಂಟುಗಳನ್ನು ಮಾತ್ರ ತಯಾರು ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ :-

ಇದರಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳು ಬರೀ ಸಿಬ್ಬಂದಿಗೇ ವೆಚ್ಚವಾಗಿದೆ ಎಂದು ಹೇಳಿದ್ದೀರಿ. ಸುಮಾರು ನಾಲ್ಕು ವರ್ಷಗಳಿಂದಲೂ ಮದ್ರಾಸು ಸರಕಾರದವರು ಇನ್ನೂ ಯಾವ ಅಂಕಿ ಅಂಶಗಳನ್ನು ಒದಗಿಸಿಲ್ಲ ಎಂದೂ ಹೇಳುತ್ತೀರಿ. ಹೀಗಿರುವಾಗ ಇದೆರ ಕೆಲಸಗಳನ್ನು ಮಾಡಲು ಬರೀ ಸಿಬ್ಬಂದಿಗಾಗಿ ಸುಮಾರು ಆರು ಲಕ್ಷದಷ್ಟು ಖರ್ಚು ಮಾಡಿರುವುದನ್ನು ಉಳಿಸಲು ತಕ್ಕ ಕಾರ್ಯ ಕ್ರಮಗಳನ್ನು ಮಾಡಬಹುದಾಗಿತ್ತು. ಇಂತಹ ಕಾರ್ಯಕ್ರಮಗಳನ್ನೇಕೆ ಮಾಡಲಿಲ್ಲ?

ಶ್ರೀ ವೀರೇಂದ್ರ ಪಾಟೀಲ್ :-

ಇದು ಒಂದು ವರ್ಷದಲ್ಲಿ ಖರ್ಚಾಗಿರುವುದಲ್ಲ. ಇಲ್ಲಿಯವರೆಗೆ ಒಟ್ಟು ಎಷ್ಟು ಖರ್ಚಾಗಿದೆ ಎಂದು ಇದರಲ್ಲಿ ಹೇಳಿರುವುದು, ಎಂದರೆ 63-64, 64-65, 66-67 ಮತ್ತು 67-68 ನೇ ಜನವರಿ 1968 ರ ವರೆಗೆ ಒಟ್ಟು ಖರ್ಚಾಗಿರುವ ವಿವರಗಳನ್ನು ಸೇರಿಸಿ ಒಟ್ಟು 6,01,716 ರೂಪಾಯಿಗಳು ಎಂದು ಹೇಳಿದೆ. ಇದರಲ್ಲಿ ಉಳಿತಾಯ ಮಾಡುವುದೇನೂ ದೊಡ್ಡದಲ್ಲ. ಇದರಲ್ಲಿ ಪ್ಯಾಟರ್ನ್ ಆಫ್ ವಾಟರ್ ಹೇಗಿದೆ ಎಷ್ಟು ಭಾಗ ಇರಿಗೇಷನ್ನಿಗೆ ಅನುಕೂಲವಾಗುತ್ತದೆ ಇವೆಲ್ಲ ಮಾಹಿತಿಗಳನ್ನು ಪಡೆಯಬೇಕಾದರೆ ಒಂದು ಪ್ರಾಜೆಕ್ಟ್ ಫೈನಲೈಸು ಮಾಡಬೇಕಾದರೆ ಇದನ್ನೆಲ್ಲಾ ಇನ್‌ವೆಸ್ಟಿಗೇಷನ್ ಮಾಡಿ ಆ ನಂತರ ಇಲ್ಲಿ ಡಿವಿಜನ್ನಿನ ಅವಶ್ಯಕತೆ ಇಲ್ಲದಿದ್ದರೆ ಇದನ್ನು ಅಬಾಲಿಷ್ ಮಾಡಬೇಕಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್ :-

ಡಿವಿಜನ್ ಅಬಾಲಿಷ್ ಮಾಡಬೇಕಾಗುತ್ತದೆ ಎಂದರೆ ಇಲ್ಲಿರುವ ಕ್ಲಾರ್ಕುಗಳು ಹಾಗೂ ಇನ್ನಿತರ ಸಿಬ್ಬಂದಿಗಳನ್ನು ಮಾತ್ರ ತೆಗೆದುಬಿಟ್ಟು ಮನೆಗೆ ಕಳುಹಿಸಿ ಬರೀ ಇಂಜನೀಯರುಗಳನ್ನು ಮಾತ್ರ ಇಲ್ಲಿ ಇಟ್ಟುಕೊಳ್ಳಬೇಕೆಂದು ಮಾಡುತ್ತೀರೋ ?

ಶ್ರೀ ವೀರೇಂದ್ರ ಪಾಟೀಲ್ :-

ಅಬಾಲಿಷ್ ಮಾಡಬೇಕಾದರೆ ಎಲ್ಲಾ ಸ್ಟಾಫ್‌ಗಳನ್ನು ಮನೆಗೆ ಕಳುಹಿಸುವುದಿಲ್ಲ. ಇಲ್ಲಿರುವ ಸ್ಟಾಫ್‌ನ್ನು ವಿತಡ್ರಾ ಮಾಡಿ ಬೇರೆ ಕಡೆ ಅವರಿಗೆ ಜಾಗಗಳಿರುವ ಕಡೆಗೆ ವರ್ಗ ಮಾಡುತ್ತೇವೆ ಅಥವಾ ಬೇರೆ ಡಿವಿಜನ್ನಿಗೆ ಅವರನ್ನು ತೆಗೆದುಕೊಳ್ಳುತ್ತೇವೆ.

## 5. ಶರಾವತಿ ಪ್ರಾಜೆಕ್ಟ್ ನಲ್ಲಿ ಸ್ಟ್ಯಾಂಡ್ ಬೈ ಪವರ್ ಚಾನೆಲ್ ಕುರಿತು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ, ಲೋಕೋಪಯೋಗಿ ಸಚಿವರಾಗಿ ಶ್ರೀ ವೀರೇಂದ್ರ ಪಾಟೀಲರು •ನೀಡಿದ ಉತ್ತರಗಳು. 12ನೇ ಮಾರ್ಚ್ 1968.

ಪ್ರಶ್ನೆ : ಶ್ರೀ ಕೆ.ಹೆಚ್. ಶ್ರೀನಿವಾಸ್ ( ಸಾಗರ ) :-

ಅ) ಶರಾವತಿ ಅಣೆಕಟ್ಟಿನಲ್ಲಿ ಸ್ಟ್ಯಾಂಡ್- ಬೈ-ಕಾಲುವೆ ನಿರ್ಮಿಸಲು ಸೂಚಿಸಲಾಗಿದೆ ಎಂಬುದರ ಬಗ್ಗೆ.

ಬ) ಸೂಚಿಸಿದರೆ, ಅದರ ಅಂದಾಜು ಖರ್ಚಿನ ಬಗ್ಗೆ.

ಕ) ಅದನ್ನು ನಿರ್ಮಿಸಲು ಕಾರಣಗಳ ಬಗ್ಗೆ ತಿಳಿಸುವಿರಾ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ್ ( ಕಾಮಗಾರಿ ಮಂತ್ರಿ ) :-

ಅ) ಸೂಚನೆಯು ಪರಿಶೀಲನೆಯಲ್ಲಿದೆ.

ಬ) ಸುಮಾರು 375 ಲಕ್ಷ ರೂ.

ಕ) ಉತ್ಪಾದಿಸುವ ಸ್ಥಳದ ಸಮತೋಲನ ಮಾಡುವ ಜಲಾಶಯಕ್ಕಾಗಿ ಸತತವಾಗಿ ನೀರು ಸರಬರಾಜು ಮಾಡುವುದು ಅತ್ಯಂತ ಪ್ರಮುಖವಾಗಿದೆ. ಮುಖ್ಯ ಜಲಾಶಯದಿಂದ ಇನ್ನೊಂದು ನೀರಿನ ಕಂಡಕ್ಟರ ಪದ್ಧತಿಯು ಸಮತೋಲನದ ಜಲಾಶಯಕ್ಕೆ ಸ್ಟಾ ್ಯಂಡ್ ಬೈ ಆಗಿ ಕಾರ್ಯ ಮಾಡುತ್ತದೆ.

ಶ್ರೀ ಕೆ.ಎಚ್. ಶ್ರೀನಿವಾಸ್ :-

ಇದರಲ್ಲಿ ಸ್ಟಾ ್ಯಂಡ್ ಬೈ ಪವರ್ ಚಾನಲ್ ಕೊಡಲಿಕ್ಕೆ ಏನು ಕಾರಣವೆಂದು ಕೇಳಿದಾಗ, ಸ್ಟಾ ್ಯಂಡ್ ಬೈ ಅವಶ್ಯವಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಇರುವ ಪವರ್ ಚಾನಲ್‌ನಲ್ಲಿ ಅಭದ್ರತೆ ಇದೆ ಎಂದು ಉದ್ದೇಶಿಸಿ ಮಾಡಲಾಗಿದೆಯೋ ?

ಶ್ರೀ ವೀರೇಂದ್ರ ಪಾಟೀಲ್ :-

ಇರುವ ಪವರ್ ಚಾನೆಲ್‌ನಲ್ಲಿ ಯಾವುದೂ ಡಿಫೆಕ್ಟ್ ಇಲ್ಲ. ಒಂದು ವೇಳೆ ಏನಾದರೂ ಡಿಫೆಕ್ಟ್‌ನಿಂದ ನಿಂತು ಹೋದರೆ, 8-10 ಯೂನಿಟ್ಟುಗಳು ಏನಿವೆ, ಅವು ನಿಲ್ಲುವಂತಾಗುತ್ತದೆ. ಅದಕ್ಕೆ ಈ ಸ್ಟಾ ್ಯಂಡ್ ಬೈ ಮಾಡಿದರೆ ಉತ್ತಮ ಎಂದು ನಿರ್ಣಯ ಮಾಡಿದ್ದು, ಇನ್ನೂ ಅದು ಒಂದು ಪ್ರಪೋಸಲ್ ಅಷ್ಟೆ, ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ :-

ಸ್ಟ್ಯಾಂಡ್ ಬೈ ಕಾಲುವೆಯ ಬಗ್ಗೆ ಮೂಲ ಅಣೆಕಟ್ಟಿನಲ್ಲಿ ಉದ್ದೇಶಿಸಲಾಗಿತ್ತೇ ?

ಶ್ರೀ ವೀರೇಂದ್ರ ಪಾಟೀಲ್ :-

ಹಾಗೇನು, ನನಗೆ ಅನಿಸುವುದಿಲ್ಲ. ಆದರೆ, ಅದನ್ನು ಎಚ್.ಈ.ಸಿ.ಪಿ. ಬೋರ್ಡ್ ಅವಶ್ಯವೆಂದು ಪರಿಗಣಿಸಿದ್ದಾಗ, ಅದರ ಬಗ್ಗೆ ವಿಚಾರಿಸಲಾಯಿತ್ತಷ್ಟೇ.

ಶ್ರೀ ಕೆ.ಎಚ್. ಶ್ರೀನಿವಾಸ್ :-

ಇದನ್ನು ಓರಿಜಿನಲ್ ಪ್ಲಾನ್‌ನಲ್ಲಿ ಸೇರಿಸಿಲ್ಲದಿದ್ದರೆ, ಈಗ ಅದನ್ನು ಆಲೋಚನೆ ಮಾಡುವುದಕ್ಕೆ ಈಗಿರುವಂತಹದ್ದರಲ್ಲಿ ಡಿಫೆಕ್ಟ್ಸ್ ಬಂದಿದೆ ಎನ್ನುವುದು ಒಂದು ಕಾರಣವೇ ?

ಶ್ರೀ ವೀರೇಂದ್ರ ಪಾಟೀಲ್ :-

ಈಗಿರುವ ಪವರ್ ಚಾನಲ್ ಕೆಲವು ದಿವಸಗಳ ಮೊದಲು ವಾಟರ್ ಪ್ರೆಶರಿಂದ ಅಲ್ಲಲ್ಲಿ ಪವರ್ ಚಾನಲಿನಲ್ಲಿ, ಡಕ್ಟ್‌ಗಳಲ್ಲಿ ಬ್ರೀಚಸ್ ಆಗಿತ್ತು. ನೀರು ಹೋಗುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಈಗ ಆ ಕಡೆ, ಈ ಕಡೆ ಪವರ್ ಚಾನಲ್‌ನಲ್ಲಿ ಡ್ರೈನೇಜ್ ಮಾಡಿದ್ದೇವೆ. ಈಗ ಆ ಪ್ರಸಂಗ ಇಲ್ಲ. ಆದರೂ ಇದು ಏಷ್ಯಾ ಖಂಡದಲ್ಲಿ ದೊಡ್ಡದಾದ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಆಗಿದೆ. ಮೈಸೂರು ಸ್ಟೇಟ್ ಅಲ್ಲದೆ ಸದರ್ನ್ ಸ್ಟೇಟ್ಸ್‌ಗೂ ಪವರ್ ಒದಗಿಸಬೇಕಾಗಿರುವುದರಿಂದ, ನಿರ್ಭಯವಾಗಿ ರಿಸ್ಕ್ ತೆಗೆದುಕೊಳ್ಳಲಾಗದು ಎಂಬುದರಿಂದ ಒಂದು ಸ್ಟ್ಯಾಂಡ್ ಬೈ ಇಡುವುದು ಉಚಿತವೆಂದು ನಿರ್ಧಾರ ಮಾಡಿದ್ದೇವೆ.

ಶ್ರೀ ಸಿದ್ಧವೀರಪ್ಪ :-

ರಾಯರೇ, ಈ ಪ್ರಸ್ತುತ, ಕಾಲುವೆಯ ಕೆಲವು ಭಾಗಗಳಲ್ಲಿ ತಾವು ಈ ತಾನೇ ತಿಳಿಸಿದಂತೆ, ಲೋಪದೋಷಗಳಿವೆ. ತಳಕಾಲಲೆ ಡ್ಯಾಮವು ಬಹಳ ಅಪಾಯದ ಪರಿಸ್ಥಿತಿಯಲ್ಲಿದೆಯೆಂದು ಗೊತ್ತಾಗಿದೆ. ಇದು ಅದರ ಬದಲಾಗಿ ಇರುವುದೆಂದು ತಿಳಿಸಲಾಗಿದೆ. ಇದು ಮೂಲದ ಯೋಜನೆಯಲ್ಲಿ ಉದ್ದೇಶಿಸಲಾಗಿತ್ತೆಂಬುದನ್ನು ತಮಗೂ ಖಚಿತವಿರಲಿಲ್ಲ ಎಂಬುದು ನಿಜವಲ್ಲವೇ?

ಶ್ರೀ ವೀರೇಂದ್ರ ಪಾಟೀಲ್ :-

ತಳಕಾಲಲೆ ಡ್ಯಾಮ್ ಅಪಾಯದ ಪರಿಸ್ಥಿತಿಯಲ್ಲಿತ್ತೆಂಬುದು ಸರಿಯಲ್ಲ. ಇವತ್ತಿಗೂ, ಅದು ಅಪಾಯದ ಸ್ಥಿತಿಯಲ್ಲಿಲ್ಲ. ಯಾಕೆಂದರೆ ಎಲ್ಲಿ ಮಣ್ಣು ಬಹಳ ವಿಷಮ ಸ್ಥಿತಿಯಲ್ಲಿರುವುದೋ, ವಿದ್ಯುಚ್ಛಕ್ತಿಯ ಕಾಲುವೆಯು ಭೂ ಭಾಗದ ಮೂಲಕ ಹರಿದು ಹೋಗುತ್ತದೆ. ಈ ಕೊಳವೆಯನ್ನು ಕೆಲವು ಭಾಗಗಳಲ್ಲಿ ಮಾತ್ರ ವಿಚಾರಿಸಲಾಯಿತು. ಕೆಲವು ಭಾಗಗಳಲ್ಲಿ ಈ ಕಾಲುವೆಯು ತೆರೆದ ಕಾಲುವೆಯಾಗಿದೆ. ಕಾರಣ, ಪ್ರಸ್ತುತದಲ್ಲಿರುವ ವಿದ್ಯುಚ್ಛಕ್ತಿಯ ಕಾಲುವೆಯ ಮೇಲೆ ಅವಲಂಭಿಸುವುದು ಸರಿಯಲ್ಲವೆಂದು ಪರಿಗಣಿಸಿ, ಸ್ಟ್ಯಾಂಡ್ ಬಾಯ್ ಕಾಲುವೆ ಹೊಂದಲು ಅವಶ್ಯವೆನಿಸಿತು.

ಶ್ರೀ ಎಚ್. ಸಿದ್ಧವೀರಪ್ಪಾ :-

ಆ ಸಂದರ್ಭದಲ್ಲಿ, ತಳಕಾಲಲೇ ಡ್ಯಾಮಿಗೆ ನೀರುಗಾರೆಯನ್ನು ಏಕೆ ಮಾಡಲಾಯಿತು ?

ಶ್ರೀ ವೀರೇಂದ್ರ ಪಾಟೀಲ್ :-

ಅದನ್ನು ನಿರ್ಮಾಣದ ನಂತರ ಮಾಡಲಾಯಿತು. ಒಂದು ವೇಳೆ ಅಲ್ಲಿ ಏನಾದರೂ ಸ್ವೆಟಿಂಗ್ ಇದ್ದರೆ, ಅದನ್ನು ಬೆಣೆಹಾಗಲು, ನೀರುಗಾರೆಯ ಅವಶ್ಯವಿರುವುದು.

ಶ್ರೀ ಎಲ್. ಶ್ರೀಕಂಠಯ್ಯ :-

375 ಲಕ್ಷ ರೂಪಾಯಿಗಳ ಒಂದು ಅಂದಾಜು ಇಟ್ಟುಕೊಂಡು ಇಲ್ಲಿ ಒಂದು ಸ್ಟ್ಯಾಂಡ್ ಬೈ ಆಗಿ ಒಂದು ಚಾನಲ್ ಮಾಡಲು ಹೊರಟಿದ್ದೀರಲ್ಲ ಇದರಂತೆಯೇ ಶಿವಸಮುದ್ರ ಇನ್ನಿತರ ಕಡೆಗಳಲ್ಲಿರುವ ಯೋಜನೆಯಲ್ಲೂ ಇಂಥಹ ಚಾನಲ್ ಮಾಡಬೇಕೆಂದು ಇದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಇಲ್ಲ. ಏಕೆಂದರೆ ಇವು ಬಹಳ ಚಿಕ್ಕವು. ಶಿವ ಸಮುದ್ರದಲ್ಲಿ ಸುಮಾರು 30 ಸಾವಿರದಷ್ಟು ಪವರ್ ಬರುತ್ತದೆ. ಇನ್ನೊಂದರಲ್ಲಿ 17 ಸಾವಿರದಷ್ಟು ಪವರು ಬರುತ್ತದೆ. ಆದರೆ ಇಲ್ಲಿ ಒಂದು ದಶ ಲಕ್ಷ ಕಿಲೋವ್ಯಾಟುಗಳಷ್ಟು ಎಂದರೆ ಒಂದು ಮಿಲಿಯನ್ನಿಗಿಂತ ಜಾಸ್ತಿ ಪವರು ಬರುತ್ತದೆ. ಒಂದು ದಿನ ಇಲ್ಲಿ ಕೆಲಸ ನಿಂತರೆ ಅಥವಾ ಫೇಲ್ಯೂರು ಆದರೆ ಬಹಳ ನಷ್ಟ ಆಗುತ್ತದೆ. ಇದರ ಬಗ್ಗೆ ಇನ್ನೂ ಯಾವ ನಿರ್ಣಯವನ್ನೂ ಮಾಡಿಲ್ಲ. ಇಂತಹ ಸ್ಟ್ಯಾಂಡ್ ಬೈ ಚಾನಲ್ ಇರಬೇಕು ಎಂದು ಹೆಚ್.ಇ.ಸಿ.ಪಿ. ಬೋರ್ಡಿನವರು ಹೇಳಿದ್ದಾರೆ. ಇದಿನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಸಿದ್ಧಯ್ಯಾ ಕಾಶೀಮಠ :-

ಅದರ ಅಂದಾಜು ಖರ್ಚು 375 ಲಕ್ಷ ರೂಪಾಯಿ ಎಂದು ಈಗಾಗಲೇ ತಿಳಿದಿದೆ. ಅದಕ್ಕೆ ಬಹಳ ಕಾಲದಿಂದಲೂ, ಯೋಜನೆಯು ( ಸೂಚನೆ ) ಪರಿಶೀಲನೆಯಲ್ಲಿದೆ. ಏಕೆ ?

ಶ್ರೀ ವೀರೇಂದ್ರ ಪಾಟೀಲ್ :-

ನಾನು ತಿಳಿಸಿದಂತೆ, ಅದು ಕೇವಲ ಒಂದು ಸೂಚನೆ. ಅದರ ಬಗ್ಗೆ ಸರಕಾರವು ಯಾವ ನಿರ್ಣಯ ಕೈಗೊಂಡಿಲ್ಲ. ಏಕೆಂದರೆ, ನಾವು ನಿರ್ಣಯ ತೆಗೆದುಕೊಂಡರೆ, ಅದರ ನಿರ್ಮಾಣಕ್ಕಾಗಿ, ಇಷ್ಟು ಖರ್ಚು ಮಾಡಬೇಕಾಗುತ್ತದೆ. ಅದರ ಅವಶ್ಯಕತೆ ಅಷ್ಟು ಇಲ್ಲ. ಅದರ ಅವಶ್ಯಕತೆ ಅನಿಸಿದಾಗ, ಅದನ್ನು ಪರಿಶೀಲಿಸಿ, ನಿರ್ಮಾಣದ ಕಾರ್ಯ ತೆಗೆದುಕೊಳ್ಳಲಾಗುತ್ತದೆ. ಅದಕ್ಕಾಗಿ ತಯ್ಯಾರಿ ನಡೆಸಲು, ನಾವು ಯೋಜನೆಯನ್ನು ಮತ್ತು ಅಂದಾಜು ತಯ್ಯಾರಿಸಲು, ನಮ್ಮ ಇಂಜಿನಿಯರರನ್ನು ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :-

ಕಾಲುವೆಯ ತುದಿಯನ್ನು ಸಿಮೆಂಟಿನಿಂದ ನೀರುಗಾರೆಯನ್ನು ಮಾಡಿದರೆ, ತಾವು ಸಾಕಷ್ಟು ಹಣ ಉಳಿಸಿ, ಸ್ಟ್ಯಾಂಡ್ ಬೈ ಕಾಲುವೆ ತಪ್ಪಿಸಬಹುದು.

ಶ್ರೀ ವೀರೇಂದ್ರ ಪಾಟೀಲ್ :-

ಅದನ್ನು ಈಗಲೂ ಮಾಡಲಾಗಿದೆ. ಸ್ಟ್ಯಾಂಡ್ ಬೈ ಕಾಲುವೆಯ ಬಗ್ಗೆ ನೀವು ವಿಚಾರಿಸುತ್ತಿಲ್ಲ. ಏಕೆಂದರೆ, ಈಗ ಅದು ಅಪಾಯದ ಸ್ಥಿತಿಯಲ್ಲಿದೆ. ಆದರೆ ಬೋರ್ಡಿನ ಸದಸ್ಯರು, ತಿಳಿದಂತೆ, ಅದು ಲಿಂಗನಮಕ್ಕಿಯಿಂದ ತಳಕಾಲಲೆ ಡ್ಯಾಮ್‌ಗೆ ಜೋಡಣೆಯಂತಿದೆ. ಇದಕ್ಕೆ ಏನಾದರೂ ಆದರೆ, ಪೂರ್ಣ ಸ್ಟೇಶನನ್ನೇ ಮುಚ್ಚಬೇಕಾಗುತ್ತದೆ. ಅದಕ್ಕಾಗಿ, ಸ್ಟ್ಯಾಂಡ್ ಬೈ ಕಾಲುವೆಯ ಅವಶ್ಯಕತೆ ಇದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್ :-

ಹೊಸದಾಗಿ ಈ ಯೋಜನೆ ನಿರ್ಮಾಣ ಮಾಡಬೇಕಾದರೆ ಎಷ್ಟು ಭೂಮಿಯನ್ನು ಅಕ್ವೈರ್ ಮಾಡಬೇಕೆಂದು ಅಂದಾಜು ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್ :-

ಇದು ಅಪ್ರಾಕ್ಸಿಮೇಟ್ ಆಗಿ ಮಾಡಿರುವುದು. ಇನ್ನೂ ಡಿಟೇಲ್ ಎಸ್ಟಿಮೇಟುಗಳನ್ನು ಮಾಡಲಿಕ್ಕಾಗಲಿಲ್ಲ.

## 6. ನೀರಾವರಿಗಾಗಿ ಚಿಕ್ಲಹೊಳೆ ನೀರಿನ ಉಪಯೋಗದ ಕುರಿತು ಮಾನ್ಯ ಸದಸ್ಯರು ಕೇಳಲಾದ ಪ್ರಶ್ನೆಗಳಿಗೆ, ಲೋಕೋಪಯೋಗಿ ಸಚಿವರಾಗಿ ಶ್ರೀ ವೀರೇಂದ್ರ ಪಾಟೀಲರು ನೀಡಿದ ಉತ್ತರಗಳು. 12ನೇ ಮಾರ್ಚ್ 1968.

ಶ್ರೀ ಎನ್. ಲೋಕಯ್ಯ ನಾಯಕ ( ವಿರಾಜಪೇಟೆ ) ಶ್ರೀ ಜೆ.ಎಂ. ಮಂಜುನಾಥಯ್ಯ ಅವರ ಪತಿಯಿಂದ ( ಸೋಮವಾರ ಪೇಟೆ ) :-

ಅ) ನೀರಾವರಿಗಾಗಿ ಚಿಕಳಿ ಹೊಳೆಯ ನೀರನ್ನು ಉಪಯೋಗಿಸುವ ಯೋಜನೆಯನ್ನು ಯಾವಾಗ ತನಿಖೆ ನಡೆಸಲಾಯಿತೆಂಬುದರ ಬಗ್ಗೆ.

ಬ) ತನಿಖೆ ಪೂರ್ಣವಾಗಿದೆಯೇ ? ಮತ್ತು ಯೋಜನೆಗಳ ಮತ್ತು ಅಂದಾಜುಗಳು ಮಾಡಲಾದ ಬಗ್ಗೆ.

ಕ) ಹಾಗಿದ್ದರೆ, ಅಣೆಕಟ್ಟಿನ ವೆಚ್ಚ ಮತ್ತು ವರ್ಷದ ಉತ್ಪನ್ನದ ಬಗ್ಗೆ.

ಡ) ಅಂದಾಜುಗಳ ಪ್ರಕಾರ, ಆ ಯೋಜನೆಯು ಜಾರಿಯಲ್ಲಿ ತರಲು ಸಮರ್ಪಕವಾಗಿದೆ ಎಂಬುದರ ಬಗ್ಗೆ.

ಇ) ಹಾಗೆ ಸಮರ್ಪಕವಾದಲ್ಲಿ, ಅದನ್ನು ಬೇಗನೆ ಕಾರ್ಯ ರೂಪದಲ್ಲಿ ತರಲು, ಏನಾದರೂ ಯೋಜನೆ ಅಥವಾ ಸೂಚನೆ ಇದೆ ಎಂಬುದರ ಬಗ್ಗೆ ತಿಳಿಸುವಿರಾ ?

ಶ್ರೀ ವೀರೇಂದ್ರ ಪಾಟೀಲ್ ( ಲೋಕೋಪಯೋಗಿ ಮಂತ್ರಿ ) :-

ಅ) 1961 ರಲ್ಲಿ

ಬ) ಇಲ್ಲ

ಕ) ದಿಂದ

ಡ) -----

ಇ) - ಬ) ಉತ್ತರದ ಅನ್ವಯ, ಅದು ಉದ್ಭವಿಸುವುದಿಲ್ಲ.

ಶ್ರೀ ಎನ್. ಲೋಕಯ್ಯ ನಾಯಕ :-

1961 ರಲ್ಲಿ ಈ ಯೋಜನೆ ಬಂದರೂ ಇನ್ನೂ ತೆಗೆದುಕೊಂಡಿಲ್ಲ. ಇನ್ನಾ ್ಯವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್ :-

ಯಾವಾಗ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕ ನೀರಾವರಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೇನೆ. ಅವುಗಳನ್ನು ತೆಗೆದುಕೊಳ್ಳುವಾಗ ಇದನ್ನೂ ನೋಡಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಬಸವರಾಜ್ :-

ಕಾವೇರಿ ನದಿ ನೀರಿನ ಯೋಜನೆ ಬಗ್ಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳಲು ಅಲ್ಲಿನ ಜನರು ಬಹಳ ಸೌಮ್ಯವಾಗಿದ್ದಾರೆಂದು ಬೇಗನೆ ತೆಗೆದುಕೊಳ್ಳುತ್ತಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :-

ಈಗಾಗಲೇ ಹಾರಂಗಿ ಯೋಜನೆ ತೆಗೆದುಕೊಳ್ಳಲಾಗಿದೆ. ಇದಕ್ಕೆ ಸುಮಾರು 68 ಲಕ್ಷದಷ್ಟು ಖರ್ಚಾಗುತ್ತಲಿದೆ. ಇದಕ್ಕೆ ಇನ್ನೂ ಡೀಟೇಲ್ಡ್ ಎಸ್ಟಿಮೇಟುಗಳು ತಯಾರಾಗಿಲ್ಲ. ನಾಲ್ಕನೇ ಯೋಜನೆಯಲ್ಲೂ ಸೇರಿಲ್ಲ. ಆದರಿಂದ ಈಗ ಸಾಧ್ಯವಿಲ್ಲ ಎಂದು ಹೇಳಿದೆ.

ಶ್ರೀ ಎಂ.ಎಸ್. ಕೃಷ್ಣನ್ :-

61ನೇ ಇಸವಿಯಿಂದ ಷುರುವಾಯಿತು ಎಂದರೆ ಇಲ್ಲಿಗೆ ಸುಮಾರು ಏಳು ವರ್ಷಗಳಾದವು. ಇಷ್ಟು ವರ್ಷಗಳ ಕಾಲ ಬರೀ ಇನ್‌ವೆಸ್ಟಿಗೇಷನ್ನಿನಲ್ಲೇ ಆಯಿತೇ ?

ಶ್ರೀ ವೀರೇಂದ್ರ ಪಾಟೀಲ್ :-

ಇನ್‌ವೆಸ್ಟಿಗೇಷನ್ ಒಂದೇ ಅಲ್ಲ. ನಮ್ಮಲ್ಲಿರತಕ್ಕ ನೀರಾವರಿ ಪ್ರಾಜೆಕ್ಟ್‌ಗಳನ್ನು ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯತೆಗಳಿವೆ ಎಂಬುದನ್ನು ಪರಿಶೀಲಿಸಿ ಅವನ್ನು ತೆಗೆದುಕೊಳ್ಳಬೇಕಾದರೆ ಎಲ್ಲ ಕಡೆಗಳಲ್ಲೂ ಇನ್‌ವೆಸ್ಟಿಗೇಟು ಮಾಡಿ ಮಾಡಬೇಕು. ಇದಕ್ಕೆ ಲೋ ಪ್ರಿಯಾರಿಟಿ ಇರುವುದರಿಂದ ಇನ್ನೂ ತೆಗೆದುಕೊಂಡಿಲ್ಲ. ನಾಲ್ಕನೇ ಯೋಜನೆಯಲ್ಲೂ ತೆಗೆದುಕೊಳ್ಳಬೇಕೆಂದು ಇನ್ನೂ ವಿಚಾರ ಮಾಡಿಲ್ಲ.

ಶ್ರೀ ಎಚ್. ನಂಜೇಗೌಡ :-

ಚಿಕ್ಕಳಿ ಹೊಳೆಯು ಕಾವೇರಿ ಜಲಾಶಯದ ಅಡಿಯಲ್ಲಿ ಬರುತ್ತದೆಯೇ ? ಬಂದರೆ, ತಾವು ಮತ್ತೊಂದು ನೀರಾವರಿಯ ಕಾರ್ಯದಿಂದ ಈ ನೀರನ್ನು ಉಪಯೋಗಿಸಲು ಆಸಕ್ತಿ ಹೊಂದಿರುವುದಿಲ್ಲವೇ ? ಅದು ಕಾವೇರಿ ಜಲಾಶಯದಡಿಯಲ್ಲಿ ಬರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :-

ನಿಸ್ಸಂದೇಹವಾಗಿ, ಅದು ಕಾವೇರಿಯ ಜಲಾಶಯದ ಅಡಿಯಲ್ಲಿ ಬರುತ್ತದೆ. ಆದರೆ, ಅದು, 1924 ರ ಒಪ್ಪಂದದ ಅಡಿಯಲ್ಲಿ ಬರುವದೆಂಬುದು ಅನುಮಾನ.

ಶ್ರೀ ಎಲ್. ಶ್ರೀಕಂಠಯ್ಯ :-

ಈ ಇನ್‌ವೆಸ್ಟಿಗೇಷನ್ನು 1961 ರಲ್ಲಿ ಪ್ರಾರಂಭವಾಗಿದೆ. ಯೋಜನೆ ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ ಕಾಸಿಲ್ಲ ಎಂದು ಹೇಳುತ್ತೀರಿ. ಹಾಗಾದರೆ 1961 ರಿಂದ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅಧಿಕಾರಿಗಳಿಗೆ ಫುಲ್ ಎಂಪ್ಲಾಯಮೆಂಟ್ ಕೊಡಬೇಕೆಂದು ಈ ಇನ್‌ವೆಸ್ಟಿಗೇಷನ್ ನಾಟಕ ನಡೆಯುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ :-

ಇನ್‌ವೆಸ್ಟಿಗೇಷನ್ ಮಾಡಿ ಬ್ಲ್ಯೂ ಪ್ರಿಂಟ್ ತಯಾರ್ಮಾಡುವುದರಿಂದ ಏನೂ ಕೆಡುವುದಿಲ್ಲ. ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದಕ್ಕಾಗಿಯೇ ಇದೆ. ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳ ಉಪನದಿಗಳ ಬಗ್ಗೆ ಯಾವ ಯಾವ ಪ್ರಾಜೆಕ್ಟ್ ಮಾಡುವುದಕ್ಕೆ ಬರುತ್ತದೆ ಯಾವುದು ಸಾಧ್ಯವಾಗುತ್ತದೆ, ಫೀಸಿಬಿಲಿಟಿ ಏನು ಇದೆ, ಇದನ್ನು ಪರೀಕ್ಷೆ ಮಾಡಿ ಬ್ಲ್ಯೂ ಪ್ರಿಂಟ್ ತಯಾರ್ಮಾಡಬೇಕು ಎಂದು ಸಿಬ್ಬಂದಿ ನೇಮಿಸಿದ್ದೇವೆ. ಅವರು ಈ ಕೆಲಸ ಮಾಡುತ್ತಿದ್ದಾರೆ. ಪ್ರಾಜೆಕ್ಟ್ ರಿಪೋರ್ಟ್ ಬಂದ ಮೇಲೆ ಹಣ ಒದಗಿಸುವ ಸಾಧ್ಯತೆ ನೋಡಿಕೊಂಡು ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ. ಮಾಡಿದ ಈ ಕೆಲಸ ಹಾಳಾಗುವುದಿಲ್ಲ.

## 7. ಹಾರಂಗಿ ಮತ್ತು ಹೇಮಾವತಿ ಅಣೆಕಟ್ಟಿಗೆ ತಾಂತ್ರಿಕ ವಿಮೋಚನೆ ಕುರಿತು ಪ್ರಶ್ನೋತ್ತರಗಳು. 12ನೇ ಮಾರ್ಚ್ 1968.

ಶ್ರೀ ಎಚ್.ಡಿ. ದೇವೇಗೌಡ ( ಹೊಳೆನರಸೀಪುರ ) :-

ಅ) ಹೇಮಾವತಿ ಮತ್ತು ಹಾರಂಗಿ ಅಣೆಕಟ್ಟೆಗಳಿಗಾಗಿ ರಾಜ್ಯ ಸರಕಾರವು, ಕೇಂದ್ರ ಸರಕಾರದಿಂದ ತಾಂತ್ರಿಕ ವಿಮೋಚನೆ ಪಡೆದಿದೆಯೇ ?

ಬ) ಅಕ್ಟೋಬರ್ 1967 ರಲ್ಲಿ, ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಮಂತ್ರಿಗಳು ರಾಜ್ಯಕ್ಕೆ ಭೇಟಿಯಿತ್ತಾಗ, ಅವರ ಹೇಳಿಕೆಯ ಪ್ರಕಾರ, ಮದ್ರಾಸ್ ಸರಕಾರವು ಕೆಲವು ಆಕ್ಷೇಪಣೆಗಳನ್ನು ಮಾಡಿದ ಬಗ್ಗೆ.

ಕ) ಮದ್ರಾಸ್ ಸರಕಾರವು ಮಾಡಿದ ಆಕ್ಷೇಪಣೆಗಳ ಸ್ವರೂಪದ ಬಗ್ಗೆ.

ಡ) ಇದರ ನಿಮಿತ್ತ ರಾಜ್ಯ ಸರಕಾರದ ನಿಲುವು.

ಇ) ಕೇಂದ್ರ ಮಂತ್ರಿ ಯವರ ಎದುರು, ಮುಖ್ಯ ಮಂತ್ರಿ, ಲೋಕೋಪಯೋಗಿ ಮಂತ್ರಿಗಳ ಮತ್ತು ಉಚ್ಚತಮ ಅಧಿಕಾರಿಗಳ ( ಎರಡು ರಾಜ್ಯಗಳು ), ಸಭೆ ನಡೆದುದರ ಬಗ್ಗೆ.

ಎಫ್) ಹಾಗಿದ್ದಲ್ಲಿ, ಅದರ ಫಲಿತಾಂಶದ ಬಗ್ಗೆ ತಿಳಿಸುವಿರಾ ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಮಂತ್ರಿ ) :-

ಅ) ಇಲ್ಲ.

ಬ) ಹೌದು, ಪತ್ರಿಕೆಯ ಹೇಳಿಕೆಯ ಪ್ರಕಾರ.

ಕ) ಭಾರತ ಸರಕಾರವು ಖಚಿತ ವಿವರಗಳನ್ನು ನೀಡಿಲ್ಲ.

ಡ) ಈ ಅಣೆಕಟ್ಟುಗಳನ್ನು 1924 ರ ಒಪ್ಪಂದದ ಪ್ರಕಾರ ತಯಾರಿಸಲಾಗಿದೆ. ಕಾರಣ, ಯಾವ ಆಕ್ಷೇಪಗಳಿರುವುದಿಲ್ಲ.

ಇ) ಇಲ್ಲ.

ಎಫ್) ಉದ್ಭವಿಸುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ :-

ಪತ್ರಿಕೆಗಳಲ್ಲಿ ಬಂದಿರುವ ಹೇಳಿಕೆಯ ಪ್ರಕಾರ ನಿಜವಾಗಿದೆ. ಭಾರತ ಸರಕಾರದವರು ನಿರ್ದಿಷ್ಟ ವಿವರಗಳನ್ನು ತಿಳಿಸಿರುವುದಿಲ್ಲ ಎಂದು ಉತ್ತರ ಹೇಳಿದೆ. ಕೇಂದ್ರ ನೀರಾವರಿ ಮಂತ್ರಿಗಳ ಪತ್ರಿಕೆಯಲ್ಲಿಯ ಹೇಳಿಕೆ ಗಮನಕ್ಕೆ ಬಂದ ಮೇಲೆ ಮದ್ರಾಸಿನ ಸರಕಾರ ತಾಂತ್ರಿಕ ಅನುಮತಿ ಕೊಡಲು ಅಡ್ಡಿ ಮಾಡುತ್ತಿದ್ದಾರೆ ಎನ್ನುವುದಕ್ಕೆ ರಾಜ್ಯ ಸರಕಾರ ಆಸಕ್ತಿ ವಹಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಹಾರಂಗಿ ಮತ್ತು ಹೇಮಾವತಿ ಈ ಎರಡು ಪ್ರಾಜೆಕ್ಟುಗಳಿಗೆ ಟೆಕ್ನಿಕಲ್ ಕ್ಲಿಯರನ್ಸ್ ಕೊಡಬೇಕೆಂದು ಕೇಳುತ್ತಿದ್ದೇವೆ. ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರಕ್ಕೆ ಕಾಗದ ಬರೆದಿದ್ದೇವೆ. ನಾನು ದಿಲ್ಲಿಗೆ ಹೋದಾಗ ಪ್ರತ್ಯಕ್ಷವಾಗಿ ಚರ್ಚೆ ಕೂಡ ಮಾಡಿದ್ದೇವೆ. ಈ ಪ್ರಾಜೆಕ್ಟ್ ವಿಚಾರದಲ್ಲಿ ಮದ್ರಾಸ್ ಸರಕಾರಕ್ಕೆ ಅವರ ಕಮೆಂಟ್ಸ್ ಸಲುವಾಗಿ ಕಳಿಸಿದ್ದಾರೆಂದು ತಿಳಿದು ಬಂದಿದೆ. ಯಾವ ಕಮಂಟ್ಸ್ ಎನ್ನುವುದಕ್ಕೆ ಆ ಮಾಹಿತಿ ನಮಗೆ ಬಂದಿಲ್ಲ. ಅದರ ಬಗ್ಗೆ ಕಾಗದ ಬರೆದರೂ ನಮಗೆ ಇನ್‌ಫಾರಮೇಷನ್ ಕಳಿಸಿಲ್ಲ.

ಶ್ರೀ ಎನ್.ಎ. ಚಿನ್ನೇಗೌಡ :-

ಕೇಂದ್ರ ಸರಕಾರ ಮಂಜೂರಾತಿ ಕೊಡದೇ ಇದ್ದರೆ ಈ ಕೆಲಸ ನೀವು ಕೈ ಬಿಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಇದು ಕೈಬಿಡುವ ಕೆಲಸವಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದೇವೆ.

ಶ್ರೀ ಎನ್. ಶಿವಪ್ಪ :-

1924 ರ ಅಗ್ರಿಮೆಂಟ್ ಪ್ರಕಾರ ನಮಗೆ ಬರತಕ್ಕಂಥ ನೀರನ್ನು ಉಪಯೋಗಿಸುವ ಹಕ್ಕು ನಮಗೆ ಇದೆ. ಕೇಂದ್ರ ಸರಕಾರ ಮದ್ರಾಸ್ ಸರಕಾರವನ್ನು ಕೇಳತಕ್ಕಂಥ ಅವಶ್ಯಕತೆ ಏನು ಇತ್ತು? ಇದರ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಇದರಲ್ಲಿ ಹೇಮಾವತಿ ಮತ್ತು ಹಾರಂಗಿ ಎರಡು ಪ್ರಾಜೆಕ್ಟುಗಳು ಇವೆ. ಹೇಮಾವತಿ ಇದು ಷೆಡ್ಯೂಲ್ಡ್ ರಿವರ್. ಈ ಪ್ರಾಜೆಕ್ಟಿನಲ್ಲಿ ಎಷ್ಟು ನೀರು ಉಪಯೋಗಿಸಬೇಕು ಎನ್ನುವುದಕ್ಕೆ ಮತ್ತೊಂದು ಸರಕಾರವನ್ನು ಕೇಂದ್ರ ಸರಕಾರ ಕೇಳುವುದಕ್ಕೆ ಅಡ್ಡಿ ಏನೂ ಇಲ್ಲ. ಆದರೆ ಹಾರಂಗಿ ಯೋಜನೆ ಬಗ್ಗೆ ಮದ್ರಾಸ್ ಸರಕಾರಕ್ಕೆ ಏತಕ್ಕೆ ಕಳಿಸಿದ್ದೀರಿ ಎಂದು ನಾವು ಪ್ರೊಟೆಸ್ಟ್ ಮಾಡಿದ್ದೇವೆ.

ಶ್ರೀ ಎಚ್.ಡಿ. ದೇವೇಗೌಡ :-

ಹಿಂದೆ ಒಂದು ಸಲ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಈ ಎರಡೂ ಯೋಜನೆಗಳು ಪ್ಲಾನಿಂಗ್ ಕಮೀಷನ್ನಿನ ಫೈನಲ್ ಕ್ಲಿಯರನ್ಸ್ ಸಲುವಾಗಿ ಹೋಗಿದೆ ಎಂದು ಹೇಳಿರುವುದು ನಿಜವಲ್ಲವೇ ? ಈಗ ಈ ಆತಂಕ ಬರುವುದಕ್ಕೆ ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್ :-

ಬಹುಶಃ ನಾನು ಹಾಗೆ ಹೇಳಿರಬಹುದು. ಸಬ್ ಕಮಿಟಿ ಮುಂದೆ ಈ ಎರಡೂ ಪ್ರಾಜೆಕ್ಟ್‌ಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕೆಂದು ಹೇಳಿದ್ದೇವೆ. ಸೆಂಟ್ರಲ್ ವಾಟರ್ ಅಂಡ್

ಪವರ್ ಕಮೀಷನ್ ಅವರು ಇನ್ನೂ ಕ್ಲಿಯರೆನ್ಸ್ ಕೊಟ್ಟಿಲ್ಲ. ಕ್ಲಿಯರೆನ್ಸ್ ಕೊಡದೇ ಅವರು ಮತ್ತೆ ಮತ್ತೆ ಇನ್‌ಫರ್‌ಮೇಷನ್ ಕೇಳುತ್ತಿದ್ದಾರೆ. ಇನ್‌ಸ್ಟಾಲ್ ಮೆಂಟಿನಲ್ಲಿ ಇನ್‌ಫಾರಮೇಷನ್ ಕೇಳುತ್ತಿದ್ದಾರೆ. ಕೇಳಿದ ಇನ್‌ಫರ್‌ಮೇಷನ್ ಕೊಟ್ಟರೂ ಮತ್ತೆ ಇನ್‌ಫರ್‌ಮೇಷನ್ ಬೇಕು ಎಂದು ಕೇಳುತ್ತಿದ್ದಾರೆ. ನಾವು ದಿಲ್ಲಿಗೆ ಹೋದಾಗ್ಗೆ ಇದರ ಚರ್ಚೆ ಮಾಡಿ ಬಂದಿದ್ದೇವೆ. ಕೇಂದ್ರ ಸರಕಾರ ಈ ಎರಡೂ ಪ್ರಾಜೆಕ್ಟುಗಳಿಗೆ ಕ್ಲಿಯರೆನ್ಸ್ ಕೊಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂಬುದು ನನಗೆ ಮನವರಿಕೆಯಾಗಿದೆ.

ಶ್ರೀ ಎಸ್. ಶಿವಪ್ಪ :-

ಈ ಎರಡು ಯೋಜನೆಗಳನ್ನು ಕಾರ್ಯಗತ ಮಾಡುವುದರ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡತಕ್ಕದ್ದರಲ್ಲಿ ಎಷ್ಟು ಸಮಯ ಬೇಕೋ ಅದಕ್ಕಿಂತ ಹೆಚ್ಚಾಗಿ ಸಮಯ ತೆಗೆದುಕೊಂಡಿರುವಾಗ ಆ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರಕ್ಕೆ ಪ್ರತಿಭಟನೆಯನ್ನು ಸೂಚಿಸಿ ಆದಷ್ಟು ಜಾಗ್ರತೆ ಇದನ್ನು ಮಂಜೂರು ಮಾಡದೆ ಮಲತಾಯಿ ಧೋರಣೆಯನ್ನು ಮೈಸೂರಿನ ಬಗ್ಗೆ ಏಕೆ ತೋರಿಸುತ್ತಿದ್ದೀರಿ ಎಂದು ಕೇಳುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ನಾವು ದಿಲ್ಲಿಗೆ ಹೋದಾಗಲೆಲ್ಲ ಮಾತನಾಡಿಕೊಂಡು ಬಂದಿದ್ದೇವೆ. ಎಲ್ಲ ಪ್ರಾಜೆಕ್ಟ್‌ಗಳಿಗೂ ಆದಷ್ಟು ತೀವ್ರ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕು, ಜನರು ಬಹಳ ಕಳವಳದಲ್ಲಿದ್ದಾರೆ, ಅಸಮಾಧಾಗೊಂಡಿದ್ದಾರೆ ಎಂದು ಯಾವ ರೀತಿ ಎಷ್ಟು ಪ್ರಮಾಣದಲ್ಲಿ ಹೇಳಬೇಕಾಗಿತ್ತೋ ಅದೆಲ್ಲ ಮಾಡಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ :-

ಹಾರಂಗಿ ನಾನ್ ಷೆಡ್ಯೂಲ್ಡ್ ನದಿ, ಇದಕ್ಕೆ ಮದ್ರಾಸ್ ಸರ್ಕಾರದವರನ್ನು ಕೇಳಬೇಕಾದ ಅವಶ್ಯಕತೆ ಏನಿತ್ತು ಎಂದು ಹೇಳಿರುವುದಕ್ಕೆ ಇನ್ನೂ ಜವಾಬು ಬಂದಿಲ್ಲ ಎಂದು ಹೇಳಿದಿರಿ. ಅವರು ಜವಾಬು ಕೊಡದೆ ಇರತಕ್ಕದ್ದನ್ನು ನೋಡಿದರೆ ನಿಮಗೂ ಮತ್ತು ಕೇಂದ್ರ ಸರ್ಕಾರಕ್ಕೂ ಹೊಂದಾಣಿಕೆ ಇಲ್ಲ, ಕೇಂದ್ರದವರು ಮೈಸೂರು ಸರ್ಕಾರವನ್ನು ಅಲಕ್ಷ್ಯದಿಂದ ನೋಡುತ್ತಿದ್ದಾರೆ. ಇದು ನಿಮ್ಮ ಅಸಹಾಯಕತೆಯನ್ನು ಸೂಚಿಸುವುದಿಲ್ಲವೇ ? ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಏನು ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್ :-

ಹಾರಂಗಿ ಬಗ್ಗೆ ಅವರು ತಾತ್ಸಾರ ಮನೋಭಾವನೆಯಿಂದ ನೋಡುತ್ತಿದ್ದಾರೋ, ಮಲತಾಯಿ ಮನೋಭಾವದಿಂದ ನೋಡುತ್ತಿದ್ದಾರೋ ಎನ್ನುವಂಥದ್ದು ಹೇಳುವುದು ಕಷ್ಟ. ಆದರೆ ಹಾರಂಗಿ ಬಗ್ಗೆ ಇಂಟರ್‌ಪ್ರಿಟೇಷನ್‌ನಲ್ಲಿ ನಮಗೂ ಅವರಿಗೂ ವ್ಯತ್ಯಾಸವಿದೆ. ಅದು ನಾನ್ ಷೆಡ್ಯೂಲ್ಡ್ ರಿವರ್ ಅಗ್ರಿಮೆಂಟ್‌ನಲ್ಲಿ ಅದು ಬಂದಿಲ್ಲ. ಅದರ ಮೇಲೆ ಅಣೆಕಟ್ಟು ಕಟ್ಟುವುದಕ್ಕೆ ನಮಗೆ ಸಂಪೂರ್ಣ ಅಧಿಕಾರವಿದೆ. ಯಾರನ್ನೂ ಇದರ ಬಗ್ಗೆ ಕೇಳಬೇಕಾಗಿಲ್ಲ ಎನ್ನುವುದು ನಮ್ಮ

ನಿಲುಮೆ, ಆದರೆ ಅವರು ಹೇಳುವುದೇನೆಂದರೆ, ಇದು ಅಗ್ರಿಮೆಂಟ್‌ನಲ್ಲಿ ಬರಲಾರದ್ದಕ್ಕೆ ಕಾರಣ ಆ ವೇಳೆಗೆ ಇದು ಮೈಸೂರಿನಲ್ಲಿ ಸೇರ್ಪಡೆಯಾಗಿರಲಿಲ್ಲ, ಕೊಡಗಿನಲ್ಲಿತ್ತು. ಕೊಡಗು ಪ್ರದೇಶ ಮೈಸೂರಿನಲ್ಲಿ ಇರಲಾರದ್ದಕ್ಕೆ ಮೈಸೂರು ಮತ್ತು ಮದ್ರಾಸಿಗೆ ಒಪ್ಪಂದವಾದಾಗ ಅದರಲ್ಲಿ ಇದು ಸೇರಲಿಲ್ಲ. ಅದರ ಮೇಲೆ ಏನು ಕಟ್ಟಿದರೂ ಕೂಡ ಅದರ ಫ್ಲೋ ಕೃಷ್ಣರಾಜ ಸಾಗರದಿಂದ ಕೆಳಗೆ ಬರುತ್ತದೆ. ಆದ್ದರಿಂದ ಅಗ್ರಿಮೆಂಟಿಗೆ ಸೇರದೆ ಇದ್ದರೂ ಮದ್ರಾಸ್ ಸರ್ಕಾರದವರನ್ನು ಕೇಳಬೇಕು ಎನ್ನುವ ವಾದವನ್ನು ಮಾಡುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ :-

ಹಾರಂಗಿ, ಹೇಮಾವತಿ ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರವನ್ನು ಕೇಂದ್ರ ಸರ್ಕಾರದವರು ಕೇಳಿದ್ದಾರೆ. ಆದರೆ ಮದ್ರಾಸ್ ಸರ್ಕಾರದವರು ಕೆಲವು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಾಗ ಅದೇ ರೀತಿಯಲ್ಲಿ ಮೈಸೂರಿನ ಅಭಿಪ್ರಾಯವೇನು ಎಂಬ ಬಗ್ಗೆ ನಮ್ಮನ್ನು ಅವರು ಕೇಳಿದ್ದಾರೆಯೇ? ಹಾಗೆ ಕೇಳದೆ ಇದ್ದರೆ ಈ ಎರಡು ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರದವರ ಅಭಿಪ್ರಾಯವನ್ನು ಕೇಳುವುದಕ್ಕೆ ಕಳಿಸಿರುವುದರ ಔಚಿತ್ಯವಾದರೂ ಏನಿದೆ ? ಇದು ಕೇಂದ್ರದಲ್ಲಿರುವ ನೀರಾವರಿ ಮಂತ್ರಿಗಳು ಮೈಸೂರು ರಾಜ್ಯ ಸರ್ಕಾರದ ಬಗ್ಗೆ ಕೊಟ್ಟಿರತಕ್ಕ ಅಲಕ್ಷ್ಯ ಮನೋಭಾವನೆ ಎಂದು ತಿಳಿದುಕೊಳ್ಳೋಣವೇ ? ಇದಕ್ಕೆ ಸರಿಯಾದ ಪ್ರತಿಭಟನೆಯನ್ನು ಸಲ್ಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್ :-

ಮದ್ರಾಸ್ ಸರ್ಕಾರದವರು ಕಾವೇರಿ ಒಪ್ಪಂದಕ್ಕೆ ಒಳಪಡುವಂತೆ ಕಟ್ಟಿದಂಥ ಪ್ರಾಜೆಕ್ಟ್‌ಗಳಿಗೆ ನಮ್ಮ ಅಭಿಪ್ರಾಯವನ್ನು ಕೇಳಿದ್ದಾರೆಯೋ ಇಲ್ಲವೋ ಎನ್ನುವುದನ್ನು ರಿಕಾರ್ಡ್ ನೋಡಿ ಹೇಳಬೇಕು. ಆ ರಿಕಾರ್ಡ್ ಈಗ ನನ್ನ ಮುಂದೆ ಇಲ್ಲ. ನಮ್ಮ ಪ್ರಾಜೆಕ್ಟ್‌ಗಳ ಬಗ್ಗೆ ಮದ್ರಾಸ್ ಸರ್ಕಾರಕ್ಕೆ ಕಳಿಸಿದ್ದಕ್ಕಾಗಿ, ಅದರಲ್ಲಿಯೂ ಹಾರಂಗಿ ಪ್ರಾಜೆಕ್ಟ್ ಕಟ್ಟುವುದರ ಬಗ್ಗೆ ಕಳಿಸಿದ್ದಕ್ಕಾಗಿ ನಾವು ಪ್ರತಿಭಟನೆಯನ್ನು ಮಾಡಿದ್ದೇವೆ.

ಶ್ರೀ ಎಲ್.ಎಸ್. ಶ್ರೀಕಂಠಯ್ಯ :-

ಹಾರಂಗಿ, ಕಂಬದಕಡ, ಮೈಸೂರು ರಾಜ್ಯದ ವ್ಯಾಪ್ತಿಯೊಳಗೆ ಒಳಪಟ್ಟಿರುವಾಗ ಕೇಂದ್ರದ ನೀರಾವರಿ ಮತ್ತು ಪವರ್ ಕಮೀಷನರ್‌ವರು ಕ್ಲಿಯರೆನ್ಸ್ ಕೊಟ್ಟ ಹೊರತು ಯಾವ ಕಾರ್ಯವನ್ನೂ ಕೈ ಕೊಳ್ಳಬಾರದು ಎಂದು ಅಗ್ರಿಮೆಂಟಿಗೆ ಏನಾದರೂ ರುಜು ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಅಗ್ರಿಮೆಂಟ್ ಪ್ರಶ್ನೆ ಇಲ್ಲ. ಈಗ ಇರುವಂಥ ಒಂದು ಪದ್ಧತಿ ಪ್ರಕಾರ ಎರಡು ಕೋಟಿ ರೂಪಾಯಿಗಿಂತ ಮೇಲ್ಪಟ್ಟಿರುವ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಬೇಕಾಗುತ್ತದೆ. ಆ ರೀತಿ ಟೆಕ್ನಿಕಲ್ ಕ್ಲಿಯರೆನ್ಸ್ ಗೋಸ್ಕರ ಕೇಂದ್ರಕ್ಕೆ ಬರೆಯಬೇಕಾಗುತ್ತದೆ.

ಟೆಕ್ನಿಕಲ್ ಕ್ಲಿಯರೆನ್ಸ್ ಇಲ್ಲ ಎಂದು ನಾವು ಕೈ ಕಟ್ಟಿ ಕೂತಿಲ್ಲ. ಹೇಮಾವತಿ ಯೋಜನೆಗೆ ಸಂಬಂಧಪಟ್ಟ ಎಲ್ಲ ಕೆಲಸವನ್ನೂ ಈಗ ಪ್ರಾರಂಭ ಮಾಡಿದ್ದೇವೆ. ಆದಕ್ಕಾಗಿ ಏನು ಟೆಕ್ನಿಕಲ್ ಕ್ಲಿಯರೆನ್ಸ್ ಬೇಕು ಆದಕ್ಕಾಗಿ ಕಾಯಿದೆ ಸಿಬ್ಬಂದಿ ವಗ್ಗೆರೆ ಮಂಜೂರು ಮಾಡಿ, ನಮ್ಮ ಹತ್ತಿರ ಏನು ಹಣವಿದೆ ಅದನ್ನು ಉಪಯೋಗ ಮಾಡಿ ಏನೇನು ಕೆಲಸ ಯೋಜನೆಗೆ ಸಂಬಂಧಪಟ್ಟ ಹಾಗೆ ಮಾಡಬೇಕಾಗಿದೆಯೋ ಅದನ್ನೆಲ್ಲ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ :-

1924 ರ ಒಪ್ಪಂದದ ಪ್ರಕಾರ ಈ ಎರಡು ಯೋಜನೆಗಳಿಗೂ ಅಂದಾಜುಗಳನ್ನು ತಯಾರು ಮಾಡಿರುವಾಗ ಮೈಸೂರು ಸರ್ಕಾರದವರು ಇನ್ನೂ ಏಕೆ ಮೀನ ಮೇಷ ಎಣಿಸುತ್ತಿದ್ದೀರಿ ? ಡೆಲ್ಲಿಯ ಕಡೆಗೆ ಏಕೆ ನೋಡುತ್ತಿದ್ದೀರಿ ? ಇದರಲ್ಲಿ ನಿಮಗೆ ಬಂದಿರುವ ತೊಂದರೆಯಾದರೂ ಏನು ?

ಶ್ರೀ ವೀರೇಂದ್ರ ಪಾಟೀಲ್ :-

ನಾವು ಇದಕ್ಕಾಗಿ ದೆಹಲಿಯ ಕಡೆಗೆ ನೋಡುತ್ತಿಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್ ಬರುವುದು ಬರುತ್ತದೆ, ನಾವು ನಮ್ಮ ಪಾಡಿಗೆ ಮುಂದುವರೆಯುತ್ತಿದ್ದೇವೆ.

ಶ್ರೀ ಎಚ್.ಎನ್. ನಂಜೇಗೌಡ :-

(ಈ) ಪ್ರಶ್ನೆಗೆ ಉತ್ತರವಾಗಿ 1924ನೇ ಇಸವಿಯ ಒಪ್ಪಂದದ ಪ್ರಕಾರ ಈ ಯೋಜನೆಗಳನ್ನು ತಯಾರಿಸುವುದರಿಂದ ಯಾವ ಆಕ್ಷೇಪಣೆಯನ್ನೂ ಎತ್ತುವಂತಿಲ್ಲ ಎಂದು ತಿಳಿಸಿವೆ.

(ಆ) ಪ್ರಶ್ನೆಗೆ ಉತ್ತರವಾಗಿ ತಾಂತ್ರಿಕ ಮಂಜೂರಾತಿ ಬಂದಿಲ್ಲ ಎಂದು ಹೇಳಿದೆ. ಕೇಂದ್ರ ಸರಕಾರದ ಸಿ.ಡಬ್ಲ್ಯೂ.ಪಿ.ಸಿ. ಯವರು ಅದೇ ಕೆಲಸವಾಗಿ ಮಂಜೂರಾತಿ ಕೊಡಲು ನಿಧಾನ ಮಾಡುತ್ತಿದ್ದಾರೆಂಬ ಸಂಶಯವಿದೆಯೇ ? ಹಾರಂಗಿಯು ಷೆಡ್ಯೂಲ್ಡ್ ರಿವರ್ ಅಲ್ಲವೆಂದು ಹೇಳಿದಿರಿ. ನಮ್ಮ ಒಪ್ಪಂದದ ಪ್ರಕಾರ 45 ಟಿ.ಎಂ.ಸಿ.ಎಫ್.ಟಿ ನೀರನ್ನು ಉಪಯೋಗಿಸಿಕೊಳ್ಳಲು ನಮಗೆ ಹಕ್ಕಿದೆ. ನಾವು ಉಪಯೋಗ ಮಾಡಿರುವುದು 27. ಹೀಗೆ ಅವಕಾಶ ಬೇಕಾದಷ್ಟಿದ್ದರೂ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತಿಲ್ಲ. ಆಂಧ್ರದ ನೀರಾವರಿ ಹೆಚ್ಚಿಸಲು, ಮದ್ರಾಸಿನವರನ್ನು ಒಲಿಸಿಕೊಳ್ಳಲು ಹೀಗೆ ರಾಜಕೀಯ ಮಾಡುತ್ತಿದ್ದಾರೆ ಎಂದೇನಾದರೂ ಸರಕಾರಕ್ಕೆ ಅನುಮಾನವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಸದಸ್ಯರು, ಹೇಳಿದಂತೆ, ರಾಜಕೀಯ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ. ಆದರೆ ಇಂಟರ್ ಪ್ರಿಟೇಷನ್ನಿನಲ್ಲಿ ಸ್ವಲ್ಪ ಮತಭೇದವಿದೆ. ಮತ್ತು ಹೇಮಾವತಿಯ ಸಲುವಾಗಿ ಕೇಂದ್ರದವರು ಮೇಲಿಂದ ಮೇಲೆ ಬೇರೆ ಬೇರೆ ಇನ್‌ಫರ್ಮೇಷನ್ ಕೇಳುತ್ತಿದ್ದಾರೆ. ನಾವು ಅದಕ್ಕೆ ನಿಮ್ಮ ಆಫೀಸರನ್ನು ಕಳಿಸಿ, ಬೇಕಾದ ಸಮಾಚಾರ ಒದಗಿಸುತ್ತೇವೆ ಎಂದು ತಿಳಿಸಿದ್ದೇವೆ. ಆದಾದ

ಮೇಲೂ ಕೂಡ ಮತ್ತೆ ಬರೆದಿದ್ದಾರೆ. ಇದರಿಂದ ಕಾಲವ್ಯಯ ಮಾಡುತ್ತಿದ್ದಾರೇನೋ ಎಂಬ ಸಂದೇಹ ಬಂದಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಎಸ್. ಶಿವಪ್ಪ :-

ಕ್ಲಿಯರೆನ್ಸ್ ಇಷ್ಟೇ ಕಾಲದೊಳಗಾಗಿ ಕೊಡಬೇಕೆಂದು ಅವಧಿ ನಿಗದಿ ಮಾಡಿಲ್ಲದಿರುವುದರಿಂದ ಅನೇಕ ವರ್ಷಗಳಾದರೂ ಕೂಡ ಅದು ಬಾರದಿರುವುದರಿಂದ ಪ್ರಾರಂಭಿಸಬಹುದು ಎಂದು ತಿಳಿದುಕೊಂಡು ಒಪ್ಪಿಗೆ ಇದೆ ಎಂಬ ಭಾವನೆಯಿಂದ ಕೆಲಸ ಮುಂದುವರಿಸುತ್ತೇವೆಂದು ಕೇಂದ್ರ ಸರಕಾರಕ್ಕೆ ತಿಳಿಸುವುದು ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ. ಕೇಂದ್ರದವರು ಕೆಲವು ಸಮಾಚಾರ ಕೇಳುತ್ತಿದ್ದಾರೆ. ಅವರು ಅನುಮತಿ ಕೊಡುವುದಿಲ್ಲವೆಂದು ಹೇಳಿಲ್ಲ. ಇಷ್ಟೇ ಕಾಲದಲ್ಲಿ ಕ್ಲಿಯರೆನ್ಸ್ ಕೊಡಬೇಕೆಂದೇನೂ ನಿಗದಿ ಮಾಡಿಲ್ಲ. ಈಗಿನ ರೀತಿಯನ್ನು ನೋಡಿದರೆ ಅವರು ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಬರುತ್ತಿದೆ.

ಶ್ರೀ ಜೆ.ಪಿ. ಸರ್ವೇಶ :-

ಈ ಅಣೆಕಟ್ಟನ್ನು ಪೂರ್ಣಗೊಳಿಸಲು ಭಾರತಿ ಸರಕಾರದ ಹಣಕಾಸಿನ ಸಹಾಯದ ಪ್ರತಿಶತ ಎಷ್ಟು ? ಹಾಗಿದ್ದಲ್ಲಿ, ಈ ಮೊದಲೇ ಎಷ್ಟು ಹಣವನ್ನು ಕೊಡಲಾಗಿದೆ ?

ಶ್ರೀ ವೀರೇಂದ್ರ ಪಾಟೀಲ್ :-

ಯೋಜನೆಯ ಮಿತಿಯ ಪ್ರಕಾರ, ಯೋಜನೆಗಳಿಗಾಗಿ ಕೇಂದ್ರ ಸರಕಾರವು ಕೊಟ್ಟ ಹಣವನ್ನು, ನಾವು ಅಣೆಕಟ್ಟುಗಳಿಗಾಗಿ ಸರಿಪಡಿಸಬೇಕಾಗುತ್ತದೆ.

ಶ್ರೀ ಎಂ. ಬಸವರಾಜು :-

ಹಾರಂಗಿ ಯೋಜನೆ ಕೆಲಸ ಬಹಳ ನಿಧಾನವಾಗಿರುವುದರಿಂದ ಕೇಂದ್ರ ಸರಕಾರವೇ ಅದನ್ನು ವಹಿಸಿಕೊಂಡು ಮಾಡಬೇಕೆಂದು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್ :-

ಅವರು ತೆಗೆದುಕೊಳ್ಳುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ಕೆಲವು ಕೆಲಸಗಳನ್ನು ಅವರು ವಹಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಅದಕ್ಕೆ ಉತ್ತರ ಬಂದಿಲ್ಲ.

ಶ್ರೀ ಕೆ.ಎಚ್. ರಂಗನಾಥ್ :-

ನೀವು ಅಲ್ಲಿನ ಮಂತ್ರಿಗಳು ರಾಜಕೀಯ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ ಎಂದು

ಹೇಳಿದಿರಿ. ನಿಮಗೂ ಕೇಂದ್ರಕ್ಕೂ ನಡೆದಿರುವ ವ್ಯವಹಾರವನ್ನು ಸಭೆಯ ಮುಂದಿಟ್ಟರೆ, ಈ ಸಭೆ ತೀರ್ಮಾನ ಮಾಡಿ ಕೇಂದ್ರವನ್ನು ಒತ್ತಾಯ ಮಾಡಲು ಅವಕಾಶವಾಗುತ್ತದೆ. ಹಾಗೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್ :-

ಅದರ ಅವಶ್ಯಕತೆಯಿಲ್ಲ. ಸಭೆಗೆ ಬೇಕಾದ ಎಲ್ಲಾ ಸಮಾಚಾರವನ್ನೂ ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಇದರಲ್ಲಿ ರಹಸ್ಯವಾದುದೇನೂ ಇಲ್ಲ. ಪತ್ರವ್ಯವಹಾರ ನಡೆಸಿರುವುದನ್ನು ಎಷ್ಟೋ ಸಲ ಈ ಸಭೆಗೆ ಹೇಳಿದ್ದೇನೆ. ಪಾರ್ಲಿಮೆಂಟಿನ ಸದಸ್ಯರಿಗೂ ಸಹ ಎಲ್ಲಾ ಸಮಾಚಾರವನ್ನು ತಿಳಿಸಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :-

ಕಾಂಗ್ರೆಸ್ ಸದಸ್ಯರುಗಳು ತಮ್ಮ ಏರಿಯಾದಲ್ಲಿ ಆಗಬೇಕಾದಂಥ ಕೆಲಸಗಳನ್ನು ಮಂತ್ರಿಗಳಲ್ಲಿ ಹೋಗಿ ಮಾಡಿಸಿಕೊಳ್ಳುತ್ತಾರೆ. ಎದುರು ಪಕ್ಷದ ಸದಸ್ಯರುಗಳ ಕ್ಷೇತ್ರವನ್ನು ಕೇಳುವವರೇ ಇಲ್ಲವಾಗಿದೆ. 40 ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್ ಏನಿದೆ ಅದರ ಪ್ರಕಾರ ಕೆಲಸ ಮಾಡುತ್ತಿದ್ದೀರಾ? ಈ ಮಾಸ್ಟರ್ ಪ್ಲಾನ್‌ನೊಳಗೆ ಬೀದರ್ ಜಿಲ್ಲೆಯ ಚಿಮ್ ಕೋಡ್ ಬಳಿ ಒಂದು ಏತ ನೀರಾವರಿ ಯೋಜನೆಯನ್ನು ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳುವಂಥದ್ದು ಕೇವಲ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ಏರಿಯಾದಲ್ಲೇ ಕೆಲಸಗಳು ಆಗುತ್ತಿವೆ. ಎದುರು ಪಕ್ಷದ ಸದಸ್ಯರುಗಳ ಏರಿಯಾದಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲವೆಂದು ಈ ಸಲದ ಬಡ್ಜೆಟ್ಟನ್ನು ನೋಡಿದರೆ ಮಾನ್ಯ ಸದಸ್ಯರುಗಳಿಗೆ ಗೊತ್ತಾಗುತ್ತದೆ. ಸರ್ಕಾರದವರು ಕೆಲಸಗಳನ್ನು ತೆಗೆದುಕೊಳ್ಳುವಾಗ ಆ ಪಕ್ಷದವರು ಈ ಪಕ್ಷದವರು ಎಂದು ಪರಿಗಣಿಸದೆ ಯೋಜನೆಗಳ ಬಗ್ಗೆ ಯಾವ ಯಾವ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿರುತ್ತದೋ ಅಂಥದ್ದನ್ನು ಮೊದಲು ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಅನೇಕ ಕೆಲಸಕಾರ್ಯಗಳು ಪ್ರಾರಂಭವಾಗಿವೆ. ಈ ಭಾಗದಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬಾರದೆಂದು ಅಲ್ಲಿ ಲಿಫ್ಟ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೆಂದು ತಿಳಿದು ಒಂದು ಪ್ರಾಜೆಕ್ಟನ್ನು ಕಟ್ಟಬೇಕೆಂದಿದ್ದೇವೆ. ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಿದರೆ ನೀರು ಸಿಗಲಾರದೆಂದು ತಿಳಿದು ದೊಡ್ಡ ದೊಡ್ಡ ಕೆರೆಕಟ್ಟೆಗಳನ್ನು ಮಾಡಿಸಲು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ.

ಶ್ರೀ ವಿ.ಎನ್. ಪಾಟೀಲ್ :-

ನಾನು ಸೂಚಿಸಲು ಇಚ್ಛಿಸುವುದೇನೆಂದರೆ ಕೇವಲ ಏಳು ಗ್ರಾಮಗಳು ಜಲಮಯವಾಗುವವು. ಆದರೆ, ಮಾನ್ಯ ಮಂತ್ರಿಗಳ ಹೇಳಿಕೆಯ ಪ್ರಕಾರ, ಜಲಮಯದ ಸಾಧ್ಯತೆ ಇರುವುದರಿಂದ ಲಿಫ್ಟ್ ನೀರಾವರಿ ಯೋಜನೆಯನ್ನು ಕೈಗೊಳ್ಳಲಾಗಲಿಲ್ಲ. ಅದು ತಪ್ಪು ಏಕೆಂದರೆ, ಕೇವಲ 7 ಗ್ರಾಮಗಳು ಜಲಮಯವಾಗುವವು. ಒಟ್ಟು 7 ಯೋಜನೆಗಳ ಪೈಕಿ ಕೇವಲ ಒಂದೇ

ಯೋಜನೆಯನ್ನು ಕೈಗೊಳ್ಳಲಾಗಿದೆ. ಅಲ್ಲಿ ಮೂರೂ ನದಿಗಳು ನೀರಿನ ಮೂಲಗಳನ್ನು ಹೊಂದಿವೆ ( ಮಾಂಜ್ರಾ, ಕಾರಂಜಾ ಮತ್ತು ನಾಗರ ಹಳ್ಳ ).

ಶ್ರೀ ವೀರೇಂದ್ರ ಪಾಟೀಲ್ :-

ಬೀದರ್ ಜಿಲ್ಲೆಯಲ್ಲಿ ಲಿಫ್ಟ್ ನೀರಾವರಿಗಾಗಿ ಯಾವ ಶಕ್ತಿ ಅಥವಾ ಸಾಮರ್ಥ್ಯವಿಲ್ಲವೆಂದು ನಾನು ಹೇಳಿಲ್ಲ. ಕಾರಂಜಾ ಅಣೆಕಟ್ಟನ್ನು ಕೈಗೊಂಡ ನಂತರ, ಲಿಫ್ಟ್ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಸಮಯದಲ್ಲಿ, ನಾವು ಫಲ ಹೀನವಾಗುವ ಯೋಜನೆಗಳನ್ನು ಕೈ ಗೊಳ್ಳಬಾರದು. ಅದು ಜಲಮಯವಾಗುವ ಪ್ರದೇಶಕ್ಕೆ ಅನ್ವಯಿಸುವುದಿಲ್ಲ. ಆದರೆ, ಅದು ಕಮಾಂಡ್ ಪ್ರದೇಶಕ್ಕೆ ಅನ್ವಯಿಸುವುದು.

ಶ್ರೀ ಎಸ್. ಭೀಮಣ್ಣ :-

ಬೀದರ್ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ತಾವು ಹೇಳುವುದಾದರೆ ಈ ವರ್ಷವೇ ಕಾರಂಜಾ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಈ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಈ ರೀತಿಯ ಪ್ರಾಜೆಕ್ಟ್ ಕಟ್ಟುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆಯೇ ಹೊರತು ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಸುವುದರಿಂದ ನೀರು ಹೆಚ್ಚು ಸಿಗುವುದಿಲ್ಲವೆಂದು ತಿಳಿದು ಬಂದಿದೆ.

ಶ್ರೀ ಜಿ. ಚಂದ್ರಕಾಂತ :-

ಈ ಎಲ್ಲ ಉತ್ತರಗಳ ಹಿನ್ನೆಲೆಯಲ್ಲಿ, ನಾವು “ ಸರಕಾರವು ಅಭಿವೃದ್ಧಿಯ ಈ ಎಲ್ಲ ಭಾಗಗಳಿಗೆ, ಸಂಪೂರ್ಣ ಉದಾಸೀನತೆ ” ಹೊಂದಿದೆ ಎಂದು ಹೇಳಬಹುದೇ ?

ಶ್ರೀ ವೀರೇಂದ್ರ ಪಾಟೀಲ್ :-

ಈ ತಾನೇ ನಾನು ಹೇಳಿದ ಹಾಗೆ, ವ್ಯಕ್ತವಾಗುವುದೇನೆಂದರೆ, ಈ ಪ್ರದೇಶದ ಅಭಿವೃದ್ಧಿಗಾಗಿ, ಸರಕಾರವು ಬಹಳ ಆಸಕ್ತಿಯನ್ನು ಹೊಂದಿದೆ.

## 8. ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಪ್ರಶ್ನೆಗಳಿಗೆ ಚರ್ಚೆಯ ಮೇಲೆ - ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿಯ ಮಂತ್ರಿಯಾಗಿ - ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ. (21ನೇ ಮಾರ್ಚ್ 1968)

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಕಳೆದ 3 ದಿವಸಗಳಿಂದಲೂ ಚರ್ಚೆ ಆಗಿದೆ. ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಈ ಸಲದ ಚರ್ಚೆಯಲ್ಲಿ ಒಬ್ಬರನ್ನು ಬಿಟ್ಟರೆ ಉಳಿದ ಎಲ್ಲಾ ಮಾನ್ಯ ಸದಸ್ಯರೂ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಸಲಹೆಗಳನ್ನೂ ಕೂಡ ಸಭೆಯ ಮುಂದೆ ಅವರು ಇಟ್ಟಿದ್ದಾರೆ. ಈ ಸಲದ ಚರ್ಚೆಯಲ್ಲಿ ಶ್ರೀಮಾನ್ ವಿ.ಎನ್.ಪಾಟೀಲರು ಒಂದು ವಿಚಾರವನ್ನು ಸರ್ಕಾರದಿಂದ ತಿಳಿದುಕೊಳ್ಳುವಂತೆ ಪ್ರಯತ್ನ ಮಾಡಿದ್ದಾರೆ. ಅದು ದೊಡ್ಡ ಇಲಾಖೆಯಾದಂಥ ಈ ಲೋಕೋಪಯೋಗಿ ಖಾತೆಯಿಂದ ಪ್ರತಿ ವರ್ಷವೂ ಸುಮಾರು 60-70-80-90 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗುತ್ತಾ ಇದೆ, ಆದರೆ ಅದರಿಂದ ಸಾಕಷ್ಟು ಲಾಭವಾಗಿಲ್ಲ. ಅದಕ್ಕಾಗಿ ಕೇವಲ ಫೈನಾನ್ಸ್ ಪ್ರೋಗ್ರೆಸ್ ತೋರಿಸುವುದರಿಂದ ಸಮಾಧಾನವಾಗುವುದಿಲ್ಲ. ಫಿಜಿಕಲ್ ಪ್ರೋಗ್ರೆಸ್ ತೋರಿಸಬೇಕು ಎಂದು ಹೇಳಿದ್ದಾರೆ. ಅದಕ್ಕಾಗಿ ಈ ಡಿಪಾರ್ಟ್‌ಮೆಂಟಿನಲ್ಲಿ ಕಳೆದ ಹತ್ತು ವರ್ಷಗಳಿಂದ ಎಂದರೆ 1957 ರಿಂದ 1967 ರ ವರೆಗೆ ನಾವು ಏನು ಸಾಧಿಸಿದ್ದೇವೆ ಎನ್ನುವ ಪ್ರಗತಿಯ ಒಂದು ಸಂಕ್ಷಿಪ್ತ ಪರಿಚಯವನ್ನು ಈ ಸಂದರ್ಭದಲ್ಲಿ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. 1957 ರಲ್ಲಿ ಹೊಸ ಮೈಸೂರು ಪ್ರಾರಂಭ ಆಯಿತು. ಆಗಿನಿಂದ ಇದರ ಪೂರ್ಣ ವಿವರಗಳನ್ನು ಹೇಳಲು ಬಯಸುತ್ತೇನೆ.

ರಸ್ತೆಗಳ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದರೆ ಹೆಚ್ಚು ಹೇಳಲು ಅವಕಾಶವಿಲ್ಲದಿದ್ದರೂ ಇಷ್ಟು ಮಾತ್ರ ಸಭೆಯ ಗಮನಕ್ಕೆ ತರಬಯಸುತ್ತೇವೆ. ಕಳೆದ 10 ವರ್ಷದಲ್ಲಿ ಅಂದರೆ 1957 ರಿಂದ 1967ರ ವರೆಗೆ ನಾವು ಸಾಧಿಸಿದಂಥ ಪ್ರಗತಿ ಹೀಗಿದೆ. ಮೊದಲು 31-3-1957 ರವರೆಗೆ 13,948 ಮೈಲು ಇದ್ದುದು 31-3-1967 ರವರೆಗೆ 26,147 ಮೈಲುಗಳು ಹೆಚ್ಚಿವೆ. ಬ್ರಿಡ್ಜಸ್ ಎಂದರೆ 100 ಫೀಟ್ ಲೀನಿಯರ್ ವಾಟರವೇ (linear water way) 1957ರಲ್ಲಿ 232 ಸೇತುವೆಗಳು ಇದ್ದುದು, ಈವೊತ್ತು 432 ಸೇತುವೆಗಳನ್ನು ಮಾಡಿ ಮುಗಿಸಿದ್ದೇವೆ. ಇದೂ ಅಲ್ಲದೆ ಕಳೆದ 10 ವರ್ಷಗಳಲ್ಲಿ ನಾವು ಸುಮಾರು 11 ಸಾವಿರ ಮೈಲಿಗಳಷ್ಟು ಡಿಸ್ಟ್ರಿಕ್ಟ್ ಮತ್ತು ಲೋಕಲ್ ಬೋರ್ಡ್ಸ್ ರೋಡ್ಸನ್ನು ಸ್ಟೇಟ್ ಫಂಡ್ ರೋಡ್ಸ್ ಆಗಿ ಮಾಡಿ ಪಿ.ಡಬ್ಲ್ಯೂ.ಡಿ. ವಶಕ್ಕೆ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಗೌರ್ನಮೆಂಟ್ ಆರ್ಡರ್ ಮಾಡಿದ್ದೇವೆ. ಈ ಗೌರ್ನಮೆಂಟ್ ಆರ್ಡರ್ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಇದೂ ಅಲ್ಲದೆ ರೂರಲ್

ಕಮ್ಯುನಿಕೇಷನ್ ರೋಡ್ಸ್ 1957 ರಿಂದ ಈಚೆಗೆ 13,887 ಮೈಲುಗಳು ತೆಗೆದುಕೊಂಡು ಅದರಲ್ಲಿ 11,719 ಮೈಲುಗಳನ್ನು ಮಾಡಿ ಮುಗಿಸಿದ್ದೇವೆ. ಅದಕ್ಕೆ ಈಗಾಗಲೇ 6 ಕೋಟಿ 37 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಈ ರೀತಿಯಾಗಿ ಫಿಸಿಕಲ್ ಪ್ರೋಗ್ರೆಸ್ ಆಗಿದೆ. ಹೊಸ ಮೈಸೂರು ದೇಶ ನಿರ್ಮಾಣ ಆಗುವುದಕ್ಕಿಂತ ಮುಂಚಿತವಾಗಿ ರಸ್ತೆ, ಸೇತುವೆಗಳ ನಿರ್ಮಾಣಕ್ಕಾಗಿ 1956-57 ರಲ್ಲಿ 325,52 ಲಕ್ಷ ರೂಪಾಯಿಗಳು ಇದ್ದುದು 1966-67 ರಲ್ಲಿ ನಮ್ಮ ಔಟಲೇ 1036.93 ಲಕ್ಷ ರೂಪಾಯಿಗಳು. ಅದೇ ರೀತಿ 1967-68 ರಲ್ಲಿ 1067.27 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಒಂದು ಅಂದಾಜನ್ನು ಇಟ್ಟು ಕೊಂಡಿದ್ದೇವೆ. ಈ ರೀತಿ ರಸ್ತೆ ಮತ್ತು ಸೇತುವೆಗಳ ಮೇಲೆ ಖರ್ಚು ಮಾಡಿದ್ದೇವೆ.

ಇನ್ನು ಕಟ್ಟಡಗಳ ವಿಚಾರ. ಹೊಸ ಮೈಸೂರು ರಾಜ್ಯ ಸ್ಥಾಪಿತವಾದ ಮೇಲೆ ಇದರ ಬಗ್ಗೆ ಒಂದು ಅವಶ್ಯಕತೆ ಕಂಡುಬಂತು. ಇದಕ್ಕಾಗಿ ಮೊದಲು 1956-57 ರಲ್ಲಿ ಕಟ್ಟಡಕ್ಕಾಗಿ 118.53 ಲಕ್ಷ ರೂಪಾಯಿಗಳು ಖರ್ಚಾಗಿದೆ. 1966-67 ರಲ್ಲಿ 532.70 ಲಕ್ಷ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಿದ್ದೇವೆ. ಇದರಿಂದ 1966-67 ರಲ್ಲಿ ನಾವು ಎಷ್ಟು ಮಟ್ಟಿಗೆ ಖರ್ಚು ಮಾಡಿದ್ದೇವೆ ಎನ್ನುವುದು ಕಂಡು ಬರುತ್ತದೆ. ಇದಲ್ಲದೆ 1967-68 ರಲ್ಲಿ 651.63 ಲಕ್ಷ ರೂಪಾಯಿಗಳನ್ನು ಹೆಚ್ಚು ಖರ್ಚುಮಾಡಲು ಒಂದು ಅಂದಾಜು ಇಟ್ಟುಕೊಂಡಿದ್ದೇವೆ. ಬಿಲ್ಡಿಂಗ್ಸ್ ಮೇಲೆ ಹೆಚ್ಚು ಖರ್ಚು ಮಾಡಬಾರದು ಎನ್ನುವ ಅಂಶವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನಾವು ದವಾಖಾನೆಗಳಿಗೆ, ಕಾಲೇಜುಗಳಿಗೆ ಮತ್ತು ಇತರ ಡಿಪಾರ್ಟ್‌ಮೆಂಟಿನ ಕಟ್ಟಡದ ಮೇಲೆ ಇನ್ನೂ ಹಲವಾರು ಕಟ್ಟಡದ ಮೇಲೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಖರ್ಚುಮಾಡಬೇಕಾಗಿ ಬಂದಿದೆ.

ಇದುವರೆಗೆ ಕಮ್ಯೂನಿಕೇಷನ್ ಮತ್ತು ಬಿಲ್ಡಿಂಗ್ಸ್ ಬಗ್ಗೆ ಎಲ್ಲಾ ವಿಚಾರಗಳನ್ನೂ ಹೇಳಿದ್ದೇನೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇತ್ತೀಚೆಗೆ ರಸ್ತೆಗಳ ಮೇಲೆ ಹಣವನ್ನು ಅಷ್ಟೊಂದು ಖರ್ಚು ಮಾಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದೇವೆನ್ನುವ ಮಾತನ್ನು ನಾನು ಅನೇಕಸಾರಿ ಹೇಳಿದ್ದೇನೆ. ರಸ್ತೆಗಳ ಮೇಲೆ ಹೆಚ್ಚು ಖರ್ಚು ಮಾಡುವುದಕ್ಕೆ ಸಾಕಷ್ಟು ದುಡ್ಡು ಇಲ್ಲ. ಪ್ರತಿವರ್ಷವೂ ಈ ಬಾಬಿಗೆ ಎರಡು ಮೂರು ಕೋಟಿ ರೂಪಾಯಿಗಳವರೆಗೂ ಖರ್ಚು ಮಾಡುತ್ತೇವೆ. ಇದು ಸಾಲದು. ನಂಬರ್ 50 ಡಿಮ್ಯಾಂಡ್ ಸಿವಿಲ್ ವರ್ಕ್ಸ್ - ಮೇಂಟೇನೆನ್ಸ್ ಅಂಡ್ ಗ್ರಾಂಟ್ಸ್ ಎಂಬುದಾಗಿ ಏನಿದೆಯೋ ಅದರಲ್ಲಿ ರಸ್ತೆಗಳ ಸಲುವಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ರಸ್ತೆಗಳ ಮೈಲೇಜು ಬಹಳಮಟ್ಟಿಗೆ ಹೆಚ್ಚಾಗಿದೆ. ಸುಮಾರು 14-15 ಸಾವಿರ ಮೈಲಿಗಳಷ್ಟು ಡಿ.ಆರ್.ಬಿ. ರೋಡ್ಸನ್ನು ತೆಗೆದುಕೊಂಡಿದೆ. ಕಮ್ಯುನಿಕೇಷನ್ಸ್ ರೋಡ್ಸ್ ಬಹಳ ಇವೆ. ಅದರ ಬಗ್ಗೆ ಎಷ್ಟು ತೆಗೆದುಕೊಳ್ಳಬೇಕೆಂಬುದನ್ನು ಇಲ್ಲಿಯವರೆಗೂ ನಿರ್ಣಯ ಮಾಡಿಲ್ಲ. ಇತ್ತೀಚೆಗೆ ಏನು ವಿಚಾರ ಮಾಡುತ್ತಿದ್ದೇವೆ ಅಂದರೆ, ಡಿ.ಎಲ್.ಬಿ. ರೋಡ್ಸ್ ಮತ್ತು ರೂರಲ್ ಕಮ್ಯುನಿಕೇಷನ್ಸ್ ರೋಡ್ಸ್ ಮಾತ್ರ ತೆಗೆದುಕೊಂಡು ಓ.ಡಿ.ಆರ್. ಮತ್ತು ಎಂ.ಡಿ.ಆರ್. ನ್ಯಾಷನಲ್ ಹೈವೇಗಳನ್ನು ಈಗಿನ ಪರಿಸ್ಥಿತಿಯಲ್ಲಿ ಬಿಡಬೇಕಾಗಿದೆ. ಏಕೆಂದರೆ ಇವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಬಹಳ ದುಡ್ಡು ಬೇಕಾಗುತ್ತದೆ. ಈಗ ಅಷ್ಟು ಹಣವಿಲ್ಲ. ಅವನ್ನು ಚೆನ್ನಾಗಿ ನೋಡಿಕೊಳ್ಳದೇ ಹೋದರೆ ಮಾಡಿದ್ದೆಲ್ಲಾ ವ್ಯರ್ಥವಾಗುತ್ತದೆಂದು ಗೊತ್ತಿದ್ದರೂ ಯಾವ ಪ್ರಮಾಣದಲ್ಲಿ ಮೇಂಟೇನ್ ಮಾಡಬೇಕೋ ಆ ಪ್ರಕಾರ ಮಾಡುತ್ತಾ ಇಲ್ಲ. ಅದಕ್ಕಾಗಿ

ಒಂದು ವಿಚಾರ ನನ್ನ ಮನಸ್ಸಿನಲ್ಲಿ ಹೊಳೆಯುತ್ತಾ ಇದೆ. ಅನೇಕ ಜನ ಪ್ರೈವೇಟ್ ಬಸ್ ಓನರ್ಸ್ ಈ ಕೆಲಸವನ್ನು ನಡೆಸುತ್ತಿದ್ದಾರೆ. ಈಗ ಅನೇಕ ನ್ಯಾಷನಲ್ ಹೈ ವೇಸ್ ಆಗುತ್ತಿರುವಾಗ ಸಾಕಷ್ಟು ಅವರಿಗೆ ರೂಟ್ಸ್ ಇಲ್ಲವೆಂಬ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಎಕ್ಸ್ ಪರಿಮೆಂಟಲ್ ಬೇಸಿಸ್ ಮೇಲೆ ಕೆಲವು ಏರಿಯಾಗಳನ್ನು ಸೆಲೆಕ್ಟ್ ಮಾಡಿಕೊಂಡು ಕಚ್ಚಾ ರಸ್ತೆಗಳನ್ನು ಅವರಿಗೆ ವಹಿಸಿಕೊಟ್ಟು ಅಡ್ವಾನ್ಸ್ ಆಗಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಕೊಟ್ಟರೆ ಐದು ಹತ್ತು ವರ್ಷಗಳ ಕಾಲ ಅವರೇ ಆಪರೇಟ್ ಮಾಡುವುದಕ್ಕೆ ಬಿಡಬಹುದು. ಈ ಒಂದು ಕಾರ್ಯದಿಂದ ನಮ್ಮ ಹಣ ಬರಬಹುದು. ಈಗಾಗಲೇ ನಮ್ಮ ಟ್ರಾನ್ಸ್‌ಪೋರ್ಟ್ ಕಮಿಷನರ್ ಮತ್ತು ಚೀಫ್ ಇಂಜನೀಯರನ್ನು ಆ ಬಗ್ಗೆ ಕಾನ್‌ಕ್ರೀಟ್ ಪ್ರೊಪೊಸಲ್ಸ್ ಕಳುಹಿಸಿ ಎಂಬುದಾಗಿ ಹೇಳಿದ್ದೇವೆ. ಸರ್ಕಾರದ ಕಡೆ ಪ್ರಪೋಸಲ್ಸ್ ಬಂದಿದೆ ಎಂಬುದಾಗಿ ಕೇಳಿದ್ದೇವೆ. ಇದರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಆದರೆ ಇದರಲ್ಲಿ ಪ್ರೈವೇಟ್ ಆಪರೇಟರ್ಸ್ ಮುಂದೆ ಬಂದು ಅಡ್ವಾನ್ಸಾಗಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಈ ಒಂದು ಪ್ರಯತ್ನದಿಂದಲೇ ಎಲ್ಲಾ ದುಡ್ಡು ಬಂದು ರಸ್ತೆಗಳನ್ನು ಇಂಪ್ರೂವ್ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆ ಪರಿಸ್ಥಿತಿಯಲ್ಲಿ ನಾವು ಇಲ್ಲಿ ರೂರಲ್ ಕಮ್ಯುನಿಕೇಷನ್ ರಸ್ತೆಗಳ ಬಗ್ಗೆ ಈಗಾಗಲೇ ಆರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಮುಂದೆ ಹೆಚ್ಚು ಖರ್ಚು ಮಾಡುವುದಕ್ಕೆ ಶಕ್ತಿ ಇಲ್ಲ. ಡೀಸೀಲ್ಟಿಂಗ್‌ಗಾಗಿ 10 ಲಕ್ಷ ರೂರಲ್ ಕಮ್ಯುನಿಕೇಷನ್‌ಗೆ 20 ಲಕ್ಷ ಹೀಗೆ 30-35 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದೆ. ಅದು ಏನೇನೂ ಸಾಲದು. ರೂರಲ್ ಕಮ್ಯೂನಿಕೇಷನ್ ರೋಡ್ಸನ್ನು ಮೆಂಟೇನ್ ಮಾಡುವುದಕ್ಕೆ ಯಾವುದಾದರು ಏಜೆನ್ಸಿ ಬೇಕು. ಇನ್ನು ತಾಲ್ಲೂಕು ಬೋರ್ಡುಗಳಿಗೆ ಹೇಳಿದ್ದೇವೆ. ನಿರ್ಣಯಮಾಡಿದ್ದೇವೆ. ರೂರಲ್ ಕಮ್ಯುನಿಕೇಷನ್ಸ್ ರೋಡ್ಸನ್ನು ಅವರೇ ಮೆಂಟೇನ್ ಮಾಡಬೇಕು ಎಂದು ಆದರೆ ಅವನ್ನೂ ಮೆಂಟೇನ್ ಮಾಡುವ ಶಕ್ತಿ ನಮ್ಮಲ್ಲಿಲ್ಲ, ದುಡ್ಡು ಇಲ್ಲ. ದುಡ್ಡು ಇಲ್ಲದೇ ಹೋದರೆ ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅವರಿಗೂ ಸ್ವಲ್ಪ ಕಷ್ಟವಿದೆ. ಅವರೂ ನಮ್ಮನ್ನು ಕೇಳಿದ್ದಾರೆ. ದುಡ್ಡು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನಾವು ಹೇಳಿದ್ದೂ ಆಗಿದೆ. ಆದರೆ ಏನಾದರೂ ಹಣ ಸಹಾಯದ ಮಾಡುವುದಕ್ಕೆ ಈ ಸಭೆಯ ಮುಖಾಂತರ ತಾಲ್ಲೂಕು ಬೋರ್ಡ್‌ಗಳಿಗೆ ರೂರಲ್ ಕಮ್ಯುನಿಕೇಷನ್ ಬಗ್ಗೆ ನಿರ್ಣಯ ಮಾಡಿದ್ದಾದರೆ, ಆ ನಿರ್ಣಯದ ಪ್ರಕಾರ ಪ್ರತಿಯೊಂದು ಮೂಲೆಗೂ ಎಷ್ಟು ಪ್ರಮಾಣದಲ್ಲಿ ದುಡ್ಡು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಬೇಕೆಂದು ನಿರ್ಣಯ ಮಾಡಿ ತಿಳಿಸುತ್ತೇವೆ, ಇಷ್ಟೇ ದುಡ್ಡು ಬೇಕು ಇಲ್ಲದಿದ್ದರೆ ಆ ಜವಾಬ್ದಾರಿ ವಹಿಸುವುದಿಲ್ಲವೆಂದು ಹಠ ಮಾಡದೆ ಮುಖ್ಯ ಹಳ್ಳಿಗಳಲ್ಲಿ ಅಪ್ರೋಚ್ ರೋಡ್ಸ್ ಇರುವ ಕಡೆಗಳಲ್ಲಿ ಆಯಾ ಕ್ಷೇತ್ರದ ಪೂರ್ಣ ಜವಾಬ್ದಾರಿಯನ್ನು ಅವರೇ ತೆಗೆದುಕೊಳ್ಳಲು ಮುಂದೆ ಬಂದು ಈಗಿನ ನಮ್ಮ ಸಮಸ್ಯೆಯನ್ನು ಪರಿಹಾರ ಮಾಡಬೇಕು, ಅವರೇ ಆ ಜವಾಬ್ದಾರಿಯನ್ನು ವಹಿಸಬೇಕು.

ಶ್ರೀ ಎ.ಆರ್. ಬದರಿನಾರಾಯಣ ( ಶಿವಮೊಗ್ಗ ) :-

ಕೃಷಿಯ ಉದ್ದೇಶ ಪೂರೈಸಲು ನೀರಾವರಿಯ ಬಯಲು ಹೆದ್ದಾರಿಗಳ ಬಗ್ಗೆ ಏನು ?

ಶ್ರೀ ವೀರೇಂದ್ರ ಪಾಟೀಲ್ :-

ಇರಿಗೇಷನ್ ಟ್ರಾಕ್ಟ್ ರೋಡ್ಸ್ ಬಗ್ಗೆಯೂ ನಿರ್ಣಯಮಾಡಿದ್ದೇವೆ. ಅದರ ಬಗ್ಗೆ ತಾಲ್ಲೂಕು ಬೋರ್ಡುಗಳಿಗೆ ಹೇಳುತ್ತಾ ಇಲ್ಲ. ನಮ್ಮ ನಿರ್ಣಯದ ಪ್ರಕಾರ ಮಾಡುವ ಜವಾಬ್ದಾರಿ ಅದು. ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಿ ಅವುಗಳ ಮೇಂಟೆನೆನ್ಸ್ 50 ಸಿವಿಲ್ ವರ್ಕ್ಸ್ ಚಾರ್ಜು ಮಾಡುವುದು ಮತ್ತು ರೋಡ್ಸ್ ಮತ್ತು ಬಿಲ್ಡಿಂಗ್ಸ್ ಇವುಗಳ ಮೇಂಟೆನೆನ್ಸ್ ಚೀಫ್ ಇಂಜನಿಯರಿಂಗ್‌ಗೆ ವಹಿಸಿಕೊಡುತ್ತೇವೆ. ಅದನ್ನು ತಾಲ್ಲೂಕು ಬೋರ್ಡುಗಳು ವಹಿಸಿಕೊಳ್ಳಲಿ ಎಂದು ನಾನು ಹೇಳುತ್ತಾ ಇಲ್ಲ.

ಇನ್ನು ನೀರಾವರಿ ವಿಷಯ. ಈ ಪ್ರಶ್ನೆ ಬಂದಾಗ ಒಂದೆರಡು ವಿಚಾರಗಳನ್ನು ಮಾನ್ಯ ಸದಸ್ಯರ ಮುಂದೆ ಇಡುತ್ತೇನೆ. ನಮ್ಮ ಕ್ಷೇತ್ರ ಫಲ ಜಿಯಾಗ್ರಫಿಕಲ್ ಏರಿಯಾ 470 ಲಕ್ಷ ಎಕರೆ. ಇದರಲ್ಲಿ 354 ಲಕ್ಷ ಎಕರೆ ಕಲ್ಟಿವಬಲ್ ಏರಿಯಾ. ಸಾಗು ಮಾಡುವುದಕ್ಕೆ ಲಾಯಕ್ಕಾಗಿರುವಂಥಾದ್ದು. ಇದರ ಪೈಕಿ 20 ಲಕ್ಷ 24 ಸಾವಿರ ಎಕರೆಗೆ ನೀರಾವರಿ ಅನುಕೂಲತೆ ಇದೆ. ಇದರಲ್ಲಿ ಎಲ್ಲಾ ಬಂತು. ಇನ್ನುಳಿದಿರುವುದು ಎಲ್ಲಾ ಡ್ರೈ ಲ್ಯಾಂಡ್. ನೀರಾವರಿ ಪರ್ಸೆಂಟೇಜ್ ಶೇಕಡ 9.05ಕ್ಕೆ ಬಂದಿದೆ. ಮೊದಲು ಆರೂವರೆ ಇದ್ದುದು ಎಂಟೂವರೆಗೆ ಬಂದಿತ್ತು. ಲೇಟೆಸ್ಟ್ ಫಿಗರ್ ಅಂದರೆ ಶೇಕಡ 9.05 ಪ್ರಕಾರ ಇವತ್ತು ಇರಿಗೇಷನ್ ಸಾಧಿಸಿದ್ದೇವೆ. 354 ಲಕ್ಷ ಎಕರೆ ಸಾಗುವಳಿಗೆ ಯೋಗ್ಯವಿದೆಯೆಂದು ಏನು ಹೇಳಿದೆಯೋ ಆದರಲ್ಲಿ ಕೃಷ್ಣಾ ಬೇಸಿನ್ ನಲ್ಲಿಯೇ 285 ಲಕ್ಷ ಎಕರೆ, ಗೋದಾವರಿ ಬೇಸಿನ್‌ನಲ್ಲಿ ಬೀದರ್ ಜಿಲ್ಲೆ ಕಡೆ 12 ಲಕ್ಷ ಎಕರೇ, ಕಾವೇರಿ ಬೇಸಿನ್‌ನಲ್ಲಿ 89 ಲಕ್ಷ ಎಕರೆ, ಸುಮಾರು 59 ಲಕ್ಷ ಎಕರೆ. ಪೆನ್ನಾರ್ ಮತ್ತು ಔಲಾರ್ ನದಿಗಳ ಬೇಸಿನ್‌ನಲ್ಲಿ 30 ಲಕ್ಷ ಎಕರೆ ಈ ರೀತಿ ಭೂಮಿ ಹರಿದು ಹಂಚಿಹೋಗಿದೆ. ಇದರಲ್ಲಿ ಕಾವೇರಿ ಮತ್ತು ಕೃಷ್ಣಾ ಬೇಸಿನ್‌ಗಳು ಬಹು ಮುಖ್ಯವಾದುವು. ಇದರಲ್ಲಿ ಶೇಕಡ 9 ರಷ್ಟು ಭೂಮಿ ಇದೆ ಎಂದು ಗೊತ್ತಾಗುತ್ತದೆ. ಹೋದ ಸಾರಿ ನಮ್ಮ ಮಾನ್ಯ ಸ್ನೇಹಿತರು ಮತ್ತು ಆರ್ಥಿಕ ಮಂತ್ರಿಗಳು ಹೇಳಿದ್ದಾರೆ, ನಮ್ಮಲ್ಲಿ ಇರಿಗೇಷನ್ ಪೊಟೆನ್ಸಿಯಾಲಿಟಿ ದುರ್ದೈವದಿಂದ ಬಹಳ ಕಡಿಮೆ ಎಂದು ಹೇಳಿದ್ದಾರೆ. ಈಗಾಗಲೇ ಶೇಕಡ 85 ರಷ್ಟು ಬಂದಿದ್ದೇವೆ. ನಮ್ಮಲ್ಲಿ ನೀರು ಎಷ್ಟು ಬರುತ್ತದೆಂದು ಲೆಕ್ಕ ಹಾಕಿಕೊಂಡು ಎಲ್ಲಾ ಯೋಜನೆಗಳಿಗೆ ಶೇಕಡ 26 ಅಥವಾ 27 ರಷ್ಟರವರೆಗೆ ಮುಟ್ಟಬಹುದು. ಆದರೆ ನೆರೆ ರಾಜ್ಯಗಳ ಪರಿಸ್ಥಿತಿ ಇರಿಗೇಷನ್ ಪರ್ಸೆಂಟೇಜನ್ನು ಲೆಕ್ಕ ಹಾಕಿದರೆ ಆದಷ್ಟು ಜಾಗ್ರತೆಯಾಗಿ ನಮ್ಮ ಪೊಟೆನ್ಸಿಯಲ್ ಮಾಗ್ಜಿಮಂ ಮುಟ್ಟಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟದ ಪರಿಸ್ಥಿತಿ ನಮ್ಮ ಜನಗಳಿಗೆ ಇರುತ್ತದೋ ಏನೋ ಎಂಬುದಾಗಿ ಒತ್ತಾಯ ಬಂದಿದೆ. ಶೇಕಡ 9 ರಿಂದ 25-26 ಕ್ಕೆ ಎಷ್ಟು ಜಾಗ್ರತೆಯಾಗಿ ಏರುತ್ತೇವೋ ಅಷ್ಟು ಜಾಗ್ರತೆಯಾಗಿ ಏರಬೇಕು. ಅಂದರೆ ಕ್ಷಾಮ ಇದೆಯೆಂದು ಅಲ್ಲ. ಯೋಜನೆಗಳನ್ನು ತೀವ್ರವಾಗಿ ಕಾರ್ಯಗತಮಾಡಿದರೆ ಬಹಳ ಕಡಿಮೆ ಖರ್ಚಿನಲ್ಲಿ ಮಾಡಬಹುದು. ವರ್ಷಗಳು ಹೆಚ್ಚಿದಂತೆ ಹೆಚ್ಚು ಹಣ ಖರ್ಚಾಗುತ್ತದೆ. ಪ್ರಾಜೆಕ್ಟ್‌ಗಳನ್ನು ಮಾಡದೇ ಇದ್ದರೆ ಜೀವನೋಪಾಯಕ್ಕೆ ಮಾರ್ಗವಿರುವುದಿಲ್ಲ. ಜನ ಸುಖವಾಗಿ ಜೀವಿಸಿಕೊಂಡು ಬದುಕುವುದಕ್ಕೆ ಸಾಧ್ಯವಿಲ್ಲ. ಹೆಚ್ಚಿನ ಪ್ರಾಶಸ್ತ್ಯವನ್ನು ನೀರಾವರಿ ಯೋಜನೆಗಳಿಗೇ ಕೊಡಬೇಕಾಗಿದೆ. ಏಕೆಂದರೆ ಪ್ರತಿವರ್ಷವೂ ನೀವೂ ಎಲ್ಲರೂ ಮಾತನಾಡುತ್ತೇವೆ ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡುತ್ತೇವೆ. ಪರಿಸ್ಥಿತಿ ಏನಾಗಿದೆ, ಯಾವ ಒಂದು ಪ್ರಾಶಸ್ತ್ಯ ಯಾವ ಒಂದು ಗಮನ,

ಯಾವ ಒಂದು ಪ್ರಿಯಾರಿಟಿ ನೀರಾವರಿ ಯೋಜನೆಗಳಿಗೆ ಕೊಡಬೇಕೊ ಆ ಪ್ರಮಾಣದಲ್ಲಿ ಇನ್ನೂ ನಾವು ಕೊಟ್ಟಿಲ್ಲ. ಇವತ್ತಿನವರೆಗೂ ಬಡ್ಜೆಟ್ಟಿನಲ್ಲಿ ನಾವೂ ಇದಕ್ಕೆ ಪ್ರಾಶಸ್ತ್ಯ ಕೊಟ್ಟಿಲ್ಲ. ಏಕೆಂದರೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕೆಲಸಗಳು ಒಂದೇ ಸಮನಾಗಿ ಆಗಬೇಕು.

ಶ್ರೀ ಎಚ್. ಸಿದ್ಧವೀರಪ್ಪ :-

ಅದಕ್ಕೆ ಬೇರೆ ಯಾರು ಕಾರಣರಲ್ಲ, ಸರ್ಕಾರದವರೇ ಕಾರಣರು. ಇವತ್ತು ಬೇಕಾದರೂ ಈ ಸಭೆಯಲ್ಲಿ ತಂದರೆ ನಾವು ಒಪ್ಪಿಕೊಳ್ಳುತ್ತೇವೆ. ಅರ್ಧದಷ್ಟು ಹಣ ಅಂದರೆ 100 ಕೋಟಿ ರೂಪಾಯಿಗಳನ್ನು ನೀರಾವರಿ ಬಾಬಿಗಾಗಿ ಇಟ್ಟರೂ ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇವೆ.

ಶ್ರೀ ವೀರೇಂದ್ರ ಪಾಟೀಲ್ :-

ನಾನು ಇಲ್ಲಿ ಯಾರೊಬ್ಬರ ಮೇಲೂ ದೋಷಾರೋಪಣೆಗಳನ್ನು ಮಾಡುತ್ತಿಲ್ಲ. ನಾವು ಇಲ್ಲಿ ಯಾವುದೇ ಬೇಡಿಕೆಗಳನ್ನು ಮಂಡಿಸಿದರೂ ಇದಕ್ಕೆ ಹಣ ಸಾಲದು, ಸಾಲದು ಎನ್ನುವಂಥ ಒತ್ತಾಯಗಳು ಬರುತ್ತಲೇ ಇವೆ. ನಾಳೆ ನಮಗೆ ಸಂಬಂಧಪಟ್ಟಿರತಕ್ಕ ಕೈಗಾರಿಕಾ ಡಿಮ್ಯಾಂಡುಗಳು ಬರಲಿ ಆ ದಿವಸ ಸಹಿತ ಇಲ್ಲಿ ಸದಸ್ಯರು ಅದಕ್ಕೆ ಒದಗಿಸಿರತಕ್ಕ ಹಣ ಸಾಲದು ಎಂಬ ಒತ್ತಾಯವನ್ನು ಹಾಕೇ ಹಾಕುತ್ತಾರೆ. ಈ ದಿವಸ ನಮ್ಮ ಶರಾವತಿಯಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿ ಇಲ್ಲಿ ವೃಥಾ ಹಾಳಾಗಿ ಹೋಗುತ್ತಿದೆ ಎಂದು ಅದನ್ನು ನಾವು ಎರಡನೇ ರಾಜ್ಯದವರಿಗೆ ಮಾರಾಟ ಮಾಡಿದ್ದರೆ, ಅಲ್ಲಿ ಕಡಿಮೆ ದರಕ್ಕೆ ಕೊಟ್ಟಿದ್ದೀರಿ. ಅದೇಕೆ ಬೇಕಾಗಿತ್ತು. ಇಲ್ಲೆ ಪುಗ್ಸಟ್ಟೆ ಅದನ್ನು ಕೊಡಬಹುದಾಗಿತ್ತಲ್ಲ ಎಂದು ಟೀಕೆ ಮಾಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ :-

ಕೆಲಸಕ್ಕೆ ಬಾರದ ಆ ನಾಡಗೌಡರ ಇಲಾಖೆಗಳಿವೆಯಲ್ಲ, ಅದನ್ನೆಲ್ಲಾ ಮುಚ್ಚಿರಿ......

ಶ್ರೀ ವೀರೇಂದ್ರ ಪಾಟೀಲ್ :-

ನಾನು ಹೇಳುತ್ತಿರುವುದು ಅದು ಯಾವ ಒಂದು ಬೇಡಿಕೆಯೇ ಆಗಲಿ ಅದರ ಬಗ್ಗೆ ಬೇಡಿಕೆಗಳು ಹೇಗೆ ಬರುತ್ತವೆ ಎಂಬುದನ್ನು ನೋಡಿ. ಈ ದಿವಸ ನಾವು ನಮ್ಮ ಇರಿಗೇಷನ್ ಪೊಟೆನ್‌ಷಿಯಾಲಿಟಿಯನ್ನು 24-25 ಪರ್ಸೆಂಟಿಗೆ ಹೆಚ್ಚು ಮಾಡಬೇಕು - ಇದನ್ನು ನಮ್ಮ All India average ಏನಿದೆಯೋ ಆ 24 ಪರ್ಸೆಂಟಿಗೆ ಇದನ್ನು ಒಯ್ಯ ಬೇಕಾದರೆ ನಾವಿನ್ನೂ ಈ ಬಗ್ಗೆ 4-5 ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲೇಬೇಕಾಗುತ್ತದೆ. ನಾವು ಆ ಒಂದು ಮಟ್ಟಕ್ಕೆ ಏರದಿದ್ದರೆ ಈ ಇರಿಗೇಷನ್ನಿನಲ್ಲಿ ಉಳಿಕೆ ರಾಜ್ಯಗಳಿಗಿಂತ ಬಹಳ ಹಿಂದೆ ಬೀಳಬೇಕಾಗುತ್ತದೆ. ನಾನು ಈ ವಿಚಾರವನ್ನು ಹಿಂದೆ ಸಹಾ ಹೇಳಿದ್ದೇವೆ. ನಾವು ಏನಾದರೂ ಮಾಡಿ, ಹೇಗಾದರೂ ಮಾಡಿ ಈ ಕಾರ್ಯಗಳನ್ನೆಲ್ಲಾ ಪೂರ್ಣಗೊಳಿಸಲೇಬೇಕೆಂದು ಅನ್ನುವಂಥ ಒಂದು ವಾತಾವರಣವನ್ನು ಇಲ್ಲಿ ಹುಟ್ಟಿಸುವಂಥ ಒಂದು ಆ ಜವಾಬ್ದಾರಿ ಏನಿದೆ ಅದು ನಮ್ಮ ನಿಮ್ಮ ಎಲ್ಲರಮೇಲೂ ಬಿದ್ದಿರತಕ್ಕ ಒಂದು ಜವಾಬ್ದಾರಿ..

ಇನ್ನು ಆ ಕೃಷ್ಣಾ ನದಿಯ ನೀರಿನ ವಿಚಾರಕ್ಕೆ ಬಂದರೆ - ಈ ನೀರಿನ ವ್ಯವಹಾರದಲ್ಲಿ ನಾವು ಒಂದು ದುರ್ದೈವ ಪರಿಸ್ಥಿತಿಯಲ್ಲಿ ಇದ್ದೇವೆ. ನಮ್ಮಲ್ಲಿರತಕ್ಕ ಮುಖ್ಯವಾದ ನದಿಗಳೆಂದರೆ ಕೃಷ್ಣಾ ಮತ್ತು ಕಾವೇರಿ. ಈ ಎರಡೇ. ಆ ಕಾವೇರಿ ನೀರಿನ ಬಗ್ಗೆ ಹಿಂದೆ 1924 ರಲ್ಲಿ ಒಂದು ಅಗ್ರಿಮೆಂಟಾಗಿದೆ. ಅದು ಮತ್ತೆ 1974ಕ್ಕೆ ಹೊಸದಾಗಿ ಒಪ್ಪಂದ ಆಗಬೇಕಾಗಿದೆ. ಆ ಬಗ್ಗೆ ನಾವು ಏನೇನೂ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಕೈಗೊಂಡಿದ್ದೇವೆ. ಅದರ ಬಗ್ಗೆ ಇನ್ನೂ ಏನೇನು ವಿಷಯಗಳನ್ನು ಪರಿಶೀಲನೆ ಮಾಡಬೇಕೋ ಅದನ್ನೆಲ್ಲಾ ಕೂಲಂಕುಷವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರೂ ವಿಷಯಗಳನ್ನು ಹೇಳಿದ್ದಾರೆ. ಹಿಂದೆ ಆದ ಆ ಅಗ್ರಿಮೆಂಟಿನಲ್ಲಿ ನಮಗೆ ಬಹಳ ಅನ್ಯಾಯವಾಗಿದೆ. ಅದನ್ನು ಎಲ್ಲರೂ ಒಪ್ಪಿದ್ದಾರೆ. ಆ ಒಪ್ಪಂದದಿಂದ ನಮಗೆ ಬಹಳ ಅನ್ಯಾಯವಾಗಿದೆ ಎಂಬುದನ್ನು ನಾನಲ್ಲ ನನಗಿಂತಲೂ ಪೂರ್ವದಲ್ಲಿ ನನ್ನ ಸ್ಥಾನದಲ್ಲಿದ್ದವರೂ ಕೂಡ ಒಪ್ಪಿಕೊಂಡಿದ್ದಾರೆ. ಆದರೆ ಹಾಗೆ 1924 ರಲ್ಲಿ ಅದು ಆದದ್ದಾಯಿತು. ಆದರೆ ಇನ್ನು ಮುಂದಕ್ಕೆ 1974ರಲ್ಲಿ ಆಗತಕ್ಕ ಅಗ್ರಿಮೆಂಟಿನಲ್ಲಾದರೂ ನಮಗೆ ಆ ಹಿಂದಿನ ಹಾಗೆ ಅನ್ಯಾಯಗಳು ಆಗದಂತೆ ಅವುಗಳನ್ನು ತಡೆಗಟ್ಟುವುದಕ್ಕೂ ಮತ್ತು ಸಂಪೂರ್ಣ ಆ ನೀರಿನಲ್ಲಿರತಕ್ಕ ನಮ್ಮ ಹಕ್ಕು ಭಾಧ್ಯತೆಗಳನ್ನು ನಾವು ಉಳಿಸಿಕೊಳ್ಳುವುದಕ್ಕೂ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಕೈಗೊಳ್ಳಲಾಗಿದೆ. ಆ ಬಗ್ಗೆ ಎಲ್ಲ ಮುಂಜಾಗ್ರತೆಯ ಕಾರ್ಯಕ್ರಮಗಳನ್ನೂ ಕೈಗೊಂಡಿದ್ದೇವೆ. ಈ ಬಗ್ಗೆ ನಾವು ಏನೇನು ಮುಂಜಾಗ್ರತೆ ಕಾರ್ಯಗಳನ್ನು ಕೈ ಗೊಳ್ಳಬೇಕು ಎನ್ನತಕ್ಕ ಬಗ್ಗೆ ನಮ್ಮ ಅಧಿಕಾರಿಗಳನ್ನೊಳಗೊಂಡ ಒಂದು ಚೀಫ್ ಇಂಜನಿಯರುಗಳ ಸಮಿತಿಯನ್ನೂ ಕೂಡ ಮಾಡಲಾಗಿದೆ. ಅವರು ಬಹಳ ಜಾಗರೂಕತೆಯಿಂದ ಎಲ್ಲ ವಿಷಯಗಳನ್ನೂ ವಿಮರ್ಶೆ ಮಾಡಿ ಈಗಾಗಲೇ 5-6 ವಾಲ್ಯೂಮುಗಳ ಒಂದು ವರದಿಯನ್ನೂ ಕೂಡ ಒಪ್ಪಿಸಿದ್ದಾರೆ. ನಾವು ನಾಳೆ 1974 ರಲ್ಲಿ ಈ ವಿಚಾರದ ಚರ್ಚೆಗೆ ಕುಳಿತಾಗ ನಾವೇನು ಒಂದು ನಿಲುವನ್ನು ತಾಳಬೇಕು ಅನ್ನತಕ್ಕ ವಿಚಾರದಲ್ಲಿ ಅದಕ್ಕೆ ಈಗಲೇ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಸಂಬಂಧಪಡತಕ್ಕ ಏನೇನು ಲೀಗಲ್ ಇಷ್ಯೂಗಳಿವೆಯೋ ಅವುಗಳನ್ನೆಲ್ಲಾ ಎಗ್ಜಾಮಿನ್ ಮಾಡಲು ಮತ್ತು ಅಂಥಾ ಲೀಗಲ್ ಇಷ್ಯೂಗಳನ್ನು ಫ್ರೇಂ ಮಾಡಲು ನಮ್ಮ ಇಲಾಖೆಗೆ ಕೊಟ್ಟಿದೆ. ಇನ್ನು ಮುಂದೆ ನಮಗೆ ಆ ಕಾವೇರಿ ನೀರಿನ ವಿಚಾರದಲ್ಲಿ ಯಾವ ಒಂದು ಧಕ್ಕೆಯೂ ನಮ್ಮ ಹಕ್ಕಿಗೆ ಉಂಟಾಗದಿರುವಂತೆ ಮಾಡತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ.

ಇನ್ನು ಕೃಷ್ಣಾ ನದೀ ನೀರಿನ ಬಗ್ಗೆ ಈಗಾಗಲೇ ಒಂದು ಸುವಿಸ್ತಾರವಾದ ಹೇಳಿಕೆಯನ್ನು ಇದೇ ಸಭೆಯಲ್ಲಿ ಕಳೆದ ಅಧಿವೇಶನದ ಕಾಲಕ್ಕೆ ಇದೇ ವೇದಿಕೆಯಿಂದ ಹೇಳಿದ್ದೆನು. ಆ ವಿಚಾರವನ್ನು ನಾನು ಹೊರಗಡೆಯಲ್ಲೂ ಅನೇಕವರ್ತಿ ಹೇಳಿದ್ದೇನೆ. ಅದರ ಒಂದು ಸಂಪೂರ್ಣ ಚಿತ್ರವನ್ನು ನಾನು ಇದೇ ಸಭೆಯಲ್ಲಿ ಈ ಹಿಂದೆ ಏನು ಇಟ್ಟಿದ್ದೆನೋ ಆದಾದ ನಂತರ ಇತ್ತೀಚೆಗೆ ಏನೇನು ವಿಷಯಗಳು ನಡೆದಿವೆ ಎಂಬುದನ್ನು ನಾನೀಗ ಸಭೆಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಂದರೆ ನಾನು ಇದೇ ವೇದಿಕೆಯಿಂದ ಕಳೆದ ಅಕ್ಟೋಬರ್ ಆದ ನಂತರ ಏನೇನು ವಿಷಯಗಳು ನಡೆದಿವೆ ಎಂಬುದನ್ನು ಹೇಳುತ್ತೇನೆ. ಕಳೆದ ಜುಲೈನಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಈ ನೀರಿನ ವ್ಯವಹಾರದಲ್ಲಿ ಸಾಧ್ಯವಾದ ಏನೇನು ಮಾರ್ಗಗಳಿವೆಯೋ ಅವುಗಳನ್ನೆಲ್ಲಾ ಎಗ್ಝಾಸ್ಟ್ ಮಾಡಿ ಇದನ್ನು ಒಂದು ನೆಗೋಷಿಯೆಷನ್ ಮೂಲಕ ತೀರ್ಮಾನ ಮಾಡುವುದಕ್ಕೆ ಸಾಧ್ಯವಿದ್ದಲ್ಲಿ ಅದನ್ನು

ಕೂಡಲೇ ಮಾಡಬೇಕೆಂದೂ, ಅದಕ್ಕೆ ಒಂದು ವೇಳೆ ಸಾಧ್ಯವಾಗದಿದ್ದರೆ ಈ ವಿಚಾರವನ್ನು ಆರ್ಬಿಟ್ರೇಷನ್ನಿಗೆ ಒಪ್ಪಿಸಲು ಅವಕಾಶ ಮಾಡಿಕೊಡಿ ಎಂದು ಕೇಂದ್ರಕ್ಕೆ ಬರೆದುಕೊಂಡಿದ್ದೆವು. ನಾವು ಹಾಗೆ ಕೇಂದ್ರಕ್ಕೆ ಒಂದು ವಿನಂತಿ ಮಾಡಿಕೊಂಡ ನಂತರವೂ ಅವರು ಇದನ್ನು ಆರ್ಬಿಟ್ರೇಷನ್ನಿಗೆ ಒಪ್ಪಿಸಲಿಲ್ಲ. ಇದೇ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರದವರಲ್ಲಿ ಎರಡಾವರ್ತಿ ಅವರು ನಡೆಸಿದ ಮೀಟಿಂಗಿಗೂ ಹೋಗಿದ್ದೆವು. ಆ ಮೀಟಿಂಗುಗಳಲ್ಲಿ ಒಂದು 1967 ನೇ ಆಗಷ್ಟಿನಲ್ಲಿ ಡೆಲ್ಲಿಯಲ್ಲಿ ನಡೆಯಿತು. ಇನ್ನೊಂದು ಮೀಟಿಂಗು 1967 ನೇ ಅಕ್ಟೋಬರಿನಲ್ಲಿ ನಡೆಯಿತು. ಆದರೆ ಆ ಎರಡು ಮೀಟಿಂಗುಗಳಲ್ಲೂ ಬರಿ ಚರ್ಚೆ ಒಂದು ನಡೆಯಿತೇ ವಿನಾ ಅದರಲ್ಲಿ ಇದನ್ನು ಬಗೆಹರಿಸತಕ್ಕ ಯಾವ ಹಾದಿಯನ್ನು ಕಂಡುಹಿಡಿಯಲಿಲ್ಲ. ಅಲ್ಲಿ ನಡೆದದ್ದೆಲ್ಲಾ ಬರಿ ಚರ್ಚೆ ಮಾತ್ರ. ಆ ನೀರಿನಲ್ಲಿ ನಮ್ಮ ಹಕ್ಕು ಎಷ್ಟು, ನಿಮ್ಮ ಹಕ್ಕು ಎಷ್ಟು: ಅದರಲ್ಲಿ ನೀರೆಷ್ಟಿದೆ ಇತ್ಯಾದಿ ವಿಷಯಗಳ ಚರ್ಚೆ ಆಯಿತೇ ವಿನಾ ಮತ್ತೇನೂ ಆಗಲಿಲ್ಲ. ಬರಿ ಒಂದು ನೀರಿನ ಪ್ರಮಾಣ, ಗಾತ್ರ ಇತ್ಯಾದಿ ವಿಚಾರಗಳನ್ನು ಚರ್ಚೆ ಮಾಡಿ ಮುಗಿಸಿದ್ದಾಯಿತು. ನಾನು ಕೇಂದ್ರ ಸರ್ಕಾರದೊಡನೆ ಮೂರಾವರ್ತಿ ಪತ್ರ ವ್ಯವಹಾರ ನಡೆಸಿ ಅದಕ್ಕೆ ಅವರೇನೂ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವ ಸೂಚನೆಗಳು ಕಂಡು ಬಾರದೆ ಇದ್ದುದರಿಂದ ನಾನು ಈ ವಿಚಾರವನ್ನು ನಮ್ಮ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಅವರ ಕಡೆಯಿಂದ ಅವರ ಸ್ವಹಸ್ತಾಕ್ಷರದಲ್ಲೇ ಈ ಸಭಾನಾಯಕರಿಂದ ಆ ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆಸಿ, ಈ ವಿಚಾರದಲ್ಲಿ ಅವರು ಯಾವ ರೀತಿ ಅಡ್ವೈಸ್ ಮಾಡಿದರೆ ಆ ರೀತಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು - ತಾರೀಖು 6-12-67 ರಲ್ಲಿ ಒಂದು ಪತ್ರವನ್ನೂ, ಪುನಃ ತಾರೀಖು 22-12-67 ರಲ್ಲಿ ಮತ್ತೊಂದು ಪತ್ರವನ್ನೂ ಬರೆಸಲಾಯಿತು. ಇದರ ಮೇಲ್ಪಟ್ಟು ನಾನು ವಿರೋಧ ಪಕ್ಷದ ನಾಯಕರನ್ನೂ ಮತ್ತು ಇನ್ನಿತರ ಸದಸ್ಯರನ್ನೂ ಕರೆಸಿ ಇದರ ಬಗ್ಗೆ ಮೀಟಿಂಗನ್ನೂ ಕೂಡ ನಡೆಸಿರುತ್ತೇನೆ. ನಾನು ಅವರಿಗೆ ಈ ಎಲ್ಲ ವಿಚಾರಗಳನ್ನೂ ಸವಿಸ್ತಾರವಾಗಿ ಹೇಳಿದ್ದೇನೆ. ಆದರೆ ವಿರೋಧ ಪಕ್ಷದವರು ಎಲ್ಲ ವಿಚಾರಗಳನ್ನು ಒಪ್ಪಿಕೊಂಡರೂ ಅವರು ಆ ಆಕ್ಟಿನ ಪ್ರಕಾರ ನಮಗೆ ಅದನ್ನು ನಡೆಸಲು ಅಧಿಕಾರವಿಲ್ಲ. ಎಂಬ ಒಂದು ಶಂಕೆಯನ್ನು ಮಾತ್ರ ವ್ಯಕ್ತಪಡಿಸಿದ್ದಾರೆ. ನಾನು ಇದನ್ನು ಹಿಂದೆಯೂ ಕೂಡ ಆರ್ಬಿಟ್ರೇಷನ್ನಿಗೆ ಹಾಕಲೇಬೇಕಾಗುವುದೆಂಬ ವಿಷಯ ಕೂಡ ಹೇಳಿದ್ದೆ. ಇದರ ಬಗ್ಗೆ ನಾವು ಕೇಂದ್ರದವರನ್ನು ನಂಬಿಕೊಂಡು 6 ವರ್ಷಗಳನ್ನು ಕಳೆದಾಗ್ಯೂ ಏನೂ ಸಾರ್ಥಕವಾಗಲಿಲ್ಲ ಎಂಬ ಮಾತನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ಶ್ರೀ ಹೆಚ್. ಸಿದ್ದವೀರಪ್ಪ :-

ನೀವು ಸಂವಿಧಾನಿಕ ಬಿಕ್ಕಟ್ಟನ್ನು ಸೃಷ್ಟಿಸುತ್ತೀರಿ. ಅದನ್ನು 24 ಗಂಟೆಗಳ ಕಾಲದಲ್ಲಿ ಬಗೆಹರಿಸಲಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :-

ನಾವು ಎಷ್ಟೆಷ್ಟು ರೀತಿಯಲ್ಲಿ ಯಾವ ಯಾವ ಪ್ರಮಾಣದಲ್ಲಿ ಆ ಕೇಂದ್ರ ಸರ್ಕಾರದವರ ಮನವನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಾಗ್ಯೂ ಇದನ್ನು ಒಂದು ನೆಗೋಸಿಯೇಷನ್ ಮೂಲಕ ತೀರ್ಮಾನ ಮಾಡಿಕೊಳ್ಳಬೇಕೆಂದು ಪ್ರಯತ್ನಗಳನ್ನು ನಡೆಸಿದಾಗ್ಯೂ ಅವರು ನಮ್ಮ

ಪ್ರಾರ್ಥನೆಗೆ ಓಗೊಡಲಿಲ್ಲ. ನಾವಿನ್ನು ಇದರ ಬಗ್ಗೆ ನಡೆಸತಕ್ಕ ಕಾರ್ಯಕ್ರಮಗಳೇನೂ ಉಳಿದಿಲ್ಲ. ನಾವು ಮಾಡತಕ್ಕದ್ದನ್ನೆಲ್ಲಾ ಮಾಡಿ ಮುಗಿಸಿದ್ದಾಯಿತು. ನಾವು ನಮ್ಮ ತಾಳ್ಮೆಯನ್ನೆಲ್ಲಾ ಮುಗಿಸಿಕೊಂಡಾಯಿತು ಅನ್ನತಕ್ಕ ಈ ಮಾತುಗಳನ್ನು ನಾನು ಬಹಳ ನೊಂದಮನಸ್ಸಿನಿಂದ ಹೇಳಬೇಕಾಗಿದೆ. ನಾನು ನಮ್ಮ ಮುಖ್ಯ ಮಂತ್ರಿಗಳಿಂದ ಮೂರಾವರ್ತಿ ಪತ್ರ ವ್ಯವಹಾರಗಳನ್ನು ಆ ಕೇಂದ್ರಕ್ಕೆ ನಡೆಸುವಂತೆ ಮಾಡಿದೆ. ಅವರಿಗೆ ಇದನ್ನು ನೆಗೋಸಿಯೇಷನ್ ಮೂಲಕ ನಡೆಸುವುದಕ್ಕೆ ಸಾಧ್ಯವಾಗದಿದ್ದರೆ ಇದನ್ನು ಒಂದು ಆರ್ಬಿಟೇಷನ್ನಿಗಾದರೂ ಒಪ್ಪಿಸಿ ಎಂದು ಪ್ರಾರ್ಥನೆ ಮಾಡಿಕೊಂಡು ಬರೆಸಿದ್ದ ಪತ್ರಕ್ಕೆ ಇಲ್ಲಿಯವರೆಗೂ ಇನ್ನೂ ಉತ್ತರ ಸಹಾ ಬಂದಿಲ್ಲ. ಉತ್ತರ ಬಾರದಿದ್ದರೆ ಹೋಗಲಿ, ಅವರಿಂದ ಒಂದು ಸೌಜನ್ಯತೆಗಾದರೂ ನಮ್ಮ ಪತ್ರಗಳಿಗೆ ಒಂದು ಅಕ್‌ನಾಲೆಡ್ಜ್‌ಮೆಂಟ್ ಕೂಡ ಇಲ್ಲ. ಇದನ್ನು ಒಂದೊಂದಾವರ್ತಿ ನಾನು ಆಲೋಚನೆ ಮಾಡಿದರೆ ನಾವೇನೋ ಇಂಡಿಯಾ ದೇಶದಲ್ಲಿ ಇದ್ದೇವೊ ಅಥವಾ ಇಲ್ಲವೋ ಎಂಬ ಶಂಕೆ ಬರುತ್ತದೆ. ನಾವೂ ಕೂಡ ಭಾರತಾಂಬೆಯ ಒಬ್ಬ ತಾಯಿಯ ಮಕ್ಕಳಲ್ಲವೇ ? ದೇಶ ಒಂದು ಅನ್ನುವಾಗ ನಮ್ಮ ಹಿತರಕ್ಷಣೆಯನ್ನು ಆ ಕೇಂದ್ರ ಸರ್ಕಾರದವರು ಮಾಡಬೇಡವೇ ? ಈ ದಿವಸ ಆ ಕೇಂದ್ರ ಸರ್ಕಾರದವರು ನಮ್ಮ ಈ ನೀರಿನ ವಿಚಾರದಲ್ಲಿ ತಾಳಿರತಕ್ಕ ಧೋರಣೆಯನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ನಾವು ಇದರ ಬಗ್ಗೆ ಒಂದು ತುಟ್ಟ ತುದಿಯನ್ನು ಬಂದು ಮುಟ್ಟಿದ್ದೇವೆ. ನಾವಿನ್ನು ಇದರ ಬಗ್ಗೆ ಕಾಯುವುದರಲ್ಲಿ ಅರ್ಥವಿಲ್ಲ. ನಾನು ಇದನ್ನು ಅರ್ಬಿಟ್ರೇಷನ್ನಿಗೆ ಒಪ್ಪಿಸಲು ನಿರ್ಧಾರ ಮಾಡಿಕೊಂಡು ಇದನ್ನು ನಮ್ಮ ಅಡ್ವೊಕೇಟ್ ಜನರಲ್ ಅವರ ಕಡೆಗೆ ಒಪ್ಪಿಸಿದ್ದೇನೆ. ಅವರು ಇದರ ಬಗ್ಗೆ ಒಂದು ರಿಟ್ ಆಫ್ ಮ್ಯಾಂಡಮಸ್ ಹಾಕತಕ್ಕ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ನೋಟೀಸನ್ನು ಕೊಡುವಂತೆ ತಿಳಿಸಿದ್ದೇನೆ. ನನಗೆ ಗೊತ್ತಿರುವುದು ಇದೊಂದೇ ಮಾರ್ಗ.

ಇವತ್ತು ಅದಕ್ಕಾಗಿ ಪತ್ರ ವ್ಯವಹಾರದ ಮುಖಾಂತರ ಈ ಪ್ರಶ್ನೆಯನ್ನು ಬಗೆಹರಿಸುವಂಥಾದ್ದು ಕೈಬಿಟ್ಟಿದ್ದೇವೆ ಎಂದು ನಾನು ಹೇಳುತ್ತೇನೆ. ನೆಗೋಸಿಯೇಷನ್, ಮಾತುಕತೆ ಪತ್ರವ್ಯವಹಾರ ಎಲ್ಲವೂ ಮುಗಿದು ಹೋಯಿತು. ಎಲ್ಲವೂ ನಿಷ್ಫಲವಾದುವು. ಇನ್ನುಳಿದ ಏಕೈಕ ಮಾರ್ಗವೆಂದರೆ, ಕಾನೂನು ಪ್ರಕಾರ ಕೋರ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದು, ಆ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ನಿರ್ಧರಿಸಿದ್ದೇವೆ. ಇದಕ್ಕಾಗಿ ಈ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದ ಪತ್ರಗಳನ್ನೂ ಇಂದೇ ಆಡ್ವೋಕೇಟ್ ಜನರಲ್ ಅವರ ಕಡೆಗೆ ಕಳಿಸುತ್ತಿದ್ದೇನೆ. ನಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟಿದ್ದೇವೆ. ಇನ್ನು ಮುಂದೆ ಈ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನೂ ಅವರು ಕೈಗೊಳ್ಳುತ್ತಾರೆ. ಕಾನೂನು ಪ್ರಕಾರ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಅವರು ಮಾಡುತ್ತಾರೆ. ಇದರ ಹೊರತು ಬೇರೆ ಯಾವ ಉಪಾಯವೂ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ :-

ನೀವೂ ರಾಜೀನಾಮೆಯನ್ನು ಕೊಡಿ, ನಾವೂ ಕೊಡುತ್ತೇವೆ. ಆಗ ಈ ಪ್ರಶ್ನೆ 24 ಗಂಟೆಯಲ್ಲಿ ಬಗೆಹರಿಯುತ್ತದೆ. ನಿಮಗೆ ಅದು ಎಲ್ಲಿದೆ, ಅದಕ್ಕೆ ಕಷ್ಟ ಬಂದಿದೆ.

ಶ್ರೀ ವೀರೇಂದ್ರ ಪಾಟೀಲ್ :-

ರಾಜೀನಾಮೆಯಿಂದ ಬಗೆಹರಿಯುತ್ತಿದ್ದರೆ ಎಲ್ಲರೂ ಮಾಡುತ್ತಿದ್ದರು. ನಾವು ರಾಜೀನಾಮೆ ಕೊಟ್ಟರೆ ಆಂಧ್ರದವರೂ ಮತ್ತು ಮಹಾರಾಷ್ಟ್ರದವರೂ ಕೊಡುತ್ತಾರೆ. ರಾಜೀನಾಮೆಯಿಂದ ಈ ಪ್ರಶ್ನೆ ಬಗೆಹರಿಯುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ :-

ಈ ರಾಜ್ಯದಲ್ಲಿ ರಾಜಕೀಯ ಧುರೀಣತ್ವದ ಕೊರತೆ ಇದೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :-

ಅದು ಲೀಡರ್ ಷಿಪ್ಪಿನ ಪ್ರಶ್ನೆ ಅಲ್ಲ, ಹೋದ ವರ್ಷವೇ ನಾವು ಈ ಬಗ್ಗೆ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಮಹಾರಾಷ್ಟ್ರದವರೂ ಈಗ ನಮ್ಮ ನಿಲುವನ್ನು ಅನುಸರಿಸುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ :-

ನಾವು ಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇವೆ. ಏಕೆಂದರೆ, ಅವರು ತಮ್ಮ ಹೇಳಿಕೆಗಳನ್ನು ಮುಕ್ತವಾಗಿ ತಿಳಿಸಿದ್ದಾರೆ. ಅವರು ಅದನ್ನು ರಾಜ್ಯದ ಸಮಸ್ಯೆಯನ್ನಾಗಿ ಮಾಡಿದ್ದಾರೆ. ನಾವು ಆ ರೀತಿಯಾಗಿಯೇ ಪರಿಗಣಿಸುತ್ತೇವೆ. ಮಂತ್ರಿಗಳ ಆ ವಿಚಾರವನ್ನು ನಾವೆಲ್ಲರೂ ಮೆಚ್ಚುತ್ತೇವೆ. ಅವರು ಸರಿಯಾಗಿ ಕಾರ್ಯ ಮಾಡಲಾರದಿರುವುದಕ್ಕೆ ನಾವು ಚಿಂತಿಸುತ್ತೇವೆ. ಆ ರೀತಿಯಾಗಿ ಅವರೇ ಮುಂದೆ ಬರಬೇಕು.

ಶ್ರೀ ವೀರೇಂದ್ರ ಪಾಟೀಲ್ :-

ಕಾನೂನು ಬಿಟ್ಟು ಕ್ರಮಕೈಗೊಳ್ಳುವುದು ನಮಗೂ ಬರುತ್ತದೆ, ಕೃಷ್ಣಾ ನದಿಯಲ್ಲಿ ನೀರು ಮುಂದೆ ಹೋಗದಂತೆ ಮಾಡಲು ನಮಗೆ ಬರುವುದಿಲ್ಲವೇ ?

ಶ್ರೀ ಪಿ.ವಿ. ಐತಾಳ್ ( ಸುರತ್ಕಲ್ ) :-

ನಾವೆಲ್ಲಾ ಒಟ್ಟಿಗೆ ಸ್ಥಳಕ್ಕೆ ಹೋಗಿ ಸತ್ಯಾಗ್ರಹ ಮಾಡೋಣ ಬರುತ್ತೀರಾ ?

ಶ್ರೀಮತಿ ಲೀಲಾವತಿ ರೈ ( ಬಂಟವಾಳ್ ) :-

ಸತ್ಯಾಗ್ರಹಕ್ಕೆ ನಿಮ್ಮನ್ನೇ ಕಳುಹಿಸೋಣ. ನಾವೆಲ್ಲಾ ಆಮೇಲೆ ಬರುತ್ತೇವೆ. ( ನಗು ).

ಶ್ರೀ ವೀರೇಂದ್ರ ಪಾಟೀಲ್ :-

ಅಧ್ಯಕ್ಷರೇ, ಈಗ ನೀರಾವರಿ ಯೋಜನೆಗಳಲ್ಲಿ ನಮ್ಮ ನೀರಿನ ಪಾಲನ್ನು ನಮ್ಮ ಹಕ್ಕನ್ನು ಉಪಯೋಗ ಮಾಡಿಕೊಂಡು ನೀರಾವರಿ ಯೋಜನೆಗಳನ್ನು ಮಾಡಿ ಅದರ ಮುಖಾಂತರ ನೀರಾವರಿ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಇಲ್ಲಿಯವರೆಗೂ ನಾವು ಪ್ರಯತ್ನ ಮಾಡಿದ್ದೇವೆ.

ಮೊದಲನೇ ಯೋಜನೆಯಲ್ಲಿ 3 ಮೇಜರ್ ಇರಿಗೇಷನ್ ಯೋಜನೆ, 8 ಮೀಡಿಯಮ್ ಇರಿಗೇಷನ್ ಯೋಜನೆಗಳನ್ನೂ ಪ್ರಾರಂಭ ಮಾಡಿದ್ದೇವೆ. ಎರಡನೇ ಯೋಜನೆಯಲ್ಲಿ 3 ಮೇಜರ್ ಇರಿಗೇಷನ್ ಯೋಜನೆಗಳನ್ನೂ 12 ಮೀಡಿಯಮ್ ಇರಿಗೇಷನ್ ಯೋಜನೆಗಳನ್ನೂ ಪ್ರಾರಂಭ ಮಾಡಿದ್ದೇವೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 4 ಮೇಜರ್ ಇರಿಗೇಷನ್ ಯೋಜನೆಗಳನ್ನೂ 6 ಮೀಡಿಯಮ್ ಇರಿಗೇಷನ್ ಯೋಜನೆಗಳನ್ನು ಪ್ರಾರಂಭ ಮಾಡಿದ್ದೇವೆ. ಒಟ್ಟು 10 ಮೇಜರ್ ಇರಿಗೇಷನ್ ಯೋಜನೆಗಳು, 26 ಮೀಡಿಯಮ್ ಇರಿಗೇಷನ್ ಯೋಜನೆಗಳನ್ನೂ ಪ್ರಾರಂಭ ಮಾಡಿದ್ದೇವೆ. ಅವುಗಳ ಎಸ್ಟಿಮೇಟೆಡ್ ಕಾಸ್ಟ್ 283,67,000 ರೂಪಾಯಿಗಳು. ಮೂರನೆ ಪಂಚವಾರ್ಷಿಕ ಯೋಜನೆಯ ಕೊನೆಯವರೆಗೂ ಈ ಕೆಲಸಗಳಿಗೆ ನಾವು ಖರ್ಚು ಮಾಡಿರತಕ್ಕದ್ದು 102,70,000 ರೂಪಾಯಿಗಳು. ಸ್ಪಿಲ್ ಓವರ್ ವರ್ಕಿಗೆ 881 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗಿದೆ. ನಾವು ಕಳೆದ 3 ಯೋಜನೆಗಳಲ್ಲಿ ಯಾವ ಯಾವ ಯೋಜನೆಗಳನ್ನು ಯಾವ ಯಾವ ಜಲಾಶಯಗಳನ್ನು ಪ್ರಾರಂಭಮಾಡಿದ್ದೇವೆಯೋ ಆ ಕೆಲಸಗಳನ್ನು ಮುಗಿಸುವುದಕ್ಕೆ 181 ಕೋಟಿ ರೂಪಾಯಿಗಳು ಆಗುತ್ತವೆ. ಇನ್ನು ಬಾಕಿ ನೀರಾವರಿ ಕೆಲಸಗಳಿಗೆ ಪ್ರತಿ ವರ್ಷ ನಾವು 9-10 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ನೀರಾವರಿ ಯೋಜನೆಗಳ ಸಲುವಾಗಿ 67-68ನೇ ಸಾಲಿನಲ್ಲಿ 11-12 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. 68-69ನೇ ಸಾಲಿನಲ್ಲಿ 10 ಕೋಟಿ ರೂಪಾಯಿಗಳು ಮಾತ್ರ ನೀರಾವರಿ ಯೋಜನೆಗಳ ಸಲುವಾಗಿ ಬಡ್ಜೆಟ್ಟಿನಲ್ಲಿ ಪ್ರಾವಿಜನ್ ಇದೆ. ಅನೇಕ ಮಾನ್ಯ ಸದಸ್ಯರು ಹೇಳಿದರು. ಅನೇಕ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು, ಪ್ರತಿಯೊಂದು ಕೆಲಸವನ್ನೂ ತೆಗೆದುಕೊಳ್ಳಬೇಕಾದರೆ ಅದಕ್ಕೆ ರಿಸೋರ್ಸಸ್ ಯಾವ ರೀತಿ ಹೆಚ್ಚು ಮಾಡಬೇಕು ಎಂಬುದನ್ನೂ ನಾವು ವಿಚಾರ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು ಹೇಳಿದರು. ನೀರಾವರಿ ಕಾಮಗಾರಿಗಳ ಸಲುವಾಗಿ ಒಂದು ಕಾರ್ಪೊರೇಷನ್ ಏತಕ್ಕೆ ಮಾಡಬಾರದು ಎಂದು ಅದನ್ನು ನಾನು ಒಪ್ಪುತ್ತೇನೆ. ಈಗ ಮೈನರ್ ಇರಿಗೇಷನ್ ಸಲುವಾಗಿ ನಾವು 102 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದಕ್ಕೆ ನಾವು ಪ್ರತಿವರ್ಷ 5-6 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುತ್ತಿದ್ದೇವೆ. ಇವೊತ್ತು ವಾಟರ್ ರೇಟಿನಿಂದ ನಮಗೆ ಏನು ಉತ್ಪತ್ತಿ ಬರುತ್ತಿದೆ, ಅದು ಆ ಯೋಜನೆಯ ಮೆಂಟೇನೆನ್ಸ್‌ಗೆ ಕೂಡ ಸರಿಹೋಗುವುದಿಲ್ಲ. ಅದಕ್ಕೆ ಬೇರೆ ಹಣವನ್ನು ಒದಗಿಸಬೇಕಾಗುತ್ತದೆ. ವಾಟರ್ ರೇಟ್ ಮ್ಯಾಗ್ಜಿಮಮ್ ಒಂದು ಎಕರೆಗೆ 30 ರೂಪಾಯಿಗಳು ಬೀಳುತ್ತದೆ. ಈಗ ಸರಾಸರಿ ವಾಟರ್ ರೇಟು ವಸೂಲು ಆಗುತ್ತಿರುವುದನ್ನು ಲೆಕ್ಕ ಹಾಕಿದರೆ ಒಂದು ಎಕರೆಗೆ 20 ರೂಪಾಯಿಗಳಾಗುತ್ತವೆ. ಈಗ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಈಗ ಯಾವುದೇ ಯೋಜನೆಯ ಕೆಳಗಡೆ ನೀರಾವರಿ ಮಾಡುವ ಸಲುವಾಗಿ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಅದಕ್ಕೆ ಒಂದು ವರ್ಷಕ್ಕೆ 55 ರೂಪಾಯಿ ಬಡ್ಡಿ ಆಗುತ್ತದೆ. ಅದರಿಂದ ರಿಟರ್ನ್ ಬರುವುದು 20 ರೂಪಾಯಿಗಳು. ಮೆಂಟೆನೆನ್ಸ್‌ಗೆ ಬೇರೆ ಖರ್ಚು ಮಾಡಬೇಕಾಗುತ್ತದೆ. ಈಗ ನಾವು ನೀರಾವರಿ ಕಾಮಗಾರಿಗಳ ಸಲುವಾಗಿ ಒಂದು ಕಾರ್ಪೊರೇಷನ್ ಮಾಡುವುದಾದರೆ ಅದಕ್ಕೆ ಒಂದು ಆ್ಯಕ್ಟ್ ಮಾಡಿ, ಬಿಲ್ ಮಾಡಿ

ಅದನ್ನು ಮಾಡಬೇಕಾಗುತ್ತದೆ. ಈಗ ನಾನು ತಮಗೆ ಹೇಳಬೇಕಾಗಿದ್ದರೆ ಇರಿಗೇಷನ್ ಪ್ರಾಜೆಕ್ಟನ್ನು ಕಟ್ಟಬೇಕಾದರೆ ಅದು ಆಲಟೆಡ್ ಎಸ್ಟಿಮೇಟಿಗೆ ಆಗುವುದಿಲ್ಲ. ಈಗ ನಾವು ತುಂಗಭದ್ರಾ ಜಲಾಶಯವನ್ನು ನಿರ್ಮಾಣ ಮಾಡಿ ಅದಕ್ಕೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಫೀಲ್ಡ್ ಚಾನಲ್ಸ್ ತೋಡಿಸಲು ಹಣ ಕೊಡಬೇಕಾಗುತ್ತದೆ. ಲೆವೆಲಿಂಗ್ ಮಾಡಿಸಲು ಹಣ ಕೊಡಬೇಕಾಗುತ್ತದೆ. ಅದ್ದರಿಂದ ಈಗ ಏನು ಒಂದು ಅಭಿವೃದ್ಧಿ ಕಾರ್ಯಗಳು ಕೆಲವು ಕಡೆ ಆಗಿದೆಯೋ ಅಂತಹ ಕಡೆಗಳಲ್ಲಿಯೇ ಪುನಃ ಬೇಸಿಕ್ ಫೆಸಿಲಿಟೀಸ್‌ಗಳನ್ನು ಒದಗಿಸಿಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಈ ಭಾಗಗಳಲ್ಲಿಯೇ ಎಲ್ಲಾ ಹಣವನ್ನೂ ತೊಡಗಿಸುವುದಕ್ಕೆ ಹೊರಟರೆ ಹೊಸದಾಗಿ ಯಾವ ಕೆಲಸಗಳನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಕಾಣುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿಗೆ ಕೊಡುವುದಾದರೆ ಪ್ರತಿಯೊಂದು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಬಗ್ಗೆ ಕಮೀಷನ್ ನೇಮಕ ಮಾಡುವುದಕ್ಕೆ ತಯಾರಿದ್ದೇವೆ. ಕಮೀಷನ್ ಅವರು ನಾವು ಕೊಡತಕ್ಕಂಥ ಹಣಕ್ಕೆ ಬಡ್ಡಿ ಕೊಟ್ಟುಕೊಂಡು ಹೋದರೆ ಸಾಕು. ಇರಿಗೇಷನ್ ಪ್ರಾಜೆಕ್ಟ್‌ಗಳು ಜಾಸ್ತಿಯಾದರೆ ನಮಗೂ ಸಂತೋಷ. ಏಕೆಂದರೆ ಪ್ರತಿ ದಿವಸವೂ ಮಾನ್ಯ ಸದಸ್ಯರುಗಳು ನಮ್ಮ ಕಡೆ ಪ್ರಾಜೆಕ್ಟ್‌ಗಳು ಆಗಲಿಲ್ಲ. ನಮ್ಮ ಕಡೆ ಪ್ರಾಜೆಕ್ಟ್‌ಗಳು ಆಗಲಿಲ್ಲ ಎಂದೂ ಮತ್ತು ಮಂದಗತಿಯಿಂದ ನಡೆಯುತ್ತಿದೆಯೆಂದೂ ಹೇಳುವುದನ್ನು ಕೇಳಿ ಕೇಳಿ ನನಗೂ ಕಿವಿ ಕಳಚಿ ಬಿದ್ದು ಹೋಗಿದೆ. ಎಲ್ಲಾ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ನಮ್ಮಲ್ಲಿ ದುಡ್ಡು ಇಲ್ಲ, ಏನೂ ಮಾಡುವುದು? ಈಗ ಎಲ್ಲೆಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದೇವೆ, ಅವುಗಳನ್ನು ನೋಡಿಕೊಳ್ಳುವುದಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡಿತ್ತಿದ್ದೇವೆ. ಇವತ್ತಿನ ದಿವಸ ಭದ್ರಾ, ತುಂಗಭದ್ರಾ, ಕೆ.ಆರ್.ಎಸ್ ಮುಂತಾದ ಪ್ರಾಜೆಕ್ಟ್‌ಗಳ ಸುತ್ತ ಮುತ್ತಲಿನಲ್ಲಿರುವ ಜನರು ಸುಖ ಜೀವನ ನಡೆಸುತ್ತಿರುವಂತೆ ಹೇಮಾವತಿ, ಅಪ್ಪರ್ ಕೃಷ್ಣಾ ನದಿಗಳ ಸುತ್ತ ಮುತ್ತಲಲ್ಲಿರುವ ಜನರಿಗೂ ಅದೇ ರೀತಿ ಸುಖ ಜೀವನ ನಡೆಸಬೇಕೆಂಬ ಆಶೆ ಇದೆ. ಆದರೆ ನಮಗೆ ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ಹಣವಿಲ್ಲ. ಸರ್ಕಾರದವರಿಗೆ ಈ ಕೆಲಸಗಳನ್ನು ತೆಗೆದುಕೊಳ್ಳಲು ಮನಸ್ಸು ಇದೆಯೋ, ಇಲ್ಲವೋ ಎಂದು ಕೇಳುತ್ತಾರೆ. ಪಾಪ್ಯುಲರ್ ಗೌರ್ನಮೆಂಟ್ ಇರಬೇಕಾದರೆ ಹೆಚ್ಚು ತೆರಿಗೆ ಹಾಕಕೂಡದು ಎಂದು ಜನರು ಹೇಳುತ್ತಾರೆ. ಸರ್ಕಾರದವರೇನಾದರು ಜಾಸ್ತಿ ತೆರಿಗೆ ಹಾಕಿದರೆ, ಮುಂದೆ ಓಟು ಪಡೆಯುವುದು ಕಷ್ಟವಾಗುತ್ತದೆಂದು ಮಾನ್ಯ ಸದಸ್ಯರುಗಳು ತಿಳಿದುಕೊಂಡು, ಜಾಸ್ತಿ ತೆರಿಗೆ ಹಾಕುವುದು ಸರಿಯಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ಸರ್ಕಾರದ ಹತ್ತಿರ ಸರಿಯಾಗಿ ಹಣ ಬರುವುದಕ್ಕೆ ಅಡ್ಡಿಗಳು ಬಂದು ಹೆಚ್ಚಿನ ಕೆಲಸಗಳನ್ನು ಮಾಡಿಸುವುದಕ್ಕೆ ತೊಂದರೆಯಾಗುತ್ತಿದೆ. ಮಾನ್ಯ ಸದಸ್ಯರುಗಳು ಎಲ್ಲಾ ಕಡೆಗಳಲ್ಲಿಯೂ ಏತಕ್ಕೆ ಹೆಚ್ಚಿನ ಕೆಲಸಗಳನ್ನು ಸರ್ಕಾರದವರು ಮಾಡಿಸುತ್ತಿಲ್ಲವೆಂದು ಕೇಳಿದ್ದಕ್ಕೆ ಈ ವಿಚಾರಗಳನ್ನು ಹೇಳಿದ್ದೇನೆ.

ಇನ್ನು ಅನೇಕ ಕಡೆಗಳಲ್ಲಿ ಜನರು ತಾವಾಗಿಯೇ ಮುಂದೆ ಬಂದು ನಮ್ಮ ಜಮೀನುಗಳನ್ನು ಷೆಡ್ಯೂಲ್ ಬ್ಯಾಂಕ್‌ಗಳಿಗೆ ಪ್ಲೆಡ್ಜ್ ಮಾಡಿ ಸಾಲವಾಗಿ ಹಣ ಪಡೆದುಕೊಡುತ್ತೇವೆ, ನಮ್ಮ ಕಡೆಯ ಪ್ರಾಜೆಕ್ಟ್‌ಗಳನ್ನು ಜಾಗ್ರತೆ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಈ ವಿಚಾರವನ್ನು ಸಹ ಪರಿಶೀಲನೆ ಮಾಡಿಸುತ್ತಿದ್ದೇವೆ. ಈಗಿರತಕ್ಕಂಥ ಕಾನೂನಿನಲ್ಲಿ........

ಶ್ರೀ ಎಚ್.ಡಿ. ದೇವೇಗೌಡ :-

ಕೆಲವರು ತಮ್ಮ ಜಮೀನನ್ನು ಷೆಡ್ಯೂಲ್ ಬ್ಯಾಂಕ್‌ಗಳಿಗೆ ಪ್ಲೆಡ್ಜ್ ಮಾಡಿ ಸಾಲ ಮಾಡಿರುತ್ತಾರೆ. ಮತ್ತೆ ಎರಡನೆಯ ಸಾರಿ ಸಾಲ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ಈ ಬಗ್ಗೆ ಕೂಡ ಪರೀಕ್ಷೆ ಮಾಡಿಸುವುದು ಒಳ್ಳೆಯದೆಂದು ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :-

ಪ್ರತಿಯೊಂದು ವಿಚಾರವನ್ನೂ ಸಹ ಪರಿಶೀಲನೆ ಮಾಡಿಸುತ್ತಿದ್ದೇವೆ. ಕೆಲವು ಜನ ಹಣ ಕೊಡುತ್ತೇವೆಂದು ಮುಂದೆ ಬರಬಹುದು, ಆದರೆ ಎಲ್ಲರ ಹತ್ತಿರವೂ ಹಣವಿರುವುದಿಲ್ಲವಾದ್ದರಿಂದ ತಮ್ಮ ಜಮೀನುಗಳನ್ನು ಷೆಡ್ಯೂಲ್ ಬ್ಯಾಂಕ್‌ಗಳಿಗೆ ಪ್ಲೆಡ್ಜ್ ಮಾಡಿ ಹಣ ಪಡೆದು ಕೊಡಬೇಕಾಗುತ್ತದೆ. ಈ ರೀತಿ ಕೊಡಲು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಯತ್ನ ಮಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈಗ ನಮ್ಮಲ್ಲಿ ಹಣದ ಮುಗ್ಗಟ್ಟು ಇದೆ. ಹಣವನ್ನು ನಾನಾ ಮಾರ್ಗಗಳಿಂದ ಶೇಖರಣೆ ಮಾಡಿಕೊಂಡರೆ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಆದಷ್ಟು ತೀವ್ರವಾಗಿ, ಜಾಗ್ರತೆಯಾಗಿ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗದಿದ್ದ ಕೆಲಸಗಳನ್ನೂ ಸಹ ಈ ಒಂದು ಯೋಜನೆಯಿಂದ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತೆದೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಅಪ್ಪರ್ ಕೃಷ್ಣಾ ಯೋಜನೆ ಮಲಗಿಕೊಂಡಿದೆಯೆಂದು ಹೇಳಿದರು. ಇದುವರೆಗೆ ಈ ಯೋಜನೆಯ ಕೆಲಸ ಪ್ರಾರಂಭವಾಗಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇದುವರೆಗೆ ಕೇವಲ ಸಿಬ್ಬಂದಿಗಾಗಿ ಮತ್ತು ಸಣ್ಣಪುಟ್ಟ ಕೆಲಸ ಕಾರ್ಯಗಳಿಗಾಗಿ ಮಾತ್ರ ಹಣವನ್ನು ಖರ್ಚು ಮಾಡಿದ್ದೇವೆ. ಇದನ್ನು ಬಿಟ್ಟರೆ ಹೆಚ್ಚಿನ ಪ್ರಮಾಣದಲ್ಲಿ ಇನ್ನೂ ಹಣವನ್ನು ಖರ್ಚು ಮಾಡಿಲ್ಲ. ಈ ಒಂದು ಯೋಜನೆಯನ್ನು ಮುಗಿಸುವ ಬಗ್ಗೆ ದೀರ್ಘವಾಗಿ ಪರಿಶೀಲನೆ ಮಾಡಬೇಕಾಗಿ ಬಂದಿದೆ. ಕೆಲವು ಮಾನ್ಯ ಸದಸ್ಯರುಗಳು ಈ ಯೋಜನೆಯಿಂದ ಬಿಜಾಪುರದ ಕೆಲವು ಭಾಗಗಳು ನೀರಿನಲ್ಲಿ ಮುಳುಗಡೆಯಾಗುತ್ತದೆಂದು ಮತ್ತು ಈ ಯೋಜನೆಯಿಂದ ಬಿಜಾಪುರ ಜಿಲ್ಲೆಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಅನುಕೂಲವಾಗುವಂತೆ ಪುನಃ ಪರಿಶೀಲನೆ ಮಾಡಿಸಿ, ಇವತ್ತಿನ ದಿವಸ ಎಸ್ಟಿಮೇಟ್ಸ್ ಪೂರ್ತಿಯಾಗಿ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ. ಈ ಒಂದು ಯೋಜನೆಯಿಂದ ಸುಮಾರು 20 ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಸುಮಾರು 318.5 ಟಿ.ಎಂ.ಸಿ. ಎಫ್‌ಟಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ ಅವಕಾಶವಿದೆಯೆಂದು ಪ್ರಾಜೆಕ್ಟು ರಿಪೋರ್ಟಿನಲ್ಲಿ ಹೇಳಿದ್ದಾರೆ. ಈ ಯೋಜನೆಗೆ ಸುಮಾರು 143 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಮೊದಲನೆಯ ಸ್ಟೇಜ್‌ಗೆ ಸುಮಾರು 75 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಯೋಜನೆಯಿಂದ ಮುಳುಗಡೆಯಾಗತಕ್ಕ ಪ್ರದೇಶದವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಒಂದು ಸ್ಕೀಮನ್ನು ತಯಾರು ಮಾಡಲಾಗಿದೆ. ಅಂದರೆ ಲಿಫ್ಟ್ ಇರಿಗೇಷನ್ ಮೂಲಕ ಅನುಕೂಲತೆ ಮಾಡಿ ಕೊಡುವುದಕ್ಕೆ ಸಾಧ್ಯವಿದೆ. ಈ ಒಂದು ಲಿಫ್ಟ್ ಇರಿಗೇಷನ್‌ನಿಂದ ಬಿಜಾಪುರ ಜಿಲ್ಲೆಯ ಪ್ರದೇಶದಲ್ಲಿ ಸುಮಾರು ಮೂರೂವರೆ ಲಕ್ಷ ಎಕರೆಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ.

ಇದಲ್ಲದೆ ಆಲಮಟ್ಟಿ ಡ್ಯಾಮಿನ ಕೆಳಗೆ ಒಂದು ಲಕ್ಷ 20 ಸಾವಿರ ಕೆ.ವಿ. ಪವರನ್ನು ಉತ್ಪತ್ತಿ ಮಾಡುವುದಕ್ಕೆ ಅವಕಾಶವಿದೆ. ಈ ರೀತಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಇನ್ನು ಕೆಲಸ ಪ್ರಾರಂಭ ಮಾಡಬೇಕಾಗಿದೆ. ಆದರೆ ಈ 1968-69 ನೇ ಸಾಲಿನಲ್ಲಿ ಈ ಯೋಜನೆಗೆ ನಮ್ಮ ಹಣಕಾಸಿನ ಸಚಿವರು ಕೇವಲ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಸಾಕಾಗುವುದಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರು. ನಾನೂ ಸಹ ಕೊನೆಯ ಪಕ್ಷ ಎರಡು ಕೋಟಿ ರೂಪಾಯಿಗಳನ್ನಾದರೂ ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರನ್ನು ಕೇಳಿಕೊಂಡಿದ್ದೇನೆ. ಕೊನೆಯ ಪಕ್ಷ ಒಂದು ಕೋಟಿ ರೂಪಾಯಿಗಳನ್ನಾದರೂ ವಿಶ್ವ ಪ್ರಯತ್ನ ಮಾಡಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಆ ಭಾಗದಿಂದ ಬಂದಿರತಕ್ಕ ಮಾನ್ಯ ಸದಸ್ಯರುಗಳಿಗೆ ಭರವಸೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಬಾಪುಗೌಡ ( ಶಹಾಪುರ ) :-

ಎಲ್.ಐ.ಸಿ.ಯಿಂದ ಅಥವಾ ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್ :-

ನಾವು ಕೇಳಿದ ತಕ್ಷಣ ಯಾರೂ ಕೊಡುವುದಕ್ಕೆ ಸಿದ್ಧರಿಲ್ಲ. ಮಾನ್ಯ ಸದಸ್ಯರಾದ ಬಾಪುಗೌಡರು ಹೇಳಿದಂತೆ ಎಲ್.ಐ.ಸಿ. ಅವರು ಸಾಲ ಕೊಡುವುದಾದರೆ ಆ ಭಾಗದ ಭೂಮಿಯನ್ನು ಪ್ಲೆಡ್ಜ್ ಮಾಡಿ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಕೆಲಸ ಪ್ರಾರಂಭವಾದ ಮೇಲೆ ಇದನ್ನು ಪ್ರಯತ್ನ ಮಾಡಿ ನೋಡಬೇಕಾಗಿದೆ.

ಶ್ರೀ ಎಸ್.ಎಸ್. ಅರಕೇರಿ ( ಬೀಳ್ಗಿ ) :-

ಆಲಮಟ್ಟಿ ಯೋಜನೆಯ ಲಿಫ್ಟ್ ಬ್ಯಾಂಕ್ ಚಾನಲನ್ನು ಕೈಬಿಡುತ್ತಾರೆಂದು ತಿಳಿದು ಬಂದಿದೆ ಅದು ನಿಜವೇ? ಮತ್ತು ಆಲಮಟ್ಟಿ ಡ್ಯಾಂನ ಎತ್ತರವನ್ನು 10 ಅಡಿ ಕಡಿಮೆ ಮಾಡುತ್ತಾರೆಂದು ತಿಳಿದು ಬಂದಿದೆ, ಅದು ನಿಜವೆ ?

ಶ್ರೀ ವೀರೇಂದ್ರ ಪಾಟೀಲ್ :-

ಈ ಆಲಮಟ್ಟಿ ಯೋಜನೆಯಿಂದ ಸುಮಾರು 19 ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಇಂತಹ ದೊಡ್ಡ ಯೋಜನೆಯನ್ನು ಕಟ್ಟಿಸುವಾಗ ಯಾರೂ ಫೀಟ್‌ಗಳನ್ನು ಲೆಕ್ಕ ಹಾಕುವುದಕ್ಕೆ ಹೋಗುವುದಿಲ್ಲ. ಆ ಡ್ಯಾಂನಲ್ಲಿ ಎಷ್ಟು ನೀರನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಪುಗೌಡ :-

ಕೆಲವು ರಾಜಕೀಯ ಕಾರಣಗಳಿಂದ ಸರ್ಕಾರದವರು ಈ ಯೋಜನೆಯನ್ನು ಕೈ ಬಿಟ್ಟಿದ್ದಾರೆಂದು ನಮ್ಮ ಕಡೆಯ ಜನರು ಅನುಮಾನ ಪಡುತ್ತಿದ್ದಾರೆ, ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್ :-

ಅದರಲ್ಲಿ ಸತ್ಯಾಂಶವಿಲ್ಲ. ಮಾನ್ಯ ಸದಸ್ಯರು ಆ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಈ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್ ( ದೇವದುರ್ಗ ) :-

ಈ ಏರಿಯಾದೊಳಗೆ ಕಮ್ಯುನಿಕೇಷನ್ಸ್ ಬಿಲ್ಡಿಂಗ್ಸ್ ಬಗ್ಗೆ ಏನು ರೊಕ್ಕ ಖರ್ಚು ಮಾಡಬೇಕೆಂದಿದ್ದೀರಿ ಅದೆಲ್ಲವನ್ನೂ ಈ ಯೋಜನೆಗೇ ಖರ್ಚು ಮಾಡುವುದು ಸರಿಯಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್ :-

ಅದನ್ನೂ ನೋಡೋಣ. ಮೊದಲು ಕೆಲಸ ಪ್ರಾರಂಭ ಮಾಡೋಣ.

ಇನ್ನು ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ಶಿವಪ್ಪನವರು ಎಷ್ಟು ಜನ ಚೀಫ್ ಇಂಜಿನಿಯರ್‌ಗಳು, ಸೂಪರಿಂಟೆಂಡಿಂಗ್ ಇಂಜನಿಯರ್‌ಗಳು, ಎಕ್ಸಿಕ್ಯುಟೀವ್ ಇಂಜನಿಯರ್‌ಗಳು ಇರಬೇಕೋ ಅದಕ್ಕಿಂತ ಜಾಸ್ತಿ ಇದ್ದಾರೆಂದು ಹೇಳಿದರು. ಇದರ ಬಗ್ಗೆ ನಾನು ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ, ಲೋಕೋಪಯೋಗಿ ಇಲಾಖೆಯನ್ನು ರೀ-ಆರ್ಗನೈಸ್ ಮಾಡುವುದರ ಸಲುವಾಗಿ, ಯಾವ ಯಾವ ಚೀಫ್ ಇಂಜನಿಯರ್‌ಗಳಿಗೆ ಎಷ್ಟೆಷ್ಟು ಜವಾಬ್ದಾರಿ ವಹಿಸಬೇಕು, ಎಷ್ಟು ಜನ ಚೀಫ್ - ಇಂಜನಿಯರ್‌ಗಳು ಸಾಕು ಎಂಬುದನ್ನು ಪರಿಶೀಲಿಸಲು ಶ್ರೀ ಮಿಶ್ರಾ ಎಂಬುವರನ್ನು ಅಡ್ವೈಸರ್ ಆಗಿ ನೇಮಕ ಮಾಡಿದ್ದೇವೆ. ಇವರು ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಇವರು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡಿರುವುದಲ್ಲದೆ ಚೀಫ್ - ಇಂಜನಿಯರ್ ಆಗಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಅಲ್ಲದೆ ಉತ್ತರ ಪ್ರದೇಶದ ಇರಿಗೇಷನ್ ಅಡ್ವೈಸರ್ ಆಗಿ ಕೆಲಸ ಮಾಡಿದ್ದಾರೆ. ಈ ವರ್ಷದ ಜೂನ್ ತಿಂಗಳೊಳಗೆ ತಮ್ಮ ವರದಿಯನ್ನು ಕೊಡುವವರಿದ್ದಾರೆ. ಅವರು ತಮ್ಮ ವರದಿಯನ್ನು ಕೊಟ್ಟ ಮೇಲೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ :-

ಆ ಪಾಯಿಂಟ್ ಅಲ್ಲ ನಾವು ಹೇಳಿದ್ದು, ಸರ್ಕಾರದ ಹತ್ತಿರ ಹಣವಿಲ್ಲದಿದ್ದರೂ ಸಹ ಸ್ಟಾಫ್ ಹೆಚ್ಚು ಇದೆ ಎಂದು. ನಾವು ಯಾವುದೇ ಅಧಿಕಾರಿಗಳನ್ನು ಆಪಾದಿಸುತ್ತಿಲ್ಲ. ಅಧಿಕಾರಿಗಳು ಅರ್ಹರಾಗಿಬಹುದು. ಬರೀಗೈಗಳಿಂದ ಅವರು ಹೇಗೆ ಕೆಲಸ ಮಾಡುವರು ?

ಶ್ರೀ ವೀರೇಂದ್ರ ಪಾಟೀಲ್ :-

ಅದು ಗೊತ್ತಿದೆ. ಆ ರೀತಿಯೇನಾದರೂ ಸ್ಟಾಫ್ ಹೆಚ್ಚು ಇದ್ದರೆ ಕಡಿಮೆ ಮಾಡುವ ಬಗ್ಗೆ ವಿಚಾರ ಮಾಡುಬಹುದು. ಶ್ರೀ ಮಿಶ್ರಾ ಅವರು ತಮ್ಮ ವರದಿ ಕೊಟ್ಟ ತಕ್ಷಣ ಇದನ್ನೆಲ್ಲಾ ಪರಿಶೀಲಿಸಬೇಕಾಗುತ್ತದೆ. ಈಗ ಒಂದು ವಿಚಾರವನ್ನು ಹೇಳುತ್ತೇನೆ. ಸಾವಿರಾರು ಜನ ಗ್ರಾಜುಯೇಟ್ಸ್ ಇಂಜನಿಯರ್ಸ್ ಮತ್ತು ಸೂಪರ್‌ವೈಸರ್ಸ್ ಕೆಲಸವಿಲ್ಲದೆ ಅಲೆದಾಡುತ್ತಿದ್ದಾರೆ. ಅನೇಕ ಜನರು

ನಮ್ಮ ಹತ್ತಿರ ಕೂಡ ಬರುತ್ತಿದ್ದಾರೆ. ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಸಿಬ್ಬಂದಿಗೆ ಸಾಕಷ್ಟು ಕೈತುಂಬ ಕೆಲಸವಿಲ್ಲದೆ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡುವ ಪರಿಸ್ಥಿತಿಯಲ್ಲಿಲ್ಲ. ಒಂದೊಂದು ಸಲ ಚೀಫ್ ಇಂಜಿನಿಯರ್ ಹೇಳುತ್ತಾರೆ. ಸಿಬ್ಬಂದಿಯನ್ನು ಕಡಿಮೆ ಮಾಡಬೇಕು ಎಂದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಆಂಧ್ರದಲ್ಲಿ ನೂರಾರು ಜನ, ಪರ್ಮನೆಂಟ್ ಇದ್ದವರನ್ನೂ ಕೂಡ ರಿಟ್ರೆಂಡ್ ಮಾಡಿದ್ದಾರೆ. ಆದರೆ ಆ ಪರಿಸ್ಥಿತಿಗೆ ನಾವು ಹೋಗಿಲ್ಲ. ಆದರೆ ಮುಂದೆ ಹೇಗೆ ಮಾಡುವುದು ? ಆದರೆ ಮುಂದೆ ಕೆಲಸ ಸಿಕ್ಕುವ ಸ್ಕೋಪೇ ಇಲ್ಲ, ಹೆಚ್ಚಿನ ಅವಕಾಶವೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇಂದು ಇದು ಒಂದು ರಾಷ್ಟ್ರದ ಪ್ರಶ್ನೆಯಾಗಿದೆ. ಅನೇಕ ಜನ, ಅಂದರೆ, ಸಾಧಾರಣ 40 ಸಾವಿರ ಜನರಿಗೆ ನಮ್ಮ ದೇಶದಲ್ಲಿ ಉದ್ಯೋಗವಿಲ್ಲವೆಂದು ಪೇಪರಿನಲ್ಲಿ ನಾವು ಓದಿದ್ದೇವೆ. ಅವರ ಸಲುವಾಗಿ ಒಂದು 10 ಕೋಟಿ ರೂಪಾಯಿಯ ಯೋಜನೆಯನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆಂದು ನಾನು ಕೇಳಿದ್ದೇನೆ. ಈ ಗ್ರಾಜ್ಯುಯೇಟ್ ಇಂಜಿನಿಯರಾಗಲಿ, ಸೂಪರ್‌ವೈಸರಾಗಲಿ, ಅವರಿಗೆ ಸ್ವಲ್ಪ ಮಟ್ಟಿಗೆ ಕೆಲಸ ಒದಗಿಸಬೇಕು ಎನ್ನುವ ದೃಷ್ಟಿಯಿಂದ ನಮ್ಮ ರಿಜಿಸ್ಟ್ರೇಶನ್ ರೂಲ್ಸನ್ನೂ ಕೂಡ ಸಡಿಲ ಮಾಡಿದ್ದೇವೆ. ಯಾರು ಗ್ರಾಜ್ಯುಯೇಟ್ ಇಂಜಿನಿಯರಿದ್ದರೆ, ಅವರು ಕೆಲಸ ತೆಗೆದುಕೊಳ್ಳಬಹುದು ಎಂದು ಕ್ಲಾಸ್ 3ಕ್ಕೆ ರಿಜಿಸ್ಟರ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದೇ ರೀತಿ ಸೂಪರ್‌ವೈಸರ್‌ಗೆ ಕ್ಲಾಸ್ 4 ರಿಜಿಸ್ಟರ್ ಮಾಡಿ ನೇರವಾಗಿ ಎರಡು ಲಕ್ಷ ರೂಪಾಯಿಯ ಕೆಲಸ ಕೊಡಬಹುದು ಎಂದು ಮಾಡಿದರೂ ಹೆಚ್ಚು ಜನರು ಮುಂದೆ ಬರುತ್ತಾ ಇಲ್ಲ. ಈ ಇಂಜಿನಿಯರ್ಸ್ ಯಾವ ಯಾವ ಜಿಲ್ಲೆಯಲ್ಲಿದ್ದಾರೆ, ಅವರೇ ಒಂದು ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್ ಸೊಸೈಟಿ ಮಾಡಿಕೊಂಡು ಬಂದರೂ ಸರ್ಕಾರದಿಂದ ಸ್ವಲ್ಪ ಮಟ್ಟಿಗೆ ಸಹಾಯ ಮಾಡುವುದಕ್ಕಾಗುತ್ತದೆ. ಮತ್ತು ಕೇಂದ್ರದಿಂದ ಈ 10 ಕೋಟಿ ಯೋಜನೆ ಏನು ಮಾಡುತ್ತಿದ್ದಾರೆ, ಅದರಲ್ಲೂ ನಮಗೂ ಏನಾದರೂ ನಮ್ಮ ಇಂಜನಿಯರ್ಸ್‌ಗೂ ಧನ ಸಹಾಯ ಮಾಡಬೇಕೆಂದು ಕೇಳಿಕೊಳ್ಳಲು ಇಷ್ಟರಲ್ಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಏನಾದರೂ ಸಹಾಯ ಮಾಡಿದರೆ, ಈ ಸೊಸೈಟಿ ಮುಖಾಂತರ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಅದೇ ರೀತಿಯಿಂದ ಇನ್ನೊಂದು ವಿಚಾರ ನಾವು ಮಾಡುತ್ತಿದ್ದೇವೆ. ಎರಡು ವರ್ಷದಿಂದ ಹೇಳುತ್ತಿದ್ದೇವೆ. ನಮ್ಮದೇ ಆದಂತಹ ಒಂದು ಏಜೆನ್ಸಿಯಾದ ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಪ್ರಾರಂಭದಲ್ಲಿ 25 ಲಕ್ಷ ರೂಪಾಯಿ ಬಂಡವಾಳದಿಂದ ಆ ಒಂದು ಕಾರ್ಪೋರೇಷನನ್ನು ಪ್ರಾರಂಭ ಮಾಡಬೇಕೆಂದು ವಿಚಾರ ಮಾಡಿದ್ದಾರೆ. ಕಾರ್ಪೋರೇಷನ್ನ ಮಾಡಬೇಕಾಗಿದ್ದರೆ, ಲಾ ಡಿಪಾರ್ಟ್‌ಮೆಂಟ್ ಹೇಳಿದ ಪ್ರಕಾರ ಒಂದು ಕಾನೂನು ಮಾಡಬೇಕಾಗುತ್ತದೆ. ಅದಕ್ಕಾಗಿ ಇಷ್ಟರಲ್ಲೇ ಒಂದು ಬಿಲ್ಲನ್ನು ಈ ಸಭೆಯಲ್ಲಿ ತರುವವನಿದ್ದೇನೆ. ಹೀಗೆ 68-69 ರಲ್ಲಿ ಈ ಒಂದು ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್ 25 ಲಕ್ಷ ರೂಪಾಯಿ ಬಂಡವಾಳದಿಂದ ಪ್ರಾರಂಭ ಮಾಡಬೇಕು, ಮತ್ತು ಮುಂದಕ್ಕೆ ಅದು ಬೆಳೆದಂತೆ ಹೆಚ್ಚು ಪ್ರೋತ್ಸಾಹ, ಉತ್ತೇಜನ ಕೊಡಬೇಕೆಂದು ವಿಚಾರ ಇದೆ. ಈ ರೀತಿ ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್ ಮಾಡುವುದರಿಂದ ಅನೇಕ ಜನ ಇಂಜನಿಯರ್ಸ್‌ಗೆ ಉದ್ಯೋಗ ದೊರಕಿದ ಹಾಗೆ ಆಗುತ್ತದೆ. ಈಗ ಯಾವ್ಯಾವ ಪ್ರಮಾಣದಲ್ಲಿ ಹಣ ಖರ್ಚಾಗುತ್ತದೆಯೋ, ಅದಕ್ಕಿಂತಲೂ ಕಡಿಮೆ ಖರ್ಚಿನಲ್ಲಿ

ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗಬಹುದೆಂದು ನಾವು ಮನಗಂಡಿದ್ದೇವೆ. ಒಬ್ಬ ಮಾನ್ಯ ಸದಸ್ಯರು ಹೇಳಿದರು, ನೀವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಒಂದು ಅದಕ್ಕೆ ಆಡಿಟ್ ಸೆಲ್ ಇಟ್ಟುಕೊಳ್ಳಬಹುದಲ್ಲ ಎಂದು ಇದು ಬಹಳ ಜನರಿಗೆ ಗೊತ್ತಿರಬಹುದು, ನಮ್ಮಲ್ಲಿ ಒಂದು ಟೆಕ್ನಿಕಲ್ ಆಡಿಟ್ ಸೆಲ್ ಇದೆ. ಅದನ್ನು ಮೊನ್ನೆ ಮೊನ್ನೆ ವಿಜಿಲೆನ್ಸ್ ಕಮಿಶನಿಗೆ ವರ್ಗಾಯಿಸಿದ್ದೇವೆ. ಆದರಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್ ಕೆಲಸ ಮಾಡುತ್ತಿದ್ದಾರೆ. ಎಲ್ಲಿಯಾದರೂ ದೂರು ಬಂದರೆ, ಸರ್ಪ್ರೈಸ್ ಚೆಕ್ ಮಾಡುವ ಅಧಿಕಾರ ಇದೆ. ಇಲ್ಲಿಯವರೆಗೂ ಸರ್ಕಾರದ ಕೆಳಗೆ ಕೆಲಸ ಮಾಡುತ್ತಿದ್ದರು. ಇಷ್ಟೇ ಅಲ್ಲದೆ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಸ್ಪಾಟ್ ವಿಜಿಲೆನ್ಸ್ ಇರಬೇಕು, ಕ್ವಾಲಿಟಿ ಕಂಟ್ರೋಲ್ ಇರಬೇಕು ಎಂದು ಇಟ್ಟುಕೊಂಡಿದ್ದೇವೆ. ದೊಡ್ಡ ಪ್ರಮಾಣದಲ್ಲಿ ಎಲ್ಲಾ ಕ್ವಾಲಿಟಿ ಕಂಟ್ರೋಲ್ ಆಗುವಂತೆ, ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡುತ್ತಿದ್ದೇವೆ.

ಇನ್ನು ಲಿಫ್ಟ್ ಇರಿಗೇಶನ್ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈ ಲಿಫ್ಟ್ ಇರಿಗೇಶನಿಗೆ ಹೆಚ್ಚಿನ ಆದ್ಯತೆ ಕೊಡಬೇಕು, ಏಕೆಂದರೆ, ಅದರಲ್ಲಿ ಯಾರಿಗೂ ಕಷ್ಟವಿಲ್ಲ. ಮುಳುಗಡೆ ಯಾಗುವುದು ಇಲ್ಲವೇ ಇಲ್ಲ. ಈಗಾಗಲೇ ಅನೇಕ ಲಿಫ್ಟ್ ಇರಿಗೇಶನ್ ಸ್ಕೀಂಸ್ ಸ್ಯಾಂಕ್ಷನ್ ಮಾಡಿದ್ದೇವೆ. ಇನ್ನೂ ಹೆಚ್ಚಾಗಿ ಮಾಡಬೇಕು. ಅದರಲ್ಲೂ ಕಾವೇರಿ ಬೇಸಿನ್‌ನಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಹಾರಂಗಿ, ಹೇಮಾವತಿ, ಚಿಕ್ಲೊಳೆ, ಕಬಿನಿ ಸುವರ್ಣಾವತಿ ಮುಂತಾದ ಕಡೆ ಮಾಡಿದ್ದೇವೆ. ಆದರೆ ನೀರನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಆದ್ಯತೆಯನ್ನು ಕೊಡಬೇಕು. ಯಾರಾದರೂ ಮುಂದೆ ಬಂದರೆ ಇಲ್ಲವೆಂದು ಹೇಳುವುದಿಲ್ಲ. ಅದಕ್ಕೆ ಬೇಕಾದ ಅಧಿಕಾರವನ್ನೂ ಸೂಪರಿಂಟೆಂಡಿಂಗ್ ಇಂಜನಿಯರಿಂಗ್ ಮತ್ತು ಎಕ್ಸುಕ್ಯೂಟಿವ್ ಇಂಜಿನಿಯರ್ಸ್‌ಗೆ ಕೊಟ್ಟಿದ್ದೇವೆ. ಆದ್ದರಿಂದ ಕಾವೇರಿ ಬೇಸಿನಲ್ಲಿ ನೀರಾವರಿಯನ್ನು ಹೆಚ್ಚು ಮಾಡಬೇಕೆಂದು ಸರ್ಕಾರಕ್ಕೆ ಮನಸ್ಸು ಇದೆ.

ಇನ್ನು ಶ್ರೀಮತಿ ಚಂಪಾಬಾಯಿ ಬೋಗಳೆಯವರು ಕಾಗ್‌ವಾಡ್ ಸ್ಕೀಮನ್ನು ಕೇಳಿದ್ದಾರೆ. ಅವರು ರಾಜೀನಾಮೆ ಕೊಡುತ್ತೇನೆಂದು ಬೇಜಾರು ಪಟ್ಟು ಕೊಂಡು ಹೇಳಿದ್ದಾರೆ. ಅದನ್ನು ಈಗಾಗಲೇ ಮಾಡುತ್ತಿದ್ದೇವೆ. ಏನೆಂದರೆ, ಅಲ್ಲಿ ಒಂದು ವಾಟರ್ ಸಪ್ಲೈ ಸ್ಕೀಮ್ ಮಾಡುತ್ತೇವೆ. ಅದರ ಜೊತೆಯಲ್ಲಿ ಇದನ್ನು ಸೇರಿಸುವುದರಿಂದ ಕಡಿಮೆ ಖರ್ಚಿನಲ್ಲಿ ಆಗಬಹುದು ಎಂಬ ವಿಚಾರ ಇದೆ. ಸ್ವಲ್ಪ ಪ್ರಮಾಣದಲ್ಲಿ ಜನರಿಗೆ ಅನುಕೂಲ ಮಾಡಿ ಮುಂದಿನ ಸ್ಕೋಪ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ಆದ್ದರಿಂದ ವಾಟರ್ ಸಪ್ಲೈಯಿದ್ದೂ, ಇರಿಗೇಶನಿದ್ದೂ ಮುಂದೆ ಮಾಡುತ್ತೇವೆ. ಅದನ್ನು ಕೈಬಿಡುವುದಿಲ್ಲವೆಂದು ಮಾತ್ರ ಅವರಿಗೆ ಭರವಸೆ ಕೊಡುತ್ತೇನೆ.

ಇನ್ನು ಹೇಮಾವತಿ ಮಾಸೋನರಿ ಡ್ಯಾಮ್ (Masonari Dam) ವಿಚಾರ. ಇದನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟ ಬಗ್ಗೆ ಒಬ್ಬೊಬ್ಬರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಅವರು ಹೇಳುವುದು ಏನೆಂದರೆ, ಟೆಂಡರ್ ನೋಟಿಫಿಕೇಶನ್ ಪ್ರಕಾರ ಇರಿಗೇಶನ್ ಎಕ್ಸಪೀರಿಯನ್ಸ್ ಇದ್ದವರಿಗೆ ಕೊಡಬೇಕಾಗಿತ್ತು. ಹಾಗೆ ಕೊಡದೆ, ಯಾರಿಗೋ ನಿಮಗೆ ಬೇಕಾದವರಿಗೆ ಕೊಟ್ಟಿದ್ದೀರಿ ಎನ್ನುವಂತಹ

ಮಾತನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಹೇಳಬೇಕಾದರೆ, ಯಾವುದೇ ಟೆಂಡರ್, ಮೇಜರ್ ಅಥವಾ ಮೀಡಿಯಂ ಇರಿಗೇಶನಿನಲ್ಲಿ ಟೆಂಡರ್ ಡಿಸ್ಪೋಸಲ್ ಮಾಡುವಂತಹ ಪ್ರೊಸೀಜರ್ ಇದೆ. ಮೇಜರ್ ಇರಿಗೇಶನ್‌ಗೆ ಒಂದು ಎಂ.ಐ.ಪಿ.ಸಿ. ಬೋರ್ಡ್ ಇಟ್ಟು ಕೊಂಡಿದ್ದಾರೆ. ಅದರಲ್ಲಿ ನಮ್ಮ ಕೆಲವು ಚೀಫ್ ಇಂಜಿನಿಯರ್ಸ್ ಇದ್ದಾರೆ, ಫೈನಾನ್ಸ್ ಪ್ಲಾನಿಂಗ್ ಸೆಕ್ರೆಟರೀಸ್ ಇದ್ದಾರೆ. ಮತ್ತು ನಾನ್ ಅಫಿಶಿಯಲ್ ಒಬ್ಬರು ರಿಟೈರ್ಡ್ ಚೀಫ್ ಇಂಜಿನಿಯರೂ ಇದ್ದಾರೆ. ಒಂದು ಟೆಕ್ನಿಕಲ್ ಕಮಿಟಿ ಇದೆ. ಇದರ ಮೇಲೆ ಯಾರಾದರೂ ಇಂಡಿವಿಜುಯಲ್ ಮಂತ್ರಿ ಇರುವ ಹಾಗಿಲ್ಲ. ಚೀಫ್ ಇಂಜನಿಯರ್ ಇರುವ ಹಾಗಿಲ್ಲ. ಈ ರೀತಿ ಲೋಯಸ್ಟ್ ಟೆಂಡರಿಗೆ ಕೊಟ್ಟಿದ್ದಾರೆ. ಯಾವಾಗಲೂ ಲೋಯೆಸ್ಟ್ ಟೆಂಡರಿಗೆ ಕೊಡುತ್ತೇವೆಂದು ಹೇಳಲಿಲ್ಲ. ಒಂದು ಮಾತನ್ನು ಹೇಳುತ್ತೇನೆ. ಇದು ಒಂದು ಕಂಟ್ರಾಕ್ಟ್‌ನಿಂದ ಮಾಡಿಸುವಂತದ್ದು. ಸರ್ಕಾರದ ಬೊಕ್ಕಸದ ಮೇಲೆ ಹೆಚ್ಚು ಭಾರ ಬೀಳದ ಹಾಗೆ, ಯಾವನಾದರೂ ಟೆಂಡರ್ ಹಾಕಿ ನನಗೇ ಕೊಟ್ಟೇ ತೀರಬೇಕೆಂದು ಅಧಿಕಾರದಿಂದ ಕೇಳುವ ಹಾಗೆ ಇಲ್ಲ. ಅನೇಕ ಕಂಟ್ರಾಕ್ಟರುಗಳು ಸುಪ್ರೀಂ ಕೋರ್ಟು, ಹೈಕೋರ್ಟಿಗೆ ಹೋಗಿದ್ದಾರೆ. ಆದರೆ ಅವರಿಗೆ ಫಲ ಸಿಕ್ಕಿಲ್ಲ. ಯಾರ ಹತ್ತಿರ ಯೋಗ್ಯತೆ ಇದೆ, ಯಾರು ಯೋಗ್ಯ ರೀತಿಯಲ್ಲಿ ಕೆಲಸ ಮಾಡುತ್ತಾರೆ ಅದನ್ನು ಪರಿಶೀಲನೆ ಮಾಡಿ ನಿರ್ಣಯ ಮಾಡುವಂಥ ಅಧಿಕಾರ ನಮಗೂ ಇರುತ್ತದೆ. ಆ ರೀತಿಯಿಂದ ಬಾಲಾಜಿ ಅಂಡ್ ಕಂಪೆನಿಗೆ ಕೊಟ್ಟಿದ್ದೇವೆ. ಅವನದ್ದು ಲೋಯೆಸ್ಟ್ ಟೆಂಡರ್. ಆತನ ಹತ್ತಿರ ಸಾಕಷ್ಟು ಮೆಷಿನರಿ ಇದೆ. ಇಕ್ವಿಪ್‌ಮೆಂಟ್ ಇದೆ, ಯೋಗ್ಯತೆ ಇದೆ ಎನ್ನುವುದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿದ ನಂತರವೇ ಈ ನಿರ್ಣಯ ಮಾಡಿದ್ದೇವೆ. ಇನ್ನೂ ವರ್ಕ್‌ಆರ್ಡರ್ ಅವರಿಗೆ ಕೊಟ್ಟಿಲ್ಲ. ಇದಕ್ಕೆ ಮೊದಲು ಎಲ್ಲ ಫಾರ್ಮಾಲಿಟೀಸ್ ಪೂರ್ತಿ ಆಗಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡಬೇಕಾದರೆ ಬಾಲಾಜಿ ಅಂಡ್ ಕಂಪನಿಯವರ ಕೊಟೇಷನ್ನು 2,94,53,296 ರೂಪಾಯಿ ಇದೆ. ಇನ್ನೊಬ್ಬರ ಕೊಟೇಷನ್ನು 3,06,59,000 ರೂಪಾಯಿ ಇದೆ. ಅಂದರೆ ಸುಮಾರು ಹತ್ತು ಲಕ್ಷ ರೂಪಾಯಿಗಿಂತ ಹೆಚ್ಚಿಗೆ ಕೊಡಬೇಕಾಗುತ್ತದೆ. ಹೆಚ್ಚು ಹಣ ಕೊಟ್ಟಿದ್ದರೂ ಇವರಿಗೆ ಇರಿಗೇಷನ್ ಎಕ್ಸಪೀರಿಯನ್ಸ್ ಇದೆಯೇ ಎನ್ನುವುದನ್ನು ನೋಡಿ ಇಂಥ ಕೆಲಸ ಮಾಡಬೇಕಾಗುತ್ತದೆ. ಬಾಲಾಜಿ ಅಂಡ್ ಕಂಪನಿಯವರಿಗೆ ಆರ್ಗನೈಜೇಷನ್ ಇದೆ, ಎಕ್ಸಪೀರಿಯನ್ಸ್ ಇದೆ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಅವರು ಎರಡು ಹೆಸರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು ಎರಡು ಮೂರು ಸಾವಿರ ಕೂಲಿಕಾರರಿಗೆ ಕೆಲಸ ಕೊಟ್ಟು ಕೆಲಸ ನಡೆಸಿದ್ದಾರೆ. ಆದುದರಿಂದ ಯಾವುದೇ ರೀತಿಯ ಟೆಕ್ನಿಕಲ್ ಡಿಫೆಕ್ಟ್ ಇದೆ ಎಂದು ತಂದು ಅವರ ಕೊಟೇಷನ್ ರಿಜೆಕ್ಟ್ ಮಾಡುವುದಕ್ಕಾಗುವುದಿಲ್ಲ. ಲೋಯೆಸ್ಟ್ ಟೆಂಡರ್ ರೇಟಿಗೆ ಕೆಲಸ ಮಾಡುತ್ತೇವೆ ಎಂದು ಹೇಳತಕ್ಕಂಥವರಿಗೆ ಒಂದು ವೇಳೆ ಇಂಥ ಕೆಲಸ ಮಾಡತಕ್ಕಂಥ ಯೋಗ್ಯತೆ ಇಲ್ಲದೇ ಹೋದರೆ ಅಂಥವರಿಗೆ ಕೆಲಸ ಕೊಟ್ಟು ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡತಕ್ಕಂಥ ಶಕ್ತಿ ಸರಕಾರಕ್ಕೆ ಇಲ್ಲ. ಆದುದರಿಂದ ನ್ಯಾಯಬದ್ಧವಾದ ರೀತಿಯಲ್ಲಿ ಎಲ್ಲ ಪರಿಶೀಲನೆ ಮಾಡಿ ಇಂಥ ನಿರ್ಣಯ ತೆಗೆದುಕೊಂಡಿದ್ದೇನೆ. ಈ ಕೆಲಸ ಕೊಡುವುದರಲ್ಲಿ ನಾವು ಯಾರಿಗೂ ಫೇವರ್ ಮಾಡಿಲ್ಲ ನಾವು ಯಾರಿಗೂ ಉಪಕಾರ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ :-

ಬೇಗನೆ ವರ್ಕ್ ಆರ್ಡರ್ ಇಷ್ಯು ಮಾಡಿ ಕೆಲಸ ಬೇಗ ಪ್ರಾರಂಭ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ :-

ಅದನ್ನು ಮಾಡುತ್ತೇನೆ.

ಇನ್ನು ಒಬ್ಬ ಮಾನ್ಯ ಸದಸ್ಯರು ಫರ್ಟಿಲೈಜರ್ ಫ್ಯಾಕ್ಟರಿಯಲ್ಲಿ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಹೇಳಿದರು. ಅವರು ಅರಕಲಗೂಡು ಸದಸ್ಯರು ಎಂದು ಕಾಣುತ್ತದೆ. ಈ ರೀತಿ ಅವರು ಹೇಳಿದರೆ ಹೆಸರು ಪಡೆಯುತ್ತಾರೆ. ಈ ಬಗ್ಗೆ ಇನ್ನೂ ಸ್ಕ್ಯಾಂಡಲ್ ಹೆಚ್ಚಾಗುತ್ತಾ ಇರುತ್ತದೆ. ಈ ವಿಷಯದ ಬಗ್ಗೆ ನಾನು ಹೇಳಬೇಕಾದ ಅವಶ್ಯಕತೆ ಇದೆ. ಮಂಗಳೂರಿನಲ್ಲಿ ಫರ್ಟಿಲೈಜರ್ಸ್ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರಕಾರ ಮುಂದೆ ಬಂದಿದ್ದಾರೆ. 1969 ಏಪ್ರಿಲ್ ತಿಂಗಳಲ್ಲಿ ಈ ಫ್ಯಾಕ್ಟರಿ ಕೆಲಸ ಪ್ರಾರಂಭವಾಗಬೇಕಾಗಿದೆ. ಆದುದರಿಂದ 1968 ಡಿಸೆಂಬರ್ ತಿಂಗಳ ಕೊನೆಯ ಒಳಗಾಗಿ ವಾಟರ್ ಸಪ್ಲೈಕೊಡಬೇಕು, ಇದು ಅಗತ್ಯ ಎಂದು ಅವರು ಒಂದು ಮಾತನ್ನು ಹೇಳಿದರು. ಈ ಫ್ಯಾಕ್ಟರಿಗೆ ಪ್ರತಿ ದಿವಸಕ್ಕೆ 18 ಮಿಲಿಯನ್ ಗ್ಯಾಲನ್ ನೀರು ಸಪ್ಲೈ ಮಾಡಬೇಕಾಗುತ್ತದೆ. ಈ ಯೋಜನೆಗೆ ಬೇಕಾಗುವ ಪೈಪು ಯಾವುದು ಇರಬೇಕು ಎನ್ನುವುದನ್ನು ಎಂಜಿನಿಯರುಗಳು ಡಿಜೈನು ಮಾಡಿ ಅಷ್ಟು ಅವಧಿಯಲ್ಲಿ ಪೈಪು ಬರುವುದಕ್ಕೆ ಸಾಧ್ಯವಿಲ್ಲ. ಡಿಸೆಂಬರ್ 1968ರ ಒಳಗಾಗಿ ಈ ಕೆಲಸವಾಗುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಹೇಳಿದೆವು. ಆದರೆ ಅಷ್ಟರೊಳಗಾಗಿ ಈ ಕೆಲಸವಾಗದೇ ಇದ್ದರೆ ಮಂಗಳೂರು ಫರ್ಟಿಲೈಜರ್ಸ್ ಫ್ಯಾಕ್ಟರಿ ಕಾರ್ಯರೂಪದಲ್ಲಿ ಬರುವುದಿಲ್ಲ. ಆದುದರಿಂದ ಏಪ್ರಿಲ್, ಮೇ 1969ರ ಒಳಗಾಗಿ ಈ ವಾಟರ್ ಸಪ್ಲೈ ಕೆಲಸ ಪೂರ್ತಿ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಅವರು ಹೇಳಿದರು. ಈ ಸ್ಕೀಂ ಮುಂದಕ್ಕೆ ಹೋಗದೆ ಹಾಗೆ ಏನಾದರೂ ಮಾಡಬೇಕೆಂದು ಪಂಪ್ ಮ್ಯಾನುಫಾಕ್ಚರ್ ಮಾಡತಕ್ಕಂಥ ಪೈಪ್ ಮ್ಯಾನುಫ್ಯಾಕ್ಚರ್ ಮಾಡತಕ್ಕಂಥ ಫರ್ಮ್‌ಗಳ ರಪ್ರೆಜಂಟೀವ್ ಅವರನ್ನು ಕರೆಸಿ ಮಾತುಕತೆ ನಡೆಸಿದ್ದೇವೆ. 17-18 ಫರ್ಮ್‌ಗಳನ್ನು ಕರೆದಿದ್ದೆವು. 1969 ಏಪ್ರಿಲ್ ಒಳಗಾಗಿ ಈ ಕೆಲಸ ಮಾಡಿಕೊಡುವುದಕ್ಕೆ ಅವರು ತಯಾರಿದ್ದಾರೆ. ಅವರ ಜೊತೆಗೆ ನೆಗೋಸಿಯೇಷನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡು ಬಂದುದರಿಂದ ಕೊಟೇಷನ್ಸ್ ಹಾಕಿ ಟೆಂಡರ್ಸ್ ಹಾಕಿ ಎಂದು ಹೇಳಲಾಯಿತು. ನಮ್ಮ ರಿಕ್ವಾಯರ್ ಮೆಂಟ್ಸಗೆ ಕೊಟೇಷನ್ಸ್ ಕೊಟ್ಟರೆ ಅದರ ಆಧಾರದ ಮೇಲೆ ಯೋಗ್ಯತೆ ನಿರ್ಣಯ ಮಾಡಿ ಇಂಥ ಕೆಲಸ ಮಾಡುತ್ತೇವೆ. ಗ್ಯಾನನ್ ಅಂಡ್ ಡಂಕರ್ಲಿ ಕಂಪನಿಯವರು ಬೇರೆ ಬೇರೆ ಗ್ರೂಪ್ ಮಾಡಿ ಕೊಟೇಷನ್ಸ್ ಕೊಟ್ಟಿದ್ದಾರೆ. ಇದರಲ್ಲಿ ನಾವು ಆರೇಳು ಗ್ರೂಪ್ ಮಾಡಿ ಮೂರು ತರಹದ ಕೊಟೇಷನ್ಸ್ ಕರೆದಿದ್ದೇವೆ. ಇದರಲ್ಲಿ ಎರಡು ಕಂಪನಿಯವರು ಮುಂದೆ ಬಂದರು ಆದರೆ ಅವರು ಹೆಚ್ಚು ದುಡ್ಡು ಕೇಳಿದ್ದರಿಂದ ಅವರನ್ನು ಕೈ ಬಿಟ್ಟಿದ್ದೇವೆ. ಐದಾರು ಗ್ರೂಪ್‌ಗಳಲ್ಲಿ ಕೂಡ ಕಡಿಮೆ ಪ್ರಮಾಣದಲ್ಲಿ ಹೊಂದಿಸಿಕೊಂಡು ಮಾಡಬೇಕೆಂದು ಎರಡು ಏಜೆನ್ಸಿಗಳಿಗೆ ಲೋಯೆಸ್ಟ್ ರೇಟಿನಲ್ಲಿ ಸಿವಿಲ್ ಎಂಜಿನಿಯರಿಂಗ್ ವರ್ಕ್ಸ್ ಮಾಡುವುದಕ್ಕೆ ಕೊಟ್ಟಿದೆ. ಈ ಸಿ.ಸಿ. ಅಂದರೆ ಎಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪನಿ. ಇದು

ಲಾರ್ಸನ್ ಟುಬ್ರೊ ಕಂಪನಿಯ ಒಂದು ಭಾಗವಾಗಿದೆ. 17 ಅಂಗುಲದ ಪೈಪು ಮತ್ತು 37-39 ಅಂಗುಲದ ಪೈಪು ತಯಾರ್ಮಾಡುವುದಕ್ಕೆ ಇಂಡಿಯನ್ ಹ್ಯೂಂ ಪೈಪು ಕಂಪನಿಗೆ ಕೊಟ್ಟಿದೆ. ಲೋಯೆಸ್ಟ್ ಟೆಂಡರ್ ತೆಗೆದುಕೊಂಡಿಲ್ಲ, ಹೈಯೆಸ್ಟು ತೆಗೆದುಕೊಂಡಿಲ್ಲ. ಇದನ್ನು ಗೊತ್ತು ಮಾಡುವುದು ಸರಕಾರ ಮಾಡಿದ್ದಾರೆ. ಇದನ್ನು ಚೀಫ್ ಎಂಜಿನಿಯರ್ ಅವರು ಮಾಡಿಲ್ಲ. ಇದನ್ನು ಗೊತ್ತು ಮಾಡುವುದು ಚೀಫ್ ಇಂಜಿನಿಯರ್ ಅವರಿಗೆ ಬಿಟ್ಟುಕೊಟ್ಟಿಲ್ಲ. ಚೀಫ್ ಇಂಜಿನಿಯರ್ ಅವರನ್ನು ಕರೆಸಿ ಅದರ ಜೊತೆಗೆ ಚರ್ಚೆ ಮಾಡಿ, ಮಾತು ಕತೆ ನಡೆಸಿ ವಿಚಾರ ಮಾಡಿ ಕೊನೆಯಲ್ಲಿ ಸರಕಾರ ತನ್ನ ಜವಾಬ್ದಾರಿಯ ಮೇಲೆ ಇದನ್ನು ನಿರ್ಣಯ ಮಾಡಿದ್ದೇವೆ. ಇದರಲ್ಲಿ ಚೀಫ್ ಇಂಜಿನಿಯರು ಏನೂ ಮಾಡಿಲ್ಲ. ತಾಂತ್ರಿಕ ವಿಚಾರ ಒಂದನ್ನು ಬಿಟ್ಟು ಸರಕಾರ ಉಳಿದದ್ದು ಎಲ್ಲವನ್ನೂ ಮಾಡಿದೆ. ನಾವು ಕೆಲಸ ಕೊಟ್ಟಿರತಕ್ಕಂಥ ಈ ಕಂಪನಿಯು ಹಿಂದುಸ್ಥಾನದಲ್ಲಿ ಹೆಸರುವಾಸಿಯಾದ ಕಂಪನಿಯಾಗಿದೆ. ಸದಸ್ಯರಲ್ಲಿ ಯಾರ ಕೈ ಬೆಚ್ಚಗಾಗಿಲ್ಲ ಯಾರ ಮೈ ಬೆಚ್ಚಗಾಗಿಲ್ಲ. ಮಾನ್ಯ ಸದಸ್ಯರು ಊಹಾ ಪೋಹ ಮಾಡಿ ಕೆಲವು ವಿಷಯ ಹೇಳುತ್ತಾರೆ. ಅವರು ತೋರಿಸತಕ್ಕಂಥ ಸರ್ಕಾರಿ ಆಜ್ಞೆಯನ್ನು ನಾವು ಮಾಡಿದ್ದೇವೆ. ಚರ್ಚೆ ಮಾಡಿ ನೆಗೋಶಿಯೇಟ್ ಮಾಡಿ ದೀರ್ಘವಾಗಿ ವಿಚಾರ ಮಾಡಿ ಗವರ್ನಮೆಂಟು ಅಗ್ರಿಮೆಂಟಿಗೆ ಸಹಿ ಮಾಡಿದೆ. ಏಪ್ರಿಲ್ 1969 ರೊಳಗೆ ಈ ಫರ್ಟಿಲೈಜರ್ ಫ್ಯಾಕ್ಟರಿಯಲ್ಲಿ ವಾಟರ್ ಸಪ್ಲೈ ಸ್ಕೀಂ ಬರುತ್ತದೆ. ಈ ಬಗ್ಗೆ ಕೇಂದ್ರ ಸರಕಾರಕ್ಕೆ ಕಾಗದ ಬರೆದಿದ್ದೇನೆ. ಪ್ರತಿಯೊಂದು ಸಲ ಅವರು ಅರ್ಜೆಂಟ್ ಎಂದು ಬರೆದು ಕಳಿಸುತ್ತಾರೆ. ಪ್ಲಾನಿನಲ್ಲಿ ದುಡ್ಡು ಇಲ್ಲ, ಎಲ್ಲಿಂದ ದುಡ್ಡು ಖರ್ಚು ಮಾಡಬೇಕು ? ಖಂಡಿತವಾಗಿ ಫರ್ಟಿಲೈಜರ್ ಫ್ಯಾಕ್ಟರಿ ಬರುತ್ತದೆ. ದುಡ್ಡು ಒದಗಿಸುತ್ತೇವೆ ಎಂದು ತಿಳಿಸಿದ್ದಾರೆ. ಈ ವರ್ಷ 90 ಲಕ್ಷ ರೂಪಾಯಿ ಒದಗಿಸಿದ್ದಾರೆ. ಭರವಸೆ ಕೊಡಬೇಕು ಎಂದು ಕೇಳಿದ ಮೇಲೆ ಲಿಖಿತ ಮೂಲಕ ಅವರು ಭರವಸೆ ಕೊಟ್ಟಿದ್ದಾರೆ. ಯಾಕೆಂದರೆ ಈ ಫ್ಯಾಕ್ಟರಿಯಲ್ಲಿ ಒಂದೂವರೆ ಕೋಟಿ ರೂಪಾಯಿ ಹಾಕಿ ನಾವು ಕೈ ಸುಟ್ಟುಕೊಳ್ಳಲು ತಯಾರಿಲ್ಲ. ಫರ್ಟಿಲೈಜರ್ಸ್ ಫ್ಯಾಕ್ಟರಿ ತಂದು ಕೊಡುತ್ತಾರೆ, ದುಡ್ಡು ವ್ಯರ್ಥವಾಗಿ ಹಾಳಾಗುವುದಿಲ್ಲ ಎಂಬ ಭರವಸೆಯ ಮೇಲೆ ನಾವು ಈ ಕೆಲಸ ಮಾಡಿದ್ದೇವೆ. ದುರ್ದೈವದಿಂದ ಇದರಲ್ಲಿ ಏನಾಗಿದೆ ಅಂದರೆ, ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ದಿನಾಲು ಹತ್ತಾರು ಟೆಂಡರ್ಸ್ ಬರುತ್ತವೆ. ಅದರಲ್ಲಿ ಕೆಲವು ಅಂಗೀಕರಿಸುತ್ತೇವೆ. ಕೆಲವನ್ನು ಅಂಗೀಕಾರ ಮಾಡುವುದಕ್ಕಾಗುವುದಿಲ್ಲ. ಯಾರ ಟೆಂಡರು ಅಂಗೀಕಾರ ಆಗಿಲ್ಲವೋ ಅಂಥವರು ಇವರ ಹತ್ತಿರ ಬಂದು ಏನೇನೋ ಹೇಳುತ್ತಾರೆ. ಅದನ್ನು ಕೇಳಿ ಕೊಂಡು ಇಲ್ಲಿ ಹೇಳುತ್ತಾರೆ. ಅವರು ಹೇಳುವುದನ್ನು ಕೇಳಿಕೊಂಡು ಅದನ್ನು ಪರಿಷ್ಕಾರ ಮಾಡಿ ಅದು ಸತ್ಯವಾದದ್ದೇ ಅದರಲ್ಲಿ ಏನಾದರೂ ಅರ್ಥ ಇದೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಂಡು ಏನಾದರೂ ಮನಸ್ಸಿಗೆ ಸಮಾಧಾನವಾದರೆ ಅದನ್ನು ಹೇಳುವುದು ಒಳ್ಳೆಯದು. ಅದರಲ್ಲಿ ಸತ್ಯತೆ ಇದ್ದರೆ ಮುಚ್ಚುಮರೆ ಇಲ್ಲದೆ ಹೇಳಬಹುದು. ಗವರ್ನಮೆಂಟ್ ಆರ್ಡರಿನಲ್ಲಿ ಎಲ್ಲಿ ವಿವರ ಇದೆ. ಗವರ್ನಮೆಂಟ್ ಆರ್ಡರು ಇದು ಸೀಕ್ರೆಟ್ ಡಾಕ್ಯುಮೆಂಟ್ ಅಲ್ಲ. ನಾನೇ ಆ ಆರ್ಡರ್ ಮಾಡಿದ್ದೇನೆ. ಆ ಗವರ್ನಮೆಂಟ್ ಆರ್ಡರ್ ಇಷ್ಟು ಆಗಿದೆ. ಅದು ಕಾನೂನು ಬದ್ಧವಾಗಿದೆ. ಅದರ ಬಗ್ಗೆ ಹಿಂದು ಮುಂದೆ ನೋಡಬೇಕಾಗಿಲ್ಲ. ಪೂರ್ತಿ ಜವಾಬ್ದಾರಿ ತೆಗೆದುಕೊಳ್ಳಲು ನಾನು ತಯಾರಿದ್ದೇನೆ. ಆದರೆ ವಿನಾ ಕಾರಣ ಆರೋಪಣೆ ಮಾಡುವುದರಲ್ಲಿ ಏನೂ ಅರ್ಥವಿಲ್ಲ.

ಮಾನ್ಯ ಸದಸ್ಯರಾದ ಬಿ. ವಿಠಲದಾಸ ಶೆಟ್ಟರು ಪುತ್ತೂರು ನೀರು ಸರಬರಾಜು ಬಗ್ಗೆ ಕೇಳಿದ್ದಾರೆ. ಇದು ನನ್ನ ಜವಾಬ್ದಾರಿಯಲ್ಲ. ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿದೆ. ಬಹಳ ವರ್ಷಗಳಿಂದ ಅದಕ್ಕೆ ಪೀಠಿಕೆಯಾಗುತ್ತಿದೆ. ಯಾವ ರೀತಿಯಿಂದ ಮಾಡಬೇಕು ಎನ್ನುವಂಥ ವಿಚಾರ ಮಾಡಿದ್ದೇವೆ. ಆದಕ್ಕೆ ಬೇಕಾಗುವಂಥ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ಮಾಡಿಸಲಾಗಿದೆ. ಬಹುಶಃ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮಂಜೂರು ಆಗಬೇಕಾಗಿದೆ. ಆ ಬಗ್ಗೆ ನನ್ನ ಕಡೆ ಏನು ಸಾಧ್ಯವುಂಟೋ ಅದನ್ನು ಎಂದರೆ, ಪ್ಲಾನ್, ಎಸ್ಟಿಮೇಟ್ ತಯಾರಿಸುವುದು ಅದನ್ನು ತೀವ್ರ ತರಿಸುವುದಕ್ಕೆ ಆಲೋಚನೆ ಮಾಡುತ್ತೇನೆ. ಮುಂದೆ ಏನಾದರೂ ಸಹಾಯವಾಗಬೇಕು ಎಂದರೆ ಅದನ್ನೂ ಮಾಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಅನೇಕ ಮಾನ್ಯ ಸದಸ್ಯರು ಹೆಚ್ಚು ಹೇಳಿದ್ದಾರೆ ಎಂದು ಹೇಳು ಸಾಗ ಇಲ್ಲ. ಆದರೆ ಸ್ವಜನಪಕ್ಷಪಾತ ಮತ್ತು ಕೆಲವು ಭಾಗಗಳಲ್ಲಿ ಕೆಲಸಗಳನ್ನು ಮಾಡಿಸಿ ಉಳಿದ ಕಡೆಗಳಲ್ಲಿ ಮಾಡುತ್ತಿಲ್ಲ ಎನ್ನುವ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಯಾವ ರೀತಿಯಿಂದ ಒಂದು ಲಕ್ಷಕ್ಕೆ ಮೇಲ್ಪಟ್ಟಿರುವ, ಒಂದು ಲಕ್ಷದ ಒಳಗೆ ಇರುವ ಕೆಲಸಗಳ ಪಟ್ಟಿಯನ್ನು ಪ್ರತಿಯೊಂದು ಭಾಗಕ್ಕೂ ತಿಳಿಸಬೇಕೆಂದು ಕೇಳಿದ್ದಾರೆ. ಪ್ರತಿಯೊಂದು ಜಿಲ್ಲಾವಾರು ನನ್ನ ಮುಂದೆ ಇದೆ. ಅವರಿಗೆ ನಿನ್ನೆ ನಾನು ಕೊಟ್ಟಿದ್ದು ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚಾಗುವ ಯೋಜನೆಗಳ ಪಟ್ಟಿ. ಎರಡನೆ ಪಟ್ಟಿಯನ್ನು ಇಷ್ಟರಲ್ಲೇ ಕೊಡುತ್ತೇನೆ ಅದನ್ನು ಮುಚ್ಚಿಡಬೇಕೆಂಬ ವಿಚಾರವಿಲ್ಲ. ಏನೋ ಕೆಲವು ಬದಲಾವಣೆಗಳು, ಯಾವ ಯಾವ ತಕರಾರುಗಳ ಜಾಗದಲ್ಲಿವೆ, ಟೆಕ್ನಿಕಲ್ ಫೀಸಿಬಿಲಿಟಿ ಇದನ್ನೆಲ್ಲ ನೋಡಿಕೊಂಡು ಚೀಫ್ ಇಂಜಿನಿಯರು ಫೈನಲೈಸ್ ಮಾಡುತ್ತಾರೆ ಎಂದು ಹೇಳಿದ್ದೇನೆ. ಸಾಧ್ಯವಿದ್ದರೆ ಈ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಇನ್ನೊಂದು ಪಟ್ಟಿಯನ್ನು ಕೊಡುತ್ತೇನೆ. ಆದರೂ ಈ ಎರಡೂ ಪಟ್ಟಿಗಳು, ಒಂದು ಲಕ್ಷಕ್ಕಿಂತ ಕೆಳಗೆ ಇರುವುವು, ಒಂದು ಲಕ್ಷಕ್ಕೆ ಮೇಲ್ಪಟ್ಟು ಇರುವುವು, ಎಲ್ಲ ಕೂಡಿಸಿ ವಿವರಗಳನ್ನು ಈಗ ಕೊಡುವುದಕ್ಕೆ ಇಷ್ಟಪಡುತ್ತೇನೆ. ಆ ಕಡೆಗೆ ಹೆಚ್ಚು ದುಡ್ಡು ಖರ್ಚು ಮಾಡುತ್ತಿದ್ದಾರೆ, ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚು ದುಡ್ಡು ಹಾಕುತ್ತಿದ್ದಾರೆ. ಹೆಚ್ಚು ಸುರಿಯುತ್ತಿದ್ದಾರೆ, ಈ ಕಡೆಯ ಜನತೆಯನ್ನು ಪೂರ್ತಿ ಕಡೆಗಾಣಿಸಿದ್ದಾರೆ ಎನ್ನುವ ಅನೇಕ ವಿಚಾರಗಳನ್ನು ಹೇಳಿದ್ದಾರೆ, ನಾನು ಅದರ ಮಟ್ಟಿಗೆ ಕೆಲವು ವಿವರಗಳನ್ನು ಕೊಡುತ್ತೇನೆ. ನೀರಾವರಿಯನ್ನು ತೆಗೆದುಕೊಂಡರೆ ರಾಜ್ಯದ ಸರಾಸರಿ ಇರುವುದು 9.1 ಪರ್ಸೆಂಟ್. ಆದರೆ ಬೀದರ್ ಜಿಲ್ಲೆಯಲ್ಲಿ 1.1 ಪರ್ಸೆಂಟ್, ಗುಲ್ಬರ್ಗಾ ಜಿಲ್ಲೆಯಲ್ಲಿ 1.6 ಪರ್ಸೆಂಟ್ ಇದೆ, ಇದೇ ರೀತಿ ಬಿಜಾಪುರ್ ಮುಂತಾದ ಎಲ್ಲ ಕಡೆ ಲೆಕ್ಕ ಹಾಕಿದರೆ ಒಂದರಿಂದ ನಾಲ್ಕು ಪರ್ಸೆಂಟ್‌ವರೆಗೆ ಮಾತ್ರ ಬರುತ್ತದೆ.

ರಸ್ತೆಗಳ ವಿಚಾರ ತೆಗೆದುಕೊಂಡೆ ಬೀದರ್ ಜಿಲ್ಲೆಯಲ್ಲಿ ಪ್ರತಿ ನೂರು ಕಿಲೋ ಮೀಟರ್‌ಗೆ 12.7, ಗುಲಬರ್ಗಾ ಜಿಲ್ಲೆಯಲ್ಲಿ 11.8 ಮತ್ತು ರಾಯಚೂರು ಜಿಲ್ಲೆಯಲ್ಲಿ 15.6 ಪರ್ಸೆಂಟ್ ಇದೆ. ರಾಜ್ಯದ ಸರಾಸರಿ 28.9 ಪರ್ಸೆಂಟ್ ಇದೆ.

ರಾಜ್ಯದಲ್ಲಿ ಹಿಂದೆ ಬಿದ್ದಂಥ ಅನೇಕ ಪ್ರದೇಶಗಳಿಗೆ ಅನೇಕ ಭಾಗಗಳು ಯಾವ ಯಾವುದೋ ಆಡಳಿತದಲ್ಲಿದ್ದು ಆ ಸರ್ಕಾರಗಳವರು ಕಡೆಗಾಣಿಸಿದ್ದಾರೆ. ಆದುದರಿಂದ ಹಿಂದೆ ಬಿದ್ದಂಥ ಪ್ರದೇಶಗಳು ಇರುವುದರಿಂದ ಏನು ಮಾಡಿದರೂ ಕೂಡ ಏನನ್ನೂ ಮಾಡಿಲ್ಲ ಎನ್ನುವುದು ಸ್ವಾಭಾವಿಕ. ಹಿಂದೆ ಬಿದ್ದ ಪ್ರದೇಶಗಳಿಗೆ ಮುಂದ ಬರುವುದಕ್ಕೆ ಅವಕಾಶವಾಗುವಂತೆ ಮುಂದೆ ಬಂದಿರುವಂಥ, ಸ್ವಲ್ಪ ಮುಂದೆ ಬಂದಿರುವಂಥ ಪ್ರದೇಶಗಳಲ್ಲಿ ಪೂರ್ತಿಯಾಗಿ ಕೆಲಸ ಕಾರ್ಯಗಳನ್ನು ನಡೆಸಲಾರದೆ ಹಿಂದೆ ಬಿದ್ದಿರುವ ಪ್ರದೇಶಗಳನ್ನು ಮುಂದೆ ತರಬೇಕು ಎನ್ನುವ ವಿಚಾರವಿಲ್ಲ. ಹಿಂದೆ ಬಿದ್ದವನನ್ನು ತನ್ನ ಜೊತೆಗೆ ತೆಗೆದುಕೊಂಡು ಹೋಗಬೇಕಾಗಿದೆ. ಅದಕ್ಕೆ ಸ್ವಲ್ಪ ಕೈ ಅವನ ಕಡೆಗೆ ಚಾಚಿ ಅವನೂ ಮುಂದಕ್ಕೆ ಬರುವಂತೆ ಮಾಡಬೇಕು ಎನ್ನುವ ಪರಿಸ್ಥಿತಿ ಇದೆ. ಬಹುಶಃ ಫೈನಾನ್ಸ್ ಕಮಿಷನ್ನಿಗೆ ಪ್ರತಿಯೊಂದು ಸಲವೂ, ಹಿಂದೆ ಬಿದ್ದಿರುವ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ ಮುಂದೆ ತರಬೇಕಾಗಿದೆ, ಆದರ ಸಲುವಾಗಿ ಹೆಚ್ಚಾಗಿ ಸಹಾಯ ಬೇಕಾಗುತ್ತದೆ ಎಂದು ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ, ಈ ಹಿನ್ನೆಲೆಯಲ್ಲಿ ನಾವು ವಿಚಾರ ಮಾಡಿದರೆ ಹಳೇ ಮೈಸೂರು ಭಾಗದಲ್ಲಿ ಎಷ್ಟು ಖರ್ಚು ಮಾಡಿದ್ದೇವೆ, ಇಂಟಿಗ್ರೇಟೆಡ್ ಏರಿಯಾದಲ್ಲಿ ಎಷ್ಟು ಖರ್ಚು ಮಾಡಿದ್ದೇವೆ ಎಂದು ನೋಡಿದರೆ ಗೊತ್ತಾಗುತ್ತದೆ.

## 9. ತ್ರಾವನಕೋರದ ಎಲಿಯ ಮಹಾರಾಜರ ಅರಮನೆಯನ್ನು ಖರೀದಿ ಮಾಡಿದ ಬಗ್ಗೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ, ಲೋಕೋಪಯೋಗಿ ಸಚಿವರಾಗಿ, ಶ್ರೀ ವೀರೇಂದ್ರ ಪಾಟೀಲರು ನೀಡಿದ ಉತ್ತರ. 5ನೇ ಏಪ್ರಿಲ್ 1968.

ಶ್ರೀ ಕೆ.ಎಚ್. ಪಾಟೀಲ್ :-

ಲೋಕೋಪಯೋಗಿ ಇಲಾಖೆಯ ಸೆಕ್ರೆಟರಿಯವರನ್ನು ಎಲಿಯ ಮಹಾರಾಜರಲ್ಲಿಗೆ ಮಾತುಕತೆ ಆಡುವುದಕ್ಕೆ ಕಳುಹಿಸಿದ್ದಾರೆ. ಈ ವಿಷಯದಲ್ಲಿಯೂ ನಮಗೆ ಸಂಶಯ ಬರುತ್ತದೆ. ಒಬ್ಬ ಬ್ರೋಕರು ಇದ್ದರು ಅವರು ಸಿಕ್ಕಲಿಲ್ಲ. ಅವರು ಸಿಕ್ಕಿದ್ದರೆ ಆಪಾದನೆಗಳೇನು ಎಂಬುದನ್ನು ತಮ್ಮ ನಜರಿಗೆ ತರುತ್ತಿದ್ದೆ. ಯಾವುದೇ ಆದರೂ ಸಹಿತ ಸಾರ್ವಜನಿಕರ ದುಡ್ಡು ದುರುಪಯೋಗವಾಗಿದೆ ಎಂದು ವಿರೋಧ ಪಕ್ಷದವರೆಲ್ಲರೂ ಒಕ್ಕೊರಲಿನಿಂದ ಆಪಾದನೆ ಮಾಡುವಾಗ ಇದರಲ್ಲಿ ಸತ್ಯಾಂಶ ಇದೆಯೇ ಅಥವಾ ಇಲ್ಲವೇ, ಈ ವ್ಯವಹಾರ ಪ್ರಾಮಾಣಿಕವಾಗಿ ನಡೆದಿದೆಯೇ ಎಂಬುದನ್ನು ವಿಚಾರ ಮಾಡುವ ಸಲುವಾಗಿ ವಿರೋಧ ಪಕ್ಷದ ಮುಖಂಡರನ್ನೊಳಗೊಂಡ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಬೇಕು. ಈಗ ಖರೀದಿಗೆ ಕೊಂಡುಕೊಂಡಿರತಕ್ಕ ಕಟ್ಟಡ ಏನಿದೆ ಅದು ಎರಡು ಆಫೀಸುಗಳಿಗೂ ಸಾಲುವುದಿಲ್ಲ. 13 ಲಕ್ಷ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಹೇಳತಕ್ಕಂಥ ಕಟ್ಟಡವನ್ನು 18 ಲಕ್ಷ ರೂಪಾಯಿಗಳಿಗೆ ಕೊಂಡು ಕೊಂಡಿದ್ದಾರೆ. ಅದರ ಸಲುವಾಗಿ ಇದು ಬಹಳ ಕೂಲಂಕುಷವಾಗಿ ವಿಚಾರಣೆಯಾಗಬೇಕು. ಹಿಂದೆ ಶರಾವತಿಯ ಯೋಜನೆಯಲ್ಲಿ ಅಂತಹ ಆಪಾದನೆ ಬಂದಿತ್ತು. ಈಗ ಪುನರಪಿ ಈ ಎಲಿಯ ಮಹಾರಾಜರ ಅರಮನೆಯನ್ನು ಖರೀದಿ ಮಾಡಿದ ಬಗ್ಗೆ ಆಪಾದನೆ ಎದ್ದಿದೆ. ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ವಿರೋಧ ಪಕ್ಷದವರು ಏನೇ ಹೇಳಿದರೂ ನಡೆಯುವುದಿಲ್ಲ ಎಂದು ತಿಳಿದುಕೊಳ್ಳಬೇಡಿರಿ, ನಿಜವಾಗಿ ಸ್ವಲ್ಪ ಆಲೋಚನೆ ಮಾಡಿರಿ. ನಿಮ್ಮದೇ ಆದ ಸಂಘ ಸಂಸ್ಥೆಗಳಲ್ಲಿ ಒಂದು ಸಾವಿರ ರೂಪಾಯಿ ತಪ್ಪು ಖರ್ಚಾಗಿದ್ದರೆ, ತಪಾವಣೆಯಾಗಿದ್ದರೆ ನೀವು ಏನು ಮಾಡುತ್ತಿದ್ದೀರಿ ಎಂಬುದನ್ನು ಯೋಚನೆ ಮಾಡಿ. ನಿಮ್ಮ ಹೃದಯವನ್ನು ಪರಿಶೀಲನೆ ಮಾಡಿಕೊಂಡು ವಿವೇಕ ದಂಡದಿಂದ ಅಳತೆ ಮಾಡಿ ನೋಡಿಕೊಳ್ಳಿ. ಇಂಥಾ ರಾಜ್ಯದ ಬೊಕ್ಕಸದ ಹಣವನ್ನು ದುರುಪಯೋಗ ಮಾಡುವಂತಹ ಕೃತ್ಯವನ್ನು ಮಾಡಬೇಡಿ. ಇತಿಹಾಸಕ್ಕೆ ಕಳಂಕ ತರುವ ಯತ್ನವನ್ನು ಮಾಡಬೇಡಿ. ನಿಮಗೆ ಜಾಗ ಬೇಕು ಎನ್ನುವುದಾದರೆ ಬಾಲಬ್ರೈಯಿ ಹತ್ತಿರ ತೆಗೆದುಕೊಳ್ಳಬಹುದು. ಅದನ್ನು ನೋಟಿಫೈ ಮಾಡಿ ಬಹಳ ದಿವಸಗಳಾಯಿತು. ಅದನ್ನು ಖರೀದಿ ಮಾಡಿದ್ದರೆ ಅದು ನಿಮಗೆ ದೊರೆಯುತ್ತಿರಲಿಲ್ಲವೇ ಎಲ್ಲಾದರೂ ಕಟ್ಟಡಗಳನ್ನು ಕಟ್ಟುವುದಕ್ಕೆ ಉತ್ತಮವಾದ ಜಾಗಗಳು ಸಿಕ್ಕುತ್ತವೆ. ನಿಮ್ಮಲ್ಲಿ ಇದ್ದಂತಹ ಜಾಗಗಳನ್ನು ನಿಮಗೆ ಬೇಕಾದವರಿಗೆ ಪೆಟ್ರೋಲ್ ಬಂಕ್ ಇತ್ಯಾದಿಗಳಿಗೆ ಕೊಟ್ಟಿದ್ದೀರಿ, ನನ್ನ ಕೈಯಲ್ಲಿ ಅಧಿಕಾರ ಇದೆ, ಮೈಸೂರು ಸರ್ಕಾರದಲ್ಲಿ ಏನು ಬೇಕಾದರೂ

ಮಾಡಬಹುದು ಎನ್ನುವಂಥಾ ದುರಹಂಕಾರವನ್ನು ಬೆಳೆಸುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಸವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಈ ವಿಚಾರವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ, ವಿವೇಕದಿಂದ ಪರಿಶೀಲನೆ ಮಾಡಿ, ಈ ಮಾನ್ಯ ಸಭೆಯನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ವಿರೋಧ ಪಕ್ಷದ ಸದಸ್ಯರನ್ನೊಳಗೊಂಡಂಥ ತಜ್ಞರ ಒಂದು ಸಮಿತಿಯನ್ನು ನೇಮಿಸಿ ಅದರ ವ್ಯಾಲ್ಯೂಯೇಷನ್ ಮಾಡಿಸಿದ ನಂತರ ನಿಮ್ಮ ಅಭಿಪ್ರಾಯ ಸರಿ ಎಂದು ಕಂಡು ಬಂದರೆ ಅದನ್ನು ಖರೀದಿ ಮಾಡಬಹುದು. ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಯಾವುದೇ ಕೆಲಸವನ್ನು ಮಾಡಬೇಡಿ. ಇತಿಹಾಸಕ್ಕೆ ಕಳಂಕತರುವ ಯತ್ನವನ್ನು ಮಾಡಬೇಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವೀರೇಂದ್ರ ಪಾಟೀಲ್ :-**

ಮಾನ್ಯ ಅಧ್ಯಕ್ಷರೇ, ಎಲಿಯ ಮಹಾರಾಜರಿಂದ ರಾಮಪ್ರಿಯ ಬಿಲ್ಡಿಂಗನ್ನು ತೆಗೆದುಕೊಂಡು ಅದರಲ್ಲಿ ಸರ್ಕಾರೀ ಕಛೇರಿಗಳನ್ನು ನಡೆಸಬೇಕು ಎನ್ನತಕ್ಕ ವಿಚಾರ ಇವತ್ತಿನದ್ದು ಅಲ್ಲ. ಸುಮಾರು 1965ನೇ ಇಸವಿಯಿಂದಲೂ ಆರ್.ಟಿ.ಓ. ಆಫೀಸರವರು ನಮಗೆ ಈಗಿರುವ ಬಿಲ್ಡಿಂಗ್ ಸಾಲದು, ಬೇರೆ ದೊಡ್ಡ ಬಿಲ್ಡಿಂಗ್ ಬೇಕು ಎಂದು ಕೇಳಿಕೊಂಡು ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ರೋಡ್ ಟ್ರಾನ್ಸ್ ಪೋರ್ಟಿನಿಂದ ಸುಮಾರು 7 ಕೋಟಿ ರೂಪಾಯಿಗಳು ಟ್ಯಾಕ್ಸ್ ರೂಪದಲ್ಲಿ ಸರ್ಕಾರಕ್ಕೆ ಬರುತ್ತಿದ್ದರೆ ಬರೀ ಬೆಂಗಳೂರಿನಿಂದಲೇ ಸುಮಾರು 3 ಕೋಟಿ ರೂಪಾಯಿಗಳಷ್ಟು ಟ್ಯಾಕ್ಸ್ ರೂಪದಲ್ಲಿ ವರಮಾನ ಬರುತ್ತಿದೆ. ಈ ಕಾರಣದಿಂದ ಆರ್.ಟಿ.ಓ. ಆಫೀಸ್‌ನವರು ನಮಗೆ ದೊಡ್ಡ ಬಿಲ್ಡಿಂಗ್ ಬೇಕು, ಈಗ ಇರತಕ್ಕಂಥ ಜಾಗದಲ್ಲಿ ನೂರಾರು ವಾಹನಗಳು ಬಂದರೆ ನಿಲ್ಲಿಸುವುದಕ್ಕೆ ಜಾಗವಿಲ್ಲವೆಂದು ಕೇಳಿದ್ದರು. ಆಗ ವಿಧಾನಸೌಧಕ್ಕೆ ಸಮೀಪವಾಗಿರುವಂಥ ಕಡೆಯಲ್ಲಿ ಯೋಗ್ಯವಾದಂಥ ಬಿಲ್ಡಿಂಗ್‌ಗಳು ಆಗಲೀ ಅಥವಾ ಜಾಗಗಳಾಗಲೀ ಇವೆಯೇ ಎನ್ನುವುದನ್ನು ಲೋಕೋಪಯೋಗಿ ಇಲಾಖೆಯವರು ಅಲ್ಲಲ್ಲೇ ಪರಿಶೀಲನೆ ಮಾಡಿ ಮೂರು ನಾಲ್ಕು ಸ್ಥಳಗಳನ್ನು ನೋಡಿದ್ದಾರೆ. ಮಾನ್ಯ ಸದಸ್ಯರಾದಂಥ ಶ್ರೀ ಕೆ.ಹೆಚ್. ಪಾಟೀಲರು ಬಾಲಬ್ರೈಯಿ ಹತ್ತಿರ ಒಂದು ಬಿಲ್ಡಿಂಗ್ ಕ್ರಯಕ್ಕೆ ಇದೆ ಎಂದು ಬೋರ್ಡ್ ಇರುವುದರಿಂದ ಅದನ್ನು ಏತಕ್ಕೆ ತೆಗೆದುಕೊಳ್ಳಬಾರದೆಂದು ಹೇಳಿದರು. ಶ್ರೀ ಮಾಣಿಕ್ ವೇಲ್ ಮ್ಯಾನ್‌ಶನ್ಸ್‌ಗೆ ಸೇರಿದ ಈ ಬಿಲ್ಡಿಂಗ್‌ನ್ನು 22 ಲಕ್ಷ ರೂಪಾಯಿಗಳ ವರೆಗೂ ಕೇಳಿ ಬಿಟ್ಟಿದ್ದೇವೆ. ಆದರೆ ಅವರು ಕೊಟ್ಟಿಲ್ಲ. 1965 ನೇ ಇಸವಿಯಿಂದಲೂ ಸಹ ಆರ್.ಟಿ.ಓ. ಕಛೇರಿಗೆ ಒಂದು ಬಿಲ್ಡಿಂಗ್ ಬೇಕೆಂದು ವಿಧಾನಸೌಧದ ಸುತ್ತಲೂ ಹುಡುಕುತ್ತಿದ್ದೇವೆ. ಆದರೆ ಯೋಗ್ಯವಾದಂಥ ದೊಡ್ಡ ಸ್ಥಳ ಒಂದೂ ಇದುವರೆಗೆ ಸಿಕ್ಕಿಲ್ಲ. ಈ ಮಧ್ಯೆ ರಾಮಪ್ರಿಯಾ ಬಿಲ್ಡಿಂಗ್ ತೆಗೆದುಕೊಂಡರೆ ಅನುಕೂಲವಾಗುತ್ತದೆಂದು ತೀರ್ಮಾನ ಮಾಡಿದೆವು. ಸುಮಾರು ಐದು ಎಕರೆಗಳಷ್ಟು ಸ್ಥಳ ಇದೆ. 24,353 ಚದರ ಗಜಗಳಷ್ಟು ಜಾಗವಿದೆ. ಈ ಪ್ರದೇಶದಲ್ಲಿ ಒಂದು ದೊಡ್ಡ ಬಿಲ್ಡಿಂಗ್ ಇದೆ. ಈ ಜಾಗ ಎಲ್ಲಾ ರೀತಿಯಿಂದಲೂ ಆರ್.ಟಿ.ಓ.

ಆಫೀಸಿಗೆ ಅನುಕೂಲವಾಗಿರುವುದರಿಂದ ತೆಗೆದುಕೊಳ್ಳಬೇಕೆಂದು 1965ರಿಂದಲೂ ಸಹ ಸರ್ಕಾರದ ಪರಿಶೀಲನೆಯಲ್ಲಿತ್ತು. ಈ ರೀತಿ ಪರಿಶೀಲನೆಯಲ್ಲಿದ್ದಾಗ 18 ಲಕ್ಷ ರೂಪಾಯಿಗಳಿಗಾದರೆ ಮಾತ್ರ ಕೊಡುತ್ತೇನೆ ಎಂಬುದಾಗಿ ಎಲಿಯ ಮಹಾರಾಜರಿಂದ ಬಂದಿರುವ ಕಾಗದದಿಂದ ಗೊತ್ತಾಗಿದೆ. 12 ಅಥವಾ 14 ಲಕ್ಷ ರೂಪಾಯಿಗಳಿಗೆ ಎಲಿಯ ಮಹಾರಾಜರು ಕೊಡುವುದಕ್ಕೆ ಸಿದ್ಧರಾಗಿದ್ದರು. ಅಂಥದ್ದರಲ್ಲಿ ಎರಡೂವರೆ ಲಕ್ಷ ರೂಪಾಯಿಗಳಷ್ಟು ಹೆಚ್ಚು ಮಾಡಿ ತೆಗೆದುಕೊಳ್ಳುತ್ತಿರುವುದರಲ್ಲಿ ಏನೋ ಒಳಗೆ ನಡೆದಿದೆಯೆಂಬುದಾಗಿ ಶ್ರೀಮಾನ್ ಚಿಕ್ಕನಾಯಕನಹಳ್ಳಿಯ ಸದಸ್ಯರು ಹೇಳಿದರು. ಈ ಬಗ್ಗೆ ನಾನು ಹೇಳಬೇಕಾದರೆ 1965 ರಿಂದಲೂ ಸಹ ಈ ಬಿಲ್ಡಿಂಗನ್ನು 18 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬೇಕೆಂದು ವಿಚಾರವಿದ್ದು 1967ನೇ ಡಿಸೆಂಬರ್ ತಿಂಗಳಿನಲ್ಲಿ ಒಂದು ನಿರ್ಣಯವಾಗಿದೆ. 1967ನೇ ಡಿಸೆಂಬರ್ ತಿಂಗಳವರೆಗೂ ಸಹ ಎಲಿಯ ಮಹಾರಾಜರು ತಮ್ಮ ಈ ಬಿಲ್ಡಿಂಗ್‌ನ್ನು 18 ಲಕ್ಷ ರೂಪಾಯಿಗಳಿಗೂ ಕಡಿಮೆ ಅಂದರೆ 12 ಲಕ್ಷ ರೂಪಾಯಿಗಳಿಗೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ, ಅಥವಾ 16 ಲಕ್ಷ ರೂಪಾಯಿಗಳಿಗೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ ಎಂಬುದಾಗಿ ಯಾರೂ ನಮಗೆ ತಿಳಿಸಿಲ್ಲ.

ಶ್ರೀ ಕೆ.ಎಚ್. ಪಾಟೀಲ್ :-

ತಮಗೆ ಬರೆದ ಪತ್ರದ ದಿನಾಂಕವನ್ನು ನಾನು ಕೊಡುವೆನು.

ಶ್ರೀ ವೀರೇಂದ್ರ ಪಾಟೀಲ್ :-

ಅವರು ಹೇಳುತ್ತಿರುವ ಕಾಗದದ ಒಂದು ಕಾಪಿ ನಮಗೂ ಬಂದಿದೆ.

ವಿಜಿಲನ್ಸ್ ಕಮೀಶನ್‌ರರಿಗೆ ಮೂಲ ಪತ್ರವನ್ನು ಸಂಬೋಧಿಸಲಾಗಿದೆ.

ಶ್ರೀ ಕೆ.ಎಚ್. ಪಾಟೀಲ್ :-

ಅದು ಆ ತ್ರವನಕೋರ ಎಲಿಯಾ ಅರಸರಿಗೆ, ಖಾಸಗಿ ಸೆಕ್ರೆಟರಿಯರಿಂದ, ಪ್ರಾದೇಶಿಕ ಸಾರಿಗೆ ಕಮೀಶನರರಿಗೆ ಸಂಬೋಧಿಸಿದ ಪತ್ರವಾಗಿದೆ. 6ನೇ ಸೆಪ್ಟೆಂಬರ್ 1964 ರಲ್ಲಿ, ಅವರು ಸ್ಪಷ್ಟವಾಗಿ, ತಿಳಿಸಿರುವಂತೆ, 18 ಲಕ್ಷ ರೂ. ಬದಲು 16 ಲಕ್ಷ 50 ಸಾವಿರ ರೂ. ಅವರು ಅವರಿಗೆ ಕೊಡುತ್ತಾರೆಂದು ಸೂಚಿಸಿರುವರು.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಸದಸ್ಯರು ಯಾವುದೋ ಒಂದು ಕಾಪಿಯನ್ನು ಓದುತ್ತಿದ್ದಾರೆ. ಈ ಪ್ರಶ್ನೆಯ ಬಗ್ಗೆ ಹೋದ ಸಲ ಪ್ರಶ್ನೋತ್ತರ ಕಾಲದಲ್ಲಿ ಕೆಲವು ಸದಸ್ಯರುಗಳು 16 ಲಕ್ಷ ರೂಪಾಯಿಗಳಿಗೆ ಕೊಡುವುದಕ್ಕೆ ತಯಾರಾಗಿದ್ದರು ಎಂದು ತಿಳಿಸಿದಾಗ ನಾನು ಆ ಬಗ್ಗೆ ರೈಟಿಂಗ್‌ನಲ್ಲಿ ಏನಾದರೂ ಇದೆಯೋ ಎಂಬ ಬಗ್ಗೆ ಎಲ್ಲಾ ಕಾಗದಗಳನ್ನು ತರಿಸಿಕೊಂಡು ನೋಡಿದ್ದೇನೆ. ಈ ವಿಚಾರದಲ್ಲಿ ಒಂದು ಫೈಲ್

ಸಹ ನನ್ನ ಮುಂದೆ ಇದೆ. 16 ಲಕ್ಷ ರೂಪಾಯಿಗಳಿಗೆ ಕೊಡುವ ವಿಚಾರದಲ್ಲಿ ಒಂದು ಕಾಗದವೂ ಸಹ ಇಲ್ಲ. ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಅವರು ಒಂದು ಕಾಗದ ಬರೆಯಲಾಗಿದೆಯೆಂದು ಹೇಳುತ್ತಿದ್ದಾರೆ. ಆ ಕಾಗದವನ್ನು ನನ್ನ ಕಡೆಗೆ ಕೊಟ್ಟರೆ ಆ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ. ಆ ಕಾಗದ ಯಾರು ಬರೆದಿದ್ದಾರೆಂಬುದು ಸಹ ನನಗೆ ಗೊತ್ತಿಲ್ಲ. 1967 ನೇ ಡಿಸೆಂಬರ್ ತಿಂಗಳಿಗೆ ಮುಂಚೆ 18 ಲಕ್ಷ ರೂಪಾಯಿಗಳಿಗಿಂತ ಕಡಿಮೆಗೆ ಮಾರುವುದಕ್ಕೆ ತಾವು ತಯಾರಿಲ್ಲವೆಂದು ಎಲಿಯ ಮಹಾರಾಜರು ತಿಳಿಸಿದ್ದಾರೆ. ಕಡಿಮೆ ತೆಗೆದುಕೊಳ್ಳುವ ಬಗ್ಗೆ ಎಲ್ಲಾ ಪ್ರಯತ್ನವನ್ನೂ ಸಹ ಮಾಡಿದ್ದಾಗಿದೆ. ಶ್ರೀಮಾನ್ ರಾಜಯ್ಯ ಶೆಟ್ಟರು ಚದುರಗಜ ಒಂದಕ್ಕೆ 110 ರೂಪಾಯಿಗಳಂತೆ ತೆಗೆದುಕೊಂಡಿದ್ದಾರೆಂದು ಹೇಳಿದರು. ನಮ್ಮ ಚೀಫ್ ಇಂಜನಿಯರ್ ಅವರು ಚದರಗಜ ಒಂದಕ್ಕೆ 50 ರೂಪಾಯಿಗಳಂತೆ ಲೆಕ್ಕ ಹಾಕಿದ್ದಾರೆ. ಮಾನ್ಯ ಸದಸ್ಯರ ಮುಂದೆ ಒಂದು ವಿಚಾರವನ್ನು ಹೇಳುತ್ತೇನೆ, ಏನೆಂದರೆ ಎಲಿಯ ಮಹಾರಾಜರಿಗೂ ಸರ್ಕಾರಕ್ಕೂ ಈ ಬಗ್ಗೆ ನೇರವಾಗಿ ಏನೂ ವ್ಯವಹಾರ ನಡೆದಿಲ್ಲ. 18 ಲಕ್ಷ ರೂಪಾಯಿಗಳಿಗೂ ಕಡಿಮೆ ಬೆಲೆಗೆ ಈ ಬಿಲ್ಡಿಂಗ್‌ನ್ನು ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ನಮ್ಮ ಲೋಕೋಪಯೋಗಿ ಇಲಾಖೆಯ ಸೆಕ್ರೆಟರಿಯವರನ್ನು ಎಲಿಯ ಮಹಾರಾಜರಲ್ಲಿಗೆ ಮಾತುಕತೆಯಾಡುವುದಕ್ಕೆ ಕಳಿಸಿದ್ದೆವು. ಸೆಕ್ರೆಟರಿಯವರು ಹೋಗಿ ಬಂದು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಮತ್ತು ಎಲಿಯ ಮಹಾರಾಜರು ಸಹ 18 ಲಕ್ಷ ರೂಪಾಯಿಗಳಿಗೆ ಆದರೆ ಕೊಡುತ್ತೇವೆ. ಅದಕ್ಕಿಂತ ಕಡಿಮೆ ಬೆಲೆಗೆ ಕೊಡುವುದಕ್ಕಾಗುವುದಿಲ್ಲವೆಂದು ಒಂದು ಕಾಗದವನ್ನು ಬರೆದಿದ್ದಾರೆ. ಕಡಿಮೆ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನೂ ಸಹ ಮಾಡಲಾಗಿದೆ. ಒಂದು ದೊಡ್ಡ ಬಿಲ್ಡಿಂಗ್‌ನ ಅವಶ್ಯಕತೆ ಇರುವಾಗ ಈ ಬಿಲ್ಡಿಂಗ್‌ನ್ನು ತೆಗೆದು ಕೊಳ್ಳಬೇಕಾಗಿದೆ. ಈಗ ಖಾಸಗೀ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿರುವುದರಿಂದ ಪ್ರತಿ ತಿಂಗಳೂ ಸಹ 22 ಸಾವಿರ ರೂಪಾಯಿಗಳವರೆಗೆ ಬಾಡಿಗೆಯನ್ನು ಕೊಡುತ್ತಿದ್ದೇವೆ. ಆರ್.ಟಿ.ಓ ಆಫೀಸನವರು ಸಹ ಬಹಳ ಕಾಲದಿಂದಲೂ ಸಹ ದೊಡ್ಡ ಜಾಗಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ರಾಜಯ್ಯ ಶೆಟ್ಟರು ರೇಸ್ ಕೋರ್ಸ್‌ನ್ನು ಮತ್ತು ಸೆಂಟ್ರಲ್ ಜೈಲನ್ನು ಬೇರೆ ಕಡೆಗೆ ಸಾಗಿಸಿ ಆ ಜಾಗವನ್ನು ಉಪಯೋಗಿಸಿಕೊಳ್ಳಬಹುದಲ್ಲವೇ ಎಂದು ಹೇಳಿದರು. ಈ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಬೇರೆ ಒಂದು ಕಡೆ ರೇಸ್ ಕೋರ್ಸ್‌ನ್ನು ಸಿದ್ಧಮಾಡಿದ ಮೇಲೆ ಈಗಿರುವುದನ್ನು ಅಲ್ಲಿಗೆ ಸಾಗಿಸಬೇಕಾಗುತ್ತದೆ. ಬೇರೆ ಕಡೆ ಒಂದು ರೇಸ್‌ಕೋರ್ಸ್‌ನ್ನು ಕಟ್ಟ ಬೇಕಾದರೆ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳು ಬೇಕಾಗುತ್ತದೆ. ರೇಸ್‌ಕೋರ್ಸ್‌ನಿಂದ ಪ್ರತಿಯೊಂದು ವರ್ಷದಲ್ಲೂ ಸಹ ಸರ್ಕಾರಕ್ಕೆ 45 ರಿಂದ 50 ಲಕ್ಷ ರೂಪಾಯಿಗಳು ಆದಾಯ ಬರುತ್ತಿದೆ. ಆದ್ದರಿಂದ ಬೇರೆ ಕಡೆ ಕಟ್ಟುವವರೆಗೂ ಈಗಿರುವುದನ್ನು ಅಬಾಲಿಷ್ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇದೇ ರೀತಿ ಸೆಂಟ್ರಲ್ ಜೈಲನ್ನು ಬೇರೆ ಕಡೆ ಕಟ್ಟಬೇಕಾದರೆ 50 ರಿಂದ 60 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಇಷ್ಟು ಹಣ

ನಮ್ಮಲ್ಲಿ ಈಗ ಇಲ್ಲ. ಸೆಂಟ್ರಲ್ ಜೈಲನ್ನು ಈಗ ಈ ಕಾರಣಕ್ಕಾಗಿ ಬೇರೆ ಕಡೆಗೆ ಸಾಗಿಸುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕೆಂದರೆ ರಾಮಪ್ರಿಯ ಬಿಲ್ಡಿಂಗನ್ನು ಚದರಗಜ ಒಂದಕ್ಕೆ 50 ರೂಪಾಯಿಯಂತೆ ಲೆಕ್ಕ ಹಾಕಿ ತೆಗೆದುಕೊಂಡಿದ್ದೇವೆ. ಈ ಪ್ರದೇಶ ನ್ಯಾಷನಲ್ ಹೈವೆಗೆ ಹೊಂದಿಕೊಂಡಿದೆ. ಮತ್ತು ಆರ್.ಟಿ.ಓ. ಆಫೀಸ್‌ನ ಹತ್ತಿರ ಒಂದು ಹತ್ತು ಲಾರಿಗಳು ಬಂದರೆ ನಿಲ್ಲಿಸುವುದಕ್ಕೆ ಜಾಗವಿಲ್ಲ. ಆರ್.ಟಿ.ಓ. ಆಫೀಸ್‌ನವರು ನಮಗೆ ದೊಡ್ಡ ಜಾಗಬೇಕು, ನಮ್ಮ ಇಲಾಖೆಯಿಂದ ಅದರಲ್ಲೂ ಬೆಂಗಳೂರು ಒಂದರಿಂದಲೇ ಸರ್ಕಾರಕ್ಕೆ ಮೂರು ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿರುವುದರಿಂದ ಯೋಗ್ಯವಾದಂಥ ಜಾಗವನ್ನು ಕೊಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದರಿಂದ, ಅದನ್ನು ಗಮನದಲ್ಲಿ ಇಟ್ಟುಕೊಂಡು ಈ ಬಿಲ್ಡಿಂಗನ್ನು ತೆಗೆದು ಕೊಳ್ಳುವ ಬಗ್ಗೆ ಕಳೆದ ಡಿಸೆಂಬರ್ ತಿಂಗಳಲ್ಲಿ ನಿರ್ಣಯ ಮಾಡಿದ್ದೇವೆ. ಈ ಬಿಲ್ಡಿಂಗನ್ನು ಖರೀದಿ ಮಾಡುವ ವಿಚಾರದಲ್ಲಿ ಹಿಂದುಮುಂದು ಏನೂ ನಡೆದಿಲ್ಲ. ಯಾವ ಬ್ರೋಕರ್‌ನ್ನು ಇಟ್ಟುಕೊಂಡು ವ್ಯವಹಾರವನ್ನು ಮಾಡಿಲ್ಲ. ಸರ್ಕಾರಕ್ಕೂ ಮತ್ತು ಎಲಿಯ ಮಹಾರಾಜರ ನಡುವೆ ನೇರವಾಗಿ ವ್ಯವಹಾರವಾಗಿದೆ. ಮತ್ತು ಪ್ರತಿಯೊಂದು ಸಲವೂ ಅವರು ಏನಾದರೂ ಇಳಿಸಬಹುದೋ ಎಂದು ಪ್ರಯತ್ನ ಮಾಡಿದರೂ, ಅವರು ತೆಗೆದುಕೊಳ್ಳುವುದಿದ್ದರೆ, ತೆಗೆದುಕೊಳ್ಳಿ, ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿದುದರಿಂದ, ಮತ್ತು ಇದರ ಅವಶ್ಯಕತೆ ಕಂಡುಬಂದುದರಿಂದ ಸರ್ಕಾರ ಇದನ್ನು ಖರೀದಿ ಮಾಡಬೇಕೆಂದು ಡಿಸೆಂಬರ್ 1967 ರಲ್ಲಿ ಒಂದು ನಿರ್ಣಯ ತೆಗೆದುಕೊಂಡಿದೆ.

# ಭಾಗ - 3

# ರಾಜ್ಯದ ಮುಖ್ಯಮಂತ್ರಿಗಳಾಗಿ

## ರಾಜ್ಯದ ಮುಖ್ಯಮಂತ್ರಿಗಳಾಗಿ

1. 1968 ( ಸೆಪ್ಟೆಂಬರ್, 2) : ಮುಖ್ಯ ಮಂತ್ರಿಗಳಾಗಿ.

ವಿಷಯ : ವಿಧಾನ ಸಭೆಯ ಅಧ್ಯಕ್ಷ ಶ್ರೀ ವೈಕುಂಠಾ ಬಾಳಿಗಾ ಅವರ ನಿಧನದ ಸಂತಾಪ ಸೂಚನೆಯ ಗೊತ್ತುವಳಿಯ ಮಂಡನೆ ಮೇಲಿನ ಭಾಷಣ.

2. 1968 ( ಸೆಪ್ಟೆಂಬರ್, 3) : ಮುಖ್ಯ ಮಂತ್ರಿಗಳಾಗಿ.

ವಿಷಯ : ರಾಜ್ಯದಲ್ಲಿ ಅಭಾವ ಪರಿಸ್ಥಿತಿಯನ್ನು ಕುರಿತು, ವಿಧಾನ ಸಭೆಯಲ್ಲಿ ಮಾಡಿದ ಭಾಷಣ.

3. 1968 ( ಸೆಪ್ಟೆಂಬರ್, 10) : ಮುಖ್ಯ ಮಂತ್ರಿಗಳಾಗಿ.

ವಿಷಯ : ರಾಜ್ಯದ ಕೆಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿಯ ಗೊತ್ತುವಳಿಯ ಕುರಿತಾದ ಚರ್ಚೆಯ ಮೇಲೆ ಸ್ಪಷ್ಟೀಕರಣ.

4. 1969 ( ಜನವರಿ, 17 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ವೈದ್ಯಕೀಯ ಸೇವೆಗಳ ನಿರ್ದೇಶಕರ ವಿರುದ್ಧದ ದೂರುಗಳ ಬಗ್ಗೆ ಹೇಳಿಕೆ.

5. 1969 ( ಜನವರಿ, 22 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ವಿರೋಧ ಪಕ್ಷ ಮಂಡಿಸಿದ ಅವಿಶ್ವಾಸ ನಿರ್ಣಯದ ಮಂಡನೆಗೆ ಸಮರ್ಥನೆ.

6. 1969 ( ಜನವರಿ, 23 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಭ್ರಷ್ಟಾಚಾರದ ಬಗ್ಗೆ ಚರ್ಚೆ ಮತ್ತು ಸ್ಪಷ್ಟೀಕರಣ.

7. 1969 ( ಜನವರಿ, 23 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ರಾಜ್ಯಪಾಲರ ಭಾಷಣದ ಮೇಲೆ ಅಭಾರ ಸಲ್ಲಿಸುವ ನಿಲುವಳಿಯನ್ನು ಕುರಿತು ಸ್ಪಷ್ಟೀಕರಣ.

8. 1969 ( ಫೆಬ್ರವರಿ, 25 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಮಹಾರಾಷ್ಟ್ರದಲ್ಲಿ ಶಿವಸೇನೆಯ ಹಿಂಸಾತ್ಮಕ ಕಾರ್ಯ ಚಟುವಟಿಕೆಗಳನ್ನು ಕುರಿತು ಸ್ಪಷ್ಟೀಕರಣ.

9. 1969 ( ಮಾರ್ಚ್, 7 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ನೀರಾವರಿ ಮತ್ತು ವಿದ್ಯುತ್‌ಶ್ಚಕ್ತಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ.

10 1969 ( ಮಾರ್ಚ್, 10 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಗಡಿ ವಿಷಯಗಳ ಮೇಲೆ ಮಹಾಜನ ಸಮಿತಿಯ ವರದಿ ಕುರಿತು ಹೇಳಿಕೆ.

11 1969 ( ಮಾರ್ಚ್, 10 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಹುಬ್ಬಳ್ಳಿಯಲ್ಲಾದ ಕೋಮು ಗಲಭೆಯ ಕುರಿತ ಚರ್ಚೆಯಲ್ಲಿ ನೀಡಿದ ಸ್ಪಷ್ಟೀಕರಣ.

12 1969 ( ಮಾರ್ಚ್, 13 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಭ್ರಷ್ಟಾಚಾರದ ಕುರಿತು ಹೇಳಿಕೆ.

13 1969 ( ಮಾರ್ಚ್, 21 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ದಾವಣಗೆರೆಯ - ವ್ಯವಸಾಯ ವಸ್ತು ಪ್ರದರ್ಶನದಲ್ಲಿ, ಗೂಂಡಾಗಳಿಂದ ಉಂಟಾದ ಗಲಭೆಯ ಕುರಿತ ಅವಿಶ್ವಾಸ ಗೊತ್ತುವಳಿಯ ಮಂಡನೆಯ ಮೇಲಿನ ಸ್ಪಷ್ಟೀಕರಣ.

14 1969 ( ಆಗಸ್ಟ್, 14 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ರಾಷ್ಟ್ರಪತಿ ಝಾಕೀರ ಹುಸೇನರ ನಿಧನವ ನಿಲುವಳಿ ಮೇಲಿನ ಸಂತಾಪ ಸೂಚಕ ಭಾಷಣ.

15 1970 ( ಮಾರ್ಚ್, 14 ) : ಮುಖ್ಯ ಮಂತ್ರಿಗಳಾಗಿ.

ವಿಷಯ : ಸದಸ್ಯರ ಬಂಧನದ ಬಗ್ಗೆ ಶ್ರೀ ವೀರೇಂದ್ರ ಪಾಟೀಲರ ವಿವರಣೆ.

## 1. ವಿಧಾನ ಸಭೆಯ ಅಧ್ಯಕ್ಷ ಶ್ರೀ ವೈಕುಂಠಾ ಬಾಳಿಗಾ ಅವರ ನಿಧನದ ಸಂತಾಪ ಸೂಚನೆಯ ಗೊತ್ತುವಳಿಯನ್ನು, ರಾಜ್ಯದ ಮುಖ್ಯ ಮಂತ್ರಿಗಳಾಗಿ ಶ್ರೀ ವೀರೇಂದ್ರ ಪಾಟೀಲರು, ಮಂಡಿಸುತ್ತಾ ಈ ರೀತಿಯಾಗಿ ಹೇಳಿಕೆ ನೀಡಿದರು.

ಶ್ರೀ ವೀರೇಂದ್ರ ಪಾಟೀಲ್ :-

ಸನ್ಮಾನ್ಯ ಸಭಾಧ್ಯಕ್ಷರೇ, ಈವೊತ್ತಿನ ದಿವಸ ರಾಜಕೀಯ ಮತ್ತು ಆಡಳಿತದ ಜೀವನದಲ್ಲಿ ಅತ್ಯಂತ ದುಃಖದಾಯಕವಾದ ಸನ್ನಿವೇಶವಾಗಿದೆ. ದಿವಂಗತ ಶ್ರೀ ವೈಕುಂಠ ಬಾಳಿಗಾರವರು ಇವೊತ್ತು ನಮ್ಮ ಮಧ್ಯದಲ್ಲಿಲ್ಲ. ದಿವಂಗತ ಶ್ರೀ ಬಿ. ವೈಕುಂಠ ಬಾಳಿಗಾರವರು 1962 ರಿಂದ 1968 ಜೂನ್ 6ನೇ ತಾರೀಖಿನವರೆಗೂ ಈ ಮಾನ್ಯ ಸಭೆಯ ಅಧ್ಯಕ್ಷರಾಗಿ ಅವರು ಸೇವೆ ಮಾಡಿದ್ದಾರೆ, ಈ ಸಭೆಯ ಎಲ್ಲಾ ಸದಸ್ಯರಿಗೂ ಗೊತ್ತುಂಟು. ಅವರ ನಿಧನದಿಂದ ನಾವು ಒಬ್ಬ ಶ್ರೇಷ್ಠ ಸಭಾಧ್ಯಕ್ಷರನ್ನು ಕಳೆದುಕೊಂಡಿದ್ದೇವೆ. ನನಗೆ ವೈಯಕ್ತಿಕವಾಗಿಯೂ ಹಾನಿಯಾಗಿದೆ ಎಂದು ಹೇಳಬೇಕಾಗಿದೆ. ಏತಕ್ಕೆಂದರೆ ಅವರು ಮತ್ತು ನಾನು ಅನೇಕ ವರ್ಷಗಳವರೆಗೂ ಜೊತೆಯಲ್ಲಿ ಕೆಲಸ ಮಾಡುತ್ತಾ ಇದ್ದೆವು. ಮತ್ತು ಅವರು ನನ್ನ ಮಟ್ಟಿಗೆ ಪಿತೃ ಭಾವನೆ ಮತ್ತು ಒಂದು ಪ್ರೇಮ ಇಟ್ಟುಕೊಂಡಿದ್ದರು. ಅವರು ಈ ಸಭೆಯಲ್ಲಿ ಕಾರ್ಯಕಲಾಪಗಳನ್ನು ಯಾವ ರೀತಿಯಿಂದ ನಡೆಸುತ್ತಾ ಇದ್ದರು, ಯಾವ ಸತ್ ಸಂಪ್ರದಾಯಗಳನ್ನು ಹಾಕಿಕೊಂಡಿದ್ದರು ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಿದೆ.

ಅವರು 1895, ಏಪ್ರಿಲ್ 10 ರಲ್ಲಿ ಬಂಟವಾಳದಲ್ಲಿ ಜನಿಸಿ ಅಲ್ಲಿಯೇ ಬೆಳೆದು ಅವರು ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ ಮಾಡಿ ಅನಂತರ ಮದ್ರಾಸಿನ ಪಚ್ಚೆಯಪ್ಪ ಕಾಲೇಜಿನಲ್ಲಿ ಡಿಗ್ರಿ ಹೊಂದಿ, ಅಲ್ಲಿ ಲಾ ಕಾಲೇಜನಲ್ಲಿ ಡಿಗ್ರಿ ಪಡೆದು 1916-17ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಅತ್ಯುತ್ತಮ ವಿದ್ಯಾರ್ಥಿಯೆನಿಸಿ ಅಲ್ಲಿ ಸುವರ್ಣ ಪದಕದ ಪ್ರಶಸ್ತಿಯನ್ನೂ ಕೂಡ ಸಂಪಾದಿಸಿದರು. ತಮ್ಮ ವ್ಯಾಸಂಗ ಮುಗಿಸಿಕೊಂಡು ತಮ್ಮ ಊರಿಗೆ ಬಂದು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಅವರು ಬಹಳ ಮಟ್ಟಿಗೆ ಭಾಗವಹಿಸಿದಂಥಾದ್ದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅನೇಕ ಸಂಘ ಸಂಸ್ಥೆಗಳಲ್ಲಿ ಯಜಮಾನಿಕೆ ವಹಿಸಿ ಕೆಲಸ ಮಾಡುತ್ತಾ ಇದ್ದರು. ಅದರಲ್ಲಿ ಕೆಲವು ಹೇಳುತ್ತೇನೆ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್, ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪನಿ, ಮತ್ತು ಮಣಿಪಾಲ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಇತ್ಯಾದಿ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಬಹಳ ಮಟ್ಟಿಗೆ ದುಡಿದಿದ್ದಾರೆ. ಇಷ್ಟೇ ಅಲ್ಲದೆ ಅವರು ಕಾಂಗ್ರೆಸ್ಸಿನ ನಿಷ್ಠಾವಂತ ಶಿಸ್ತಿನ ಕಾರ್ಯಕರ್ತರಾಗಿ ಬಹಳಮಟ್ಟಿಗೆ ಶ್ರಮಿಸಿದ್ದಾರೆ ಎನ್ನತಕ್ಕಂಥಾದ್ದನ್ನು ಈವೊತ್ತಿನ ದಿವಸ ಈ ಸಭೆಯಲ್ಲಿ ಒಪ್ಪಿಕೊಳ್ಳುತ್ತೇನೆ. ಅವರು 1952 ರಲ್ಲಿ ಪಾಣೆಮಂಗಳೂರಿನಿಂದ ಮದ್ರಾಸ್ ಅಸೆಂಬ್ಲಿಗೆ ಆರಿಸಿ ಬಂದರು. 1957 ರಲ್ಲಿ ಮಂಗಳೂರಿನ ಕ್ಷೇತ್ರದಿಂದ ಈ ಸಭೆಗೆ ಆರಿಸಿ ಬಂದರು. ಕಳೆದ ಎರಡು ಮಹಾ ಚುನಾವಣೆಗಳಲ್ಲಿ ಬೆಳ್ತಂಗಡಿ ಕ್ಷೇತ್ರದಿಂದ ಆಯ್ಕೆ ಹೊಂದಿ ಈ ಸಭೆಗೆ ಬಂದಿದ್ದು ಅನೇಕರಿಗೆ ಗೊತ್ತಿದೆ. 1957-58 ರಲ್ಲಿ

ಮಂತ್ರಿಗಳಾಗಿ, ಮತ್ತು 1961 ರಿಂದ 1962 ರವರೆಗೆ ಮತ್ತೆ ಮಂತ್ರಿಗಳಾಗಿ, 1962 ರಿಂದ ಈಚೆಗೆ ಅಂದರೆ ಜೂನ್ 6, 1968 ರವರೆಗೂ ಸತತವಾಗಿ ಅವರು ನಮ್ಮ ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥಾದ್ದನ್ನು ಈವೊತ್ತು ನಾವು ಮರೆಯುವಂತಿಲ್ಲ. ಅವರು ನಮ್ಮ ಮಧ್ಯದಲ್ಲಿ ಇರಲಾರದೇ ಇರುವುದರಿಂದ, ಅವರ ಅಗಲುವಿಕೆಯಿಂದ ನಮಗೆಲ್ಲಾ ತುಂಬಲಾರದಷ್ಟು ಹಾನಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಅಧ್ಯಕ್ಷರಾಗಿದ್ದಾಗ ಯಾವ ರೀತಿಯಿಂದ ನಡೆದುಕೊಳ್ಳುತ್ತಾ ಇದ್ದರು ಎನ್ನುವುದು ನಮಗೆಲ್ಲಾ ಗೊತ್ತಿದೆ. ಅವರು ಕ್ಲಿಷ್ಟ ಸನ್ನಿವೇಶದಲ್ಲೂ ಕೂಡ ಸಹನೆ, ತಾಳ್ಮೆಗಳಿಂದ ದಾರಿ ದೀಪವಾಗಿ ನಮಗೆ ಮಾರ್ಗದರ್ಶನ ಮಾಡುತ್ತಾ ಇದ್ದರು. ಅವರಲ್ಲಿರುವಂಥ ಕರ್ತವ್ಯ ದೃಷ್ಟಿ, ಪಕ್ಷಪಾತ ರಹಿತ ದೃಷ್ಟಿ, ನ್ಯಾಯ ದೃಷ್ಟಿ, ನಿರ್ಮಲ ಅಂತಃಕರಣ ಮುಂತಾದ್ದು ನಮಗೆಲ್ಲರಿಗೂ ಅನುಕರಣನೀಯವಾಗಿದೆಯೆಂದು ನಾನು ತಿಳಿದು ಕೊಂಡಿದ್ದೇನೆ. ಅವರು ಅಪಾರ ಜ್ಞಾನವನ್ನು ಸಂಪಾದಿಸಿದ್ದರು ಮತ್ತು ಪುಸ್ತಕವನ್ನು ಓದುವುದರಲ್ಲಿ ಅವರಿಗೆ ಬಹಳ ಮಟ್ಟಿಗೆ ಅಭಿರುಚಿ ಇತ್ತು. ಸ್ವಲ್ಪ ಸಮಯ ಇದ್ದರೂ ಕೂಡ ಅವರು ಏನಾದರೂ ಪುಸ್ತಕ ಓದಿ ತಮ್ಮ ಸಮಯವನ್ನು ಕಳೆಯುತ್ತಾ ಇದ್ದರು. ಎಲ್ಲರೂ ಹೆಚ್ಚು ಹೆಚ್ಚು ಓದಬೇಕು, ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕು, ಈ ಮನೆಯ ಸದಸ್ಯರು ಯಾವಾಗಲೂ ಪಾರ್ಲಿಮೆಂಟರಿ ಪ್ರಾಕ್ಟೀಸನ್ನು ತಿಳಿದುಕೊಳ್ಳಬೇಕು ಎನ್ನುವ ಆಸಕ್ತಿ ಅವರಲ್ಲಿ ಇತ್ತು. ಆ ರೀತಿ ಪದೇ ಪದೇ ಬುದ್ಧಿಯನ್ನು ಹೇಳುತ್ತಾ ಇದ್ದರು. ಅಲ್ಲದೆ ನಮಗೆಲ್ಲರಿಗೂ ಹೆಚ್ಚಿನ ವ್ಯಾಸಂಗ ಮಾಡುವುದಕ್ಕೆ ಅವಕಾಶವಾಗುವಂತೆ ಒಂದು ಉತ್ತಮವಾದ ಲೈಬ್ರರಿಯನ್ನು ಕಟ್ಟುವುದಕ್ಕೆ ಬಹಳ ಮಟ್ಟಿಗೆ ಶ್ರಮಿಸಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ನೆನಿಸಿಕೊಳ್ಳಬೇಕಾಗುತ್ತದೆ, ಈ ಸಭೆಯ ನಿಯಮಗಳು, ಕಾನೂನುಗಳು ಅವರ ನಾಲಿಗೆಯ ಮೇಲೆ ಇತ್ತು ಎಂದು ಅನಿಸುತ್ತದೆ, ಈ ಸಭೆಯ ಗೌರವ ಮತ್ತು ಘನತೆಗೆ ಬಹಳ ಮುತುವರ್ಜಿಯಿಂದ ಏನೂ ಧಕ್ಕೆ ಬರಲಾರದಂತೆ ನೋಡಿಕೊಳ್ಳಬೇಕು ಎಂದು ಬಹಳ ಮಟ್ಟಿಗೆ ಶ್ರಮಿಸುತ್ತಾ ಇದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಂತಹ ಆದರ್ಶವಾದಿ ಸಭಾಧ್ಯಕ್ಷರನ್ನು ನಾವು ಕಳೆದುಕೊಂಡಿದ್ದೇವೆ. ಇದು ನಮ್ಮ ದುರ್ದೈವ ಎಂದು ತಿಳಿದು ಕೊಂಡಿದ್ದೇನೆ. ಅಂತಹ ಆದರ್ಶವಾದಿ ನಿರ್ಮಲ ಅಂತಃಕರಣದ, ನಿಷ್ಪಕ್ಷಪಾತವಾದ ಮತ್ತು ಒಳ್ಳೆ ರೀತಿಯಿಂದ ನಡೆಸುವಂಥಾ ಸಭಾಧ್ಯಕ್ಷರು ಸಿಕ್ಕುವಂಥಾದ್ದು ಬಹಳ ದುರ್ಲಭ ಎಂದು ಅನಿಸುತ್ತದೆ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಕಳೆದ 6 ವರ್ಷದವರೆಗೂ ಹಾಕಿ ಕೊಟ್ಟಂಥ ಸತ್‌ಸಂಪ್ರದಾಯಗಳು ನಮ್ಮಿಂದ ದೂರ ಸರಿಯಲಾರವು ಎಂದು ಅನಿಸುತ್ತದೆ. ಅವರು ಏನು ಸತ್‌ಸಂಪ್ರದಾಯಗಳನ್ನು ಹಾಕಿಕೊಟ್ಟಿದ್ದಾರೋ ಅದನ್ನು ಮರೆಯಲಾರದಂತೆ ಅವರ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಈ ಸಭೆಯ ಗೌರವ ಸತ್‌ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವಂಥಾದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಬಂಧುವರ್ಗದವರಿಗೆ ಸಂತಾಪವನ್ನು ಸೂಚಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## 2. ರಾಜ್ಯದಲ್ಲಿ ಅಭಾವ ಪರಿಸ್ಥಿತಿಯನ್ನು ಕುರಿತು ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಭಾಷಣ, 3 ನೇ ಸೆಪ್ಟೆಂಬರ್, 1968.

ಶ್ರೀ ವೀರೇಂದ್ರ ಪಾಟೀಲ್ ( ಮುಖ್ಯ ಮಂತ್ರಿಗಳು ) :-

" ಮಾನ್ಯ ಅಧ್ಯಕ್ಷರೇ, ನಾನು ಸಂಕ್ಷಿಪ್ತವಾಗಿ, ರಾಜ್ಯದ ವಿವಿಧ ಭಾಗಗಳ ಪರಿಸ್ಥಿತಿಯ ಬಗ್ಗೆ ಒಂದು ಮೌಲೀಕರಣವನ್ನು ಪ್ರಸ್ತುತ ಪಡಿಸುತ್ತೇನೆ. ಅಲ್ಲದೇ, ಪರಿಸ್ಥಿತಿಯನ್ನು ಎದುರಿಸಲು, ಸರಕಾರವು ತಯ್ಯಾರಿಸಿದ ತುರ್ತು ಪರಿಸ್ಥಿತಿಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು, ಕೇಂದ್ರದ ಸಹಾಯ ಪಡೆಯಲು, ಸರಕಾರವು ಮಾಡಿದ ಪ್ರಯತ್ನಗಳ ಬಗ್ಗೆ ವಿವರಿಸುತ್ತೇನೆ "

ಈ ಭಾಷಣದಲ್ಲಿ, ನಾನು ನಿರ್ದಿಷ್ಟ ಅಂಕಿ ಸಂಖ್ಯೆಗಳ ಗೋಜಿಗೆ ಹೋಗದೇ, ಸಮಸ್ಯೆಗಳನ್ನು ಅತೀ ವಿಶಾಲವಾದ ರೀತಿಯಲ್ಲಿ, ತಿಳಿಸಲಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಲು, ಎಲ್ಲ ಕಡೆಗಳಿಂದ, ಅತೀ ಪ್ರಾಮುಖ್ಯವಾದ ಸಲಹೆಗಳನ್ನು ನಾನು ಅಪೇಕ್ಷಿಸುತ್ತೇನೆ.

ಈ ಹೇಳಿಕೆಯನ್ನು ಮಾಡುವಾಗ, ಶಕ್ಯವಾದುದನ್ನು ಮಾಡಲಾಗಿದೆ ಅಥವಾ, ನಿರಾಶೆ ಹೊಂದಲು, ಯಾವ ಆಧಾರವಿಲ್ಲವೆಂದು ನಾನು ಹೇಳಲು ಇಷ್ಟಪಡುವುದಿಲ್ಲ. ತ್ಯಾಗ ಮತ್ತು ನಿರ್ಧಾರದಿಂದ, ಯಾವುದೇ ಮಾನವೀಯ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿದೆ. ಈ ಸಮಸ್ಯೆಯ ನಿಲುವಳಿಯ ಮೇಲೆ ನಡೆದು, ಆ ಚರ್ಚೆಗೆ ಸಂಬಂಧಿಸಿದ, ಎಲ್ಲ ಮಾಹಿತಿಯನ್ನು ಮತ್ತು ಉತ್ತರವನ್ನು ಕೊಡಲು ನಾನು ಸಿದ್ಧನಿದ್ದೇನೆ. 1967 ರಲ್ಲಿ ಆಗಸ್ಟ್ - ಸೆಪ್ಟೆಂಬರ್ ಮಳೆಯು ಬಾರದ್ದರಿಂದ, ರಾಜ್ಯದ ಖರೀಫ ಬೆಳೆಗಳಿಗೆ, ಸಾಕಷ್ಟು ನಷ್ಟ ಉಂಟಾಯಿತು. 1968 ರಲ್ಲಿ ಮಾನಸೂನ್ ವಿಫಲತೆಯಿಂದ, ಖರೀಫ್ ಬೆಳೆಗಳಿಗೆ, ಮತ್ತಷ್ಟು ಹಾನಿಯಾಯಿತು. ಕೋಸ್ಟಲ್ ಪ್ರದೇಶಗಳಲ್ಲಿ, ಭಾರಿ ಮಳೆಯಿಂದ, ಈ ರಾಜ್ಯದ ಕೆಲವು ನಿರೀಕ್ಷಿಸಿದ, ಮಳೆಯು, ವಿಫಲವಾಯಿತು. ಇದರಿಂದಾಗಿ, ಪ್ರಸ್ತುತ ವರ್ಷದ ಪ್ರಾರಂಭದಿಂದಲೇ, ರಾಜ್ಯದ 174 ತಾಲೂಕುಗಳ ಪೈಕಿ 100 ತಾಲೂಕುಗಳು ಅಭಾವದ ಪರಿಸ್ಥಿತಿಯನ್ನು ಅನುಭವಿಸುತ್ತಿವೆ. ಅಲ್ಲದೆ 26,000 ಒಟ್ಟು ಗ್ರಾಮಗಳ, ಅರ್ಧದಷ್ಟು ಗ್ರಾಮಗಳು ಕೃಷಿಯ ಸಂಕಟವನ್ನು ಅನುಭವಿಸುತ್ತಿವೆ. ಮಾನ್‌ಸೂನಿನ ವಿಫಲತೆಯು ಉದ್ಯೋಗದ ಅವಕಾಶಕ್ಕೆ ಅಡ್ಡಿ ತಂದಿದೆ. ಅಲ್ಲದೆ ಗ್ರಾಮೀಣ ಜನತೆಯ ಖರೀದಿಸುವ ಶಕ್ತಿಯನ್ನು ಕುಂಠಿತಗೊಳಿಸಿದೆ. 1968 ರಲ್ಲಿ ರಾಜ್ಯದ ಈ ಗಂಭೀರ ಪರಿಸ್ಥಿತಿಯನ್ನು ಬಗೆಹರಿಸಲು ಕೇಂದ್ರ ಸರಕಾರಕ್ಕೆ ತಿಳಿಸಲಾಯಿತು. ಅಲ್ಲದೆ ಒಂದು ಅಧ್ಯಯನ ಮಂಡಳಿಯು ರಾಜ್ಯಕ್ಕೆ ಭೇಟಿ ಇತ್ತು. ಪರಿಸ್ಥಿತಿಯ ಸಮೀಕ್ಷೆ ನಡೆಸಿತು. ಅಧ್ಯಯನ ಮಂಡಳಿಗೆ ಅಭಾವ ಪರಿಹಾರದ ಬಗ್ಗೆ ಒಂದು ಸಮಗ್ರ ಯೋಜನೆಯನ್ನು ತಯ್ಯಾರಿಸಿ 8.3 ಕೋಟಿ ರೂಪಾಯಿಯ ಮನವಿಯನ್ನು ಸಲ್ಲಿಸಲಾಯಿತು. ಕೇಂದ್ರ ಸರಕಾರವು ಆ ಯೋಜನೆಯನ್ನು ಒಪ್ಪಿ ಒಟ್ಟು 2.5 ಕೋಟಿ ರೂಪಾಯಿಯನ್ನು ಪರಿಹಾರಕ್ಕಾಗಿ ಉಪಯೋಗಿಸಲು, ಸಹಾಯ ಮಾಡಿತು. ಆದರೆ, ನಮ್ಮ ತುರ್ತು ಪರಿಸ್ಥಿತಿಯ ಕಾರ್ಯಕ್ರಮದಲ್ಲಿ ನಿಗಧಿಪಡಿಸಿದ ಬೇಡಿಕೆಗಳನ್ನು, ಸರಕಾರವು ಈಡೇರಿಸಲಿಲ್ಲ. ( ನೀರಾವರಿ ಬಾವಿ ತೋಡುವುದು, ಗ್ರಾಮೀಣ ವಿದ್ಯುಚ್ಛಕ್ತೀಕರಣ, ಎಲೆಕ್ಟ್ರಿಕಲ್

ಮತ್ತು ಡೀಸೆಲ್ ಪಂಪುಗಳ ಸರಬರಾಜು ಇತ್ಯಾದಿ ಬೇಡಿಕೆಗಳು ). ಆ ಬೇಡಿಕೆಗಳನ್ನು ರಾಜ್ಯ ಸರಕಾರದ ಯೋಜನೆಯಿಂದಲೇ ಪೂರೈಸಬೇಕೆಂದು ಕೇಂದ್ರ ಸರಕಾರ ಸೂಚಿಸಿತು.

1967 ಮತ್ತು 1968 ರ ಮಳೆಯ ಮಿತಿಯನ್ನು ಹೋಲಿಸಿದರೆ, 1968 ಏಪ್ರಿಲ್ ಮತ್ತು ಮೇ ನಲ್ಲಿ, ಮಳೆಯ ಮಿತಿಯು ಸಾಕಷ್ಟು ಜಿಲ್ಲೆಗಳಲ್ಲಿ ( ದಕ್ಷಿಣ ಕನ್ನಡ ಮತ್ತು ಕೂರ್ಗ್ ಬಿಟ್ಟು), ತೃಪ್ತಿಕರವಾಗಿತ್ತು. ಆದರೆ ಜೂನ್ 1968 ರಲ್ಲಿ, ಶಿವಮೊಗ್ಗ, ಚಿಕ್ಕಮಗಳೂರು, ಬೀದರ್, ಗುಲಬರ್ಗಾ, ದಕ್ಷಿಣ ಕನ್ನಡ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳು ಮಳೆಯ ಅಭಾವಕ್ಕೆ ಒಳಗಾದವು. ಆ ಸ್ಥಿತಿಯು ರಾಜ್ಯದ ಉಳಿದ ಜಿಲ್ಲೆಗಳಿಗೂ ಅನ್ವಯಿಸಿತು. ಆದರೆ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾಗಿ, ಪ್ರವಾಹಗಳು ಪೂರ್ಣ ಹರಿಯಲಾರಂಭಿಸಿ, ಎಷ್ಟೋ ಭೂಮಿಗೆ ಮನೆಗಳಿಗೆ, ಸಾರ್ವಜನಿಕ ಸಂಪರ್ಕ ಸಾಧನಗಳಿಗೆ ಮತ್ತು ಜನಜೀವನಕ್ಕೆ ಸಾಕಷ್ಟು ಹಾನಿಯುಂಟಾಯಿತು.

ಖರೀಫ್ ಮಾನ್‌ಸೂನಿನ ಕುಸಿದು ಬಿದ್ದುದರಿಂದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹೊಸದುರ್ಗ, ಚಿತ್ರದುರ್ಗ, ಜಗಳೂರು, ಹಿರಿಯೂರು, ಮೊಳಕಾಲ್ಮೂರು ತಾಲೂಕುಗಳಲ್ಲಿ ಬಿತ್ತನೆಯ ಕಾರ್ಯ ಸ್ಥಗಿತಗೊಂಡಿತು. ಜುಲೈ 1968 ರಲ್ಲಿ ಮಳೆಯಾದ್ದರಿಂದ, ತುಮಕೂರು ಜಿಲ್ಲೆಯ ಶಿರಾ, ಪಾವಗಡ, ಮಧುಗಿರಿ ತಾಲೂಕುಗಳಲ್ಲಿ, ಸ್ವಲ್ಪ ಮಟ್ಟಿಗೆ, ಬಿತ್ತನೆಯ ಕಾರ್ಯ ಮಾಡಲಾಯಿತು. ಆದರಂತೆಯೇ, ಕೋಲಾರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ತಾಲೂಕುಗಳಲ್ಲಿ ಬಿತ್ತನೆಯ ಕಾರ್ಯ ಮಾಡಲಾಯಿತು.

ಬೃಹತ್ ಕೆರೆಗಳು ನೀರಿಲ್ಲದೆ ಒಣಗಿ ಹೋಗಿರುವುದರಿಂದ, ನೀರಾವರಿಯ ಬಾವಿಗಳಲ್ಲಿ ನೀರಿನ ಮಟ್ಟಗಳು ಇಳಿಮುಖವಾಗುತ್ತಿವೆ.

ಇದರ ನಿಮಿತ್ತ, ಸರಕಾರವು ಪರಿಹಾರದ ಕಾರ್ಯಗಳನ್ನು ವ್ಯವಸ್ಥಿತಗೊಳಿಸಬೇಕು. ಆದಕ್ಕಾಗಿಯೇ, ಸರಾಸರಿಯಾಗಿ, ' 64 ರ ಬರಗಾಲ ಪರಿಹಾರ ' ದ ಅಡಿಯಲ್ಲಿ,

1)1,06,55,000 ರೂ. ಹಣವನ್ನು ನೀಡಲಾಗಿದೆ. ( ನಾಲ್ಕು ವಿಭಾಗಗಳಿಗೆ),

ಅಂದರೆ,

43,50,000 ರೂ. ಯನ್ನು ಬೆಂಗಳೂರು ವಿಭಾಗಕ್ಕೆ,

32,50,000 ರೂ. ಯನ್ನು ಮೈಸೂರು ವಿಭಾಗಕ್ಕೆ,

17,31,000 ರೂ. ಯನ್ನು ಬೆಳಗಾಂವ ವಿಭಾಗಕ್ಕೆ,

13,24,000 ರೂ. ಯನ್ನು ಗುಲಬರ್ಗಾ ವಿಭಾಗಕ್ಕೆ ನೀಡಲಾಯಿತು.

ಭೂಸಂರಕ್ಷಣೆಗೆ, 87 ಲಕ್ಷ ರೂ.ಯನ್ನು ಸಾಕಷ್ಟು ಜಿಲ್ಲೆಗಳಿಗೆ, ಘೋಷಿಸಲಾಯಿತು. (ಅಭಾವ ಪೀಡಿತ ಪ್ರದೇಶಗಳು ಸೆಕ್ಷನ್ 37 (1), ಮೈಸೂರು ಭೂ ಸುಧಾರಣಾ ಕಾಯ್ದೆ 1961 ರ ಪ್ರಕಾರ), ಸುಮಾರು 8,138 ಗ್ರಾಮಗಳು, ಅದರಿಂದ ಲಾಭ ಪಡೆದವು.

ಪರಿಹಾರದ ಕಾರ್ಯಗಳ ಸಂಖ್ಯೆ ( ಪ್ರಗತಿಯಲ್ಲಿ )

| | |
|---|---|
| 1) ಬೆಂಗಳೂರು ವಿಭಾಗದಲ್ಲಿ | 1726 |
| 2) ಮೈಸೂರು ವಿಭಾಗದಲ್ಲಿ | 760 |
| 3) ಬೆಳಗಾಂವ ವಿಭಾಗದಲ್ಲಿ | 358 |
| 4) ಗುಲಬರ್ಗಾ ವಿಭಾಗದಲ್ಲಿ | 114 |

ಅಭಾವದ ಪರಿಹಾರ ಕಾರ್ಯಗಳ ಅಡಿಯಲ್ಲಿ, ಪ್ರತಿ ದಿವಸಕ್ಕೆ ಅವಕಾಶ ಮಾಡಿದ ಉದ್ಯೋಗಗಳ ಸಂಖ್ಯೆ 35,000 ದಿಂದ 40,000 ರವರೆಗೆ, ಅಂದಾಜು ಮಾಡಲಾಗಿದೆ. ಅದನ್ನು ಭೂ ಸಂರಕ್ಷಣೆಯ ಅಡಿಯಲ್ಲಿ ಅನುಸರಿಸಲಾಯಿತು. ಆ ರೀತಿಯ ಕಾರ್ಯಗಳನ್ನು ಕೈ ಗೊಳ್ಳಲು, ಡೆಪ್ಯೂಟಿ ಕಮೀಶನರಿಗೆ ಸೂಚಿಸಲಾಯಿತು. ನೀರಾವರಿಯ ಬಾವಿಗಳನ್ನು ತೋಡಲು, ಹಣಕಾಸಿನ ವ್ಯವಸ್ಥೆ ಮಾಡಲಾಯಿತು. ಒಂದು ವೇಳೆ ತೋಡುವ ಬಾವಿ ವಿಫಲವಾದರೆ, ಅದರ ಖರ್ಚನ್ನು ಸರಕಾರವೇ ಹೊರಬೇಕೆಂದು ನಿಗಧಿ ಪಡಿಸಲಾಯಿತು.

1967-68ರಲ್ಲಿ, ಬಜೆಟೆಡ್ ಕಾರ್ಯಗಳನ್ನು 216.77 ಲಕ್ಷಕ್ಕೆ ಅಂದಾಜು ಮಾಡಲಾಯಿತು. 328 ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು. 1968-69 ರ ಸಾಲಿಗಾಗಿ (ಅಂದಾಜು ಪತ್ರಿಕೆಯ ಅನುಸಾರ), 73 ಹೊಸ ಸಣ್ಣ ನೀರಾವರಿ ಕಾರ್ಯಗಳನ್ನು ( ಪ್ರತಿಯೊಂದು ಒಂದು ಲಕ್ಷದ ಅಂದಾಜಿನ ) ಒದಗಿಸಲಾಯಿತು. ಇಂಥ ಕಾರ್ಯಗಳನ್ನು ಯಾವುದೇ ವಿಳಂಬವಿಲ್ಲ, ಕೈಗೊಳ್ಳಲು, ಚೀಫ್ ಇಂಜಿನೀಯರರಿಗೆ ಸೂಚಿಸಲಾಯಿತು. 1968 ರ ಮಾರ್ಚ್ ಅಂತ್ಯದವರೆಗೆ, 39,416, ನೀರಾವರಿ ಬಾವಿಗಳ ಪೈಕಿ, ( ಮಂಜೂರಾದ ) ಲಿಬರಲ್ ಸೆಡ್ ನಿಯಮಗಳ ಅಡಿಯಲ್ಲಿ, ಸುಮಾರು, 29,622 ಬಾವಿಗಳನ್ನು ತೋಡುವ ಕಾರ್ಯಕ್ರಮ ಪೂರ್ಣ ಗೊಳಿಸಲಾಯಿತು. ಸಾಮುದಾಯಕ ಅಭಿವೃದ್ಧಿಯ ಕಾರ್ಯಕ್ರಮದ ಅಡಿಯಲ್ಲಿ, 19,000 ನೀರಾವರಿ ಬಾವಿಗಳ ಪೈಕಿ ( ಮಂಜೂರಾದ ), ಸುಮಾರು 12,000 ಬಾವಿಗಳನ್ನು ಪೂರ್ಣಗೊಳಿಸಲಾಯಿತು. ಈಗ 6,853 ಬಾವಿಗಳು ( ಲಿಬರಲಾಯಜಡ್ ನಿಯಮ ಅಡಿಯಲ್ಲಿ ಮಂಜೂರಾದ), ಮತ್ತು 5,550 ಬಾವಿಗಳು (ಸಿ.ಡಿ. ಯೋಜನೆಯ ಅಡಿಯಲ್ಲಿ ಮಂಜೂರಾದ), ಪ್ರಗತಿಯ ಹಂತದಲ್ಲಿದೆ. ಈ ಎಲ್ಲ ಬಾವಿಗಳನ್ನು ಪೂರ್ತಿಗೊಳಿಸಲು, ಸೆಪ್ಟೆಂಬರ್ 1968 ರ ತನಕ, ಕಾಲಮಿತಿಯನ್ನು ವಿಸ್ತರಿಸಲಾಗಿದೆ.

ಪುನಃ ಕಾಲವನ್ನು 1969 ಮಾರ್ಚ್ ಅಂತ್ಯದವರೆಗೆ ವಿಸ್ತರಿಸುವುದು ಪರಿಶೀಲನೆಯಲ್ಲಿದೆ.

1965, ನವೆಂಬರ್ 1 ರಿಂದ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ, ಹೊಸ ನೀರಾವರಿ ಬಾವಿಗಳನ್ನು ತೋಡುವ ಕಾರ್ಯವನ್ನು, ಸಹಕಾರಿ ವಿಭಾಗಕ್ಕೆ ಒಪ್ಪಿಸಲಾಗಿದೆ.

ಮೈಸೂರು ರಾಜ್ಯ ಕೇಂದ್ರ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು, ಮಂಜೂರು ಮಾಡಿದ 29,822 ನೀರಾವರಿ ಬಾವಿಗಳ ಪೈಕಿ, 1968 ಜೂನ್ ಅಂತ್ಯದವರೆಗೆ 5,787 ಬಾವಿಗಳನ್ನು ಪೂರ್ಣಗೊಳಿಸಲಾಗಿದೆ.

ಬಾವಿಗಳ ತ್ವರಿತ ಆಳವನ್ನು ಹೆಚ್ಚಿಸಲು, ನಾವು ಏರ್‌ಕಂಪ್ರೆಸರ್ಸ್, ಬ್ಲಾಸ್ಟಿಂಗ್ ಮತ್ತು ಟ್ರಿಕ್ಸ್ ಸಾಧನಗಳನ್ನು ಖರೀದಿಸುವ ವಿಚಾರದಲ್ಲಿದ್ದೇವೆ. ದನಗಳಿಗೆ, ಮೇವಿನ ಅಭಾವ ತೋರಿದಾಗ ಯಾವುದೇ ಮೂಲದಿಂದ ಅದನ್ನು ಪಡೆಯಲು, ಡೆಪ್ಯೂಟಿ ಕಮೀಶನರರಿಗೆ ಅಧಿಕಾರ ನೀಡಲಾಗಿದೆ. ಅಭಾವ ಪೀಡಿತ ಪ್ರದೇಶಗಳಲ್ಲಿ ( ಬೆಂಗಳೂರು, ತುಮಕೂರು, ಕೋಲಾರ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು ), 1968 ರಲ್ಲಿ 5 ವರ್ಷಕ್ಕಿಂತ ಕೆಳಗಿರುವ ಮಕ್ಕಳಿಗೆ ಮತ್ತು ನರ್ಸಿಂಗ್ ತಾಯಿಂದರಿಗೆ, ಪೌಷ್ಟಿಕ ಮಧ್ಯಾಹ್ನದ ಉಪಹಾರ ಒದಗಿಸಲು ಒಂದು ತುರ್ತು ಪರಿಸ್ಥಿತಿಯ ಫೀಡಿಂಗ್, ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಚಾಲನೆಯಲ್ಲಿದೆ. ಈಗ ಸಧ್ಯ, ಅಂಥ ಕೇಂದ್ರಗಳು 3,042 ರಷ್ಟಿದ್ದು, 6-11 ವಯಸ್ಸಿನ ಶಾಲೆಗೆ ಹೋಗುವ ಮಕ್ಕಳನ್ನು ಸೇರಿಸಿ, ಒಟ್ಟು 5,64,722 ವ್ಯಕ್ತಿಗಳಿಗೆ, ಆ ಕೇಂದ್ರದ ಲಾಭ ದೊರಕುವಂತಾಗಿದೆ. ಅಂಥ ಲಾಭ ಪಡೆಯುವವರ ಸಂಖ್ಯೆ ಇನ್ನೂ 9,49,500 ಕ್ಕೆ ಹೆಚ್ಚಿಸಲು ಅವಕಾಶವಿದೆ.

ಹೊಸ ಏಕರೂಪದ ನಿಯಮಗಳ ( ಭೂಕಂದಾಯದ ರದ್ದು ಮತ್ತು ಮಾಫಿ ಅಡಿಯಲ್ಲಿ) ಪ್ರಕಾರ, ಭೂಕಂದಾಯವನ್ನು ರದ್ದುಪಡಿಸಲು, ಜಿಲ್ಲೆಗಳ ಡೆಪ್ಯೂಟಿ ಕಮೀಶನರರಿಗೆ ಅಧಿಕಾರ ಕೊಡಲಾಗಿದೆ. ಅವರು 7,000 ಗ್ರಾಮಗಳಲ್ಲಿ ಭೂಕಂದಾಯ ವಸೂಲಾತಿಯನ್ನು ರದ್ದು ಪಡಿಸಿದ್ದಾರೆ. ಸರಕಾರವು ಮಂಜೂರು ಮಾಡಿದ ಸಾಲಗಳನ್ನು ಬಲವಂತವಾಗಿ ಸಂಗ್ರಹಿಸದಿರಲು, ಡೆಪ್ಯುಟಿ ಕಮೀಶನರರಿಗೆ ಆದೇಶ ನೀಡಲಾಗಿದೆ.

ನಾನು ಮತ್ತು ನನ್ನ ಸಹೋದ್ಯೋಗಿಗಳ ಅಭಾವ ಪೀಡಿತ ಪ್ರದೇಶಗಳಿಗೆ ಭೇಟಿ ಇತ್ತು, ನಮ್ಮ ಗ್ರಾಮೀಣ ಜನತೆಯು ಯಾವ ಕಷ್ಟಗಳನ್ನು ಎದುರಿಸುತ್ತಿದೆಯೆಂಬುದನ್ನು ಮನಗಂಡಿದ್ದೇವೆ. ನಾವು ಜನರ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಸರಕಾರದ ಕ್ರಮಗಳ ಪರಿಣಾಮಕಾರಿಯ ಅನುಷ್ಠಾನದ ಕಾರ್ಯಕ್ರಮಗಳ ಬಗ್ಗೆ ವಿಚಾರಿಸಿದ್ದೆವು.

ಈ ಕಾರ್ಯಕ್ರಮಗಳಲ್ಲಿ ಕೆಲವು ದೋಷಗಳಿರಬಹುದು. ಕೆಲವು ಸಲ, ಕಾರ್ಯಕ್ರಮಗಳಿಗೆ ಬೇಕಾಗುವ ಹಣ ಖರ್ಚು ಮಾಡುವಲ್ಲಿ ವಿಳಂಬವಾಗಬಹುದು. ಸವನಕ್ಕೆ ಈ ಅಭಾವ ಪರಿಹಾರದ ಕಾರ್ಯಕ್ರಮಗಳ ಆಶ್ಚರ್ಯವಾಗುವ ಸಂಗತಿಯೆಂದರೆ, ಈ ಕಾರ್ಯಗಳಿಗೆ ಮಂಜೂರಿ ಮಾಡಿದ, 1.90 ಕೋಟಿ ರೂ. ಹಣದಲ್ಲಿ, ಕೇವಲ 1.10 ಕೋಟಿ ರೂ. ಖರ್ಚಾಗಿದೆ. ಅದು, ನಿಧಿಗಳು ಸಾಕಷ್ಟು ಇರುವುದರಿಂದ ಅಲ್ಲ. ಆದರೆ ಕೆಲವು ಅಧಿಕಾರಿಗಳ ವಿಳಂಬವೇ ಅದಕ್ಕೆ ಕಾರಣ. ನಾನು, ವಿಪರೀತ ಕ್ರಮ ನೆಚ್ಚಿಕೆ ( ರೆಡ್ ಟೇಪ್ ) ಯನ್ನು ಆದಷ್ಟು ಕಡಿಮೆ ಮಾಡಲು, ಆದೇಶ ನೀಡಿ, ಫೀಲ್ಡ್ ಅಧಿಕಾರಿಗಳಿಗೆ ಆ ಕಾರ್ಯಕ್ರಮಗಳನ್ನು ಮಂಜೂರು ಮಾಡಲು ಅಧಿಕಾರಗಳನ್ನು ನೀಡಲಾಗಿದೆ. ಆ ಕಾರ್ಯಕ್ರಮವನ್ನು ಪರಿಶೀಲಿಸಲು, ಕ್ಯಾಬಿನೆಟ್ ಸಬ್ ಸಮಿತಿಯನ್ನು ರಚಿಸಲಾಗಿದೆ.

ಜನರಿಗೆ ಪರಿಹಾರ ಒದಗಿಸಲು ಬಹಳ ವಿಳಂಬದ ನೀತಿಯನ್ನು ಅನುಸರಿಸಲಾಗುತ್ತಿದೆ. ನನ್ನ ಗಮನಕ್ಕೆ ಬಂದ ಹಾಗೆ, ಈ ಕಾರ್ಯಗಳ ಸಲುವಾಗಿ, ಕೆಲವು ಮಧ್ಯವರ್ತಿಗಳು, ಅನ್ಯಾಯದ ಲಾಭ ಪಡೆಯಲು ಶಾಮೀಲಾಗಿದ್ದಾರೆ. ಕೆಲವು ಅಧಿಕಾರಿಗಳ ವಿರುದ್ಧದ ಭ್ರಷ್ಟಾಚಾರದ

ಆಪಾದನೆಗಳೂ ಇವೆ. ಇಂಥ ವ್ಯಕ್ತಿಗಳನ್ನು ಖಂಡಿಸಲು ನನಗೆ ಶಬ್ದಗಳೇ ಸಿಗುತ್ತಿಲ್ಲ. ಅಂಥ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ಕೊಡುವಲ್ಲಿ ಸರಕಾರವು ಹಿಂಜರಿಯುವುದಿಲ್ಲ. ಈ ಎಲ್ಲ ಕಾರ್ಯಗಳು, ಜಾರಿಗೊಳಿಸಬೇಕಾದರೆ, ತಾಲೂಕು ಅಭಿವೃದ್ಧಿ ಬೋರ್ಡುಗಳ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ.

ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರವಷ್ಟೇ ಸಾಲದು. ಇದಕ್ಕಾಗಿ ' ಭಾರತ ಸೇವಕ ಸಮಾಜ ' ಸಂಸ್ಥೆಗಳ ಸಹಾಯ ಅತ್ಯಾವಶ್ಯಕ. ಆ ಸಂಸ್ಥೆಗಳು ನಡೆಸುವ ಕ್ಯಾಂಪುಗಳು, ಕೃಷಿ-ಕಾರ್ಮಿಕರ ಎಲ್ಲ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ, ಹೆಚ್ಚಿನ ಪಾತ್ರ ವಹಿಸುತ್ತವೆ.

ಈ ಎಲ್ಲ ಕ್ರಮಗಳು, ಕೇವಲ ತಾತ್ಪೂರ್ತಿಕವೆಂಬುದು ಸರಕಾರಕ್ಕೆ ಗೊತ್ತಿದೆ. ಈ ಸಮಸ್ಯೆಗೆ ನಿಜವಾದ ಪರಿಹಾರ ಸಿಗುವುದು, ದೀರ್ಘಾವಧಿಯ ಕಾಲದ ಉಪಾಯಗಳಿಂದ ಮಾತ್ರ. ಈ ರೀತಿಯ ದೀರ್ಘಕಾಲದ ಉಪಾಯವನ್ನು ಕೈಗೆತ್ತಿಕೊಳ್ಳಲು, ಸಮಿತಿಯ ರಚನೆಯು ಅವಶ್ಯಕವಿದೆ. ಅದಕ್ಕೂ ಮಿಗಿಲಾಗಿ, ಆ ಸಮಸ್ಯೆಯ ಪರಿಹಾರಕ್ಕಾಗಿ, ಕೇಂದ್ರ ಸರಕಾರದ ಸಹಾಯ ಅಷ್ಟೇ ಮುಖ್ಯವಾಗಿದೆ.

ಈ ವಿಷಯವನ್ನು ಮುಗಿಸುವ ಮುನ್ನ, ಈ ಸದನಕ್ಕೆ ನಾನು ಆಶ್ವಾಸನೆಯನ್ನು ನೀಡುವುದೇನೆಂದರೆ, ಈ ಗಂಭೀರ ಪರಿಸ್ಥಿತಿಯನ್ನು ಬಗೆಹರಿಸಲು, ಸಮಸ್ತ ಸರಕಾರಿ ಯಂತ್ರವು, ತನ್ನ ಸರ್ವ ಪ್ರಯತ್ನವನ್ನು ಮಾಡುತ್ತದೆ.

## 3. ರಾಜ್ಯದ ಕೆಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿಗಳ ಗೊತ್ತುವಳಿಯ ಕುರಿತ ಚರ್ಚೆಯ ಮೇಲೆ, ರಾಜ್ಯದ ಮುಖ್ಯಮಂತ್ರಿಗಳಾಗಿ, ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ. 10ನೇ ಸೆಪ್ಟೆಂಬರ್, 1968.

ಶ್ರೀ ವೀರೇಂದ್ರ ಪಾಟೀಲ್ :-

ಅಧ್ಯಕ್ಷರೇ, ಕಳೆದ ನಾಲ್ಕೈದು ದಿವಸಗಳಿಂದ ನಮ್ಮ ರಾಜ್ಯದಲ್ಲಿ ಈ ವರ್ಷ ಹೆಚ್ಚಾಗಿ ತಲೆದೋರಿರುವಂಥ ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಮತ್ತು ಈ ಚರ್ಚೆಯಲ್ಲಿ ಭಾಗವಹಿಸಿದಂಥ ಅನೇಕ ಮಾನ್ಯ ಸದಸ್ಯರು ಒಳ್ಳೆಯ ಮತ್ತು ಸೂಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈ ಮಾನ್ಯ ಸಭೆಗೆ ಗೊತ್ತಿದೆ, ಅಭಾವ ಪರಿಸ್ಥಿತಿ ಅನಾವೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ತಲೆದೋರುತ್ತಿರುವುದು ಇದು ಮೊದಲನೇ ಸಲವಲ್ಲ. ಬಹುಶಃ ಕೆಲವು ಜಿಲ್ಲೆಗಳು ಇದಕ್ಕಾಗಿ ಹೆಸರುವಾಸಿಯಾಗಿವೆ ಎಂದು ನನಗನ್ನಿಸುತ್ತದೆ. ಪ್ರತಿ ವರ್ಷ ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ಕಡೆ ಈ ಪರಿಸ್ಥಿತಿಯುಂಟಾಗುತ್ತಿದೆ ಮತ್ತು ಪ್ರತಿ ವರ್ಷ ಅಭಾವ ಪೀಡಿತ ಜನರಿಗೆ ಉದ್ಯೋಗವನ್ನು ಒದಗಿಸುವುದರ ಸಲುವಾಗಿ ಪರಿಹಾರ ಕಾಮಗಾರಿಗಳ ಸಲುವಾಗಿ ಸರ್ಕಾರ ಅನೇಕ ವರ್ಷಗಳಿಂದ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ. ಇದನ್ನು ಬಹುಶಃ ಮನಗಂಡೇ ಅನೇಕ ಮಾನ್ಯ ಸದಸ್ಯರು ಈ ರೀತಿ ತಾತ್ಪೂರ್ತಿಕವಾದ ಪರಿಹಾರವನ್ನು ಇದಕ್ಕೆ ಕಂಡು ಹಿಡಿಯಲಾರದೆ ಇದಕ್ಕೆ ಸ್ಥಾಯಿಕವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಾರಂಭ ಮಾಡಬೇಕೆಂದು ಸಲಹೆಯನ್ನು ಮಾಡಿದ್ದಾರೆ. ಪರ್ಮನೆಂಟ್ ರಿಲೀಫ್ ಮೆಷರ್ಸ್ ಏನೇನು ಮಾಡಬೇಕು ಎನ್ನುವಂಥದ್ದನ್ನು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ ಈ ಮಾನ್ಯ ಸದಸ್ಯರು ಈ ವಿಷಯದ ಮೇಲೆ ತಮ್ಮ ಅಭಿಪ್ರಾಯ ಏನೇನು ವ್ಯಕ್ತ ಮಾಡಿದ್ದಾರೆ ಮತ್ತು ಭಾಷಣ ಮಾಡುವ ಮುಂದೆ ಏನೇನು ಸೂಕ್ತವಾದ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ ಆ ಎಲ್ಲ ಸಲಹೆಗಳನ್ನೂ ನಾವು ದೀರ್ಘವಾಗಿ ಗಂಭೀರವಾಗಿ ಪರಿಶೀಲನೆ ಮಾಡಿಸಿ ಮುಂದ ಇದರ ಬಗ್ಗೆ ಯೋಗ್ಯವಾದ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರು ಈ ಕೆಲಸದ ಸಲುವಾಗಿ ಫಾಮಿನ್ ಕಮಿಷನ್ ನೇಮಕ ಮಾಡಬೇಕು ಮತ್ತು ಇವೊತ್ತು ತಲೆದೋರಿರುವಂಥ ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿದ್ದರೆ ಪ್ರತಿ ದಿವಸ 50 ಲಕ್ಷ ರೂಪಾಯಿಯವರೆಗೂ ಖರ್ಚು ಮಾಡಬೇಕಾಗುತ್ತದೆ. ಮತ್ತು ಆ ರೀತಿಯಾಗಿ 60 ಕೋಟಿ ರೂಪಾಯಿ ಬೇಕಾಗಬಹುದು ಎನ್ನುವಂಥ ವಿಚಾರವನ್ನು ಅವರು ವ್ಯಕ್ತ ಮಾಡಿದ್ದಾರೆ. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ದುರ್ದೈವದಿಂದ ಈ ಸಲದ ಪರಿಸ್ಥಿತಿ ಕೇವಲ ಕೆಲವು ಜಿಲ್ಲೆಗಳಿಗೆ ಸೀಮಿತವಾಗಿರಲಾರದೆ ಪರಿಸ್ಥಿತಿ ಹದಗೆಟ್ಟಿರುವುದನ್ನು ಅನೇಕ ಭಾಗಗಳಲ್ಲಿ ನಾವು ನೋಡುತ್ತಿದ್ದೇವೆ ಎನ್ನುವಂಥ ಮಾತನ್ನು ಒಪ್ಪಿಕೊಂಡಿದ್ದೇವೆ. ಬಹುಶಃ ನಾಲೆ ಕೆಳಗೆ ಇರುವ ಪ್ರದೇಶದಲ್ಲಿ, ದೊಡ್ಡ ದೊಡ್ಡ ಕೆರೆಕಟ್ಟೆಗಳು, ಜಲಾಶಯಗಳು ಇರುವ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಕಾಣುತ್ತಿರಬಹುದು. ಆದರೆ ಉಳಿದ ಎಲ್ಲ ಕಡೆಯೂ ಹೆಚ್ಚು ಕಡಿಮೆ ಪರಿಸ್ಥಿತಿ

ಹೀಗೆಯೇ ಇದೆ ಎನ್ನುವಂಥ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ. ಅದಕ್ಕಾಗಿ ಇವೊತ್ತು ಪ್ರತಿಯೊಬ್ಬ ಸದಸ್ಯರೂ ತಮ್ಮ ತಮ್ಮ ಮತ ಕ್ಷೇತ್ರದಲ್ಲಿ ಪರಿಸ್ಥಿತಿ ಹದಗೆಟ್ಟಿದೆ. ಮತ್ತೊಂದು ಮತ ಕ್ಷೇತ್ರಕ್ಕಿಂತ ತಮ್ಮ ಮತ ಕ್ಷೇತ್ರದಲ್ಲಿ ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಆ ಲೆಕ್ಕದಿಂದ ಈಗಿನ ಪರಿಸ್ಥಿತಿಯನ್ನು ನಿವಾರಣೆ ಮಾಡುವುದರ ಸಲುವಾಗಿ ತಕ್ಷಣ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಲಾಂಗ್ ರೇಜ್ ಪ್ರೋಗ್ರಾಂ ಏನೇನು ತೆಗೆದುಕೊಳ್ಳಬೇಕು ಎನ್ನುವುದನ್ನು ಮುಖ್ಯವಾಗಿ ನಾವು ಪರಿಶೀಲಿಸಬೇಕಾಗಿದೆ. ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ನೀಡಿದ್ದಾರೆ.

ಈ ವಿಷಯದ ಮೇಲೆ ಚರ್ಚೆ ಮಾಡುತ್ತಾ ಇರುವುದು ದುರ್ದೈವದ ಸಂಗತಿ. ಕೆಲವು ಮಾನ್ಯ ಸದಸ್ಯರು ಇದೇ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಸರ್ಕಾರವನ್ನು ಟೀಕಿಸುವ ಪ್ರಯತ್ನ ಮಾಡಿದ್ದಾರೆ. ಮಂತ್ರಿ ಮಂಡಲದ ಮೇಲೆ ದೋಷಾರೋಪಣೆ ಮಾಡಿದ್ದಾರೆ. ಇದನ್ನು ಏತಕ್ಕೆ ಮಾಡುತ್ತಾರೋ ಗೊತ್ತಿಲ್ಲ. ಯಾರ ಮೇಲಾದರೂ ದೋಷಾರೋಪಣೆ ಮಾಡಿದರೆ ದೋಷ ಪರಿಹಾರವಾಗುವುದಿಲ್ಲ. ಈವೊತ್ತು ಈ ಒಂದು ಅಭಾವ ಪರಿಸ್ಥಿತಿಗೆ ಸರಕಾರವಾಗಲಿ ಮಂತ್ರಿ ಮಂಡಲವಾಗಲಿ, ಅಧಿಕಾರಿಗಳಾಗಲಿ ಜವಾಬ್ದಾರರಲ್ಲ. ನಮ್ಮ ರಾಜ್ಯವು ನಿಸರ್ಗದ ಪ್ರಕೋಪಕ್ಕೆ ತುತ್ತಾಗಿ ದೇವರು ಮುನಿದಾಗ ನಾವು ಯಾರ ಮೇಲೆ ಏನು ಹೇಳಬೇಕೆಂದು ಮಾನ್ಯ ಸದಸ್ಯರು ವಿಚಾರ ಮಾಡಬೇಕಾಗಿದೆ. ಮತ್ತು ಜನರಿಗೆ ಯಾವ ರೀತಿ ರಿಲೀಫ್ ಕೊಡಬೇಕು, ಕಷ್ಟದಲ್ಲಿರತಕ್ಕ ಜನರಿಗೆ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ರಚನಾತ್ಮಕ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಡುವುದರ ಜೊತೆಗೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಹಾಕುತ್ತಾರೋ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಕೂಡ ಸಹಕಾರ ನೀಡಬೇಕಾಗುತ್ತದೆ ಕಳಕಳಿಯಿಂದ ಹೇಳಬೇಕಾದರೆ ಆಹಾರ ಪ್ರಶ್ನೆಯಲ್ಲಾಗಲಿ ಅಥವಾ ಪೀಡಿತ ಪ್ರದೇಶದಲ್ಲಿ ಜನರ ಕಷ್ಟವನ್ನು ನಿವಾರಣೆ ಮಾಡುವುದರಲ್ಲಾಗಲಿ, ರಾಜಕೀಯ ಬರಕೂಡದು, ಇದರ ಬಗ್ಗೆ ಪರಿಹಾರವನ್ನು ಕಂಡು ಹಿಡಿಯಬೇಕೇ ವಿನಃ ಇದರಲ್ಲಿ ರಾಜಕೀಯ ಸಲ್ಲದು. These problems, should be above politics ನಮಗೆ ಇವೊತ್ತು ಇರುವ ಪರಿಸ್ಥಿತಿಯಲ್ಲಿ ರಾಜಕೀಯದಿಂದ ನಾವು ಯಾವ ಪರಿಹಾರವನ್ನೂ ಮಾಡುವುದಕ್ಕಾಗುವುದಿಲ್ಲ. ಆ ತರಹ ಮಾಡುವುದಕ್ಕೆ ಏನಾದರೂ ಪ್ರಯತ್ನ ಪಟ್ಟರೆ ಜನರಿಗೆ ಸಾಕಷ್ಟು ಸಹಾಯವಾಗುವುದಿಲ್ಲ. ಕೆಲವು ಸದಸ್ಯರು ಹಿಂದೆ ಹೇಳಿದುದನ್ನೇ ಹೇಳಿದ್ದಾರೆ. ಅವರು ಹೇಳಿರುವ ಪೈಕಿ ಕುಡಿಯುವ ನೀರಿನ ಕಷ್ಟ ಇರುವುದು, ಬಾವಿಯಲ್ಲಿ ನೀರು ಇಲ್ಲದೆ ಇರುವುದು ಭಾವಿಯನ್ನು ಆಳಮಾಡುವುದು, ದನಗಳಿಗೆ ಹುಲ್ಲು ಕೊಡುವುದು, ರೈತರಿಗೆ ಹೆಚ್ಚು ಐ.ಪಿ. ಸೆಟ್ಸ್ ಒದಗಿಸುವುದು, ವಿದ್ಯುಚ್ಛಕ್ತಿ ಒದಗಿಸುವುದು, ಕೆಲವು ಕಡೆ ಆಹಾರ ಧಾನ್ಯವನ್ನು ತರಿಸಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು ಇನ್ನೂ ಮುಂತಾದ ಸೂಕ್ತವಾದ ಸಲಹೆಗಳನ್ನು ಸದಸ್ಯರು ಹೇಳಿದ್ದಾರೆ. ಇವೊತ್ತಿನ ದಿವಸ ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅದನ್ನೂ ಕೂಡ ಒಂದೊಂದಾಗಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಹೋದ ಸಲ ಬಡ್ಜೆಟ್ಟಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಸಾಕಷ್ಟು ದುಡ್ಡು ಕೊಟ್ಟಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮತ್ತು ಸರ್ವೀಸಿಂಗ್ ಆಫ್ ಐ.ಪಿ. ಸೆಟ್ಸ್

ಇವುಗಳಿಗೆ, 1967-68ನೇ ಸಾಲಿನಲ್ಲಿ 500 ಗ್ರಾಮಗಳಿಗೆ ಮತ್ತು 15,100 ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ನಿರ್ಧರಿಸಿದ್ದೆವು. ಮತ್ತು 1968-69ನೇ ಸಾಲಿಗೆ ಇನ್ನೂ 200-300 ಹಳ್ಳಿಗಳಿಗೆ, ಮತ್ತು 8,000 ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಒಂದು ಟಾರ್ಗೆಟ್ ಇಟ್ಟುಕೊಂಡಿದ್ದೇವೆ. ಆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಸ್ವಲ್ಪ ಮಟ್ಟಿಗೆ ಜನರ ಸಹಾಯವೂ ಬೇಕು. ಅದಕ್ಕೋಸ್ಕರ ವಾಲಂಟರಿ ಕಾಂಟ್ರಿಬ್ಯೂಷನ್ ಸ್ಕೀಮನ್ನು ಹಾಕಿಕೊಂಡಿದ್ದೆವು. ಆದರೆ ಈ ವಾಲಂಟರಿ ಸ್ಕೀಮ್ ಬಗ್ಗೆ ಟೀಕೆ ಬಂದಿದ್ದರಿಂದ ಇದನ್ನು ತೆಗೆದುಬಿಡಬೇಕೆಂಬ ಅಭಿಪ್ರಾಯ ಬಂತು. ಆದುದರಿಂದ ಇದರ ಬಗ್ಗೆ ಏನು ಒಂದು ಉತ್ಸಾಹ ಇತ್ತು ಎಷ್ಟು ಮಾಡಬಹುದಾಗಿತ್ತೋ ಅಷ್ಟು ಆಗಿಲ್ಲ. ಈಗ ನಾವು ಏನು ಮಾಡಿಕೊಂಡಿದ್ದೇವೆ ಎಂದರೆ ಈ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮತ್ತು ಸರ್ವಿಸಿಂಗ್ ಆಫ್ ಐ.ಪಿ. ಸೆಟ್ಸ್‌ನ್ನು 1968-69 ರಲ್ಲಿ ಕಡಿಮೆ ಮಾಡಬಾರದು ಎಂದು ಇದ್ದೇವೆ. ಆದರೆ ನಾನು ಅಧಿಕಾರ ವಹಿಸಿಕೊಂಡ ಮೇಲೆ ಈ ವಾಲಂಟರಿ ಸ್ಕೀಂ ವಿತಡ್ರಾ ಮಾಡಿದ್ದೇವೆ. ಈಗ ವಾಲಂಟರಿ ಸ್ಕೀಂ ಇಲ್ಲ. ಅದೇ ರೀತಿಯಾಗಿ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು, ನಮ್ಮ ರೈತರಿಗೆ ಸುಖ ಸಿಕ್ಕಬೇಕು ಅವರಿಗೆ ಸಕಾಲದಲ್ಲಿ ಅನುಕೂಲತೆ ಕೊಡಬೇಕು ಎಂದು ಹೋದ ವರ್ಷ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವೋ, ಅದರ ಟಾರ್ಗೆಟ್ ಜಾಸ್ತಿ ಮಾಡಿದ್ದೇವೆ. ಅದರಂತೆ 1968-69ರಲ್ಲಿ 8 ಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊಡಲು ಏನು ಒಂದು ಟಾರ್ಗೆಟ್ ಇತ್ತೋ ಅದನ್ನು 20 ಸಾವಿರಕ್ಕೆ ಏರಿಸಲು ನಿರ್ಧರಿಸಿದ್ದೇವೆ. ಮತ್ತು 200-250 ಹಳ್ಳಿಗಳಿಗೆ ಕೊಡಬೇಕೆಂದು ಏನು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೆವೋ ಅದನ್ನು 500 ಹಳ್ಳಿಗಳಿಗೆ ಏರಿಸಬೇಕೆಂದು ನಿರ್ಧರಿಸಿದ್ದೇವೆ. ಅದಕ್ಕೆ ಬೇಕಾಗತಕ್ಕಂಥ ಹಣವನ್ನು ಷೆಡ್ಯೂಲ್ಡ್ ಬ್ಯಾಂಕುಗಳಿಂದ ಪಡೆಯಲು ಉದ್ದೇಶಿಸಿದ್ದೇವೆ. ಆ ರೀತಿ ಬ್ಯಾಂಕುಗಳಿಂದ ದುಡ್ಡು ಬಾರದೆ ಇದ್ದರೆ ಸರ್ಕಾರವರೇ ಕೊಡುತ್ತಾರೆ. ಎಂದು ನಾನು ಹೇಳಿದ್ದೇನೆ. ಈ ರೀತಿ ಅವರ ಕಷ್ಟವನ್ನು ಪರಿಹಾರ ಮಾಡುವುದಕ್ಕಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹೆಚ್ಚು ಹೆಚ್ಚು ಐ.ಪಿ.ಸೆಟ್ಟುಗಳನ್ನು ತೀವ್ರಗತಿಯಲ್ಲಿ ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಹೆಚ್ಚು ಹೆಚ್ಚು ಐ.ಪಿ.ಸೆಟ್ಟುಗಳನ್ನು ಒದಗಿಸಿದರೆ ಈ ಅಭಾವ ಸ್ವಲ್ಪ ಮಟ್ಟಿಗೆ ನಿವಾರಣೆ ಆಗಬಹುದು. ಅದಕ್ಕಾಗಿ ಈ ಒಂದು ಕಾರ್ಯಕ್ರಮ ಹಾಕಿಕೊಂಡರೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ :-

ಎಷ್ಟು ಬಾವಿಗಳಿಗೆ ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

20,000 ಬಾವಿಗಳಿಗೆ ಮತ್ತು 500 ಹಳ್ಳಿಗಳಿಗೆ ಈ ಒಂದು ಕಾರ್ಯಕ್ರಮವನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹಾಕಿಕೊಂಡಿದ್ದಾರೆ. ಈ ಒಂದು ಕಾರ್ಯಕ್ರಮ ಹಾಕಿಕೊಂಡರೆ ಜನರ ಕಷ್ಟವನ್ನು ಸ್ವಲ್ಪ ಮಟ್ಟಿಗೆ ಪೂರೈಸಬಹುದು ಈ ಪ್ರೋಗ್ರಾಂನ್ನು ಜಾಸ್ತಿ ಮಾಡಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ವಿಷಯದಲ್ಲಿ ಹೇಳಬೇಕಾದರೆ ಬೋರ್ಡ್‌ನವರಿಗೆ ಇದನ್ನು ಲಾಭಕರವಾಗಿ ಮಾಡುವುದಕ್ಕಾಗುವುದಿಲ್ಲ. ಅವರು ಇದರಿಂದ ನಷ್ಟವಾಗುತ್ತದೆ ಆ ನಷ್ಟವನ್ನು ತುಂಬಿಕೊಡಬೇಕು

ಎಂದು ಹೇಳುತ್ತಾರೆ. ಆದುದರಿಂದ ಇದನ್ನು ಪರಿಶೀಲಿಸಬೇಕಾಗಿದೆ, ಈ ಕೆಲಸ ಎಲ್ಲಾ ಕಡೆಯೂ ಚೆನ್ನಾಗಿ ಎಲ್ಲಾ ಕಡೆಯೂ ಚೆನ್ನಾಗಿ ನಡೆಯುತ್ತಾ ಇದೆ. ಆದರೆ ಸದಸ್ಯರು ತಮ್ಮ ಭಾಷಣದಲ್ಲಿ ಸಾಕಷ್ಟು ವೇಗದಿಂದ ನಡೆಯುತ್ತಾ ಇಲ್ಲ ಎಂದು ಹೇಳಿದರು. ಕೆಲವು ಕಡೆ ಮಂದಗತಿಯಲ್ಲಿ ನಡೆಯುತ್ತಾ ಇದೆ. ಕೆಲವು ಕಡೆ ಲೋಪದೋಷ ಇದೆ ಎಂದು ನನ್ನ ಗಮನಕ್ಕೆ ಬರುತ್ತಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ವಿಚಾರ ಇದೆ.

ಇನ್ನೊಂದು ಮಾತು ಏನೆಂದರೆ ಇವೊತ್ತಿನ ದಿವಸ ಕೇಂದ್ರ ಸರ್ಕಾರವನ್ನು ದೋಷಾರೋಪಣೆ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರದವರಿಗೆ ನಾವು ನಿಜವಾಗಿಯೂ ಆಭಾರಿಯಾಗಬೇಕಾಗಿದೆ. ಕೇಂದ್ರ ಸರ್ಕಾರದವರು ಈ ಪರಿಸ್ಥಿತಿಯನ್ನು ಮೊದಲೇ ಅರಿತು ನಮಗೆ ಎಷ್ಟರಮಟ್ಟಿಗೆ ಸಹಾಯ ಮಾಡುವುದಕ್ಕೆ ಅವಕಾಶ ಇದೆಯೋ ಅದಕ್ಕೆ ಒಂದು ಸೆಂಟ್ರಲ್ ಟೀಮನ್ನು ಕಳುಹಿಸಿ ನಮ್ಮ ಪರಿಸ್ಥಿತಿಯನ್ನೂ ಅರಿತುಕೊಂಡು ಅದರ ಪ್ರಕಾರ $8^1/_2$ ಕೋಟಿ ರೂಪಾಯಿ ಬೇಕು ಎಂದು ಕೇಳಿದ್ದರಲ್ಲಿ ಮೊದಲು $2^1/_2$ ಕೋಟಿ ರೂಪಾಯಿಯನ್ನು ಕೊಟ್ಟರು. ಅದರಲ್ಲಿ ಮೊದಲು ಒಂದು ಕೋಟಿ ರೂಪಾಯಿ ಅನಂತರ 50 ಲಕ್ಷ ರೂಪಾಯಿ ಇತ್ತೀಚೆಗೆ ಒಂದು ಕೋಟಿ ರೂಪಾಯಿ ಈ ರೀತಿ ಈಗಾಗಲೇ $2^1/_2$ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇಷ್ಟಲ್ಲದೆ ಪರಿಹಾರ ಕಾಮಗಾರಿಗಳಿಗಾಗಿ ಮಾಡುವ ವೆಚ್ಚಕ್ಕೆ ಲೆಕ್ಕಪತ್ರಗಳನ್ನು ಒಪ್ಪಿಸಿದ ಮೇಲೆ ಇನ್ನೂ ಹೆಚ್ಚಿಗೆ ಬೇಕಾಗಿದ್ದರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಉಪ ಪ್ರಧಾನ ಮಂತ್ರಿಯವರೂ ಕೂಡ ಹೇಳಿದ್ದಾರೆ. ಈ ರೀತಿ ಎರಡೂವರೆ ಕೋಟಿ ರೂಪಾಯಿಯನ್ನು ಈಗಾಗಲೇ ರೈತರ ಕಷ್ಟ ಪರಿಹಾರವಾಗಬೇಕು, ಅವರಿಗೆ ಕೈತುಂಬ ಕೆಲಸ ಸಿಗಬೇಕು ಎಂದು ಡಿವಿಜಿನಲ್ ಕಮೀಷನರ ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಂಚಿಸಲು ಏರ್ಪಾಡನ್ನು ಮಾಡಿದೆ. ಆದರೆ ಹಣ ಹಂಚಿದ ಪ್ರಕಾರ ಯಾವ ರೀತಿ ಕೆಲಸ ನಡೆಯಬೇಕಾಗಿತ್ತೋ ಹಾಗೆ ಕೆಲಸವೂ ನಡೆಯಲಿಲ್ಲ. ಅಷ್ಟು ಹಣವೂ ಖರ್ಚಾಗಿಲ್ಲ. ಇವತ್ತಿನ ದಿವಸ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಏನು ಎರಡೂವರೆ ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆಯೋ, ಅದು ಇನ್ನೂ ಖರ್ಚಾಗಿಲ್ಲ. ಅದಲ್ಲದೆ ಅದರ ಲೆಕ್ಕ ಪತ್ರಗಳು ಇನ್ನೂ ನಮ್ಮಲ್ಲಿಗೆ ಬಂದಿಲ್ಲ. ಕೇಂದ್ರ ಸರ್ಕಾರಕ್ಕೆ ಈ ಲೆಕ್ಕಪತ್ರಗಳನ್ನು ಸಲ್ಲಿಸದಿದ್ದರೆ, ಇನ್ನೂ ಹೆಚ್ಚಿನ ಹಣ ಕೇಳುವ ಹಾಗಿಲ್ಲ. ಬಹಳ ಒಳ್ಳೆಯ ರೀತಿಯಿಂದ ಕೆಲಸ ಕಾರ್ಯಗಳು ನಡೆಯಬೇಕೆಂದು ನನ್ನ ಸಂಕಲ್ಪ. ಇವತ್ತಿನ ಪರಿಸ್ಥಿತಿಯಲ್ಲಿ ಏನು ಒದಗಿದೆ ಎಂದರೆ, ನಾವು ಇಲ್ಲಿ ಚರ್ಚೆ ಪ್ರಾರಂಭ ಮಾಡಿದ ಮೇಲೆ ಅಲ್ಲಲ್ಲಿ ಸ್ವಲ್ಪ ಮಳೆ ಬಂದಿದೆ, ಸರ್ವಸಾಧಾರಣವಾಗಿ ಈಗ ಅನೇಕ ಜಿಲ್ಲೆಗಳಲ್ಲಿ ಆಗಾಗ್ಗೆ ಮಳೆ ಬರುತ್ತಿದೆ. ಉತ್ತರ ಕರ್ನಾಟಕದಲ್ಲಿ ಈಗ ಮಳೆ ಬಂದರೆ ಬಹಳ ಒಳ್ಳೆಯದು. ಬಿತ್ತನೆಗೆ ಮಳೆ ಬಂದರೆ ಮುಂದೆ ತಂಪು ಗಾಳಿಯಿಂದ ಕೂಡ ಕೆಲವು ಬೆಳೆ ಆಗುತ್ತವೆ. ಇದು ಏನೇ ಇರಲಿ ಇವತ್ತಿನ ದಿವಸ ನಾವು ಒಂದು ಹದಗೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿರುತ್ತದೆ. ನಾನು ಮೊದಲೇ ಒಪ್ಪಿಕೊಂಡಿದ್ದೇನೆ, ಏನೆಂದರೆ, ನಮ್ಮಲ್ಲಿ ಆಗಬೇಕಾಗಿರತಕ್ಕ ಇನ್ನೂ ಅನೇಕ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಸದ್ಯಕ್ಕೆ ನಿಲ್ಲಿಸಿದರೂ ಚಿಂತೆಯಿಲ್ಲ, ಅವುಗಳಿಗೆ ಬದಲಾಗಿ ಇವತ್ತು ನಮ್ಮ ರೈತರಿಗೆ ಸಾಕಷ್ಟು ಪರಿಹಾರ ಕಾಮಗಾರಿಗಳನ್ನು ಒದಗಿಸಿಕೊಡಬೇಕಾಗಿದೆ, ಅವರ ಗೋಳನ್ನು ನೋಡುವುದಕ್ಕಾಗುವುದಿಲ್ಲ ಅವರನ್ನು ಈ ಕಾಲದಲ್ಲಿ ಕಷ್ಟಕ್ಕೆ ಈಡು ಮಾಡಬಾರದು, ಎಂಬುದಾಗಿ ಈ ರೀತಿ ನಾವು ಯಾವ ಒಂದು ಕಾರ್ಯಕ್ರಮವನ್ನು

ಹಾಕಿಕೊಂಡಿದ್ದೇವೆ, ಎಂಬುದನ್ನು ಈ ಕಾರ್ಯವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಬೇಕಾದರೆ, ನಮ್ಮ ಜಿಲ್ಲಾಧಿಕಾರಿಗಳನ್ನು ಡಿವಿಜನಲ್ ಕಮೀಶನರ್‌ಗಳೂ ಮತ್ತು ಅವರ ಕೈಕೆಳಗೆ ಇರುವಂತಹ ಅಸಿಸ್ಟೆಂಟ್ ಕಮೀಷನರುಗಳೂ, ತಹಸೀಲ್ದಾರರುಗಳೂ ಬಹಳ ಒಳ್ಳೆಯ ರೀತಿಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು) :-

ಸರ್ಕಾರದವರು ಈಗ ಕಂದಾಯವನ್ನು ಒಟ್ಟಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಇಂಥ ಕ್ಷಾಮದ ಪರಿಸ್ಥಿತಿಯಲ್ಲಿ ಒಂದೇ ಕಂತಿನಲ್ಲಿ ಕಂದಾಯ ಕೊಡಲು ರೈತನಿಗೆ ಬಹಳ ತೊಂದರೆಯಾಗಿದೆ.......

ಅಧ್ಯಕ್ಷರು :-

ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಅದು ಮುಗಿದ ನಂತರ ಪ್ರಶ್ನೆ ಕೇಳಬಹುದು.

ಶ್ರೀ ವೀರೇಂದ್ರ ಪಾಟೀಲ್ :-

ನನ್ನ ಒಂದು ವಿನಂತಿ ಏನೆಂದರೆ, ನಾನು ಹೇಳುವುದನ್ನೆಲ್ಲ ಹೇಳಿದ ಮೇಲೆ, ಬಹುಶಃ ಯಾವುದಾದರೂ ಪಾಯಿಂಟ್ಸ್ ಕವರ್ ಮಾಡದಿದ್ದರೆ, ಅದಕ್ಕೆ ಆಮೇಲೆ ಪ್ರಶ್ನೆ ಹಾಕಿದರೆ, ನಾನು ಉತ್ತರ ಕೊಡುತ್ತೇನೆ. ಮಧ್ಯದಲ್ಲಿ ಏನಾದರೂ ಕೇಳಿದರೆ ಯಾವ ವಿಚಾರವನ್ನು ನಾನು ಸಭೆಯ ಮುಂದಿಡಬೇಕೋ ಅದಕ್ಕೆ ತೊಡಕು ಉಂಟಾಗುತ್ತದೆಂದು ನನಗನಿಸುತ್ತದೆ. ಇನ್ನೂ ಬೇಕಾದರೆ ಒಂದು ಗಂಟೆ, ಎರಡು ಗಂಟೆ ಹೇಳುವುದಕ್ಕೆ ನಾನು ತಯಾರಾಗಿದ್ದೇನೆ. ಆದ್ದರಿಂದ ನನ್ನ ಉತ್ತರ ಮುಗಿದ ಮೇಲೆ, ತಾವು ಕೇಳಿ, ತಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುತ್ತೇನೆ.

ಆದರೆ ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ನನಗೆ ಗೊತ್ತಿದೆ. ಎಲ್ಲಿಯವರೆಗೆ ಹೀಗೆ ನಮ್ಮ ಸಿಬ್ಬಂದಿ ವರ್ಗ ಚೆನ್ನಾಗಿ ಕೆಲಸ ಮಾಡುವುದಿಲ್ಲವೋ, ಅಲ್ಲಿಯವರೆಗೆ ನಾವು ಎಷ್ಟು ದುಡ್ಡು ಕೊಟ್ಟರೂ ಅದು ಸದ್ವಿನಿಯೋಗವಾಗುವುದಿಲ್ಲ. ಸಕಾಲದಲ್ಲಿ ಯಾವ ಉದ್ದೇಶದಿಂದ ದುಡ್ಡು ಕೊಡುತ್ತೇವೋ, ಆ ಉದ್ದೇಶವನ್ನು ಸಾಧಿಸುವ ನಿರ್ಣಯಕ್ಕೆ ಬಂದಿದ್ದೇವೆ. ಈ ದಿವಸ ನಮ್ಮ ತಹಸೀಲ್ದಾರರಾಗಲಿ, ಅಸಿಸ್ಟೆಂಟ್ ಕಮೀಷನರರಾಗಲಿ, ಜಿಲ್ಲಾಧಿಕಾರಿಗಳಾಗಲಿ, ಅಥವಾ ಡಿವಿಜನಲ್ ಕಮಿಷನರಾಗಲಿ, ಈ ಒಂದು ಪರಿಸ್ಥಿತಿಯನ್ನು ಎದುರಿಸುವುದಕ್ಕೆ, ತಮ್ಮ ಉಳಿದ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಇದೇ ಕೆಲಸಕ್ಕೆ ತಮ್ಮ ಎಲ್ಲ ಕಾಲವನ್ನೂ ಸಂಪೂರ್ಣವಾಗಿ ಮೀಸಲಾಗಿಡಬೇಕು. ಬಹುಶಃ ಆ ರೀತಿ ನಡೆಯಬೇಕಾದರೆ, ಇದಕ್ಕೆ ನಮ್ಮ ಮೆಶಿನರಿ ಹೊಂದಾಣಿಕೆಯಾಗಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ಕೆಲವು ಕಡೆ ಅಧಿಕಾರಿಗಳ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ನಾನು ಒಂದು ನಿರ್ಣಯಕ್ಕೆ ಬಂದಿದ್ದೇನೆ. ಇವತ್ತಿನ ದಿವಸ, ಈ ಒಂದು ಸಂಧಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಾರೆಯೇ ಅಥವಾ ಇಲ್ಲವೋ ಎಂಬುದು ನೋಡಲು ಒಂದು ಪರೀಕ್ಷೆಯ ಕಾಲ. ಯಾವ ರೀತಿ ಈ ಪರಿಹಾರ ಕಾಮಗಾರಿಗಳನ್ನು ಚೆನ್ನಾಗಿ ಒಂದು ಹೆಚ್ಚಿನ ಮಟ್ಟದಲ್ಲಿ ಮಾಡಿ, ಜನರ ಹತ್ತಿರ ಹೋಗಿ ಅವರ ಕಷ್ಟ ಸುಖಗಳಿಗೆ ಪರಿಹಾರ

ಕಂಡುಹಿಡಿಯುತ್ತಾರೋ, ಅದರ ಮೇಲೆ ಅವರ ದಕ್ಷತೆಯನ್ನು ಅಳೆಯಬಹುದು ಎಂದು ಕೊಂಡಿದ್ದೇನೆ. ಎಲ್ಲೆಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ಆಗುವುದಿಲ್ಲವೋ, ಅಲ್ಲಿಂದ ಅವರನ್ನು ತೆಗೆದುಹಾಕಲು ನಾವು ಹಿಂದೆ ಮುಂದೆ ನೋಡುವುದಿಲ್ಲ. ನನಗೆ ಗೊತ್ತಿದೆ, ಅನೇಕ ಜಿಲ್ಲಾಧಿಕಾರಿಗಳು ಇಂಥ ಪರೀಕ್ಷಾ ಕಾಲದಲ್ಲಿ ಹಗಲು ರಾತ್ರಿ ದುಡಿಯಬೇಕೆಂಬ ಮನಸ್ಸು ಅವರಿಗಿಲ್ಲ. ಕೆಲವರಿಗೆ ದುರ್ದೈವದಿಂದ ಆರೋಗ್ಯವೂ ಚೆನ್ನಾಗಿರುವುದಿಲ್ಲ. ಅಂಥ ಪರಿಸ್ಥಿತಿ ಇರುವಾಗ ನಾವು ಅವರನ್ನು ತೆಗೆದು ಬೇರೆ ಕಡೆಗೆ ಹಾಕಲೇಬೇಕಾಗುತ್ತದೆ. ಅವರ ಅನುಕೂಲದ ಕಡೆಗೆ ನಾವು ಈ ದಿವಸ ನೋಡುವ ಹಾಗಿಲ್ಲ. ಅಲ್ಲಿ ರೈತರಿಗೆ ಪರಿಹಾರ ಸಿಗಬೇಕು, ಕೆಲಸ ಒಳ್ಳೆಯ ರೀತಿಯಿಂದ ಆಗಬೇಕು ಮತ್ತು ಜನರಿಗೆ ಸಂಪೂರ್ಣವಾಗಿ ಸಕಾಲದಲ್ಲಿ ಎಲ್ಲಾ ಅನುಕೂಲತೆಗಳು ಬರಬೇಕು ಎನ್ನುವ ದೃಷ್ಟಿಯಿಂದ ನಾವು ಕೆಲವು ಬದಲಾವಣೆ ಮಾಡಬೇಕಾದಂಥಹ ಅವಶ್ಯಕತೆ ಬರಬಹುದು. ನಾನು ಎಲ್ಲರನ್ನೂ ಒಂದು ಕಳಕಳಿಯಿಂದ ವಿನಂತಿ ಮಾಡಿಕೊಂಡು ಕೇಳಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಹೊರಗಿನವರು ಯಾರೂ ಹಸ್ತಕ್ಷೇಪ ಮಾಡದಿದ್ದ ಪಕ್ಷದಲ್ಲಿ ನಮ್ಮ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸಬಹುದು ಮತ್ತು ಜನರಿಗೆ ಪರಿಹಾರ ಕೊಡಬಹುದು ಎಂಬ ನಂಬಿಕೆ ನನಗೆ ಇದೆ. ಮತ್ತು ಇಲ್ಲಿಗೆ ಪ್ರತಿ ಜಿಲ್ಲೆಗಳಿಂದ ಸಾಕಷ್ಟು ಮಾಹಿತಿಗಳು ಬರುವುದಿಲ್ಲ ಮತ್ತು ಲೆಕ್ಕ ಪತ್ರಗಳು ಕೂಡ ಬರುವುದಿಲ್ಲ. ಈ ಬೆಂಗಳೂರಿನಲ್ಲಿ ನಮ್ಮ ಸೆಕ್ರೆಟರಿಯೇಟಿನಲ್ಲಿ ಒಂದು ಸ್ಪೆಷಲ್ ಸೆಲ್ ಕ್ರಿಯೇಟ್ ಮಾಡಬೇಕೆಂದು ನಿರ್ಣಯ ಮಾಡಿದ್ದೇನೆ. ಅದಕ್ಕೆ ಒಬ್ಬ ಸೀನಿಯರ್ ಡಿವಿಜನಲ್ ಕಮೀಷನರನ್ನು ಡಿಸ್ಟ್ರೆಸ್ ರಿಲೀಫ್ ಕಮೀಷನರ್ ಎಂದು ನಾಮಕರಣ ಮಾಡಿ ಅವರಿಗೆ ಸಂಪೂರ್ಣವಾದ ಜವಾಬ್ದಾರಿಯನ್ನು ಕೊಡುತ್ತೇವೆ. ಮತ್ತು ಅಲ್ಲಲ್ಲಿ ಪರಿಹಾರ ಕಾಮಗಾರಿಗಳು ಯಾವ ರೀತಿಯಾಗುತ್ತಾ ಇದೆ ಎಂದು ಪ್ರತಿ ಜಿಲ್ಲೆಯಲ್ಲಿ ಕೆಲಸ ಕಾರ್ಯಗಳನ್ನು ನೋಡಿಕೊಂಡು ಬರುವುದಕ್ಕೆ ಮತ್ತು ಆಗಿಂದಾಗ್ಗೆ ಸಲಹೆಗಳನ್ನು ಕೊಡುವುದಕ್ಕೆ ಮತ್ತೊಬ್ಬ ಸೀನಿಯರ್ ಐ.ಎ.ಎಸ್. ಆಫೀಸರನ್ನು ಹಾಕಿ ಸ್ಪೆಷಲ್ ಸೆಲ್ ಕ್ರಿಯೇಟ್ ಮಾಡಿದ್ದೇವೆ. ಈ ಒಂದು ಕಾರ್ಯಕ್ರಮ ಈಗಾಗಲೆ ಮಾಡಿದ್ದೇವೆ. ಇನ್ನು ಕೆಲಸಕಾರ್ಯಗಳನ್ನು ಚುರುಕಾಗಿ ಮಾಡಿಕೊಂಡು ಹೋಗಬಹುದು.

ಶ್ರೀ ಎಸ್. ಶಿವಪ್ಪ :-

ಫ್ಯಾಮಿನ್ ಕಮೀಷನರ್ ಎಂದು ಏಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್ :-

ಫ್ಯಾಮಿನ್ ಕಮೀಷನರ್ ಎಂಬುದು ಸರಿಯಲ್ಲ. ಎಲ್ಲಿಯವರೆಗೆ ಸ್ಥಿತಿಗತಿಗಳು ಇದೇ ರೀತಿಯಾಗಿ ಇರುತ್ತವೆಯೋ, ಅಲ್ಲಿಯವರೆಗೆ ಮಾತ್ರ ನಾವು ಸಹಕಾರದಿಂದ ಇರುತ್ತೇವೆ ಎನ್ನುವ ಭಾವನೆ ಜನರಿಗೆ ಕೊಡುವುದಿಲ್ಲ. ಈಗ ಇರುವುದು ಡಿಸ್ಟ್ರೆಸ್ ಫ್ಯಾಮಿನಲ್ಲ ಅಭಾವ ಪರಿಸ್ಥಿತಿ ಉಂಟಾಗಿರುವುದರಿಂದ ಡಿಸ್ಟ್ರೆಸ್ ರಿಲೀಫ್ ಕಮೀಷನರ್ ಎಂದು ನಾವು ಒಬ್ಬ ಡಿವಿಜನಲ್ ಕಮೀಷನರನ್ನು ಹಾಕಿದ್ದೇವೆ.

ಇವರ ಕೈಕೆಳಗೆ ಒಬ್ಬ ಸೀನಿಯರ್ ಐ.ಎ.ಎಸ್. ಆಫೀಸರನ್ನು ಹಾಕಿ ಒಂದು ಸೆಲ್ ಮಾಡಿ, ಇಡೀ ಸಂಸ್ಥಾನದಲ್ಲಿ ಎಲ್ಲೆಲ್ಲಿ ಏನೇನು ಕೆಲಸಗಳು ನಡೆಯುತ್ತಿವೆ, ಆ ಕೆಲಸ ಕಾರ್ಯಗಳಿಗೆ

ಪ್ರತಿಯೊಂದು ಜಿಲ್ಲೆಯಲ್ಲಿಯೂ ಹಣವನ್ನು ಸರಿಯಾಗಿ ಒದಗಿಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಸರ್ಕಾರಕ್ಕೆ ಆಗಿಂದಾಗ್ಗೆ ಒಂದು ವರದಿ ಒಪ್ಪಿಸಬೇಕೆಂಬ ಜವಾಬ್ದಾರಿಯನ್ನು ಆ ಸೆಲ್‌ಗೆ ವಹಿಸಿದ್ದೇವೆ. ಈ ಒಂದು ಮೆಷನರಿ ಪ್ರತ್ಯೇಕವಾಗಿ ಕ್ರಿಯೇಟ್ ಮಾಡುವ ಅವಶ್ಯಕತೆ ಏಕೆ ಬಂತು ಅಂದರೆ, ಎರಡೂವರೆ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಇನ್ನು ಮುಂದೆ ಖರ್ಚು ಮಾಡಬೇಕೆಂದಿದ್ದೇವೆ. ಹಣವಿಲ್ಲವೆಂದು ನಾವು ಹೇಳುವುದಿಲ್ಲ. ಜನರಲ್ಲಿ ಹಾಹಾಕಾರ ಇದ್ದಾಗೆ ಅನೇಕ ಜನರು ಕಷ್ಟದಲ್ಲಿರುವಾಗ ಜನರ ಗೋಳು ನಿವಾರಣೆಯಾಗಬೇಕು. ಅದಕ್ಕೆ ಬೇಕಾದಂಥ ಹಣವನ್ನು ಸಂಪೂಣವಾಗಿ ಒದಗಿಸುತ್ತೇವೆ. ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡರೆ ಈ ಎರಡೂವರೆ ಕೋಟಿ ರೂಪಾಯಿಗಳು ಸಾಲದು. ಅದನ್ನು ಇನ್ನೂ ಹೆಚ್ಚು ಮಾಡಬೇಕು. ಮುಂದಿನ ಎರಡು ತಿಂಗಳಲ್ಲಿ ಅಂದರೆ ಆಕ್ಟೋಬರ್ ಅಂತ್ಯದೊಳಗೆ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಈ ಬಾಬಿಗಾಗಿ ನಾವು ಖರ್ಚು ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಕೇಂದ್ರ ಸರ್ಕಾರದವರ ಸ್ಟಡಿ ಟೀಂ ಬಂದಿದ್ದರು. ಅವರಲ್ಲಿಯೂ ಚರ್ಚೆ ಮಾಡಿದ್ದೇವೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗರಿಗಳಿಗಾಗಿ ಮತ್ತು ಆ ಪ್ರದೇಶಗಳಲ್ಲಿ ಕಷ್ಟದಿಂದ ನರಳುತ್ತಾ ಇರತಕ್ಕ ಜನಗಳಿಗೆ ಕೊಡುವುದಕ್ಕಾಗಿ ಈ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಅದನ್ನು ಇಷ್ಟರಲ್ಲಿಯೇ ಎಲ್ಲಾ ಕಡೆಯೂ ಹಂಚುತ್ತೇವೆ. ಈ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಈ ರೀತಿಯಾಗಿ ಹಂಚಬೇಕೆಂದು ಉದ್ದೇಶ ಪಟ್ಟಿದ್ದೇವೆ. ರಿಲೀಫ್ ಕಾಮಗಾರಿಗಾಗಿ 150 ಲಕ್ಷ ರೂಪಾಯಿಗಳು, ಮೈನರ್ ಇರಿಗೇಷನ್ ವರ್ಕ್ಸ್‌ಗಾಗಿ 150 ಲಕ್ಷ ರೂಪಾಯಿಗಳು, ಫ್ರಿ ಡಿಸ್ಟ್ರಿ ಬ್ಯೂಷನ್ ಆಫ್ ಮೈಲೋಗಾಗಿ 48 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇಟ್ಟಿದ್ದೇವೆ. ಜನರು ಕಷ್ಟದಲ್ಲಿದ್ದಾರೆಂದು ಕೂಡಲೇ ಗಂಜಿ ಕೇಂದ್ರಗಳನ್ನು ತೆರೆಯುತ್ತೇವೆಂದು ಹೇಳಿದ್ದೇವೆ. ಅವರಿಗೆ ಮೈಲೋ ಅನ್ನು ಪುಕ್ಕಟೆಯಾಗಿ ಹಂಚುವ ವಿಚಾರ ಮಾಡಿದ್ದೇವೆ. ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬೈಂಡಿಂಗ್‌ಗೋಸ್ಕರ 36 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ಎಲ್ಲೆಲ್ಲಿ ಬಾವಿಗಳು ಇವೆಯೋ ಅವನ್ನು ಇನ್ನೂ ಡೀಪನ್ ಮಾಡುವುದಕ್ಕಾಗಿ ವ್ಯವಸ್ಥೆ ಮಾಡುತ್ತಿದ್ದೇವೆ. ನಮ್ಮಲ್ಲಿ ಬೋರಿಂಗ್ ಎಕ್ವಿಪ್‌ಮೆಂಟ್ಸ್ ಇಲ್ಲ. ಅದಕ್ಕೋಸ್ಕರ 25 ಲಕ್ಷ ರೂಪಾಯಿಗಳನ್ನು ಬೋರಿಂಗ್ ಎಕ್ವಿಪ್‌ಮೆಂಟ್ಸ್‌ನ್ನು ಖರೀದಿ ಮಾಡುವುದಕ್ಕೆ ಇಟ್ಟಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಮಗೆ 20 ಇಂಪೋರ್ಟೆಡ್ ರಿಗ್ಸ್ ಪರ್ಚೇಜ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂಬುದಾಗಿ ನಾನು ಈಗಾಗಲೇ ಕೇಳಿದ್ದೇನೆ. ಅವುಗಳಿಂದ ದಿನಕ್ಕೆ ಒಂದೊಂದು ಬಾವಿಯನ್ನು ತಯಾರು ಮಾಡಬಹುದು. ಆದರಿಂದ 150 ಅಡಿಯಿಂದ 200 ಅಡಿಯವರೆಗೂ ಆಳ ತೋಡುವುದಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಎರಡು ವಾಲಂಟರಿ ಆರ್ಗನೈಜೇಷನ್ನುಗಳು ಆ ಕೆಲಸವನ್ನು ಮಾಡುತ್ತಿವೆ. ಬಾಗಲಕೋಟೆಯ ಹತ್ತಿರ ಮತ್ತು ಬೆಂಗಳೂರಿನ ಹತ್ತಿರ ಆ ರಿಗ್ಸ್ ಕೆಲಸ ಮಾಡುತ್ತಿವೆ. ಆದರೆ ಅವು ನಮ್ಮ ದೇಶದಲ್ಲಿ ಸಿಗುವುದಿಲ್ಲ. ಅದಕ್ಕಾಗಿ ಎರಡನೆಯ ದೇಶದಿಂದ ಅವನ್ನು ತರಿಸಿಕೊಳ್ಳಬೇಕಾಗುತ್ತದೆ. 20 ರಿಗ್ಸ್‌ನ್ನು ತರಿಸಿಕೊಳ್ಳುವುದಕ್ಕೆ ಪರವಾನಿಗೆ ಕೊಡಬೇಕೆಂದು ಕೇಳಿದ್ದೇವೆ. ಅಲ್ಲದೆ ಇದಕ್ಕೆ ಬೇಕಾದ ಫಾರಿನ್ ಎಕ್ಸಚೇಂಜು ರಿಲೀಜ್ ಮಾಡಿಕೊಡಿ ಎಂಬುದಾಗಿ ಕೇಳಿದ್ದೇವೆ. ನಿನ್ನೆ ಉಪ ಪ್ರಧಾನ ಮಂತ್ರಿಗಳು ಬಂದಿದ್ದರು. ಅವರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದರಿಂದ ಮಾನ್ಯ ಸದಸ್ಯರಿಗೆ

ಗೊತ್ತಾಗುತ್ತದೆ. ಈಗ ಎರಡೂವರೆ ಕೋಟಿ ಮತ್ತೆ 4 ಕೋಟಿ ಒಟ್ಟು ಸೇರಿ ಆರೂವರೆ ಕೋಟಿ ರೂಪಾಯಿಗಳನ್ನು ಅಕ್ಟೋಬರ್ ಅಂತ್ಯದೊಳಗೆ ಖರ್ಚು ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇನ್ನು ತಾಲ್ಲೂಕು ರಿಲೀಫ್ ಕಮಿಟಿಗಳು ಎಲ್ಲೆಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಬಹುಶಃ ನಿರ್ಣಯ ಮಾಡುತ್ತಾರೆ. ಆ ರೀತಿಯಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಬೇಕಾದಷ್ಟು ಹಣವನ್ನು ಈಗಾಗಲೇ ಕೊಡುತ್ತಿದ್ದೇವೆ. ಇಷ್ಟೇ ಮಾಡಿದರೆ ಸಾಲದು ಎಂದು ಮೈನರ್ ಇರಿಗೇಷನ್ ಕೆಲಸಗಳನ್ನೂ ಅದಷ್ಟು ಜಾಗ್ರತೆಯಾಗಿ, ಚುರುಕಾಗಿ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಇನ್ನು ಸ್ಪಿಲ್ಲೋವರ್ ವರ್ಕ್ಸ್ ಎಂಬುದಾಗಿ ಇನ್ನೂ 1,806 ಕೆಲಸಗಳಿವೆ. ಅದಕ್ಕೆ 10 ಕೋಟಿ 50 ಲಕ್ಷ ರೂಪಾಯಿಗಳು ಅವನ್ನು ಪೂರ್ತಿಯಾಗಿ ಮುಗಿಸುವುದಕ್ಕೆ ಬೇಕಾಗುತ್ತದೆ. ಆ ಕೆಲಸಗಳೂ ಸಹ ನಡೆಯುತ್ತಿವೆ. 1968 ನೇ ಇಸವಿ ಫೆಬ್ರವರಿ 15 ಕ್ಕೆ 110 ಹೊಸ ಕಾಮಗಾರಿಗಳನ್ನು ಮಂಜೂರು ಮಾಡಿದ್ದೇವೆ. ಈ ಬಾಬಿಗೆ 276.38 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಇನ್ನೂ 20 ಇತರ ಕೆಲಸಗಳನ್ನು ಮಾಡುವುದಕ್ಕಾಗಿ 76 ಲಕ್ಷ 64 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಹೀಗೆ 3 ಕೋಟಿ 53 ಲಕ್ಷ ಖರ್ಚಾಗುವಂಥ 130 ಹೊಸ ಕಾಮಗಾರಿಗಳನ್ನು ಈಗಾಗಲೇ ಮಂಜೂರು ಮಾಡಿದ್ದೇವೆ. ಅಲ್ಲದೆ ನಮ್ಮ ಚೀಫ್ ಇಂಜನಿಯರುಗಳಿಗೇ ಒಂದು ಅಧಿಕಾರ ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಷ್ಟದ ಪರಿಸ್ಥಿತಿ ಅಭಾವ ಪರಿಸ್ಥಿತಿ ಇದೆಯೋ ಅಂತಹ ಪ್ರದೇಶಗಳಲ್ಲಿ ಸುಮಾರು 2 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳು ಸರ್ಕಾರಕ್ಕೆ ಬರಲಾರದೆ ಅವರೇ ಅವನ್ನು ಮಂಜೂರು ಮಾಡಬೇಕೆಂದು ಅಧಿಕಾರ ಕೊಟ್ಟಿದೆ. ಅವರು ಅನೇಕ ಕೆಲಸಕಾರ್ಯಗಳನ್ನು ಮಂಜೂರು ಮಾಡುತ್ತಾರೆ. ಅದರ ಪ್ರಕಾರ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್, ಟೆಕ್ನಿಕಲ್ ಸ್ಯಾಂಕ್ಷನ್ ಮುಂದಾಗಿ ಕೊಟ್ಟು ಏಜೆನ್ಸಿಯನ್ನು ನಿಗದಿ ಮಾಡುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಈ ರೀತಿಯಾಗಿ ಖರ್ಚು ಮಾಡಿದರೆ ಇನ್‌ಫ್ರಕ್ಚುಯಸ್ ಎಕ್ಸ್‌ಪೆಂಡಿಚರ್ ಆಗುವುದಿಲ್ಲ. ಕಾಂಟೂರ್ ಬಂಡಿಂಗ್ ಸಲುವಾಗಿ ಸಾಯಲ್ ಕನ್‌ಸರ್‌ವೇಷನ್ ಸಲುವಾಗಿ, ಇರಿಗೇಷನ್ ಸಲುವಾಗಿ, ಮೈನರ್ ಇರಿಗೇಷನ್ ಸಲುವಾಗಿ ಖರ್ಚುಮಾಡಬೇಕೆಂದು ಲೆಕ್ಕಹಾಕಿ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಸರ್ಕಾರದವರು ಎಷ್ಟು ಕೆಲಸಗಳನ್ನು ಮಂಜೂರು ಮಾಡಿದ್ದಾರೆಂಬುದನ್ನು ಮೇಲೇಯೇ ಹೇಳಿದ್ದೇನೆ. ಈ ಕೆಲಸಗಳನ್ನು ಇಲಾಖೆಗಳ ಮೂಲಕ ಡಿಸ್ಟ್ರಿಕ್ಟ್ ಷೆಡ್ಯೂಲ್ ರೇಟಿನಲ್ಲಿ ಮತ್ತು ಪೀಸ್ ವರ್ಕ್ಸ್ ಮೇಲೆ ಕೂಡಲೇ ಪ್ರಾರಂಭ ಮಾಡಬೇಕೆಂದು ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ 67-68 ಮತ್ತು 68-69 ನೇ ಸಾಲಿನ ಕೆಲವು ಬಡ್ಜೆಟೆಡ್ ವರ್ಕ್ಸ್ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ನಿಗೆ ಸರ್ಕಾರಕ್ಕೆ ಬರಬೇಕಾಗಿಲ್ಲ, ಚೀಫ್ ಇಂಜನಿಯರುಗಳೇ ಅಂತಹುಗಳನ್ನು ಮಂಜೂರು ಮಾಡಬಹುದೆಂಬ ಅಧಿಕಾರವನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಾಮಗಾರಿಗಳು ಅರ್ಧಕ್ಕೆ ನಿಂತು ಹೋಗಿರುತ್ತವೋ, ಮೈನರ್ ಇರಿಗೇಷನ್ ಸ್ಕೀಮುಗಳು ಅರ್ಧಂಬರ್ಧವಾಗಿಯೋ, ಎಲ್ಲೆಲ್ಲಿ ಕಂಟ್ರಾಕ್ಟರುಗಳು ಕೆಲಸಗಳನ್ನು ಪೂರ್ತಿಯಾಗಿ ಮಾಡದೇ ಬಿಟ್ಟಿರುತ್ತಾರೋ ಅವುಗಳನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಪ್ರಾರಂಭ ಮಾಡಬೇಕು ಮತ್ತು ಪೀಸ್ ವರ್ಕ್ಸ್ ಮೇಲೆ ಡಿಸ್ಟ್ರಿಕ್ಟ್ ಷೆಡ್ಯೂಲ್ಡ್ ರೇಟ್ ಪ್ರಕಾರ ಪ್ರಾರಂಭ ಮಾಡಿ ಎಂಬುದಾಗಿ ಹೇಳಿದ್ದೇವೆ. ಈ ರೀತಿ ಅಧಿಕಾರ ಕೊಟ್ಟಿದ್ದೇವೆ.

ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಆದರೆ ಅನೇಕ ಹೊಸ ಕಾಮಗಾರಿಗಳನ್ನು ಮೈನರ್ ಇರಿಗೇಷನ್ನಿನಲ್ಲಿ ತೆಗೆದುಕೊಳ್ಳುವುದಕ್ಕೆ ಕಷ್ಟವಿದೆ. ಏಕೆಂದರೆ ನಾವು ಸೀಲಿಂಗ್ ಲಿಮಿಟ್ಟನ್ನು ಹಾಕಿದ್ದೇವೆ. ಅದೇನೆಂದರೆ ನಾನ್ ಏರಿಡ್ ರೀಜಿಯನ್‌ನಲ್ಲಿ ಕೆಲಸಗಳು 50 ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ವರಮಾನ ಶೇಕಡ 2 ರಷ್ಟು ಮತ್ತು ಏರಿಡ್ ರೀಜಿಯನ್ನಿನಲ್ಲಿ ವರಮಾನ ಶೇಕಡ 1 ರಷ್ಟು ಬರಬೇಕೆಂದಿದೆ. ನಾನ್ ಏರಿಡ್ ರೀಜಿಯನ್‌ನಲ್ಲಿ ಕೆಲಸಗಳು 50 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇದ್ದರೆ ವರಮಾನ ಶೇಕಡ 3 ರಷ್ಟು ಮತ್ತು ಏರಿಡ್ ರೀಜಿಯನ್‌ನಲ್ಲಿ ವರಮಾನ ಶೇಕಡ 2 ರಷ್ಟು ಬರಬೇಕೆಂದಿದೆ. ಆದರೆ ಅನೇಕ ಕೆಲಸ ಕಾರ್ಯಗಳಿಗೆ ಆ ರೀತಿ ರಿಟರ್ನ್ ಬಾರದೇ ಇರುವುದರಿಂದ ಅನೇಕ ಇಂಜನಿಯರುಗಳು ಅದನ್ನು ಕಡಿಮೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅಲ್ಲದೆ ಕನ್‌ಸ್ಟ್ರಕ್ಷನ್ ಕಾಸ್ಟ್ ಪರ್ ಎಕರ್ ಹೆಚ್ಚಾಗುತ್ತಾ ಇರುವುದರಿಂದ ಅವನ್ನು ಜಾಸ್ತಿ ಮಾಡಬೇಕೆಂದು ಸರ್ಕಾರದ ಪರ್ಮಿಷನ್ ಕೇಳುತ್ತಿದ್ದಾರೆ. ಮೊನ್ನೆ ತಾನೇ ಸರ್ಕಾರದವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಏಕರೇಜ್ ಕಾಸ್ಟ್ ಸಾವಿರ ರೂಪಾಯಿಗಳ ಲಿಮಿಟ್ಟನ್ನು 1500 ರೂಪಾಯಿಗಳಿಗೆ ಏರಿಸಿದ್ದೇವೆ. ನೂರು ಎಕರೆಗಳು ಮತ್ತು ಅದಕ್ಕಿಂತ ಜಾಸ್ತಿ ಇದ್ದರೆ, 1250 ರೂಪಾಯಿಗಳ ಲಿಮಿಟ್ಟನ್ನು 1500 ರೂಪಾಯಿಗಳಿಗೆ ಏರಿಸಿದ್ದೇವೆ. ರೆಸ್ಟೋರೇಷನ್ ಕಾಸ್ಟ್ ಮೊದಲು 700 ರೂಪಾಯಿಗಳಿತ್ತು. ಅದನ್ನು ಈಗ ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ನಾನ್ ಏರಿಡ್ ರೀಜನ್‌ನಲ್ಲಿ ಶೇಕಡ 25 ರಷ್ಟು ರಿಟರ್ನ್ ಬಂದರೆ ಸಾಕು. ಏರಿಡ್ ರೀಜನ್‌ನಲ್ಲಿ ಶೇಕಡ 25 ರಷ್ಟು ಬಂದರೆ ಸಾಕು. 100 ಎಕರೆಗಳು ಮತ್ತು ಅದಕ್ಕಿಂತ ಜಾಸ್ತಿಯಾಗಿದ್ದರೆ ನಾನ್ ಏರಿಡ್ ರೀಜನ್‌ನಲ್ಲಿ ಶೇಕಡ 1 ರಷ್ಟು ಏರಿಡ್ ರೀಜನ್‌ನಲ್ಲಿ ಶೇಕಡ 7 ರಷ್ಟು ರಿಟರ್ನ್ ಬಂದರೆ ಸಾಕು. ಅದು ಮೊದಲು ಶೇಕಡ 3 ರಷ್ಟು ಮತ್ತು ಶೇಕಡ 2 ರಷ್ಟು ಇತ್ತು. ಈಗ ರೀಟರ್ನ್ ಶೇಕಡ 7 ರಷ್ಟು ಬಂದರೆ ಸಾಕು ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ :-

ಈ ವಿಚಾರವನ್ನು ಇಂಜನಿಯರುಗಳಿಗೆ ತಿಳಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಚೀಫ್ ಇಂಜನಿಯರುಗಳು ಮಾತನಾಡಿ ಈ ರೀತಿ ಕೊಟ್ಟರೆ ಯಾವ ಕೆಲಸ ಬೇಕಾದರೂ ಮಂಜೂರು ಮಾಡುವುದಕ್ಕೆ ಸಾಧ್ಯ. ಬಡ್ಜೆಟ್ಟಿನಲ್ಲಿ ಹಣವನ್ನು ಇಟ್ಟಿದ್ದೀರಿ. ನಿಮ್ಮಲ್ಲಿ ಬರುವ ಹಾಗೆ ಇಲ್ಲ, ನಾವು ಅವನ್ನು ಮಂಜೂರು ಮಾಡುತ್ತೇವೆಂದು ಅವರು ಹೇಳಿದ ಪ್ರಕಾರ ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಕ್ಯಾಬಿನೆಟ್‌ನಲ್ಲಿ ಸರ್ಕಾರದ ಪರವಾಗಿ ನಿರ್ಣಯವನ್ನು ತೆಗೆದುಕೊಂಡಿದ್ದು ಏನೆಂದರೆ ಈ ಬಡ್ಜೆಟ್ಟಿನಲ್ಲಿ ನಮೂದಿಸಲಾಗಿರುವ ಅನೇಕ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದರೆ ಇವುಗಳ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಮತ್ತು ಟೆಕ್ನಿಕಲ್ ಮಂಜೂರಾತಿಗಾಗಿ ಅವು ಸರ್ಕಾರಕ್ಕೆ ಬರಬೇಕಾದ್ದಿಲ್ಲ. 5 ಲಕ್ಷ ರೂಪಾಯಿಗಳವರೆಗೆ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸೂಪರಿನ್‌ಟೆಂಡೆಂಟ್ ಇಂಜನಿಯರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. 15 ಲಕ್ಷ ರೂಪಾಯಿಗಳವರೆಗೆ

ಚೀಫ್ ಇಂಜನಿಯರು ಕೆಲಸ ಕಾರ್ಯಗಳಿಗೆ ಅಪ್ರೂವಲ್ ಕೊಟ್ಟು ಅವುಗಳನ್ನು ಪ್ರಾರಂಭ ಮಾಡಬಹುದು. ಅದು ಸರ್ಕಾರಕ್ಕೆ ಬರುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದೇವೆ. ಪ್ರತಿಯೊಂದು ಕೆಲಸಕ್ಕೂ ಸರ್ಕಾರದ ಹತ್ತಿರ ಬಂದರೆ ನಿಧಾನವಾಗುತ್ತದೆ ಎಂದು ಅಧಿಕಾರಿಗಳಿಗೆ ಎಷ್ಟು ಕೆಲಸಗಳನ್ನು ತೆಗೆದುಕೊಂಡು ಮಾಡಬೇಕೆಂದು ಮನಸ್ಸು ಇದೆಯೋ ಅಷ್ಟು ಕೆಲಸಗಳನ್ನೂ ಅವರು ಮಾಡಿಸಬಹುದು, ಎನ್ನುವ ದೃಷ್ಟಿಯಿಂದ ಈ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಎರಡು ಕೋಟಿ ರೂಪಾಯಿಗಳ ಕೆಲಸಕಾರ್ಯಗಳನ್ನು ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾದಲ್ಲಿ ಯಾವ ಯಾವ ಕೆಲಸಗಳ ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಿವೆಯೋ ಅವುಗಳನ್ನು ಜಾಗ್ರತೆಯಾಗಿ ಅಲ್ಲಲ್ಲೆ ಮಂಜೂರು ಮಾಡಿ ಕೆಲಸವನ್ನು ತ್ವರಿತವಾಗಿ ಪ್ರಾರಂಭಿಸಬೇಕೆಂದು ಅದರ ಸಂಪೂರ್ಣ ಅಧಿಕಾರವನ್ನು ಚೀಫ್ ಇಂಜನಿಯರಿಗೆ ಕೊಟ್ಟಿದ್ದೇವೆ. ಮುಂದಿನ ಅಕ್ಟೋಬರ್ ತಿಂಗಳ ಅಂತ್ಯದೊಳಗೆ ಈಗಾಗಲೇ ಖರ್ಚು ಮಾಡಬೇಕೆಂದು ಉದ್ದೇಶಿಸಿರುವ ಎರಡು ಕೋಟಿ ರೂಪಾಯಿಗಳ ಜೊತೆಗೆ ಇನ್ನೂ, 4 ಕೋಟಿ 7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ತಡ ಮಾಡದೆ ಕೂಡಲೇ ಕೆಲಸಗಳನ್ನು ಪ್ರಾರಂಭ ಮಾಡುವಂತೆ ಹೇಳಿದ್ದೇವೆ. ಎಲ್ಲೆಲ್ಲಿ ತಕರಾರುಗಳು ಬಂದು ಕೆಲಸಕಾರ್ಯಗಳು ಆಗಿಲ್ಲವೋ ಅಂಥಾ ಕಡೆ ಅಧಿಕಾರಿಗಳಿಗೆ ಸಂಪೂರ್ಣವಾಗಿ ಪವರ್ಸ್ ಡಿಲಿಗೇಟ್ ಮಾಡಿ ಅವರು, ಆ ತಕರಾರುಗಳನ್ನು ಬಗೆಹರಿಸಿ ಕೆಲಸಗಳನ್ನು ಪ್ರಾರಂಭ ಮಾಡುವಂತೆ ಹೇಳಿದ್ದೇವೆ. ಈ ರೀತಿಯಾಗಿ ಇವೊತ್ತಿನ ಜನತೆಗೆ ಅನುಕೂಲ ಆಗಬೇಕು ಎನ್ನುವ ದೃಷ್ಟಿಯಿಂದ ನಾವು ಕೆಲಸ ಮಾಡುತ್ತಿದ್ದೇವೆ. ಮತ್ತು ಪರ್ಮನೆಂಟ್ ಮೇಜರ್ಸ್ ಬಗ್ಗೆ ಅನೇಕ ವಿಚಾರಗಳು ಸೂಚಿಸಲ್ಪಟ್ಟಿವೆ. ಇದಕ್ಕೆ ಸಂಬಂಧಪಟ್ಟ ಹಾಗೆ 40 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗುತ್ತಿದೆ. ಇದೇ ಫೈನಲ್ ರಿಪೋರ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಸಾಕಷ್ಟು ಪರಿಶೀಲನೆ ಮಾಡಬೇಕಾಗುತ್ತದೆ. ಪರ್ಮನೆಂಟ್ ರಿಲೀಫ್ ಮೆಜರ್ಸ್ ಹುಡುಕಬೇಕಾದರೆ ಯಾವ ಯಾವ ಏರಿಯಾದಲ್ಲಿ ಸಾಕಷ್ಟು ಮಳೆ ಬರುವುದಿಲ್ಲ. ಎಲ್ಲೆಲ್ಲಿ ಪದೇ ಪದೇ ಸ್ಕೇರ್ಸಿಟಿ ಉದ್ಭವವಾಗುತ್ತದೆ ಎಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದರ ಸಲುವಾಗಿ ಸಬ್‌ಸಾಯಿಲ್ ಕೆಲಸ ಪ್ರಾರಂಭ ಮಾಡಿದ್ದೇವೆ. ರಿಗ್ಸ್‌ಗಳನ್ನು ತರಿಸಿ ಹೆಚ್ಚಿನ ಪ್ರಮಾಣದಲ್ಲಿ ಬಾವಿಗಳನ್ನು ತೋಡಿಸಬೇಕೆಂದು ಕಾರ್ಯಕ್ರಮ ಇಟ್ಟು ಕೊಂಡಿದ್ದೇವೆ. ಹೆಚ್ಚಿನ ಮಟ್ಟದಲ್ಲಿ ಇರಿಗೇಷನ್ ವರ್ಕ್ಸ್‌ಗೆ ಪ್ರಾಶಸ್ತ್ಯ ಕೊಡಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಕಾಂಟೂರ್ ಬಂಡಿಂಗ್, ಸಾಯಿಲ್ ಕನ್‌ಸರ್‌ವೇಷನ್ ಕೆಲಸಕಾರ್ಯಗಳು ನಡೆಯುತ್ತಿವೆ. ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಸ್ಟೋರೇಜ್ ಟ್ಯಾಂಕ್ಸ್ ಮಾಡಬೇಕು. ಇದರಿಂದ ಯಾವಾಗಬೇಕಾದರೂ ನೀರು ಬರಬಹುದು. ಟ್ಯಾಂಕಿನಲ್ಲಿ ನೀರು ನಿಂತರೆ, ಭಾವಿಗಳನ್ನು ತೋಡಿಸಿದರೆ ಅನುಕೂಲವಾಗುತ್ತದೆ. ನಾವು ಈ ಎಲ್ಲಾ ಪರ್ಮನೆಂಟ್ ಮೆಜರ್ಸ್ ತೆಗೆದುಕೊಂಡರೆ ಇನ್ನು ಮುಂದೆ ನಮಗೆ ಕ್ಷಾಮ ಬರುವುದಿಲ್ಲ. ಈ ರೀತಿಯಾಗಿ ಒಂದು ಲಾಂಗ್‌ರೇಂಜ್ ಪ್ರೋಗ್ರಾಂ ಇಟ್ಟುಕೊಂಡು ಒಂದು ಪ್ಲಾನ್ ಪ್ರಾಜೆಕ್ಟ್ ತಯಾರು ಮಾಡಬೇಕು. ಅದನ್ನು ಈಗಾಗಲೇ ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ. ಈ ಹೊತ್ತು ದೇಶದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಈಗಾಗಲೇ ಎಲ್ಲೆಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕೈಗೊಂಡಿದ್ದೇವೆ. ಜನಗಳಿಗೆ

ಆಹಾರ ಧಾನ್ಯವನ್ನು ಒದಗಿಸತಕ್ಕ ವಿಚಾರದಲ್ಲಿ ನಾವು ಏನನ್ನು ವ್ಯವಸ್ಥೆ ಮಾಡಿದ್ದೇವೆ. ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇವೆ. ಇದರ ಬಗ್ಗೆ ಕೆಲವು ತತ್ವಗಳನ್ನು ನಾನು ಹೇಳಬೇಕಾದ್ದು ಅವಶ್ಯ. ಆಹಾರ ಧಾನ್ಯಗಳ ಬಗ್ಗೆ ಹೇಳಬೇಕಾಗಿದ್ದರೆ ಈಗಾಗಲೇ ಸರ್ಕಾರದವರು ಎಲ್ಲೆಲ್ಲಿ ಅವಶ್ಯಕವೋ ಅಲ್ಲಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ಅದರ ಸಮೀಪದ ಸ್ಥಳಗಳಲ್ಲಿ ತಾತ್ಕಾಲಿಕ ಆಹಾರ ಧಾನ್ಯ ಪೂರೈಕೆಯ ಅಂಗಡಿಗಳನ್ನು ಪ್ರಾರಂಭ ಮಾಡಿದ್ದೇವೆ. ಅದರ ಸಮೀಪದ ಸ್ಥಳಗಳಲ್ಲಿ ತಾತ್ಕಾಲಿಕ ಆಹಾರಧಾನ್ಯ ಪೂರೈಕೆಯ ಅಂಗಡಿಗಳನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದ್ದೇವೆ. ಎಲ್ಲೆಲ್ಲಿ ಈ ರೀತಿ ಆಹಾರ ಧಾನ್ಯದ ಅಂಗಡಿಗಳನ್ನು ತೆರೆಯಬೇಕೆಂಬ ಅವಶ್ಯಕತೆ ಇದೆಯೋ ಅಂಥಾ ಸ್ಥಳಗಳಲ್ಲಿ ಆ ಅಂಗಡಿಗಳನ್ನು ತೆರೆಯಲು ಡೆಪ್ಯುಟಿ ಕಮೀಷನರು ಅದಕ್ಕೆ ವ್ಯವಸ್ಥೆ ಮಾಡುತ್ತಾರೆ. ಈ ಮಾನ್ಯ ಸಭೆಗೆ ಇನ್ನೊಂದು ವಿಚಾರವನ್ನು ಹೇಳಬೇಕು ಎಂದರೆ ಈಗ ನಮ್ಮಲ್ಲಿ ಆಹಾರ ಧಾನ್ಯ ಸಾಕಷ್ಟು ಇದೆ. ಬಫರ್ ಸ್ಟಾಕ್ ಮುಖಾಂತರ ನಾವು ಆಹಾರ ಧಾನ್ಯವನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಮೈಲೋ ಮತ್ತು ಜೋಳವನ್ನು ಸಾಕಷ್ಟು ಪ್ರಮಾಣದಲ್ಲಿ ಇಟ್ಟುಕೊಂಡಿದ್ದೇವೆ. ಜನತೆಗೆ ಯಾವ ಯಾವ ಜಿಲ್ಲೆಗಳಲ್ಲಿ ಬೇಕಾಗುತ್ತದೆಯೋ ಆಯಾ ಜಿಲ್ಲೆಗೆ ಅದನ್ನು ಕಳುಹಿಸುವಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೂನ್, ಜುಲೈ, ಆಗಸ್ಟ್, ತಿಂಗಳಿನಲ್ಲಿ ನಮ್ಮ ಹತ್ತಿರ ಆಹಾರದ ಪರಿಸ್ಥಿತಿ ಹದಗೆಟ್ಟಿತ್ತು. ಅದಕ್ಕಾಗಿ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ನಮಗೆ ಕಷ್ಟ ಪರಿಸ್ಥಿತಿ ಉಂಟಾಗಿದೆ, ಅದಕ್ಕಾಗಿ ಹೆಚ್ಚಿನ ಮಟ್ಟದಲ್ಲಿ ನಮಗೆ ಆಹಾರ ಧಾನ್ಯಗಳನ್ನು ಸಹಾಯ ಮಾಡಬೇಕೆಂದು ಕೇಳಿದ್ದೆವು. ಅವರು ನಮಗೆ ಪ್ರತಿ ವರ್ಷ ಎಷ್ಟು ಕೋಟಾ ಕೊಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು ಎಂದು ನಾವು ಕೇಳಿದಾಗ ಕೇಂದ್ರ ಸರ್ಕಾರದವರು ಅದನ್ನು ಮಾನ್ಯ ಮಾಡಿ 10 ಸಾವಿರ ಟನ್ ಗೋಧಿ ಕೊಡುತ್ತಾ ಇದ್ದುದನ್ನು 30 ಸಾವಿರ ಟನ್ನಿಗೆ ಏರಿಸಿದ್ದಾರೆ. ಮೈಲೋ 5 ಸಾವಿರ ಟನ್ ಕೊಡುತ್ತಿದ್ದುದನ್ನು 15 ಸಾವಿರ ಟನ್ನಿಗೆ ಏರಿಸಿದ್ದಾರೆ. ಈ ರೀತಿ ಕೇಂದ್ರ ಸರ್ಕಾರದವರು ನಮಗೆ ಆಹಾರ ಧಾನ್ಯವನ್ನು ಸಹಾಯ ಮಾಡುತ್ತಾ ಇರುವುದರ ಜೊತೆಗೆ ಸ್ವಲ್ಪ ಮಟ್ಟಿಗೆ ಬಫರ್ ಸ್ಟಾಕ್ ಮಾಡಿಕೊಂಡಿರುವುದರಿಂದ ಆಹಾರದ ಬಗ್ಗೆ ಕಷ್ಟ ಬರುವುದಿಲ್ಲ. ಎಲ್ಲಾದರೂ ಜನತೆಗೆ ಆಹಾರಬೇಕು ಆಹಾರದ ಬಗ್ಗೆ ಕಷ್ಟ ಇದೆ ಎಂದರೆ ಅಲ್ಲಿಗೆ ಆಹಾರವನ್ನು ಕಳುಹಿಸುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಾಗಲೇ ಎಮರ್ಜೆನ್ಸಿ ಫೀಡಿಂಗ್ ಸೆಂಟರುಗಳನ್ನು ಮಾಡಿ ಅವುಗಳ ಮೂಲಕ 6 ಲಕ್ಷ ಜನಗಳಿಗೆ ಫೀಡಿಂಗ್ ಕಾರ್ಯಕ್ರಮ ನಡೆಯುತ್ತಿದೆ. ಇದರ ಜೊತೆಗೆ ಶಾಲಾ ಮಕ್ಕಳಿಗೆ ಕೂಡ ಎಮರ್ಜೆನ್ಸಿ ಫೀಡಿಂಗ್ ನಡೆಯುತ್ತಿದೆ. ಇನ್ನು ಮುಂದೆ ಒಟ್ಟು $9^1/_2$ ಲಕ್ಷ ಜನಗಳಿಗೆ ಎಮರ್ಜೆನ್ಸಿ ಫೀಡಿಂಗ್ ಪ್ರೋಗ್ರಾಮ್ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿಕೊಂಡಿದ್ದೇವೆ. ಎಲ್ಲೆಲ್ಲಿ ಜನತೆಗೆ ಕಷ್ಟ ಇದೆಯೋ ಅಂಥಾ ಕಡೆ ಉಚಿತವಾಗಿ ಒಂದು ಸಾವಿರ ಟನ್ ಮೈಲೋ ಅನ್ನು ಪ್ರತಿ ತಿಂಗಳು ಹಂಚುತ್ತಿದ್ದೇವೆ. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಭಾರತ ಸೇವಕ ಸಮಾಜದವರು 32 ಸಾವಿರ ಕ್ವಿಂಟಾಲ್ ಆಹಾರ ಧಾನ್ಯವನ್ನು ಜನಗಳಿಗೆ ಹಂಚತಕ್ಕ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಅದನ್ನು ಪ್ರಾರಂಭ ಮಾಡಿದ್ದಾರೆ. ಈ ರೀತಿಯಿಂದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಾವು ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ.

ಇನ್ನು ಕೆಲವು ಮಾನ್ಯ ಸದಸ್ಯರು ಲ್ಯಾಂಡ್ ರೆವಿನ್ಯೂ ವಿಚಾರವನ್ನು ಹೇಳಿದ್ದಾರೆ. ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ಬಗ್ಗೆ ಜನತೆ ಎಲ್ಲಿ ಕಷ್ಟದಲ್ಲಿದ್ದಾರೆ. ಅಲ್ಲಿ ಲ್ಯಾಂಡ್ ರೆವಿನ್ಯೂ ಸಸ್ಪೆಂಡ್ ಮಾಡಿ ಮುಂದಕ್ಕೆ ಹಾಕಿ ಎಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಒಂದು ವೇಳೆ ಎಲ್ಲೆಲ್ಲಿ ಲ್ಯಾಂಡ್ ರೆವಿನ್ಯೂ ರಿಮಿಷನ್ ಮಾಡುವ ಅವಶ್ಯಕತೆ ಇದೆಯೋ ಅಂಥಾ ಕಡೆ ರಿಮಿಷನ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ. ಇದರ ಬಗ್ಗೆ ಡಿಸ್‌ಕ್ರಿಷನ್ ಉಪಯೋಗಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಡೆಪ್ಯುಟಿ ಕಮೀಷನರಿಗೆ ವಹಿಸಿಕೊಡಲಾಗಿದೆ. ಈಗಾಗಲೇ 7 ಸಾವಿರ ಹಳ್ಳಿಗಳಲ್ಲಿ ಲ್ಯಾಂಡ್ ರೆವಿನ್ಯೂ ಸಸ್ಪೆಂಡ್ ಮಾಡಿದೆ. ಆಮೇಲೆ ಫ್ಲಡ್ಸ್ ಅಫೆಕ್ಟೆಡ್ ಏರಿಯಾ ಬಗ್ಗೆ ಮಾನ್ಯ ಸದಸ್ಯರು ಕೆಲವರು ಮಾತನಾಡಿದ್ದಾರೆ. ಒಂದು ಕಡೆ ಮಳೆ ಬಾರದೆ ಅನಾವೃಷ್ಟಿಯುಂಟಾಗಿ ಜನತೆ ಕಷ್ಟ ಪರಿಸ್ಥಿತಿಗೆ ಒಳಗಾಗಿದ್ದರೆ, ಇನ್ನೊಂದು ಕಡೆ ಎರಡು ಜಿಲ್ಲೆಗಳಲ್ಲಿ ಅತಿಯಾಗಿ ಮಳೆಯಾಗಿ ಪ್ರವಾಹ ಬಂದು ಜನ ಕಷ್ಟಕ್ಕೊಳಗಾಗಿದ್ದರೆ, ಅದರಲ್ಲಿ ಯಾರು ಯಾರು ಜೀವವನ್ನು ಕಳೆದುಕೊಂಡಿದ್ದಾರೆಯೋ ಅವರ ಸಂಸಾರಕ್ಕೆ ಒಂದೊಂದು ಸಾವಿರ ರೂಪಾಯಿ ಡಿಸ್‌ಕ್ರಿಷನರಿ ಗ್ರಾಂಟ್ ಕೊಟ್ಟಿದ್ದೇವೆ. ಇನ್ನೂ ಕೆಲವರಿಗೆ ಪ್ರವಾಹದಿಂದ ತೊಂದರೆಯಾಗಿರುವವರಿಗೆ ದುಡ್ಡನ್ನು ಹಂಚಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಪ್ರವಾಹದಿಂದ ನೊಂದವರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರದವರು ಕೇರಳಕ್ಕೆ ಒಂದು ಕೋಟಿ ರೂಪಾಯಿಗಳನ್ನು ಸಹಾಯ ಮಾಡಿದ್ದಾರೆ. ನಮ್ಮಲ್ಲಿ ಪ್ರವಾಹದಿಂದ ಕೇರಳದಲ್ಲಿ ಅನಾಹುತವಾಗಿರುವಷ್ಟು ಆಗದಿದ್ದರೂ ಎರಡು ಜಿಲ್ಲೆಗಳಲ್ಲಿ ಅನಾಹುತವಾಗಿದೆ. ಅದರ ಸಲುವಾಗಿ ನಮಗೆ ಸಹಾಯ ಮಾಡಬೇಕೆಂದು ನಾವು ಕೇಂದ್ರಕ್ಕೆ ಬರೆದುಕೊಂಡಿದ್ದೇವೆ. ನಾನು ಮೊನ್ನೆ ಪ್ರಧಾನಿಯವರ ಜೊತೆಯಲ್ಲಿ ಈ ವಿಷಯವನ್ನು ಚರ್ಚೆಮಾಡಿದ್ದೇನೆ. ಬಹುಶಃ ಅವರು ನಮಗೆ ಸಹಾಯ ಮಾಡಬಹುದು ಎನ್ನುವ ನಂಬಿಕೆ ನನಗೆ ಇದೆ. ಜನತೆ ಕಷ್ಟದಲ್ಲಿದ್ದಾರೆಂದು ಅದಕ್ಕೆ ಪರಿಹಾರವನ್ನು ಕೊಡಲು ಯಾವ ರೀತಿಯಿಂದ ಸಹಾಯ ಮಾಡಬೇಕೆಂದು ಡೆಪ್ಯುಟಿ ಕಮೀಷನರ ಜೊತೆಯಲ್ಲಿ ಚರ್ಚೆ ಮಾಡಿ ಆ ಸಹಾಯವನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಎಲ್ಲ ವಿಚಾರಗಳನ್ನೂ ಬಹುಶಃ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಮತ್ತು ನಮ್ಮ ಅಧಿಕಾರಿಗಳು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಾರೋ ಅವುಗಳನ್ನು ಕೈಗೊಳ್ಳುವಂತೆ ಮಾಡಿ ಜನಗಳಿಗಿರುವ ಕಷ್ಟವನ್ನು ಹೋಗಲಾಡಿಸುವುದಕ್ಕೆ ಏನೇನು ಮಾಡಬೇಕೋ ಅವನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

## 4. ವೈದ್ಯಕೀಯ ಸೇವೆಗಳ ನಿರ್ದೇಶಕರ ವಿರುದ್ಧದ ದೂರುಗಳ ಬಗ್ಗೆ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಹೇಳಿಕೆ. ( ವಿಧಾನ ಸಭೆ ನಡವಳಿಕೆ ದಿನಾಂಕ : 17-1-1969)

ಶ್ರೀ ವೀರೇಂದ್ರ ಪಾಟೀಲ್ ( ಮುಖ್ಯ ಮಂತ್ರಿಗಳು ) :-

ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರದ ಕಾಲದಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಅವರ ವರ್ತನೆ ಬಗ್ಗೆ ಮತ್ತು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಇವರು ಒಂದು ಡಿಪಾರ್ಟ್‌ಮೆಂಟಿನಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಕೆಲವು ದೂರುಗಳನ್ನು ಈ ಸಭೆಯ ಮುಂದೆ ಇಟ್ಟರು ಮತ್ತು ಬಹಳ ಜನ ಇದರ ಬಗ್ಗೆ ಆವೇಶದಿಂದ ಮಾತನಾಡಿದ್ದಾರೆ. ಈ ಸಮಯದಲ್ಲಿ ನಾನು ಮಧ್ಯದಲ್ಲಿ ಎದ್ದು ಈ ಸಭೆಯಲ್ಲಿ ಈ ಪ್ರಸಂಗದ ಬಗ್ಗೆ ಏನು ಒಂದು ಆಭಾಸ ಹರಡಿದೆ ಇದನ್ನು ಸ್ವಲ್ಪ ಮಟ್ಟಿಗೆ ಸಮಾಧಾನ ಮಾಡಬೇಕು ಎನ್ನುವ ಉದ್ದೇಶದಿಂದ, ಮಾತನಾಡಲು ಪ್ರಾರಂಭ ಮಾಡಿದೆ ಮತ್ತೆ, ಇದರಲ್ಲಿ ಬೇರೆ ಯಾವ ಉದ್ದೇಶವೂ ಇರಲಿಲ್ಲ. ಸರಕಾರಿ ಅಧಿಕಾರಿಗಳ ಜೊತೆಯಲ್ಲಿ ಯಾವ ರೀತಿಯಲ್ಲಿ ವ್ಯವಹರಿಸಬೇಕು ಎನ್ನುವುದಕ್ಕೆ ಕಾನೂನು ಕಾಯಿದೆಗಳು ಇವೆ ಎಂದು ಹೇಳುವುದಕ್ಕೆ ಹೊರಟಾಗ ಮಧ್ಯದಲ್ಲಿ ಕೆಲವು ಮಾನ್ಯ ಸದಸ್ಯರುಗಳು ತಾವು ಕುಳಿತುಕೊಳ್ಳಬೇಕೆಂದು ಹೇಳಿದರೂ ಕೂರದೆ ಅವರು ನೀವು ಸರಕಾರ ಬಿಡಿ, ನಾವು ಬಂದು ಕೂರುತ್ತೇವೆ. ಆಗ ನಾವು ಏನು ಮಾಡುತ್ತೇವೆ ಎನ್ನುವುದನ್ನು ನೋಡಿ ಎಂದು ಹೇಳಿದರು. ನಾನು ಈ ಸಮಯದಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ ಯಾರು ಮಂತ್ರಿಗಳೇ ಆಗಲಿ, ಮುಖ್ಯ ಮಂತ್ರಿಗಳೇ ಆಗಲೀ ಏನಾದರೂ ಒಂದು ಸ್ಟೇಟ್‌ಮೆಂಟು ಮಾಡಬೇಕಾದಾಗ ಆ ಸ್ಟೇಟ್‌ಮೆಂಟನ್ನು ಪೂರ್ತಿಯಾಗಿ ಕೇಳಿದ ಮೇಲೆ ತಮಗೆ ತಿಳಿದ ವಿಚಾರಗಳನ್ನು ವ್ಯಕ್ತ ಮಾಡಬಹುದು. ಆದರೆ ನಾವು ಸ್ಟೇಟ್‌ಮೆಂಟು ಮುಗಿಸುವುದರಲ್ಲೇ ಎಂದರೆ ಒಂದೆರಡು ವಾಕ್ಯಗಳು ಹೇಳಿದ್ದನ್ನು ಕೇಳಿದ ಕೂಡಲೇ ಒಂದು ನಿರ್ಣಯಕ್ಕೆ ಬಂದು ಈ ರೀತಿ ಮಾತನಾಡುವುದು ಸರಿಯಲ್ಲ ನಾನು ನನ್ನ ಹೇಳಿಕೆಯನ್ನು ಪ್ರಾರಂಭ ಮಾಡಿ 2-3 ನಿಮಿಷಗಳು ಕೂಡ ಆಗಲಿಲ್ಲ. ಅಷ್ಟರಲ್ಲೇ ಇಲ್ಲದ ಗಲಾಟೆಗಳು ಇಲ್ಲಿ ಪ್ರಾರಂಭವಾದವು. ಈ ಸಮಯದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದರು, ಇದರ ಬಗ್ಗೆ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಸ್ಟೇಟ್‌ಮೆಂಟು ಮಾಡಬೇಕು ಮತ್ತು ಸ್ಟೇಟ್‌ಮೆಂಟ್ ಮಾಡಲಿಕ್ಕೆ ಅವಕಾಶ ಕೊಡಬೇಕು ಎಂದು ಒಂದು ದೃಷ್ಟಿಯಿಂದ ನನಗೆ ಅವರು ಸಹಾಯಕವಾಗಿಯೇ ಈ ಪ್ರಸ್ತಾಪ ಮಾಡಿದರು. ಹಾಗೆ ಅವರು ಪ್ರಸ್ತಾಪ ಮಾಡುವಾಗ ಇಲ್ಲಿ ಒಬ್ಬರು ಮಂತ್ರಿಗಳು 'ಓಹೋ' ಎಂದು ಹೇಳಿದರು. ಹಾಗೆ ಹೇಳಿದ ಮೇಲೆ ಮಾನ್ಯ ಸದಸ್ಯರಾದ ಶ್ರೀ ಸಿದ್ಧವೀರಪ್ಪನವರು ಹಾಗೂ ಇನ್ನು ಕೆಲವು ಸದಸ್ಯರು ಮನಸ್ಸಿಗೆ ಬಂದಂತೆ ಒಂದು ಹಿಡಿತವಿಲ್ಲದೆ ಮಾತನಾಡಿದರು. 'ಓಹೋ' ಎನ್ನುವ ಪದ ಪಾರ್ಲಿಮೆಂಟರಿಯೇ ಇಲ್ಲ ಅನ್‌ಪಾರ್ಲಿಮೆಂಟರಿಯೇ ಎನ್ನುವುದರ ಬಗ್ಗೆ ಅಧ್ಯಕ್ಷರು ವಿಚಾರ ಮಾಡಿ ನಿರ್ಣಯ ಮಾಡಬೇಕು. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ ಬಹುಶಃ ಈ ಸಮಯದಲ್ಲಿ 'ಓಹೋ' ಎಂದು ಹೇಳುವುದು ಅಷ್ಟು ಸಮಯೋಚಿತವಲ್ಲ ಎಂದು ಇಷ್ಟು ಮಾತ್ರ ಹೇಳಬಲ್ಲೆ. ಆ ಶಬ್ದ ಅನ್ ಪಾರ್ಲಿಮೆಂಟರಿಯೇ

ಇಲ್ಲವೇ ಪಾರ್ಲಿಮೆಂಟರಿಯೇ ಎನ್ನುವುದರ ಬಗ್ಗೆ ತಾವು ಏನು ತೀರ್ಮಾನ ಕೊಡುತ್ತೀರೋ ಅದಕ್ಕೆ ನಾವು ತಲೆಬಾಗುವುದಕ್ಕೆ ತಯಾರಾಗಿದ್ದೇನೆ. ಒಟ್ಟಾರೆ ನಾನು ಹೇಳುವುದು ಇಂತಹ ಒಂದು ಘಟನೆಯ ಮೇಲೆ ಮಾನ್ಯ ಸದಸ್ಯರುಗಳು ಸುಮಾರು ಅರ್ಧಗಂಟೆ ಇಲ್ಲಿ ಇಲ್ಲದ ಗಲಾಟೆ ಗದ್ದಲಗಳನ್ನು ಮಾಡಿದುದಕ್ಕಾಗಿ ನಾನು ತುಂಬಾ ವಿಷಾದಪಡುತ್ತೇನೆ ಮತ್ತು ನನ್ನ ವಿಷಾದವನ್ನು ಇಲ್ಲಿ ವ್ಯಕ್ತಪಡಿಸಬೇಕಾಗಿ ಬಂದಿದೆ ಎಂದು ನಾನು ಹೇಳುತ್ತೇನೆ. ಇದೂ ಅಲ್ಲದೆ ಒಬ್ಬ ಮಂತ್ರಿಗಳು 'ಓಹೋ' ಎಂದು ಹೇಳಿದರೆಂದು ಇದರ ಬಗ್ಗೆ ಒಬ್ಬರು ಸದಸ್ಯರು ಹಾಗೂ ಇತರರು ಎದ್ದು ಮಾತನಾಡಿದುದು ಕೇಳಿ ಬಂತು. ಇದರಲ್ಲಿ ಒಬ್ಬರು ಮಾನ್ಯ ಸದಸ್ಯರು ಈ ಮಂತ್ರಿಗಳು ಅಧಿಕಾರದಲ್ಲಿ ಇರಲು ನಾಲಾಯಕ್ಕಾದವರು ಇವರನ್ನು ಅಧಿಕಾರದಿಂದ ಕೆಳಗಿಳಿಸಿ ಕತ್ತು ಹಿಡಿದು ನೂಕಬೇಕು, ಇತ್ಯಾದಿಯಾಗಿ ಹೇಳಿದುದನ್ನು ನಾನು ಕೇಳಿದೆ. ಬಹುಶಃ ಈ ಗಲಾಟೆಯಲ್ಲಿ ಇದು ರಿಕಾರ್ಡು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ಮಧ್ಯ ಮಧ್ಯ ರಿಕಾರ್ಡು ಮಾಡಬೇಡಿ ಎಂದು ಹೇಳುತ್ತಿದ್ದುದೂ ಕೇಳಿಬರುತ್ತಿತ್ತು.

ಶ್ರೀ ಎಸ್. ಶಿವಪ್ಪ ( ಶ್ರವಣಬೆಳಗೊಳ ) :-

ಈಗ ರಿಕಾರ್ಡಿಗೆ ಹೋಗಿರುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :-

ಮಂತ್ರಿ ಮಂಡಲವನ್ನು ಅವರು ಯಾವ ರೀತಿ ನೋಡಿಕೊಂಡು ಹೇಳಿದರೋ ನನಗೆ ತಿಳಿಯದು.

ಆ ರೀತಿ ' ಓಹೋ ' ಅಂದರೆ ಮಾನ್ಯ ಸದಸ್ಯರಿಗೆ ಎಷ್ಟು ನೋವಾಗಿರಬಹುದು ಅವರೇ ತಮ್ಮ ಆತ್ಮಸಾಕ್ಷಿಯಾಗಿ ವಿಚಾರ ಮಾಡಿಕೊಳ್ಳಲಿ. ಕತ್ತು ಹಿಡಿದು ಒಬ್ಬ ಮಂತ್ರಿಯನ್ನು ದೂಡಬೇಕು ಎಂದಾಗ ಆ ಮಂತ್ರಿಗಳ ಮನಸ್ಸಿಗೆ ಎಷ್ಟು ನೋವಾಗಿರಬಹುದು ಎನ್ನುವುದನ್ನು ಅವರೆ ಊಹೇ ಮಾಡಿಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ ( ಚಿಕ್ಕಪೇಟೆ ) :-

ಆ ಮಾತು ಯಾವಾಗ ಹೇಳಿದರು.

ಅಧ್ಯಕ್ಷರು :-

ಅವರು ಮಾತು ಮುಗಿಸಿದ ಮೇಲೆ ವಿಚಾರ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :-

ಅವರು ಮಾತು ಮುಗಿಸಿದ ಮೇಲೆ ನನಗೆ ಅವಕಾಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :-

ಒಬ್ಬ ಮೆಂಬರ್ ಮಾತನಾಡುವ ಕಾಲಕ್ಕೆ ಇನ್ನೊಬ್ಬ ಮೆಂಬರ್ ಎದ್ದು ಮಾತನಾಡಬಾರದು.

ಇದನ್ನು ಅವರು ವಿಚಾರ ಮಾಡಬೇಕು. ಒಬ್ಬ ಮಂತ್ರಿಯನ್ನು ಕತ್ತು ಹಿಡಿದು ಹೊರಗೆ ದೂಡಬೇಕು ಎಂದಾಗ ಇದು ಎಷ್ಟು ಮಟ್ಟಿಗೆ ಪಾರ್ಲಿಮೆಂಟರಿ ಇದೆ, ತಾವು ವಿಚಾರ ಮಾಡಿ. ಮತ್ತೊಮ್ಮೆ ನಾನು ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಾನ್ಯ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಬರುವ ಜವಾಬ್ದಾರಿ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಇದೆ. ನಮಗೆ ಅನೇಕ ವಿಚಾರಗಳಲ್ಲಿ ಒಂದೊಂದು ಸಲ ಆವೇಶ ಬರಬಹುದು. ಅಥವಾ ಆವೇಶ ಹೆಚ್ಚುವ ಪರಿಸ್ಥಿತಿ ಇರಬಹುದು. ಆದರೆ ಆ ಆವೇಶ ಬಂದಾಗ ನಾವು ಈ ಸಭೆಯ ಘನತೆ ಗೌರವಗಳಿಗೆ ಧಕ್ಕೆಯಾಗದಂತೆ, ಬಂಗ ಬರದಂತೆ ನೋಡಿಕೊಳ್ಳಬೇಕು. ಇದನ್ನು ನಮಗಿಂತಲೂ ಪೂರ್ವದಲ್ಲಿದ್ದ ಅನೇಕ ಗಣ್ಯ ನೇತಾ ಜನರು ಒಂದು ಒಳ್ಳೆಯ ಮಾರ್ಗದರ್ಶನ ಹಾಕಿಕೊಟ್ಟಿದ್ದಾರೆ. ಇದನ್ನು ಮರೆಯಬಾರದು. ಇದನ್ನು ನೆನಪು ಮಾಡಿಕೊಳ್ಳಬೇಕು. ಆ ರೀತಿ ನಡೆದುಕೊಂಡರೆ, ಬಹುಶಃ ಈ ಮನೆಯ ಕಾರ್ಯಕಲಾಪಗಳು ಸುಗಮವಾಗಿ ಸಾಗುವುದಕ್ಕೆ ಅನುಕೂಲವಾಗುತ್ತದೆ.

ಮುಂದುವರಿದು ನಾನು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಬಗ್ಗೆ ಹೇಳುತ್ತೇನೆ. ಈ ಡೆಮಾಕ್ರಸಿ ನಾನು ಒಪ್ಪಿಕೊಳ್ಳುತ್ತೇನೆ. ಕಾನ್‌ಸ್ಟಿಟ್ಯೂಷನ್ ಚೌಕಟ್ಟಿನೊಳಗೆ ನಡೆಯಬೇಕು ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ಸರ್ಕಾರದ ಕಾರ್ಯಭಾರಗಳು [illegible] ರೂಲ್ಸಿನ ಚೌಕಟ್ಟಿನೊಳಗೆ ನಡೆಯಬೇಕು. ಅಪ್ರೊತ್ತು ಏನಾದರೂ ಅಧಿಕಾರಿಗಳ ಮೇಲೆ ದೂರುಗಳನ್ನು ಮಾಡಬೇಕಾಗಿದ್ದರೆ, ಅದನ್ನು ಯಾವ ರೀತಿ ಮಾಡಬೇಕು, ಯಾವ ರೀತಿ ಪರಿಶೀಲನೆ ಮಾಡಬೇಕು, ಯಾವ ರೀತಿ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ರೂಲ್ಸ್ ಅಂಡ್ ರೆಗ್ಯುಲೇಷನ್ ಏನು ಇದೆ ಎಂದು ಹೆಲ್ತ್ ಮಿನಿಸ್ಟರ್‌ರವರನ್ನು ಕೇಳುತ್ತಿದ್ದೆ. ಮತ್ತು ಮೆಡಿಕಲ್ ಸರ್ವಿಸಸ್ ಅಧಿಕಾರಿಗಳ ಜೊತೆ ಮಾತನಾಡುತ್ತಿದ್ದಾಗ 10-15 ನಿಮಿಷದಲ್ಲಿ ಬಹಳ ಬಿಸಿಯಾದ ವಾತಾವರಣ ಉಂಟಾಯಿತು. ಏನಾದರೂ ದೂರುಗಳು ಬಂದಿವೆಯೇ ಎಂದು ಕೇಳಿದಾಗ, ಮೊನ್ನೆ ಮೊನ್ನೆ ಆ ಅಧಿಕಾರಿ ಚಾರ್ಜು ತೆಗೆದುಕೊಂಡಿದ್ದಾರೆ, ಅವರು ಪೂರ್ವದಲ್ಲಿ ಇದ್ದಂಥವರ ಮೇಲೆ ಏನಾದರೂ ದೂರುಗಳಿದ್ದರೆ, ಅವು ಗೊತ್ತಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೇನೆ. ನನ್ನ ಹತ್ತಿರ ಲಿಖಿತ ಮೂಲಕವೂ ಯಾವ ದೂರುಗಳೂ ಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಮನೆಯಲ್ಲಿ ಅನೇಕ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಈಗ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದು ಕೊಳ್ಳಬೇಕಾಗಿದ್ದರೆ ಅದಕ್ಕೆ ರೂಲ್ಸ್ ಇದೆ, ಪ್ರೊಸೀಜರ್ ಇದೆ ಅದರ ಪ್ರಕಾರ ಕ್ರಮ ತೆಗೆದು ಕೊಳ್ಳದೇ ಹೋದರೆ ಅವಾಗ ನಮ್ಮನ್ನು ಕೊಶ್ಚನ್ ಮಾಡುವುದಕ್ಕೆ ಅವಕಾಶ ಇದೆ. ಈ ಮಾನ್ಯ ಸಭೆಗೂ ಗೊತ್ತಿದೆ. ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ನಾನು ಈ ಸಭೆಯಲ್ಲಿ ಹೇಳುವುದೇನೆಂದರೆ, ಮಾನ್ಯ ಸದಸ್ಯರು ಕರಪ್ಷನ್ ಇದೆ ಎಂದು ಹೇಳಿದರೆ ನಾನು ಏನು ಕ್ರಮ ತೆಗೆದುಕೊಳ್ಳಬೇಕು ಇದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡಬೇಕು, ಖಚಿತವಾಗಿ ಇಂಥ ಅಲಿಗೇಷನ್ ಎಂದು ಬರಲಾರದೆ ಹೋದರೆ, ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್ ಆದವರು ಕರಪ್ಟ್ ಇದ್ದಾರೆ ಎಂದರೆ, ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Simply because there are some allegation against somebody, he cannot be dismissed or suspended. ಇದನ್ನು ಮಾನ್ಯ ಸದಸ್ಯರು ವಿಚಾರ

ಮಾಡಬೇಕಾಗುತ್ತದೆ. ಯಾವುದೇ ಅಧಿಕಾರಿಯ ಮೇಲೆ ದೂರು ಬರಬಹುದು. ಆದರೆ ಅದರ ಬಗ್ಗೆ ವಿಚಾರಣೆ ನಡೆಸಬೇಕಾಗಿದ್ದರೆ ಬಹುಶಃ ಸ್ಪೆಸಿಫಿಕ್ ಆಗಿ ಅಲಿಗೇಷನ್ಸ್ ಅಥವಾ ದೂರುಗಳು ಬರಲಾರದೆ ಹೋದರೆ ನಾನು ಎನ್‌ಕ್ವೈರಿ ಮಾಡಲಿಕ್ಕಾಗುವುದಿಲ್ಲ. ಜನರು ಬಹಳ ಮಟ್ಟಿಗೆ ಅಸಮಾಧಾನವಾಗಿದ್ದಾರೆ ಎಂದು ತಿಳಿಯಬಹುದು. ಹಾಗೆ ತಿಳಿದುಕೊಂಡು ಏನಾದರೂ ಮಾಡಬಹುದೇ ಹೊರತು ರೂಲ್ಸ್ ಪ್ರಕಾರ, ಪ್ರೊಸೀಜರ್ ಪ್ರಕಾರ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ನಾನು ಮಾನ್ಯ ಸಭೆಗೆ ಇನ್ನೊಂದು ಮಾತನ್ನೂ ತಿಳಿಸಬೇಕಾಗಿದೆ. ನನಗೆ ಮಾತನಾಡಲು ನಿಲ್ಲುವುದಕ್ಕೆ ಒಂದು ಅವಶ್ಯಕತೆ ಏಕೆ ಬಂತು ಎಂದರೆ ನಾವು ಬಹಳ ಹೇಡಿಗಳಿದ್ದೇವೆ. ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹತೋಟಿ ಇಲ್ಲ, ಅದಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲ ಎಂದು ಏನೊಂದು ವಿಚಾರವನ್ನು ಕೆಲವು ಜನ ವ್ಯಕ್ತ ಮಾಡಿದ್ದಾರೆ ಅದರಲ್ಲಿ ಏನೂ ಅರ್ಥವಿಲ್ಲ. ಅದಕ್ಕೆ ಏನೂ ತಳಹದಿ ಇಲ್ಲ, ಅಂತ ರೀತಿಯಲ್ಲಿ ನಾವು ನಡೆದುಕೊಂಡಿಲ್ಲ ಎಂದು ಸ್ಪಷ್ಟವಾಗಿ ಹೇಳುವುದಲ್ಲದೆ ಇವೊತ್ತು ಯಾವುದೇ ಅಧಿಕಾರಿ ಇರಲಿ, ಅವರಿಗೆ ಸಂಬಂಧಪಟ್ಟ ದೂರುಗಳೇನಾದರೂ ಇದ್ದರೆ ಅದನ್ನು ಲಿಖಿತ ಮೂಲಕವಾಗಿ ನನಗೆ ಕೊಟ್ಟರೆ, ನಾನು ಇವೊತ್ತಿನ ದಿವಸ ಈ ಸಭೆಯಲ್ಲಿ ಹೇಳುತ್ತಿದ್ದೇನೆ, ಬಹುಶಃ ಮೂರು ದಿವಸಗಳಲ್ಲಿ ವಿಜಿಲೆನ್ಸ್ ಕಮಿಷನ್ನಿಗೆ ಎನ್‌ಕ್ವೈರಿಗೆ ಆರ್ಡರ್ ಮಾಡಿ ಅವರ ಪ್ರತಿಯೊಂದನ್ನು ಸಭೆಯ ಮುಂದೆ ಇಡುತ್ತೇನೆ. ಲಿಖಿತ ಮೂಲಕವಾಗಿ ಯಾವ ದೂರುಗಳನ್ನೂ ಕೊಡದೆ ವೇಗ್ ಆಗಿ ಅಲಿಗೇಷನ್‌ಗಳನ್ನು ಮಾಡಿದರೆ ಆಗ ಯಾವ ಕ್ರಮವನ್ನೂ ತೆಗದುಕೊಳ್ಳುವುದಕ್ಕಾಗುವುದಿಲ್ಲ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

## 5. ವಿರೋಧ ಪಕ್ಷ ಮಂಡಿಸಿದ ಅವಿಶ್ವಾಸ ನಿರ್ಣಯದ ಮೇಲೆ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರ ಸಮರ್ಥನೆ. ( 22 ನೇ ಜನವರಿ 1969 ).

ಶ್ರೀ ವೀರೇಂದ್ರ ಪಾಟೀಲ್ :-

ಸನ್ಮಾನ್ಯ ಅಧ್ಯಕ್ಷರೇ, ನನ್ನ ಮಂತ್ರಿ ಮಂಡಲದ ಮೇಲೆ ವಿರೋಧ ಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ಅಧ್ಯಕ್ಷರಲ್ಲಿ ಮತ್ತು ಮಾನ್ಯ ಸದಸ್ಯರಲ್ಲಿ ಅದರಲ್ಲಿಯೂ ವಿಶೇಷವಾಗಿ ವಿರೋಧ ಪಕ್ಷದ ಸದಸ್ಯರಲ್ಲಿ ಬಹಳ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ತಾವು ನೋಡಿರಬಹುದು, ನಿನ್ನೆ ಬೆಳಿಗ್ಗೆಯಿಂದ ಅನೇಕ ಮಾನ್ಯ ಸದಸ್ಯರು ಪ್ರಚೋದಕವಾದಂಥ ಅನೇಕ ವಿಚಾರಗಳನ್ನು ಹೇಳಿದರು. ನಾನು ಬಾಯಿ ಮುಚ್ಚಿಕೊಂಡು ಒಂದು ಮಾತೂ ಸಹ ಮಧ್ಯೆ ಆಡದೆ, ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಬರೆದುಕೊಂಡು ಇಟ್ಟಿದ್ದೇನೆ. ಅದಕ್ಕೆಲ್ಲಾ ಉತ್ತರ ಹೇಳುವಾಗ ನನಗೆ ಮಧ್ಯೆ ಯಾರೂ ಡಿಸ್ಟರ್ಬ್ ಮಾಡದೇ ಹೋದರೆ ನಾನು ಹೇಳುವ ವಿಚಾರಗಳನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನನಗೂ ಅನುಕೂಲವಾಗುತ್ತದೆ. ನಾನು ಉತ್ತರ ಹೇಳಿದ ಮೇಲೆ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್‌ಗಾಗಿ ಏನಾದರೂ ಪ್ರಶ್ನೆಗಳನ್ನು ತಮ್ಮ ಅಪ್ಪಣೆ ಪಡೆದು ಕೇಳಿದರೆ, ಅವಕ್ಕೂ ಉತ್ತರ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರು ಈಗ ಅವಿಶ್ವಾಸ ನಿರ್ಣಯವನ್ನು ಈ ಮಂತ್ರಿ ಮಂಡಲ ಬಂದು 8 ತಿಂಗಳುಗಳಾದ ಮೇಲೆ ಈ ಸಭೆಯಲ್ಲಿ ಮಂಡಿಸಿದ್ದಾರೆ. ಟ್ರೆಡಿಷನ್ ಪ್ರಕಾರ 6 ತಿಂಗಳಿಗೊಮ್ಮೆ ಇದನ್ನು ಮಂಡಿಸಬೇಕಾಗಿತ್ತು, ಎಂದುದಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳುತ್ತಿದ್ದರು. ಆದರೆ ಇದು 6 ತಿಂಗಳಿಗೊಮ್ಮೆ ಬಂದೇ ಬರುತ್ತಿದೆ. ಇವತ್ತು ಇದೇನು ಹೊಸದಲ್ಲ. 1962 ರಿಂದ 6 ತಿಂಗಳುಗಳಿಗೆ ಒಂದು ಸಾರಿ ಬರುತ್ತಲೇ ಇದೆ. ಈ ಮಂತ್ರಿಮಂಡಲ ಬಂದ ಮೇಲೆ 6 ತಿಂಗಳುಗಳಿಗೊಂದು ಸಾರಿ ಬರಬೇಕಾಗಿತ್ತು. ಎರಡು ತಿಂಗಳು ತಡವಾದರೂ ಚಿಂತೆ ಇಲ್ಲ. ಅವಿಶ್ವಾಸ ನಿರ್ಣಯ ಬಂತು. ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷದ ನಾಯಕರು ಯಾವ ಹಿನ್ನೆಲೆಯಲ್ಲಿ ಮಂಡಿಸಿದ್ದಾರೆನ್ನುವುದು ನಾವು ಮೊದಲು ವಿಚಾರ ಮಾಡಬೇಕಾದುದು ಮುಖ್ಯ. ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಸದಸ್ಯರು ಹೇಳಿದ್ದಾರೆ. ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದು ಒಂದು ಪಾಶುಪತಾಸ್ತ್ರ ಅಥವಾ ಬ್ರಹ್ಮಾಸ್ತ್ರ ಇದ್ದ ಹಾಗೆ ಎಂದು. ಅದೊಂದೇ ವಿರೋಧ ಪಕ್ಷಕ್ಕೆ ಇರುವುದು. ಅದನ್ನು ಯಾವಾಗ ಉಪಯೋಗ ಮಾಡಬೇಕೆಂಬುದಾಗಿ ಅವರೇ ಹೇಳಿದ್ದಾರೆ. ಎಲ್ಲೆ ಮೀರಿ ಹೋದ ಮೇಲೆ ಅದನ್ನು ಉಪಯೋಗಿಸಬೇಕು. ಅದು ನಮ್ಮ ಅಧಿಕಾರವೆಂಬುದಾಗಿ ಹೇಳಿದ್ದಾರೆ. ಅದು ನಿಜ. ಅವರಿಗೆ ಪರಿಪೂರ್ಣ ಅಧಿಕಾರ ಇದೆ. ಅದನ್ನು ಅಲ್ಲಗಳೆಯುವುದಿಲ್ಲ. ಬ್ರಹ್ಮಾಸ್ತ್ರ ಉಪಯೋಗ ಮಾಡುವುದಕ್ಕೆ ಪರಿಸ್ಥಿತಿ ಹಿನ್ನೆಲೆ, ಏನೆಂಬುದನ್ನು ತಿಳಿಯುವುದು ಅವಶ್ಯಕ. ನಾವು ಮೊದಲನೆಯ ದಿವಸ ಸೇರಿದಾಗ ಅಂದು ಏನೂ ಬಿಜಿನೆಸ್ ಆಗಲಿಲ್ಲ. ರಾಜ್ಯಪಾಲರ ಭಾಷಣ ವಾಯಿತು. ಎರಡನೇ ದಿವಸ ಅಡ್ಜರ್ನ್‌ಮೆಂಟ್ ಮೋಷನ್ ಇಬ್ಬರು ಮಾನ್ಯ ಸದಸ್ಯರಿಂದ ಬಂತು. ಮಾನ್ಯ ಅಧ್ಯಕ್ಷರು ಆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಅದಕ್ಕೇನಾದರೂ ನಾವು ಒಪ್ಪಿಗೆ ಕೊಟ್ಟಿದ್ದರೆ, ಇಂತಹ ಅವಿಶ್ವಾಸ ನಿರ್ಣಯ ಈ

ಸಭೆಯಲ್ಲಿ ಬರುತ್ತಲೇ ಇರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಆ ಅಡ್ಜರ್ನ್‌ಮೆಂಟ್ ಮೋಷನ್ನನ್ನು ನಾವು ಒಪ್ಪಿಕೊಳ್ಳದೇ ಹೋದ್ದರಿಂದ ಎರಡು ಲೈನುಗಳನ್ನು ಬರೆದುಕೊಟ್ಟ ಇಂತಹ ಅವಿಶ್ವಾಸ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದರು. ಆದರೆ ಇದಕ್ಕೆ ಮೊದಲಿನಿಂದ ಇದ್ದಂಥ ವಾತಾವರಣ ಪರಿಸ್ಥಿತಿ ಯಾವ ರೀತಿ ನಿರ್ಮಾಣವಾಯಿತು ಎಂಬುದನ್ನು ನಾನು ಹೇಳುತ್ತಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅವರಿಗೆ ಅವಕಾಶ ಸಿಗದೇ ಇದ್ದುದರಿಂದ ಅದಕ್ಕೆ ಇನ್ನಾವುದಾದರೂ ಒಂದು ಅವಕಾಶ ಕಲ್ಪಿಸಿಕೊಳ್ಳಬೇಕೆಂದು ಯೋಚಿಸಿ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಲಾಗಿದೆ. ಆ ರೀತಿ ಪರಿವರ್ತನೆಯಾಯಿತು. ಇದು ಈ ಸಭೆಯಲ್ಲಿ ಚರ್ಚೆಗೆ ಬಂದುದನ್ನು ನಾನು ಸ್ವಾಗತ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಏನೇನು ಅವರ ಮನಸ್ಸಿನಲ್ಲಿ ಕುದಿಯುತ್ತಿತ್ತೋ ಅದನ್ನು ಹೊರಗೆಡಹುವುದಕ್ಕೆ ವಾತಾವರಣ ತಣ್ಣಗಾಗುವಂತೆ ಇದು ಅನುಕೂಲವಾಯಿತೆಂದು ನಾನು ತಿಳಿದುಕೊಂಡಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಇನ್ನೊಂದು ವಿಚಾರವನ್ನು ನಾನು ಪ್ರಸ್ತಾಪಮಾಡುತ್ತೇನೆ. ವಿರೋಧ ಪಕ್ಷದ ನಾಯಕರು ಈ ಮಂತ್ರಿ ಮಂಡಲ ಹೋಗಬೇಕು, ಇದರಲ್ಲಿ ನಮಗೆ ವಿಶ್ವಾಸವಿಲ್ಲವೆಂದು ಹೇಳಿದರು. ಇನ್ನು ಕೆಲವು ಸದಸ್ಯರು ಪೂರ್ತಿ ಮಂತ್ರಿ ಮಂಡಲದ ಬಗ್ಗೆ ಹೇಳದೆ ಸಂಬಂಧಪಟ್ಟ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂಬುದಾಗಿ ಹೇಳಿದರು. ಕೆಲವು ಮಾನ್ಯ ಸದಸ್ಯರು ನೀವು ಎನ್‌ಕ್ವೈಯರಿ ಕಮೀಷನ್ ನೇಮಕ ಮಾಡಬೇಕೆಂದು ಹೇಳಿದರು. ಇದು ಏಕೆ ಬಂತು ಎಂದರೆ, ಮೊದಲು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿದ್ದದ್ದನ್ನು ಈಗ ಈ ಒಂದು ನೋ ಕಾನ್‌ಫಿಡೆನ್ಸ್ ಮೋಷನ್ನಿನ ರೂಪದಲ್ಲಿ ತಂದಿದ್ದಾರೆ. ಇದರಲ್ಲಿ ಇವರು ಏನು ಹೇಳುತ್ತಾರೆ, ಅದನ್ನು ನೋಡಿದರೆ, ವಿರೋಧ ಪಕ್ಷದವರಲ್ಲಿಯೇ ಒಂದು ಹೊಂದಾಣಿಕೆ ಇಲ್ಲ, ಐಕ್ಯಮತ್ಯವಿಲ್ಲವೆಂದು ಸ್ಪಷ್ಟವಾಗುತ್ತದೆ. ವಿರೋಧ ಪಕ್ಷದ ನಾಯಕರು ಮಂತ್ರಿ ಮಂಡಲ ಹೋಗಬೇಕು ಎಂದು ಹೇಳುತ್ತಾರೆ. ಇನ್ನು ಕೆಲವರು ಒಬ್ಬರು ಮಂತ್ರಿಯವರು ಹೋಗಬೇಕೆಂದು ಹೇಳುತ್ತಾರೆ, ಮತ್ತು ಕೆಲವರು ಸಂಬಂಧಪಟ್ಟ ಮಂತ್ರಿ ಹೋಗಬೇಕಾದ ಅವಶ್ಯವಿಲ್ಲ ಎನ್‌ಕ್ವಾಯರಿ ಕಮಿಶನ್ ಮಾಡಬೇಕೆಂದು ಹೇಳುತ್ತಾರೆ. ಅನೇಕ ಮಾನ್ಯ ಸದಸ್ಯರು ಈ ಒಂದು ನೋ ಕಾನ್‌ಫಿಡೆನ್ಸ್ ಮೋಷನ್ ಬಗ್ಗೆ ಮಾತಾನಾಡುತ್ತಾ ಅನೇಕ ವಿಚಾರಗಳನ್ನು ಮಾಡಿದರು. ಇನ್ನು ಕೆಲವರು ಶರಾವತಿಯ ವಿಚಾರ ಹೇಮಾವತಿಯ ವಿಚಾರ ಮತ್ತು ಹಾರಂಗಿ ಮುಂತಾದವುಗಳ ವಿಚಾರ ಹೇಳಿದರು. ಆದರೆ ನಾನಾದರೂ ತಿಳಿದು ಕೊಂಡಿದ್ದೇನೆ, ಈ ನೋ ಕಾನ್‌ಫಿಡೆನ್ಸ್ ಮೋಷನ್ ಏನು ತಂದಿದ್ದಾರೆ, ಇದು ಬಹುಶಃ ಎಕ್ಸೈಸ್ ಆ್ಯಕ್ಷನ್‌ನ ವಿಚಾರದಲ್ಲಿ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ತೀರ್ಪು ಏನು ಇದೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಂದಿದ್ದಾರೆ. ಎಂದು ಮುಖ್ಯವಾಗಿ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಅದಕ್ಕಾಗಿ ಇದರ ಹೊರತು ಏನೇನು ವಿಚಾರಗಳನ್ನು ವ್ಯಕ್ತಮಾಡಿದ್ದಾರೆ, ಅದರ ಬಗ್ಗೆ ಮುಂದೆ ಚರ್ಚೆಗೆ ಉತ್ತರ ಕೊಡುವ ಸಂದರ್ಭ ಬಂದಾಗ ಅಂತಹ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ವಿಚಾರಗಳ ಬಗ್ಗೆ ಹೇಳುತ್ತೇನೆ. ಇವತ್ತಿನ ದಿವಸ ಕೇವಲ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ಏನು ಒಂದು ನಿರ್ಣಯ ಮಾಡಿದ್ದಾರೆ. ಅದರ ಬಗ್ಗೆ ಮಾತ್ರ ಉತ್ತರ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಕೇಳಿದರು.........

ಶ್ರೀ ಹೆಚ್.ಎಂ. ಚೆನ್ನಬಸಪ್ಪಾ ( ಪಿರಿಯಪಟ್ಟಣ ) :-

ರಾಯರೇ, ಹೈಕೋರ್ಟು ಅಥವಾ ಸುಪ್ರೀಮ್ ಕೋರ್ಟು ನೀಡಿದ ತೀರ್ಪಿನ ಆಧಾರದ ಮೇಲೆ ಸದನದಲ್ಲಿ ಅವಿಶ್ವಾಸ ನಿಲುವಳಿಯನ್ನು ಮಂಡಿಸಲಾಗಿದೆ. ಅದು ಸರಕಾರದ ಬಾಧಕ-ಸಾಧಕಗಳ ಬಗ್ಗೆ ಇರುವ ಮಹತ್ವದ ವಿಷಯವಾಗಿದೆ. ಸರಕಾರವು ಈ ಎಲ್ಲ ವಿಷಯಗಳನ್ನು ಗಣನೆಗೆ ತೆಗೆದುಕೊಂಡು, ಆ ವಿಷಯಗಳ ಮೇಲಿನ ಅವಿಶ್ವಾಸ ನಿಲುವಳಿಯ ಮೇಲೆ, ಉದ್ಭವಿಸಿದ ಎಲ್ಲಾ ಅಂಶಗಳ ಬಗ್ಗೆ ಸದನವನ್ನು ಸಮಾಧಾನ ಪಡಿಸಬೇಕು. ಒಂದು ನಿರ್ದಿಷ್ಟ ವಿಷಯದ ಆಧಾರದ ಮೇಲೆ ಅವಿಶ್ವಾಸ ನಿಲುವಳಿ ಇರುವುದೆಂಬುದನ್ನು ಮುಖ್ಯ ಮಂತ್ರಿಗಳು ಹೇಳುವುದು ಸಮಂಜಸವಲ್ಲ. ಈ ವಿಷಯವನ್ನು ನಿಲುವಳಿಯಲ್ಲಿ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಒಂದೇ ಸಮಸ್ಯೆಯ ಆಧಾರದ ಮೇಲೆ, ಉಳಿದ ಸಮಸ್ಯೆಗಳ ಆಧಾರ ಬಿಟ್ಟು ಈ ನಿಲುವಳಿಯನ್ನು ಮಂಡಿಸಲಾಗಿದೆ ಎಂಬುದು ಸದನಕ್ಕೆ ಎಚ್ಚರಿಕೆ ಕೊಟ್ಟಾಂತಾಗುತ್ತದೆ. ರಾಯರೇ, ನಿಲುವಳಿಯ ಪ್ರಕಾರ " ಈ ಸದನವು ಶ್ರೀ ವೀರೇಂದ್ರ ಪಾಟೀಲರ ನೇತೃತ್ವ ಮಂತ್ರಿಮಂಡಲದಲ್ಲಿ ವಿಶ್ವಾಸ ಹೊಂದಿರುವುದಿಲ್ಲ ".

ಅಧ್ಯಕ್ಷರು :-

ಮಾನ್ಯ ಸದಸ್ಯರಾದ ಶ್ರೀ ಚೆನ್ನಬಸಪ್ಪನವರು, ಮುಖ್ಯಮಂತ್ರಿಗಳು ಅವಿಶ್ವಾಸ ನಿಲುವಳಿಯ ಬಗ್ಗೆ ಇರುವ ಚರ್ಚೆಯ ಮೇಲಿನ ಅಂಶಗಳಿಗೆ ಉತ್ತರಿಸಲು ಪ್ರಯತ್ನಿಸಬೇಕೆಂದು, ಕ್ರಿಯೋಲೋಪ ಸೂಚಿಸಿದ್ದಾರೆ. ಸಮರ್ಪಕ ರೀತಿಯಲ್ಲಿ ಉತ್ತರ ನೀಡಲು ಮಾನ್ಯ ಮುಖ್ಯ ಮಂತ್ರಿಗಳಿಗೆ ಬಿಡಲಾಗಿದೆ. ಸದನವು, ಅವರಿಗೆ ಉತ್ತರ ನೀಡಲು ಯಾವುದೇ ರೀತಿಯ ನಿರ್ದೇಶನ ನೀಡಲು ಹಕ್ಕು ಹೊಂದಿರುವುದಿಲ್ಲ. ಕಾರಣ, ಅಲ್ಲಿ ಕ್ರಿಯಾಲೋಪ ಇರುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಅಧ್ಯಕ್ಷರೇ, ನಾನು ಪ್ರಥಮದಲ್ಲೇ ಹೇಳಿದೆ, ಕೇವಲ ಒಂದೇ ಚರ್ಚೆಗೆ ಅವಕಾಶ ಇರಬೇಕೆಂದು ಸಂದಿಲ್ಲವೆಂದು ನಾನು ಒಪ್ಪಿಕೊಂಡಿದ್ದೇನೆ. ಆದರೆ ಮುಖ್ಯವಾಗಿ ಇದೇ ಚರ್ಚೆಗೆ ಬಂತು, ಮತ್ತು 2-3 ಜನ ಸದಸ್ಯರು ಇನ್ನೂ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರೆ ಆ ವಿಚಾರಕ್ಕೆ ಉತ್ತರ ನೀಡಬಾರದು ಎಂದು ಏನೂ ಇಲ್ಲ. ಉತ್ತರ ನೀಡುವುದಕ್ಕೆ ಸಾಮರ್ಥ್ಯವಿಲ್ಲವೆಂದೇನೂ ಇಲ್ಲ. ಅದಕ್ಕಾಗಿ ಆ ಕೆಲವು ಟೀಕೆಗಳ ಬಗ್ಗೆ ಮತ್ತೊಂದು ಅವಕಾಶ ಒದಗಿಸಿಕೊಳ್ಳುತ್ತೇನೆಂದು ಹೇಳಿದ್ದೇನೆ. ತಾವು ಅಪ್ಪಣೆ ಕೊಡಿಸಿದರೆ, ಯಾವ ಟೀಕೆ ಟಿಪ್ಪಣಿಗಳಿಗೆ ಉತ್ತರ ಕೊಟ್ಟಿಲ್ಲವೋ, ಅದನ್ನು ಮುಂದೆ ಕೊಡುತ್ತೇನೆ. ಈಗ ಮೂಲ ಪ್ರಶ್ನೆಗೆ ಬರುವುದಕ್ಕೆ ಮೊದಲು ಪ್ರಾಶಸ್ತ್ಯವಾದ ಕೆಲವು ಮಾತುಗಳನ್ನು ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ, ಏನೆಂದರೆ - ಡಿವಿಜನಲ್ ಕಮೀಷನರ್ ಸರ್ಕಾರ ಹೇಳಿದಂತೆ ಮಾಡಿಕೊಂಡು ಹೋಗುತ್ತಾರೆ, ಸರ್ಕಾರ ತಮ್ಮ ಮನಸ್ಸಿನಲ್ಲಿ ಏನಿದೆ ಆ ರೀತಿ ಡಿವಿಜನಲ್ ಕಮೀಷನರಿಂದ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ. ಅಲ್ಲಿಂದ ಇನ್ನೊಂದು ವಿಚಾರ ಹೇಳಿದ್ದಾರೆ. ಭೂಮರೆಡ್ಡಿಯವರು ಹೈಯೆಸ್ಟ್ ಟೆಂಡರರ್ ಇದ್ದರೂ, ಎಕ್ಸೈಸ್ ಮಂತ್ರಿಯವರ ಹತ್ತಿರ 22ನೇ ತಾರೀಖು ಕೊಟ್ಟಾಗ

ಎಕ್ಸೈಸ್ ಮಂತ್ರಿಯವರು ಸುಮ್ಮನೆ ಕೂತಿದ್ದರಲ್ಲದೆ ಏನೂ ಮಾಡಿಲ್ಲವೆಂದು ಹೇಳಿದ್ದಾರೆ. ಈ ವಿಚಾರವನ್ನು ಮೊದಲು ಏಕೆ ಪ್ರಸ್ತಾಪ ಮಾಡುತ್ತೇನೆಂದರೆ, ಬಹುಶಃ ಮುಂದೆ ಈ ಕೇಸ್ ಹೇಳುವಾಗ ಇದು ಮರೆತು ಹೋಗಬಹುದು ಎಂದು ಹೇಳುತ್ತಿದ್ದೇನೆ. ನಿನ್ನೆ ಹೇಳಿದೆ 22ನೇ ತಾರೀಖಿಗೆ ಎಕ್ಸೈಸ್ ಮಂತ್ರಿಯವರ ಹತ್ತಿರ ಅರ್ಜಿ ಸಲ್ಲಿಸಿದಾಗ, ಅವತ್ತಿನ ದಿವಸವೇ ಹೋಂ ಸೆಕ್ರೆಟರಿಯವರನ್ನು ಕರೆದು, ಕಾನೂನು ಪ್ರಕಾರ ಡಿಸ್ಪೋಸ್ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ಆ ಆದೇಶ ಕೊಟ್ಟ ಮೇಲೆ 23-24-25 ಮೈಸೂರಿನಲ್ಲಿ ಯಾವುದೋ ಅರ್ಜೆಂಟ್ ಕೆಲಸಕ್ಕಾಗಿ ಹೋಗಿದ್ದರು. ಆಮೇಲೆ ರಿವಿಜನ್ ಪಿಟಿಶನ್ ಮೇಲೆ ಡಿವಿಜನ್ ಕಮೀಷನರಿಂದ ರಿಪೋರ್ಟ್ ತರಿಸಿಕೊಳ್ಳತಕ್ಕದ್ದು ಅವಶ್ಯಕವಾಯಿತು ಮತ್ತು ಅದಕ್ಕೆ ಸಾಕಷ್ಟು ಸಮಯವಿಲ್ಲವೆಂದು ಟ್ರಂಕ್ ಕಾಲ್ ಮೇಲೆ ಡಿವಿಜನಲ್ ಕಮೀಷನರಿಗೆ ಓದಿ ಹೇಳಿದ್ದಾರೆ. ಇದಕ್ಕಾಗಿ ನೀವು ರಿಪೋರ್ಟ್ ಸಲ್ಲಿಸಬೇಕು. ರಿಪೋರ್ಟ್ ಸಲ್ಲಿಸಿದ ಮೇಲೆ ನಿರ್ಣಯ ತೆಗೆದುಕೊಳ್ಳಬಹುದು ಎಂಬ ವಿಚಾರ ಹೇಳಿದ್ದಾರೆ. ಆಮೇಲೆ 25-26, ಟ್ರಂಕ್ ಕಾಲ್ ಮೇಲೆ ಹೇಳಿದ ಪ್ರಕಾರ 27 ಕ್ಕೆ ಬಹುಶಃ ನಮ್ಮ ಹತ್ತಿರ ರಿಪೋರ್ಟ್ ಬಂತು. 28ಕ್ಕೆ ಕೇಸ್.......

ಶ್ರೀ ಎಸ್. ಶಿವಪ್ಪ ( ಶ್ರವಣಬೆಳಗೊಳ ) :-

22ಕ್ಕೆ ಎಕ್ಸೈಸ್ ಮಂತ್ರಿಗೆ ಅರ್ಜಿ ಕೊಟ್ಟಾಗ 26 ಕ್ಕೆ ಡಿವಿಜನಲ್ ಕಮೀಷನರ್ ತೀರ್ಮಾನ ಕೊಡುತ್ತೇವೆಂದು ಎಕ್ಸೈಸ್ ಮಂತ್ರಿಯವರಿಗೆ ಫೋನ್ ಮಾಡಿದಾಗ ನೀವು ಏನು ಆರ್ಡರ್ ಮಾಡಬೇಡಿ, ಅದು ನನ್ನ ಮುಂದೆ ಇದೆ ಎಂದು ಹೇಳಿದ್ದೀರಾ ?

Mr. Speaker. - I request the hon'. Members no to interrupt because the hon'. Chief Minister has already made a request to the Hon. Members that there should not be interruptions. I cannot compel the Hon. Leader of the House to yield to any interruptions.

ಶ್ರೀ ವೀರೇಂದ್ರ ಪಾಟೀಲ್ :-

ಈಗ ನಾನು ಹೇಳುತ್ತಾ ಇದ್ದೆ. 22ನೇ ತಾರೀಖು ಅಪ್ಲಿಕೇಶನ್ ಕೊಟ್ಟಾಗ ಹೋಮ್ ಸೆಕ್ರೆಟರಿಯವರಿಗೆ ಅಬ್ಕಾರಿ ಮಂತ್ರಿಗಳು ಕಾನೂನು ಪ್ರಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು ಎಂದು ಆದೇಶ ಕೊಟ್ಟಿದ್ದಾರೆ ಹೋಮ್ ಸೆಕ್ರೆಟರಿಯವರು 26ನೇ ತಾರೀಖು ಡಿವಿಜನಲ್ ಕಮೀಷನರಿಗೆ ಟ್ರಂಕಾಲ್ ಮಾಡಿ, ರಿವಿಜನ್ ಪಿಟಿಷನ್ ನಿಮ್ಮ ಹತ್ತಿರ ಕಳುಹಿಸಬೇಕು ? ಆದರೆ ಈಗ ಸಮಯವಿಲ್ಲ, ನಂತರ ಇದನ್ನು ನಿಮಗೆ ಕಳುಹಿಸುತ್ತೇನೆ ಈಗ ಪಿಟಿಷನ್‌ನಲ್ಲಿ ಇರುವುದನ್ನು ನಾನು ಓದಿ ಹೇಳುತ್ತೇನೆಂದು ಹೇಳಿ ಅದನ್ನು ಓದಿ ಹೇಳುತ್ತಾರೆ ಆ ಸಂಬಂಧದಲ್ಲಿ ಏನು ರಿಪೋರ್ಟ್ ಇದೆ ಅದನ್ನು ಕಳುಹಿಸಬೇಕು ಎಂದು ಅವರು ಹೇಳಿದ ಮೇಲೆ 27ನೇ ತಾರೀಖು ರಿಪೋರ್ಟ್ ಡಿವಿಜನಲ್ ಕಮೀಷನರರಿಂದ ಬಂದ ಮೇಲೆ ಆ ಸಂಬಂಧದಲ್ಲಿ 28ನೇ ತಾರೀಖು ಹಿಯರಿಂಗ್ ಇಟ್ಟುಕೊಳ್ಳುತ್ತಾರೆ. ಆದರೆ ಆ ದಿವಸ ಭೂಮರೆಡ್ಡಿಯವರ ಅಡ್ವೊಕೇಟ್ ಬಂದು ನಾವು ಹೈಕೋರ್ಟಿಗೆ ಹೋಗಿದ್ದೇವೆ. ಈ ಹಿಯರಿಂಗ್ ಅವಶ್ಯಕತೆ ಇಲ್ಲ ಎಂದು ಅವರು ಹೇಳಿದ

ಮೇಲೆ ಮುಂದಿನ ಕ್ರಮ ತೆಗೆದು ಕೊಳ್ಳುವುದು ನಿಂತು ಹೋಯಿತು. 22ನೇ ತಾರೀಖಿನ ದಿವಸವೇ ನನ್ನ ಹತ್ತಿರ ಕೆಲವರು ಬಂದಾಗ ಹೇಳಿದರು ಅಬ್ಕಾರಿ ಮಂತ್ರಿಗಳು ಮಲಗಿಕೊಂಡಿದ್ದಾರೆ. ಇದನ್ನು ಇಂಪೋಜ್ ಮಾಡುವುದಕ್ಕೆ ಸೆಕ್ರೆಟರಿಯವರಿಗೆ ಕೊಟ್ಟಿದ್ದಾರೆ ಎಂದು ನಾನು ಈಗಾಗಲೇ ಈ ಮಾನ್ಯ ಸಭೆಗೆ ಹೇಳಿದ್ದೇನೆ. ಪ್ರತಿನಿತ್ಯವೂ ನಾವು ಅನೇಕ ವಿಚಾರಗಳಲ್ಲಿ ನಿರ್ಣಯ ತೆಗದುಕೊಳ್ಳುತ್ತೇವೆ. ಅನೇಕ ವಿಚಾರಗಳಲ್ಲಿ ಸೆಕ್ರೆಟರಿಗಳಿಗೆ ನಾವು ಅಡ್ವೈಜ್ ಮಾಡಿ ನಾವು ನಿರ್ಣಯ ತೆಗೆದು ಕೊಳ್ಳುವುದಿಲ್ಲ, ನೀವೇ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದು ಎಂದು ನಾವು ಸೆಕ್ರೆಟರಿಗಳಿಗೆ ಪವರ್ ಡೆಲಿಗೇಟ್ ಮಾಡಬಹುದು. ಅನೇಕ ಸಲ ಅಧಿಕಾರಿಗಳು ನಮಗೆ ಅಡ್ವೈಜ್ ಮಾಡಿದರೆ ನಾವು ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಒಳ್ಳೆಯ ರೀತಿಯಿಂದ ಯೋಗ್ಯವಾಗುತ್ತದೆ. ಎಂದು ನಾವು ಆ ರೀತಿ ಮಾಡಿದ್ದೇವೆ. ಒಂದು ವಿಚಾರವನ್ನು ಶ್ರೀಮಾನ್ ನಾಗಪ್ಪನವರು ಹೇಳಿದರು. ನಾನು ಮತ್ತು 3-4 ಜನ ಎಂ.ಎಲ್.ಎ.ಗಳು ಅಬ್ಕಾರಿ ಮಂತ್ರಿಗಳ ಹತ್ತಿರ ಹೋಗಿ ಹೇಳಿದ್ದೇವೆ. ನಾವು ಹತ್ತು ಪರ್ಸೆಂಟ್ ಹೆಚ್ಚು ಆದಾಯವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ, ಇದನ್ನು ಆ್ಯಕ್ಷನ್ ಮಾಡಿ ಎಂದು ಹೇಳಿದರೂ ಅಬ್ಕಾರಿ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲಿಲ್ಲ ಎಂದು ಹೇಳಿದರು. ಅನೇಕ ಜನ ಮಾನ್ಯ ಸದಸ್ಯರು ಹೇಳುತ್ತಿದ್ದರು ನಮ್ಮ ದೇಶಕ್ಕೆ ಹೆಚ್ಚು ರೆವಿನ್ಯೂ ಬರುವ ದೃಷ್ಟಿಯಿಂದ ಇವರು ಕೆಲಸ ಮಾಡಿಲ್ಲ ಎಂದು ಪದೇ ಪದೇ ಹೇಳುತ್ತಿದ್ದರು. ರಾಜ್ಯದ ಆದಾಯವನ್ನು ಹಾಳು ಮಾಡುವ ಕೆಲಸವನ್ನು ಸರ್ಕಾರ ಮಾಡಿಲ್ಲ. 10 ಪರ್ಸೆಂಟ್ ಜಾಸ್ತಿ ಆದಾಯವನ್ನು ಕೊಡುತ್ತೇವೆಂದು ಯಾರ ಪರವಾಗಿ ಶ್ರೀಮಾನ್ ನಾಗಪ್ಪನವರು ಭರವಸೆ ನೀಡಿದರೋ ಗೊತ್ತಿಲ್ಲ. 20 ಪರ್ಸೆಂಟ್ ಹೆಚ್ಚು ಕೊಟ್ಟರೆ ಅದನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. 20 ಪರ್ಸೆಂಟಿನಂತೆ ಒಪ್ಪಿಕೊಂಡಿದ್ದರೂ ಸರ್ಕಾರಕ್ಕೆ ಅದರಿಂದ ಹಾನಿಯಾಗುತ್ತಿತ್ತು. ಅವರು 10 ಪರ್ಸೆಂಟ್ ಹೆಚ್ಚು ಆದಾಯ ಕೊಡುತ್ತೇವೆ ಎಂದು ಹೇಳುವ ಕಾಲಕ್ಕೆ ಈ ವರ್ಷ ಶೇಕಡ 35 ರಷ್ಟು ಹೆಚ್ಚು ಆದಾಯ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ಒಪ್ಪಿದ್ದರೆ ಅದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿತ್ತು. ಈ ದೃಷ್ಟಿಯಿಂದ ಯಾರೋ ಒಬ್ಬರು ಮಾನ್ಯ ಸದಸ್ಯರು ಶೇಕಡಾ 10 ರಷ್ಟು ಜಾಸ್ತಿ ಆದಾಯ ಕೊಡುತ್ತೇವೆಂದು ಹೇಳಿದ ಮಾತ್ರಕ್ಕೆ ಅದನ್ನು ಒಪ್ಪುವುದಕ್ಕೆ ಇದೇನು ಅಂಗಡಿಯ ವ್ಯಾಪಾರವಲ್ಲ ಇದು ಸರ್ಕಾರದ ಕೆಲಸ ಕಾನೂನು ಕಾಯಿದೆ ಮೂಲಕ ವಿಚಾರ ಮಾಡಿ ಮಾಡುವಂತಹ ಪರಿಸ್ಥಿತಿ ಇರುತ್ತದೆ. ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರು ಮತ್ತು ಇತರ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು, ಶ್ರೀಮಾನ್ ನಾಗಪ್ಪನವರ ಕೇಳಿಕೆಯನ್ನು ಅಬ್ಕಾರಿ ಮಂತ್ರಿಗಳು ನಿರಾಕರಿಸದೆ ಸುಮ್ಮನೆ ಒಪ್ಪಿಕೊಂಡಿದ್ದರೆ ಸರ್ಕಾರಕ್ಕೆ ಶೇಕಡಾ 35 ರಷ್ಟು ಆದಾಯ ಹೆಚ್ಚು ಬರುತ್ತಿತ್ತೇ ಎಂಬುದನ್ನು ಕೇವಲ ಶೇಕಡ 10 ರಷ್ಟು ಮಾತ್ರ ಹೆಚ್ಚು ಆದಾಯ ಬರುತ್ತಿತ್ತು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು, ಅಬಕಾರಿ ಹರಾಜಿನಲ್ಲಿ ಅಂಗಡಿ ಟೆಂಡರು ವಿಚಾರದಲ್ಲಿ ಸಮಾಜವಾದ ಇಲ್ಲ. ಏನೋ ಸಣ್ಣ ಸಣ್ಣ ಜನಗಳು ಬದುಕಿಕೊಳ್ಳಬೇಕು ಎಂದರೆ ಸರ್ಕಾರಕ್ಕೆ ಬರುವ ವರಮಾನವನ್ನು ಕಡಿಮೆ ಮಾಡಿ ಎಕ್ಸೈಜ್ ಬಾಬಿನಲ್ಲಿ ಸೋಷಲಿಸಂ ಅಥವಾ ಸಮಾಜವಾದವನ್ನು ತರುವ ಇಚ್ಛೆ ನಮ್ಮದು ಅಲ್ಲ. ಅದಕ್ಕಾಗಿ ನಾವು ವಿಚಾರ ಮಾಡುವಂಥಾದ್ದು ಏನು ಎಂದರೆ ಈ ಬಾಬಿನಲ್ಲಿ ಎಷ್ಟು ಹೆಚ್ಚು ಹಣ ಸರ್ಕಾರಕ್ಕೆ

ಬರುವುದಕ್ಕೆ ಸಾಧ್ಯವಿದೆಯೋ ಆ ತರಹ ಎಲ್ಲಾ ಕ್ರಮಗಳನ್ನೂ ಅನುಸರಿಸಬೇಕು ಎಂಬುದು ಸರ್ಕಾರದ ಒಂದು ಧೋರಣೆಯಾಗಿದೆ, ಅಬ್ಕಾರಿ ಹರಾಜಿನ ವಿಷಯದಲ್ಲಿ ಡಿಸ್ಟ್ರಿಕ್ಟ್ ವೈಜ್ ಮಾರಾಟ ಕ್ರಮ ಇಟ್ಟಾಗ, ಅಂಗಡಿ ವಾರು ಹೋದರೆ ಕೆಲವು ಕಡೆ ಟೆಂಡರು ಬರುವುದಿಲ್ಲ, ಆದರಿಂದ ಸರ್ಕಾರಕ್ಕೆ ಹಾನಿಯಾಗುತ್ತದೆ, ಒಂದು ವೇಳೆ ಅಂಗಡಿ ವಾರು ಮಾಡಿದರೆ, ಅನುಕೂಲ ಇರುವ ಕಡೆ ಆದಾಯ ಬರುತ್ತದೆ. ಉಳಿದ ಕಡೆ ಕೈಬಿಟ್ಟು ಬಿಡುತ್ತಾರೆ. ಸರ್ಕಾರ ಲಿಕ್ಕರ್ ಮತ್ತು ಟಾಡಿಷಾಪುಗಳನ್ನು ಓಪನ್ ಮಾಡಿ ಅದನ್ನು ಮಾರಾಟ ಮಾಡುವುದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಿ ಅಧಿಕಾರಿಗಳನ್ನು ನಿಲ್ಲಿಸಿ ಆ ಕೆಲಸವನ್ನು ಮಾಡಬೇಕಾದ ನೀತಿ ನಮ್ಮದಲ್ಲ. ನಾನು 1961ನೇ ಇಸವಿಯಲ್ಲಿ ಅಬ್ಕಾರಿ ಮಂತ್ರಿಗಳಾಗಿದ್ದಾಗ ಬೆಂಗಳೂರು ಸಿಟಿ ಮತ್ತು ಬೆಂಗಳೂರು ಜಿಲ್ಲೆಗೆ ಬೇರೆ ಬೇರೆ ಆಕ್ಷನ್ ಮಾಡಿದಾಗ ಬೆಂಗಳೂರು ಸಿಟಿಗೆ ಹೆಚ್ಚು ಟೆಂಡರು ಬಂದು ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಿದ್ದು ನಷ್ಟವಾಗುವ ಪರಿಸ್ಥಿತಿ ಕಂಡುಬಂತು. ಆಗ ಎಕ್ಸೈಜ್ ಕಮೀಷನರನ್ನು ಮತ್ತು ಡೆಪ್ಯುಟಿ ಕಮೀಷನರುಗಳನ್ನು ಕನ್‌ಸಲ್ಟ್ ಮಾಡಿ ಡಿಸ್ಟ್ರಿಕ್ಟ್ ವಾರು ಸರಿಯಾಗಿ ಟೆಂಡರ್ ಬರುವುದಿಲ್ಲ. ಆದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಬೆಂಗಳೂರು ಸಿಟಿ ಎರಡನ್ನು ಕಂಬೈಂಡ್ ಮಾಡಿ ಆಕ್ಷನ್ ಮಾಡಿದರೆ ಅನುಕೂಲವಾಗಬಹುದು ಎಂದು ಹೇಳಿ ಆ ರೀತಿ ಎರಡನ್ನು ಒಟ್ಟಿಗೆ ಸೇರಿಸಿ ಹರಾಜು ಮಾಡಿದಾಗ ಹೆಚ್ಚು ಹಣ ಬಂತು. ಈ ದೃಷ್ಟಿಯಿಂದ ಅಬ್ಕಾರಿ ಹರಾಜಿನಲ್ಲಿ ಅಂಗಡಿ ಟೆಂಡರು ವಿಚಾರದಲ್ಲಿ ಯಾವ ಸೋಷಲಿಜಂ ತರುವ ಇಚ್ಛೆ ಇಲ್ಲ. ಸರ್ಕಾರಕ್ಕೆ ಎಷ್ಟು ಹೆಚ್ಚು ಹಣ ಬರಲು ಸಾಧ್ಯವಿದೆಯೋ ಆ ಕ್ರಮವನ್ನು ಅನುಸರಿಸಬೇಕು. ಈಗ ಆ ನೀತಿಯನ್ನು ನಾವು ಅನುಸರಿಸಿಕೊಂಡು ಹೋಗುತ್ತಿದ್ದೇವೆ. ರಾಯಚೂರು, ಗುಲ್ಬರ್ಗಾ ಜಿಲ್ಲೆಗಳನ್ನು ಪ್ರತ್ಯೇಕವಾಗಿ ಜಿಲ್ಲಾವಾರು ಹರಾಜು ಹಾಕುತ್ತಿದ್ದಾಗ 1963-64ನೇ ಸಾಲಿನಲ್ಲಿ, 6,24,381 ರೂಪಾಯಿಗಳ ಆದಾಯ ಬರುತ್ತಿತ್ತು. 1964-65ನೇ ಸಾಲಿನಲ್ಲಿ 6,74,229 ರೂಪಾಯಿಗಳು ಆದಾಯ ಬರುತ್ತಿತ್ತು. 1965-66ನೇ ಸಾಲಿನಲ್ಲಿ 6,36,365 ರೂಪಾಯಿಗಳು, 1966-67ನೇ ಸಾಲಿನಲ್ಲಿ 6,09,612 ರೂಪಾಯಿಗಳು, ಈ ಪ್ರಕಾರವಾಗಿ ಆ ಬಾಬಿನಲ್ಲಿ ಆದಾಯ ಬರುತ್ತಿತ್ತು. 1967-68ನೇ ಸಾಲಿನಲ್ಲಿ ಆ ಎರಡು ಜಿಲ್ಲೆಗಳನ್ನು ಕ್ಲಬ್ ಮಾಡಿ ಹರಾಜು ಹಾಕಿದ್ದಾರೆ. ಈ ವರ್ಷ 7,40,669 ರೂಪಾಯಿಗಳ ಆದಾಯ ಬಂದಿದೆ. ಇದು ಶೇಕಡ 22 ರಷ್ಟು ಆದಾಯ ಹೆಚ್ಚಿದೆ. 1968-69ನೇ ಸಾಲಿನಲ್ಲಿ 9,99,999 ರೂಪಾಯಿಗಳ ಆದಾಯ ಬಂದಿದೆ. ಇದು ಶೇಕಡ 35 ರಷ್ಟು ಆದಾಯ ಹೆಚ್ಚಿದೆ. ಈ ರೀತಿಯಾಗಿ ಎಲ್ಲೆಲ್ಲಿ ನಮಗೆ ಹೆಚ್ಚು ಅನುಕೂಲವಾಗುತ್ತವೆ, ಹೆಚ್ಚು ರೆವಿನ್ಯೂ ಬರುತ್ತದೆ ಎಂಬುದನ್ನು ತಿಳಿದು ಕೊಂಡು ಅಧಿಕಾರಿಗಳು ನಮಗೆ ಸಲಹೆ ಕೊಡುತ್ತಾರೆ. ಅಧಿಕಾರಿಗಳ ಜೊತೆಯಲ್ಲಿ ನಾವು ಚರ್ಚೆಮಾಡಿ ಅವರಿಗೆ ನಾವು ಈ ರೀತಿ ಮಾಡಿ ಎಂದು ಸಲಹೆ ಕೊಡುತ್ತೇವೆ. ಈ ಪ್ರಕಾರವಾಗಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ವರಮಾನ ಬಂದಿದೆ ಎಂದು ನಾನು ಅಂಕಿಸಂಖ್ಯೆಗಳ ಮುಖಾಂತರ ಸ್ಪಷ್ಟಪಡಿಸುತ್ತೇನೆ.

ಅಲ್ಲಿಂದ ಇನ್ನೂ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಒಬ್ಬರು ಮಾನ್ಯ ಸದಸ್ಯರು ಹೇಳುತ್ತಿದ್ದರು, ಮುಖ್ಯ ಮಂತ್ರಿಗಳ ಹತ್ತಿರ ಕೆಲವರು ಕಾಂಪ್ರಮೈಸ್‌ಗೆ ಬಂದಿದ್ದರು ಅವರಿಗೆ ಮುಖ್ಯ ಮಂತ್ರಿಗಳು 40 ಲಕ್ಷ ರೂಪಾಯಿಗಳನ್ನು ಕಳೆಮಕೊಳ್ಳುತ್ತೀರಾ ಎಂದು ಕೇಳಿದರು, ಆಂಧ್ರದಿಂದ ಒಬ್ಬ ಮಂತ್ರಿಗಳು ಬಂದಿದ್ದರು, ಮತ್ತೊಬ್ಬರು ಬಂದಿದ್ದರು, ಎಲ್ಲರೂ ಕಾಂಪ್ರಮೈಜ್

ಸಲುವಾಗಿ ಪ್ರಯತ್ನ ಮಾಡುತ್ತಿದ್ದರು ಎಂಬ ಅನೇಕ ವಿಚಾರಗಳನ್ನು ಹೇಳಿದರು. ಒಬ್ಬರು ಮಾನ್ಯ ಸದಸ್ಯರು ಮುಖ್ಯಮಂತ್ರಿಗಳು ಸಿಂಡಿಕೇಟ್ ಮಾಡಿಕೊಂಡಿದ್ದಾರೆಂದು ಹೇಳಿದರು. ಅವರ ಮನಸ್ಸಿನಲ್ಲಿ ಏನು ಕಿಚ್ಚು ಇದೆ ಎಂಬುದು ನನಗೆ ಗೊತ್ತು. ಅದು ಬೇರೆಯವರಿಗೆ ಗೊತ್ತಿಲ್ಲ, ಸಭೆಗೆ ಗೊತ್ತಿಲ್ಲ. ಅದನ್ನು ಇಲ್ಲಿ ಹೇಳುವುದರಿಂದ ಕಹಿ ವಾತಾವರಣ ಬರುತ್ತದೆ. ಆದ್ದರಿಂದ ಹೇಳುವುದಿಲ್ಲ. ನಿರಂಜನ ಎಂಬುವರ ಮುಖವನ್ನು ನಾನು ನೋಡಿಲ್ಲ ಭೂಮಾರೆಡ್ಡಿ ಎಂಬುವರನ್ನು ಸಹ ನಾನು ನೋಡಿಲ್ಲ. ಆದರೆ ಒಬ್ಬ ಪಾರ್ಲಿಮೆಂಟ್ ಸದಸ್ಯರು ಮಾತ್ರ ಒಂದು ಸಲ ನನ್ನ ಹತ್ತಿರ ಬಂದು ಇಬ್ಬರಿಗೆ ಜಗಳ ಬಂದಿದೆ, ಬಹಳ ಹಾನಿಯಾಗುತ್ತಿದೆ, ನೀವು ಮಧ್ಯಸ್ಥಿಕೆ ವಹಿಸಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ಮುಖ್ಯಮಂತ್ರಿಯಾಗಿ ನಾನು ಕಾಂಪ್ರಮೈಸ್ ಮಾಡಿಸುವಂತಹ ಒಂದು ಕೆಲಸಕ್ಕೆ ಕೈಹಾಕುವುದಕ್ಕೆ ತಯಾರಿಲ್ಲ, ನೀವುಗಳು ಯಾರಾದರೂ ದೊಡ್ಡವರು, ಹಿರಿಯರು ಸೇರಿಕೊಂಡು ಒಂದು ಕಾಂಪ್ರಮೈಸ್‌ಗೆ ಬರಬಹುದು, ಈ ವಿಚಾರದ ಬಗ್ಗೆ ಮತ್ತೆ ನನ್ನ ಹತ್ತಿರ ಬರಬೇಡಿ ಎಂದು. ಅನಂತರ ನನ್ನ ಹತ್ತಿರ ಯಾರೂ ಬರಲಿಲ್ಲ. ಈ ವಿಚಾರದಲ್ಲಿ ಹೈದರಾಬಾದ್‌ನಲ್ಲಿಯಾಗಲೀ, ಬೆಂಗಳೂರಿನಲ್ಲಿಯಾಗಲೀ ನನ್ನ ಮುಖೇನ ಕಾಂಪ್ರಮೈಸ್ ಆಗಿಲ್ಲ. ನಾನು ಮುಖ್ಯಮಂತ್ರಿಯಾದ ಮೇಲೆ 5-6 ಸಲ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಹೋಗಿ ಈ ವಿಚಾರದ ಬಗ್ಗೆ ಹೇಳಿ ಬಂದಿದ್ದೇನೆ ಎಂದು ಹೇಳಿದರು. ಈ ಬಗ್ಗೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ನಾನು ಮುಖ್ಯಮಂತ್ರಿಯಾದ 2 ತಿಂಗಳ ಮೇಲೆ ಗುಲಬರ್ಗಾಕ್ಕೆ ಹೋಗಿದ್ದೇನೆ. ಮೇ 28 ಅಥವಾ 29 ರಂದು ನನ್ನನ್ನು ಮುಖ್ಯಮಂತ್ರಿಯಾಗಿ ಆರಿಸಿದರು. ಈ ಹರಾಜು ನಡೆದಿರುವುದು ಮೇ 25ನೇ ತಾರೀಖು. ನಾನು ಮುಖ್ಯಮಂತ್ರಿಯಾದ 6 ತಿಂಗಳ ಮೇಲೆ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ. ಕೆಲಸದ ಒತ್ತಡದಿಂದ ನಾನು ಜಾಗ್ರತೆ ನನ್ನ ಕ್ಷೇತ್ರಕ್ಕೆ ಹೋಗುವುದಕ್ಕಾಗಲಿಲ್ಲ. ಮಾನ್ಯ ಸದಸ್ಯರು ಏನಾದರೂ ಹೇಳಬೇಕೆಂದರೆ ಸ್ವಲ್ಪ ವಿಚಾರ ಮಾಡಿ ವಿಷಯ ಸರಿಯಾಗಿ ತಿಳಿದುಕೊಂಡು ಹೇಳಬೇಕು. ನಾನು 6 ಸಲ ಹೋಗಿಯೇ ಇಲ್ಲ, ಇನ್ನೂ 2-3 ಸಲ ಹೋದರೆ 6 ಸಲ ಆಗಬಹುದು. ಆ ಭಾಗದವರು ನನ್ನನ್ನು ಬರಬೇಕೆಂದು ಕರೆಯುತ್ತಲೇ ಇದ್ದಾರೆ. ನಮ್ಮ ಭಾಗದಿಂದ ತಾವು ಮುಖ್ಯಮಂತ್ರಿಗಳಾಗಿದ್ದೀರಿ. ಆದ್ದರಿಂದ ತಮ್ಮ ಕ್ಷೇತ್ರಕ್ಕೆ ಬರಬೇಕೆಂದು ಅಲ್ಲಿಯ ಜನರು ಇಚ್ಛಿಪಡುತ್ತಾರೆ. ಆದರೆ ಕೆಲಸದ ಒತ್ತಡದಿಂದ ನಾನು ಹೋಗುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಈ ಕೇಸಿನ ಬಗ್ಗೆ ಪ್ರಸ್ತಾಪ ಮಾಡುವ ಮೊದಲು ನನ್ನ ಮೇಲೆ ಲಿಮಿಟೇಷನ್ ಇವೆ. ಅದರ ಪ್ರಕಾರ ಮಾನ್ಯ ಸಭೆಗೆ ತಿಳಿಸುತ್ತೇನೆ. ಈ ಕೇಸ್ ಬಗ್ಗೆ ಹೈಕೋರ್ಟಿನ ಮತ್ತು ಸುಪ್ರೀಂ ಕೋರ್ಟಿನ ಎರಡು ಜಡ್ಜ್‌ಮೆಂಟ್‌ಗಳಿವೆ. ಇವೆರಡೂ ಸಹ ಚರ್ಚೆಗೆ ಬರುತ್ತವೆ. ಈ ಜಡ್ಜ್‌ಮೆಂಟ್‌ಗಳು ಚರ್ಚೆಗೆ ಬಂದಾಗ ಮಾನ್ಯ ಸದಸ್ಯರುಗಳು ತಮಗೆ ತಿಳಿದ ಹಾಗೆ ಮಾತನಾಡಿದ್ದಾರೆ. ನಾನು ಮಾತ್ರ ಮುಖ್ಯಮಂತ್ರಿಯಾಗಿ ಜವಾಬ್ದಾರಿಯಿಂದ ಮಾತನಾಡಬೇಕಾಗಿದೆ. ಮತ್ತು ತೂಕದಿಂದ ಮಾತನಾಡಬೇಕಾಗಿದೆ. ಆರ್ಟಿಕಲ್ 211 ರ ಪ್ರಕಾರ.....

**ಶ್ರೀ ಕೆ.ಹೆಚ್. ಪಾಟೀಲ್ (HUBLI) :-**

On a point of order, Sir, The Chief Minister while addressing this House has stated that he is speaking with great responsiblity as a

Chief Minister as if other members have no responsiblity. The Chair should give him direction. We have equal responsblity if not more.

Mr. Speaker - The Hon'. Chief Minister has not said that the others have no responsiblity. Therefore there is no point of order.

ಶ್ರೀ ವೀರೇಂದ್ರ ಪಾಟೀಲ್ :-

ಅಧ್ಯಕ್ಷರೇ ಏನಾದರೂ ಹೇಳಬೇಕಾದರೆ ನನ್ನಷ್ಟಕ್ಕೆ ನಾನು ಹೇಳುವುದಕ್ಕಾಗುವುದಿಲ್ಲ. ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಕಾನ್ಸ್‌ಟಿಟ್ಯೂಷನ್ನಿನ 211 ಆರ್ಟಿಕಲ್‌ನಲ್ಲಿ ಈ ರೀತಿ ಹೇಳಿದೆ.

" No discussion shall take place in the Legislature of a State with respect to the conduct of any Judge of the Supreme Court or of a High Court in the discharge of his duties ", ಅಂದರೆ they have delivered judgment while discharging their duties as Judge. ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಮೇಲೆ ಹೆಚ್ಚು ಮಾತನಾಡುವುದು ಕಷ್ಟವಾಗುತ್ತದೆ. ಅನೇಕ ವಿಚಾರಗಳನ್ನು ಇಲ್ಲಿ ಹೇಳುವುದು ಕಷ್ಟವಾಗುತ್ತದೆ. ಬಹಳ ತೂಕದಿಂದ ಪ್ರತಿಯೊಂದು ಶಬ್ದವನ್ನು ವಿಚಾರ ಮಾಡಿ ಮಾತನಾಡಬೇಕಾದ ಅವಶ್ಯಕತೆ ಇದೆಯೆಂದು ತಿಳಿದುಕೊಂಡಿದ್ದೇನೆ, ಒಂದು ವಿಚಾರವನ್ನು ಮಾನ್ಯ ಸಭೆಗೆ ತಿಳಿಸಬೇಕೆಂದಿದ್ದೇನೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದೇನೆ. ಹೊರಗಡೆ ಹೇಳಿದ್ದೇನೆ, ಮತ್ತು ಅದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದು ಏನೆಂದರೆ, ಎಲ್ಲಾ ಅಧಿಕಾರಿಗಳು ನಾವು ತೆಗೆದುಕೊಂಡ ನಿರ್ಣಯದ ಪ್ರಕಾರ ಯಾವುದೇ ಕೆಲಸಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ತಡವಾಗಬಾರದು, ಡಿಲೇ ಆಗಬಾರದು, ಆ ರೀತಿಯಾಗುವುದನ್ನು ನಿಲ್ಲಿಸಬೇಕು ಎಂಬುದು ಈ ಮಂತ್ರವನ್ನು ಹೇಳುತ್ತಲೇ ಇದ್ದೇವೆ. ಆ ಒಂದು ವಾತಾವರಣವನ್ನು ನಿರ್ಮಿಸುತ್ತಿದ್ದೇವೆ. ಅದು ಬರುತ್ತಿದೆ. ಎಲ್ಲಾ ಅಧಿಕಾರಿಗಳು ಆ ರೀತಿ ನಡೆಯುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ವಿಚಾರಗಳು ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿದ್ದವು. ಅವುಗಳ ಬಗ್ಗೆ 5-6 ತಿಂಗಳಲ್ಲಿ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆ ಇನ್ನು ಏನೂ ಬಾಕಿ ಇಲ್ಲ ಎಂದು ಹೇಳುತ್ತಿಲ್ಲ. ಮುಖ್ಯವಾದ ವಿಚಾರಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದರೆ ನಾವು ತಡಮಾಡಬಾರದು ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಒಂದು ಪ್ರಶ್ನೆ ಈಗ ನಮ್ಮ ಮುಂದೆ ಇದೆ. ಇದನ್ನು ವಿಚಾರ ಮಾಡಬೇಕಾಗಿದೆ. ವಿಚಾರ ಮಾಡಬೇಕಾದಾಗ ಯಾವ ಅಂಶಗಳನ್ನೂ ಮಾನ್ಯ ಸದಸ್ಯರಿಗೆ ಮುಚ್ಚಿ ಇಟ್ಟಿಲ್ಲ. ಅಸೆಂಬ್ಲಿಯ ಇತಿಹಾಸದಲ್ಲಿ ಇದೇ ಮೊದಲ ಸಲ ಮಾನ್ಯ ಸದಸ್ಯರಿಗೆ ನಮ್ಮಿಂದ ಕೊಡುವುದಕ್ಕೆ ಸಾಧ್ಯವಾದ ಎಲ್ಲಾ ಲಿಟರೇಚರ್‌ಗಳನ್ನು ಸಹ ಹಂಚಿದ್ದೇವೆ. ರಿವಿಜನ್ ಪಿಟಿಷನ್, ಸ್ಟೇ ಆರ್ಡರ್, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳ ಜಡ್ಜಮೆಂಟ್‌ಗಳು ಎಲ್ಲವನ್ನೂ ಹಂಚಿದ್ದೇವೆ. ಏನು ನಡೆದಿದೆ. ಏನಾಗಿದೆ ಎಂಬುದನ್ನು ಎಲ್ಲಾ ಮಾನ್ಯ ಸದಸ್ಯರುಗಳೂ ಸಹ ತಿಳಿದುಕೊಳ್ಳಲಿ, ಓದಲಿ ಎಂಬುದಾಗಿ ಎಲ್ಲಾ ಲಿಟರೇಚರ್‌ಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ವಿನಂತಿ

ಮಾಡಿಕೊಳ್ಳುತ್ತಿದೇನೆ, ಮೈಂಡ್ ಮೇಕಪ್ ಮಾಡಿಕೊಂಡು ಕೇವಲ ಸರ್ಕಾರದ ಹುಳುಕನ್ನು ತೋರಿಸಬೇಕೆಂಬ ವಿಚಾರ ಇಟ್ಟುಕೊಳ್ಳದೆ ನಿರ್ಮಲ ಅಂತಃಕರಣದಿಂದ ನಾವು ಕೊಟ್ಟಿರುವ ಲಿಟರೇಚರ್‌ಗಳನ್ನೆಲ್ಲಾ ಓದಿಕೊಂಡು ಒಂದು ನಿರ್ಣಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗಿನ ಪ್ರಶ್ನೆಯಿರುವುದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಬಗ್ಗೆ ಹೈಕೋರ್ಟಿನವರು ಒಂದು ಅಭಿಪ್ರಾಯಪಟ್ಟಿದ್ದಾರೆ ಸುಪ್ರೀಂ ಕೋರ್ಟಿನವರು ಒಂದು ಅಭಿಪ್ರಾಯಪಟ್ಟಿದ್ದಾರೆ. ಇವೆರಡು ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆ. ಅವರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಾತ್ರ ಹೇಳಿದ್ದಾರೆ. ಇವತ್ತು ಬಂದಿರುವಂತಹ ಪ್ರಶ್ನೆಯೆಂದರೆ, ಹೈಕೋರ್ಟಿನವರು ಡಿವಿಜನಲ್ ಕಮೀಷನರ್ ಅವರಿಗೆ ರೂಲ್ 19 ರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವಿತ್ತು, ಆದ್ದರಿಂದ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಸುಪ್ರೀಂ ಕೋರ್ಟಿನವರು ರೂಲ್ 19ರ ಪ್ರಕಾರ ಭೂಮಾರೆಡ್ಡಿ ವಿಷಯದಲ್ಲಿ ಡಿವಿಜನಲ್ ಕಮೀಷನರ್‌ಗೆ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಈ ಒಂದು ಒಪೀನಿಯನ್ ಹೇಗೆ ಕ್ಲ್ಯಾಷ್ ಆಗುತ್ತದೆ ಎನ್ನುವುದು ಹೈಕೋರ್ಟಿನ ಹಾಗೂ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನಲ್ಲಿ ಬರುತ್ತದೆ. ಇವೆಲ್ಲಾ ಬರುವುದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟಿನವರು 38ನೇ ಪೇಜಿನಲ್ಲಿ ಕೊನೆಯಲ್ಲಿ ಹೀಗೆ ಹೇಳಿದ್ದಾರೆ:

" It is rather surprising that the Government acted so hastily and issued licences to respondent No. 4 on or about September 18. It is not quite clear how licences in respect of 1168 shops could be issued on a singal day. The effect of this precipitate action on the part of the Government, was that the appellant could not on the next day obtain a stay of the operation of the High Court's Order, there is ground for suspecting that the Government was favouring respondent No.4"

ಇದರ ಅರ್ಥವೇನು ಎಂದರೆ ಒಂದೇ ದಿವಸದಲ್ಲಿ 1168 ಷಾಪುಗಳಿಗೂ ಲೈಸೆನ್ಸ್ ಹೇಗೆ ಕೊಟ್ಟರು ಎಂದು ಅವರಿಗೆ ಆಶ್ಚರ್ಯವಾಗಿದೆ. ಇಂತಹ ಅಬಸರ್‌ವೇಷನ್ ಮಾಡುವುದಕ್ಕೆ ಕಾರಣವೇನು ಎಂದರೆ 1168 ಷಾಪುಗಳಿಗೂ ಒಂದೇ ದಿವಸದಲ್ಲಿ ಲೈಸನ್ಸ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಬಗ್ಗೆ ಅವರಿಗೆ ಸಂಶಯ ಬಂದಿರಬಹುದು. ಅವರು ಹೇಳುವುದರಲ್ಲಿ ಏನು ಅರ್ಥವಾಗುತ್ತದೆ ಎಂದರೆ ಒಂದೇ ದಿವಸದಲ್ಲಿ ಲೈಸನ್ಸ್ ಕೊಡಲು ಆಗುವುದಿಲ್ಲ ಮೂರು ನಾಲ್ಕು ದಿನಗಳಲ್ಲಿ ಕೊಡಬಹುದು ಎನ್ನುವುದು ಅವರ ಅಬ್‌ಸರ್‌ವೇಷನ್‌ನ್ನಿಂದ ಅರ್ಥವಾಗುತ್ತದೆ. ಇಲ್ಲಿ ನಾವು ಒದಗಿಸಿರುವ ಕ್ರೊನಾಲಾಜಿಕಲ್ ಆರ್ಡರಿನಲ್ಲಿ ಎಲ್ಲ ವಿವರಗಳೂ ಇವೆ. ಇದರಲ್ಲಿರುವಂತೆ 10-5-1968 ರಲ್ಲಿ ನೋಟೀಫಿಕೇಷನ್‌ನನ್ನು ಇಷ್ಯೂ ಮಾಡಿ ಇದರಲ್ಲಿ ಗುಲ್ಬರ್ಗಾದಲ್ಲಿ ಟೆಂಡರು ಹಾಕಬೇಕೆಂದು ಕರೆದಾಗ, ಅದರಲ್ಲಿ ಲಾಸ್ಟ್ ಡೇಟು 27-5-1968ರ ದಿನದಂದು 3 ಗಂಟೆವರೆಗೆ ಎಂದು ಇತ್ತು ಇದನ್ನು ಅಲ್ಲಿನ ಡಿವಿಜನಲ್ ಕಮೀಷನರ್‌ರವರಿಗೆ ಹಾಕಬೇಕೆಂದು ಹೇಳಲಾಗಿತ್ತು. 17-5-1968ರಂದು ಶ್ರೀ ಭೂಮರೆಡ್ಡಿಯವರು 9,99,999 ರೂಪಾಯಿಗಳಿಗೆ ಟೆಂಡರನ್ನು ಹಾಕಿದರು. 4-6-1968ರಲ್ಲಿ ಡಿವಿಜನಲ್ ಕಮೀಷನರ್‌ವರು ಇದರ ಸೇಲನ್ನು ಕನ್‌ಫರ್ಮ್ ಮಾಡಿದರು 6-6-1968ರಲ್ಲಿ ಭೂಮರೆಡ್ಡಿಯವರಿಗೆ ನೋಟೀಸು ಕೊಟ್ಟು ರೂಲು 19 ರ ಪ್ರಕಾರ ಪುನಃ ಡಿಪಾಸಿಟ್ ಕಟ್ಟಬೇಕೆಂದು ಸೂಚನೆ ಕೊಟ್ಟರು.

## 6. ಭ್ರಷ್ಟಾಚಾರದ ಬಗ್ಗೆ ಚರ್ಚೆ ಮತ್ತು ಸ್ಪಷ್ಟೀಕರಣ. (23ನೇ ಜನವರಿ 1969)

ಶ್ರೀ ವೀರೇಂದ್ರ ಪಾಟೀಲ್ :-

ಕರಪ್‌ಶನ್ ಯಾವ ಯಾವ ಹಂತದಲ್ಲಿ ಇದೆ ಎಂದು ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ಇವತ್ತು ಕೆಲವು ರಾಜ್ಯಗಳಲ್ಲಿ ಸ್ವಲ್ಪ ಕಡಿಮೆ ಇರಬಹುದು, ಕೆಲವು ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚಿಗೆಯಾಗಿರಬಹುದು. ಆದರೂ ಕರಪ್‌ಶನ್ ಇದೆ. ಆದರೆ ನಾನು ಬಂದ ಮೇಲೆ ಡಿವಿಜನಲ್ ಕಮೀಷನರ್ ಜೊತೆಯಲ್ಲಿ, ಡೆಪ್ಯುಟಿ ಕಮೀಷನರ್‌ಗಳ ಜೊತೆಯಲ್ಲಿ ಇದರ ಬಗ್ಗೆ ಆಡಳಿತದಲ್ಲಿ ಒಂದು ಬಿಗಿಯನ್ನು ಇಟ್ಟುಕೊಳ್ಳುವಂತೆ ಅನೇಕ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ವಿಚಾರ ಮಾಡಿದ್ದೇನೆ.

ಅದೇ ರೀತಿ ಕರಪ್‌ಶನ್ ಹೋಗಬೇಕು. ಇದರ ಬಗ್ಗೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಇದನ್ನು ಬಹುಶಃ ಮಾನ್ಯ ಸದಸ್ಯರು ಒಪ್ಪುತ್ತಾರೆಯೋ ಇಲ್ಲವೋ ಗೊತ್ತಿಲ್ಲ, ಇತ್ತೀಚಿನ 6-7 ತಿಂಗಳಲ್ಲಿ ಒಂದು ಒಳ್ಳೆಯ ವಾತಾವರಣ ಬೆಳೆಯುತ್ತಿದೆ. ಇವೊತ್ತಿನ ದಿವಸ ರಾಜ್ಯದ ಆಡಳಿತ ಮಾಡುವಂಥವರು ಆದಷ್ಟು ಜಾಗ್ರತೆ ಒಂದು ನಿರ್ಣಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅನೇಕ ವರ್ಷಗಳಿಂದ ಇದ್ದಂತಹ ಅನೇಕ ಸಮಸ್ಯೆಗಳು ಇತ್ಯರ್ಥವಾಗುತ್ತಿವೆ ಎನ್ನುವ ಒಂದು ವಾತಾವರಣ ಬೆಳೆಯುತ್ತಾ ಬಂದಿದೆ. ಮಾಯ ಮಾಡಿ ತೋರಿಸುವ ವಿಷಯ ಇದಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈಗ 7-8 ತಿಂಗಳಿಂದ ಹಿಂದಿನಿಂದ ಇದ್ದಂತಹ ಕೆಲವು ಸಮಸ್ಯೆಗಳನ್ನು ಇತ್ಯರ್ಥ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಯತ್ನದಲ್ಲಿ ಎಲ್ಲರೂ ತೊಡಗಿದ್ದೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಒಂದು ಕೆಲಸವನ್ನು ನಾವು ಮಾಡುತ್ತಿದ್ದೇವೆ. ಕೆಲವು ಕೆಲಸಗಳನ್ನು ಮಾಡಿದ್ದೇವೆ, ಮತ್ತು ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಚೆನ್ನಬಸಪ್ಪನವರು ಕೆಲವು ರೂಲ್ಸ್‌ಗಳು ಯಾವಾಗಲೋ ಹಿಂದೆ ಮಾಡಿದಂಥಾದ್ದು ಅದನ್ನು ಬದಲಾಯಿಸಬೇಕೆಂದು ಹೇಳಿದ್ದಾರೆ. ಅದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವ ದೃಷ್ಟಿಯಿಂದ ಪ್ರತಿಯೊಂದು ಇಲಾಖೆಯಲ್ಲಿಯೂ ಸ್ಕ್ರೀನಿಂಗ್ ಕಮಿಟಿಗಳನ್ನು ಮಾಡಬೇಕೆಂದು ಹೊರಟಿದ್ದೇವೆ. ಸ್ಕ್ರೀನಿಂಗ್ ಕಮಿಟಿಯ ಕೆಲಸ ಏನು ಎಂದರೆ ಯಾರು ಯಾರು ಅಧ್ಯಕ್ಷರಾಗಿದ್ದಾರೆ, ಯಾರು ಯಾರು ಕಾನ್‌ಫಿಡೆನ್ಷಿಯಲ್ ರೆಕಾರ್ಡನ್ನು ಹೊರಕ್ಕೆ ಹಾಕುತ್ತಾರೆಯೋ, ಯಾರ ಯಾರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಬಗ್ಗೆ ಅನುಮಾನ ಇದೆಯೋ, ಯಾರು ಯಾರು ತನಿಖೆಗೆ ಒಳಗಾಗಿ ಆ ತನಿಖೆಯಲ್ಲಿ ಶಿಕ್ಷೆಯಾಗಿದೆಯೋ ಅಂಥವರನ್ನು ಸ್ಕ್ರೀನ್ ಮಾಡಿ 50 ವರ್ಷಕ್ಕೆ ರಿಟೈರ್ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಪ್ರತಿಯೊಂದು ಇಲಾಖೆಯಲ್ಲಿಯೂ

ಕೂಡ ಕೆಲಸ ಮಾಡತಕ್ಕ ನೌಕರರಲ್ಲಿ ಯಾರು ಅದಕ್ಷರಾಗಿದ್ದಾರೆ, ಯಾರ ವಿಷಯದಲ್ಲಿ ಆನೆಸ್ಟಿ, ಇಂಟೆಗ್ರಿಟಿ ಇವುಗಳಲ್ಲಿ ಸಂಶಯ ಬರುತ್ತದೆಯೋ ಯಾರು ಸರ್ಕಾರದ ಮೇಲೆ, ಸಮಾಜದ ಮೇಲೆ ಹೊರೆಯಾಗುವಂಥವರು ಇರುತ್ತಾರೆಯೋ ಅಂಥವರನ್ನು ಮನೆಗೆ ಕಳುಹಿಸಬೇಕು, ಕಂಪಲ್ಸರಿ ರಿಟೈರ್ ಮಾಡಿಸಬೇಕು ಎಂದು ನಾವು ವಿಚಾರ ಮಾಡುತ್ತಿದ್ದೇವೆ. ಎಲ್ಲಾ ಕೆಲಸವನ್ನೂ ಒಂದೇ ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಕೆಲಸವನ್ನು ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರ ಒಂದು ಪರಿಣಾಮ ಏನಾದರೂ ಜನಗಳಿಗೆ ತಿಳಿಯಬೇಕಾದರೆ, ತಲುಪ ಬೇಕಾದರೆ ಸ್ವಲ್ಪ ಮಟ್ಟಿಗೆ ಸಮಯ ಬೇಕಾಗುತ್ತದೆ.

ಶ್ರೀಮಾನ್ ಬಂಗಾರಪ್ಪನವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಸೈಟನ್ನು ಏತಕ್ಕೆ ಬದಲಾಯಿಸಿದ್ದಾರೆ ಎಂದರೆ ಮುಖ್ಯ ಮಂತ್ರಿಗಳ ಕ್ಷೇತ್ರಕ್ಕೆ ನೀರು ಬರುವ ಉದ್ದೇಶವನ್ನು ಇಟ್ಟುಕೊಂಡು ಆ ರೀತಿ ಮಾಡಿದ್ದಾರೆಂದು ಹೇಳಿದರು. ಅವರಿಗೆ ಜಾಗ್ರಫಿ ಸರಿಯಾಗಿ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಕ್ಷೇತ್ರ ಇರುವುದು ಅದಕ್ಕೆ 80 ಮೈಲಿ ದೂರದಲ್ಲಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಿಂದ ಅನುಕೂಲವಾಗುವುದು ಬೇರೆ ಕ್ಷೇತ್ರಕ್ಕೆ ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ನನ್ನ ಕ್ಷೇತ್ರವಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡಿದ್ದರಿಂದ ನಾನು ವಿಷಾದ ಪಡಬೇಕಾಗುತ್ತದೆ.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಮಾತನಾಡುತ್ತ ಮುಖ್ಯ ಮಂತ್ರಿಗಳು ಬೊಂಬಾಯಿಗೆ ಹೋಗಿ ಅಲ್ಲಿರತಕ್ಕ ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಿ ಅವರನ್ನು ಕೈ ಒಡ್ಡಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬರಬೇಕು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ತಾವು ಒಂದು ತಿಳಿದುಕೊಳ್ಳಬೇಕು ನಮ್ಮ ಜವಾಬ್ದಾರಿ ಇದೆ. ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆ ಯಾವ ವೇಗದಲ್ಲಿ ಅಭಿವೃದ್ಧಿ ಆಗಬೇಕೋ ಆ ವೇಗದಲ್ಲಿ ಅಭಿವೃದ್ಧಿಯಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ನಮ್ಮ ರಾಜ್ಯ ಪುನರ್ ವಿಂಗಡನೆ ಆದ ಮೇಲೆ ಸುಮಾರು 6-7 ವರ್ಷಗಳ ಕಾಲ ವಿದ್ಯುಚ್ಛಕ್ತಿ ಇರಲಿಲ್ಲ. ಆದ್ದರಿಂದ ನಮ್ಮಲ್ಲಿ ಹೆಚ್ಚು ಕೈಗಾರಿಕೆಗಳು ಬರುವುದಕ್ಕೆ ಅವಕಾಶವಿರಲಿಲ್ಲ. ಈಗ ಸುದೈವದಿಂದ ನಮಗೆ ಸಾಕಷ್ಟು ವಿದ್ಯುಚ್ಛಕ್ತಿ ಬಂದಿದೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅಭಿವೃದ್ಧಿ ಮಾಡುವುದಕ್ಕೆ ವಾತಾವರಣ ಚೆನ್ನಾಗಿದೆ. ಮೈಸೂರು ರಾಜ್ಯದಲ್ಲಿ ಹೋಗಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬಹಳ ಅನುಕೂಲತೆ ಇದೆ ಎಂದು ಅನೇಕರು ತಿಳಿದುಕೊಂಡಿದ್ದಾರೆ. ಆದ್ದರಿಂದ ಹೊರಗಡೆಯವರು ನಮ್ಮ ದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬರಬಹುದು. ನಮ್ಮ ದೇಶದವರಿಗೆ ಅನುಕೂಲ ಮಾಡಬಾರದು ಎಂದೇನೂ ನಾವು ಇಲ್ಲ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮವರು ಮುಂದೆ ಬರಬೇಕೆಂದು ಎಲ್ಲಾ ಕಡೆಗಳಲ್ಲೂ ಹೇಳುತ್ತಿದ್ದೇವೆ. ಆದರೆ ನಮ್ಮವರು ಯಾರು ಹಾಗೆ ಮುಂದೆ ಬರುತ್ತಿಲ್ಲ. ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ, ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೆ ನಾವು ಸಹಾಯ

ಮಾಡುತ್ತೇವೆಂದು ನಾವು ಹೇಳಿದ್ದೇವೆ. ನಾವು ಬೊಂಬಾಯಿಗೆ ಹೋದಾಗ ಕೂಡ ಸಾಕಷ್ಟು ರೆಸ್‌ಪಾನ್ಸ್ ಬಂತು. ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಸಲುವಾಗಿ ಯಾವ ಅರ್ಜಿಗಳು ಬರುತ್ತವೆಯೋ ಅವುಗಳನ್ನು ನಾವು ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಅವುಗಳಿಗೆ ಕೇಂದ್ರ ಸರ್ಕಾರದವರಿಂದ ಇನ್ನೂ ಲೈಸನ್ಸ್ ಸಿಕ್ಕಿಲ್ಲ. ಅವುಗಳಿಗೆ ಲೈಸನ್ಸ್ ಕೊಟ್ಟ ತಕ್ಷಣ ಕೈಗಾರಿಕೆಯನ್ನು ಅವರು ಸ್ಥಾಪನೆ ಮಾಡುತ್ತಾರೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಲೈಸನ್ಸ್ ಕೊಡುವ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಯಾವ ದಾಕ್ಷಿಣ್ಯವೂ ಇಲ್ಲದೆ ನಾವು ಕಾಗದವನ್ನು ಬರೆಯುತ್ತೇವೆ. ಇದರಲ್ಲಿ ಮುಖ್ಯವಾಗಿ ನಮ್ಮ ಹತ್ತಿರ ಸಾಕಾದಷ್ಟು ಹಣ ಇದ್ದರೆ ನಾವು ಯಾರ ಹತ್ತಿರವೂ ಹೋಗುತ್ತಾ ಇರಲಿಲ್ಲ. ನಾವೇ ಮಾಡಬಹುದಾಗಿತ್ತು. ಹಣದ್ದು ಒಂದು ಮುಖ್ಯ ಕಾರಣ ಇದೆ. ಆದ್ದರಿಂದ ಇದನ್ನು ಯಾವ ರೀತಿ ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಈಗ ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಒಂದು ಬೃಹದಾಕಾರವಾಗಿ ಬೆಳೆಯುತ್ತಿದೆ. ನಮಗೆ ಆಶ್ಚರ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಅನ್‌ಸ್ಕಿಲ್ಡ್ ಅನ್ ಎಂಪ್ಲಾಯಿಸ್ 1,45,000 ಜನ ಇದ್ದಾರೆ. ಗ್ರಾಜುಯೇಟ್ಸ್ ಮತ್ತು ಪೋಸ್ಟ್ ಗ್ರಾಜುಯೇಟ್ಸ್‌ಗಳು 82,000 ಜನ ಇದ್ದರೆ ಇಂಜಿನಿಯರುಗಳು 1200 ಜನಗಳು ಇದ್ದಾರೆ. ಡಿಪ್ಲೊಮೋ ಹೋಲ್ಡರುಗಳು 5-6 ಸಾವಿರ ಜನಗಳು ಇದ್ದಾರೆ.

ಶ್ರೀ ಎಚ್.ಬಿ. ಜ್ವಾಲನಯ್ಯ :-

ಮೂರು ಪಂಚವಾರ್ಷಿಕ ಯೋಜನೆಗಳಿಂದ ಏನು ಪ್ರತಿಫಲ ಆಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :-

ಇವೊತ್ತು ನಾನು ಹೇಳುವಂಥಾದ್ದು ನಿರುದ್ಯೋಗ ಸಮಸ್ಯೆ ಅರ್ಬನ್ ಏರಿಯಾದಲ್ಲಿ ಹೆಚ್ಚು ಕಾಣುತ್ತಿದೆ. ಹಳ್ಳಿಗಳಲ್ಲಿಯೂ ನಿರುದ್ಯೋಗ ಸಮಸ್ಯೆ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಈ ರೀತಿಯಾಗಿ ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚು ಹೆಚ್ಚು ಬೆಳೆಯುತ್ತಿದೆ. ಇದರ ಸಲುವಾಗಿ ನಾವು ಸಹ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅವುಗಳನ್ನು ಬೆಳೆಸುವುದಕ್ಕೆ ನಾವು ಬಹಳ ಮಟ್ಟಿಗೆ ಪ್ರಯತ್ನ ಮಾಡಬೇಕು. ಮದ್ರಾಸಾಗಲೀ, ಕಲ್ಕತ್ತವಾಗಲೀ, ಬೊಂಬಾಯಿ ಆಗಲೀ, ಅಲ್ಲಿಯವರು ಕೈಗಾರಿಕೋದ್ಯಮಿಗಳು ನಮ್ಮಲ್ಲಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಅದು 500 ಕೋಟಿ, 600 ಕೋಟಿ ರೂಪಾಯಿಗಳ ಯೋಜನೆಯಾಗುತ್ತದೆ. ಆಗ ಅದರಿಂದ ನಮಗೆ ಹೆಚ್ಚು ವರಮಾನ ಬರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿರುವುದರಿಂದ ಅದರಿಂದ ನಮಗೆ ಎಷ್ಟೋ ಆದಾಯ ಸಿಕ್ಕುತ್ತದೆ. ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಾಂಟ್ಯಾಕ್ಸ್ ಮೂಲಕ ಅನೇಕ ರೀತಿಯಿಂದ ನಮ್ಮ ಸರ್ಕಾರಕ್ಕೆ ವರಮಾನ ಬರುತ್ತದೆ. 2,000 ಟನ್ ಕ್ರಷಿಂಗ್ ಕ್ಯಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಲ್ಲಿ

ಸರ್ಕಾರಕ್ಕೆ 30 ಲಕ್ಷ ರೂಪಾಯಿಗಳ ವರಮಾನ ಬರುತ್ತದೆ. 2,500 ಟನ್ ಕ್ಯಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಿಂದ 85 ಲಕ್ಷ ರೂಪಾಯಿ ಸರ್ಕಾರಕ್ಕೆ ವರಮಾನ ಬರುತ್ತದೆ. $2^1/_2$ ಯಿಂದ 3 ಕೋಟಿ ಟನ್ ಕ್ರಷಿಂಗ್ ಕ್ಯಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಿಂದ ನಮಗೆ ಎಂದರೆ ಸರ್ಕಾರಕ್ಕೆ ನೇರವಾಗಿ ಒಂದು ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ನಮ್ಮ ದೇಶಕ್ಕೆ ವರಮಾನ ಯಾವ ರೀತಿಯಿಂದ ಹೆಚ್ಚಿಗೆ ಬರುವ ಹಾಗೆ ವಿಚಾರ ಮಾಡತಕ್ಕ ಎಲ್ಲಾ ಮಾತುಗಳನ್ನೂ ನಾವು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಎನ್. ಕೃಷ್ಣನ್ :-

ಕೆಲವು ಸರ್ಕಾರದ ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ. ಅವು ಯಾವ ಪರಿಸ್ಥಿತಿಯಲ್ಲಿ ಇವೆ ಎಂಬುದನ್ನು ತಿಳಿದುಕೊಂಡು ಅದಕ್ಕೆ ಏನಾದರೂ ಮಾಡಿ.

ಶ್ರೀ ವೀರೇಂದ್ರ ಪಾಟೀಲ್ :-

ನಮ್ಮಲ್ಲಿ ಕೆಲವು ಕೈಗಾರಿಕೆಯಲ್ಲಿ ನಷ್ಟವಾಗುತ್ತಿದೆ. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ, ಯಾವ ಯಾವ ಕೈಗಾರಿಕೆಯಲ್ಲಿ ನಷ್ಟವಾಗುತ್ತಿದೆ ಎಂಬುದನ್ನು ವಿಚಾರ ಮಾಡಿ ನಷ್ಟವಾಗತಕ್ಕ ಹಣವನ್ನು ಟ್ಯಾಕ್ಸ್ ಮೂಲಕವೋ ಅಥವಾ ಇನ್ನು ಯಾವುದಾದರೂ ಮುಖಾಂತರ ಅದನ್ನು ಮಾಡಬೇಕಾಗುತ್ತದೆ. ಮತ್ತು ಆ ರೀತಿ ಲಾಸ್ ಆಗದಂತೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

## 7. ರಾಜ್ಯಪಾಲರ ಭಾಷಣದ ಮೇಲೆ - ಅಭಾರ ಸಲ್ಲಿಸುವ ನಿಲುವಳಿಯನ್ನು ಕುರಿತು, ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ 23-01-1969

ಶ್ರೀ ವೀರೇಂದ್ರ ಪಾಟೀಲ್ :-

ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಸುಮಾರು ನಾಲ್ಕೈದು ದಿವಸಗಳವರೆಗೂ ಅನೇಕ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ, ಚರ್ಚೆಯಲ್ಲಿ ಭಾಗ ವಹಿಸಿದ್ದಾರೆ. ನಾನು ಮಾನ್ಯ ಸದಸ್ಯರು ಭಾಷಣ ಮಾಡಿದಂಥ ಬಹಳ ಸಮಯದಲ್ಲಿ ಇಲ್ಲಿಯೇ ಇದ್ದೆ. ಅವರ ವಿಚಾರಗಳು, ಅವರು ಮಾಡಿದಂಥ ಟೀಕೆ ಟಿಪ್ಪಣೆಗಳು, ಇವನ್ನೆಲ್ಲಾ ನಾನು ಕೇಳುತ್ತಿದ್ದೆ. ಅದರಲ್ಲಿ ಬಹಳಮಟ್ಟಿಗೆ ಹೊಸದೇನೂ ಇಲ್ಲ. ತಾಲ್ಲೂಕು ಬೋರ್ಡ್ ಚುನಾವಣೆ ಮತ್ತು ಚುನಾವಣೆಗಳ ಸಮಯದಲ್ಲಿ ತಮ್ಮ ತಮ್ಮ ಮತ ಕ್ಷೇತ್ರದಲ್ಲಿ ಏನಾಯಿತು ಎಂದು ಹೇಳುವುದು ಒಂದು ಹೊಸದು. ಇದರ ಜೊತೆಯಲ್ಲಿ ಒಂದೆರಡು ಹೊಸದೂ ಎತ್ತಿರಬಹುದು. ಹೊರತಾಗಿ ಉಳಿದ ವಿಚಾರಗಳೆಲ್ಲ 1962ನೇ ಇಸವಿಯಿಂದಲೂ ಕೇಳಿಕೊಂಡು ಬಂದ ವಿಚಾರಗಳನ್ನೇ ಹೇಳಿದ್ದಾರೆ. ಅದಕ್ಕಾಗಿ ಪದೇ ಪದೇ ವಿಚಾರಗಳ ಬಗ್ಗೆ ಮತ್ತೆ ಮತ್ತೆ ಹೇಳ ಬೇಕಾದಂಥ ಪರಿಸ್ಥಿತಿ ಇರುವುದರಿಂದ ಅವುಗಳಿಗೆಲ್ಲ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ನಾನು ಪ್ರಥಮವಾಗಿ ಒಂದು ಮಾತು ಈ ಮಾನ್ಯ ಸಭೆಗೆ ನೆನಪಿಗೆ ತಂದುಕೊಡ ಬೇಕೆಂದಿದ್ದೇನೆ. ಹೋದ ಸಲ ಈ ಸಭೆ ಸೇರಿದಾಗ ನಮ್ಮಲ್ಲಿರುವ ಸೀಸನಲ್ ಕಂಡೀಷನ್ಸ್ ಬಹಳ ಕೆಟ್ಟು ಹೋಗಿದ್ದುವು, ಸಾಕಷ್ಟು ಮಳೆಯಾಗಿರಲಿಲ್ಲ, ಜನತೆಗೆ ಕೆಲಸವಿರಲಿಲ್ಲ ಮತ್ತು ಒಂದು ತರಹ ಹಾಹಾಕಾರ ಎಲ್ಲ ಕಡೆಗೂ ಇದ್ದಿತು. ಇದರ ಬಗ್ಗೆ ಚರ್ಚೆ ಇಲ್ಲಿ ಅದಾಗ ಚರ್ಚೆಗೆ ಉತ್ತರ ಕೊಡುತ್ತ ನಾನು ಒಂದು ಭರವಸೆಯನ್ನು ಕೊಟ್ಟಿದ್ದೆ. ಇವೊತ್ತು ನಮ್ಮ ಕಷ್ಟಗಳೇನೇ ಇರಲಿ ಜನ ಕಷ್ಟಕ್ಕೆ ಗುರಿಯಾಗುವುದು ಬೇಡ, ಏನಾದರೂ ನಮ್ಮ ಅಭಿವೃದ್ಧಿ ಕೆಲಸಗಳಿಗೆ ಆತಂಕ ಬಂದರೂ ಚಿಂತೆ ಇಲ್ಲ, ಜನತೆಗೆ ಕಷ್ಟವಾಗಲಾರದಂಥ ಮತ್ತು ಏನು ಕಷ್ಟವಿದೆ ಅದು ಬಹುಮಟ್ಟಿಗೆ ಕಡಿಮೆಯಾಗುವಂತೆ ಎಲ್ಲೆಲ್ಲಿ ಏನೇನು ಕಾಮಗಾರಿಗಳನ್ನು ಮಾಡಿಕೊಡಬೇಕಾಗಿದೆ, ಏನೇನು ಕಾರ್ಯಕ್ರಮ ಮಾಡಬೇಕಾಗಿದೆ ಅದನ್ನೆಲ್ಲ ಮಾಡುವುದಕ್ಕೆ ಬೇಕಾಗುವ ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನುವಂಥ ಭರವಸೆ ಕೊಟ್ಟಿದ್ದೆ. ಮತ್ತು ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಈ ಕೆಲಸ ಚೆನ್ನಾಗಿ ನಡೆಯಬೇಕು, ಕೆಲಸ ಕಾರ್ಯಗಳು ಅಲ್ಲಿ ಹೇಗೆ ನಡೆಯುತ್ತವೆ ಎನ್ನುವಂಥದ್ದನ್ನು ನೋಡಿಕೊಳ್ಳಬೇಕು ಎಂದು ಹೇಳುತ್ತಿದ್ದರು. ದೇಶದಲ್ಲಿ ಪರಿಹಾರ ಕಾಮಗಾರಿಗಳು ನಡೆಯುವಾಗ ಮಧ್ಯಸ್ಥಗಾರರಿಂದ ಕೆಲಸಗಳು ನಡೆಯದೇ ಯಾರಿಗೋಸ್ಕರವಾಗಿ ಹಣವನ್ನು ಖರ್ಚು ಮಾಡಲಾಗುತ್ತದೆಯೋ ಅವರಿಗೆ ಅದರ ಅನುಕೂಲ ಸಿಕ್ಕಲಾರದೆ ಹಣ ಪೋಲಾಗುವಂಥ ಪರಿಸ್ಥಿತಿ ಇರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದಾಗ, ಇದೇ ಮಾನ್ಯ ಸಭೆಯಲ್ಲಿ ಮಂತ್ರಿಗಳಿಗೆ ಒಬ್ಬೊಬ್ಬರಿಗೆ ಒಂದೊಂದು ಜಿಲ್ಲೆಯನ್ನು ಹಂಚಿ, ಈ ಕಾಮಗಾರಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತೇನೆ ಎನ್ನುವ

ಭರವಸೆಯನ್ನೂ ಕೊಟ್ಟಿದ್ದೆ. ಈಗಾಗಲೇ ಸುಮಾರು ಎಂಟು, ಒಂಬತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನನ್ನ ಮುಂದೆ ಅಂಕಿ ಅಂಶಗಳಿಲ್ಲ. ಅದನ್ನೆಲ್ಲಾ ಹೇಳಬೇಕಾದ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ. ಸರಿಯಾಗಿ ಎಲ್ಲ ಕಡೆಯೂ ಕಾಮಗಾರಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದೇವೆ. ಈ ಒಂದು ಕೆಲಸದಲ್ಲಿ ಕೇಂದ್ರ ಸರಕಾರದವರು ಬಹಳಮಟ್ಟಿಗೆ ಸಹಾಯ ಮಾಡಿದ್ದಾರೆ, ಇನ್ನೂ ಮಾಡಬೇಕಾಗಿದೆ. ಅವರ ಟೀಂ ಇಲ್ಲಿಗೆ ಬಂದಾಗ ಅವರನ್ನು ಕರೆದುಕೊಂಡು ಹೋಗಿ ದೇಶದಲ್ಲಿ ಎಷ್ಟು ಕೆಲಸವಾಗಬೇಕು, ಅದಕ್ಕೆಷ್ಟು ಖರ್ಚು ಮಾಡಬೇಕು ಎಂಬುದನ್ನು ತೋರಿಸಿ ಅವರಿಗೆ ಮನವರಿಕೆ ಮಾಡಿದೆವು. ಅದರ ಪರಿಣಾಮವಾಗಿ ಈಗಾಗಲೇ ಸಾಕಾದಷ್ಟು ಹಣ ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪವನ್ನು ಗ್ರ್ಯಾಂಟಿನ ರೂಪವಾಗಿ, ಇನ್ನು ಸ್ವಲ್ಪವನ್ನು ಸಾಲದ ರೂಪವಾಗಿ ಕೊಟ್ಟಿದ್ದಾರೆ. ಕೇಂದ್ರ ಸರಕಾರ ಕಷ್ಟಕಾಲದಲ್ಲಿ ನಮಗೆ ಈ ರೀತಿಯಲ್ಲಿ ಸಹಾಯ ಮಾಡಿದಕ್ಕಾಗಿ ಈ ಸರಕಾರದವರು ತುಂಬಾ ಅಭಾರಿಯಾಗಿದ್ದಾರೆಂದು ತಿಳಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ.

ತಾಲ್ಲೂಕು ಬೋರ್ಡ್ ಚುನಾವಣೆಗಳು ಬಹಳ ದಿವಸಗಳಿಂದ ಆಗದೆ ನಿಂತುಹೋಗಿತ್ತು. ಅದಕ್ಕಾಗಿ ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಪ್ರತಿಯೊಂದು ಅಧಿವೇಶನದಲ್ಲೂ ತಾಲ್ಲೂಕು ಬೋರ್ಡ್ ಚುನಾವಣೆ ಮುಂದೆ ಹಾಕುವುದು ಒಳ್ಳೆಯದಲ್ಲ, ಚುನಾವಣೆಯನ್ನು ಆದಷ್ಟು ಜಾಗ್ರತೆ ಮಾಡಬೇಕು ಎಂದು ಪದೇ ಪದೇ ಕೇಳುತ್ತಿದ್ದರು. ಬಹುಶ: ಹೋದ ಸಲ ನಾವು ಇಲ್ಲಿ ಸಭೆ ಸೇರಿದ್ದಾಗ ಅನೇಕ ಮಾನ್ಯ ಸದಸ್ಯರಿಗೆ ಒಂದು ರೀತಿಯ ಸಂಶಯವಿತ್ತು. ಬಹುಶ: ತಾಲ್ಲೂಕು ಬೋರ್ಡ್ ಚುನಾವಣೆಯನ್ನು ಇಂಥ ಹಾಹಾಕಾರ ಪರಿಸ್ಥಿತಿಯಿರುವಾಗ ಮಾಡಬೇಕೇ ಅಥವಾ ಮುಂದುವರೆಸಬೇಕೇ ಎಂದು ಯೋಚನೆ ಮಾಡುತ್ತಿದ್ದಾಗ ನಾನು ದೃಢ ನಿರ್ಧಾರ ಮಾಡಿ ಏನೇ ಬರಲಿ, ಕಷ್ಟವೇನೇ ಬರಲಿ, ಪ್ರಸಂಗವೇನೇ ಬರಲಿ, ತಾಲ್ಲೂಕು ಬೋರ್ಡ್ ಚುನಾವಣೆಯಾಗಲೇ ಬೇಕು ಎಂದು ನಿರ್ಣಯ ಮಾಡಿದ ಪ್ರಕಾರ ಈ ದಿವಸ ಸಂತೋಷದಿಂದ ಹೇಳುತ್ತಿದ್ದೇನೆ. ಇಡೀ ಸಂಸ್ಥಾನದಲ್ಲಿ ಬಹುಶ: ಕೆಲವಾರು ತಾಲ್ಲೂಕುಗಳಲ್ಲಿ ಹೈಕೋರ್ಟಿನಿಂದ ಅಥವಾ ಬೇರೆ ಕೋರ್ಟುಗಳಿಂದ ಸ್ಟೇ ಆರ್ಡರು ಬಂದಿರುವುದನ್ನು ಬಿಟ್ಟು ಎಲ್ಲಾ ತಾಲ್ಲೂಕುಗಳಲ್ಲೂ ಚುನಾವಣೆಯಾಗಿದೆ. ಈ ಚುನಾವಣೆಯ ಬಗ್ಗೆ ಕೆಲವು ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರುವುದು ಅವಶ್ಯಕ. ಹೊಸದಾಗಿ ತಾಲ್ಲೂಕು ಬೋರ್ಡುಗಳು ರಚನೆಯಾದ ಮೇಲೆ ಸದಸ್ಯರ ಸಂಖ್ಯೆ ಸಂಸ್ಥಾನಾಮಳೆ 3006 ಇದೆ. ಈ ಸಂಖ್ಯೆಯಲ್ಲಿ 80 ಸ್ಥಾನಗಳಿಗೆ ಸ್ಟೇ ಆರ್ಡರಾಗಿದೆ. ಚುನಾವಣೆ ನಡೆದಿಲ್ಲ. ಆ ಸ್ಥಾನಗಳಿಗೆ ಸ್ಟೇ ಆರ್ಡರು ವೆಕೇಟ್ ಆದ ಮೇಲೆ ಅಥವಾ ಕೋರ್ಟಿನಲ್ಲಿರುವ ಕೇಸುಗಳ ಖುಲಾಸೆಯಾದ ಮೇಲೆ ಚುನಾವಣೆ ನಡೆಯುವುದು. ಈಗ ಚುನಾವಣೆಯಾಗಿರುವುದರ ಪೈಕಿ 2037 ಕಾಂಗ್ರೆಸ್ಸಿನವರಿದ್ದಾರೆ, ಇಂಡಿಪೆಂಡೆಟ್ಸ್ 586 ಜನ, ಪಿ.ಎಸ್.ಪಿ 133ಜನ, ಸ್ವತಂತ್ರ ಪಕ್ಷದವರು 39 ಜನ, ಎಸ್.ಎಸ್.ಪಿ. 50 ಜನ, ಜನಸಂಘ 5 ಜನ, ರೈತ ಪಕ್ಷ 11 ಜನ, ಕಮ್ಯೂನಿಸ್ಟ್ ಒಬ್ಬರು ಇದ್ದಾರೆ.

## 8. ಮಹಾರಾಷ್ಟ್ರದಲ್ಲಿ ಶಿವಸೇನೆಯ ಹಿಂಸಾತ್ಮಕ ಕಾರ್ಯ ಚಟುವಟಿಕೆಗಳನ್ನು ಕುರಿತು 25ನೇ ಫೆಬ್ರವರಿ, 1969.

ಶ್ರೀ ವೀರೇಂದ್ರ ಪಾಟೀಲ್:-

ಸನ್ಮಾನ್ಯ ಸಭಾಧ್ಯಕ್ಷರೇ, ಬೊಂಬಾಯಿ ಮಹಾನಗರದಲ್ಲಿ ಇದೇ ತಿಂಗಳ 7ನೇ ತಾರೀಖಿನಿಂದ ಸುಮಾರು 5-6 ದಿವಸಗಳವರೆಗೂ ಏನೊಂದು ಅನಾಹುತ ಉಂಟಾಗಿದೆ. ಅದರ ಬಗ್ಗೆ ಈ ಮನೆಯ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದ್ದಾರೆ, ಮತ್ತು ವಿಶೇಷವಾದ ಕಳವಳವನ್ನು ವ್ಯಕ್ತ ಮಾಡಿದ್ದಾರೆ. ಅವರ ಧ್ವನಿಯಲ್ಲಿ ನಾನೂ ಧ್ವನಿಗೂಡಿಸಿ, ಬೊಂಬಾಯಿಯಲ್ಲಿ ಆದ ಅನಾಹುತ, ಇದು ಕೇವಲ ಮಹಾರಾಷ್ಟ್ರಕ್ಕೆ ಆದ ಅನಾಹುತವಲ್ಲ, ಇದು ನಮ್ಮ ರಾಷ್ಟ್ರಕ್ಕೆ ಒಂದು ದೊಡ್ಡ ಅನಾಹುತವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಅನಾಹುತವು 4-5 ದಿವಸಗಳಲ್ಲಿ ಏನಾಯಿತು, ಇದರಿಂದ ನಮ್ಮ ರಾಷ್ಟ್ರದಲ್ಲಿರುವಂತಹ ಎಲ್ಲಾ ನಾಯಕರು, ಪಕ್ಷಗಳು, ಪಂಗಡಗಳು ಎಂಬುದನ್ನೆಲ್ಲಾ ಮರೆತು ನಮ್ಮ ರಾಷ್ಟ್ರದ ಐಕ್ಯತೆ ಕಾಪಾಡಿಕೊಂಡು ಹೋಗುವುದಕ್ಕೆ ಇನ್ನು ನಾವು ಹೇಗೆ ಹೆಜ್ಜೆ ಇಡಬೇಕು ಎನ್ನುವಂತಾದ್ದನ್ನು ವಿಚಾರ ಮಾಡಬೇಕಾದ ಪ್ರಸಂಗ ಬಂದಿದೆ ಎಂದು ನನಗನ್ನಿಸುತ್ತದೆ. ಈ ಅನಾಹುತ, ಅಥವಾ ಹತ್ಯಾಕಾಂಡ, ಇವುಗಳ ಬಗ್ಗೆ ಒಂದೊಂದು ಕ್ವಾರ್ಟರ್ಸ್ನಿಂದ ಒಂದೊಂದು ರೀತಿಯ ವರದಿ ಬರುತ್ತಿವೆ. ನಾನು ಈ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ, ಅಲ್ಲಿ ಏನು ನಡೆಯುತ್ತಿದೆ, ಏನು ಆಗಿದೆ, ಎಂಬುದನ್ನೆಲ್ಲಾ ತಿಳಿಸಬೇಕೆಂದೂ, ಮತ್ತು ಕರ್ನಾಟಕದ ಜನತೆಯ ಅಂತ:ಕರಣವನ್ನು ಇದು ಕೆರಳಿಸಿದೆ, ಮತ್ತು ಬಹಳ ಅಸಮಾಧಾನ ಜನತೆಯಲ್ಲಿ ಉಂಟಾಗಿದೆ ಎಂದು ಅವರಿಗೆ ಬರೆದಿದ್ದೇನೆ. ಅದಾದ ನಂತರ ಪ್ರಧಾನ ಮಂತ್ರಿಯವರಿಗೂ ಒಂದು ಕಾಗದ ಬರೆದು ಇದರ ಬಗ್ಗೆ ತೀವ್ರವಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕು, ಮತ್ತು ಅವರು ಕರ್ನಾಟಕದ ಜನತೆಯಾಗಿರಲಿ, ಕನ್ನಡಿಗರಾಗಿರಲಿ ಅಥವಾ ಮರಾಠಿ ಭಾಷೆಯಾನ್ನಾಡುವವರಾಗಲಿ ಅಥವಾ ಇತರ ಭಾಷೆಯನ್ನು ಮಾತನಾಡತಕ್ಕ ಯಾವ ಜನರು ಬೊಂಬಾಯಿಯಲ್ಲಿ ಇದ್ದಾರೆ ಅವರ ಆಸ್ತಿಪಾಸ್ತಿಗಳನ್ನು ಮತ್ತು ಜೀವನವನ್ನು ಪೂರ್ತಿಯಾಗಿ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಸರ್ಕಾರದ್ದಾಗಿದೆ ಎಂದು ಬರೆದಿದ್ದೇನೆ.

ಅದರ ಬಗ್ಗೆ ತಾವು ಯೋಗ್ಯ ಧೋರಣೆಯನ್ನು ತಾಳಿ ನಮ್ಮ ದೇಶಕ್ಕೆ ಈ ರೀತಿಯಿಂದ ಎಲ್ಲಾ ಜನತೆಯ ಆಸ್ತಿ ಪಾಸ್ತಿ ಮತ್ತು ಅವರ ಜೀವನವನ್ನು ಕಾಪಾಡಿಕೊಂಡು ಹೋಗುವುದಕ್ಕೆ ಎಲ್ಲಾ ತರಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಆ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕು ಎಂದು ನಾನು ಕೇಳಿದ್ದೇನೆ, ಈಗಾಗಲೇ ಈ ಒಂದು ಹತ್ಯಾಕಾಂಡದಲ್ಲಿ ಬಹಳ ಜನ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ ಯಾರು ಬೇಕಾದಷ್ಟು ಗಳಿಸಿದ್ದರೋ ಅವರು ಇವೊತ್ತು ಬೀದಿ ಭೀಕಾರಿಗಳಾಗಿ ತಿರುಗುತ್ತಿದ್ದಾರೆ. ಅವರಿಗೆ ಸಂಪೂರ್ಣವಾಗಿ ಕಾಂಪೆನ್ಸೇಟ್ ಮಾಡಬೇಕು, ಅವರಿಗೆ ಆದಂತಹ ಹಾನಿಯನ್ನು ತುಂಬಿಕೊಡುವಂತಹ ಜವಾಬ್ದಾರಿ ಸರ್ಕಾರದ್ದು ಆಗಿದೆ, ಈ ಜವಾಬ್ದಾರಿಯನ್ನು ನಿರ್ವಹಿಸುವಂತಹ ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಈಗಾಗಲೇ ನಾನು

ಬರೆದಿದ್ದೇನೆ. ಎರಡು ಪತ್ರಗಳಲ್ಲಿ ಒಂದು ಪತ್ರಕ್ಕೆ ಮಾತ್ರ ಅಕ್ನಾಲೆಡ್ಜ್‌ಮೆಂಟ್ ಬಂದಿದೆ. ಅದು ನಿನ್ನೆ ಟಪಾಲ್‌ನಲ್ಲಿ ಮಹಾರಾಷ್ಟ್ರ ಮುಖ್ಯ ಮಂತ್ರಿಗಳಿಂದ ಬಂತು. ಇನ್ನೊಂದು ಪತ್ರಕ್ಕೆ ಜವಾಬು ಬಂದಿಲ್ಲ. ಇಷ್ಟರಲ್ಲೆ ಬರಬಹುದು. ನಾವೆಲ್ಲರೂ ಇವೊತ್ತು ಈ ಸಭೆಯಲ್ಲಿ ವಿಚಾರ ಮಾಡುವಾಗ ನಮ್ಮ ಮುಂದೆ ಅಧಿಕೃತವಾಗಿ ಯಾವ ತರಹ ವರದಿಯೂ ಇಲ್ಲ. 4-5 ದಿವಸಗಳಲ್ಲಿ ಮುಂಬೈನಲ್ಲಿ ಏನಾಯಿತು ಎಂಬುದನ್ನು ಪತ್ರಿಕೆಗಳ ಮುಖಾಂತರ ತಿಳಿದುಕೊಂಡಿದ್ದೇವೆ. ಅಧಿಕೃತವಾದ ವರದಿ ಇದುವರೆಗೂ ಬಂದಿಲ್ಲ. ಅಧಿಕೃತವಾದ ವರದಿ ಬರಲಾರದೆ ಪತ್ರಿಕೆಗಳ ಮುಖಾಂತರ ಎಷ್ಟರಮಟ್ಟಿಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿದೆಯೋ ಅಷ್ಟರಮಟ್ಟಿಗೆ ತಿಳಿದುಕೊಂಡು ಅದರ ಮೇಲೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಒತ್ತಿಹೇಳ ಬೇಕಾಗುತ್ತದೆ. ಶ್ರೀಮಾನ್ ಸೈನಕ್ ಅವರು ಮಾತನಾಡುತ್ತಾ ಹೇಳುತ್ತಿದ್ದರು ಈ ಒಂದು ಅನಾಹುತಕ್ಕೆ ಶಿವಸೇನೆ ಕಾರಣವಲ್ಲ. ಈ ಅನಾಹುತಕ್ಕೆ ಅಲ್ಲಿರುವಂತಹ ಕನ್ನಡ ಜನರು ಮತ್ತು ಸಮಾಜ ದ್ರೋಹ ಶಕ್ತಿಗಳು ಕಾರಣರು ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರೂ ಅದನ್ನು ಒಪ್ಪಿಲ್ಲ. ಯಾರೂ ಒಪ್ಪುವುದಿಲ್ಲ. ನನಗೆ ಗೊತ್ತಿರುವ ಹಾಗೆ ಪತ್ರಿಕೆಗಳಲ್ಲಿ ಏನು ಬಂದಿದೆ ಅದರ ಪ್ರಕಾರ ಅದರ ಪೂರ್ತಿ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎನ್ನುವುದು ಸ್ಪಷ್ಟವಾಗಿದೆ. ಆದರ ಪೂರ್ತಿ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎಂಬುದು ಗೊತ್ತಾಗುತ್ತದೆ. ಆದರ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎಂಬುದನ್ನು ಕೇಂದ್ರ ಸರ್ಕಾರದವರು ಅರಿತು ಅದಕ್ಕಾಗಿ ಕೇಂದ್ರ ಸರ್ಕಾರದ ಗೃಹಮಂತ್ರಿಗಳು ಇದು ಫ್ಯಾಸಿಸ್ಟ್ ಆರ್ಗನೈಜೇಷನ್ ಇದೆ ಎನ್ನುವ ಮಾತನ್ನು ಅವರು ಸ್ಪಷ್ಟವಾಗಿ ಒಪ್ಪಿಕೊಂಡು ಅಲ್ಲಿ ಒಂದು ಸ್ಟೇಟ್‌ಮೆಂಟನ್ನು ಅವರು ಕೊಟ್ಟಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾನು ಕೆಲವು ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ, ಅದನ್ನು ನೋಡಿದರೆ ನನಗೆ ಒಂದು ರೀತಿಯ ಆಶ್ಚರ್ಯವಾಗುತ್ತಿದೆ. ಫೆಬ್ರವರಿ 10ನೇ ತಾರೀಖು ಅನಾಹುತ ಅಥವಾ ಘಟನೆಗಳು ಪ್ರಾರಂಭವಾದವು. 7ನೇ ತಾರೀಖಿನ ದಿವಸ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮಂಟ್ ಬಂದಿದೆ. ಪೋಲೀಸ್ ಕಮೀಷನರ್ ಒಂದು ಸ್ಟೇಟ್‌ಮೆಂಟ್ ಹೇಳುತ್ತಾರೆ. ಅದು ಈ ರೀತಿ ಇದೆ.

" The Commissionar of Police, Mr. E.S. Modak, told newsmen in Bombay on sunday that Mr. Bal Thackeray the shiva sena chief, had failed to keep his word that the shiva sena demonstration at the time of Mr. Moraji Desai's arrival in the city would be peaceful.

Mr. Modak who was clarifying the understanding reached between the shiva sena leader and the police said a small group of shiva sena voluntrees was to hand over a memorandum to the deputy Prime Minister at Mahim and the car was not to be obstructed any where else.

But what was witnessed during Mr. Desais drive into the city proved that the demonstrations had no intention of remaining peaceful. Even as the convoy accompanying the deputy prime minister was passing along the Express High way, stones were thrown on the vehicles."

ಇದು ನನಗೆ ಒಂದು ತರಹ ಆಶ್ಚರ್ಯವಾಯಿತು. ಬೊಂಬಾಯಿಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಯಿತು. ಎಜಿಟೇಷನ್ ಆಗಬೇಕಾದರೆ ಒಂದು ರೀತಿಯ ಅಗ್ರಿಮೆಂಟ್ ಆಗುತ್ತಾ ಇದ್ದರೆ ಬಹುಶಃ ಇದು ಎಲ್ಲಿಗೆ ಹೋಗಬೇಕಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಇದು ವಿಷಾದಕರವಾದ ವಿಚಾರ. ಪತ್ರಿಕೆಯಿಂದ ನಮಗೆ ಗೊತ್ತಾಗುತ್ತಾ ಇದೆ. ಶಿವಸೇನೆ ಮತ್ತು ಪೋಲೀಸರ ನಡುವೆ ಈ ರೀತಿ ಅಗ್ರಿಮೆಂಟ್ ಆಗಿದೆ. ಈ ರೀತಿ ಅಗ್ರಿಮೆಂಟ್ ಆಗಲಿಕ್ಕೆ ಹೊರಟರೆ ದೇಶ ಮುಂದೆ ಎಲ್ಲಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ನಿಜವಾಗಿಯೂ ಇದು ಬಹಳ ವಿಷಾದಕರವಾದ ವಿಚಾರ. ಇವೊತ್ತು ಶಿವಸೇನೆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಶಿವಸೇನೆಯ ನಾಯಕರಾದಂಥ ಶ್ರೀಮಾನ್ ಬಾಳಠಾಕರೆಯವರು ಜೈಲಿನಲ್ಲಿ ಇದ್ದಾಗ ಅವರು ಒಂದು ಸ್ಟೇಟ್‌ಮೆಂಟ್ ಇಷ್ಯೂ ಮಾಡಿದರು. ಆ ಸ್ಟೇಟ್‌ಮೆಂಟ್ ಹೊರಕ್ಕೆ ಬಂತು. ಅದಕ್ಕೂ ಮೊದಲು ಶಿವಸೇನೆಯ ನಾಯಕರಾದ ಬಾಳಠಾಕರೆಯವರನ್ನು ಅರೆಸ್ಟ್ ಮಾಡಿದ ಮರುದಿವಸ ಬಹುಶಃ ಬೆಳಿಗ್ಗೆ ಏಳುವುದರಲ್ಲಿ ಪೋಸ್ಟರುಗಳನ್ನು ಹಚ್ಚಿದರು. ಅದರಲ್ಲಿ ಏನು ಹೇಳುತ್ತಾರೆ ಎಂದರೆ ಅದು ಟೈಮ್ಸ್ ಆಫ್ ಇಂಡಿಯಾ ಪೇಪರಿನಲ್ಲಿ ಬಂದಿದೆ. ಅದು ಈ ರೀತಿ ಇದೆ:

" Shiva sena sign boards and posters were seen at some places of the city stating that "Bombay will continue to burn as long as Balasaheb Thackeray is in prsion". ಎಲ್ಲಿಯವರೆಗೆ ಬಾಳಠಾಕರೆಯವರು ಜೈಲಿನಲ್ಲಿ ಇರುತ್ತಾರೆಯೋ ಅಲ್ಲಿಯವರೆಗೆ ಬೊಂಬಾಯಿನಗರ ಸುಡುತ್ತಾ ಇರುತ್ತದೆ ಎಂದು ಹೇಳಿದ್ದಾರೆ. ಎಂದರೆ ಅವರು ಯಾವ ರೀತಿ ಆರ್ಗನೈಜ್ ಮಾಡುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅಲ್ಲಿಂದ ಜೈಲಿನಿಂದ ಅವರದು ಸ್ಟೇಟ್‌ಮೆಂಟ್ ಇಷ್ಯೂ ಆಗುತ್ತದೆ. ಜೈಲಿನಲ್ಲಿ ಅವರಿಗೆ ತುಂಬಾ ಬಲ ಸಿಕ್ಕುತ್ತದೆ.

ಆ ರೀತಿ ಆದಮೇಲೆ ಯಾವ ರೀತಿ ಅದನ್ನು ಆರ್ಗನೈಜ್ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಬಹುಶಃ ಈ ಒಂದು ಶಿವಸೇನೆಯವರು ಮಾಡುವಂತಹ ಚಟುವಟಿಕೆಗಳು ಒಮ್ಮಿಂದೊಮ್ಮೆ ಆಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಶ್ರೀಮಾನ್ ಬಾಳಠಾಕರೆಯವರು ಬೆಳಗಾವಿಗೆ ಬಂದಿದ್ದಾರೆ. ಅವರು ಅಲ್ಲಿಗೆ ಬಂದಿದ್ದಾಗ ಅಲ್ಲಿ ಅವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಮೈಸೂರು ಮಹಾರಾಷ್ಟ್ರಗಡಿಯ ವಿವಾದ ಬಗ್ಗೆ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಮಹಾರಾಷ್ಟ್ರಸರ್ಕಾರ ಆ ಬಗ್ಗೆ ಏನೂ ಮಾಡುವುದಿಲ್ಲ. ಅದನ್ನು ನನಗೆ ಬಿಟ್ಟರೆ ನಾನು ಮುಂಬೈ ಷಹರದ ಸ್ಟ್ರೀಟ್‌ನಲ್ಲಿ ನಿರ್ಣಯ ಮಾಡಿ ತೋರಿಸುತ್ತೇನೆ ಎಂದು ಛಾಲೆಂಜ್ ಕೊಟ್ಟರು. ಅದಾದ ಮೇಲೆ ಅನೇಕ ಸಲ ಸ್ಟೇಟ್‌ಮೆಂಟ್ ಕೊಟ್ಟು

ಎಲ್ಲಿಯವರೆಗೆ ಬೆಳಗಾಂವ್ ಮಹಾರಾಷ್ಟ್ರಕ್ಕೆ ಸೇರುವುದಿಲ್ಲವೋ ಅಲ್ಲಿಯವರೆಗೆ ಕೇಂದ್ರ ಸರ್ಕಾರದ ಯಾವ ಮಂತ್ರಿಗಳನ್ನೂ ಮುಂಬೈಗೆ ಬರಗೊಡುವುದಿಲ್ಲ, ಕಾಂಗ್ರೆಸ್ ಅಧ್ಯಕ್ಷರನ್ನೂ ಬರಗೊಡುವುದಿಲ್ಲ. ಮೈಸೂರಿನ ಮುಖ್ಯಮಂತ್ರಿಗಳನ್ನೂ ಬರಗೊಡುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅನೇಕ ಕಡೆ ಕೆಲವು ಜನ ಇದನ್ನು ವಿಚಾರ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲೂ ಕೆಲವು ಸದಸ್ಯರು ಇದನ್ನು ವ್ಯಕ್ತ ಮಾಡಿದ್ದಾರೆ. ಇದು ಒಮ್ಮಿದ್ದೊಮ್ಮಲೇ ಆಗುವುದು ಇಲ್ಲ. ವಸ್ತುಶಹ ಬಂದಿದೆ ಟ್ರಬಲ್ಸ್ ವಾಜ್ ಇನ್ ಬ್ರೂವಿಂಗ್ ಆದರೆ ಇವೊತ್ತು ನಾನು ಇಲ್ಲಿ ನಿಂತು ಮಹಾರಾಷ್ಟ್ರದಲ್ಲಿ ಯಾರಿಗೆ ಏನಾಗಿದೆ ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಮಹಾರಾಷ್ಟ್ರದಲ್ಲಿ ಒಂದು ಸರ್ಕಾರ ಸಮಸ್ತರಿಗೂ ಇದೆ. ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ಎನ್ನುವುದು ಎಲ್ಲರೂ ವಿಚಾರ ಮಾಡಬೇಕಾದ್ದು. ಆದರೆ ಕೆಲವು ಸದಸ್ಯರು ಏನು ಹೇಳುತ್ತಾರೆ ಎಂದರೆ, ಎರಡುದಿವಸ ಮೊದಲು ಇದರ ಬಗ್ಗೆ ಜಾಗ್ರತರಾಗಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು. ಇದು ಅಭಿಪ್ರಾಯದ ಮಾತು. ಇದರ ಬಗ್ಗೆ ನಾನು ಯಾವ ಅಭಿಪ್ರಾಯವನ್ನೂ ನೀಡುವುದಕ್ಕೆ ಇಷ್ಟಪಡುವುದಿಲ್ಲ. ಇದು ಈ ರೀತಿಯ ಒಂದು ಅನಾಹುತವಾಗುವುದಕ್ಕೆ ಶಿವಸೇನೆಯೇ ಕಾರಣ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಈ ಸೇನೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಧಾನಿಯವರಿಗೆ ಬರೆದು ನನ್ನ ಮತವನ್ನು ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇನೆ, ಹೇಳಿದ್ದೇನೆ. ಈ ತರಹ ಶಿವಸೇನೆಗೆ ಬ್ಯಾನ್ ಮಾಡಲಾರದೆ ನಿಂತುದಕ್ಕಾಗಿ, ಇಲ್ಲಿಯವರೆಗೂ ಬ್ಯಾನ್ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಲಾರದೆ ಇದ್ದುದಕ್ಕಾಗಿ ಈ ತರಹ ಅನಾಹುತವಾಗುತ್ತದೆ ಎಂದು ಹೇಳಿದ್ದೇನೆ. ಆದರ ಅರ್ಥ ನನ್ನ ಅಭಿಪ್ರಾಯದಲ್ಲಿ ಈ ತರಹ ಸೇನೆಗಳು ನಮ್ಮ ರಾಷ್ಟ್ರದಲ್ಲಿ ಇರಬಾರದು, ರಾಷ್ಟ್ರದ ಐಕ್ಯತೆಗೆ ಧಕ್ಕೆ ತರತಕ್ಕ ಸೇನೆಗಳು ಗೋಪಾಲ ಸೇನೆಯಾಗಲಿ, ಲಜಿತ್ ಸೇನೆಯಾಗಲೀ ಭೀಮಸೇನೆಯಾಗಲೀ ಇರಬಾರದು. ನಮ್ಮ ಒಂದು ರಾಷ್ಟ್ರಕ್ಕೆ ಒಂದು ಸೇನೆ ಇರಬೇಕೇ ಹೊರತು ಈ ರೀತಿಯಾದ ಸೇನೆಗಳು ಇರುವುದು ಸಾಧ್ಯವಿಲ್ಲ. ಅದು ನಾಡಿನ ಆರ್ಮಿ. ಅದು ಒಂದು ಮಾತ್ರ ಇರಬೇಕು. ಉಳಿದ ಯಾವುದೇ ಸೇನೆಗಳು ಇರಬಾರದೆಂಬುದನ್ನು ನನ್ನ ಸ್ಪಷ್ಟವಾದ ಅಭಿಪ್ರಾಯ. ಶಿವಸೇನೆಯ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಏನೇನು ವಿಚಾರಗಳು ಬಂದಿವೆ ಎಂಬುದನ್ನು ನಾವು ನೋಡಿದ್ದೇವೆ. ಈ ತರಹ ಸೇನೆಗಳು ಹುಟ್ಟಿಕೊಂಡು ದೇಶದ ಶಾಂತಿಗೆ ಭಂಗ ಉಂಟುಮಾಡಿದಾಗ, ಇಂತಹ ಸೇನೆಗಳಿಂದ ಮತ್ತೆ ದೇಶದಲ್ಲಿ ಅಶಾಂತಿ ಉಂಟಾಗದಂತೆ ಬ್ಯಾನ್ ಮಾಡಬೇಕು. ಈ ರೀತಿ ಬ್ಯಾನ್ ಮಾಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಸಂಸ್ಥೆಗಳನ್ನು ನಿಷೇಧಮಾಡಲು ಕಾನ್ಸಿಟಿಟ್ಯೂಷನ್‌ನನ್ನು ಮಾರ್ಪಾಟು ಮಾಡುವ ಸಂದರ್ಭ ಬಂದರೆ ಎಲ್ಲಾ ಪಾರ್ಟಿಯ ಮುಖಂಡರುಗಳು ಒಂದೆಡೆ ಸೇರಿ ತೀರ್ಮಾನ ತೆಗೆದುಕೊಂಡು, ಮುಂದೆ ಇಂತಹ ಸಂಸ್ಥೆಗಳು ಹುಟ್ಟದಂತೆ ನೋಡಿಕೊಳ್ಳಬೇಕೆಂದು ಕಳಕಳಿಯಿಂದ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗ ನಾನು ಹೇಳಿದಂತೆ ಮೊನ್ನೆ ನಡೆದ ಚಳುವಳಿಯ ಬಗ್ಗೆ ನನ್ನ ಹತ್ತಿರ ಅಧಿಕೃತವಾಗಿ ಯಾವ ವರದಿಯೂ ಇಲ್ಲ. ಲೋಕಸಭೆಯಲ್ಲಿ ಕಾಲಿಂಗ್ ಅಟೆಂನ್‌ಷನ್ ಮೋಷನ್ ಬಂದಾಗ ಅಲ್ಲಿಯ ಗೃಹಮಂತ್ರಿಗಳು ಉತ್ತರವಾಗಿ ಒಂದು

ಸ್ಟೇಟ್‌ಮೆಂಟು ಮಾಡಿ ಕೊಟ್ಟಿದ್ದಾರೆ. ಆದರಿಂದ ನಾನು ಕೆಲವು ಅಂಕಿಅಂಶಗಳನ್ನು ಶೇಖರಿಸಿದ್ದೇನೆ. ಅವರ ಹೇಳಿಕೆಯ ಪ್ರಕಾರ ಈ ಅನಾಹುತದಲ್ಲಿ 52 ಜನ ಸತ್ತಿದ್ದಾರೆ, 127 ಜನರಿಗೆ ಗಾಯಗಳಾಗಿವೆ. ಖಾಸಗಿಯವರ ಆಸ್ತಿಪಾಸ್ತಿಗಳಿಗೆ ಬೇಕಾದಷ್ಟು ಹಾನಿಯಾಗಿದೆ, ಕೇಂದ್ರ ಸರ್ಕಾರದ ಆಸ್ತಿಪಾಸ್ತಿಗೆ, ಆ ರಾಜ್ಯ ಸರ್ಕಾರದ ಆಸ್ತಿಪಾಸ್ತಿಗೆ ಅಲ್ಲಿಯ ಕಾರ್ಪೋರೇಷನ್ ಆಸ್ತಿಪಾಸ್ತಿಗೆ ರೈಲ್ವೆಯ ಆಸ್ತಿಪಾಸ್ತಿಗೆ ಬೇಕಾದಷ್ಟು ಅನಾಹುತ ಸಂಭವಿಸಿದೆ ಎಂಬುದನ್ನು ಹೇಳಿದ್ದಾರೆ. ಇದರ ಜೊತೆಗೆ 19 ಪೋಲೀಸ್ ಚೌಕಿಗಳನ್ನು 103 ಮಿಲ್ಕ್ ಬೂತ್‌ಗಳು, 20 ಬೆಸ್ಟ್ ಸಂಸ್ಥೆಯ ಬಸ್‌ಗಳನ್ನು ಸುಟ್ಟುಹಾಕಲಾಗಿದೆ. 63 ಹೋಟೆಲ್‌ಗಳ ಲೂಟಿಯಾಗಿದೆ. ಇವುಗಳಲ್ಲಿ 43 ಹೋಟೆಲ್‌ಗಳು ದಕ್ಷಿಣ ಹಿಂದೂಸ್ಥಾನಕ್ಕೆ ಸಂಬಂಧಪಟ್ಟವುಗಳು ಎಂಬುದನ್ನು ಒಪ್ಪಿಕೊಂಡಿದ್ದಾರೆ. 123 ಅಂಗಡಿಗಳು ಲೂಟಿಯಾಗಿವೆ, ಇವುಗಳಲ್ಲಿ 14 ಮಾತ್ರ ದಕ್ಷಿಣ ಹಿಂದೂಸ್ಥಾನಕ್ಕೆ ಸೇರಿದವು ಎಂದು ಹೇಳಿದ್ದಾರೆ. ಅವರು ಕೊಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಎಷ್ಟು ಅನಾಹುತವಾಗಿದೆ ಎಂಬುದು ನಮಗೆ ತಿಳಿದು ಬರುತ್ತದೆ. ಇದಕ್ಕೂ ಹೆಚ್ಚು ಹಾನಿಯಾಗಿದೆ ಎಂದು ಅನಧಿಕೃತವಾಗಿ ನಾವು ಕೇಳುತ್ತಿದ್ದೇವೆ. ಕೆಲವರು 18 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು, ಮತ್ತೆ ಕೆಲವರು 22 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು ಹೇಳುತ್ತಿದ್ದಾರೆ. ಸರಿಯಾಗಿ ಎಷ್ಟು ಹಾನಿಯಾಗಿದೆ, ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ಈ ಚಳುವಳಿಯಲ್ಲಿ ನೊಂದಿರುವವರ ಬಗ್ಗೆ ಏನು ಒಂದು ಸಹಾನುಭೂತಿ ಮತ್ತು ದು:ಖವನ್ನು ವ್ಯಕ್ತಪಡಿಸಿದ್ದಾರೆ, ಅದರಂತೆ ನಾನೂ ಕೂಡ ಯಾರು ಯಾರು ಜೀವ ಕಳೆದುಕೊಂಡಿದ್ದಾರೆ, ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ, ಯಾರು ನೊಂದಿದ್ದಾರೆ ಅವರ ಬಗ್ಗೆ ನನ್ನ ಪರವಾಗಿ, ಸರ್ಕಾರದ ಪರವಾಗಿ ಮತ್ತು ಮೈಸೂರು ರಾಜ್ಯದ ಜನತೆಯ ಪರವಾಗಿ ದು:ಖವನ್ನು ಸೂಚನೆ ಮಾಡುತ್ತೇನೆ, ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದೇನೆ. ಈ ಚಳುವಳಿಯಲ್ಲಿ ಅಪಾರವಾದ ಹಾನಿಯಾಗಿರುವುದರಿಂದ, ಯಾವ ರೀತಿ ಹಾನಿಯಾಗಿದೆ ಎಂಬುದನ್ನು ತನಿಖೆ ಮಾಡಿಸಬೇಕೆಂದು ಪತ್ರ ಬರೆದಿದ್ದೇನೆ. ಕೇಂದ್ರ ಸರ್ಕಾರದವರು ಪ್ರತ್ಯೇಕವಾಗಿ ತನಿಖೆಯನ್ನು ಮಾಡಿಸಲಿ, ರಾಜ್ಯ ಸರ್ಕಾರದ ಮುಖಾಂತರ ಮಾಡಿಸಲಿ, ಏನು ಹಾನಿ ಸಂಭವಿಸಿದೆ, ಯಾರು ಯಾರಿಗೆ ತೊಂದರೆಯಾಗಿದೆ ಎಂಬುದನ್ನು ತನಿಖೆ ಮಾಡಿಸುವುದು ಅವಶ್ಯಕವೆಂದು ಹೇಳಿದ್ದೇನೆ. ಯಾರು ಯಾರಿಗೆ ಹಾನಿ ಸಂಭವಿಸಿದೆ ಅಂತಹವರಿಗೆ ಹಾನಿಯನ್ನು ತುಂಬಿಕೊಡುವುದು ಸರ್ಕಾರದ ಜವಾಬ್ದಾರಿ ಇದೆ. ಅದಕ್ಕಾಗಿ ಪ್ರಯತ್ನ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇನೆ. ಈ ಒಂದು ಘಟನೆಯಲ್ಲಿ ದಕ್ಷಿಣ ಹಿಂದುಸ್ಥಾನದ ನಾಲ್ಕು ರಾಜ್ಯಗಳ ಜನರೂ ಸಹ ಹಾನಿಗೊಳಗಾಗಿದ್ದಾರೆ. ಮುಂಬೈನಗರದಲ್ಲಿ ಮಹಾರಾಷ್ಟ್ರೀಯರಿಗಿಂತ ನಾನ್ ಮಹಾರಾಷ್ಟ್ರೀಯರೇ ಹೆಚ್ಚು ಇದ್ದಾರೆಂದು, ಹೇಳಿದರೆ ತಪ್ಪಾಗಲಾರದು, ಶೇಕಡ 70 ರಷ್ಟು ಹೊರಗಿನ ಜನ ಅಲ್ಲಿ ಇದ್ದಾರೆಂದು ಹೇಳಬಹುದು. ಮುಂಬೈನಗರ ಕೇವಲ ಮರಾಠಿಗರಿಗೆ ಸಂಬಂಧಪಟ್ಟಿದ್ದು ಎಂದು ಅಲ್ಲಿನವರು ಹೇಳುತ್ತಿದ್ದಾರೆ. ಮುಂಬೈನಗರವನ್ನು ಕಟ್ಟಿ ಬೆಳೆಸುವುದರಲ್ಲಿ, ಅಭಿವೃದ್ಧಿ ಪಡಿಸುವಲ್ಲಿ ಇಡೀ ಹಿಂದೂಸ್ಥಾನದ ಎಲ್ಲಾ ಜನರೂ ಸಹಕಾರ ನೀಡಿದ್ದಾರೆ, ಕಾನ್‌ಟ್ರಿಬ್ಯೂಷನ್ ನೀಡಿದ್ದಾರೆ. ಎಂದು ನಾನು ತಿಳಿದಿದ್ದೇನೆ. ಮುಂಬೈನಗರದಲ್ಲಿ ಈಗ ಯಾವ ಒಂದು ಘಟನೆ ನಡೆದಿದೆ ಅದರಂತಹ

ಹತ್ಯಾಕಾಂಡ, ಹೇಯವಾದ ಕೃತ್ಯ ಮತ್ತೊಂದು ಇಲ್ಲವೆಂದು ನನಗನ್ನಿಸುತ್ತದೆ. ಮುಂಬೈನಗರ ಎಲ್ಲರೂ ಅಭಿಮಾನ ಪಡುವಂತಹ ಒಂದು ನಗರವಾಗಿತ್ತು. ನಾನು ಮೈಸೂರಿನವನಾಗಿರಬಹುದು, ಮುಂಬೈನಲ್ಲಿರುವ ಕನ್ನಡಿಗರ ಹಿತರಕ್ಷಣೆ ಮಾಡುವುದು ಮೈಸೂರು ಸರ್ಕಾರದ ಕರ್ತವ್ಯವಾದರೆ, ಬೆಂಗಳೂರಿನಲ್ಲಿರುವ ಮರಾಠಿಗರ ಹಿತರಕ್ಷಣೆ ಮಾಡುವುದು ಮಹಾರಾಷ್ಟ್ರ ಸರ್ಕಾರದ ಕರ್ತವ್ಯವಾಗುತ್ತದೆ. ಈ ರೀತಿಯಿಂದ ನಡೆದುಕೊಳ್ಳುವುದಾದರೆ ಯಾವ ಒಂದು ದೇಶವೇ ಆಗಲಿ ಅಭಿವೃದ್ಧಿಯಾಗುವುದು ಕಷ್ಟವಾಗುತ್ತದೆ. ಮಹಾರಾಷ್ಟ್ರದ ಜನರು ಬೇರೆ ಬೇರೆ ರಾಜ್ಯದಲ್ಲಿ ಹೋಗಿ ನೆಲಸುವುದಕ್ಕೆ ಎಷ್ಟು ಅಧಿಕಾರ ಇದೆಯೋ ಅದೇ ರೀತಿ ಬೇರೆ ಯಾವ ಜಾತಿಯವರೇ ಇರಲಿ, ಯಾವ ಕಾಲದವರೇ ಇರಲಿ, ಪ್ರತಿಯೊಬ್ಬರಿಗೂ ಸಹ ಹಿಂದೂಸ್ಥಾನದ ಯಾವ ಭಾಗದಲ್ಲಿ ಬೇಕಾದರೂ ಸಹ ಹೋಗಿ ನೆಲಸುವುದಕ್ಕೆ ಕಾನೂನು ಪ್ರಕಾರ ಅಧಿಕಾರ ಇದೆ. ಮಹಾರಾಷ್ಟ್ರದಲ್ಲಿ ನಾನ್ ಮಹಾರಾಷ್ಟ್ರಯನ್ನರು ಹೋಗಿ ನೆಲಸಬಾರದು ಎಂದು ಹೇಳುವ ವರ್ತನೆ ಖಂಡನೀಯವಾದುದೆಂದು ಹೇಳುತ್ತೇವೆ. ಈ ಶಿವಸೇನೆಯವರು 5 ದಿವಸ ನಡೆಸಿದ ಚಳುವಳಿಯಲ್ಲಿ ಹತ್ಯಾಕಾಂಡವೇ ನಡೆದುಹೋಯಿತು. ಇದರಿಂದ ಮಹಾರಾಷ್ಟ್ರ ಸರ್ಕಾರಕ್ಕೆ ಬಹಳಮಟ್ಟಿಗೆ ಪೆಟ್ಟು ಬಿದ್ದಿದೆ ಎಂದು ತಿಳಿದುಕೊಂಡಿದ್ದೇನೆ. ಮಹಾರಾಷ್ಟ್ರ ಮುಖ್ಯಮಂತ್ರಿಗಳು ಸಹ fair name has been tarnished ಎಂದು ಅವರೇ ಒಪ್ಪಿಕೊಂಡಿದ್ದಾರೆ. ಈ ತರಹದ ಚಟುವಟಿಕೆಗಳು ಮುಂದೆ ನಡೆಯದಂತೆ ನೋಡಿಕೊಂಡು ಹೋಗುವ ಜವಾಬ್ದಾರಿ ನಮ್ಮ ದೇಶದ ನಾಯಕರುಗಳ ಮೇಲೆ ಇದೆಯೆಂದು ಹೇಳುತ್ತೇನೆ. 5 ದಿವಸಗಳಲ್ಲಿ ನಡೆದ ಹತ್ಯಾಕಾಂಡದಲ್ಲಿ ನನಗೆ ತಿಳಿದಮಟ್ಟಿಗೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಬಂಧುಗಳಿಗೆ ಅಪಾರವಾದ ಹಾನಿಯಾಗಿದೆ. ಇವರುಗಳು ಮುಂಬೈನಲ್ಲಿ ಹೋಟೆಲ್‌ಗಳನ್ನು ಇಟ್ಟುಕೊಂಡಿದ್ದರು, ಮತ್ತೆ ಕೆಲವರು ಕೈಗಾರಿಕೆಗಳನ್ನು ನಡೆಸುತ್ತಿದ್ದರು. ಇವರುಗಳ ಮೇಲೆ ಬಹಳಮಟ್ಟಿಗೆ ಅತ್ಯಾಚಾರ ನಡೆದಿದೆ. ಅವರುಗಳು ಬಹಳ ತೊಂದರೆಗೆ ಈಡಾಗಿದ್ದಾರೆಂದು ಕೇಳಿದ್ದೇನೆ. ಮುಂಬೈನಲ್ಲಿ ಇಷ್ಟೆಲ್ಲಾ ಗಲಾಟೆ ನಡೆದಾಗ ನಮ್ಮ ಮೈಸೂರಿನ ಕನ್ನಡಿಗರು ಬಹಳ ಸಂಯಮದಿಂದ ಶಿಸ್ತಿನಿಂದ ನಡೆದುಕೊಂಡಿದ್ದಾರೆಂದು ಹೇಳುತ್ತಿದ್ದೇನೆ. ಅಲ್ಲಿ ನಡೆದ ಚಳುವಳಿಯಿಂದ ಅಲ್ಲಿನ ರಾಜ್ಯಕ್ಕೆ ಅಲ್ಲಿನ ಜನರಿಗೆ ಆದ ಪೆಟ್ಟೇ ನಮ್ಮ ರಾಜ್ಯದಲ್ಲಿ ಚಳುವಳಿಯನ್ನು ನಡೆಸಿದರೆ ನಮಗೂ ಆಗಬಹುದೆಂದು ತಿಳಿದುಕೊಂಡು ನಮ್ಮವರು ಸಂಯಮದಿಂದ ಮತ್ತು ಶಿಸ್ತಿನಿಂದ ನಡೆದುಕೊಂಡಿದ್ದಾರೆ. ಕೆಲವು ದುಷ್ಟಶಕ್ತಿಗಳು ಬೆಳಗಾಂನಲ್ಲಿಯೂ ಸಹ ಗಲಾಟೆ ಮಾಡಬೇಕೆಂದು ತೀರ್ಮಾನಿಸಿದಾಗ ಅಲ್ಲಿಯ ಜನರು ಸಹಕಾರ ನೀಡಲಿಲ್ಲ. ಯಾವ ರೀತಿಯ ಸಹಕಾರವೂ ಸಿಗದಿದ್ದಾಗ ದುಷ್ಟ ಶಕ್ತಿಗಳು ಏನೂ ಮಾಡುವುದಕ್ಕಾಗಲಿಲ್ಲ. ಇದಕ್ಕಾಗಿ ಮೈಸೂರಿನ ಜನತೆಯನ್ನು ಅಭಿನಂದಿಸುತ್ತೇನೆ. ಜನರು ಈ ಒಂದು ವಿಷಯದಲ್ಲಿ ಶಿಸ್ತು ಮತ್ತು ಸಂಯಮದಿಂದ ನಡೆದುಕೊಂಡು ಮೈಸೂರು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಈ ರೀತಿ ನಡೆದುಕೊಂಡರೆ ನಮ್ಮ ಅನೇಕ ಸಮಸ್ಯೆಗಳನ್ನು ಹಗುರವಾಗಿ ನಿವಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ತಿಳಿದುಕೊಂಡಿದ್ದೇನೆ. ಕೇಂದ್ರಕ್ಕೆ ಬರೀ ಕಾಗದ ಬರೆದರೆ ಏನಾಗುತ್ತದೆಂದು ಕೆಲವು ಮಾನ್ಯ ಸದಸ್ಯರುಗಳು ಕೇಳುತ್ತಿದ್ದರು. ಈ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಯಾವ ರಾಜ್ಯದಲ್ಲಿ ಆಗಲಿ ಏನಾದರೂ ಅನಾಹುತವಾದರೆ ಅದನ್ನು ತಡೆಗಟ್ಟುವ ಜವಾಬ್ದಾರಿ ಅಲ್ಲಿಯ ಸರ್ಕಾರಕ್ಕೆ ಇರುತ್ತದೆ. ಅಲ್ಲಿಯ ಸರ್ಕಾರ

ತಡೆಗಟ್ಟಲಾರದೆ ಹೋದರೆ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದು ಪ್ರತಿಯೊಂದು ರಾಜ್ಯ ಸರ್ಕಾರಗಳ ಕರ್ತವ್ಯವಾಗಿದೆ. ಅದೇ ರೀತಿ ನಾವು ಮಾಡಿದ್ದೇವೆ. ಈ ಬಗ್ಗೆ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೂ ಪ್ರಧಾನ ಮಂತ್ರಿಗಳಿಗೂ ಕಾಗದ ಬರೆದಿದ್ದೇನೆ. ಅದೇ ರೀತಿಯಿಂದ ಮದ್ರಾಸಿನ ಮುಖ್ಯ ಮಂತ್ರಿಗಳು, ಕೇರಳ ಮುಖ್ಯ ಮಂತ್ರಿಗಳು ಪತ್ರವ್ಯವಹಾರ ನಡೆಸುತ್ತಿದ್ದಾರೆ. ಅಲ್ಲದೆ ಇಲ್ಲಿ ಕೆಲವು ಸ್ನೇಹಿತರು ಹೇಳಿದರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುವ ಧೈರ್ಯ ಇಲ್ಲ ಎನ್ನುವ ಕೆಲವು ಮಾತುಗಳನ್ನು ಇಲ್ಲಿ ಹೇಳಿದರು. ನಾನು ಆಗಲೇ ಹೇಳಿದ ಹಾಗೆ ಮದ್ರಾಸಿನಲ್ಲಿರುವ ಮುಖ್ಯ ಮಂತ್ರಿಗಳು ಕೇಂದ್ರಕ್ಕೆ ಈಗಾಗಲೇ ಇದರ ಬಗ್ಗೆ ತಿಳಿಸಿದ್ದಾರೆ. ನಾವೂ ಕೂಡ ಕೇಂದ್ರಕ್ಕೆ ಸರಿಯಾದ ರಕ್ಷಣೆ ಕೊಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದೂ ತಿಳಿಸಿದ್ದೇವೆ.

ಇದರಂತೆ ಕೇರಳದ ಮುಖ್ಯ ಮಂತ್ರಿಗಳಾಗಿರುವ ಶ್ರೀ ಇ.ಎಂ.ಎಸ್. ನಂಬೂದರಿಪಾಡ ರವರೂ ಕೂಡ ಕೇಂದ್ರದೊಡನೆ ಪತ್ರ ವ್ಯವಹಾರ ಮಾಡಿ ಯೋಗ್ಯವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯವಾಗಿ ಹೇಳುತ್ತಿದ್ದಾರೆ. ಇದರ ಬಗ್ಗೆ ಏನೇನು ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ನಮ್ಮ ಸ್ನೇಹಿತರಾದ ಶ್ರೀ ದೇವರಾಜ ಅರಸ್‌ನವರು ಹೇಳಿದ ಹಾಗೆ ಮಾಡುತ್ತಿದ್ದೇವೆ. ಮುಂದೆ ಇಂತಹ ಅನಾಹುತಗಳು ಆಗದಂತೆ ಕೇಂದ್ರ ಸರ್ಕಾರದವರಿಗೂ ಮತ್ತು ಮಹಾರಾಷ್ಟ್ರ ಸರಕಾರದ ಮುಖ್ಯ ಮಂತ್ರಿಗಳಿಗೂ ತಿಳಿಸಲಾಗಿದೆ ಮತ್ತು ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೋ ಅದನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ಅಲ್ಲದೆ ಅನಾಹುತಗಳಿಗೆ ಗುರಿಯಾದವರಿಗೆ ಎಷ್ಟು ನಷ್ಟವಾಗಿದೆ ಆ ನಷ್ಟವನ್ನೆಲ್ಲಾ ತುಂಬಲು ಕೇಂದ್ರದವರಿಗೆ ಒತ್ತಾಯ ಮಾಡಿದ್ದೇವೆ. ಇದನ್ನು ಕೇಂದ್ರ ಸರಕಾರದವರೇ ತುಂಬಲಿ ರಾಜ್ಯ ಸರಕಾರವೇ ತುಂಬಲಿ ಅದರ ಬಗ್ಗೆ ಹೇಳುತ್ತಿಲ್ಲ. ನಷ್ಟಕ್ಕೆ ಒಳಗಾದವರೆಲ್ಲಾ ಭಾರತೀಯರು ಎನ್ನುವ ದೃಷ್ಟಿಯಿಂದ ಯಾರ್‍ಯಾರು ಈ ಅನಾಹುತಕ್ಕೊಳಗಾಗಿ ನಷ್ಟ ಹೊಂದಿದ್ದಾರೋ ಅವರಿಗೆಲ್ಲಾ ಸಾಕಷ್ಟು ಪರಿಹಾರ ಕೊಡಬೇಕು ಎಂದು ತಿಳಿಸಿದ್ದೇವೆ. ಇಲ್ಲದೆ ಇದ್ದರೆ ಜನತೆಯಲ್ಲಿ ಒಂದು ರೀತಿಯಾದ ಸಂಶಯ ಬರಲು ಕಾರಣವಾಗುತ್ತದೆ ಎಂದು ನನಗನ್ನಿಸುತ್ತದೆ. ಮಹಾರಾಷ್ಟ್ರ ದಲ್ಲಿರುವವರಿಗೇ ರಕ್ಷಣೆ ಕೊಡಬೇಕು ಇತರರಿಗೆ ಕೊಡಕೂಡದು ಎನ್ನುವ ಭಾವನೆ ಬರಕೂಡದು. ಇದಕ್ಕಾಗಿ ಅಲ್ಲಿರುವ ಕನ್ನಡಿಗರ ಸುರಕ್ಷತೆಗಾಗಿ ಹಾಗೂ ಇತರ ಜನತೆಯ ಸುರಕ್ಷತೆಗಾಗಿ ನಾವು ಹೇಳಿದಂತೆ ತಮಿಳುನಾಡಿನ ಮುಖ್ಯ ಮಂತ್ರಿಗಳೂ ಕೇಂದ್ರಕ್ಕೆ ತಿಳಿಸಿದ್ದಾರೆ. ಹೀಗೆ ಒಂದು ರೀತಿಯ ಪ್ರತ್ಯೇಕತೆಯ ಮನೋಭಾವನೆ ನಮ್ಮ ರಾಷ್ಟ್ರದಲ್ಲಿ ಬರಲು ಅವಕಾಶ ಕೊಡಬಾರದು ಪ್ರತಿಯೊಬ್ಬರೂ ಅವರು ಯಾವ ಭಾಷೆಯನ್ನೇ ಆಡುತ್ತಿರಲಿ ಅವರು ಎಲ್ಲೇ ಇರಲಿ ಅವರು ಸುರಕ್ಷಿತವಾಗಿರಲು ಭಾರತೀಯರಾಗಿ ಅವರು ಇರಲು ಅವಕಾಶ ಕೊಡಬೇಕು ಇದರಿಂದ ಭಾರತದ ಐಕ್ಯತೆಗೆ ಅನುಕೂಲವಾಗುತ್ತದೆ. ಹಾಗಿಲ್ಲದೆ ಒಂದು ಭಾಷೆಯವರೇ ಒಂದು ಕಡೆ ಇರಬೇಕು ಎಂದು ಹೇಳಿದರೆ ಅದರಿಂದ ದೇಶದ ಐಕ್ಯತೆಗೆ ಭಂಗಬರುತ್ತದೆ. ಕೇವಲ ಬೊಂಬಾಯಿಯವರೇ ಬೊಂಬಾಯಿಯಲ್ಲಿ ಇರಬೇಕು ಎಂದು ಹೇಳುವುದು ಸರಿಯಲ್ಲ. ಆದುದರಿಂದ ನಷ್ಟಕ್ಕೊಳಗಾದವರಿಗೆಲ್ಲಾ ಸೂಕ್ತವಾದ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಕೇಂದ್ರ ಸಚಿವರ

ಗಮನಕ್ಕೆ ತಂದಿದ್ದೇನೆ ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ. ಇದೂ ಅಲ್ಲದೆ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ನಾನು ಕೆಲವು ವಾರಗಳ ಹಿಂದೆ ಧಾರವಾಡ, ಬೆಳಗಾಂ, ಹುಬ್ಬಳ್ಳಿ, ರಾಯಚೂರು ಹಾಗೂ ಗುಲ್ಬರ್ಗಾಗಳಲ್ಲಿ ಪ್ರವಾಸ ಮಾಡಿದಾಗ, ಕೆಲವು ಮರಾಠಿ ಹುಡುಗರು ಬೆಳಗಾಂ ಚಳುವಳಿಯಲ್ಲಿ ಭಾಗವಹಿಸಿದಂತೆ, ಗುಲಬರ್ಗಾದಲ್ಲೂ ಮಾಡಬೇಕೆಂದು ಕೆಲವು ಹುಡುಗರು ಗುಲಬರ್ಗಾದಲ್ಲಿ ಇರುವ ಮಹಾರಾಷ್ಟ್ರ ಮಂಡಳಿಯವರ ಆಫೀಸಿನಲ್ಲಿದ್ದ ಕೆಲವು ಫರ್ನಿಚರುಗಳು ಇತ್ಯಾದಿ ಸಾಮಾನುಗಳನ್ನು ನಷ್ಟಪಡಿಸಿದರು ಎಂದು ನನಗೆ ದೂರು ಬಂತು ಮತ್ತು ನಾನು ಗುಲಬರ್ಗಾಕ್ಕೆ ಹೋದಾಗ ಆ ಮಹಾರಾಷ್ಟ್ರ ಮಂಡಳಿಯವರು ನನ್ನ ಹತ್ತಿರ ಬಂದು ನಮಗೆ ಇಷ್ಟು ಅನಾಹುತವಾಗಿ ನಮ್ಮ ಪುಸ್ತಕ ಭಂಡಾರ ಇತ್ಯಾದಿಗಳಿಗೆ ಬಹಳ ನಷ್ಟವುಂಟಾಗಿದೆ ಎಂದು ಹೇಳಿದ ಕೂಡಲೇ ನಾನು ಅವರಿಗೆ ಸಹಾನುಭೂತಿ ತೋರಿಸಿ, ಅವರ ನಷ್ಟವನ್ನು ನಮ್ಮ ಸರಕಾರ ಪೂರ್ತಿಯಾಗಿ ತುಂಬಿಕೊಡುತ್ತದೆಂದು ಹೇಳಿ ಅಲ್ಲಿನ ಡೆಪ್ಯುಟಿ ಕಮೀಷನರವರ ಮೂಲಕ ಪಂಚನಾಮ ನಡೆಸಿ ಅವರಿಗೆ ಎಷ್ಟು ನಷ್ಟವಾಗಿದೆಯೋ ಅದರ ಒಂದು ಪೈಸಾ ಕೂಡ ಕಡಿಮೆಯಾಗದಂತೆ ಅವರಿಗೆ ಕೊಡುವ ಏರ್ಪಾಡು ಮಾಡಿದ್ದೇನೆ. ನಾವು ಐಕ್ಯತಾ ಭಾವನೆಯಿಂದ ಮುಂದುವರಿಯಲು ಅನುಕೂಲವಾಗುತ್ತದೆ ಹಾಗೂ ನಮ್ಮ ಹಿಂದೂಸ್ಥಾನದ ಗೌರವ ಉಳಿಯುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನಾವು ಮಾಡಬೇಕಾಗಿ ಬಂತು, ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತರು ಎಲ್ಲೇ ಇರಲಿ ಅವರಿಗೆ ತೊಂದರೆಯಾಗಲು ಅವಕಾಶ ಕೊಡಬಾರದು. ಹಾಗೆ ಮಾಡದೆ ಕನ್ನಡ ಜನತೆ ಬೇರೆ ಕಡೆ ಇರಕೂಡದು ಎನ್ನುವ ಭಾವನೆ ಬೆಳೆಯುವಂತೆ ಮಾಡಿದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇವೆಲ್ಲ ವಿಚಾರಗಳನ್ನೂ ನಾನು ಅಗಲೇ ಕೇಂದ್ರಕ್ಕೆ ತಿಳಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಇದರ ಬಗ್ಗೆ ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

## 9. ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ (7ನೇ ಮಾರ್ಚ್, 1969).

ಶ್ರೀ ವೀರೇಂದ್ರ ಪಾಟೀಲ್ :-

ಸನ್ಮಾನ್ಯ ಸಭಾಧ್ಯಕ್ಷರೇ, ನೀರಾವರಿ ಮತ್ತು ವಿದ್ಯುಚ್ಛಕ್ತಿ, ಈ ಎರಡು ಖಾತೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಕೆಲವು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ. ಎಲ್ಲಾ ಸದಸ್ಯರು ಮಾತನಾಡುವಾಗ ನೀರಾವರಿಯ ಮಹತ್ವ ಮತ್ತು ನೀರಾವರಿಗೆ ಹೆಚ್ಚಿನ ಹಣ ಒದಗಿಸಬೇಕೆಂಬುದನ್ನು ಒತ್ತಾಯ ಮಾಡಿ ಹೇಳಿದ್ದಾರೆ. ಆ ಮಾತುಗಳನ್ನು ನಾನು ಸ್ವಾಗತಿಸುತ್ತೇನೆ. ನೀರಾವರಿಯ ಸೌಕರ್ಯ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆ, ನಮ್ಮ ರಾಜ್ಯದಲ್ಲಿ ನಾವು ಆಹಾರದಲ್ಲಿ ಸ್ವಾವಲಂಬಿಗಳಾಗುವುದಿಲ್ಲ ಮತ್ತು ಆರ್ಥಿಕ ಭದ್ರತೆ ಬರುವುದಿಲ್ಲ ಎಂಬುದನ್ನು ಸರ್ಕಾರ ಸಂಪೂರ್ಣವಾಗಿ ಮನಗಂಡಿದೆ. ಇವತ್ತು ನೀರಾವರಿಗೆ ಹೆಚ್ಚಿನ ಅನುಕೂಲವಾಗಬೇಕು, ಮತ್ತು ಕೃಷ್ಣಾ, ಕಾವೇರಿ ನದಿ ಪಕ್ಕದಲ್ಲಿರತಕ್ಕ ಪ್ರದೇಶ ಬೆಳವಣಿಗೆ ಆಗಬೇಕಾದರೆ, ಎರಡು ನದಿಗಳ ನೀರನ್ನು ಹೆಚ್ಚಿನ ಮಟ್ಟದಲ್ಲಿ ಉಪಯೋಗಿಸಬೇಕೆಂದು ಶ್ರೀಮಾನ್ ನಂಜೇಗೌಡರು ಒಂದು ಮೋಷನನ್ನು ಕಳಿಸಿದ್ದಾರೆ. ಮೂವತ್ತು ಕೋಟಿ ರೂಪಾಯಿ ಈ ವರ್ಷ ಅದಕ್ಕೆ ಖರ್ಚು ಮಾಡಬೇಕು 20 ಕೋಟಿ ರೂಪಾಯಿ ಕೃಷ್ಣ ಬೇಸಿನಲ್ಲಿರತಕ್ಕ ನೀರಾವರಿ ಯೋಜನೆಗಳಿಗೆ, 10 ಕೋಟಿ ಕಾವೇರಿ ಬೇಸಿನಲ್ಲಿರತಕ್ಕ ನೀರಾವರಿ ಯೋಜನೆಗಳಿಗೆ ಎಂದು. ಅದನ್ನು ನಾನು ತತ್ವಶ: ಸ್ವಾಗತಿಸುತ್ತೇನೆ. ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಹೆಚ್ಚಿಗೆ ಹಣ ಒದಗಿಸತಕ್ಕಂತದ್ದು ಸರ್ಕಾರದ ಮನಸ್ಸು ಮತ್ತು ಸರ್ಕಾರದ ನೀತಿಯಾಗಿದೆ. ಆದರೆ, ಅವರೇ ಪ್ರಥಮದಲ್ಲಿ ಹೇಳಿದ ಹಾಗೆ ಇವತ್ತಿನ ದಿವಸ 30 ಕೋಟಿ ರೂಪಾಯಿ ಒದಗಿಸುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ ಎಷ್ಟು ಈಗ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಕ್ಕೆ ಎರಡು ವಿಧಾನವಿದೆ. ಒಂದು ವಿಧಾನ ಎಲ್ಲಾ ಇಲಾಖೆಗಳಲ್ಲೂ ಇರತಕ್ಕಂತಹ ಕಾರ್ಯಕ್ರಮಗಳನ್ನು ಎಷ್ಟು ಮಟ್ಟಿಗೆ ಮೊಟಕು ಮಾಡಿ, ಹಣವನ್ನು ಉಳಿತಾಯ ಮಾಡಿ, ಈ ಬಾಬಿಗೆ ಒದಗಿಸಬಹುದು ಎಂಬ ವಿಚಾರ. ಇದಕ್ಕೆ ಎಲ್ಲಾ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ, ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಅವರು ಎಷ್ಟೆಷ್ಟು ಉಳಿತಾಯ ತೋರಿಸುತ್ತಾರೆ ಎಂದು ತಿಳಿದುಕೊಂಡು, ಅದನ್ನು ನೀರಾವರಿ ಸಲುವಾಗಿ ಒದಗಿಸಬೇಕು ಎನ್ನುವುದು. ಎರಡನೆಯ ವಿಧಾನ- ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಂಡು ಈ ದುಡ್ಡನ್ನು ಪೂರ್ತಿಯಾಗಿ ನೀರಾವರಿ ಯೋಜನೆಗಳಿಗೆ ಹಾಕತಕ್ಕದ್ದು. ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಈಗಾಗಲೇ ಅನೇಕ ವಿರೋಧಪಕ್ಷದ ನಾಯಕರನ್ನು ಒಳಗೊಂಡು ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಅರ್ಥಿಕ ಮಂತ್ರಿಯವರು ಅದಕ್ಕೆ ಕನ್‌ವೀನರ್ ಆಗಿದ್ದಾರೆ. ಬಹುಶ: ಅವರು ಒಂದೆರಡು ಸಲ ಸೇರಿರಬಹುದು. ಅವರು ಈ ಬಗ್ಗೆ ವಿಚಾರ ಮಾಡಿ, ಸಲಹೆ ಕೊಟ್ಟಾಗ ಮುಂದೆ ಅದನ್ನು ವಿಚಾರ ಮಾಡುತ್ತೇವೆ. ಅದೇ ರೀತಿ ಇವತ್ತು 30 ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗೆ ಒದಗಿಸುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅದರಿಂದ ನಂಜೇಗೌಡರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ಒಂದು ಮೋಷನಿನ ಹಿಂದಿರುವಂತಹ

ಸ್ಪಿರಿಟ್ ಏನಿದೆ ಅದನ್ನು ನಾನು ತತ್ವಶ: ಒಪ್ಪಿ, ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ, ಅಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅದರ ಪ್ರಕಾರ ಅವರ ಮೋಷನನ್ನು ಒತ್ತಾಯಪಡಿಸಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಅಲ್ಲಿಂದ ಅನೇಕ ಮಾನ್ಯ ಸದಸ್ಯರು ಕೃಷ್ಣಾ, ಗೋದಾವರಿ ದಂಡೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಕೃಷ್ಣ ನದಿ, ಗೋದಾವರಿ ನದಿ ನೀರಿನ ಭಾಗ ನಮಗೆ ಸಿಗಬೇಕು ಮತ್ತು ಆರ್ಬಿಟ್ರೇಷನಿಗೆ ಹೋಗಬೇಕು ಎನ್ನತಕ್ಕಂತಹದ್ದನ್ನು ಹೇಳಿದ್ದೇನೆ. ಕೇಂದ್ರ ಸರ್ಕಾರದವರು ಆರ್ಬಿಟ್ರೇಶನಿಗೆ ರೆಫರ್ ಮಾಡುವುದಕ್ಕೆ ತಯರಾಗಿದ್ದಾರೆಂದು ಹೇಳಿದ್ದಾರೆ. ಆದರೆ ಒಂದು ಆರ್ಬಿಟ್ರೇಶನ್ ಇರಬೇಕೋ, ಎರಡು ಟ್ರಿಬ್ಯೂನಲ್ ಇರಬೇಕೋ ಎನ್ನುತಕ್ಕಂತಹ ವಿಚಾರ ಬಂದಿರುವುದರಿಂದ, ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಇವು ಎರಡೂ ಒಂದೇ ಸಮಸ್ಯೆ ಎಂದು ಪರಿಗಣಿಸುವುದರಿಂದ ಅದಕ್ಕೆ ಒಂದೇ ಟ್ರಿಬ್ಯೂನಲ್ ಅವಶ್ಯವೆಂದು ಒತ್ತಾಯ ಪೂರ್ವಕವಾಗಿ ಹೇಳಿದ್ದೇವೆ. ಆದರೆ ಕೇಂದ್ರ ಸರ್ಕಾರದಿಂದ ನಮಗೆ ಯಾವುದೂ, ನಾವು ಕಳಿಸಿದಂತಹ ಪತ್ರಕ್ಕೆ ಉತ್ತರ ಬಂದಿಲ್ಲ. ಮೊನ್ನೆ ಪಾರ್ಲಿಮೆಂಟಿನಲ್ಲಿ ಕೇಂದ್ರದ ನೀರಾವರಿ ಮಂತ್ರಿಯವರು ಮಾತನಾಡುತ್ತಾ ಎರಡು ಟ್ರಿಬ್ಯೂನಲ್ ಮಾಡಬೇಕೆಂದು, ಅಲ್ಲಿನ ಕಾನೂನು ಮಂತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ಖಚಿತವಾದ, ಲಿಖಿತವಾಗಿ ಏನೂ ನಮಗೆ ಬರಲಿಲ್ಲ. ಆದ್ದರಿಂದ ಅದನ್ನು ಏನೂ ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲೂ ಕೂಡ ಲಾ ಸೆಕ್ರಟರಿಯವರಿಗೆ, ಅಡ್ವಕೇಟ್ ಜನರಲ್ ಅವರಿಗೆ ಈ ಬಗ್ಗೆ ಪರಿಶೀಲನೆ ಮಾಡಿ ಎರಡು ಟ್ರಿಬ್ಯೂನಲ್ ಅವಶ್ಯ ಇದೆಯೇ ಕಾನೂನು ಪ್ರಕಾರ ಒಂದು ಟ್ರಿಬ್ಯೂನಲ್ ಸಾಧ್ಯವಿದೆಯೇ ಎಂಬುದನ್ನು ನೋಡಿರಿ ಎಂದು ಹೇಳಿದ್ದೇನೆ. ಅದರ ಬಗ್ಗೆ ಅವರೂ ಕೂಡ ಪರಿಶೀಲನೆ ಮಾಡುತ್ತಿದ್ದಾರೆ. ನಂತರ ಯಾವ ರೀತಿ ಸಲಹೆ ಕೊಡುತ್ತಾರೆ, ಹಾಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಶಿವಪ್ಪ:- ಅವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್:-

ಆದರೆ ಕೇಂದ್ರ ಸರ್ಕಾರದವರು ಇದುವರೆಗೂ ನಮಗೆ ಉತ್ತರ ಕೊಟ್ಟಿಲ್ಲ. ಅವರ ನಿಲುಮೆ ಏನು, ಹಾಗೆ ವಿಚಾರ ಮಾಡಿದ್ದಾರೆ, ನಿರ್ಣಯ ಮಾಡಿದ್ದಾರೆ ಎಂದು ನಮಗೆ ಯಾವುದೂ ಅಂತಿಮವಾಗಿ ಬಂದಿಲ್ಲ. ಈ ಮಧ್ಯೆ ಲಾ ಸೆಕ್ರಟರಿಯವರನ್ನು ಅಡ್ವಕೇಟ್ ಜನರಲ್‌ರವರು, ಮತ್ತು ನಮ್ಮ ಇಲಾಖೆಯ ಇಂಜಿನಿಯರುಗಳು ವಿಚಾರ ಮಾಡುತ್ತಿದ್ದಾರೆ. ಏಕೆ ಎರಡು ಟ್ರಿಬ್ಯೂನಲ್ ಮಾಡಬೇಕೆಂದು ಹೇಳುತ್ತಿದ್ದಾರೆ, ಕಾನೂನು ಪ್ರಕಾರ ಅದರ ಅವಶ್ಯಕತೆ ಇದೆಯೇ. ಅಥವಾ ಅವಶ್ಯಕತೆ ಇಲ್ಲದಿದ್ದರೆ ಏಕೆ ಮಾಡುತ್ತಾರೆ ಎಂಬುದನ್ನೆಲ್ಲಾ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಎಂದು ಹೇಳಿದೆ. ಮಧ್ಯದಲ್ಲಿ ಟ್ರಿಬ್ಯೂನಲ್ ಮಾಡುವಂತಹ ಒಂದು ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಮುಂದೆ ಹಾಕಿದ್ದಾರೆಂದು ಹೇಳುವ ವಿಚಾರ ಮೊನ್ನೆ ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ನಮಗೆ ಏನೂ ಬಂದಿಲ್ಲ. ಇನ್ನು ಕೊನೆಯ ಪ್ರಯತ್ನದಲ್ಲಿ ಫೈಲ್ ಆದರೆ, ಆರ್ಬಿಟ್ರೇಶನ್

ಮಾಡಬೇಕೆನ್ನುವ ವಿಚಾರ ಇಟ್ಟು ಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇನ್ನು ಕೊನೆಯ ಪ್ರಯತ್ನ ಅಂದರೆ, ಮತ್ತೆ ಏನಾದರೂ ಫ್ರೆಶ್ ಪ್ರಪೋಸಲ್ಸ್ ಇಡುತ್ತಾರೋ ಏನೋ ಎಂದು ಗೊತ್ತಿಲ್ಲ. ಬಹುಶ: ಎಲ್ಲಾ ಮುಖ್ಯಮಂತ್ರಿಯವರನ್ನು ಕರೆದು ಮಾತನಾಡಬಹುದೆಂದು ನನಗನಿಸುತ್ತದೆ. ಈ ರೀತಿ ಮಾತನಾಡಿದರೆ, ಆ ರೀತಿ ಏನಾದರೂ ಪ್ರಪೋಸಲ್ಸ್ ಬಂದರೆ ನಮ್ಮ ರಾಜ್ಯದ ಹಿತ ದೃಷ್ಟಿಯಿಂದ ಎಷ್ಟು ಮಟ್ಟಿಗೆ ಅಂಥ ಪ್ರಪೋಸಲ್ಲನ್ನು ಒಪ್ಪಿಕೊಳ್ಳವುದಕ್ಕೆ ಸಾಧ್ಯ ಎಂಬುದನ್ನು ವಿಚಾರ ಮಾಡಿ ನಾವು ಮುಂದೆ ಹೆಜ್ಜೆ ಇಡುತ್ತೇವೆ.

ಆ ಬಗ್ಗೆ ಯಾವುದೇ ರೀತಿಯಿಂದ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬಾರದಂತೆ ನಾವು ನೋಡಿಕೊಳ್ಳುತ್ತೇವೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಅನೇಕ ಮಾನ್ಯ ಸದಸ್ಯರು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಬಹಳ ರೀತಿಯಿಂದ ಆಗ್ರಹ ಪೂರ್ವಕವಾಗಿ ಹೇಳಿದ್ದಾರೆ. ಅವರ ಆತುರತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರವನ್ನು ಅನೇಕ ದಿವಸಗಳಿಂದ ಹೇಳಿಕೊಂಡು ಬರುತ್ತಿದ್ದಾರೆ. ಇದಕ್ಕೆ ಇಲ್ಲಿಯವರೆಗೂ ಹೆಚ್ಚಿನ ಮಟ್ಟದಲ್ಲಿ ಏನೂ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿ ಈಗಾಗಲೇ ಅಲ್ಲಿ ಅರ್ತ ವರ್ಕ್ ಪ್ರಾರಂಭಮಾಡಿದ್ದೇವೆ. ಇದಕ್ಕೆ ಮೇಸನರಿ ಡ್ಯಾಮ್ ಕಟ್ಟಲು ಟೆಂಡರು ಬಂದಿದೆ. ಈ ಟೆಂಡರು ಬಗ್ಗೆ ಚೀಫ್ ಇಂಜನಿಯರಿಂದ ಶಿಫಾರಸ್ಸು ಬಂದಮೇಲೆ ಅದನ್ನು ಟೆಕ್ನಿಕಲ್ ಸಬ್ ಕಮಿಟಿಯವರು ಪರಿಶೀಲನೆ ಮಾಡಿದ ಮೇಲೆ ಆ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಷ ಈ ಕೃಷ್ಣಾ ಮೇಲ್ದಂಡೆಯ ಯೋಜನೆಗೆ 2 ಕೋಟಿ ರೂಪಾಯಿಗಳನ್ನು ಒದಗಿಸಿದೆ. ಒಂದು ವೇಳೆ ಅದಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಬಂದರೆ ಅದನ್ನು ಒದಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕಾಗುತ್ತದೆ ಎನ್ನುವ ವಿಚಾರವನ್ನು ನಾವು ಇಟ್ಟು ಕೊಂಡಿದ್ದೇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಈ ಕೆಲಸವನ್ನು ನಿಲ್ಲಿಸುವುದಿಲ್ಲ. ಮುಂದೆ ನಡೆಯುತ್ತದೆ. ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಹಳ ದೊಡ್ಡ ಪ್ರಾಜೆಕ್ಟ್ ಸುಮಾರು 140 ಕೋಟಿ ರೂಪಾಯಿಗಳು ಖರ್ಚಾಗುವಂತಹ ಒಂದು ಪ್ರಾಜೆಕ್ಟ್. ಅದಕ್ಕಾಗಿ ನಾವು ಸಜೆಸ್ಟ್ ಮಾಡಿದ್ದೇವೆ, ಮೊದಲನೇ ಸ್ಟೇಜಿನಲ್ಲಿ ಈ ಯೋಜನೆಗೆ 70-75 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಅದರಿಂದ ಲಕ್ಷಾಂತರ ಎಕರೆಗೆ ನೀರು ಸಿಕ್ಕುತ್ತದೆ. ಅದರೆ ಈ ಯೋಜನೆಗೆ ಇಷ್ಟೊಂದು ಹಣವನ್ನು ಈಗ ನಾವು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಅದರ ಸಲುವಾಗಿ ಯಾವುದಾದರೂ ಒಂದು ಏಜೆನ್ಸಿ ಮುಖಾಂತರ ಹಣವನ್ನು ಒದಗಿಸಿಕೊಳ್ಳಬೇಕು ಎಂದು ನಾವು ಸರ್ವಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಇದಕ್ಕೆ ಪ್ರತ್ಯೇಕವಾಗಿ ಧನಸಹಾಯ ಮಾಡಬೇಕೆಂದು ನಾವು ಪದೇ ಪದೇ ಕೇಳಿದ್ದೇವೆ, ಇತ್ತೀಚೆಗೆ ಐ.ಡಿ.ಎ. ಏಜೆನ್ಸಿ ಮುಖಾಂತರ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈಗ ತಕ್ಷಣ ನಮ್ಮಲ್ಲಿರುವ ಪ್ರಾಜೆಕ್ಟ್ ರಿಪೋರ್ಟನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಐ.ಡಿ.ಎ. ಏಜೆನ್ಸಿಯಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಐ.ಡಿ.ಎ. ಏಜೆನ್ಸಿಯ ಅಧ್ಯಕ್ಷರು ಮತ್ತು ಎಕ್ಸ್‌ಪರ್ಟುಗಳು ಸಹ ಇಲ್ಲಿಗೆ ಬಂದು ಕಮ್ಯಾಂಡ್ ಏರಿಯೂ ಪರಿಸ್ಥಿತಿ ಏನಿದೆ ಅದರಿಂದ ನೀರಾವರಿ ಅದರೆ ಯಾವ ಯಾವ ಪ್ರದೇಶಕ್ಕೆ ನೀರಾವರಿ ಸೌಕರ್ಯ ದೊರೆಯುತ್ತದೆ ಎನ್ನತಕ್ಕ ವಿಚಾರವೆಲ್ಲವನ್ನೂ ಅವರು

ನೋಡಿಕೊಂಡು ಹೋಗಿದ್ದಾರೆ. ಕೇಂದ್ರ ಸರ್ಕಾರದವರ ಮುಖಾಂತರ ಐ.ಡಿ.ಎ. ಏಜೆನ್ಸಿಯವರಿಂದ ಈ ಯೋಜನೆಗೆ ಧನಸಹಾಯ ಪಡೆಯಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಒಂದು ವೇಳೆ ಸುದೈವದಿಂದ ಐ.ಡಿ.ಎ. ಅವರು ಧನಸಹಾಯವನ್ನು ಮಾಡುವುದಕ್ಕೆ ಒಪ್ಪಿಕೊಂಡರೆ ಈ ಕೆಲಸ ಬಹಳ ಬೇಗವಾಗಿ ನಡೆಯುತ್ತದೆ ಎಂದು ನಾನು ಕಳಕಳಿಯಿಂದ ಹೇಳುವುದಕ್ಕೆ ಇಷ್ಟುಪಡುತ್ತೇನೆ.

ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿ ಈಗಾಗಲೇ ಹೇಮಾವತಿ, ಕಬಿನಿ, ಈ ಪ್ರಾಜೆಕ್ಟುಗಳ ಸಣ್ಣಪುಟ್ಟ ಕೆಲಸಗಳು ನಡೆಯುತ್ತಿವೆ. ಆದರೆ ಹಾರಂಗಿ ಪ್ರಾಜೆಕ್ಟಿನ ಕೆಲಸವನ್ನು ಇನ್ನೂ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಪ್ರಿಲಿಮಿನರಿ ವರ್ಕ್ ಸ್ವಲ್ಪಮಟ್ಟಿಗೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಿಜವಾಗಿಯೂ ಅಲ್ಲಿ ಕೆಲಸಗಳು ನಡೆಯುತ್ತವೆ ಎಂದು ಹೇಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕೆ ಕಾರಣವನ್ನು ನಾನು ಅನೇಕಸಾರಿ ಹೇಳಿದ್ದೇನೆ. ಅದಕ್ಕೆ ಹಣದ ಮುಗ್ಗಟ್ಟು ಕಾರಣ. ಆ ಪ್ರಾಜೆಕ್ಟಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ ಎಂದು ಆ ಕೆಲಸಗಳು ನಿಲ್ಲಲಿಲ್ಲ. ಕಪಿನಿ, ಹಾರಂಗಿ, ಹೇಮಾವತಿ ಈ ಯೋಜನೆಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ಅದು ಬಾರದಿದ್ದರೂ ನಾವು ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆ ಪ್ರಾಜೆಕ್ಟುಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ವಿಚಾರ ಇದೆ. ಆದ್ದರಿಂದ ಇದಕ್ಕೆ ಯಾವ ರೀತಿ ಹಣವನ್ನು ಒದಗಿಸಬೇಕು ಎನ್ನುವುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಇದಕ್ಕೆ ವಿರೋಧ ಪಕ್ಷದ ನಾಯಕರೂ ಸಹ ಸಹಕರಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಹೇಮಾವತಿ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್‌ಕೊಟ್ಟಿಲ್ಲ ಎನ್ನುವ ಬಗ್ಗೆ ಮಾನ್ಯ ಸದಸ್ಯರಿಗೆ ಅಸಮಾಧಾನ ಇದೆ. ಈ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಅವರ ಭಾಷಣದಲ್ಲಿ ವ್ಯಕ್ತ ಮಾಡಿದ್ದಾರೆ. ಇದಕ್ಕಾಗಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಕೆ.ಎಲ್. ರಾವ್ ಅವರ ಹೆಸರನ್ನು ಪ್ರಸ್ತಾಪ ಮಾಡಬೇಕಾದಂತಹ ಅವಶ್ಯಕತೆ ಇರಲಿಲ್ಲ. ಅದಕ್ಕೆ ವ್ಯಕ್ತಿ ಮುಖ್ಯವಲ್ಲ. ಕೇಂದ್ರ ಸರ್ಕಾರದವರು ಈ ಹೇಮಾವತಿ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕಾದ್ದನ್ನು ಕೊಟ್ಟಿಲ್ಲ. ಇದು ಸತ್ಯದ ಮಾತು ಇದೆ. ನಾನು ಅನೇಕಸಾರಿ ಈ ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಮದ್ರಾಸ್ ಸರ್ಕಾರದವರಿಗೆ ಯಾವ ರೀತಿ ಸರಿಯಾಗುತ್ತದೆಯೋ ಆ ರೀತಿ ನಾವು ಒಪ್ಪಿಕೊಂಡರೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತಾರೆ ಎನ್ನುವ ರೀತಿಯಲ್ಲಿ ಪತ್ರವ್ಯವಹಾರ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಅದಕ್ಕಾಗಿ ನಾವು ಕೈಕಟ್ಟಿಕುಳಿತುಕೊಳ್ಳುವುದಿಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಬೇಕು ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹುಶ: ಇದು ನಿಧಾನವಾಗುತ್ತದೆ ಎಂದು ನಾವು ಕೆಲಸವನ್ನು ನಿಲ್ಲಿಸುವುದಿಲ್ಲ. ನಮ್ಮ ಹಿತಕ್ಕೆ ಧಕ್ಕೆ ಬಾರದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ನಮ್ಮ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ರೈತರಿಂದ ನೀರಾವರಿ ಯೋಜನೆಗಳಿಗೆ ಅಡ್ವನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡುವ ಬಗ್ಗೆ ನಾನು ಹೇಳಿದ್ದೇನೆ. ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡಬೇಕಾದರೆ ಇರಿಗೇಷನ್ ಲೆವಿ, ಬೆಟರ್‌ಮೆಂಟ್ ಲೆವಿ ಆ್ಯಕ್ಟನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂಥ ಒಂದು ಬಿಲ್ ಇಂಟ್ರಡ್ಯೂಸ್ ಆಗಿ ಈ ಸಭೆಯಲ್ಲಿ ಪಾಸಾದರೆ ನೀರಾವರಿ

ಯೋಜನೆಗಳಿಗೆ ರೈತರಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಬರುತ್ತದೆ. ಈಗ ನಾವು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕೆ ಅಧಿಕಾರವಿಲ್ಲ. ಬಿಲ್ ಪಾಸಾದ ಮೇಲೆ ಆ ಅಧಿಕಾರ ಬರುತ್ತದೆ. ಅದ್ದರಿಂದ ಮುಂದೆ ಈ ಸಭೆಯಲ್ಲಿ ಅಂಥಾ ಒಂದು ಬಿಲ್ಲನ್ನು ತಂದಾಗ ಮಾನ್ಯ ಸದಸ್ಯರೆಲ್ಲರೂ ಅದನ್ನು ಒಪ್ಪಿ ಪಾಸು ಮಾಡಿದರೆ ಆ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎನ್ನುವ ವಿಚಾರ ಇದೆ.

ಹೋದ ಸಲ ಜನರಲ್ ಡಿಸ್‌ಕಷನ್ ನಡೆದಂತಹ ಸಂದರ್ಭದಲ್ಲಿ ಈ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ರಿವರ್ ವ್ಯಾಲಿ ಕಾರ್ಪೋರೇಷನ್ ರಚನೆ ಮಾಡುವ ಪ್ರಶ್ನೆ ಬಂದಿತು. ಅದಕ್ಕಾಗಿ ನಾನು ಹೇಳುವುದೇನೆಂದರೆ ಕಾವೇರಿ ಡೆವಲಪ್‌ಮೆಂಟ್ ಕಾರ್ಪೋರೇಷನ್, ಮತ್ತು ಕೃಷ್ಣಾ ವ್ಯಾಲಿ ಡೆವಲ್‌ಪಮೆಂಟ್ ಕಾರ್ಪೋರೇಷನ್ ಎಂದು ಎರಡು ಕಾರ್ಪೋರೇಷನ್‌ಗಳನ್ನು ರಚನೆ ಮಾಡಿದರೆ ಎರಡು ವ್ಯಾಲಿಗಳ ಪ್ರಾಜೆಕ್ಟ್ ಕಟ್ಟಡಗಳನ್ನು ಈ ಕಾರ್ಪೋರೇಷನ್ನಿಗೆ ಟ್ರಾನ್ಸ್‌ಫರ್ ಮಾಡುವುದು ಸಾಧ್ಯವಾಗುತ್ತದೆ. ಆ ರೀತಿ ಟ್ರಾನ್ಸ್‌ಫರ್ ಮಾಡಿದಾಗ ಅಸೆಟ್ಸ್ ಬಿಲ್ಡಿಪ್ ಮಾಡಿದಂತಾಗುತ್ತದೆ. ನಮ್ಮಲ್ಲಿ ಮೀಡಿಯಂ ಮತ್ತು ಮೇಜರ್ ನೀರಾವರಿ ಯೋಜನೆಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಇರುತ್ತದೆಯೋ ಅದನ್ನು ಈ ಕಾರ್ಪೋರೇಷನ್ನಿಗೆ ವರ್ಗಾಯಿಸಬಹುದು. ಮತ್ತು ಡಿಬೆಂಚರ್ ಸಾಲ, ಎಲ್.ಐ.ಸಿ ಸಾಲ ಇವುಗಳನ್ನು ಪಡೆದು ಈ ಯೋಜನೆಗಳ ಕೆಲಸಕಾರ್ಯಗಳನ್ನು ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ. ಎನ್ನುವ ವಿಚಾರವನ್ನು ಡೀಟೈಲಾಗಿ ವರ್ಕ್‌ಔಟ್ ಮಾಡಿದ ಮೇಲೆ ಇದಕ್ಕೆ ಒಂದು ಮಸೂದೆಯನ್ನು ತಯಾರುಮಾಡಿ ಈ ಸಭೆಯ ಮುಂದೆ ತರಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಇದನ್ನು ವಿರೋಧ ಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಸ್ವಾಗತಿಸಿದ್ದಾರೆ. ಈ ರೀತಿ ಎಲ್ಲರೂ ಸೇರಿ ಮಾಡುವುದಾದರೆ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಹೆಚ್ಚಿನ ಹಣವನ್ನು ಖರ್ಚು ಮಾಡಬಹುದಾದಂತಹ ಪರಿಸ್ಥಿತಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದು ಅನಿಸುತ್ತದೆ.

ವಿದ್ಯುಚ್ಛಕ್ತಿ ಬಗ್ಗೆ ನಾನು ಹೇಳಬೇಕಾದರೆ ವಿದ್ಯುಚ್ಛಕ್ತಿ ಕೆಲಸವನ್ನು ಬಹಳ ವೇಗವಾಗಿ ನಾವು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ಹೋದ ವರ್ಷ ಸಹ ಎಲೆಕ್ಟ್ರಿಸಿಟಿ ಬೋರ್ಡಿನವರು, ಎಲ್.ಐ.ಸಿ. ಮತ್ತು ಫೈನಾನ್ಸ್ ಕಾರ್ಪೋರೇಸ್ಸ್‌ನವರು ಮತ್ತು ಇತರ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡು ದೊಡ್ಡ ಪ್ರಮಾಣದಲ್ಲಿ ಅವರ ಪ್ರೋಗ್ರಾಂ ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಮುಂದಿನ ವರ್ಷ ಸಹ ಸುಮಾರು 20-25 ಸಾವಿರ ಬಾವಿಗಳಿಗೆ ಸರ್ವೀಸ್ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೋರೇಷನ್, ಷೆಡ್ಯೂಲ್ ಬ್ಯಾಂಕ್ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೋರೇಶನ್ ಇವರುಗಳ ನೆರವು ಸಿಕ್ಕುತ್ತದೆ. ಅದನ್ನು ನಾವು ಪ್ರಯತ್ನ ಮಾಡುತ್ತೇವೆ. ಈಗ ನಮ್ಮಲ್ಲಿ ಸ್ವಲ್ಪ ವಿದ್ಯುಚ್ಛಕ್ತಿ ಹೆಚ್ಚು ಇದೆ. ಆ ವಿದ್ಯುಚ್ಛಕ್ತಿಯನ್ನು ನಾವು ನೆರೆ ಪ್ರಾಂತ್ಯಗಳಿಗೆ ಸರಬರಾಜು ಮಾಡುತ್ತಿದ್ದೇವೆ.

ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ, ಏನೆಂದರೆ ಮಹಾರಾಷ್ಟ್ರದವರು ವಿದ್ಯುಚ್ಛಕ್ತಿ ಬೇಕೆಂದು ಕೇಳಿದ ಮೇಲೆ ಮಹಾರಾಷ್ಟ್ರ ಮತ್ತು ಮೈಸೂರು ಈ ಎರಡು ರಾಜ್ಯಗಳ ನಡುವೆ ಗ್ರಿಡ್‌ಎಸ್ಟಾಬ್ಲಿಶ್ ಮಾಡಬೇಕೆಂಬ ದೃಷ್ಟಿಯಿಂದ, ಅವರು ಕೇಳಿದ ಹುಬ್ಬಳ್ಳಿ ಬೆಳಗಾಂ ಲೈನ್ ಹಾಕಿದ್ದೇವೆ. ಈಗ ಬೆಳಗಾಂ ಮತ್ತು ಕೊಲ್ಲಾಪುರ ಲೈನನ್ನು ಹಾಕಬೇಕೆಂಬ ವಿಚಾರಮಾಡಿ ಪ್ರಾರಂಭ ಮಾಡಿದ್ದೇವೆ. ಈ ಕೆಲಸ ಬರುವ ಏಪ್ರಿಲ್ ತಿಂಗಳೊಳಗೆ ಮುಗಿದು ಸ್ವಲ್ಪಮಟ್ಟಿಗೆ ಮಹಾರಾಷ್ಟ್ರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಪರಿಸ್ಥಿತಿಗೆ ಬರುತ್ತೇವೆಂದು ತಿಳಿದುಕೊಂಡಿದ್ದೇನೆ. ತಾತ್ಪೂರ್ತಿಕವಾಗಿ ನಮ್ಮಲ್ಲಿ ವಿದ್ಯುಚ್ಛಕ್ತಿ ಹೆಚ್ಚು ಇದ್ದರೂ ಕೂಡ ಲೋಡ್ ಸರ್ವೆ ಮಾಡಿದ ಮೇಲೆ 1973-74ರಲ್ಲಿ ಮತ್ತೆ ನಮಗೇ ವಿದ್ಯುಚ್ಛಕ್ತಿಯ ಅಭಾವ ಪರಿಣಮಿಸುತ್ತದೆಂದು ತಿಳಿದುಬಂದಿದೆ. 1973-74ರಲ್ಲಿ ವಿದ್ಯುಚ್ಛಕ್ತಿಯ ಅಭಾವ ಬಂದಮೇಲೆ ಇನ್ನೊಂದು ಪ್ರಾಜೆಕ್ಟ್ ಮಾಡಬೇಕೆಂದು ಹಿಂದೆಮುಂದೆ ಯೋಚನೆ ಮಾಡಿದರೆ ಅಲ್ಲಿಂದ ಮುಂದಕ್ಕೆ ನಾಲ್ಕೈದು ವರ್ಷಗಳು ಬೇಕಾಗುತ್ತದೆ. ಅದಕ್ಕಾಗಿಯೇ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ ನದಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ವಿಚಾರಮಾಡಿ ಆ ಬಗ್ಗೆ ಡೀಟೈಲ್ ರಿಪೋರ್ಟ್ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಅವರ ಅನುಮತಿಗಾಗಿ ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದವರು ನಾಲ್ಕನೆಯ ಯೋಜನೆಯಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಅಷ್ಟೊಂದು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಪ್ರತ್ಯೇಕವಾದ ಯಾವುದಾದರು ಒಂದು ಏಜೆನ್ಸಿ ಮೂಲಕ ಸಾಲದ ರೂಪದಲ್ಲಿ ಹಣ ಸಿಕ್ಕಿದರೆ ಕೆಲಸ ಪ್ರಾರಂಭಮಾಡುವುದಕ್ಕೆ ಸಹಾಯವಾಗುತ್ತದೆಂದು ತಿಳಿದು ಅದಕ್ಕಾಗಿ ಪ್ರಯತ್ನ ಮಾಡಬೇಕೆಂದಿದ್ದೇವೆ. ಇರಿಗೇಷನ್ ಸೆಟಪ್‌ನಲ್ಲಿ ವಿದ್ಯುಚ್ಛಕ್ತಿ ಯೋಜನೆಯನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಮ್ಮ ಅಭಿಪ್ರಾಯದ ಪ್ರಕಾರ ಯೋಜನೆ ತೆಗೆದುಕೊಳ್ಳುವುದು ಕಷ್ಟ ಇದ್ದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ ನದಿ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆಂದು ಮಾನ್ಯ ಸಭೆಗೆ ಹೇಳುತ್ತೇನೆ.

ಇನ್ನು ಕೊನೆಯದಾಗಿ ಶ್ರೀಮಾನ್ ಭೀಮಣ್ಣನವರು ಮತ್ತು ಬಿದರ ಜಿಲ್ಲೆಯ ಎಲ್ಲಾ ಸದಸ್ಯರುಗಳು ಅವರ ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ಬಿದರ ಜಿಲ್ಲೆಯ ಗೋದಾವರಿ ಬೇಸಿನ್‌ನಲ್ಲಿ ನಾವು ಇಲ್ಲಿಯವರೆಗೆ ನೀರಾವರಿಯ ಸೌಕರ್ಯವನ್ನು ಅಲ್ಲಿಯ ಜನತೆಗೆ ಒದಗಿಸಿಕೊಡುವುದಕ್ಕೆ ಆಗಿಲ್ಲ. ಕೆಲವು ಕೆರೆಕಟ್ಟೆ ಕಟ್ಟಿಸಿಕೊಟ್ಟಿರಬಹುದು. ಆದರೆ ದೊಡ್ಡ ಜಲಾಶಯಗಳು ನಿರ್ಮಾಣವಾಗಿಲ್ಲ. ಅದಕ್ಕಾಗಿಯೇ ದೊಡ್ಡ ಜಲಾಶಯವಾದ ಕಾರಂಜಿ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಅಂದಾಜು ತಯಾರುಮಾಡಿ ಡೀಟೈಲ್ ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಈ ಯೋಜನೆಗೆ 9.90 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಈ ಭಾಗದಲ್ಲಿ 15-20 ಸಾವಿರ ಬಾವಿಗಳು ಇವೆ. ಮೊದಲು ಬಾವಿಗಳಲ್ಲಿ ನೀರು ಮೇಲೆ ಇರುತ್ತಿತ್ತು. ಈಗ ಅಣ್ಣತಮ್ಮಂದಿರಲ್ಲೇ ಒಂದೇ ಮನೆಯಲ್ಲಿ ಎರಡು ಬಾವಿಗಳನ್ನು ಮಾಡಿಕೊಂಡು ಬಾವಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ

ನೀರು ಕೆಳಗೆ ಹೋಗುತ್ತಿದೆ. ಅದಕಾರಣ ಈ ಭಾಗಕ್ಕೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡದಿದ್ದರೆ ಮುಂದೆ ಸರ್ಕಾರಕ್ಕೆ ಒಂದು ಸಮಸ್ಯೆಯಾಗುತ್ತದೆ. ಈಗ ಅಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ಮುಂದೆ ಕಬ್ಬನ್ನು ಬೆಳೆಯಲು ತೊಂದರೆಯಾದರೆ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಧಕ್ಕೆ ಬರುತ್ತದೆಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾಲ್ಕನೇ ಪಂಚವಾರ್ಷಿಕ ಯೋಜನೆಯು ಈ ಕಾರಂಜಿ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಅನೇಕ ಸಲ ಈ ವಿಚಾರವನ್ನು ಅಲ್ಲಿಯ ಮಾನ್ಯ ಸದಸ್ಯರುಗಳು ವ್ಯಕ್ತ ಮಾಡಿರುವುದರಿಂದ, ಈ ಯೋಜನೆ ತೆಗೆದುಕೊಳ್ಳುವ ಮಹತ್ವ ಇದೆ ಎಂದು ತಿಳಿದುಕೊಂಡಿದ್ದೇನೆ. ಅದನ್ನೇ ಪುನಃ ಪುನಃ ಹೇಳಬೇಕಾದ ಅವಶ್ಯಕತೆ ಇಲ್ಲ. ಈ ಬೇಡಿಕೆಗಳನ್ನು ಸರ್ವಾನುಮತದಿಂದ ಮಾನ್ಯ ಸದಸ್ಯರುಗಳು ಒಪ್ಪಿಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

## 10. ಗಡಿ ವಿಷಯಗಳ ಮೇಲೆ ಮಹಾಜನ್ ಸಮಿತಿಯ ವರದಿ ಕುರಿತು 10ನೇ ಮಾರ್ಚ್ 1969.

ಶ್ರೀ ಎಸ್. ಶಿವಪ್ಪ:-

ಅಧ್ಯಕ್ಷರೇ, ನಾವು ಒಂದು ವಿಷಯವನ್ನು ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದ ಬಹಳ ಪ್ರಾಮುಖ್ಯವಾದಂತಹ ವಿಷಯಗಳನ್ನು ಚರ್ಚೆ ಮಾಡಲು ದೆಹಲಿಗೆ ಹೋಗಿದ್ದರು. ಇವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಹೋಗಿದ್ದರೋ ಅಥವಾ ರಾಜ್ಯದ ಮುಖ್ಯ ಮಂತ್ರಿಗಳಾಗಿ ಹೋಗಿದ್ದರೋ ಎಂಬುದು ಗೊತ್ತಿಲ್ಲ. ಮಹಾಜನ್ ವರದಿಯನ್ನು ಚರ್ಚೆ ಮಾಡಿದರೋ ಅಥವಾ ಮುಂದಕ್ಕೆ ಹಾಕಿದರೋ ಎಂಬುದು ಸರಿಯಾಗಿ ನಮಗೆ ಗೊತ್ತಿಲ್ಲ ಕಾಂಗ್ರೆಸ್ ಅಧ್ಯಕ್ಷರು ಕರೆದರು ಎಂಬುದಾಗಿ ಅವರು ಹೋದರು. ಅಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಮತ್ತು ಇವರು ಒಂದು ಕಡೆ ಸೇರಿ ಯಾವುದನ್ನು ಚರ್ಚೆ ಮಾಡದೆ ಪುನ: ವಾಪಸ್ ಬಂದಿರುವುದು ನೋಡಿದರೆ ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಇರಬಹುದೆಂದು ಕಾಣುತ್ತದೆ. ಮಹಾಜನ್ ವರದಿಯ ಬಗ್ಗೆ ನಿಜವಾಗಿಯೂ ಒಂದು ಧೃಡವಾದ ನಿರ್ಧಾರವನ್ನು ಕಾಂಗ್ರೆಸ್ ಅಧ್ಯಕ್ಷರು ಮತ್ತು ಸಂಬಂಧಪಟ್ಟ ರಾಜ್ಯಗಳ ಮುಖ್ಯ ಮಂತ್ರಿಗಳು ಕೈಗೊಂಡಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಪತ್ರಿಕೆಗಳಲ್ಲಿ ಸರಿಯಾದ ವಿಚಾರಗಳು ಈ ಬಗ್ಗೆ ಬಂದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದು ಏನಾಯಿತು, ಏನು ಮಾಡಿಕೊಂಡು ಬಂದರು ಮತ್ತು ಅವರು ಮಾಡಿಕೊಂಡು ಬಂದ ಕಾರ್ಯವನ್ನು ಹೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :-

ಮಹಾಜನ್ ವರದಿಯ ಬಗ್ಗೆ ತೀರ್ಮಾನ ಕೈಗೊಳ್ಳುವ ಬಗ್ಗೆ ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಲಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ನಾವು ಓದಿದ್ದೇವೆ. ಅದರೆ ಮುಖ್ಯಮಂತ್ರಿಗಳು ಈ ವಿಷಯವನ್ನು ಏಪ್ರಿಲ್ ತಿಂಗಳಲ್ಲಿ ಮತ್ತೆ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಮಹಾಜನ್ ವರದಿಯನ್ನು ಲಘುವಾಗಿ ಕಾಣುವ ಪರಿಸ್ಥಿತಿಗೆ ಬಂದಿದೆ. ಈ ಬಗ್ಗೆ ನಮ್ಮ ಸ್ಪಷ್ಟ ನಿಲುವು ಇದ್ದೇ ಇದೆ ಎಂಬುದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ ? ಈಗ ಮಂತ್ರಿಗಳು ದೆಹಲಿಗೆ ಹೋಗಿ ಕಾಂಗ್ರೆಸ್ ಅಧ್ಯಕ್ಷರ ಮುಖವನ್ನು ನೋಡಿಕೊಂಡು ಬಂದರೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವರದಿಯ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್:-

ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿ.ಪಿ. ನಾಯಕರು ಒಟ್ಟಿಗೆ ಕಾರಿನಲ್ಲಿ ಹೋದರು ಮತ್ತು ಇಬ್ಬರು ಮುಖ್ಯಮಂತ್ರಿಗಳೂ ಮಾತನಾಡಿದರು ಎಂಬುದಾಗಿ ಪತ್ರಿಕೆಗಳಲ್ಲಿ ಬಂದಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಏನು ನಡೆಯಿತು ಎಂಬುದು ನಮಗೆ ಗೊತ್ತಿಲ್ಲ. ಇಬ್ಬರು ಮುಖ್ಯಮಂತ್ರಿಗಳು ಕಾರಿನಲ್ಲಿ ಹೋಗಿ ಟೀ ಕುಡಿದು ಈ ವಿಷಯವನ್ನು ಕೈಬಿಟ್ಟಿರಬಹುದೆಂದು

ನಮಗೆ ಸಂಶಯ ಬಂದಿದೆ. ಮತ್ತು ಆ ಸಭೆಗೆ ಇಂದಿರಾಗಾಂಧಿಯವರು ಬಂದಿರಲಿಲ್ಲವೆಂಬ ಬಗ್ಗೆಯೂ ಕೂಡಾ ಸಂಶಯಕ್ಕೆ ಆಸ್ಪದವಾಗಿದೆ. ಅದಕಾರಣ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟವಾದ ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀ ಬಿ.ಪಿ. ಗಂಗಾಧರ :-

ಕಾಂಗ್ರೆಸ್ ಅಧ್ಯಕ್ಷ ಮತ್ತು ಇತರರಲ್ಲದೆ, ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿಯವರ ಜೊತೆ ಮಾತುಕತೆ ನಡೆಸಿದ್ದರೆಂದು ತಿಳಿಸಲಾಗಿದೆ. ಅವರಿಗೆ ಸದನವು ಅಂಗೀಕರಿಸಿದ ನಿರ್ಣಯ ಮತ್ತು ಅದರ ಭಾವನೆಗಳು ಗೊತ್ತಿರುತ್ತವೆ. ಪ್ರಧಾನ ಮಂತ್ರಿಯವರು ಒಂದು ವೇಳೆ ಮಾತುಕತೆ ಹೊಂದಿದ್ದರೆ, ಆ ಮಾತುಕತೆಯ ಫಲಿತಾಂಶದ ಬಗ್ಗೆ ನಮಗೆ ತಿಳಿಸಬೇಕು.

ಶ್ರೀ ಬಿ. ಬಿ. ಸಾಯುನಕ್ :-

ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಿರಲು ಮುಖ್ಯಮಂತ್ರಿಗಳು ವಿಳಂಬ ಮಾಡಿದ್ದರ ಬಗ್ಗೆ, ನಾನು ತಿಳಿಯಬಹುದೇ ?

ಶ್ರೀ ವೀರೇಂದ್ರ ಪಾಟೀಲ್:-

ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿದೆ; ಯಾವ ಉದ್ದೇಶಕ್ಕಾಗಿ ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗ್ ಅಟೆಂಡ್ ಮಾಡುವುದಕ್ಕೆ ಹೋಗಿದ್ದೆ ಎಂಬುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಪ್ರಧಾನ ಮಂತ್ರಿಗಳು ಸಹ ಸದಸ್ಯರಾಗಿದ್ದಾರೆ. ಅವರು ಅಟೆಂಡ್ ಮಾಡುತ್ತಾರೆ. ಮಹಾಜನ್ ಕಮೀಷನನ್ನು ಅಪಾಯಿಂಟ್ ಮಾಡುವುದಕ್ಕೆ ಮೊದಲು ಅದೇ ವರ್ಕಿಂಗ್ ಕಮಿಟಿಯಲ್ಲಿರುವವರೇ ಈ ಗಡಿ ಜಗಳವನ್ನು ತೀರ್ಮಾನ ಮಾಡಲು ಒಂದು ಆಯೋಗಕ್ಕೆ ಒಪ್ಪಿಸಬೇಕೆಂದು ನಿರ್ಣಯ ಮಾಡಿದರು. ಬಹುಶ: ಆ ನಿರ್ಣಯ ಮಾಡಿಲ್ಲದೇ ಹೋಗಿದ್ದರೆ ಕೇಂದ್ರ ಸರ್ಕಾರದವರು ಆ ಆಯೋಗವನ್ನು ಮಾಡುತ್ತಿರಲಿಲ್ಲವೇನೋ ಎಂದು ನನಗನಿಸುತ್ತದೆ ಇದಕ್ಕಾಗಿ ಇದು ಮತ್ತೆ ವರ್ಕಿಂಗ್ ಕರ್ಮಿಟಿ ಮುಂದೆ ಚರ್ಚೆಗೆ ಬಂದಿರತಕ್ಕದ್ದು ಸ್ವಾಭಾವಿಕ, ವರ್ಕಿಂಗ್ ಕಮಿಟಿ ಮುಂದೆ ಚರ್ಚೆಗೆ ಬಂದಾಗ ಇದಕ್ಕೆ ಕಾರಣವೇನು ಮತ್ತು ಯಾವ ರೀತಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅಲ್ಲಿ ಕೂಲಂಕುಷವಾಗಿ ವಿಚಾರ ಮಾಡುತ್ತಾರೆ ಎಂದಿತ್ತು. ಆ ವೇಳೆಗೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅಲ್ಲಿ ಮಹಾಜನ್ ಕಮಿಟಿಯ ರಿಪೋರ್ಟಿನ ಬಗ್ಗೆ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ. ಇದಕ್ಕಾಗಿ ನಾನು ವರ್ಕಿಂಗ್ ಕಮಿಟಿ ಕೆಲಸಕ್ಕಾಗಿ ಹೋಗಿದ್ದೆ ಎಂದು ತಿಳಿಯಬಾರದು. ವರ್ಕಿಂಗ್ ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿರಬಹುದು, ಇದರಂತೆ ನಮ್ಮ ಪ್ರೈಂ ಮಿನಿಸ್ಟರೂ ಸದಸ್ಯರಾಗಿದ್ದಾರೆ, ಡೆಪ್ಯುಟಿ ಪ್ರೈಂ ಮಿನಿಸ್ಟರೂ ಇದ್ದಾರೆ, ವೈ.ಬಿ. ಚವಾಣರೂ ಇದ್ದಾರೆ. ಇವರೆಲ್ಲರೂ ಇರುವಾಗಲೇ ಇದರ ಚರ್ಚೆಯಾಗಬೇಕು ಎಂದು ಕಾರ್ಯಕ್ರಮ ಏರ್ಪಾಟಾಗಿತ್ತು. ನಾವು ಕೂಡ ಹೋಗಿ ಹೇಳುವುದು ನಮ್ಮ ಜವಾಬುದಾರಿಯೂ ಆಗಿದೆ.

ಶ್ರೀ ಎಂ. ನಾಗಪ್ಪ :-

ಶ್ರೀ ನಂಬೂದರಿ ಪಾದರು ಅಲ್ಲಿಗೇಕೆ ಬರಲಿಲ್ಲ. ಅವರ ರಾಜ್ಯದ ಬಗ್ಗೆ ಕೂಡ ಇದರಲ್ಲಿತ್ತು?

ಶ್ರೀ ವೀರೇಂದ್ರ ಪಾಟೀಲ್ :-

ನಂಬೂದರಿ ಪಾದರ್‌ನವರು ವರ್ಕಿಂಗ್ ಕಮಿಟಿ ಸದಸ್ಯರಲ್ಲ. ಅವರನ್ನು ಕರೆಯುವ ಅವಶ್ಯಕತೆಯೂ ಇಲ್ಲ. ಮುಂದೆ ಏನಾದರೂ ಸಿ.ಪಿ. ಎಂ. ಸರಕಾರ ಬಹುಶ: ಬಂದರೆ ಆಗ ಆ ಸರಕಾರದವರು ಶ್ರೀ ನಂಬೂದರಿಪಾದ್‌ರವರನ್ನು ಕರೆಯಬಹುದು ಮತ್ತು ವರ್ಕಿಂಗ್ ಕಮಿಟಿ ಎಂದು ಅವರು ಕರೆದಾಗ ಬರಬಹುದು. ಅದುದರಿಂದ ಅವರನ್ನು ಕರೆಯದೇ ಇರುವುದು ತಪ್ಪು ಎಂದು ನನಗೆ ಕಾಣುವುದಿಲ್ಲ. ಹೀಗೆ ಅಂದು ವರ್ಕಿಂಗು ಕಮಿಟಿ ಸೇರಿದಾಗ ಅಲ್ಲಿಗೆ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಅವರ ದೇಹ ಸ್ವಾಸ್ಥ್ಯ ಸರಿಯಾಗಿರಲಿಲ್ಲ ಎಂದು ಸಭೆಗೆ ಬರಲಿಲ್ಲ. ಇದರಿಂದ ಅಲ್ಲಿದ್ದ ಅನೇಕ ಜನ ಮಾನ್ಯ ಸದಸ್ಯರುಗಳು ಪ್ರಧಾನ ಮಂತ್ರಿಗಳು ಇಲ್ಲದೆ ಇಂತಹ ಮುಖ್ಯ ವಿಷಯಗಳನ್ನು ಚರ್ಚೆ ಮಾಡುವುದು ಸಮಂಜಸವಲ್ಲ ಎಂದು ಇದರ ವಿಚಾರವನ್ನು ಮುಂದೂಡಬೇಕೆಂದೂ ಕೇಳಿದರು. ಇದರಿಂದಾಗಿ ಇದರ ಮೇಲೆ ಯಾವ ಚರ್ಚೆಯೂ ಆಗಲಿಲ್ಲ. ಮತ್ತು ಇಲ್ಲಿ ಕೆಲವು ಮಾನ್ಯ ಸದಸ್ಯರು ನಾನೂ ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ವಿ.ಪಿ. ನಾಯಕ ಅವರೂ ಕೂಡಿಕೊಂಡು ಒಟ್ಟಿಗೆ ಕಾರಿನಲ್ಲಿ ಹೋದೆವು ಎನ್ನುವುದರ ಬಗ್ಗೆ ಕೇಳಿದರು. ನಾನು ಶ್ರೀಮಾನ್ ನಾಯಕರನವರೂ ಒಟ್ಟಿಗೆ ಕೂಡಿ ಏನೋ ಹೋದೆವು. ಆದರೆ ಇದರ ವಿಚಾರ ಬಿಟ್ಟು ಅವರಲ್ಲಿ ಇನ್ನು ಬೇರೆ ನಮ್ಮ ರಾಜ್ಯಗಳ ಹಾಗೂ ಅವರ ರಾಜ್ಯಗಳ ಬಗ್ಗೆ ಪ್ರಸ್ತಾಪ ಮಾಡಿದೆವು. ಇದರ ಬಗ್ಗೆ ಅವರೂ ಪ್ರಸ್ತಾಪ ಮಾಡಲಿಲ್ಲ ನಾನೂ ಕೂಡ ಪ್ರಸ್ತಾಪ ಮಾಡಲಿಲ್ಲ. ಅಲ್ಲದೆ ನಾನು ಇಂದು ಇಲ್ಲಿಗೆ ಬರಬೇಕೆಂದಿದ್ದೆ. ಆದರೆ ನಿನ್ನೆಯೇ ಬರುವ ಮನಸ್ಸಾಯಿತು. ಏಕೆಂದರೆ ಹುಬ್ಬಳ್ಳಿಯಲ್ಲಿ ಆದ ಗಲಭೆಗಳ ವಿಚಾರ ತಿಳಿಯಿತು. ಮತ್ತು ನಮ್ಮ ಹೋಂ ಸೆಕ್ರಟರಿಯವರು ಅಲ್ಲಿಗೆ ಹೋದ ಮೇಲೆ ಅಲ್ಲಿ ನಡೆದ ಗಲಭೆಗಳ ಬಗ್ಗೆ ಬೇಕಾದಷ್ಟು ವಿಚಾರಗಳನ್ನು ಚರ್ಚೆ ಮಾಡುವುದು ಅವಶ್ಯ ಎಂದು ನನಗೂ ತಿಳಿದು ಬಂತು. ಇದರಿಂದ ನಿನ್ನೆಯೇ ಪ್ರವಾಸದಿಂದ ಹಿಂದಿರುಗಿ ಬಂದಾಗ ಅವರು ನನಗೆ ಎಲ್ಲ ವಿಚಾರಗಳನ್ನು ತಕ್ಷಣ ತಿಳಿಸಿದರು. ಮತ್ತು ನಾನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೊಡನೆ ಇದ್ದಾಗ ಮೊನ್ನೆ ಬೊಂಬಾಯಿಯಲ್ಲಿ ನಡೆದ ಗಲಭೆಗಳ ಬಗ್ಗೆ ಅಲ್ಲಿ ನೊಂದವರಿಗೆ ಪರಿಹಾರಗಳನ್ನು ಕೊಡಬೇಕು ಎಂದು ಅವರೊಡನೆ ಪ್ರಸ್ತಾಪ ಮಾಡಿ ಬಂದೆ, ಅದರೆ ಮಹಾಜನ್ ವರದಿ ಬಗ್ಗೆ ಯಾವುದೂ ಸ್ಪಷ್ಟವಾಗಿ ಮಾತಾಡಿಲ್ಲ ಎನ್ನುವುದು ಈಗಾಗಲೇ ತಮಗೆಲ್ಲಾ ಗೊತ್ತಾಗಿದೆ ಮತ್ತು ಮಹಾಜನ್ ಅಯೋಗದ ವರದಿಯನ್ನು ಪೂರ್ತಿಯಾಗಿ ಒಪ್ಪುವುದೆಂದು ನಮ್ಮ ಸ್ಪಷ್ಟ ನಿಲುವು ಎಂದು ಆಗಲೇ ಹೇಳಿದ್ದೇನೆ. ಮಹಾರಾಷ್ಟ್ರದವರು ಕಮಿಷನ್ ವರದಿ ಒಪ್ಪುವುದಿಲ್ಲ ಎನ್ನುವುದು ಅವರ ವಾದ. ಮಹಾಜನ್ ಕಮೀಷನ್ ವರದಿ ಪೂರ್ತಿ ಒಪ್ಪದೇ ಇದ್ದರೆ ಸರಿಯಲ್ಲ. ಇದನ್ನು ಪೂರ್ತಿ ಒಪ್ಪಬೇಕು ಎಂದು ನಮ್ಮ ವಾದ ಇದೆ ಮತ್ತು ಇದರ ಬಗ್ಗೆ ಇಲ್ಲಿ ಕೂಡ ನಿರ್ಣಯಗಳನ್ನು ಮಾಡಲಾಗಿದೆ. ಇದರ ಬಗ್ಗೆ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಏಕೆ ಮಾಡಬೇಕೋ ನನಗೊಂದೂ ಗೊತ್ತಾಗುತ್ತಿಲ್ಲ. ಬಹುಶ: ಏಪ್ರಿಲ್ ನಾಲ್ಕನೇ ತಾರೀಖು ವರ್ಕಿಂಗು ಕಮಿಟಿ ಸಭೆ ಸೇರುವಾಗ ಇದು ಚರ್ಚೆಗೆ ಬರಬಹುದು. ಅದರೆ ಖಚಿತವಾಗಿ ಯಾವಾಗ ಬರುತ್ತದೆ ಎಂದೂ ಅವರು ಅಲ್ಲಿ ಹೇಳಲಿಲ್ಲ. ಇದನ್ನು ಇಂಡೆಫಿನೆಟ್ ಆಗಿ ಪೋಸ್‌ಪೋನ್ ಮಾಡಿದರು ಎನ್ನುವುದು ನಾವು ಒಪ್ಪತಕ್ಕ ಮಾತಲ್ಲ.

## 11. ಹುಬ್ಬಳ್ಳಿಯಲ್ಲಿ ಆದ ಕೋಮು ಗಲಭೆ ಕುರಿತ ಚರ್ಚೆಗೆ ನೀಡಿದ ಸ್ಪಷ್ಟೀಕರಣ ದಿನಾಂಕ 10-03-1969.

ಶ್ರೀ ವೀರೇಂದ್ರ ಪಾಟೀಲ್:-

ಅಧ್ಯಕ್ಷರೇ, ಈ ಗಲಭೆಯಾದಾಗ ನಾನು ದೆಹಲಿಯಲ್ಲಿದ್ದೆ. ಈ ವರ್ತಮಾನ ಬಂದ ತಕ್ಷಣ ನಾನು ಹೋಂ ಸೆಕ್ರೆಟರಿಯವರಿಗೆ ಕಾಂಟ್ಯಾಕ್ಟ್ ಮಾಡಿ ಅವರು ಮತ್ತು ಐ.ಜಿ.ಪಿ.ಯವರು ತುರ್ತಾಗಿ ಹುಬ್ಬಳ್ಳಿಗೆ ಹೋಗಬೇಕೆಂದು ಹೇಳಿದೆ. ಆ ಪ್ರಕಾರ ಅವರು ಹುಬ್ಬಳ್ಳಿಗೆ ಹೋಗಿದ್ದಾರೆ. ಇನ್ನೂ ಹುಬ್ಬಳ್ಳಿಯಲ್ಲಿದ್ದಾರೆ. ನಿನ್ನೆ ನಾನು ಬಂದಮೇಲೆ ಅವರಿಗೆ ಕಾಂಟ್ಯಾಕ್ಟ್ ಮಾಡಿದೆ. ಟೆಲಿಫೋನ್ ಮುಖಾಂತರ ಮತ್ತು ವೈರಲೆಸ್ ಮುಖಾಂತರ ಎಲ್ಲಾ ಸುದ್ದಿ ವಿವರಗಳನ್ನು ತರಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದುಕೊಂಡು ಒಬ್ಬ ಸ್ಪೆಷಲ್ ಮೆಸೆಂಜರ್‌ನಿಂದ ಈ ಘಟನೆ ಬಗ್ಗೆ ಏನೇನಾಗಿದೆಯೆಂಬುದನ್ನು ನನಗೆ ತಿಳಿಸಬೇಕೆಂದು ಹೇಳಿದೆ. ಆ ರೀತಿ ಒಬ್ಬ ಸ್ಪೆಷಲ್ ಮೆಸೆಂಜರ್ ಅಲ್ಲಿಂದ ವರದಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅಲ್ಲಿಂದ ಬಂದಂಥ ವರದಿಯ ಆಧಾರದ ಮೇಲೆ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇನ್ನೂ ಹೆಚ್ಚು [illegible]ಗಳು ಬೇಕಾಗಿದ್ದರೆ ಆ ನಮ್ಮ ಹೋಂ ಸೆಕ್ರೆಟರಿಗಳು ಮತ್ತು ಐ.ಜಿ.ಪಿ. ಅವರು ಅ[illegible]ಯೇ ಇದ್ದಾರೆ ಅವರು ಬಂದಮೇಲೆ ಅವರಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಅದ[illegible]ಇಲ್ಲಿ ಇಡುವುದಕ್ಕೆ ನಾನು ತಯಾರು ಇದ್ದೇವೆ.

ಆದರೆ, ಈ ವಿಚಾರದಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಬೇಕಾಗಿದೆ. ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ದುರ್ದೈವದಿಂದ ಈ ತರದ ಜಾತೀಯ ಗಲಭೆಗಳು ಆಗುವಂತಹ ಕೆಲವು ಪೈಂಟ್ಸ್ ಇವೆ. ಇವು ವಲ್ನರೇಬಲ್ ಪೈಂಟ್ಸ್. ಅಲ್ಲೆಲ್ಲಾ ನಾವು ಸಾಕಷ್ಟು ಜಾಗ್ರತೆ ವಹಿಸುತ್ತಿದ್ದೇವೆ. ಹುಬ್ಬಳ್ಳಿಯಲ್ಲಿ ಏನೋ ಒಂದು ದುರ್ದೈವದಿಂದ ಘಟನೆಯಾಗಿದೆ. ಅದರ ಬಗ್ಗೆ ಕಡಿಮೆ ಇಲ್ಲಿ ಚರ್ಚೆ ಮಾಡಿ, ಹೊರಗಡೆ ಪಬ್ಲಿಸಿಟಿ ಕಡಿಮೆಯಾಗುವಂತೆ ಮಾಡುವುದು ಒಳಿತು ಎಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಲ್ಲಿ ನನಗೆ ಎಷ್ಟು ವಿವರ ಬಂದಿದೆ, ಆ ಆಧಾರದ ಮೇಲೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅಲ್ಲಿಂದ ಒಂದು ಗಲಭೆ ಮಾಡುವುದರಲ್ಲಿ ಯಾವುದಾದರೂ ಪಕ್ಷಗಳ ಕೈವಾಡ ಇದೆಯೇ ಮತ್ತು ಪೂರ್ವ ಭಾವಿಯಾಗಿ ಏನಾದರೂ ಸಿದ್ಧತೆಗಳು ಆಗಿದ್ದವೋ ಮತ್ತು ಆ ತರಹ ವರ್ತಮಾನ ಸರ್ಕಾರಕ್ಕೆ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಏಕೆ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಹಿಂದೆ ಯಾವ ಪಕ್ಷಗಳು ಇದ್ದವು ಮತ್ತು ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಮಾಡಿದ್ದರೋ ಎನ್ನುವುದನ್ನು ಈಗ ಹೇಳುವುದು ಕಷ್ಟ. ಇದಕ್ಕಾಗಿ ನಮ್ಮ ಅಧಿಕಾರಿಗಳು ಇನ್ನೂ ಅಲ್ಲಿಯೇ ಇದ್ದಾರೆ. ಅವರು ಬಂದ ಮೇಲೆ, ಅವರ ಜೊತೆಯಲ್ಲಿ ಚರ್ಚೆ ಮಾಡಿದ ಮೇಲೆ ನಮಗೆ ಹೆಚ್ಚಿನ ವಿವರ ಗೊತ್ತಾಗಬಹುದು. ಆಗ ಈ ಮಾನ್ಯ ಸಭೆಯ ಮುಂದೆ ಅದನ್ನು ಇಡಬೇಕಾದ ಅವಶ್ಯಕತೆ ಇದ್ದರೆ, ಅದನ್ನು ಇಡುವುದಕ್ಕೆ ನಾನು ಹಿಂದು ಮುಂದು ನೋಡುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಪೋಲೀಸಿನವರಿಗೆ ಈ ರೀತಿ ಪೂರ್ವಭಾವಿಯಾಗಿ ಸಿದ್ಧತೆಯಾಗಿದೆ ಎನ್ನುವುದು ಗೊತ್ತಿಲ್ಲ. ಏಕೆಂದರೆ ಈಗ ಎಲ್ಲಿ

ಘಟನೆಗಳು ನಡೆದಿವೆ, ಅಲ್ಲಿ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ, ಪ್ರತಿವರ್ಷ ಅದೇ ಸ್ಥಳದಲ್ಲಿ ಗಲಾಟೆಯಾಗುತ್ತಿದೆ, ಆ ಓಣಿಯಲ್ಲಿ ಒಂದು ಕಡೆ ಬಾಜುವಿನಲ್ಲಿ ಒಂದು ಜಾತಿ ಜನ, ಇನ್ನೊಂದು ಬಾಜುವಿನಲ್ಲಿ ಇನ್ನೊಂದು ಜಾತಿ ಜನ ಇದ್ದಾರೆ. ಅದಕ್ಕಾಗಿ ಮೊದಲೇ ಏನಾದರೂ ತಯಾರಿ ಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ನಾನು ಹೇಳುವುದು ಮೆರವಣಿಗೆ ಹೊರಟಿತ್ತು, ಅದನ್ನು ನಿಲ್ಲಿಸಿದ ಕೂಡಲೇ ಜಗಳ ಪ್ರಾರಂಭವಾಗಿ ಅವರ ಮೇಲೆ ಇವರು ಕಲ್ಲು ತೂರಿದರು. ಆ ರೀತಿ ಒಂದು ಗಲಾಟೆಯಾಯಿತು. ಆ ರೀತಿ ಗಲಾಟೆಯಾದಾಗ ಅದರ ಲಾಭ ಪಡೆದುಕೊಳ್ಳುವುದಕ್ಕೆ ಕೆಲವು ಸಮಾಜ ದ್ರೋಹಿಗಳು ತಯಾರಾಗಿರುತ್ತಾರೆ. ಎಲ್ಲಿ ಗಲಾಟೆಯಾಯಿತು, ಅಲ್ಲಿ ತಮ್ಮ ಕಾರ್ಯಕ್ರಮವನ್ನು ಪ್ರಾರಂಭಮಾಡುತ್ತಾರೆ. ಆ ರೀತಿ ಒಂದು ಸಮಾಜದ್ರೋಹಿಗಳ ಕೈವಾಡದಿಂದ ಇಂಥ ದುರ್ದೈವಕರವಾದ ಘಟನೆಗಳು ನಡೆಯುತ್ತಿವೆ. ಈಗಾಗಲೇ ಪೋಲೀಸರು 50 ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಸುಮಾರು 125 ಜನಗಳನ್ನು, ಸಮಾಜಘಾತುಕ ಕಾರ್ಯಗಳಲ್ಲಿ ತೊಡಗಿದ್ದವರನ್ನು ಅರೆಸ್ಟ್ ಮಾಡಿದ್ದಾರೆ. ಅವರೊಂದಿಗೆ ಅಲ್ಲಿನ ಪೀಸ್ ಕಮಿಟಿಯವರು ಪೋಲೀಸರಿಗೆ ಸಾಕಷ್ಟು ಸಹಕಾರ ನೀಡುತ್ತಿದ್ದಾರೆ. ಇದಾದ ಮೇಲೆ ಮನೆಯನ್ನು ಸುಡುವಂತಹ ಒಂದು ಸಣ್ಣ ಘಟನೆಯಾದ ಮೇಲೆ ಮತ್ತೆ ಏನೂ ಆಗಿಲ್ಲ. ಅವರಿಗೆ ಪರಿಹಾರ ಕೊಡುವುದರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಎಷ್ಟೋ ಸಾವಿರ ಹಾನಿಯಾಗಿದೆ ಎಂದು ಹೇಳಿದ್ದಾರೆ. ಅದನ್ನು ನನ್ನ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇನೆ. ನಮ್ಮ ಅಧಿಕಾರಿಗಳು ಅಲ್ಲಿಂದ ಬಂದ ಮೇಲೆ ಎಷ್ಟು ಮಟ್ಟಿಗೆ ಪರಿಹಾರ ಸಾಧ್ಯವಾಗುತ್ತದೆಂಬುದನ್ನು ವಿಚಾರ ಮಾಡಿ, ಅಷ್ಟು ಮಟ್ಟಿಗೆ ಪರಿಹಾರವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಮೂರನೆಯದಾಗಿ, ನ್ಯಾಯಾಂಗ ವಿಚಾರಣೆ ಆಗಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡುವುದು ಅವಶ್ಯವಿಲ್ಲವೆಂದು ಕಾಣುತ್ತದೆ. ಗಲಾಟೆಗಳು ಆಗತಕ್ಕದ್ದು ಲೂಟಿ ಆಗತಕ್ಕದ್ದು ಆರ್ಸನ್ ಮಾಡುವುದು ಇಂಥದ್ದಕ್ಕೆಲ್ಲ ಈಗ ಕೇಸುಗಳನ್ನು ರಿಜಿಸ್ಟರ್ ಮಾಡಿದ್ದಾರೆ ಮುಂದೆ ಇವು ಇನ್‌ವೆಸ್ಟಿಗೇಷನ್ ಆದ ಮೇಲೆ ಚಾರ್ಜ್‌ಷೀಟು ವಗೈರೆ ಮಾಡಿದ ನಂತರ ಅದು ಕೋರ್ಟಿಗೆ ಹೋಗುತ್ತದೆ. ಕೋರ್ಟಿನಲ್ಲಿ ಪೂರ್ತಿ ಎಲ್ಲಾ ವಿಚಾರಗಳೂ ಬರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹುಬ್ಬಳ್ಳಿಯಲ್ಲಿ ಪ್ಯೂನಿಟೀವ್ ಟ್ಯಾಕ್ಸ್ ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಪ್ಯೂನಿಟಿವ್ ಟ್ಯಾಕ್ಸ್ ಹಾಕಬೇಕಾದರೆ ಕೆಲವೊಂದು ಕಾನೂನುಗಳು ಇರುತ್ತವೆ. ಎಲ್ಲೋ ಗಲಭೆಗಳು ಆದರೆ ಎಲ್ಲಾ ಕಡೆಗಳಲ್ಲಿಯೂ ಪ್ಯೂನಿಟೀವ್ ಟ್ಯಾಕ್ಸ್ ಹಾಕುವುದಕ್ಕಾಗುವುದಿಲ್ಲ ಕೆಲವು ಜನ ಮೊಹಲ್ಲಾದಲ್ಲಿ ಆ ರೀತಿ ಗಲಭೆಗಳನ್ನು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಬಹುಶ: ಇದರ ಬಗ್ಗೆ ವಿಚಾರ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಇವೊತ್ತಿನ ದಿವಸ ಇಲ್ಲಿ ಪ್ಯೂನಿಟೀವ್ ಟ್ಯಾಕ್ಸ್ ಹಾಕುವ ಪರಿಸ್ಥಿತಿ ಇಲ್ಲ. ಕೊನೆಯದಾಗಿ ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿಯೂ ನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ, ಈ ತರಹ ಗಲಭೆಗಳು ಒಂದೊಂದು ಸಲ ಬೆಂಕಿ ಯಾವ ರೀತಿ ಹರಡುತ್ತದೆಯೋ ಆ ರೀತಿ ಹರಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಇಂಥಾ ಗಲಭೆಗಳು ವಿಸ್ತರಿಸದಿರಲು ಎಲ್ಲಾ ರೀತಿಯ ಕ್ರಮವನ್ನು ನಾವು ಮಾಡುತ್ತೇವೆ. ಈ ಮನೆಯ ಎಲ್ಲಾ ಸದಸ್ಯರೂ ಇದಕ್ಕೆ ಸಹಕಾರವನ್ನು ನೀಡಬೇಕೆಂದು ನಾನು ಕಳಕಳಿಯಿಂದ ಕೇಳುತ್ತೇನೆ.

## 12. ಭ್ರಷ್ಟಾಚಾರ ಕುರಿತು ಹೇಳಿಕೆ ದಿನಾಂಕ 13-03-1969

ಶ್ರೀ ವೀರೇಂದ್ರ ಪಾಟೀಲ್:-

ನಾನು ಇಲ್ಲಿ ಹೇಳುತ್ತಿರುವುದು ಕರ್‌ಪ್ಷನ್ ವಿಚಾರ. ಇದು ನಮ್ಮ ರಾಜ್ಯದ ಸಮಸ್ಯೆ ಮಾತ್ರವಾಗಿಲ್ಲ. ಇದು ದೇಶದ ಸಮಸ್ಯೆ. ಯಾವುದೇ ಒಂದು ರಾಜ್ಯದ ಸಮಸ್ಯೆಯಲ್ಲ. ಇದಕ್ಕಾಗಿ ಈ ಸಮಸ್ಯೆಯನ್ನು ಯಾವ ರೀತಿ ಎದುರಿಸಬೇಕು, ಯಾವ ರೀತಿಯಿಂದ ಕಡಿಮೆ ಮಾಡಬೇಕು ಎನ್ನುವುದರಲ್ಲಿ ಒಂದು ಪ್ರಾಂತವಲ್ಲ ಎಲ್ಲರೂ ಸಹಕಾರ ನೀಡಬೇಕಾದುದು ಅವಶ್ಯಕ. ಆ ರೀತಿ ಸಹಕಾರ ನೀಡಿದರೆ ಇದನ್ನು ಎಷ್ಟು ಪ್ರಮಾಣದಲ್ಲಿ ಕುಂಠಿತಗೊಳಿಸಬಹುದೋ ಅಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು ಎಂದು ನಾನು ನಂಬಿದ್ದೇನೆ.

ಇನ್ನು ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಜನ ಬೇಕಾದಷ್ಟು ಇದ್ದಾರೆ. ಬಹುಶ: ಇದರ ಲೆಕ್ಕ ಹೇಳಬೇಕಾಗಿದ್ದರೆ, they are a liability on the administration ಎಂದು ನನಗನ್ನಿಸುತ್ತದೆ. ಇದಕ್ಕಾಗಿ ಏನಾದರೂ ಮಾಡಬೇಕು ಎಂದರೆ, ಶ್ರೀಮಾನ್ ದೇವರಾಜ್ ಅರಸ್‌ರವರು ಇಲ್ಲಿ ಹೇಳಿದ ಹಾಗೆ ಇದರಲ್ಲಿ ಸ್ವಲ್ಪ ನಿಜಾಂಶ ಇದೆ. ಇವರ ವ್ಯವಸ್ಥೆಗಾಗಿ ಅಪ್ರಾಕ್ಸಿಮೆಂಟ್ ಆಗಿ ಇವರೆಲ್ಲರಿಗೂ ಇನ್‌ಕ್ರಿಮೆಂಟು ಕೊಡಬೇಕಾಗಿದ್ದರೆ ಬಹುಶ: ಎಷ್ಟೋ ಖರ್ಚಾಗುತ್ತದೆ ಮತ್ತು ಎಷ್ಟು ಕಡೆಗಳಲ್ಲಿ ಕಡಿಮೆ ಮಾಡಬೇಕಾಗುತ್ತದೆ ಎನ್ನುವುದು ಗೊತ್ತಿಲ್ಲ. ಹಾಗೆ ಈ ಮಟ್ಟಕ್ಕೆ ತರಬೇಕಾದರೆ ಇದನ್ನು ಇನ್ನೂ ಪರಿಶೀಲನೆ ಮಾಡಬೇಕಾದ ವಿಷಯವಾಗುತ್ತದೆ. ಅದರೆ ಸರಕಾರದ ಹತ್ತಿರ ಏನು ಅಸ್ತ್ರ ಇದೆ. ಅದನ್ನು ನಾವು ಉಪಯೋಗ ಮಾಡಬೇಕಾದರೆ ಇದಕ್ಕೆ ತಕ್ಕ ಪ್ರಯತ್ನ ಮಾಡಬೇಕಾಗುತ್ತದೆ. ಇದರಲ್ಲಿ ಯಾವ ಅಧಿಕಾರಿಗಳು 50 ವರ್ಷ ವಯಸ್ಸಿನ ವಯೋಮಿತಿಯನ್ನು ದಾಟಿರುತ್ತಾರೋ ಅಥವಾ ಇಪ್ಪತ್ತೈದು ವರ್ಷಗಳಷ್ಟು ಕ್ವಾಲಿಫೈಯಿಂದ ಸರ್ವಿಸು ಮಾಡಿರುತ್ತಾರೋ ಅಂತಹ ಅಧಿಕಾರಿಗಳನ್ನು ಕಂಪಲ್‌ಸರಿಯಾಗಿ ರಿಟೈರು ಮಾಡಬಹುದು ಎಂದು ಒಂದು ನಿಯಮ ಮಾಡಲಾಗಿದೆ.

ಯಾರಿಗೆ 50 ವರ್ಷ ಆಗಿರುತ್ತದೆ, ಯಾರಿಗೆ 25 ವರ್ಷ ಕ್ವಾಲಿಫೈಯಿಂಗ್ ಸರ್ವಿಸ್ ಆಗಿರುತ್ತದೆ ಅವರು, ಜನರಿಗೆ ಬೇಡವಾದರೆ ಕಂಪಲ್ಸರಿಯಾಗಿ ರಿಟೈರ್ ಮಾಡುತ್ತೇವೆ. ಅಂತಹ ಒಂದು ಅಧಿಕಾರ ಇದೆ. ಅದಕ್ಕಾಗಿ ನಾವು ಏನು ಮಾಡುತ್ತಿದ್ದೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಸ್ಕ್ರೀನಿಂಗ್ ಕಮಿಟಿ ಮಾಡಿ ಸ್ಕ್ರೀನಿಂಗ್ ಮಾಡಿಸುತ್ತಿದ್ದೇವೆ. ಆ ಸ್ಕ್ರೀನಿಂಗ್ ಕಮಿಟಿಯಲ್ಲಿ ಸಂಬಂಧಪಟ್ಟಂಥ ಮೇಲ್ತರಗತಿಯ 3-4 ಅಧಿಕಾರಿಗಳು ಸೇರಿಕೊಂಡು ಸ್ಕ್ರೀನ್ ಮಾಡಿ ಯಾರು ಯಾರು ಇರುವುದಕ್ಕೆ ಲಾಯಕ್ಕಿಲ್ಲ, ಯಾರು ನಿವೃತ್ತಿ ಆಗಬೇಕೋ ಅಂತಹವರನ್ನು ನಿವೃತ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ದಿಸೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ. ಈಗಾಗಲೇ ಕೆಲವು ಜನರನ್ನು ನಿವೃತ್ತಿ ಮಾಡಿದ್ದೇವೆ. ಕೆಲವರಿಗೆ ನೋಟೀಸ್ ಕೊಟ್ಟಿದ್ದೇವೆ. ಇದನ್ನು ಬೆಳೆಸಿಕೊಂಡು ಹೋಗಬೇಕಾದುದು ಅತ್ಯಾವಶ್ಯಕ ಎಂದು ಕಾಣುತ್ತದೆ. ಈ ರೀತಿಯಿಂದ ಸ್ವಲ್ಪಮಟ್ಟಿಗೆ ನಾನು ಪ್ರಯತ್ನ ಮಾಡಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ.

ಇನ್ನು ಅನೇಕ ಕೆಲಸಗಳು ಅನೇಕ ಇಲಾಖೆಗಳಲ್ಲಿ ಬಹಳ ದಿವಸದಿಂದ ಇವೆ. ಅದಕ್ಕಾಗಿ ನಾವು ಏನು ಮಾಡುತ್ತೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ. 100 ದಿವಸಗಳಿಂದ ಇದ್ದಂಥ ಎಲ್ಲಾ ಪೆಂಡಿಂಗ್ ಕೇಸಸ್ ನಿಕಾಲೆ ಮಾಡಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಒಂದೆರಡು ಕೇಸಸ್ ರೆವಿನ್ಯೂ ಸೆಕ್ರೆಟರಿಯೇಟ್‌ನಲ್ಲಿ ಪ್ರಾರಂಭವಾಯಿತು. ಅದನ್ನು ಬೆಳೆಸಿಕೊಂಡು

ಎರಡನೇ ಡಿಪಾರ್ಟ್‌ಮೆಂಟಿಗೆ ಹೋಗಬೇಕು ಎನ್ನುವುದನ್ನು ನಾವು ಮಾಡಿಸುತ್ತಿದ್ದೇವೆ. ಅದೇ ರೀತಿ ಪ್ರತಿಯೊಂದು ಸೆಕ್ರೆಟೇರಿಯೇಟ್‌ನಲ್ಲೂ ಇನ್‌ಸ್ಪೆಕ್ಟ ಮಾಡಬೇಕು ಎನ್ನುವ ಕಾರ್ಯಕ್ರಮ ಇಟ್ಟು ಕೊಂಡಿದ್ದೇವೆ.

ಈಗಾಗಲೇ ಸೆಕ್ರೆಟೇರಿಯೇಟ್‌ನ ಡಿಪಾರ್ಟ್‌ಮೆಂಟ್‌ಗಳ ಇನ್‌ಸ್ಪೆಕ್ಷನ್ ಆಗಿದೆ ಅದನ್ನು ಬೆಳೆಸಿಕೊಂಡು ಹೋಗುತ್ತಿದ್ದೇವೆ. ಈ ರೀತಿ ಅನೇಕ ವಿಚಾರಗಳನ್ನು ಇಟ್ಟಿದ್ದೇವೆ. ಇದನ್ನು ಈವೊತ್ತೇ ಈ ಮಾನ್ಯ ಸಭೆಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ನನ್ನ ಶಕ್ತಿಗೆ ಅನುಸಾರವಾಗಿ ನನ್ನ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ತರಹ ಹೊಸ ಚೈತನ್ಯ ಮತ್ತು ಲವಲವಿಕೆ ಮತ್ತು ಉತ್ಸಾಹ ಬರುವಂತೆ ಮತ್ತು ಇದು ಜನರಲ್ಲಿಯೂ ಕೂಡ ಮನವರಿಕೆಯಾಗುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತಿದ್ದೇವೆ. ನಾವು ಮಾಡಿದಂಥ ಪ್ರಯತ್ನಕ್ಕೆ ಒಂದೇ ದಿವಸ ಫಲಬರುವ ಹಾಗಿಲ್ಲ. ಅದಕ್ಕೆ ಸ್ವಲ್ಪ ದಿವಸ ತಡೆಯಬೇಕಾಗುತ್ತದೆ. ಮೊದಲಿನಂತೆ ಇಲ್ಲ, ಕೆಲಸ ನಡೆಯುತ್ತಾ ಇದೆ ಎನ್ನುವ ಭಾವನೆ ಜನರಲ್ಲಿ ಬರುವಂತೆ ಆಗುತ್ತಾ ಇದೆ, ಅದನ್ನು ಬೆಳೆಸಿಕೊಂಡು ಹೋಗುವ ಪ್ರಯತ್ನ ನಾವು ಮಾಡುತ್ತಾ ಇದ್ದೇವೆ.

ಈ ಸಂಬಂಧದಲ್ಲಿ ಇನ್ನೊಂದು ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಕಟ್‌ಮೋಷನ್ ಕಳುಹಿಸಿದ್ದಾರೆ. ಪ್ರಿವಿಪರ್ಸ್ ಬಗ್ಗೆ ರಾಜಮಹಾರಾಜರುಗಳಿಗೆ ಹಣ ಕೊಡುತ್ತಾ ಇದ್ದೇವೆ. ಅದನ್ನು ಏತಕ್ಕೆ ನಿಲ್ಲಿಸಬಾರದು ಎಂದು. ಅದು ನಮಗೆ ಸಂಬಂಧಪಟ್ಟದ್ದು ಅಲ್ಲ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆ ಅಗ್ರಿಮೆಂಟ್ ಕೇಂದ್ರ ಸರ್ಕಾರಕ್ಕೂ ಮಹಾರಾಜರಿಗೂ ಆದದ್ದು, ಅದರಂತೆ ನಡೆಯುತ್ತಿದೆ. ಅಲ್ಲೂ ಕೂಡ ಇದರ ಪರಿಶೀಲನೆ ನಡೆಯುತ್ತಾ ಇದೆ ಎಂದು ಕೇಳಿರುತ್ತೇವೆ. ಅವರು ಏನು ನಿರ್ಣಯ ಮಾಡುತ್ತಾರೋ ಅದರಂತೆ ನಡೆದುಕೊಳ್ಳಬೇಕಾಗುತ್ತದೆ ಆದರೆ ಅದು ನಮಗೆ ಸಂಬಂಧಪಟ್ಟದ್ದಲ್ಲ.

ಇನ್ನು ಡೆವಲಪ್‌ಮೆಂಟ್ ಕಮೀಷನರ್ ಇರಲೇಬಾರದು ಎಂದು ಒಂದು ಕಟ್‌ಮೋಷನ್ ಬಂದಿದೆ. ಅದು ಇಲ್ಲದೇ ಹೋದರೆ ನಮ್ಮ ಪ್ರಗತಿ ಸಾಧಿಸುವುದಕ್ಕಾಗುವುದಿಲ್ಲ. ಎಲ್ಲಾ ಡಿಪಾರ್ಟ್‌ಮೆಂಟ್‌ನ ಆಕ್ಟಿವಿಟೀಸನ್ನು ಕೋ ಆರ್ಡಿನೇಟ್ ಮಾಡುವುದಕ್ಕೆ ಡೆವಲಪ್‌ಮೆಂಟ್ ಕಮೀಷನರ್ ಇರಬೇಕು. ಮೈಸೂರು ಪ್ರದೇಶದಲ್ಲಿ ಒಂದರಲ್ಲೇ ಅಲ್ಲ ಇನ್ನೂ ಅನೇಕ ರಾಜ್ಯಗಳಲ್ಲೂ ಡೆವಲಪ್‌ಮೆಂಟ್ ಕಮೀಷನರು ಇದ್ದಾರೆ. ಪೇ ಕಮೀಷನ್ನಿನವರೂ ಕೂಡ ಡೆವಲಪ್‌ಮೆಂಟ್ ಕಮೀಷನರ್ ಇರಬೇಕು ಎನ್ನುವ ಮಾತು ಹೇಳಿದ್ದಾರೆ ಮತ್ತು ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ.

ಇನ್ನು ಡಿವಿಷನಲ್ ಕಮೀಷನರ್ ಇರಬೇಕೋ, ಬೇಡವೋ ಎನ್ನುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಈಗಾಗಲೇ ವ್ಯಕ್ತ ಮಾಡಿದ್ದಾರೆ. ಇದಕ್ಕೆ ಮೊದಲೂ ವ್ಯಕ್ತ ಮಾಡಿದ್ದರು. ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು, ಪೇ ಕಮೀಷನ್ನಿನವರೂ ತಮ್ಮ ಅಭಿಪ್ರಾಯಗಳನ್ನು ಏನು ಹೇಳಿದ್ದಾರೆ, ಅದನ್ನೂ ಕೂಡ ವಿಚಾರ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಕೆಲವರು ಹೇಳಿದರು ಯಾರು ನಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೋ ಅವರಿಗೆ, ಸೆಕ್ರೆಟೇರಿಯೇಟ್ ಸ್ಟಾಫ್‌ಗೆ ಸ್ವಲ್ಪಮಟ್ಟಿಗೆ ಓರಿಯೆಂಟೇಷನ್ ಟ್ರೈನಿಂಗ್ ಕೊಡಬೇಕು ಎಂದು. ಕೇಂದ್ರ ಸರ್ಕಾರದಿಂದ ಅಧಿಕಾರಿಗಳನ್ನು ಕರೆಸಿಕೊಂಡು ಆ ಟ್ರೈನಿಂಗ್ ಪ್ರೋಗ್ರಾಂ ಮಾಡಿದ್ದೇವೆ. ಅದನ್ನು ಬೆಳೆಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ಹೆಚ್ಚು ಹೆಚ್ಚು ಬೆಳೆಸಿಕೊಂಡು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿ ಸಾಮಾನ್ಯ ಆಡಳಿತದಲ್ಲಿ ಮತ್ತು ಪೋಲೀಸ್ ಇಲಾಖೆಯಲ್ಲಿ ಮತ್ತು ಹೋಮ್ ಇಲಾಖೆಯಲ್ಲಿ ಏನು ಸಾಧ್ಯ ಇದೆಯೋ ಅದನ್ನೆಲ್ಲಾ ಸ್ಟ್ರೀಮ್ ಲೈನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಒಂದು ವಿಚಾರ ಹೇಳಬೇಕಾಗುತ್ತದೆ ನಮ್ಮ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗಬೇಕಾದರೆ ಪರಸ್ಪರ ತಿಳುವಳಿಕೆ, ಪರಸ್ಪರ ಗೌರವಿಸುವುದು ಮತ್ತು ಒಬ್ಬರಿಗೊಬ್ಬರು ಸಂಯಮದಿಂದ ನಡೆದುಕೊಂಡರೆ ಸಾಧ್ಯ ಇದೆ, ಇಲ್ಲದೆ ಹೋದರೆ ಸಾಧ್ಯವಿಲ್ಲ ಎನ್ನುವ ಮಾತನ್ನು ಕಳಕಳಿಯಿಂದ ಹೇಳಬೇಕಾಗುತ್ತದೆ. ನನ್ನ ಬಗ್ಗೆ ವಿರೋಧ ಪಕ್ಷದ ನಾಯಕರು ಒಂದು ರೀತಿ ಪ್ರೇಮದಿಂದ, ನನ್ನ ಗೌರವವನ್ನು ಕಾಪಾಡಿಕೊಂಡು ಹೋಗುವುದು ಮತ್ತು ಅದೇ ರೀತಿ ನಾನು ವಿರೋಧ ಪಕ್ಷದ ನಾಯಕರಲ್ಲಿ ಪ್ರೇಮದಿಂದ ಅವರ ಗೌರವವನ್ನು ಕಾಪಾಡಿಕೊಂಡು ಹೋಗುವುದು ಈ ರೀತಿ ಆದರೆ ಈ ಸಭೆಯ ಕಾರ್ಯಕಾಲಾಪಗಳು ಚೆನ್ನಾಗಿ ನಡೆಯುತ್ತವೆ. ಈ ರೀತಿಯಿಂದ ಕೆಲಸ ಮಾಡಲು ಎಲ್ಲಾ ಮಾನ್ಯ ಸದಸ್ಯರು ಈ ಸಭೆಗೆ ಬಂದಿದ್ದಾರೆ. ಹಾಗಿರುವಾಗ ನಮ್ಮ ಕ್ಷೇತ್ರದ ಹಿತವಲ್ಲದೆ ಇಡೀ ರಾಜ್ಯದ ಹಿತ ಆಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಹಾಗೆ ಅಗದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಇದನ್ನು ದು:ಖದಿಂದ ಹೇಳಬೇಕಾಗುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು they are breeding hatred towards us ಎಂದರು. ಇದನ್ನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಒಂದೊಂದು ಸಲ ಅವರು ಮಾತನಾಡುವುದನ್ನು ನೋಡಿದರೆ ಬಹುಶ: every man in politics or atleast on this side is corrupt unless it is proved otherwise ಎಂದು ಬರುತ್ತಾ ಇದೆ.

ಶ್ರೀ ವೀರೇಂದ್ರ ಪಾಟೀಲ್:-

ಈಗ ನಾನು ಏನು ವಿಚಾರಗಳನ್ನು ಹೇಳುತ್ತಿದ್ದೇನೆ ಅದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ನಮಗೆ ಅಗೌರವವಿಲ್ಲ, ವೈಯಕ್ತಿಕವಾಗಿ ಯಾವುದೇ ಟೀಕೆ ಮಾಡಿಲ್ಲ, ಪೋಲೀಸ್ ಖಾತೆ ವಿಷಯ ಮಾತನಾಡುವಾಗ ಬಿಸಿ ವಾತಾವರಣ ಹುಟ್ಟುವುದು ಸಾಮಾನ್ಯ ಎಂದು ಹೇಳಿದರು. ಬಿಸಿ ವಾತಾವರಣಕ್ಕೆ ಅಭ್ಯಂತರವಿಲ್ಲ, ಅದು ಸ್ವಾಭಾವಿಕ. ಮಾನ್ಯ ನಾಯಕರು ನನ್ನ ಬಗ್ಗೆ ಏನು ಒಳ್ಳೆಯ ಮಾತನ್ನಾಡಿದ್ದಾರೆ ಅದಕ್ಕೆ ನಾನು ತುಂಬಾ ಋಣಿಯಾಗಿದ್ದೇನೆ. ಆದರೆ ಈ ರೀತಿಯಿಂದ ಎಲ್ಲರೂ ಮಾತನಾಡುವುದಾದರೆ ಹೇಳಬೇಕಾದ ಅವಶ್ಯಕತೆ ಇರಲಿಲ್ಲ. ಹೇಳಬೇಕಾದರೆ ಕರ್‌ಪಷನ್ ಚಾರ್ಜ್ ನನ್ನಮೇಲೆ ಮಾಡಿದ್ದಾರೆ. ಹಾಗೆ ಮಾಡಿದಾಗ ಬಾಯಿಮುಚ್ಚಿಕೊಂಡು ಕೂಡಲು ಹೇಗೆ ಸಾಧ್ಯ ? ಹಾಗೆ

ಮಾಡಿಲ್ಲವೆಂದು ಹೇಳುವುದಾದರೆ ರಿಕಾರ್ಡು ತೆಗೆದು ಓದಲಿ. ಎಲ್ಲರೂ ಹಾಗೆ ಮಾಡಿದ್ದರೆಂದಲ್ಲ. ವಿರೋಧ ಪಕ್ಷದ ನಾಯಕರಲ್ಲಿ ನನಗೆ ಗೌರವ ಇದೆ. ಇಲ್ಲದಿರುವುದನ್ನು ಯಾರ ವಿಷಯದಲ್ಲೂ ನಾನು ಹೇಳುವಹಾಗಿಲ್ಲ. ಯಾರಾದರೂ ಏನಾದರೂ ಹೇಳಿದರೆ ಅದು ಸರಿಯಾಗಿಲ್ಲದಿದ್ದರೆ ಇರುವ ಅನುಮಾನವನ್ನು ಹೋಗಲಾಡಿಸುವುದಕ್ಕೆ ಕೆಲವು ಮಾತುಗಳನ್ನು ಹೇಳಬೇಕಾಗುವುದು. ಕ್ಷಮಿಸಬೇಕು, ಗತಿಯಿಲ್ಲ ಎಂದು ಮುಂತಾಗಿ ಹೇಳಿರುವುದು ಸಹಿಸುವುದಕ್ಕಾಗುವುದಿಲ್ಲ. ಏನು ಹೇಳಿದ್ದಾರೆಂಬುದನ್ನು ಓದಿನೋಡಿ, ನಾನು ಸತ್ಯವನ್ನು ತಿಳಿಯುವುದಕ್ಕೆ ಹೇಳುತ್ತಿದ್ದೇನೆ. ಕೆಲವರು ಬಕೆಟ್, ಟಾರು, ಬ್ರಷ್ ಹಿಡಿದುಕೊಂಡು ಹೊರಟಿದ್ದಾರೆ, ಮುಖಕ್ಕೆ ಮಸಿ ಬಳಿಯಬೇಕೆಂದಿದ್ದಾರೆ, ಇದನ್ನು ಸಹಿಸುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಯಾಗಿ ಇರುವ ಕಾಲಕ್ಕೆ ಅವರ ಮುಖಕ್ಕೆ ಟಾರು ಬಳಿಯಲು ಹೋದರೆ ಸುಮ್ಮನಿರಲು ಸಾಧ್ಯವೇ ಎಂಬುದನ್ನು ವಿಚಾರ ಮಾಡಬೇಕು. ನಾನು ಈ ಸ್ಥಾನದಲ್ಲಿ ಇಂದು ಇರಬಹುದು, ನಾಳೆ ನೀವು ಬರಬಹುದು. ಯಾವ ಪಕ್ಷವೇ ಆಗಲಿ ಸರ್ಕಾರ ನಡೆಸುವುದಕ್ಕೆ ಅವಕಾಶವಿದೆ. ಅನೇಕ ಸದಸ್ಯರು-ಹೆಸರು ಹೇಳುವಹಾಗಿಲ್ಲ ವಿರೋಧ ಪಕ್ಷದವರು ಬಸ್ಸಿನಲ್ಲಿ ಹೋಗುವುದು ಕಷ್ಟ, ಎಂ.ಎಲ್.ಎ ಇದ್ದಾನೆ, 25 ಸಾವಿರ ರೂಪಾಯಿ ಖರ್ಚು ಮಾಡಿದ್ದಾನೆ, ಅಷ್ಟನ್ನು 5 ವರ್ಷಗಳಲ್ಲಿ ಆತ ಸಂಪಾದನೆ ಮಾಡಬೇಕು ಎಂದು ಇತರ ಪ್ರಯಾಣಿಕರು ಬಸ್ಸಿನಲ್ಲಿ ಈ ಸಭೆಯ ಸದಸ್ಯರು ಪ್ರಯಾಣ ಮಾಡುವಾಗ ಆಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ, ಹೀಗೆ ಪ್ರತಿಯೊಬ್ಬರೂ ಮಾತನಾಡಿದ್ದಾರೆ, ಈ ವಾತಾವರಣ ಹುಟ್ಟಿಸಿದ್ದಾರೆ. ಲಂಚ ಬಿಟ್ಟು ಬೇರೆ ಉದ್ಯೋಗವೇ ಇಲ್ಲ, ಬರೇ ಲಂಚ, ಲಂಚ ಎಂದು ಹೇಳಿದ್ದಾರೆ. ನಮಗೆ ತಂದೆ ತಾಯಿ ಇಲ್ಲವೇ, ಆಸ್ತಿ ಪಾಸ್ತಿ ಇಲ್ಲವೇ, ಬರೇ ಆಸ್ತಿ ಮಾಡುವುದಕ್ಕೆ ಬಂದಿದ್ದೇವೆಯೇ? ದುಡ್ಡು ಹೊಡೆಯಲು ಬಂದಿದ್ದಾರೆ, ಆಸ್ತಿಪಾಸ್ತಿ ಮಾಡಲು ಬಂದಿದ್ದಾರೆ ಎಂಬ ಅಭಿಪ್ರಾಯ ಬರುವಂತೆ ಒಂದು ವಾತಾವರಣವನ್ನುಂಟು ಮಾಡಿದರೆ ಹೇಗೆ ನಾವು ಸುಮ್ಮನಿರಲು ಸಾಧ್ಯ ? ಇಂದು ನಾವು ಬೇಕಾದರೆ ಗುಲ್ಬರ್ಗಾದಿಂದ ಟೆಲಿಗ್ರಾಂ ತರಿಸುವುದಕ್ಕೆ ಕಷ್ಟವೇ ? ಯಾರು ಬೇಕಾದರೂ ಕೊಡಬಹುದು, ರೊಕ್ಕ ಕೊಟ್ಟರೆ ಬರುತ್ತದೆ. ಯಾರು ಬೇಕಾದರೂ ಕಾಗದ ಬರೆಯಬಹುದು. ಪ್ರತಿಯೊಬ್ಬರಿಗೂ ಒಂದು ಸ್ಥಾನಮಾನ, ಗೌರವ ಇದೆ. ಶ್ರೀ ಶಿವಪ್ಪನವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ, ಹಾಗೆಯೇ ಶ್ರೀ ಸಿದ್ಧವೀರಪ್ಪನವರೂ ಚುನಾಯಿತರಾಗಿ ಬಂದಿದ್ದಾರೆ. 400 ರೂಪಾಯಿ ಕೊಟ್ಟರೆ ಕೆಲಸಮಾಡಿ ಕೊಡುತ್ತೇವೆ ಎಂದು ಹೇಳಿದರು ಎಂದು ನಮ್ಮ ಮೇಲೆ ಯಾವ ಆಧಾರವೂ ಇಲ್ಲದೆ ಚಾರ್ಜ ಇದೆ ಎಂದು ಹೇಳಿದರೆ ಯಾವ ರೀತಿ ಸರಕಾರ ನಡೆಸುವುದು ? ಹೀಗೆ ಆರ್ಗನೈಜ್ ಮಾಡಿಕೊಂಡು ದೂರುಗಳನ್ನು ಹೇಳುತ್ತಾ ಹೋದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಎಂದೂ ಆಗಿಲ್ಲ, ಇಂಥ ಅರ್ಜಿ ಯಾರೂ ಹಾಕಿಲ್ಲ.

ಶ್ರೀ ವಾಟಾಳ್ ನಾಗರಾಜ್ :-

ಮಾನ್ಯ ಮುಖ್ಯ ಮಂತ್ರಿಗಳು ಏನು ಬೇಕಾದರೂ ಹೇಳಲಿ. ಆದರೆ ಅವರು ಉಪಯೋಗಿಸುವ ಪದ ಸರಿಯಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :-

ಬಹಳ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಈ ಮನೆಯಲ್ಲಿ ಒಬ್ಬರಿಗೊಬ್ಬರು ಪರಸ್ಪರ ವಿಶ್ವಾಸ ಪ್ರೀತಿಯಿಂದ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಹೇಳುವಂತಹದು ಈ ತರಹ ಪ್ರಯತ್ನಗಳು ನಡೆಯುತ್ತಾ ಇವೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ನಾಯಕರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇನೆ, ಈ ರೀತಿಯಿಂದಾದರೆ ವಾತಾವರಣ ಬಹುಶ: ಹದಗೆಟ್ಟುಹೋಗಬಹುದು. ಇವತ್ತಿನ ದಿವಸ ನಮ್ಮ ಮೇಲೆ ಆಗಬಹುದು, ಇಲ್ಲ ಅಂತ ಇಲ್ಲ, 1972ಕ್ಕೆ ಯಾರು ಯಾರು ಇರುತ್ತಾರೆ ಅಂತ ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಅವಕಾಶ ಕೊಡಲಾರದಂತೆ ಮೊದಲನೆ ಸಲ ಈ ವಿವರಣೆಯನ್ನು ನೀಡುತ್ತಾ ಇದ್ದೇನೆ. ಇದಕ್ಕೆ ಎಡೆಕೊಡಬಾರದು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗಾದರೂ ಏನಾದರೂ ರೆಕಾರ್ಡ್ ತಯಾರುಮಾಡುವುದಕ್ಕೆ, ಬಿಲ್ಡ್ ಅಫ್ ಮಾಡುವುದಕ್ಕೆ ಪ್ರಯತ್ನಪಟ್ಟರೆ ಹಾಗೆ ಮಾಡುವುದನ್ನು ತಡೆಯುವುದು ಕಷ್ಟ. ಆ ರೀತಿಯಿಂದ ನಾವು ಬಹಳ ಎಚ್ಚರಿಕೆಯಿಂದ ಒಬ್ಬರಿಗೊಬ್ಬರು ಸಹಿಸಿಕೊಂಡು ಈ ಮಾನ್ಯ ಸಭೆಯಲ್ಲಿ ಕೆಲಸ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಶ್ರೀಮಾನ್ ಸಿದ್ಧವೀರಪ್ಪನವರು ಇಬ್ಬರು ಮಂತ್ರಿಗಳ ಮೇಲೆ ಚಾರ್ಜಸ್ಸನ್ನು ಮಾಡಿದ್ದಾರೆ. ಒಬ್ಬರ ಬಗ್ಗೆ ಬರೆದುಕೊಡುತ್ತೇನೆ ಎಂದು ಹೇಳಿದ್ದಾರೆ, ಬರೆದು ಕೊಡುವವರೆಗೂ ಕಾಯುತ್ತೇನೆ. ಇನ್ನೊಬ್ಬರ ಬಗ್ಗೆ ಬಹುಶ: ಇದು ಕರಪಷನ್ ಚಾರ್ಜ್ ಅಲ್ಲ ಅಂತ ನನಗೆ ಅನಿಸುತ್ತದೆ.

## 13. ದಾವಣಗೆರೆಯ ವ್ಯವಸಾಯ ವಸ್ತು ಪ್ರದರ್ಶನದಲ್ಲಿ ನಡೆದ ಗೂಂಡಾಗಳಿಂದಾದ ಗಲಭೆಯ ಕುರಿತು ಅವಿಶ್ವಾಸ ಗೊತ್ತವಳಿಯ ಮಂಡನೆಯ ಮೇಲಿನ ಸ್ಪಷ್ಟೀಕರಣ ದಿನಾಂಕ: 21-3-1969

ಶ್ರೀ ವೀರೇಂದ್ರ ಪಾಟೀಲ್:-

ಅಧ್ಯಕ್ಷರೇ, ಈಗ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಹೇಳಿದರು. ನಾನು ಸಾಮಾನ್ಯವಾಗಿ ಯಾವಾಗಲೂ ಹೇಳಲಿಕ್ಕೆ ಹೋಗುವುದಿಲ್ಲ. ಪ್ರತಿಯೊಬ್ಬರು ನಾವು ಮಾನವರು ಇದ್ದೇವೆ. ಸಹನೆಗೂ ಒಂದು ಮಿತಿ ಇರುತ್ತದೆ. ಈ ಲೆಕ್ಕದಿಂದ ನೋಡಿದಾಗ ನಾವು ಇಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಮ್ಮ ಪಕ್ಷಗಳ ಲೆಕ್ಕ ಇಟ್ಟುಕೊಂಡು ಮಾತನಾಡಬೇಕಾಗಿಲ್ಲ. ಆದ್ದರಿಂದ ಒಂದು ಪಕ್ಷ ಇನ್ನೊಂದು ಪಕ್ಷಕ್ಕೆ ದೋಷಣೆ ಮಾಡುವುದು ದೂರುವುದು ಇದಕ್ಕೆ ಈ ಒಂದು ಮಾನ್ಯ ಸಭೆಯನ್ನು ಉಪಯೋಗಿಸಿಕೊಳ್ಳಬೇಕಾಗಿಲ್ಲ. ಆ ದೃಷ್ಟಿಯಿಂದ ನಾನು ಅದನ್ನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಈ ಒಂದು ಪರಿಸ್ಥಿತಿ ಏಕೆ ಬರುತ್ತಾ ಇದೆ ಅನ್ನುವಂತಹದನ್ನು ನೋಡಿದರೆ ಇಲ್ಲಿ ಏನಾಗುತ್ತಾ ಇದೆ ಎಂದರೆ ಏನಾದರೂ ಇನ್‌ಫರ್ಮೇಷನ್ ಬೇಕು ಎಂದು ಕೇಳಿದಾಗ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಅವರಿಗೆ ಅನೇಕ ಸಲ ಹೇಳಿದ್ದೇನೆ. ಇವತ್ತು ಮೊದನೆಯ ಸಲ ಹೇಳಬೇಕಾಗಿಲ್ಲ. ಪದೇ ಪದೇ ಹೇಳಬೇಕಾಗಿಲ್ಲ. ನಾನು ಪ್ರತಿನಿಧಿಸತಕ್ಕದ್ದು ಕೇವಲ ನನ್ನ ಮತಕ್ಷೇತ್ರವೇ ಅಲ್ಲದೆ ಇಡೀ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಮುಖ್ಯ ಮಂತ್ರಿಯಾಗಿದ್ದೇನೆ, ಇದನ್ನು ಪದೇ ಪದೇ ಹೇಳಬೇಕಾಗಿಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಚಾರ ಅಂತಹ ಹೇಳುತ್ತಾ ಇದ್ದೇನೆ. ಆದರೆ ಒಂದು ವಿಚಾರ ಬಹಳ ನಮ್ರತೆಯಿಂದ ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಮನೆಯಲ್ಲಿ ಕಾರ್ಯಕಲಾಪಗಳು ನಡೆಯುವ ಕಾಲಕ್ಕೆ ಸಭೆಯಲ್ಲಿ ಕಾಂಗ್ರೆಸನ್ನು ದೂರೀಕರಿಸುವುದಾಗಲೀ, ಪಿ.ಎಸ್.ಪಿ.ಯನ್ನು ದೂರೀಕರಿಸುವುದಾಗಲೀ, ಕಮ್ಯೂನಿಸ್ಟ್ ಪಾರ್ಟಿಯನ್ನು ದೂರೀಕರಿಸುವುದಾಗಲಿ, ಪಕ್ಷಗಳನ್ನು ದೂಷಣೆ ಮಾಡುವುದಾಗಲಿ ಈ ಕೆಲಸಕ್ಕೆ ಈ ಸಭೆಯನ್ನು ಉಪಯೋಗಿಸಿಕೊಳ್ಳಬಾರದು ಎಂದು ಬಹಳ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ನನಗೆ ದಾವಣಗೆರೆಯಲ್ಲಿ ಏನಾಗಿದೆ ಎಂಬ ಅರಿವು ಸ್ವಲ್ಪಮಟ್ಟಿಗೆ ಇದೆ. ಆದಕ್ಕಾಗಿಯೇ ಹೇಳಿದೆ ಸರ್ಕಾರ ಏನಾದರೂ ಸ್ಟೇಟ್‌ಮೆಂಟ್ ಮಾಡಬೇಕಾದರೆ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ, ಸಾಧ್ಯವಾದಮಟ್ಟಿಗೂ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇವೆ. ಹೊಸ ಇನ್‌ಫರ್ಮೇಷನ್ ಸಂಗ್ರಹ ಮಾಡಲು ಸಾಧ್ಯವಾದರೆ ಅದನ್ನು ಮಾಡಿಕೊಂಡು ನಾಳೆ ಹೇಳಬೇಕಾಗುತ್ತದೆ. ಆದರೆ ಕಾಲ್ ಅಟೆನ್‌ಷನ್ ಮೋಷನ್ ಬಂದ ಮೇಲೆ ಅದರ ಜೊತೆಗೆ ಏನು ನಡೆಯಿತು ಅದು ನನ್ನ ಮನಸ್ಸಿಗೆ ನೋವನ್ನುಂಟು ಮಾಡಿತು. ಏಕೆಂದರೆ ನಾಳೆ ನನ್ನ ಸ್ಟೇಟ್‌ಮೆಂಟ್ ಆಗುವಾಗ ಅಲ್ಲಿ ಏನು ನಡೆಯಿತು ಎಂಬುದು ಮಾನ್ಯ ಸಭೆಗೆ ಗೊತ್ತಾಗುತ್ತದೆ. ಇವತ್ತೂ ಬೇಕಾದರೆ ಹೇಳುವುದಕ್ಕೆ ತಯಾರಾಗಿದ್ದೇನೆ. ಆದರೆ ಅದಕ್ಕೆ ಸ್ವಲ್ಪ ಬ್ಯಾಕ್‌ಗ್ರೌಂಡ್ ತಿಳಿದುಕೊಂಡು ಹೇಳಬೇಕಾಗುತ್ತದೆ ಎಂದು ಯೋಚನೆ ಮಾಡುತ್ತಾ ಇರುವಾಗಲೇ ಒಬ್ಬ ಮಾನ್ಯ ಸದಸ್ಯರು ಎದ್ದು "ರಕ್ತದ ಕಾಲುವೆ

ಹರಿಯಿತು" ಎಂದು ಹೇಳುವುದಕ್ಕೆ ಶುರು ಮಾಡಿದರೆ ಅದಕ್ಕೆ ಏನಂತ ಉತ್ತರ ಕೊಡಬೇಕು ? ರಕ್ತದ ಕಾಲುವೆ ಹರಿಸೋಣ ಎಂದು ಹೇಳೋಣವೇ ? ಅಥವಾ ಶರಣಾಗತವಾಗಿ ಹಾಗೆ ಮಾಡಬೇಡಿ ಅಂತ ಕೈ ಜೋಡಿಸಿ ಹೇಳಬೇಕೆ; ಏನೆಂದು ಹೇಳಬೇಕು ಅಂತ ಅರ್ಥವಾಗುವುದಿಲ್ಲ. ಮಾನ್ಯ ಸಭೆಯಲಿ ಹೇಳುತ್ತಾ ಇದ್ದೇನೆ ಏನನ್ನು ಹೇಳಬೇಕಾಗಿದ್ದರೂ ಸಹ ಯಾವಾಗಲೂ ಸಿದ್ಧರಾಗಿದ್ದೇವೆ, ತಮಗೆ ಏನು ಇನ್‌ಫರ್ಮೇಷನ್ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಇನ್‌ಪಾರ್ಮೆಷನ್ ಕೊಟ್ಟ ಮೇಲೆ ಏನಾದರೂ ಸಂಶಯ ಇದ್ದರೆ ಅಧ್ಯಕ್ಷರು ಇದ್ದಾರೆ ಕೇಳುವುದಕ್ಕೆ ಅನುಮತಿ ಕೊಡುತ್ತಾರೆ, ಪ್ರಶ್ನೋತ್ತರಗಳಾಗುತ್ತದೆ ಇವುಗಳೆಲ್ಲಾ ನಡೆಯುತ್ತಲೇ ಇರುತ್ತವೆ. ಅದನ್ನು ಬಿಟ್ಟು ಬಹುಶ: ಬರೆದದ್ದು ಇರಬಹುದು. ಕಾಂಗ್ರೆಸ್ ಗುಂಡಾ ಜನರು ಅಂತ ಮಾನ್ಯ ಸದಸ್ಯರು ಪ್ರಾರಂಭ ಮಾಡಿದರು. ಕಾಂಗ್ರೆಸ್ ಗೂಂಡಾ ಜನರನ್ನು ನೀವು ಕರೆದುಕೊಂಡು ಹೋಗಿ ಪ್ರದರ್ಶನ ಮಾಡಿ ಗಲಾಟೆ ಮಾಡುತ್ತಾ ಇದ್ದಾರೆ ಎಂದು ಪ್ರಾರಂಭ ಮಾಡಿದರೆ ವಿರೋಧ ಪಕ್ಷದ ನಾಯಕರಿಗೆ ಕೇಳುತ್ತೇನೆ. ಇವತ್ತು ಈ ಭಾಗದವರು " ಪಿ. ಎಸ್.ಪಿ. ಯವರು ಕೆಲವು ಗೂಂಡಾ ಜನರನ್ನು ಕರೆದುಕೊಂಡು ಹೋಗಿ ಪ್ರದರ್ಶನ ಮಾಡಿ ಗಲಾಟೆ ಮಾಡುತ್ತಾ ಇದ್ದಾರೆ " ಎಂದರೆ ಇದು ಎಲ್ಲಿಗೆ ಬರುತ್ತದೆ ? ಆದ್ದರಿಂದ ಸಭೆಯ ಕಾರ್ಯಕಲಾಪಗಳನ್ನು ನಡೆಸುವಾಗ ನನ್ನ ಸ್ಟೇಟ್‌ಮೆಂಟ್ ಆದಮೇಲೆ ಆ ಅಭಿಪ್ರಾಯಕ್ಕೆ. ಬಂದಿದ್ದಾರೆ ಅಂತ ಅಂದಿದ್ದರೆ ಅದನ್ನು ಒಪ್ಪಿಕೊಳ್ಳಬಹುದಾಗಿತ್ತು ಸ್ಟೇಟ್‌ಮೆಂಟೇ ನಾನು ಮಾಡಿಲಿಲ್ಲ, ವಾಸ್ತಾವಾಂಶ ಏನಿದೆ ಎಂಬುದನ್ನು ನಾನಂತೂ ತಿಳಿದುಕೊಳ್ಳಲಿಲ್ಲ, ಇಲ್ಲಿಗೆ ಬಂದಾಗ ಅದು ಗೊತ್ತಾಯಿತು. ಬೆಳಿಗ್ಗೆ ಘೋನ್ ಮಾಡಿರಲಿಲ್ಲ, ಸೆಕ್ರೆಟರಿಯವರಿಗೆ ಘೋನ್ ಮಾಡಿರಬಹುದು. ಸಂಬಂಧಪಟ್ಟ ಅಧಿಕಾರಿಗಳು ಯಾರ‍್ಯಾರ ಹತ್ತಿರ ಮಾತನಾಡಿದ್ದರೆ, ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಇವತ್ತಿನದಿವಸ ಹೇಳಬೇಕೆಂಬ ಪರಿಸ್ಥಿತಿಯಲ್ಲಿದ್ದಾಗ ಕಾಂಗ್ರೆಸ್ ಬಗ್ಗೆ ವಿನಾಕಾರಣ ಆಕ್ಷೇಪಗಳು ಬಂದವು - ಕಾಂಗ್ರೆಸ್‌ದೂಷಣೆ ಮಾಡುವಂತಹದು, ದೂರುವಂತಹದು ಸರಿಯಾದ್ದಲ್ಲ ಅನ್ನುವುದನ್ನು ಬಹಳ ನಮ್ರತೆಯಿಂದ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ಆ ಕಡೆಯರರು ಕಾಂಗ್ರೆಸ್‌ನವರನ್ನು ಕಡೆಯವರು ವಿರೋಧ ಪಕ್ಷದವರನ್ನು ಮತ್ತು ಇತರ ಪಕ್ಷದವರನ್ನು ಕಾಂಗ್ರೆಸ್ ನವರನ್ನು ಈ ದೂರಬಹುದು. ಆದರೆ ಅದು ಬರೀ ದೂರುವ ಕೆಲಸವಾಗುತ್ತದೆಯೇ ಹೊರತು ನಮ್ಮ ಸಭೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ಆಗುವಂತಹ ಕೆಲಸವಾಗುವುದಿಲ್ಲ. ಆದ್ದರಿಂದ ನಮ್ರತೆಯಿಂದ ವಿನಂತಿ ಮಾಡಿಕೊಂಡಿದ್ದೇನೆ, ಇದಕ್ಕಿಂತ ಹೆಚ್ಚಿಗೆ ನನ್ನ ಮನಸ್ಸಿನಲ್ಲಿ ಇದೆ ಅನ್ನುವಂತಹದು ಯಾವುದೂ ಇಲ್ಲ. ಈ ಸಭೆಯ ಕಾರ್ಯ ಕಲಾಪಗಳು ನಡೆಯಲು ನಾನು ಸ್ಟೇಟ್‌ಮೆಂಟ್ ಮಾಡಲು ನಾಳೆ ತಯಾರಾಗಿದ್ದೇನೆ. ಇವತ್ತೇ ಮಾಡುವುದಕ್ಕೆ ತಯಾರಾಗಿದ್ದೆ, ಇನ್ನೂ ಇನ್‌ಫರ್ಮೇಷನ್ ಬರಬೇಕಾದ್ದರಿಂದ ಮಾಡುವುದಕ್ಕೆ ಆಗಲಿಲ್ಲ, ಇನ್‌ಫರ್ಮೇಷನ್ ಸಪ್ರೆಸ್ ಮಾಡಬೇಕೆಂದಾಗಲಿ, ವಿತ್‌ಹೋಲ್ಡ್ ಮಾಡಬೇಕೆಂದಾಗಲಿ ಇಲ್ಲ, ಇನ್‌ಫರ್ಮೇಷನ್ ಕೊಟ್ಟು ಮಾನ್ಯ ಸದಸ್ಯರನ್ನು ಸಮಾಧಾನಗೊಳಿಸುವುದು ನನ್ನ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ.

## 14. ಭಾರತದ ರಾಷ್ಟ್ರಪತಿ ಡಾ: ಝಾಕೀರ ಹುಸೇನರ ನಿಧನದ ನಂತರ ಸಂತಾಪ ಸೂಚಕ ನಿರ್ಣಯ ಮಂಡಿಸುತ್ತ ಮೈಸೂರು ವಿಧಾನ ಸಭೆ 14ನೇ, ಅಗಸ್ಟ್ 1969.

ನಿರ್ಣಯ: " ಈ ಸದನವು, ಮೇ 3, 1969ರಂದು ಆಗಿನ ಭಾರತದ ರಾಷ್ಟ್ರಪತಿ ಡಾ: ಝಾಕೀರ ಹುಸೇನರ ನಿಧನದ ಬಗ್ಗೆ ಅತೀವ ದು:ಖ ವ್ಯಕ್ತ ಪಡಿಸಿ, ಅವರ ಕುಟುಂಬದ ಸದಸ್ಯರಿಗೆ ಅತೀ ಆಳವಾದ ಸಹಾನುಭೂತಿಯನ್ನು ತಿಳಿಸುತ್ತದೆ ".

ಮೇ 3, 1969ರಂದು ಡಾ: ಝಾಕೀರ ಹುಸೇನರ ಆಕಸ್ಮಿಕ ನಿಧನವು ರಾಷ್ಟ್ರಕ್ಕೆ ಒಂದು ಅಪಾರವಾದ ಹಾನಿಯನ್ನುಂಟು ಮಾಡಿದೆ. ಭಾರತದ ಶಿಕ್ಷಣ ತಜ್ಞರಲ್ಲಿ, ಅವರೊಬ್ಬರು ಶ್ರೇಷ್ಠ ವ್ಯಕ್ತಿಗಳಾಗಿದ್ದರು. ಅವರು ಇಂಡೋ-ಸರಕೆನಿಕ್ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಘನತೆಯ, ಪಾಂಡಿತ್ಯದ ಮಹಾನ್ ವ್ಯಕ್ತಿಗಳಾಗಿದ್ದರು. 1897ರಲ್ಲಿ ಜನಿಸಿ, ಡಾ: ಝಾಕೀರ ಹುಸೇನರು, 1918ರಲ್ಲಿ ತಮ್ಮ ಬಿ.ಎ. ಪದವಿ ಮುಗಿಸಿ, ಎರಡು ವರ್ಷದ ನಂತರ ಎಂ.ಎ ಪದವಿ ಮುಗಿಸಿ ಶಿಕ್ಷಕರಾಗಿ ತಮ್ಮ ಜೀವನದ ವೃತ್ತಿ ಪ್ರಾರಂಭಿಸಿದರು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳವಳಿಯ ಕರೆಗೆ ಓಗೊಟ್ಟು, ಸ್ವಾತಂತ್ರ್ಯ ಸಮರದಲ್ಲಿ, ಸಕ್ರೀಯವಾಗಿ ಭಾಗವಹಿಸಿ, ದೇಶಕ್ಕಾಗಿ ತ್ಯಾಗ ಮಾಡಿ, ರಾಷ್ಟ್ರೀಯ ಹಂತದಲ್ಲಿ, ಶಿಕ್ಷಣದ ಜ್ಞಾನ ನೀಡಲು, ಜಾಮೀಯಾ ಮಿಲಿಯಾದಲ್ಲಿ ಶ್ರೀ ಹಕೀಮ ಅಜಮಲ ಖಾನರ ಜೊತೆ ಸೇರಿದರು.

1922ರ ಅವಧಿಯಲ್ಲಿ ಅವರು ಹೆಚ್ಚಿನ ವ್ಯಾಸಂಗಕ್ಕಾಗಿ, ಜರ್ಮನಿಯ ಬರ್ಲಿನ್‌ಗೆ ತೆರಳಿ ತಮ್ಮ ಡಾಕ್ಟರೇಟ್ ಪದವಿ ಪಡೆದರು. ಸ್ವದೇಶಕ್ಕೆ ಹಿಂದಿರುಗಿದ ನಂತರ ಜಾಮೀಯ ಮಿಲಿಯಾಯು ಅನೇಕ ಕಠಿಣತೆಯನ್ನು ಅನುಭವಿಸಿದ್ದನ್ನು ಕಂಡು, ದು:ಖಿತರಾಗಿ 1927ರಲ್ಲಿ, ಹಕೀಮ ಅಜಮಲ ಖಾನ್‌ರ ನಿಧನವು ಅವರನ್ನು ಇನ್ನಷ್ಟು ದು:ಖ ಸಾಗರದಲ್ಲಿ ಮುಳುಗಿಸಿತು. ಜಾಮಿಯಾ ಮಿಲಿಯಾ ಸಂಸ್ಥೆಯ ಸ್ಥಿತಿಯು ಬಹಳ ಚಿಂತಾಜನಕದಲ್ಲಿ ಪರಿಣಮಿಸಿತು. ಆ ಸಂಸ್ಥೆಯನ್ನು ಪುನ: ಚುರುಕು ಗೊಳಿಸಲು, ಪುನರ್ಜೀವಿತ ಗೊಳಿಸಲು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದರು. ಈಗ ಆ ಸಂಸ್ಥೆಯ ಝಾಕೀರ ಹುಸೇನರ ಜೀವಂತ ಸ್ಮಾರಕದಂತಿದೆ. ನಮ್ಮ ರಾಷ್ಟ್ರಪತಿಯು, ಸಂಸ್ಕೃತ ಮಹಾ ಮಾನವರಾಗಿದ್ದರು, ರಾಷ್ಟ್ರದ ಉಪ ರಾಷ್ಟ್ರಪತಿಯಾಗಿ, ನಂತರ ರಾಷ್ಟ್ರಪತಿಯಾಗಿ ಡಾ: ಝಾಕೀರ ಹುಸೇನರು ನಮ್ಮ ರಾಜ್ಯಕ್ಕೆ ಎಷ್ಟೋ ಬಾರಿ ಭೇಟಿ ನೀಡಿದ್ದುಂಟು. ಅವರು, ಸಮಸ್ತ ಭಾರತದ ಪ್ರಜೆಗಳ ವಿಶ್ವಾಸ ಮತ್ತು ಗೌರವಕ್ಕೆ ಪಾತ್ರರಾಗಿದ್ದರು. ಅವರು ಎಲ್ಲರನ್ನೂ ಗೌರವಿಸಿ, ಎಲ್ಲರಿಂದ ಗೌರವಿಸಲ್ಪಟ್ಟವರಾಗಿದ್ದರು. ತಮ್ಮ ಜೀವನ ಪರ್ಯಂತ, ಅವರು ಕಟ್ಟಾ ರಾಷ್ಟ್ರವಾದಿ ಮತ್ತು ದೇಶಾಭಿಮಾನಿಗಳಾಗಿದ್ದರು. ಅವರು ಪ್ರತ್ಯೇಕತಾ ಶಕ್ತಿಗಳ ವಿರುದ್ಧ ಹೋರಾಡಿ, ಎಲ್ಲರೂ ಸಹ ಬಾಳ್ವೆಯಿಂದ ಜೀವನ ನಡೆಸುವುದನ್ನು ಸಮರ್ಥಿಸುತ್ತಿದ್ದರು. ಗಾಂಧೀಜಿಯವರಿಗೆ ಪ್ರಿಯವಾದ ಮೂಲ ಪದ್ಧತಿಯ ಶಿಕ್ಷಣದ ಪ್ರತಿಪಾದಕರಾಗಿದ್ದರು.

ಸ್ವಾತಂತ್ರ್ಯ ನಂತರ ಭಾರತದ ವಿಭಜನೆಯನ್ನು ಅವರು ಕಟುವಾಗಿ ಖಂಡಿಸಿದ್ದುಂಟು, ಅವರು ಯಾವಾಗಲೂ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಗಳು ಒಂದುಗೂಡಿ, ಹಿಂದು ಮುಸ್ಲಿಂರ ಐಕತ್ಯೆಯ ತತ್ವ ಪ್ರತಿಪಾದಿಸುತ್ತಿದ್ದರು. ಸ್ವಾತಂತ್ರ್ಯದ ನಂತರ, ಭಾರತದ

ವಿಭಜನೆಯು, ಅವರನ್ನು ಮತ್ತಷ್ಟು ದು:ಖಿತರನ್ನಾಗಿ ಮಾಡಿತು. ಮಂತ್ರಿಮಂಡಲದಲ್ಲಿ, ಸೇರುವ ಆಸೆಯಿಲ್ಲದೆ, ಅವರು ಹಿಂಸಾತ್ಮಕ ಚಟುವಟಿಕೆಗಳಿಂದ ನೊಂದ ಮುಸ್ಲಿಂ, ಹಿಂದೂ ಮತ್ತು ಶೀಖ ಮಿತ್ರರ ಸಮಸ್ತ ಕಲ್ಯಾಣಕ್ಕಾಗಿ ಹೋರಾಡಿದ್ದುಂಟು. ಭಾರತದ ಸ್ವಾತಂತ್ರ್ಯದ ನಂತರವೂ, ಡಾ: ಝಾಕೀರ ಹುಸೇನರು, ಕೋಮುವಾದದ ವಿರುದ್ಧ ಹೋರಾಡಿ, ಅದನ್ನು ಸಂಪೂರ್ಣ ನಿರ್ನಾಮ ಮಾಡಲು ಪ್ರಯತ್ನಿಸಿದ್ದರು. ಅವರು ಅಲೀಗಢ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆ ಅಮೋಘವಾದದ್ದು. ವಿಶ್ವವಿದ್ಯಾಲಯವು, ಅಂತರರಾಷ್ಟ್ರೀಯ ಖ್ಯಾತಿ ಪಡೆದಿದ್ದು, ಡಾ: ಝೂಕೀರ ಹುಸೇನರ, ತ್ಯಾಗದ ಸೇವೆಯಿಂದಲೇ ಎಂಬುದನ್ನು ಯಾರೂ ಮರೆಯುವಂತಿಲ್ಲ. ಜಾತಿ ಪದ್ಧತಿಯನ್ನು ಖಂಡಿಸಿದ ಅವರು "ಸಾಮಾಜಿಕ ಸಂಸ್ಥೆಗಿಂತಲೂ, ಜಾತಿಯು ಬಹಳ ಅನಾಹುತದ ರಾಜಕೀಯ ಸಂಸ್ಥೆಯಾಗಿದೆ ", ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

1952 ರಿಂದ ಅವರ ಚಟುವಟಿಕೆಗಳು, ದಿನೇ ದಿನೇ ವಿಶಾಲವಾಗಿ ಬೆಳೆಯುತ್ತಾ ಹೋದವು. ಅಲೀಗಢ ವಿಶ್ವವಿದ್ಯಾಲಯದ ವ್ಯವಹಾರಗಳನ್ನು, ಸರಿಯಾಗಿ ವ್ಯವಸ್ಥಿತ ಗೊಳಿಸುತ್ತಿದ್ದಂತೆಯೇ, ಅವರು ರಾಜ್ಯಸಭೆಯ, ಯು.ಜಿ.ಸಿ.ಯ ಮತ್ತು ಇನ್ನಿತರ ಸಂಸ್ಥೆಗಳ ಸದಸ್ಯರಾಗಿ ಕಾರ್ಯಮಾಡಿದರು. ಅಲ್ಲದೆ, ಹೈದರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಪುನರ್ ಸಂಘಟಿಸಲು, ಅವರನ್ನು ಆಮಂತ್ರಿಸಲಾಯಿತು.

ಅವರ ಅಂಥ 'ಮಾನವತಾವಾದ ' ಉದಾರವಾದ, ಪಾಂಡಿತ್ಯ, ವಿನಯ ಮುಂತಾದ ಸದ್ಗುಣಗಳು, ಗಾಂಧೀಜಿಯವರ ಮೆಚ್ಚುಗೆ ಪಡೆದವು. ಅದಕ್ಕಾಗಿಯೇ, ಗಾಂಧೀಜಿಯವರು "ನಯಿ ತಾಲೀಮ್" ವ್ಯವಸ್ಥಿತಗೊಳಿಸಲು, ಝೂಕೀರ ಹುಸೇನರಿಗೆ ಒಪ್ಪಿಸಿದರು. ಅವರು ಬಿಹಾರದ ರಾಜ್ಯಪಾಲರಾಗಿ, ರಾಷ್ಟ್ರದ ಉಪ ರಾಷ್ಟ್ರಪತಿಯಾದರು. ನಂತರ, ಮೇ 1967ರಲ್ಲಿ ಭಾರತದ ರಾಷ್ಟ್ರಪತಿಯ ಹುದ್ದೆಯನ್ನು ಅಲಂಕರಿಸಿದರು. ಅವರು ತಮ್ಮ ಅಧಿಕಾರವನ್ನು, ಪ್ರಜಾಸತ್ತಾತ್ಮಕವಾಗಿ ಮತ್ತು ಸಂವಿಧಾನಾತ್ಮಕವಾಗಿ ಚಲಾಯಿಸಿದರು.

ನಮ್ಮನ್ನು ಅಗಲಿದ ರಾಷ್ಟ್ರಪತಿಯವರಿಗೆ, ಈ ಶ್ರದ್ಧಾಂಜಲಿಯನ್ನು ಅರ್ಪಿಸುತ್ತ, ನಾನು ನಿಸ್ಸಂಕೋಚವಾಗಿ ಹೇಳುವುದೇನೆಂದರೆ, ಡಾ: ಝೂಕೀರ ಹುಸೇನರಿಗಿಂತ ಮತ್ತೇ ಯಾರೂ ತಕ್ಕ (ಯೋಗ್ಯ) ಭಾರತದ ನಾಗರಿಕನಲ್ಲ ", ಅವರಿಗೆ ವಿಶ್ವವೇ ಅತೀ ಗೌರವದಿಂದ ಕಾಣುತ್ತದೆ. ವಿಶ್ವದಲ್ಲಿ, ಭಾರತದ ಘನತೆಯನ್ನು ಹೆಚ್ಚಿಸಿದ ಮಹಾನ್ ವ್ಯಕ್ತಿ ಡಾ:ಝೂಕೀರ ಹುಸೇನರು. ಅವರು ಏಕತೆ ಮತ್ತು ಏಕಾಗ್ರತೆಯ ಪ್ರತೀಕರಾಗಿದ್ದರು. ಅವರು ಸಮಸ್ತ ಭಾರತ ಎಲ್ಲಾ ನಾಗರಿಕರ ಹೃದಯದಲ್ಲಿ ಇದ್ದರು.

ಅವರ ನಿಧನದಿಂದ, ಭಾರತವು, ಒಬ್ಬ ಮಹಾನ್ ಮಾನವತಾವಾದಿ, ಮುತ್ಸದ್ಧಿ, ಸ್ವತಂತ್ರ ಸೇನಾನಿ, ಶಿಕ್ಷಣ ತಜ್ಞನನ್ನು ಕಳೆದುಕೊಂಡಿದೆ. ಕಾರಣ, ಅವರ ನಿಧನಕ್ಕೆ ಅತೀವ ದು:ಖ ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರನ್ನು ಪ್ರಾರ್ಥಿಸುತ್ತೇವೆ. ಅವರ ಸಮಸ್ತ ಕುಟುಂಬದ ಸದಸ್ಯರಿಗೂ, ನಮ್ಮ ಸಮಾಧಾನದ ಸಹಾನುಭೂತಿಗಳನ್ನು ಕಳಿಸುತ್ತೇವೆ.

## 15. ಸದಸ್ಯರ ಬಂಧನದ ಬಗ್ಗೆ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರಿಂದ ವಿವರಣೆ. (ಮಾರ್ಚ್ 14, 1970.)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು) :-

ಅಧ್ಯಕ್ಷರೇ, ನಿನ್ನೆ ದುರ್ದೈವದಿಂದ ನನಗೆ ಸಾಕಷ್ಟು ಸಮಯ ಸಿಕ್ಕಲಿಲ್ಲ. ಆದರೆ ಒಂದು ವಿಚಾರ ನಾನು ಪ್ರಾಸ್ತಾಪ ಮಾಡಬೇಕಾದುದು ಬಹಳ ಅವಶ್ಯಕವಾಗಿತ್ತು. ನಿನ್ನೆ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತಿದೆ. ಆದರೆ ಸಮಯ ಸಿಕ್ಕಲಿಲ್ಲ. ಐದು ನಿಮಿಷ ಸಿಕ್ಕಿದ್ದರೆ ಮುಗಿಸಬಹುದಾಗಿತ್ತು. ನಾನು ಈ ಮನೆಯಲ್ಲಿ ಸ್ವಲ್ಪ ಹೊತ್ತು ಇರಲಿಲ್ಲ. ಆವಾಗ ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಹುಚ್ಚ ಮಾಸ್ತಿ ಗೌಡರು ನನ್ನ ಮೇಲೆ ಒಂದು ಚಾರ್ಜ್ ಮಾಡಿದ್ದಾರೆ ಎಂದು ತಿಳಿದುಕೊಂಡೆ, ಆ ಚಾರ್ಜ್....

ಶ್ರೀ ಎನ್. ಹುಚ್ಚಮಾಸ್ತಿಗೌಡ:-

ಎರಡು ಮೂರು ಮಾಡಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್ :-

ನನಗೆ ಗೊತ್ತಿದ್ದ ಹಾಗೆ ನನ್ನ ಮೇಲೆ ಒಂದು ಚಾರ್ಜ್‌ಮಾಡಿದ್ದಾರೆ. ವೈಯಕ್ತಿಕವಾಗಿ ನೇರವಾಗಿ ಚಾರ್ಜ್ ಮಾಡಿದ್ದಾರೆ. ಪೂನಾದಲ್ಲಿ ಒಂದು ದೊಡ್ಡ ಕೈಗಾರಿಕೆ ಇದೆ ಆ ದೊಡ್ಡ ಕೈಗಾರಿಕೆಯಲ್ಲಿ ನನ್ನ ಷೇರಿದೆ ಎನ್ನುವಂಥ ವಿಚಾರವನ್ನು ಅವರು ಹೇಳಿದ್ದಾರಂತೆ ಮತ್ತು ಅಷ್ಟೊಂದು ದುಡ್ಡು ಮುಖ್ಯ ಮಂತ್ರಿಗಳಿಗೆ ಎಲ್ಲಿಂದ ಬಂತು ಎನ್ನುವಂಥದ್ದನ್ನು ಅವರು ಹೇಳಿದ್ದಾರೆ. ಆದರೆ ಪ್ರಾಸ್ತಾವಿಕ ವಿಚಾರದಲ್ಲಿಯೇ ನಾನು ನಾಲ್ಕಾರು ಮಾತು ಹೇಳಿದ್ದೇನೆ. ಏನು ಇದ್ದರೂ ಜುಡಿಷಿಯಲ್ ಇನ್‌ಕ್ವಯರಿ ಮಾಡಿ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ತಪಶೀಲು ಹೇಳಿದ್ದರೆ ಒಳ್ಳೆಯದಾಗುತ್ತಿತ್ತು ಆ ಇಂಡಸ್ಟ್ರೀ ಯಾವುದು, ಷೇರ್ ಬಂಡವಾಳ ಎಷ್ಟು ಎನ್ನುವುದನ್ನು ಹೇಳಿದ್ದರೆ ಬಹುಶ: ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ ಈ ತರಹದ ಚಾರ್ಜಸನ್ನು ವಿವರವಾಗಿ ತಿಳಿಸಿದ್ದರೆ ಅವತ್ತೇ ವಿವರಿಸಲು ಆಗುತ್ತಿತ್ತು. ಹೋದ ಸಲ ಅಸೆಂಬ್ಲಿಯಲ್ಲಿ ಗವರ್ನರ್ಸ್ ಅಡ್ರಸ್ಸಿಗೆ ಮೋಷನ್ ಅಫ್ ಥ್ಯಾಂಕ್ಸ್ ಚರ್ಚೆಯ ಕಾಲಕ್ಕೆ ಯಾರೋ ಒಬ್ಬರು ರಿಲೇಷನ್ ಇದ್ದಾರೆ ಎಂದು ಒಂದೇ ಸಮನೆ ಹೇಳಿದರು. ನನಗೆ ಯಾವ ರಿಲೇಷನ್ನೂ ಇಲ್ಲ. ಯಾವ ಸಂಬಂಧಿಕರೂ ಇಲ್ಲ ಎಂದು ಹೇಳಿದರೂ ಕೂಡ ಅವರು ನಿಮ್ಮ ರಿಲೇಷನ್ ಎನ್ನುತ್ತಾರೆ. ಸುಳ್ಳು ಹೇಳಿದ್ದಾರೆ. ಅಸತ್ಯ ಹೇಳಿದ್ದಾರೆ ಎಂದು ಒಂದು ಪ್ರಿವಿಲೆಜ್ ಮೋಷನ್ ತರಲು ಮಾನ್ಯ ಸದಸ್ಯರೊಬ್ಬರು ಪ್ರಯತ್ನ ಮಾಡಿದರು. ಇದನ್ನು ನೋಡಿದರೆ ಇದರಲ್ಲಿ ಏನೋ ಆರ್ಗನೈಜ್ಡ್ ಆಗಿ ನಡೆಯುತ್ತಿದೆ ಎಂದು ಕಾಣುತ್ತದೆ. ಮಂತ್ರಿಗಳು ಅಥವಾ ಮುಖ್ಯ ಮಂತ್ರಿಗಳು ವಲ್ನರೇಬಲ್ ಪೊಜಿಷನ್ನಿನಲ್ಲಿ ಇದ್ದಾರೆ. ಅವರು ಸ್ವಲ್ಪ ಮನಸ್ಸು ಮಾಡಿದರೆ ಹತ್ತಾರು ಲಕ್ಷ ಸಂಪಾದನೆ ಮಾಡಬಹುದು. ಇನ್‌ವೆಸ್ಟಮೆಂಟ್ ಮಾಡಿರಬಹುದು ಎನ್ನುವ ಅಭಿಪ್ರಾಯ

ಬರುತ್ತದೆ. ಇದರಿಂದ ಜನಾಭಿಪ್ರಾಯ ಏನು ಆಗುತ್ತದೆ ನೋಡಬೇಕು ? ಮುಖ್ಯ ಮಂತ್ರಿಗಳೇ ಆಗಲಿ, ಇಂಥ ಅಧಿಕಾರ ಸ್ಥಾನದಲ್ಲಿ ಇರುವವರು ಅಧಿಕಾರ ದುರುಪಯೋಗ ಮಾಡಿದ್ದರೂ ಮಾಡಿರಬಹುದು ಎನ್ನುವ ಅಭಿಪ್ರಾಯ ಮೂಡುತ್ತದೆ. ತಪ್ಪಿತಸ್ಥರ ಮೇಲೆ ದೋಷಾರೋಪಣೆ ಮಾಡಬಾರದು ಎನ್ನುವ ವಿಚಾರದಿಂದ ಇದನ್ನು ಹೇಳುತ್ತಿಲ್ಲ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಒಂದು ಸ್ಟಾಂಡರ್ಡ್ ಒಂದು ಕನ್‌ಸಿಸ್ಟನ್ಸೀ ಬೆಳೆದುಕೊಂಡು ಬರಬೇಕಾಗಿದೆ. ಇದನ್ನು ಬಹಳ ಕಳಕಳಿಯಿಂದ ಹೇಳುತ್ತೇನೆ. ನಾನು ಡಿಟೇಲ್ಸ್ ಕೇಳಿದರೆ ಜ್ಯುಡಿಷಿಯಲ್ ಇನ್‌ಕ್ವಯರಿ ಮಾಡಿರಿ ಎಂದು ಹೇಳುತ್ತಾರೆ. ಜ್ಯುಡಿಷಿಯಲ್ ಇನ್‌ಕ್ವಯರಿ ಮಾಡುವುದು ಬೇಡ, ಈ ಮಾನ್ಯ ಸಭೆಯಲ್ಲಿ ಹೇಳುತ್ತೇನೆ ನನ್ನ ಷೇರು ಎಷ್ಟು ಇದೆ ಅದನ್ನು ಹುಚ್ಚುಮಾಸ್ತಿ ಗೌಡರಿಗೆ ಕೊಡುತ್ತೇನೆ ಅದನ್ನು ಎಷ್ಟಕ್ಕೆ ಅವರು ತೆಗೆದುಕೊಳ್ಳುತ್ತಾರೆಂದು ಹೇಳಲಿ. ಮಾನ್ಯ ಸ್ಪೀಕರರಿಗೆ ನಾನು ಬರೆದುಕೊಡುತ್ತೇನೆ. ಈ ಇಂಡಸ್ಟ್ರೀಯಲ್ಲಿ ಇರುವ ಷೇರ್ ನಿಮಗೆ ವರ್ಗಾಯಿಸಿ ಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ :-

ಪಾಯಿಂಟ್ ಆಫ್ ಆರ್ಡರ್. ಈಗ ತಾನೇ ಮುಖ್ಯ ಮಂತ್ರಿಗಳು ರೆಫರ್ ಮಾಡಿದರು. ಮಾನ್ಯ ಸದಸ್ಯರೊಬ್ಬರು ಪ್ರಿವಿಲೇಜ್ ಮೋಷನ್ ಕಳಿಸಿ ಕೊಟ್ಟಿದ್ದರು ಎಂದು ನನ್ನ ಕ್ರಿಯಾಲೋಪ ಇಷ್ಟು, ನನ್ನ ಪ್ರಿವಿಲೇಜ್ ಮೋಷನ್ ಚರ್ಚೆಗೆ ತೆಗೆದುಕೊಂಡಿದ್ದರೆ ಪ್ರಿವಿಲೇಜ್ ಕಮಿಟಿಗೆ ಕಳುಹಿಸಲು ಅವಕಾಶವಾಗುತ್ತಿತ್ತು. ಅವರೊಬ್ಬರೇ ಸತ್ಯ ಹರಿಶ್ಚಂದ್ರ ಎನ್ನುವ ಹಾಗೆ ಮಾತನಾಡುತ್ತಾರೆ. Therefore it would not be in order for the speaker to allow such comments on the privilege motion which was not discussed here. If necessary, let the Speaker refer that Privilege motion to the privilege committee or the Rules committee and let the Chief Minsister face it. I will also sub stantiate my point there. I will prove whether Shanker Keni is his relative or not. I am ready to prove it before the privileges committee.

Mr.speaker : As far as I have understood the Chief Minister he seemed to be making only a casual reference to it, I do not think he was speaking on the privilege motion or the action taken on it. I can only way that any personal explanation should be non-controversial and it should be brief. I do no find any substance in the point of order.

ಶ್ರೀ ವೀರೇಂದ್ರ ಪಾಟೀಲ್ :-

ಶ್ರೀಮಾನ್ ಹುಚ್ಚುಮಾಸ್ತಿ ಗೌಡರಿಗೆ ನಾನು ಹೇಳುತ್ತೇನೆ. ವಿಥ್ ಆಲ್ ಸಿನ್‌ಸಿರಿಟಿ ಅಂಡ್ ಆನೆಸ್ಟೀ ಅಟ್ ಮೈ ಕಮಾಂಡ್ ನಿಮ್ಮ ಸಮಕ್ಷಮದಲ್ಲಿ ಕೇಳುತ್ತೇನೆ. ಈ ಷೇರನ್ನು

ಅವರು ಎಷ್ಟಕ್ಕೆ ತೆಗೆದುಕೊಳ್ಳುತ್ತಾರೆ ಎಂದು. ಇದನ್ನು ಇಲ್ಲಿ ಬೇಕಾದರೆ ಬರೆದು ಕೊಡುತ್ತೇನೆ. ಬೇಕಾದರೆ ಸ್ಟಾಂಪ್ ಪೇಪರಿನಲ್ಲಿ ಸೋಮವಾರ ದಿನ ರಿಜಿಸ್ಟರ್ ಮಾಡಿ ಕೊಡುತ್ತೇನೆ. ಐದು ಹತ್ತು ಸಾವಿರವಾಗಿದ್ದರೆ ಇಷ್ಟು ದೊಡ್ಡ ಪ್ರಶ್ನೆಯಾಗುತ್ತಾ ಇರಲಿಲ್ಲ. 8 ಲಕ್ಷ, 10 ಲಕ್ಷ, 15 ಲಕ್ಷ, 20 ಲಕ್ಷ, 40 ಲಕ್ಷ ಆದರೂ ಆಗಬಹುದು ಎಂದು ಅವರು ತಿಳಿದುಕೊಂಡಿರಬಹುದು. ಎಷ್ಟಕ್ಕೆ ಈ ಷೇರುಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಗೊತ್ತಾದರೆ ಪರವಾ ಇಲ್ಲ, ನನ್ನ ದುಡ್ಡು ನನಗೆ ಬರುತ್ತದೆ ಎಂದು ಹೇಳಬಹುದು. ಈಗ ಕೇಳುತ್ತೇನೆ ಅವರು ಅಫರ್ ಮಾಡುವುದಕ್ಕೆ ತಯಾರು ಇದ್ದಾರೆಯೇ ?

Sri H. Siddaveerappa:- Under the transfer of property Act both the seller and the buyer must disclose what he is selling and what he is buying, unless the seller discloses what he is selling, how is the buyer to offer his price ?

ಶ್ರೀ ವೀರೇಂದ್ರ ಪಾಟೀಲ್ :-

ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ- ಈ ಮಾನ್ಯ ಸಭೆಯಲ್ಲಿ ನಾವು ಯಾರೇ ಆಗಲಿ ಏನಾದರೂ ಒಂದು ಮಾತನಾಡಬೇಕಾದರೆ ಅದನ್ನು ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ : ಅಲ್ಲದೆ ಒಂದು ಅಧಿಕಾರವಾಣಿಯಿಂದಲೂ ಕೂಡ ಮಾತನಾಡ ಬೇಕಾಗುತ್ತದೆ. ಇಲ್ಲಿ ಯಾರು ಏನು ಹೇಳಿದರೂ ಅದನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ನೆನ್ನೆಯ ದಿವಸ ಈ ಸಭೆಯಲ್ಲಿ ನಡೆದ ಕಾರ್ಯಕಲಾಪಗಳು ಈ ದಿವಸ ಪತ್ರಿಕೆಗಳಲ್ಲಿ ವರದಿಯಾಗಿವೆ. ಅದರಲ್ಲಿ ನಿನ್ನೆ ಇಲ್ಲಿ ಮುಖ್ಯ ಮಂತ್ರಿಯ ಮೇಲೆ ಕೆಲವು ಆರೋಪಣೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಸತ್ಯವೆಷ್ಟೋ ಅಸತ್ಯವೆಷ್ಟೋ? ಆದಾಗ್ಯೂ ಸಾರ್ವಜನಿಕರಲ್ಲಿ ಆ ಬಗ್ಗೆ ಒಂದು ಸಾಕಷ್ಟು ಊಹಾಪೋಹಗಳು ಏಳಬಹುದು. ನಾನು ಪೂನಾದಲ್ಲಿ ನನ್ನ ಹೆಸರಿನಲ್ಲಿ ಇಲ್ಲದೇ ಇನ್ನಾರ ಹೆಸರಿನಲ್ಲೋ ಷೇರುಗಳನ್ನು ಹಾಕಿ ಒಂದು ಇಂಡಸ್ಟ್ರಿಯನ್ನು ನಡೆಸಲಾಗುತ್ತಿದೆ ಎಂದು ಶ್ರೀಮಾನ್ ಎನ್. ಹುಚ್ಚಮಾಸ್ತಿ ಗೌಡರು ಒಂದು ಅಪಾದನೆ ಮಾಡಿದ್ದಾರೆ. ಇಂಥ ಒಂದು ಗುರುತರವಾದ ಅಪಾದನೆ ಏಕಾ ಏಕಿಯಾಗಿ ಅಧಿಕಾರ ಸ್ಥಾನದಲ್ಲಿರ ತಕ್ಕವರ ಬಗ್ಗೆ ಬರುವುದೆಂದರೆ ಅದು ಅಷ್ಟು ಭೂಷಣವಾದುದು ಅಲ್ಲ. ನಾನು ಹುಟ್ಟಿದ ಮೇಲೆ ನಿಜವಾಗಿಯೂ ಆ ಪೂನಾವನ್ನು ಎರಡಾ ವರ್ತಿಗಿಂತ ಜಾಸ್ತಿ ನೋಡಿಲ್ಲ. ಅಲ್ಲಿ ಯಾವ ಬೀದಿ ಎಲ್ಲಿದೆ ಎನ್ನುವುದು ಸಹಾ ನನಗೆ ಗೊತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಮಾನ್ಯ ಸಿದ್ಧ ವೀರಪ್ಪನವರು ಆ ಇಂಡಸ್ಟ್ರಿಯಲ್ಲಿ ನಾನು ಎಷ್ಟು ಬಂಡವಾಳ ಹಾಕಿದ್ದೇನೆಂಬುದನ್ನು ಹೊರಗೆಡವದೆ ಇದ್ದರೆ ಅದರ ಬಗ್ಗೆ ಒಂದು ಅಫರ್ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆಂದು ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ನಾನಾದರೂ ಹೇಳುವುದಿಷ್ಟೆ : ಅದರಲ್ಲಿ ನಾನು ಹಾಕಿರತಕ್ಕ ಬಂಡವಾಳ ಅಂದರೆ ಅದು ಶೂನ್ಯ. ನನಗೆ ಪೂನಾದಲ್ಲಿರತಕ್ಕ ಯಾವ ಇಂಡಸ್ಟ್ರಿಯ ಪರಿಚಯವೂ ಇಲ್ಲ ಮತ್ತು ಅವುಗಳೆಲ್ಲಿವೆ ಎಂಬುದೂ ಕೂಡ ನನಗೆ ಗೊತ್ತಿಲ್ಲ. ಹೀಗಿರುವಾಗ ಶ್ರೀ ಹುಚ್ಚುಮಾಸ್ತಿಗೌಡರು ಆ ಬಗ್ಗೆ ಏನು ಅಫ್‌ರ ಕೊಡುತ್ತಾರೆಂದು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ:

He has most conveniently chosen to refufte this allegation but he has not cared to refute the allegations made on prior occations.

ಶ್ರೀ ವೀರೇಂದ್ರ ಪಾಟೀಲ್ :-

ಆದರೆ ನಾನೀಗ ಒಂದು ಸ್ಪೋರ್ಟಿವ್ ಆಫರನ್ನು ಕೊಡುತ್ತೇನೆ. ನಾವೆಲ್ಲರೂ ಸೇರಿ ಈ ಪ್ರಜಾಪ್ರಭುತ್ವ ಆಡಳಿತದಲ್ಲಿ ಒಂದು ಪ್ಯೂರಿಟಿಯನ್ನು ಬೆಳೆಸಬೇಕಾಗಿದೆ: ಈ ದಿವಸ ಇದರ ಅವಶ್ಯಕತೆ ಬಹಳ ಬೇಕಾಗಿದೆ. ಶ್ರೀ ಹುಚ್ಚ ಮಾಸ್ತಿಗೌಡರು ಈಗಾಗಲೇ ಏನೆಂದು ಆಪಾದನೆ ಮಾಡಿದ್ದಾರೆ ಅದರ ಬಗ್ಗೆ ಅವರಿನ್ನೂ ಸಾಹಿತ್ಯವನ್ನು ಮತ್ತು ಸಾಕ್ಷವನ್ನು ಸಂಗ್ರಹಣೆ ಮಾಡಿಕೊಳ್ಳಲಿ, ಆದರೆ ಅವರು ಇದರ ಬಗ್ಗೆ ವಿಚಾರಣೆ ನಡೆಸಲು ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಕಮಿಟಿಯನ್ನು ಮಾಡಬೇಕೆಂದು ಕೇಳಿದ್ದಾರೆ. ಹಾಗೆ ಅದನ್ನು ಮಾಡಿದರೆ ಸರ್ಕಾರಕ್ಕೆ ವೃಥಾ ಅಪಾರವಾಗಿ ದುಡ್ಡು ವ್ಯಯವಾಗುತ್ತದೆ. ಸಂಬಳ ಸಾರಿಗೆಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಅದಕ್ಕೆಲ್ಲಾ ಸರ್ಕಾರದಲ್ಲಿ ಈಗ ಹಣವಿಲ್ಲ. ಅದಕ್ಕಾಗಿ ನಾನೀಗ ಏನು ಒಂದು ಸಲಹೆ ಮಾಡುತ್ತಿದ್ದೇನೆ ಎಂದರೆ ಈಗಾಗಲೇ ಆ ಮಾನ್ಯ ಸದಸ್ಯರು ಏನು ನನ್ನ ಮೇಲೆ ಒಂದು ಚಾರ್ಜನ್ನು ತಂದಿದ್ದಾರೆ ಅದನ್ನು ಅವರು, ಈ ಮನೆಯಲ್ಲಿ ಮಾಡಿದ್ದರಿಂದ ಇಲ್ಲಿ ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಬರುವಂತಿಲ್ಲ. ಆದ್ದರಿಂದ ಅವರು ಇದೇ ಚಾರ್ಜನ್ನು ಅಪಾದನೆಗಳನ್ನು ಈ ಮನೆಯ ಹೊರಗಡೆ ನನ್ನ ಮೇಲೆ ಮಾಡಲಿ ಆಗ ನಾನು ಅವರ ಬಗ್ಗೆ ನ್ಯಾಯಾಲಯದಲ್ಲಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶವುಂಟಾಗುತ್ತದೆ. ಇದೊಂದು ಸ್ಪೋರ್ಟಿವ್ ಆಫ್‌ರ ಎಂದು ಅವರು ಭಾವಿಸಬೇಕು. ಅವರ ಅಪಾದನೆಯಲ್ಲಿ ಏನಾದರೂ ಸತ್ಯವಿದ್ದರೆ ಅದರಿಂದ ನಾನು ಮಾಡತಕ್ಕ ಮಾನನಷ್ಟ ಮೊಕದ್ದಮ್ಮೆಯಲ್ಲಿ ನನಗೆ ಕೆಡುಕಾಗುತ್ತದೆ. ಹಾಗೆ ಅವರ ಅಪಾದನೆಗಳನ್ನು ಸತ್ವವಿಲ್ಲ ಎಂದಾಗ ಅವರು ಅದರ ಬಗ್ಗೆ ಶಿಕ್ಷೆಯನ್ನು ಇಲ್ಲವೇ ಜುಲ್ಮಾನೆಯನ್ನು ಅನುಭವಿಸಬೇಕಾಗುತ್ತದೆ. ಹೀಗಿರುವುದರಿಂದ ಈ ಮನೆಯಲ್ಲಿ ಯಾರು ವೈಯಕ್ತಿಕವಾಗಿ ವೀರೇಂದ್ರ ಪಾಟೀಲರು ಹೀಗೆ ಮಾಡಿದ್ದಾರೆಂದು ಇಲ್ಲಿ ಆಪಾದನೆಗಳನ್ನು ಮಾಡುತ್ತಾರೋ ಅವರು ಇಲ್ಲಿ ಮಾಡುವುದರ ಬದಲು ಬೇರೆ ಹೊರಗಡೆಯಲ್ಲಿ ಮಾಡಲಿ ಆಗ ನಾನು ಅವರ ಬಗ್ಗೆ ಡೆಫಮೇಷನ್‌ಗೆ ಕೇಸ್ ಹಾಕುತ್ತೇನೆ. ಆ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್.ಎಸ್. ನಂಜೇಗೌಡ :-

ನಾವು ರಾಜ್ಯಕ್ಕೆ ಸಂಬಂಧಪಟ್ಟ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಮಂಗಳೂರು ಗೊಬ್ಬರ ಕಾರ್ಖಾನೆ ವಿಚಾರದಲ್ಲಿ ಏನಾದರೂ ಭಾಷಣಗಳನ್ನು ಹೊರಗಡೆ ಮಾಡಿದರೆ ಅಗಲೂ ಅವು ಡಿಫಮೇಷನ್‌ಗೆ ಅವಕಾಶ ಮಾಡಿಕೊಡುತ್ತವೆಯೇ ?

ಶ್ರೀ ಎಂ. ನಾಗಪ್ಪ:-

Sir, I raise to a point of order. The chair knows what is the scope of personal explanation of a member. my point of order is under rule 293 read with rule 311 whether the Chief Minister can

raise such matters which are debatable. I request the chair to direct the Chief Minister not to refer to such matters on the floor of the house which amount to a threat not only to the member who has made the allegation but to every member.

**Mr. Speaker** :- I have very carefully intened to what the Chief Minister was saying. In fact, he said that there is no truth in the allegataion made by the Hon. 'member and in support of his statement he made a sporting offer to the hon.' member asking him to make the same statement outside the House, so that its veracity could be tested in a court of law. I do not find anything irrelevent in what the Chief Minister has said. It is just a supporting offer made by the Chief Minister. Therefore there is no point of order.

ಶ್ರೀ ವೀರೇಂದ್ರ ಪಾಟೀಲ್ :-

ಅನೇಕ ಸದಸ್ಯರು ಆಕ್ಷೇಪಣೆ ಎತ್ತಿದ್ದಿರಲಿ, ಮಾನ್ಯ ನಾಗಪ್ಪನವರು ಆಕ್ಷೇಪಣೆ ಎತ್ತಿದ್ದನ್ನು ನೋಡಿ ನನಗಂತೂ ಬಹಳ ಆಶ್ಚರ್ಯವಾಗಿದೆ. ಸರ್ಕಾರದ ಪರವಾಗಿ ನನ್ನನ್ನು ಆರೋಪಣೆ ಮಾಡುವುದಕ್ಕೂ ಮತ್ತು ನನ್ನನ್ನು ವೈಯಕ್ತಿಕವಾಗಿ ದೂಷಣೆ ಮಾಡುವುದಕ್ಕೂ ಮತ್ತು ನನ್ನ ಮೇಲೆ ಆಪಾದನೆ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿ ಈಗ ಉದ್ಭವಿಳಿಸಿರತಕ್ಕದ್ದು ನನ್ನ ವೈಯಕ್ತಿಕವಾದ ವಿಚಾರ, ನಾನು ಪೂನಾದಲ್ಲಿ ಯಾವುದೋ ಒಂದು ಇಂಡಸ್ಟ್ರಿಯಲ್ಲಿ ನನ್ನ ವೈಯಕ್ತಿಕ ಬಂಡವಾಳವನ್ನು ಹಾಕಿದ್ದೇನೆಂದೂ ಅದನ್ನೂ ರುಜುವಾತು ಮಾಡುವುದಕ್ಕೆ ಶ್ರೀ ಹುಚ್ಚು ಮಾಸ್ತಿಗೌಡರು ತಯಾರಾಗಿರುವುದಾಗಿಯೂ ಇಲ್ಲಿ ಒಂದು ಆಪಾದನೆ ಮಾಡಿದ್ದಾರೆ. ಅದಕ್ಕಾಗಿ ಒಂದು ಜುಡಿಷಿಯಲ್ ಬಾಡಿಯನ್ನು ವಿಚಾರಣೆಗಾಗಿ ಅಪಾಯಿಂಟ್ ಮಾಡಬೇಕೆಂದೂ ಅವರು ಕೇಳಿದ್ದ ಸಂದರ್ಭದಲ್ಲಿ ನಾನು ಅದನ್ನು ಮಾಡಿದರೆ ಸರ್ಕಾರಕ್ಕೆ ವೃಥಾ ಹಣ ವ್ಯಯವಾಗುತ್ತದೆ, ಆದ್ದರಿಂದ ಅದು ಬೇಡ, ಅದಕ್ಕೆ ನಾನು ಎರಡನೇ ದಾರಿಯನ್ನು ಸೂಚಿಸುತ್ತೇನೆಂದು ಈ ಒಂದು ವಿಚಾರವನ್ನು ಹೇಳಿದೆ.

ಕೋರ್ಟಿನಲ್ಲಿ ಡೆಫಮೇಷನ್ ಸೂಟ್ 'ಈವೊತ್ತು ಹಾಕಿದ್ದೇ ಅದರೆ ಅದನ್ನು ಯಾವ ರೀತಿಯಿಂದ ಬೇಕಾದರೂ ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯ ಇದೆ. ಇಲ್ಲವೇ ಅವರು ಕೋರ್ಟಿನಲ್ಲಿ ಕೇಸ್ ಹಾಕಿದ್ದೇ ಅದರೆ ನಾನು ಅಕ್ಯೂಸ್ಡ್ ಆಗಿಹೋಗುವುದಕ್ಕೆ ಸಿದ್ಧನಿದ್ದೇನೆ. ಗೌರ್ನಮೆಂಟ್ ಮೇಲೆ ಚಾರ್ಜು ಮಾಡುವುದು ಬೇರೆ, ವೈಯಕ್ತಿಕವಾಗಿ ವೀರೆಂದ್ರ ಪಾಟೀಲರ ಮೇಲೆ ಛಾರ್ಜು ಮಾಡುವುದು ಬೇರೆ. ಅದಕ್ಕಾಗಿ ವೀರೇಂದ್ರ ಪಾಟೀಲರ ಮೇಲೆ ಒಂದು ಪರ್ಸನಲ್ ಛಾರ್ಜು ಬಂದಾಗ ಅದು ಜುಡಿಷಿಯರಿ ಡಿಸೈಡ್ ಮಾಡುವುದಕ್ಕೆ ಅವಕಾಶ ಇರಬೇಕು. ಇಲ್ಲದಿದ್ದರೆ ಅವರು ಅಪಾದನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಈ ಮನೆಯಲ್ಲಿ ಏನು ಹೇಳುವುದಕ್ಕೂ ಹಕ್ಕು ಇದೆ. ಸ್ವಲ್ಪಮಟ್ಟಿಗೆ ನನಗೂ ಕಾನೂನು ಗೊತ್ತಿದೆ. ಈ ಮನೆಯಲ್ಲಿ ಏನು ಹೇಳಿದರೂ ಸದಸ್ಯರಿಗೆ ಇಮ್ಯೂನಿಟಿ ಇದೆ. ನಾನು ಡೆಪ್ಯೂಟಿ ಮಿನಿಸ್ಟರ್ ಇದ್ದಾಗ ಡೆಫೆಮೇಷನ್

ಕೇಸ್ ಹಾಕಿದ್ದೇ. ಅಲ್ಲಿ ಏನು ನಡೆಯಿತು ಎನ್ನುವ ವಿಚಾರ ಈಗ ಹೇಳಬೇಕಾಗಿಲ್ಲ ಈ ಮನೆಯಲ್ಲಿ ಹೇಳುವುದಕ್ಕೆ ಇಮ್ಯಾನಿಟಿ ಇದೆ. ಬೇಕಾದ್ದೆಲ್ಲಾ ಹೇಳಬಹುದು ತಾವು ಸ್ಪೀಕರ್ ಸಾಹೇಬರಾಗಿದ್ದೀರಿ. ತಮ್ಮ ವಿಚಾರದಲ್ಲಿ ಯಾರಾದರೂ ಹೇಳಬಹುದು. ಬೇಕಾದಷ್ಟು ದುಡ್ಡು ಮಾಡಿದ್ದಾರೆ, ಬೇಕಾದಷ್ಟು ಆಸ್ತಿಪಾಸ್ತಿ ಮಾಡಿದ್ದಾರೆ ಎಂದು ಹೇಳಬಹುದು. ಇಲ್ಲಿ ಬೇಕು ಬೇಕಾದ್ದು ಹೇಳಬಹುದು. ಏನು ಹೇಳಿದರೂ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇದೆ. ಅದಕ್ಕಾಗಿ ನಾನು ಹೇಳಿದೆ. ಯಾರು ಛಾರ್ಜಸ್ ಮಾಡಿದ್ದಾರೆ ಅವರು ಅದನ್ನು ಧೈರ್ಯದಿಂದ ಪ್ರೂವ್ ಮಾಡಬೇಕೇ ಹೊರತು ಅದು ಬಿಟ್ಟು ಲಾಜ್‌ನಲ್ಲಿ ಯಾರೋ ಏನೋ ಹೇಳಿದರು ಅದು ನನ್ನ ಕಿವಿಗೆ ಬಿತ್ತು ಎಂದು ಅಷ್ಟು ಲಘುವಾಗಿ ಮಾತನಾಡುವ ಸ್ಥಾನವಲ್ಲ.

ಇನ್ನೊಂದು ಮಾತು ಹೇಳುತ್ತೇನೆ. ಛಾರ್ಜಸ್ ಪ್ರೂವ್ ಆದರೆ ಬಹುಶಃ ನನಗೆ ಡಿಸ್ಮಿಸ್ ಆಗುತ್ತದೆ ಎಂದು ಲೆಕ್ಕ ಹಾಕಿದ್ದೇನೆ. ನಾನು ಒಂದು ಸ್ಪೋರ್ಟಿವ್ ಆಫ್‌ರ್ ಕೊಡುತ್ತೇನೆ. ಅವರು ಈ ಕೇಸನ್ನು ಕೋರ್ಟಿಗೆ ತೆಗೆದುಕೊಂಡು ಹೋಗಲಿ. ನಾನು ಕೇವಲ ಮುಖ್ಯಮಂತ್ರಿ – ಸ್ಥಾನ ಬಿಡುವುದು ಮಾತ್ರವಲ್ಲ ರಾಜಕೀಯದಿಂದ ಕೂಡ ನಿವೃತ್ತಿ ಆಗುತ್ತೇನೆ ಅಂತ ವಿನಂತಿ ಮಾಡಿಕೊಳ್ಳುತ್ತೇನೆ. ಅದು ಬಿಟ್ಟು ಏನೋ ಅವರ ಮನಸ್ಸಿಗೆ ಬಂತು, ಅವರ ನಾಲಿಗೆಯಲ್ಲಿ ಬಂತು ಎಂದು ಮಾತನಾಡಿದರೆ ಅದು ಸರಿಯಲ್ಲ. ಈ ಮಾನ್ಯ ಸಭೆಯಲ್ಲಿ ಒಂದು ಡೀಸೆನ್ಸಿ ಇಟ್ಟುಕೊಂಡು ಮಾತನಾಡ ಬೇಕು. ಅದು ಬಿಟ್ಟು ಈ ಸಭೆಯಲ್ಲಿ ಒಬ್ಬರಮೇಲೆ ಇನ್ನೊಬ್ಬರು ಮಣ್ಣನ್ನು ತೂರುವ ಹಾಗೆ ಕೆಲಸ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಚೆನ್ನಯ್ಯ. ಎಸ್:–

ಪೋಲೀಸ್ ಡಿಪಾರ್ಟ್‌ಮೆಂಟ್ ಇವರ ಕೈಯಲ್ಲಿ ಇಟ್ಟುಕೊಂಡಿರುವುದು, ಇವರಿಗೆ ಬೇಕಾದಂಥ ಇನ್‌ಫರ್ಮೇಷನನ್ನು ತಿಳಿದುಕೊಂಡು ಸದಸ್ಯರನ್ನೆಲ್ಲಾ ಹೆದರಿಸುವುದಕ್ಕೆ. ಆದುರಿಂದ ಪೋಲೀಸ್ ಡಿಪಾರ್ಟ್‌ಮೆಂಟ್ ಇವರ ಕೈಯಲ್ಲಿ ಇರಬಾರದು ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ : –

ಅಧ್ಯಕ್ಷರೇ, ಈ ಮಾನ್ಯ ಸಭೆಗೆ ಕಳಕಳಿಯಿಂದ ನಾನು ಮತ್ತೊಮ್ಮೆ ನಿವೇದಿಸಿಕೊಳ್ಳುತ್ತೇನೆ. ಮನುಷ್ಯನಿಗೆ ಎಲ್ಲದಕ್ಕೂ ಪ್ರಿಯವಾದ ವಸ್ತು ಸೆಲ್ಫ್ ರೆಸ್ಪೆಕ್ಟ್. ಒಬ್ಬ ಎಲ್ಲವನ್ನೂ ಸಹಿಸಿಕೊಳ್ಳಬಹುದು. ಆದರೆ ಅವನ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಅದನ್ನು ಸಹಿಸುವುದಕ್ಕೆ ಸಾಧ್ಯ ಇಲ್ಲ. ಅದಕ್ಕಾಗಿ ಈ ವಿಚಾರಗಳನ್ನು ಹೇಳಬೇಕಾಯಿತು. ಯಾರ ಮೇಲೂ ಛಟ ಮಾಡುತ್ತಾ ಇಲ್ಲ. ಹಿಟ್ಲರ್ ಷಾಹಿ ಎಂದು ನನ್ನ ಮೇಲೆ ಒಂದು ಆರೋಪ ಬಂದಿದ್ದರಿಂದ ಅದರಿಂದ ವಿಮುಕ್ತವಾಗಬೇಕಾಗಿದೆ. ಇಲ್ಲದಿದ್ದರೆ ಆರೋಪವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದನ್ನು ಕೇಳುವ ಹಕ್ಕು ಇಲ್ಲ ಎಂದರೆ ಬಹುಶಃ ಈ ಪ್ರಜಾರಾಜ್ಯದಲ್ಲಿ ನಮಗೆ ಏನು ಹಕ್ಕು ಉಳಿದುಹೋಗುತ್ತದೋ ನನಗೆ ಗೊತ್ತಾಗುವುದಿಲ್ಲ.

ಇವೊತ್ತು ಅನೇಕ ವಿರೋಧ ಪಕ್ಷದ ಮಾನ್ಯ ಸದಸ್ಯರು ಇಲ್ಲಿ ಮಾತನಾಡುವುದನ್ನು ನೋಡಿದರೆ ಏನು ಅನಿಸುತ್ತದೆ ಎಂದರೆ ಅವರ ಮನಸ್ಸಿನಲ್ಲಿ ಯಾವುದೇ ವಿಚಾರ ಬರಲಿ, ಈ ಒಂದು ವಿಚಾರ ಇರುವ ಹಾಗೆ ಕಾಣುತ್ತದೆ.

(ಆಧಾರ- ವಿಧಾನಮಂಡಲದ ನಡುವಳಿಕೆಗಳು)

# ಭಾ ಗ - 4

# ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ
# ಮತ್ತು
# ಲೋಕಸಭೆಯ ಸದಸ್ಯರಾಗಿ

# ಭಾ ಗ - 4

## ಕೇಂದ್ರ ಸಚಿವರಾಗಿ ಮತ್ತು ಲೋಕಸಭೆಯ ಸದಸ್ಯರಾಗಿ

1. 1984 (ಏಪ್ರಿಲ್, 19) : ಕಾರ್ಮಿಕ ಸಚಿವರಾಗಿ,

ವಿಷಯ : ಸಮಾಚಾರ ಭಾರತೀಯ, ಆರ್ಥಿಕ ಬಿಕ್ಕಟ್ಟಿನ ಬಗ್ಗೆ, ಕೇಳಿದ ಕೆಲವು ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

2. 1985 (ಮಾರ್ಚ್, 26) : ರಾಸಾಯನಿಕ, ರಸಗೊಬ್ಬರ, ಉದ್ದಿಮೆ ಮತ್ತು ಕಂಪನಿ ವ್ಯವಹಾರಗಳ ಮಂತ್ರಿಗಳಾಗಿ,

ವಿಷಯ : ಗ್ರಾಹಕರ ಉತ್ಪನ್ನಗಳ ತಯಾರಕರಿಂದ ಆಶ್ವಾಸನೆ ಕುರಿತ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

3) 1985 (ಮಾರ್ಚ್, 29) : ರಾಸಾಯನಿಕ, ರಸಗೊಬ್ಬರ, ಉದ್ದಿಮೆ ಮತ್ತು ಕಂಪನಿ ವ್ಯವಹಾರಗಳ ಮಂತ್ರಿಗಳಾಗಿ,

ವಿಷಯ : ಭೋಪಾಲ್ ಗ್ಯಾಸ್ ಲೀಕೇಜಿನ ಮೇಲೆ ಅಮೇರಿಕೆಯ ಯುನಿಯನ್ ಕಾರ್ಬಾಯಿಡ್, ಕಾರ್ಪೋರೇಶ್‌ನಿನಿಂದ ವರದಿಯಾದ ತಾಂತ್ರಿಕ ವರದಿಯ ಬಿಡುಗಡೆ.

4) 1986 (ಏಪ್ರಿಲ್, 24) : ಲೋಕಸಭೆಯ ಸದಸ್ಯರಾಗಿ,

ವಿಷಯ : ಕೇಂದ್ರ ಹಣಕಾಸಿನ ಮಂತ್ರಿ, ಶ್ರೀ ವಿ.ಪಿ. ಸಿಂಗರು ಮಂಡಿಸಿದ ಹಣಕಾಸಿನ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಲೋಕಸಭೆಯ ಸದಸ್ಯರಾಗಿ, ಮಾಡಿದ ಭಾಷಣ.

## 1. ಸಮಾಚಾರ ಭಾರತಿ - ಯ ಆರ್ಥಿಕ ಬಿಕ್ಕಟ್ಟಿನ ಬಗ್ಗೆ - ಕೆಲವು ಪ್ರಶ್ನೆಗಳಿಗೆ ಕೇಂದ್ರದ ಕಾರ್ಮಿಕ ಮಂತ್ರಿ, ಶ್ರೀ ವೀರೇಂದ್ರ ಪಾಟೀಲರ ಉತ್ತರಗಳು. ಏಪ್ರಿಲ್ 19, 1984 - ಲೋಕಸಭೆಯ ನಡುವಳಿಕೆಗಳು

ಪ್ರಶ್ನೆ : ಸದಸ್ಯರಿಂದ :

ಸಮಾಚಾರ ಭಾರತೀಯ ಸಂಸ್ಥೆಯಲ್ಲಿನ ಕಾರ್ಮಿಕರ ಹಳೆಯ ವೇತನ ಕೊಡಲು ಯಾವ ವ್ಯವಸ್ಥೆ ಮಾಡಲಾಗಿದೆ? ಸಮಾಚಾರ ಭಾರತಿಯ ಸಂಸ್ಥೆಯನ್ನು ಸುಧಾರಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ?

ಉತ್ತರ : ಶ್ರೀ ವೀರೇಂದ್ರ ಪಾಟೀಲರಿಂದ

ಈ ಚರ್ಚೆಯಲ್ಲಿ ಒಟ್ಟು 13 ಸದಸ್ಯರು ಭಾಗವಹಿಸಿರುವರು. ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ನಾನು ಕೇಳಿದ್ದೇನೆ. ಎಲ್ಲಾ ಸದಸ್ಯರು ಸಂಸ್ಥೆಯ ಆರ್ಥಿಕ ಹೀನಾಯ ಸ್ಥಿತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಎಲ್ಲಾ ಸದಸ್ಯರು, ಸಮಾಚಾರ ಭಾರತಿ ಮತ್ತು ಹಿಂದುಸ್ಥಾನ ಸಮಾಚಾರ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದಾರೆ. ಕೆಲವು ಸದಸ್ಯರು ಆ ಎರಡೂ ಸಂಸ್ಥೆಗಳನ್ನು ಕಾರ್ಪೋರೇಷನಲ್ಲಿ ವಿಲೀನಗೊಳಿಸಲು ಸಲಹೆಯನ್ನು ನೀಡಿದ್ದಾರೆ. ಆ ಸಂಸ್ಥೆಗಳ ಮೇಲೆ ಸರಕಾರವು ತನ್ನ ಹತೋಟಿಯನ್ನಿಟ್ಟು, ಅವುಗಳನ್ನು ವ್ಯವಸ್ಥಿತ ರೀತಿಯಿಂದ, ನಡೆಸಿಕೊಂಡು ಹೋಗಬೇಕೆಂದು, ಸದಸ್ಯರು ಸೂಚಿಸಿರುವರು.

ನನ್ನ ಮಾಹಿತಿಯ ಪ್ರಕಾರ, ಸಮಾಚಾರ ಭಾರತಿ, ಸಂಸ್ಥೆಯ ನೌಕರರು 22ನೇ ಮಾರ್ಚ್1984 ರಂದು ಮುಷ್ಕರ ಹೂಡಿದ್ದರು. ನಿಜವಾಗಿಯೂ, ನೌಕರರ ಹೇಳಿಕೆಯ ಪ್ರಕಾರ, ಅವರು ಮುಷ್ಕರ ಹೂಡಲಿಲ್ಲ. ಆದರೆ, ಜನರಲ್ ಮ್ಯಾನೇಜರರೇ ಲಾಕ್ ಔಟ್ ಘೋಷಿಸಿದರು. ಈ ಗೊಂದಲದ ಬಗ್ಗೆ ರಾಜ್ಯ ಸಭೆಯಲ್ಲಿ ಚರ್ಚೆಯಾಗಿತ್ತು. ಆ ಗೊಂದಲವನ್ನು ಶಾಂತಿಯುತವಾಗಿ ಬಗೆಹರಿಸಲು, ನಾನು ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳ ಮತ್ತು ಸಮಾಚಾರ ಭಾರತಿ ಸಂಸ್ಥೆಯ ಬೋರ್ಡ್ ಆಫ್ ಡೈರೆಕ್ಟರ್‌ರ ಅಧ್ಯಕ್ಷರ ಜೊತೆ ಚರ್ಚಿಸಿದ್ದೇನೆ. ಆ ಚರ್ಚೆಯ ಫಲವಾಗಿ, ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಸಾಧ್ಯವಾಗಿದೆ.

ಪ್ರಶ್ನೆ : (ರಾಮವತಾರ ಶಾಸ್ತ್ರಿ ) :

ಕಾರ್ಮಿಕ ಕಾನೂನುಗಳ ಉಲ್ಲಂಘನೆಯಾಗಿತ್ತೋ ?

ಉತ್ತರ : ಶ್ರೀ ವೀರೆಂದ್ರ ಪಾಟೀಲ :

ಅದನ್ನು ಆಮೇಲೆ ವಿಚಾರಿಸುತ್ತೇನೆ. ಜನರಲ್ ಮ್ಯಾನೇಜರರ ವಿರುದ್ಧದ ಅಪಾದನೆಗಳಿಂದ ಮೆಮೊರಾಂಡಮ್‌ವನ್ನು ನಾನು ಈಗ ರವಾನಿಸಿದ್ದೇನೆ. ಈ ವಿಷಯವು ಕಂಪನಿ ಲಾ ವಿಭಾಗಕ್ಕೆ ಸಂಬಂಧಿಸಿರುವುದರಿಂದ, ಆ ವಿಭಾಗವೇ ಮ್ಯಾನೇಜ್‌ಮೆಂಟ್ ವಿರುದ್ಧ ಕ್ರಮ ತೆಗೆದುಕೊಳ್ಳ

ಬೇಕಾಗುತ್ತದೆ. ದಿಲ್ಲಿ ಆಡಳಿತ ಮತ್ತು ಬೋರ್ಡ್ ಆಫ್ ಡೈರಕ್ಟರರ ಮಾಹಿತಿಯ ಪ್ರಕಾರ ಬೋರ್ಡ್‌ವು ಜನರಲ್ ಮ್ಯಾನೇಜರ್ ರಾಜೀನಾಮೆಯನ್ನು ಸ್ವೀಕರಿಸಲು ನಿರ್ಧರಿಸಿದೆ. ಅವರ ರಾಜೀನಾಮೆಯನ್ನು ಸ್ವೀಕರಿಸಲಾಗಿದೆ. ಕಾರಣ, ಪ್ರಸ್ತುತ (ಈಗಿರುವ) ಜನರಲ್ ಮ್ಯಾನೇಜರರು ಸಮಾಚಾರ ಭಾರತಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಪ್ರತಿನಿಧಿಗಳಾಗಿರುತ್ತಾರೆ. ಈಗ ಸಮಾಚಾರ ಭಾರತಿ ಆಫೀಸು ಪುನ: ತೆರೆಯಲಾಗಿದೆ. ಈಗ ಅದು ಸಹಜ ಸ್ಥಿತಿಗೆ ಬಂದು, ಕಾರ್ಮಿಕರ ವೇತನವನ್ನು ಒದಗಿಸಲು ವ್ಯವಸ್ಥೆಗಳನ್ನು ಮಾಡಲಾಗಿದೆ.

ಮಾನ್ಯ ಸದಸ್ಯರು ಕಾರ್ಮಿಕರಿಗೆ ಕೊಡಬೇಕಾದ ಬೋನಸ್, ಕೂಲಿ, ವೇತನ ಮತ್ತು ಇತರ ಅನುಕೂಲತೆಗಳ (ಲಾಭಗಳು) ಬಗ್ಗೆ ತಿಳಿಯಲು ಪ್ರಯತ್ನಿಸಿದರು. ದಿಲ್ಲಿಗೆ ಸಂಬಂಧಿಸಿದಂತೆ ನನಗೆ ಮಾಹಿತಿಯು ಲಭಿಸಿದಂತೆ, ದಿಲ್ಲಿಯಲ್ಲಿ, 1981ರ ಸಾಲಿಗಾಗಿ ನೌಕರರು ತಮ್ಮ ಬೋನಸ್ ಪಡೆದಿರುವರು. ನಾನ್ ವರ್ಕಿಂಗ್ ಜರ್ನಲಿಸ್ಟರು, 1981ರ ಸಾಲಿಗಾಗಿ ಬೋನಸ್ ಪಡೆದಿರುವರು. ಆದರೆ, ವರ್ಕಿಂಗ್ ಜರ್ನಲಿಸ್ಟರು, 1981ರ ಸಾಲಿಗಾಗಿ ತಮ್ಮ ಬೋನಸ್‌ನ್ನು, ಅದರ ಭಾಗದಲ್ಲಿ ಪಡೆದಿದ್ದಾರೆ. 1982ರ ಸಾಲಿನ ಬೋನಸ್‌ನ್ನು ಕೊಡಲಾಗಿಲ್ಲ.

ಪ್ರಶ್ನೆ : ಶ್ರೀ ಸತ್ಯನಾರಾಯಣ ಜಾಟಿಯಾ :

ಬೋನಸ್ಸಿನ ದರ ಅಥವಾ ಪ್ರಮಾಣವೆಷ್ಟು ?

ಉತ್ತರ : ಶ್ರೀ ವೀರೇಂದ್ರ ಪಾಟೀಲ

ಕನಿಷ್ಟ ಬೋನಸ್. ಕಂಪನಿಯು ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ ಕನಿಷ್ಟ ಬೋನಸ್ಸಿಗಿಂತ ಹೆಚ್ಚಿನ ಬೋನಸ್ಸು ಕೊಡುವುದು ಕಷ್ಟ.

ಕೂಲಿ ಅಥವಾ ಮಜೂರಿಗೆ ಸಂಬಂಧಿಸಿದಂತೆ, 1983ರ ಡಿಸೆಂಬರ್ ತನಕ ಎಲ್ಲಾ ವರ್ಗದ ಕಾರ್ಮಿಕರಿಗೆ ಅವರ ಮಜೂರಿಯನ್ನು ಕೊಡಲಾಯಿತು. 1984ರ ಜನವರಿ ತನಕ, ನಾನ್ - ವರ್ಕಿಂಗ್ ಜರ್ನಲಿಸ್ಟರ್ ಮಜೂರಿ ಕೊಡಲಾಗಿದೆ. 1984 ಫೆಬ್ರವರಿಯಿಂದ ಮಜೂರಿ ಕೊಡಬೇಕಾಗಿದೆ. ಇದು ದಿಲ್ಲಿ ಕಾರ್ಯಾಲಯದಲ್ಲಿದ್ದ ನೌಕರರ ಸ್ಥಿತಿ.

ರಾಜ್ಯಗಳಿಂದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಬಂದ ಮಾಹಿತಿಯ ಪ್ರಕಾರ, ನೌಕರರ ಸ್ಥಿತಿ ಬಹಳ ಹೀನಾಯವಾಗಿರುತ್ತದೆ. ಕೆಲವು ಪ್ರಸಂಗಗಳನ್ನು ಅವಲೋಕಿಸಿದಾಗ, ತಿಂಗಳುಗಟ್ಟಲೇ ನೌಕರರು ಬೋನಸ್, ಮಜೂರಿ ಮತ್ತು ಇನ್ನಿತರ ಅನುಕೂಲತೆಗಳನ್ನು ಪಡೆದಿಲ್ಲ. ಇದಕ್ಕೆ, ಸಮಾಚಾರ ಭಾರತಿ ಸಂಸ್ಥೆಯ ಹಣಕಾಸಿನ ಬಿಕ್ಕಟ್ಟು ಕಾರಣ.

ಪ್ರಶ್ನೆ : (ಸತ್ಯಾನಾರಾಯಣ ಜಾಟಿಯಾ)

ಈಗ ನೌಕರರು ತಮ್ಮ ಸಂಬಳವನ್ನು ಪಡೆಯುತ್ತಿದ್ದಾರೆಯೇ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ

ಎಲ್ಲಾ ನೌಕರರು, ತಮ್ಮ ಸಂಬಳ, ಬೋನಸ್ ಮತ್ತು ಬಾಕಿಗಳ ಸಂಬಂಧ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಅವರು ಒಪ್ಪಂದ ಮಾಡಿಕೊಂಡ ಒಂದು ಕಾಪಿಯು ನನ್ನಲ್ಲಿದೆ. ಅದನ್ನು ತಾವು ಇಚ್ಛಿಸಿದರೆ, ಸದನದಲ್ಲಿ ಪ್ರಸ್ತುತ ಪಡಿಸುತ್ತೇನೆ.

ಸರಕಾರವು ಆ ಸಂಸ್ಥೆಗಳ ಸ್ವಾಯುತ್ತತೆಯನ್ನು ಇಚ್ಛಿಸುತ್ತದೆ. ಅವುಗಳ ಮ್ಯಾನೇಜಮೆಂಟೇ, ಅವುಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕ್ರಮ ತೆಗೆದುಕೊಳ್ಳಬೇಕು.

## 2. ಗ್ರಾಹಕರ ಉತ್ಪನ್ನಗಳ ತಯಾರಕರಿಂದ ಆಶ್ವಾಸನೆ ಕುರಿತು. ಪ್ರಶ್ನೆಗಳಿಗೆ ಶ್ರೀ ವೀರೇಂದ್ರ ಪಾಟೀಲರ ಉತ್ತರ ಮಾರ್ಚ್ 26, 1985 - ಲೋಕಸಭೆ ನಡುವಳಿಕೆಗಳು.

ಪ್ರಶ್ನೆ : ಶ್ರೀ ಸತ್ಯನಾರಾಯಣ ಸಿನ್ಹಾ :

ಸರಕಾರವು ತಯಾರಕರಿಗೆ ಆಶ್ವಾಸನೆಯನ್ನು ಗೊತ್ತುಪಡಿಸಲು, ಮಾಡೆಲ್ ಆಧಾರದ ಮೇಲೆ ಯಾವುದಾದರೂ ಸೂಚನೆಗಳನ್ನು ನೀಡಲು, ಏನಾದರೂ ಯೋಜನೆ ಹಾಕಿದೆಯೇ ? ಹಾಗಿದ್ದರೆ, ಆ ಯೋಜನೆಯ ಒಂದು ಪ್ರತಿಯನ್ನು ತಯಾರಕರ ಆಫೀಸಿನಲ್ಲಿ ಮತ್ತು ಎಂ. ಆರ್. ಟಿ. ಪಿ. ಆಯೋಗದಲ್ಲಿ ಇಡಬೇಕು.

ಉತ್ತರ : ಶ್ರೀ ವೀರೇಂದ್ರ ಪಾಟೀಲ (ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಉದ್ದಿಮೆ ಮತ್ತು ಕಂಪನಿ ವ್ಯವಹಾರಗಳ ಸಚಿವರಾಗಿ )

ಎಂ.ಆರ್.ಟಿ.ಪಿ. ಆಯೋಗವು ಎಂ.ಆರ್.ಟಿ.ಪಿ. ಕಾಯ್ದೆಯ ಪ್ರಕಾರ ನೇಮಿಸಲಾಗಿದೆ. ಅದು ಒಂದು ನ್ಯಾಯಾಂಗೀಯ ಅಂಗ. ಅಕ್ರಮ ವ್ಯಾಪಾರದ ವ್ಯವಹಾರಗಳನ್ನು, ಈ ಆಯೋಗದ ಗಮನಕ್ಕೆ ತರಲಾಗುತ್ತದೆ. ಆಯೋಗವೇ ಅಂಥ ಅಕ್ರಮ ವ್ಯವಹಾರಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ. ಗ್ರಾಹಕರು ಉತ್ಪನ್ನಗಳನ್ನು ತಯಾರಿಸುವವರು; ಒಂದು ವೇಳೆ ಅಕ್ರಮ ವ್ಯವಹಾರಗಳಲ್ಲಿ ತೊಡಗಿದರೆ, ಅಂಥ ವ್ಯವಹಾರಗಳನ್ನು ಆಯೋಗವೇ ಕಂಪನಿ ಲಾ ಮಿನಿಸ್ಟ್ರೀಯಿಂದ ಬಂದ ದೂರುಗಳ ಆಧಾರದ ಮೇಲೆ ವಿಚಾರಿಸುವ ಅಧಿಕಾರ ಹೊಂದಿರುತ್ತದೆ. ಮತ್ತು ತಯಾರಾಕರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತದೆ.

ಪ್ರಶ್ನೆ : ಶ್ರೀ ಜಗನ್ನಾಥ ರಾವ್

ದೂರಿಗೆ ಸಂಬಂಧಿಸಿಂದತೆ ಯಾರು ನೇರವಾಗಿ ಆಯೋಗಕ್ಕೆ ಹೋಗಲು ಸಾಧ್ಯವಿಲ್ಲ. ಮೊದಲು ಅವರು ತಮ್ಮ ದೂರನ್ನು ಸರಕಾರಕ್ಕೆ ವರದಿ ಮಾಡಬೇಕಾಗುತ್ತದೆ. ನಂತರ, ಸರಕಾರವು ಆಯೋಗಕ್ಕೆ ತಿಳಿಸಬೇಕಾಗುತ್ತದೆ. ಕಾರಣ ಈ ದಿಸೆಯಲ್ಲಿ, ಆಯೋಗಕ್ಕೆ ದೂರು ಸಲ್ಲಿಸುವುದು ಕಠಿಣ. ಆ ದೂರುಗಳನ್ನು ಸರಕಾರಕ್ಕೆ ಸಲ್ಲಿಸುವುದು, ಈ ಸದನದ ಬಹಳ ದಿನದಿಂದ ಬೇಡಿಕೆ ಇದೆ. ಈ ದಿಸೆಯಲ್ಲಿ, ಮಾನ್ಯ ಮಂತ್ರಿಗಳ ಉತ್ತರವೇನು ?

ಉತ್ತರ : ಶ್ರೀ ವೀರೇಂದ್ರ ಪಾಟೀಲ :

ನೊಂದ ಪಾರ್ಟಿಯು ಸರಕಾರಕ್ಕೆ ತನ್ನ ದೂರು ಸಲ್ಲಿಸಲು ಅವಶ್ಯಕತೆ ಇಲ್ಲ. ನೊಂದ ನಾಗರಿಕರು, ಆಯೋಗಕ್ಕೆ ಅಥವಾ ಕಂಪನಿ ಲಾ ಮಿನಿಸ್ಟ್ರಿಗೆ ಅಥವಾ ರಾಜ್ಯ ಸರಕಾರಕ್ಕೆ ತಮ್ಮ ದೂರುಗಳನ್ನು ಸಲ್ಲಿಸಬಹುದು. ಆಯೋಗವು ಸೂಕ್ತ ಕ್ರಮ ತೆಗೆದುಕೊಳ್ಳಲು ವಿಚಾರಣೆ ನಡೆಸಬಹುದು. ಒಂದು ವೇಳೆ ರಾಜ್ಯ ಸರಕಾರವು, ತಯಾರಾಕರು, ಅಕ್ರಮ ವ್ಯವಹಾರಗಳಲ್ಲಿ ತೊಡಗಿದ್ದಾರೆ ಎಂದು ಭಾವಿಸಿದರೆ, ಅವಾಗ, ಆ ಸರಕಾರವು ಆಯೋಗಕ್ಕೆ ಅಂಥ ವಿಷಯವನ್ನು ಪ್ರಸ್ತಾಪಿಸಬಹುದು.

ಪ್ರಶ್ನೆ : ಶ್ರೀ ಎಡು ಆರ್ಡೊ ಫೆಲೆಯಿರೋ :

ಈ ಪ್ರಶ್ನೆಯು ಕೇವಲ ಆಯೋಗಕ್ಕೆ ಸಂಬಂಧಿಸಿರುವುದಿಲ್ಲ. ಇದು ಗ್ರಾಹಕರ ಸಂರಕ್ಷಣೆಗಾಗಿರುವ ಸಾಮಾನ್ಯ ಪ್ರಶ್ನೆ, ಮತ್ತು ಬಹಳ ಗಂಭೀರವಾದ ಪ್ರಶ್ನೆ, ಯಾವಾಗಲೂ ನಮ್ಮ ಗ್ರಾಹಕರನ್ನು ಕಡಿಮೆ ಗುಣಮಟ್ಟದ ಉತ್ಪನ್ನಗಳಿಂದ ಮತ್ತು ಕಲಬೆರಿಕೆಯಿಂದ ಗ್ರಾಹಕರ ವಸ್ತುಗಳು, ಶೋಷಿಸಲಾಗುತ್ತದೆ. ಈ ದಿಸೆಯಲ್ಲಿ, ಇಪ್ಪತ್ತು ಅಂಶ ಕಾರ್ಯಕ್ರಮದ ಅಂಶ ಸಂಖ್ಯೆ 17 (ಗ್ರಾಹಕರ ಸಂರಕ್ಷಣೆಗೆ ಇರುವ), ಅನ್ನು ಬಲಪಡಿಸಲು, ಮತ್ತು ಜಾರಿಯಲ್ಲಿ ತರಲು, ಮಿನಿಸ್ಟ್ರೀಯು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿದೆ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ್ :

ಕಲಬೆರೆಕೆಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಲು ಎಷ್ಟೋ ಸಂಸ್ಥೆಗಳಿದ್ದು, ಆ ಸಂಸ್ಥೆಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು, ಬದ್ಧವಾಗಿ ಕೆಲಸ ಮಾಡುತ್ತವೆ.

ಅದರೆ, ಭ್ರಷ್ಟ ಅಥವಾ ಅಕ್ರಮ ವ್ಯವಹಾರಗಳನ್ನು (ತಯಾರಕರು) ಪರಿಶೀಲಿಸಲು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಲು, ಎಂ.ಆರ್.ಟಿ.ಪಿ. ಕಾಯ್ದೆಯಲ್ಲಿ ; ಸಮರ್ಪಕ ಅವಕಾಶವಿದೆ. ಆ ಕಾಯ್ದೆಯ ಅಡಿಯಲ್ಲಿ, ಆಯೋಗವು ಸೂಕ್ತ ಕ್ರಮ ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.

ಗ್ರಾಹಕರ ಮಂಡಳಿಗೆ ಸಂಬಂಧಿಸಿದಂತೆ, ನನ್ನ ಮಿನಿಸ್ಟಿಗೆ ಸಂಬಂಧವಿಲ್ಲ. ಅದು ಮಿನಿಸ್ಟ್ರಿ ಆಫ್ ಸಿವಿಲ್ ಸೆಪ್ಲೈಸ್ ಅಧೀನದಲ್ಲಿ ಬರುತ್ತದೆ.

ಪ್ರಶ್ನೆ : ಶ್ರೀ ಮಧು ದಂಡವತೆ :

ಮಾನ್ಯ ಮಂತ್ರಿಗಳು, ಲಿಖಿತ ಉತ್ತರದಲ್ಲಿ, ಎಂ.ಆರ್.ಟಿ.ಪಿ. ಅಯೋಗಕ್ಕೆ, ಸರಕಾರದಿಂದ ಯಾವುದೇ ದೂರು ಬಂದಿಲ್ಲವೆಂದು, ತಿಳಿಸಿದ್ದಾರೆ. ಆದರೆ ಅಯೋಗವು ತಯಾರಕರ ವಿರುದ್ಧ 14 ದೂರುಗಳನ್ನು (1984ರಲ್ಲಿ) ಸ್ವೀಕರಿಸಿದೆ. ಎಂ.ಆರ್.ಟಿ.ಪಿ. ಕಾಯ್ದೆ ಸೆಕ್ಷನ್ 63ರ ಪ್ರಕಾರ, ಸರಕಾರವು ವೈಯಕ್ತಿಕ ಅಥವಾ ಆಡಳಿತ ವರದಿಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಬೇಕು. ಮತ್ತು ಆ ದಿಸೆಯಲ್ಲಿ ಅಯೋಗವು ತೆಗೆದುಕೊಂಡ ಕ್ರಮದ ಬಗ್ಗೆಯೂ ತಿಳಿಸಬೇಕು. ಆ ರೀತಿಯಾಗಿ, ಸರಕಾರವು ಕ್ರಮ ತೆಗೆದುಕೊಂಡಿದೆಯೇ ?

ಉತ್ತರ : ಶ್ರೀ ವೀರ್ರೇಂದ್ರ ಪಾಟೀಲ್

ನಾನು, ಆ 14 ದೂರುಗಳ ಪ್ರಕರಣಗಳಲ್ಲಿ, ಅಯೋಗವು ನೀಡಿದ ತೀರ್ಪನ್ನು ಪರಿಗಣಿಸಿದ್ದೇನೆ. ಒಂದು ವೇಳೆ, ಅಂಥ ಪ್ರಕರಣಗಳು, ಸದನಗಳಲ್ಲಿ, ಮಂಡಿಸುವ ಅವಶ್ಯವೆನಿಸಿದರೆ, ಆ ರೀತಿಯಾಗಿ ಮಾಡಲಾಗುತ್ತದೆ.

ಪ್ರಶ್ನೆ : ಶ್ರೀ ದತ್ತಾ ಸಾಮಂತ :

ಮಾನ್ಯರೇ, ಸರಕಾರವು ಗ್ರಾಹಕರ ವಸ್ತುಗಳ ತಯಾರಿಕೆಯನ್ನು ಬಲಪಡಿಸಲು ದೊಡ್ಡ ಉದ್ದಿಮೆದಾರರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಿದೆ. ಇದು ಸರಕಾರದ ಒಂದು ಹೊಸ

ನೀತಿಯಾಗಿದೆ. ಆದರೆ, ಅಜ್ಞಾನದ ಮತ್ತು ಹಿಂದುಳಿದ ಈ ನಮ್ಮ ದೇಶದಲ್ಲಿ, ಗ್ರಾಹಕರನ್ನು ಶೋಷಣೆಗೆ ಗುರಿ ಮಾಡಿ, ದೊಡ್ಡ ಉದ್ದಿಮೆದಾರರು, ತಮ್ಮ ವಸ್ತುಗಳನ್ನು ತಯಾರಿಸುವುದರ ಮೂಲಕ ಬೆಲೆಗಳಲ್ಲಿ ಇಳಿತ ತರಲು ಅಸಮರ್ಥರಾಗಿದ್ದಾರೆ. ಕಾರಣ ಸರಕಾರವು ಎಂ.ಆರ್.ಟಿ.ಪಿ. ಕಾಯ್ದೆಯನ್ನು ತಿದ್ದುಪಡಿ ಮಾಡಿ ಎಂ.ಆರ್.ಟಿ.ಪಿ ಕಂಪನಿಗಳು ತಯಾರಿಸಿದ ಗ್ರಾಹಕರ ವಸ್ತುಗಳ ಬೆಲೆಗಳನ್ನು ಹಿಡಿತದಲ್ಲಿಡಲು, ಕ್ರಮ ತೆಗೆದುಕೊಳ್ಳುವುದಕ್ಕಾಗಿ, ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಉತ್ತರ : ಶ್ರೀ ವೀರೇಂದ್ರ ಪಾಟೀಲ್ :

ಮಾನ್ಯರೇ, ಎಂ.ಆರ್.ಟಿ.ಪಿ. ಕಂಪನಿಗಳು ಅವಶ್ಯಕ ವಸ್ತುಗಳನ್ನು ತಯಾರಿಸುತ್ತಿವೆ. ಕೆಲವು ಜೀವ ಉಳಿಸುವ ಔಷಧಗಳನ್ನು ತಯಾರಿಸುತ್ತಿವೆ. ಆದರೆ, ಗ್ರಾಹಕರ ಹಿತಾಸಕ್ತಿಗಾಗಿ, ಎಲ್ಲಿ ಬೆಲೆಗಳ ನಿಯಂತ್ರಣ ಅವಶ್ಯ ವೆನಿಸುತ್ತದೆಯೋ, ಅಲ್ಲಿ ಸರಕಾರವು ಸೂಕ್ತ ಕ್ರಮ ತೆಗೆದುಕೊಳ್ಳಲು ಪರಿಶೀಲಿಸುತ್ತದೆ. ಎಲ್ಲಿ ಅವಶ್ಯವಿಲ್ಲವೋ ಅಲ್ಲಿ ಕ್ರಮದ ಅವಶ್ಯಕತೆ ಇಲ್ಲ.

ಪ್ರಶ್ನೆ : ಶ್ರೀ ರಾಮಾಶ್ರಯ ಪ್ರಸಾದ ಸಿಂಗ್ :

ಮಾನ್ಯ ಉಪಾಧ್ಯಕ್ಷರೇ, ನಾನು ಹೇಳುವುದೇನೆಂದರೆ, ಕೃಷಿ ಅಭಿವೃದ್ಧಿಗಾಗಿ ತಯಾರಿಸಲ್ಪಡುವ ಡಿಸೇಲ್ ಇಂಜಿನ್‌ಗಳು ಬಹಳ ಕೆಳ ಗುಣಮಟ್ಟದ್ದಿವೆ. ಇದರಿಂದ ನಮ್ಮ ಒಕ್ಕಲಿಗರು, ಎಷ್ಟೋ ರೂಪಾಯಿಗಳ ಹಾನಿಯನ್ನು ಅನುಭವಿಸಿದ್ದಾರೆ. ಅಜೀತ್ ಕಂಪನಿಯು ತಯಾರಿಸಿದ ಈ ಇಂಜಿನನ್ನು ನಮ್ಮ ಒಕ್ಕಲಿಗರು ಎಷ್ಟೋ ರೂಪಾಯಿಗಳ ಹಾನಿ ಅನುಭವಿಸಲು ಕಾರಣವಾಗಿದೆ. ಕಾರಣ, ಅಜೀತ್ ಕಂಪನಿಯ ವಿರುದ್ಧ ವಿಶೇಷ ತನಿಖೆ ನಡೆಸಲು ಸರಕಾರವು, ಏನಾದರೂ ಕ್ರಮ ತೆಗೆದುಕೊಂಡಿದೆಯೇ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ್ :

ಮಾನ್ಯ ಸಭಾಧ್ಯಕ್ಷರೇ ಯಾವುದೇ ಕಂಪನಿಯು ಕೆಳಗುಣಮಟ್ಟದ ವಸ್ತುಗಳನ್ನು ತಯಾರಿಸಿದರೆ, ಖರೀದಿ ಮಾಡುವವರು, ಅಂಥ ವಸ್ತುಗಳನ್ನು ಖರೀದಿಸದೇ, ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಖರೀದಿ ಮಾಡಲು, ಅವರು ಅವುಗಳಿಗೆ ತಕ್ಕ ಬೆಲೆ, ಹಣ ಕೊಡುತ್ತಾರೆ. ಒಂದು ವೇಳೆ, ಯಾವುದೇ ಕಂಪನಿಯು ಕೆಳಗುಣಮಟ್ಟದ ವಸ್ತುಗಳನ್ನು ತಯಾರಿಸಿದರೆ, ಆ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಯಾವ ಬೆಲೆಯೂ ಸಿಗದಂತಾಗುತ್ತದೆ. ಅಂಥ ಕಂಪನಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು, ನ್ಯಾಯಾಂಗೀಯ ಅಧಿಕಾರಿಗಳ ಆಯೋಗವಿದೆ. ಅತೀ ಅವಶ್ಯಕ ವಸ್ತುಗಳಿಗಾಗಿ, (ತಯಾರಿಕೆಗಾಗಿ), " ಅವಶ್ಯಕ ವಸ್ತುಗಳ ಕಾಯ್ದೆಯಲ್ಲಿ" ಅವಕಾಶವಿದೆ. ಇದಲ್ಲದೇ ಕಂಪನಿಗಳು, ಕೆಳಗುಣಮಟ್ಟದ ವಸ್ತುಗಳನ್ನು, ತಯಾರಿಸುವುದರ ವಿರುದ್ಧ, ಸೂಕ್ತ ಕ್ರಮ ತೆಗೆದುಕೊಳ್ಳಲು "ಔದ್ಯಮಿಕ ಅಭಿವೃದ್ಧಿ ಕಾಯ್ದೆ " ಯಲ್ಲಿಯೂ ಅವಕಾಶವಿದೆ. ಇಂಥ ಅಕ್ರಮ ವ್ಯವಹಾರಗಳನ್ನು ಸರಕಾರದ ಗಮನಕ್ಕೆ ತರುವುದು ಸೂಕ್ತ.

3. ಭೋಪಾಲ್ ಗ್ಯಾಸ್ ಲೀಕೇಜಿನ ಮೇಲೆ, ಅಮೇರಿಕೆಯ ಯುನಿಯನ್ ಕಾರ್ಬಾಯಿಡ್ ಕಾರ್ಪೋರೇಷನ್‌ನಿಂದ, ವರದಿಯಾದ ತಾಂತ್ರಿಕ ವರದಿಯ ಬಿಡುಗಡೆ. ಮೇಲಿನ ಪ್ರಶ್ನೆಗಳಿಗೆ ರಸಾಯನಿಕ ಮತ್ತು ರಸಗೊಬ್ಬರ ಮತ್ತು ಉದ್ಧಿಮೆ ಮತ್ತು ಕಂಪನಿ ವ್ಯವಹಾರಗಳ ಮಂತ್ರಿಗಳಾಗಿ, ಶ್ರೀ ವೀರೇಂದ್ರ ಪಾಟೀಲರು ನೀಡಿದ ಉತ್ತರಗಳು. ಮಾರ್ಚ್ 29, 1985.

ಪ್ರಶ್ನೆ : ಪ್ರೊಫೆಸರ್ ಕೆ.ಕೆ. ತಿವಾರಿ :

ಎ) ಭೋಪಾಲ್ ಗ್ಯಾಸ್ ಲೀಕೇಜಕ್ಕೆ ಸಂಬಂಧಿಸಿದ, ಅಮೆರಿಕೆಯ ಕಾರ್ಬಾಯಿಡ್ ಕಾರ್ಪೋರೇಶನ್‌ನಿಂದ, ಬಿಡುಗಡೆ ಮಾಡಲ್ಪಟ್ಟ ವರದಿಯನ್ನು ಸರಕಾರದ ಗಮನಕ್ಕೆ ತರಲಾಗಿಯೇ?

ಬಿ) ಅಮೇರಿಕೆಯ ಕಾರ್ಬಾಯಿಡ್ ಕಾರ್ಪೋರೇಶನವು ಆ ಅನಾಹುತದ ಪೂರ್ಣ ಜವಾಬ್ದಾರಿಯನ್ನು ಭಾರತೀಯರ ಮೇಲೆ ಹೊರಿಸಿದೆಯೇ ?

ಸಿ) ಹಾಗಿದ್ದಲ್ಲಿ ಸರ್ಕಾರದ ಪ್ರತಿಕ್ರಿಯೆಗಳೇನು ?

ಉತ್ತರ : ಶ್ರೀ ವೀರೇಂದ್ರ ಪಾಟೀಲ (ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಉದ್ದಿಮೆ ಮತ್ತು ಕಂಪನಿ ವ್ಯವಹಾರಗಳ ಮಂತ್ರಿಗಳು)

ಎ) ಹೌದು ಮಾನ್ಯರೇ,

ಬಿ) ಅಮೇರಿಕೆಯ ಯುನಿಯನ್ ಕಾರ್ಬಾಯಿಡ್ ಕಾರ್ಪೋರೇಶನ್ನಿನ ವರದಿಯ ನಿರ್ಧಾರಗಳು ಪೂರ್ಣ ಸಾಕ್ಷಿಯ ಆಧಾರ ಹೊಂದಿಲ್ಲ. ಅವು ಕೇವಲ ಊಹಾಪೋಹಗಳು. ಆದರಲ್ಲಿನ ವರದಿ ಮಾಡಲ್ಪಟ್ಟ ಹೇಳಿಕೆಗಳು ಅಷ್ಟು ಸಮಂಜಸವಲ್ಲ. ಹೇಳಿಕೆಗಳು, ಯಾವುದೇ ಮಾಹಿತಿಯ ಆಧಾರದ ಮೇಲೆ ಅವಲಂಬಿಸಿರುವುದಿಲ್ಲ.

ಪ್ರಶ್ನೆ : ಶ್ರೀ ಕೆ.ಕೆ. ತಿವಾರಿ ;

ಕಾರ್ಪೋರೇಶ್‌ನವು ಆ ಅನಾಹುತದ ಬಗ್ಗೆ ತನ್ನ ಪೂರ್ಣ ಜವಾಬ್ದಾರಿಗಳಿಂದ ಕೈ ತೊಳೆದುಕೊಳ್ಳುವ ಹಾಗಿದೆ. ಕಾರಣ, ಮಾನ್ಯ ಮಂತ್ರಿಗಳಿಂದ, ನಾನು ತಿಳಿಯ ಬಯಸುವುದೇನೆಂದರೆ, ಆ ತಾಂತ್ರಿಕ ವರದಿಯು ಯಾವಾಗ ಬಂತು ? ಮತ್ತು ಅದನ್ನು ಯಾವಾಗ ಪ್ರಕಟಿಸಲಾಯಿತು ?

ಉತ್ತರ : ಶ್ರೀ ವೀರೇಂದ್ರ ಪಾಟೀಲ :

ನನ್ನ ಮಾಹಿತಿಯ ಪ್ರಕಾರ, ಆ ವರದಿಯನ್ನು 20 ಮಾರ್ಚ್, 1985ರಲ್ಲಿ, ಕಾರ್ಪೋರೇಶನ್ನಿನ ಅಧ್ಯಕ್ಷರಿಂದ ಬಿಡುಗಡೆ ಮಾಡಲಾಯಿತು.

ಪ್ರಶ್ನೆ : ಮಧು ದಂಡವತೆ :

ಭೋಪಾಲಿನ ಅನಾಹುತದಿಂದ, ನೊಂದ ಜನರ ಪ್ರಕರಣವನ್ನು ನ್ಯಾಯಾಲಯಗಳ ಹೊರಗೆ ಇತ್ಯರ್ಥಗೊಳಿಸುವ ಪ್ರಕರಣ, ನಿಜವಾಗಿಯೂ ಅನ್ಯಾಯದ ಕೆಲಸ. ಕಾರಣ, ಈ ಪ್ರಕರಣವನ್ನು, ನ್ಯಾಯಾಲಯಗಳ, ಹೊರಗೆ ಇತ್ಯರ್ಥಗೊಳಿಸಬಾರದೆಂದು, ಏನಾದರೂ ಈ ಸದನಕ್ಕೆ ಭರವಸೆ ನೀಡುತ್ತೀರಾ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ

ಈ ಮಸೂದೆಯ ಮೇಲೆ ಚರ್ಚೆಯಾಗಿದೆ. ಮಸೂದೆಯ ಅವಕಾಶಗಳ ಪ್ರಕಾರ, ಭಾರತ ಸರ್ಕಾರಕ್ಕೆ ಈ ಪ್ರಕರಣವನ್ನು ಇತ್ಯರ್ಥಗೊಳಿಸಲು ಮೂರು ಮಾರ್ಗಗಳಿವೆ.

1) ಅಮೇರಿಕೆಯ ನ್ಯಾಯಾಲಯಗಳಲ್ಲಿ ದಾವೆಗಳನ್ನು ಸಲ್ಲಿಸುವುದು.

2) ಭಾರತದ ನ್ಯಾಯಾಲಯಗಳಲ್ಲಿ ಪ್ರಕರಣಗಳ ದಾಖಲಾತಿ.

3) ನ್ಯಾಯಾಲಯದ ಹೊರಗಡೆ, ಒಂದು ಸಂಧಾನಕ್ಕೆ ಬರುವುದು.

ಈ ಪ್ರಕರಣವನ್ನು ಇತ್ಯರ್ಥಗೊಳಿಸಲು, ನೊಂದವರ ಹಿತಾಸಕ್ತಿಗಳಿಗೆ ಆದ್ಯತೆ ಕೊಡಲಾಗುತ್ತದೆ. ಕಾರಣ, ಸರಕಾರದ ಮೇಲೆ ಯಾವುದೇ ತರಹದ ಒತ್ತಡ ತರುವ ಪ್ರಶ್ನೆಯೇ ಇಲ್ಲ.

ಪ್ರಶ್ನೆ : ಈ. ಅಯ್ಯಪ್ಪ ರೆಡ್ಡಿ :

ಯುನಿಯನ್ ಕಾರ್ಬಾಯಿಡ್‌ದ ಪ್ರಮುಖ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ಕೇಸ್ ನೊಂದಣಿಯಾದ ಬಗ್ಗೆ ಏನಾಯಿತು ? ಅವನಿಗೆ ಮೊದಲು ಜಾಮೀನು ಸಿಗಲಿಲ್ಲ. ನಂತರ ಅವನಿಗೆ ಆ ಜಾಮೀನು ಸಿಕ್ಕಿತು. ಆ ತನಿಖೆ ಪೂರ್ಣ ಗೊಂಡಿತೆ ? ಅವನ ವಿರುದ್ಧ ಸರಕಾರವು ಆರೋಪ ಪಟ್ಟಿಯನ್ನು ದಾಖಲು ಮಾಡಿದೆಯೇ ?

ಉತ್ತರ : ಶ್ರೀ ವೀರೇಂದ್ರ ಪಾಟೀಲ್ :

ಮಧ್ಯ ಪ್ರದೇಶ ಸರಕಾರವು ಪ್ರಕರಣವನ್ನು ಪ್ರಾರಂಭಿಸಿದೆ, ಅಲ್ಲದೆ, ಪ್ರಕರಣವನ್ನು ನೊಂದಾಯಿಸಿ, ಅದನ್ನು ತನಿಖೆ ಮಾಡಲು, ಆ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಿಕೊಡಲಾಗಿದೆ. ಸಿ.ಬಿ.ಐ ಆ ತನಿಖೆಯನ್ನು ಮಾಡುತ್ತಿದೆ. ಮತ್ತು ಆ ತನಿಖೆ ನಡೆಯುತ್ತಿದೆ.

## 4. ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ವಿ.ಪಿ. ಸಿಂಗರು ಮಂಡಿಸಿದ ಹಣಕಾಸಿನ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಲೋಕಸಭೆಯ ಸದಸ್ಯರಾಗಿ, ಶ್ರೀವೀರೇಂದ್ರ ಪಾಟೀಲರ ಭಾಷಣ: (ಏಪ್ರಿಲ್, 24,1986).

ಮಾನ್ಯ ಉಪಾಧ್ಯಕ್ಷರೇ

ನಾನು ಹಣಕಾಸಿನ ಮಸೂದೆಯನ್ನು ಬೆಂಬಲಿಸುತ್ತೇನೆ. ಯಾವಾಗ ನಾವು ಬಜೆಟಿನ ಸೂಚನೆಗಳನ್ನು ಚರ್ಚಿಸುತ್ತೇವೆಯೋ, ಎರಡೂ ಬದಿಗಳಿಂದ ಹೆಚ್ಚಿನ ರಿಯಾಯಿತಿಗಳು ಸಿಗುವಂತೆ ಪ್ರಯತ್ನಿಸಬೇಕು. ಅಭಿವೃದ್ಧಿಯ ಕೆಲಸಗಳಿಗಾಗಿ ಬೇಕಾಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಹಣಕಾಸಿನ ಮಂತ್ರಿಗಳ ಮುಖ್ಯ ಜವಾಬ್ದಾರಿಯಾಗಿದೆ. ನಾವು ಶ್ರೀಮಂತ ದೇಶಗಳ ಬಡ ಜನರು. ನೈಸರ್ಗಿಕ ಸಂಪನ್ಮೂಲಗಳಲ್ಲಿ, ನಮ್ಮ ದೇಶ ಅತೀ ಶ್ರೀಮಂತ ದೇಶವಾಗಿದೆ. ಮತ್ತು ಚೀನಾದ ನಂತರ, ಮಾನವ ಸಂಪನ್ಮೂಲಗಳಲ್ಲಿ, ನಮ್ಮ ದೇಶ ಎರಡನೆಯ ಸ್ಥಾನದಲ್ಲಿದೆ. ಈ ಎರಡೂ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಲು, ಹಣಕಾಸಿನ ಸಂಪನ್ಮೂಲಗಳು ಬೇಕು. ನಮ್ಮ ಎಲ್ಲಾ ಯೋಜನೆಗಳು ಯಶಸ್ವಿಯಾಗಬೇಕಾದರೆ, ಆ ಮೂರು ಸಂಪನ್ಮೂಲಗಳ ಬಳಕೆ ಮುಖ್ಯವಾದದ್ದು. ಏಳನೇಯ ಯೋಜನೆಯಲ್ಲಿ ಸಾರ್ವಜನಿಕ ಕ್ಷೇತ್ರವಾಗಿ, ನಾವು ಒಂದು ಕೋಟಿ ಎಂಭತ್ತು ಸಾವಿರ ( 1,00,80,000) ರೂಪಾಯಿಯ ಸಂಪನ್ಮೂಲಗಳನ್ನು ಹೆಚ್ಚಿಸಬೇಕಾಗಿದೆ. ಅದನ್ನು ಹೆಚ್ಚಿಸದಿದ್ದರೆ, ನಾವು ಕೊರತೆಯ ಅರ್ಥ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅದರಿಂದ ನಮ್ಮ ಸಮಾಜ ಮತ್ತು ನಮ್ಮ ದೇಶದ ಮೇಲೆ ದುಷ್ಪರಿಣಾಮವುಂಟಾಗುತ್ತದೆ. ಕಾರಣ, ದೊಡ್ಡ ಉದ್ಧಿಮೆಗಳನ್ನು ಸ್ಥಾಪಿಸಲು ಮತ್ತು ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಲು, ಹಣಕಾಸಿನ ಮಂತ್ರಿಗಳು ಯಾವ ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಯಲು ನಾನು ಬಹಳ ಉತ್ಸುಕನಾಗಿದ್ದೇನೆ. 1952 ರಿಂದ ಯೋಜನೆ ಪ್ರಾರಂಭವಾದಂದಿನಿಂದ, ಎಷ್ಟೋ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಅದನ್ನು ದೇಶದ ಸಮಗ್ರ ಅಭಿವೃದ್ಧಿಗಾಗಿ ವಿನಿಯೋಗಿಸಲಾಗಿದೆಯೇ ? ನನ್ನ ಅಭಿಪ್ರಾಯದಲ್ಲಿ, ವಿನಿಯೋಗದ ಸಾಮರ್ಥ್ಯ ಶೇಕಡಾ 60 ಪ್ರತಿಶತ ರಿಂದ ಶೇಕಡಾ 65 ಪ್ರತಿಶತಕ್ಕಿಂತ ಹೆಚ್ಚಾಗಿರುವುದಿಲ್ಲ. ಅಂದರೆ, ಅದರ ಅರ್ಧದಷ್ಟು ಸಾಮರ್ಥ್ಯ ವ್ಯರ್ಥವಾಗಿ ಉಳಿಯುತ್ತದೆ. ಕಾರಣ, ದೇಶದ ಉತ್ಪಾದನೆ ಮತ್ತು ಸಂಪತ್ತು ಕುಂಠಿತಗೊಂಡಿದೆ.

ಕಾರಣ, ಯಾವಾಗ ಸಂಪನ್ಮೂಲಗಳು ಕಡಿಮೆ ಇರುತ್ತವೆಯೋ, ಹಣಕಾಸು ಮಂತ್ರಿಗಳು ಆ ಕಡಿಮೆಯಿರುವ ಸಂಪನ್ಮೂಲಗಳನ್ನು ಇನ್‌ವೆಸ್ಟ್ ಮಾಡಿ, ಅವುಗಳ ಉಪಯೋಗದ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಆ ಸಾಮರ್ಥ್ಯ 100ಕ್ಕೆ 100ರಷ್ಟು ಆಗಬೇಕೆಂಬ ನನ್ನ ಅಭಿಪ್ರಾಯವಲ್ಲ.

ಮಾನ್ಯರೇ, ಅಭಿವೃದ್ಧಿಯ ಪೂರ್ವಭಾವಿ ವ್ಯವಸ್ಥೆಯ ಮುಖ್ಯ ಸಾಧನ ಅಂದರೆ, ವಿದ್ಯುಚ್ಛಕ್ತಿ. ಅದರ ಇವತ್ತು ಸ್ಥಿತಿ ಏನಿದೆ ? ಪ್ರತಿಯೊಂದು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕಡಿತ ಇದೆ. ಕೆಲವು ರಾಜ್ಯಗಳಲ್ಲಿ, ಈ ತರಹದ ಕಡಿತ ಇಲ್ಲದಿರಬಹುದು.

ಏಳನೇಯ ಯೋಜನೆಯಲ್ಲಿ ವಿದ್ಯುಚ್ಛಕ್ತಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಏಕೆಂದರೆ, ವಿದ್ಯುಚ್ಛಕ್ತಿಯಿಲ್ಲದೆ, ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೆರವೇರಿಸಲು ಸಾಧ್ಯವಿಲ್ಲ.

ವಿದ್ಯುಚ್ಛಕ್ತಿಗಾಗಿ, ಈ ಮೊದಲು 54,000 ಕೋಟಿ ರೂಪಾಯಿಗಳನ್ನು ಸೂಚಿಸಲಾಗಿತ್ತು. ಆದರೆ, ಅದನ್ನು 34,000 ಕೋಟಿ ರೂಪಾಯಿಗಳಿಗೆ ಇಳಿಸಲಾಯಿತು. ಇದರಿಂದ ಅಭಿವೃದ್ಧಿಯ ಪೂರ್ವ ಭಾವಿ ವ್ಯವಸ್ಥೆ ಕುಂಠಿತವಾಗುತ್ತದೆ.

(ಆಧಾರ - ಲೋಕಸಭೆಯ ನಡುವಳಿಕೆಗಳು)

ಭಾ ಗ - 5

# ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಗಳಾಗಿ

# ಭಾಗ - 5

## ಎರಡನೇ ಬಾರಿಗೆ

## ರಾಜ್ಯದ ಮುಖ್ಯಮಂತ್ರಿಗಳಾಗಿ

1) 1990 (ಮಾಚ್, 20) ಮುಖ್ಯಮಂತ್ರಿಗಳಾಗಿ,

ವಿಷಯ : ನಿಲುವಳಿ ಸೂಚನೆಯ ಮಂಡನೆಗೆ ಅನುಮತಿ ಕೋರಿಕೆ ರಾಜ್ಯದ ರೈತರ ಸಹಕಾರಿ ಸಂಘಗಳ ಸಾಲವನ್ನು ಮನ್ನಾ ಮಾಡುವಂತೆ ರಾಜ್ಯ ಸರಕಾರಕ್ಕೆ ಒತ್ತಾಯ.

2) 1990 (ಜೂನ್, 4) : ಮುಖ್ಯಮಂತ್ರಿಗಳಾಗಿ,

ವಿಷಯ : ಕಾವೇರಿ ಜಲವಿವಾದ ಪ್ರಸ್ತಾವನೆ ಮತ್ತು ಚರ್ಚೆ.

3) 1990 (ಜೂನ್, 6) : ಮುಖ್ಯಮಂತ್ರಿಗಳಾಗಿ,

ವಿಷಯ : ನಿಯಮ 68ರ ಮೇರೆಗೆ ಅಲ್ಪಕಾಲಾವಧಿ - ಚರ್ಚೆ - ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ - ಸ್ಪಷ್ಟೀಕರಣ.

4) 1990 (ಜೂನ್, 6)

ವಿಷಯ : ಬೆಲೆ ಏರಿಕೆಯ ಮೇಲಿನ ಗಮನ ಸೆಳೆಯುವ ನಿಲುವಳಿ - ಕುರಿತು ಚರ್ಚೆಯ ಮೇಲೆ ಸ್ಪಷ್ಟೀಕರಣ.

5) 1990 (ಜೂನ್, 7) :

ವಿಷಯ : ರೈತರ ಸಾಲ ಮನ್ನಾ ಕುರಿತು ಸ್ಪಷ್ಟೀಕರಣ.

6) 1990 (ಜೂನ್, 26) :

ವಿಷಯ : ಟೆಲಿಫೋನ್ ಕದ್ದಾಲಿಕೆ ಹಗರಣದ ಬಗ್ಗೆ ಸ್ಪಷ್ಟೀಕರಣ.

## 1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ ರಾಜ್ಯದ ರೈತರ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯ. (20ನೇ ಮಾರ್ಚ್, 1990)

ಶ್ರೀ ಬಿ.ಎಸ್. ಯಡಿಯೂರಪ್ಪ :-

ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಅತ್ಯಂತ ಪ್ರಮುಖವಾದ ವಿಚಾರವನ್ನು, ನಿಲುವಳಿ ಸೂಚನೆಯ ಮೂಲಕ ಬೇರೆ ವಿಚಾರಗಳನ್ನು ಈ ಸದನದಲ್ಲಿ ಬದಿಗೊತ್ತಿ ಚರ್ಚೆ ಮಾಡಬೇಕೆಂದು ತಮಗೆ ಕಳುಹಿಸಿ ಕೊಟ್ಟಿದೆ. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರ ಈ ರಾಜ್ಯದ ಈ ದೇಶದ ರೈತನ ರಾಷ್ಟ್ರೀಕೃತ ಬ್ಯಾಂಕಿನ 10 ಸಾವಿರ ರೂಪಾಯಿ ಒಳಗಿನ ಎಲ್ಲಾ ಸಾಲವನ್ನೂ ಯಾವುದೇ ಒಂದು ಮಿತಿಯನ್ನು ಅಳವಡಿಸಿದೇ, ಸಾಲವನ್ನು ಮನ್ನಾ ಮಾಡುವಂಥದು ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಆಯಾ ರಾಜ್ಯಗಳಿಗೆ ಸ್ವಲ್ಪ ನೆರವನ್ನು ಕೊಟ್ಟು, ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿರುವ ಸಾಲವನ್ನೂ ಸಹ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡ ವಿಚಾರ ಇವತ್ತು ಎಲ್ಲರಿಗೂ ಗೊತ್ತಿರುವ ಸಂಗತಿ. ತಮ್ಮ ಮೂಲಕ ಈ ಸದನದ ನಾಯಕರಲ್ಲಿ ಹಾಗೂ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಈ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ ಇದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳತಕ್ಕ ಇಚ್ಛೆ ನನಗಿಲ್ಲ. ನಿನ್ನೆ ದಿವಸ ಲಕ್ಷಾಂತರ ಜನ ರೈತರು ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದರು. ಬರಗಾಲಕ್ಕೆ ತುತ್ತಾದ. ಅತಿವೃಷ್ಟಿಗೆ ತುತ್ತಾದ ರೈತರ ಒತ್ತಾಯದ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟು. ಅವರ ಗಮನವನ್ನು ಸೆಳೆಯತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಈಗ ತಮ್ಮ ಮೂಲಕ ಸಭಾನಾಯಾಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡುವಂಥ ಒಂದು ತೀರ್ಮಾನವನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅಳವಡಿಸಿರತಕ್ಕ ಈ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಕೋ-ಟೇಪರೇಟಿವ್ ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಂಡಿರುವ ರೈತ ತ್ರಿಶಂಕೀ ಸ್ವರ್ಗದಲ್ಲಿದ್ದಾನೆ. ಸಾಲ ಮನ್ನಾ ಆಗುವಂಥ ವಾತಾವರಣ ಈ ದೇಶದಲ್ಲಿ ಮಾಡಿರುವಂಥ ಈ ಸಂದರ್ಭದಲ್ಲಿ ಅವನಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದುದು ನಮ್ಮ ಕರ್ತವ್ಯ ಆಗಿದೆ ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯ ಪಕ್ಷ ಸಹಕಾರಿ ಸಂಘಗಳಲ್ಲಿ ಸಾಲದ ವಸೂಲಾತಿಯನ್ನು ತಡೆಯಾಜ್ಞೆ ಕೊಟ್ಟು ಕೇಂದ್ರ ಸರ್ಕಾರ ಏನು ನೆರವನ್ನು ಕೊಡುತ್ತದೆ. ಅದೇ ರೀತಿ ರಾಜ್ಯ ಸರ್ಕಾರವೂ ನೆರವನ್ನು ಕೊಟ್ಟು ಅವನ ರಕ್ಷಣೆಗೆ ಬರಬೇಕು. ಈ ವಿಚಾರದಲ್ಲಿ ಒಂದು ವಿವರವಾದ ಚರ್ಚೆಯ ಅಗತ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸದನದಲ್ಲಿ ಎಲ್ಲರಿಗೂ ಇದರ ಬಗ್ಗೆ ಆಸಕ್ತಿ ಇದೆ ಅತ್ಯಂತ ಅಗತ್ಯ. ಇರುವ ಈ ವಿಷಯದಲ್ಲಿ ತಕ್ಷಣ ತಡೆಯಾಜ್ಞೆ ಕೊಟ್ಟು ರಾಜ್ಯ ಸರ್ಕಾರ ಇವರ ನೆರವಿಗೆ ಬರುವಂಥ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಇದರಲ್ಲಿ ಏನಾದರೂ ಅಡ್ಡಿ ಅತಂಕಗಳು ಇವೆಯೇ ಎಂಬ ಬಗ್ಗೆ ಪೂರ್ಣವಾದ, ವಿವರವಾದ ಚರ್ಚೆ ಆಗುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಈ ನಿಲುವಳಿ ಸೂಚನೆಯ ಮೂಲಕ

ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುತ್ತದೆ. ಬೇರೆ ಬೇರೆ ರಾಜ್ಯಗಳೂ, ಅಲ್ಲಿರುವಂಥ ಮುಖ್ಯ ಮಂತ್ರಿಗಳು ಈ ರೀತಿಯ ಒಂದು ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಸನ್ಮಾನ್ಯ ಸಭಾ ನಾಯಕರು ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ, ತಾವು ಅನುಮತಿಯನ್ನು ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೆಂದ್ರ ಪಾಟೀಲ್ ; –

ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರು ನಿನ್ನೆ ಟಿ.ವಿ.ಇಂಟರ್‌ವ್ಯೂನಲ್ಲಿ ನಾನು ಹೇಳಿದ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಬಜೆಟ್ ವಿವರಗಳು ಆಗ ಬರುತ್ತಿದ್ದವು. ಪೂರ್ತಿಯಾಗಿ ಬಂದಿರಲಿಲ್ಲ. ಆಗ ದೂರದರ್ಶನದ ಅಧಿಕಾರಿಗಳೇ ಬಂದು ನನಗೆ ಸಾಲ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರಕಾರ ಘೋಷಣೆ ಮಾಡಿದೆ ಎಂದು ಹೇಳಿದರು. ನಾನು ಪದೇ ಪದೇ ಅವರಿಗೆ ಇದು ನಿಜವೋ ಎಂದು ಕೇಳಿದೆ. ನನಗೆ ಸ್ವಲ್ಪ ಸಂಶಯ ಇತ್ತು. ಇಲ್ಲ ಇದು ಸಂಪೂರ್ಣ ಸತ್ಯ ನಮ್ಮ ಅಫೀಸ್‌ಗೆ ಇದೀಗ ವರದಿ ಬಂದಿದೆ. ಎಂದಾಗ ನಾನು ಹೇಳಿದೆ ಒಂದು ವೇಳೆ ಕೇಂದ್ರ ಸರಕಾರದವರು ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಬಜೆಟ್ ಮುಖಾಂತರ ಘೋಷಣೆ ಮಾಡಿದ್ದು ನಿಜವಾದಲ್ಲಿ - ನಿಜವಾದಲ್ಲಿ ಎಂಬ ಪದ ನಾನು ಉಪಯೋಗ ಮಾಡಿದ್ದೇನೆ. ಸ್ವಾಗತ ಮಾಡುತ್ತೇನೆ ಎಂದು ಹೇಳಿದೆ. ಮತ್ತು ಕೇಂದ್ರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಎಂಬ ವಿಚಾರವನ್ನು ಹೇಳಿದ್ದೇನೆ. ಇದು ಆದ ಮೇಲೆ ವಿವರಗಳು ಬಂದಾಗ ನನಗೆ ಸ್ವಲ್ಪ ಸಮಾಧಾನವಾದರೂ ಹೆಚ್ಚು ಅಸಮಾಧಾನವಾಯಿತು. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ನಿನ್ನೆ ರಾತ್ರಿ ಏನು ವಿವರಗಳು ಬಂದವು. ಆ ಬಗ್ಗೆ ಇವತ್ತು ಬೆಳಿಗ್ಗೆ ಪತ್ರಿಕೆ ಓದಿದ ಮೇಲೆ ಅದರ ಪುಷ್ಟಿ ಕಡಿಮೆಯಾಗಿದೆ. ಮಾನ್ಯ ಸದಸ್ಯರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೇ. ನುಡಿಯಲ್ಲಿ ಮತ್ತು ನಡೆಯಲ್ಲಿ ವ್ಯತ್ಯಾಸ ಇರಬಾರದು. ಮತ್ತು ಈ ಒಂದು ಹಿನ್ನೆಲೆಯಲ್ಲಿ ಇವತ್ತು ನಾನು ಹೇಳಬೇಕಾಗಿದ್ದರೆ, ಕೇಂದ್ರದ ಹಣಕಾಸು ಮಂತ್ರಿಗಳು ಬಜೆಟ್ ಭಾಷಣದಲ್ಲಿ ಸಾಲ ಮನ್ನಾ ಮಾಡುವುದರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಮತ್ತು ನ್ಯಾಷನಲ್ ಫ್ರಂಟ್ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುವುದರ ಬಗ್ಗೆ ಏನು ಒಂದು ಅಶ್ವಾಸನೆಯನ್ನು ಕೊಟ್ಟಿದ್ದಾರೆ ಇವೆರಡರಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಭೂಮಿ ಅಕಾಶಕ್ಕೆ ಎಷ್ಟು ವ್ಯತ್ಯಾಸ ಇದೆಯೋ ಅಷ್ಟು ವ್ಯತ್ಯಾಸ ಇದೆ ಎನ್ನುವಂಥ ಮಾತನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಸ್ವಾಭಾವಿಕವಾಗಿ ಹೊರಗಡೆಯಿಂದ ಅದಕ್ಕಾಗಿ from outside they are your partners. ಅವರದ್ದು ಯಾವುದೂ ಪ್ರಯತ್ನ ನಿಮ್ಮ ಹುಳುಕನ್ನು ಅರಸುವುದಲ್ಲ ನಮ್ಮ ಹುಳುಕನ್ನು ಅರಸುವುದು. ಅದನ್ನು ಅವರು ಮಾಡಿದ್ದಾರೆ ಅಷ್ಟೇ ಇವತ್ತು ಅವರ ಸ್ಟೇಂಟ್‌ಮೆಂಟ್ ಓದಿ ಹೇಳುತ್ತಿದ್ದೇನೆ. ಹಿಂದೆ ಯಾವ ರೀತಿಯಿಂದ ಭರವಸೆ ಕೊಟ್ಟಿದ್ದರು ಅದನ್ನು ಇವತ್ತು ಟ್ವಿಸ್ಟ್ ಮಾಡಿ, ಯಾವ ರೀತಿಯಿಂದ ಇಂತಹ ಒಂದು ಬೃಹದಾಕಾರವಾದ ಜವಾಬ್ದಾರಿಯಿಂದ ಎಸ್ಕೇಪ್ ಆಗುತ್ತಿದ್ದಾರೆ ಹಾಗೂ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವಂತಹ ಮಾತು ಇದೆ. ಅದನ್ನು ನಾನು ಓದುತ್ತೇನೆ.

ಆ ಸ್ಪೀಚ್ ನಮ್ಮ ಹತ್ತಿರ ಇದೆ. ಬಡವರ ಸಲುವಾಗಿ ಎಷ್ಟು ಕಣ್ಣೀರು ಸುರಿಸಿದ್ದಾರೆ ಎಂಬುದನ್ನು ಹೇಳುತ್ತೇನೆ.

"Over the years, the poor farmers, artisans and weavers have accumulated debt, which they are unable to repay. They have been caught up with vicious circle of indebtendness and low in comes which keep them in perennial poverty. In order to relieve farmers of the burden of debt, an assurance was given in the national front manifesto that relief will be provided to farmers that loans up to Rs. 10000 as on october 2, 1989"

ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಅವರ ನ್ಯಾಷನಲ್ ಫ್ರಂಟ್ ಚುನಾವಣಾ ಪ್ರಣಾಳಿಕೆಯಲ್ಲಿ ಬಂದಿದೆ. ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ ಸಾಲ 10 ಸಾವಿರ ರೂಪಾಯಿಗಳವರೆಗೆ ರೀಜನಲ್ ಗ್ರಾಮೀಣ ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ 10 ಸಾವಿರ ರೂಪಾಯಿಗಳ ಸಾಲ ಮಾತ್ರ ಮನ್ನಾ ಮಾಡುತ್ತೇವೆ ಎನ್ನತಕ್ಕಂಥಾದ್ದು ಇಲ್ಲ. ಬಹುಶ: ಅವರಿಗೆ ನಾವು ಅಧಿಕಾರಕ್ಕೆ ಬರುತ್ತೇವೆಯೋ ಇಲ್ಲವೋ ಎನ್ನುವ ಸಂಶಯದಲ್ಲಿ ಇದ್ದರು. ಏನೋ ಬರೆದು ಬಿಡೋಣ ಏನಾಗುತ್ತದೆ ದೇವರು ಇದ್ದಾನೆ, ಮುಂದೆ ಏನಾಗುತ್ತದೆ, ವಿಚಾರ ಮಾಡೋಣ ಎಂದು ಮಾಡಿದ್ದರೂ ಮಾಡಿರಬಹುದು. ಇವತ್ತು ಅಚಕ್ಕಾಗಿ ನಾನು ಟ್ವಿಸ್ಟ್ ಮಾಡಿದ್ದಾರೆ ಎಂದು ಹೇಳುತ್ತಿರುವುದು ಸಾಲ ಮನ್ನಾ ಮಾಡುತ್ತೇವೆ ಎಂದಾಗ ಇರುವ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಲಿ. ಸಾಲ ಮನ್ನಾ ಮಾಡುವುದಕ್ಕೆ ಏನಾದರೂ ಕಂಡೀಷನ್ ಹಾಕಬೇಕಾದರೆ ಈ ತರಹದಲ್ಲಿ ಸಾಲ ಮಾನ್ನಾ ಮಾಡುತ್ತೇವೆ ಎಂದು ಹೇಳಲಿ. ರೈತರಿಗೆ ಆಗಲಿ ಜನಸಾಮಾನ್ಯರಿಗೆ ಆಗಲಿ ಮತ್ತು ಮತದಾರರಿಗೆ ಆಗಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ನಾವು ಏನು ಹೇಳುತ್ತೇವೆಯೋ ಅದನ್ನು ಸ್ಪಷ್ಟವಾಗಿ ಹೇಳಬೇಕೇ ಹೊರತು ಅದನ್ನು ತಿರುಚಿ ಮುರುಚುವುದಕ್ಕೆ ಅವಕಾಶ ಇಟ್ಟುಕೊಂಡು ಮಾಡುವಂತಹದ್ದಕ್ಕೆ, ಅವಕಾಶ ಇರುವುದಾದರೆ ಅದು ಈ ದೇಶದ ಮತದಾರರಿಗೆ ದ್ರೋಹ ಮಾಡಿದಂತಾಗುತ್ತದೆ. ಚೀಟ್ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಅವರು ಒಪ್ಪಿಕೊಂಡಿದ್ದಾರೆ. ನಮ್ಮ ರೈತರು ಬಹಳ ಕಷ್ಟದಲ್ಲಿದ್ದಾರೆ, ಆರ್ಟಿಜನ್ಸ್ ಬಹಳ ಕಷ್ಟದಲ್ಲಿದ್ದಾರೆ ಅವರಿಗೆ ಸಾಲದ ಹೊರೆ ಬಹಳ ಹೆಚ್ಚಾಗಿದೆ. ಅದಕ್ಕೆ ರಿಲೀಫ್ ಕೊಡಬೇಕು ಎಂದ ಮೇಲೆ ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರತಕ್ಕ ರೈತರು ಮಾತ್ರ ಬಹಳ ಕಷ್ಟದಲ್ಲಿದ್ದಾರೆ ಕೋ- ಆಪರೇಟಿವ್ ಇನ್‌ಸ್ಟಿಟ್ಯೂಶನ್ಸ್‌ಗಳಲ್ಲಿ ಸಾಲ ತೆಗೆದುಕೊಂಡಿರತಕ್ಕಂಥ ರೈತ ಏನೂ ಕಷ್ಟದಲ್ಲಿ ಇಲ್ಲವೆಂದು ಆಯಿತು. ಅದೇ ಪ್ರಕಾರ ಅವರು ಇಂದು ಸಾಲ ಮನ್ನಾ ಮಾಡಿರುವಂತಾದ್ದು. ಮುಂದೆ ಅವರು ಏನು ಹೇಳಿದ್ದಾರೆನ್ನುವುದನ್ನು ನಾನು ಹೇಳುತ್ತೇನೆ. ಅದನ್ನು ನೋಡಿ.

"It is proposed to introduce a scheme for providing debt relief which will have the following features. The relief will be available to borrowers who have taken up to Rs. 10.000 from public sector banks and regional rural banks."

ಏತಕ್ಕೆ? ರಿಲೀಫ್ ಕೊಡುವುದಾದರೆ ಪಬ್ಲಿಕ್ ಸೆಕ್ಟರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರುವವರಿಗೆ ರಿಲೀಫ್ ಏತಕ್ಕೆ ಕೊಡುತ್ತೀರಿ ? ಅವರು ಮಾತ್ರ ರೈತರೇ ? ಉಳಿದವರು ರೈತರಲ್ಲವೇ? ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಸಾಲ ತೆಗೆದುಕೊಂಡಿರತಕ್ಕಂಥವರು ರೈತರು ಅಲ್ಲವೇ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ.

"Relief will be available to borrowers who have taken up to Rs. 10.000 from public sector banks and regional banks."

ಎಂದು ಹೇಳಿದ್ದಾರೆ, ನಾನು ಕೇಳುತ್ತೇನೆ. ನೀವು ಏನು ಹೇಳಿದ್ದೀರೋ ಅದು ನೆನಪು ಇರುತ್ತದೆ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ 10 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆ. ಆದರೆ ರೈತರು ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರಬೇಕು. ಇಲ್ಲಾ ರೀಜನಲ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರಬೇಕು. ಅವರಿಗೆ ಮಾತ್ರ ಸಾಲ ಮಾನ್ನಾ ಮಾಡುತ್ತೇವೆ. ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿರತಕ್ಕಂಥ ರೈತರ ಸಾಲ ಮನ್ನಾ ಮಾಡುವಂಥದ್ದು ಇಲ್ಲವೆಂದು ಹೇಳಬೇಕಾಗಿತ್ತು, ಆ ರೀತಿ ಹೇಳಲಿಲ್ಲ. ಅದನ್ನು ಇವತ್ತು ತಿರುಗಿ ಟ್ವಿಸ್ಟ್ ಮಾಡುವಂಥ ಅವಶ್ಯಕತೆ ಏನು ಇತ್ತು ? ಆಮೇಲೆ ಏನು ಹೇಳಿದ್ದಾರೆಂದರೆ "as on october 2, 1989" ಅದು ಕರೆಕ್ಟ್. ಅವರ ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಆ ದಿವಸ ಎಷ್ಟು ಸಾಲ ಇತ್ತು ಅದನ್ನು ಮಾತ್ರ ಮನ್ನಾ ಮಾಡುತ್ತೇವೆ. ಅಂದರೆ 10 ಸಾವಿರ ರೂಪಾಯಿಗಳು ಎಂದು ಏನು ಹೇಳಿದ್ದಾರೆ ಅದನ್ನು ಮಾಡಿದ್ದಾರೆ ಎಲ್ಲಿಂದ ಎಲ್ಲಿಯವರೆಗೆ ಎಂದು ಹೇಳಿದ್ದಾರೆ.

" The Central Government will compensate public sector banks and regional rural banks suitable for the debts which are thus written off. "

ಕಾಂಪನ್‌ಸೇಟ್ ಮಾಡುತ್ತೇವೆ. ಎಷ್ಟು ರೈಟ್ ಅಫ್ ಮಾಡಿರುತ್ತಾರೋ ಅಷ್ಟು ಕಾಂಪನ್‌ಸೇಟ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಅಲ್ಲಿಂದ ಮುಂದೆ ಏನು ಹೇಳುತ್ತಾರೆ ಎಂದರೆ.

" The State Governments may also wish to introduce a scheme on the same lines in respect of co-operative banks within their purview subject to the constraint of resources the central Government will consider suggestions for helping state government in implementing debt relief scheme on the same pattern in respect of co-operative credit institutions under their control."

The state Government may also wish to introduce a scheme,

ಅದನ್ನು ಸ್ಟೇಟ್ ಗೌರ್ನಮೆಂಟ್ ತಲೆ ಮೇಲೆ ಹಾಕಬೇಕೆನ್ನುತ್ತಾರೆ.

"In implementing the debt relief schemes. on the same pattern in respect of co-operative credit institutions under their control."

ಕೋ-ಆಪರೇಟಿವ್ ಬ್ಯಾಂಕುಗಳು ಏನು ಎಂದರೆ, ಅವು ನಮ್ಮ ಆಡ್ಮಿನಿಸ್ಟ್ರೇಟಿವ್ ಕಂಟ್ರೋಲ್‌ನಲ್ಲಿ ಇವೆ. ನಾನು ಒಪ್ಪಿಕೊಳ್ಳುತ್ತೇನೆ. subject to the constraint of resource the Central Govt. will consider suggcestions for helping state Government. ಅದು ಸಜೇಷನ್ ಅಷ್ಟೇ, ಇನ್ನೂ ಫರ್ಮ ಕಮಿಟ್‌ಮೆಂಟ್ ಇಲ್ಲ.

In implementing debt relief scheme on the same pattren.

ಎಂದಿದ್ದಾರೆ. ಅದು ಯಾವ ಪ್ಯಾಟರ್ನ್ ನಮಗೆ ಅದು ಇನ್ನೂ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :-

ರಾಷ್ಟ್ರೀಕೃತ ಬ್ಯಾಂಕ್‌ಗೆ ಏನು ಅನ್ವಯ ಮಾಡಿದ್ದಾರೋ ಅದೇ ಪ್ಯಾಟರ್ನ್‌ನಲ್ಲಿ.

ಶ್ರೀ ವೀರೇಂದ್ರ ಪಾಟೀಲ್ :-

ಅದು ನಿಮ್ಮ ಇಂಟರ್ ಪ್ರಿಟೇಷನ್ ಆಯಿತು. ನನಗೆ ನೀವು ಇಂಟರ್ ಪ್ರಿಟೇಷನ್ ಸರಿಯೆಂದು ಕನ್‌ಫರ್ಮೇಷನ್ ತಂದರೆ ನಾನು ನಿಮಗೆ ಪರ್ಸನಲೀ ಥ್ಯಾಂಕ್ಸ್ ಹೇಳುತ್ತೇನೆ. ಅದು ಇಲ್ಲ. ನನಗೆ ಹಾಗೆ ಅನಿಸುತ್ತದೆ.

"In implementing debt relief scheme on the same patterm in respect or co-operative credit institutions under their control".

ಡಿಸ್ಟ್ರಿಕ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಪ್ರೈಮರಿ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್, ಲ್ಯಾಂಡ್ ಡೆವಲಪ್‌ಮೆಂಟ್ ಅಪೆಕ್ಸ್ ಬ್ಯಾಂಕ್, ಡಿಸ್ಟ್ರಿಕ್ಟ್ ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕ್, ತಾಲ್ಲೂಕು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಈ ಎರಡೂ ಸಂಸ್ಥೆಗಳು ಇವೆಯಲ್ಲಾ, ಇವುಗಳ ಮುಖಾಂತರ ರೈತರಿಗೆ ಸಾಲದ ವಿತರಣೆಯಾಗುತ್ತದೆ. ಆದರೆ, ಈ ಸಾಲ ಎಲ್ಲಿಂದ ಬರುತ್ತದೆ ? ಈ ಸಾಲ ಬರುವುದು ಸರ್ಕಾರದಿಂದ ಅಲ್ಲ. ಈ ಸಾಲ ಬರುವುದು ನಬಾರ್ಡ್‌ನಿಂದ. ನಬಾರ್ಡ್ ಯಾರು ? ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ. ರಿಸರ್ವ್ ಬ್ಯಾಂಕ್‌ನವರು ಏನು ಮಾಡಿದ್ದಾರೆಂದರೆ, ಒಂದು ರೈತರಿಗೆ ಸಾಲ ಕೊಡುವ ಆರ್ಗನೈಸೇಷನ್ ಮಾಡಿದ್ದಾರೆ. ಇದು ನಬಾರ್ಡ್ ಇನ್ನೊಂದು ಇಂಡಸ್ಟ್ರೀಯಲಿಸ್ಟ್‌ಗೆ ಕೊಡುವಂಥ ಆರ್ಗನೈಜೇಷನ್ ಮಾಡಿದ್ದಾರೆ. ಇದು ಐ.ಡಿ.ಬಿ.ಐ. ಅಂದರೆ ರೈತರ ಸಾಲದ ಎಲ್ಲಾ ಜವಾಬ್ದಾರಿಯನ್ನು ರಿಸ್‌ರ್ವ್‌ಬ್ಯಾಂಕ್‌ನವರು ಪ್ರತ್ಯೇಕವಾದಂಥ ಸಂಸ್ಥೆ ಮಾಡಿ ಅದಕ್ಕೆ ಜವಾಬ್ದಾರಿಯನ್ನು ವಹಿಸಿದ್ದಾರೆ. ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕ್‌ನವರು ತರಬೇಕು. ಅಪೆಕ್ಸ್ ಬ್ಯಾಂಕ್‌ನವರು ಡಿಸ್ಟ್ರಿಕ್ಟ್ ಬ್ಯಾಂಕ್‌ಗೆ ಕೊಡಬೇಕು. ಡಿಸ್ಟ್ರಿಕ್ಟ್ ಬ್ಯಾಂಕ್‌ನವರು ತಾಲ್ಲೂಕಿಗೆ ಕೊಟ್ಟು ವಿತರಣೆ ಮಾಡಬೇಕು. ಮತ್ತು ಹಾಗೆಯೇ ವಸೂಲಿ ಮಾಡಿ ನಬಾರ್ಡ್‌ಗೆ ಕೊಡಬೇಕು,

ಮತ್ತು ಮುಂದಿನ ಸಾಲ ತೆಗೆದುಕೊಳ್ಳಬೇಕು. ಈ ಸಾಲ ತರುವ ಜವಾಬ್ದಾರಿ, ಸಾಲ ವಿತರಣೆ ಮಾಡುವ ಜವಾಬ್ದಾರಿ, ಸಾಲ ವಸೂಲಿ ಮಾಡುವ ಜವಾಬ್ದಾರಿ. ಸಾಲ ಒಯ್ದು ನಬಾರ್ಡ್‌ಗೆ ಡೆಪಾಸಿಟ್ ಮಾಡುವಂಥ ಜವಾಬ್ದಾರಿ ನಮ್ಮ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್‌ನಲ್ಲಿರುವಂಥ ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ ಇದೆಯೇ ಹೊರತಾಗಿ, ಕೋ-ಆಪರೇಟಿವ್ ಬ್ಯಾಂಕ್‌ನವರು ಕರ್ನಾಟಕ ಸರ್ಕಾರದ ಖಜಾನೆಯಿಂದ ದುಡ್ಡು ತೆಗೆದುಕೊಂಡುಹೋಗಿ ವಿತರಣೆ ಮಾಡುವುದಿಲ್ಲ. ಇದು ತಮಗೆ ಗೊತ್ತಿದೆ. ಆದಕ್ಕಾಗಿ ಇವತ್ತು ಅವರು ಹೇಳಿದ್ದಾರೆ, ಮಾನ್ಯ ಸದಸ್ಯರು ಹೇಳಿರುವಂತಾದ್ದು. ಅದಕ್ಕೆ ಇಂಟರ್‌ಪ್ರಿಟ್ ಮಾಡುವುದಕ್ಕೆ ಸ್ಕೋಪ್ ಇದೆ. ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಿಗೆ ನಾವು ಕಾಂಪೆನ್‌ಸೇಟ್ ಮಾಡುತ್ತೇವೆಂದು ಹೇಳಿದ್ದಾರೋ ಆದೇ ಪ್ಯಾಟರ್ನ್‌ನಲ್ಲಿ ನೀವೂ ಒಂದು ಯೋಜನೆ ಹಾಕಿದರೆ ನಿಮಗೂ ಕಾಂಪನ್‌ಸೇಟ್ ಮಾಡುತ್ತೇವೆಂದು ಹೇಳಿದ್ದಾರೆಂದು ಅವರು ಹೇಳುತ್ತಾರೆ. ಆ ರೀತಿ ಹೇಳಿದ್ದರೆ ಮತ್ತೊಮ್ಮೆ, unreservedly I will compliment and congratulate the union finance minister and the Government of India. ಆದಕ್ಕಾಗಿ ನಾನು ಈಗಾಗಲೇ ನಿನ್ನೆ ಓದಿದ ಮೇಲೆ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ನಮ್ಮ ಸ್ಕೀಮ್ ರೆಡಿ ಮಾಡಿ ಎಂದು. ನಮ್ಮ ಸಾಲ ವಿತರಣೆ ಏನಿದೆ ರೈತರದು. ಅದು ನಮ್ಮ ಹತ್ತಿರ ಎಲ್ಲಾ ರೆಡಿ ಇದೆ. 10 ಸಾವಿರ ಒಳಗಿನ ರೈತರ ಸಾಲದ ಸ್ಟ್ಯಾಟಿಸ್ಟಿಕ್ಸ್‌ನ್ನು ಎಷ್ಟು ಸಾಧ್ಯವೋ ಅಷ್ಟನ್ನು ತಯಾರು ಮಾಡಿದ್ದೇವೆ. ಮತ್ತು ನಮ್ಮದೂ ಒಂದು ಸ್ಕೀಮ್ ತಯಾರು ಮಾಡುತ್ತೇವೆ. ಆದನ್ನು ಒಯ್ದು ಕೇಂದ್ರ ಸರ್ಕಾರಕ್ಕೆ ಕೊಟ್ಟು ಯಾವ ರೀತಿ ನ್ಯಾಷನಲೈಸ್ ಬ್ಯಾಂಕ್‌ಗೆ ಕಾಂಪನ್‌ಸೇಟ್ ಮಾಡಿದ್ದೀರೋ ಅದೇ ಪ್ಯಾಟರ್ನ್‌ನಲ್ಲಿ ನಮಗೂ ಕಾಂಪೆನ್‌ಸೇಟ್ ಮಾಡಬೇಕೆನ್ನುವಂಥ ಯೋಜನೆಯನ್ನು ಮಾಡಿಕೊಳ್ಳುತ್ತೇನೆ. ತಮ್ಮೆಲ್ಲರ ಸಹಕಾರ, ತಮ್ಮೆಲ್ಲರ ಸಹಯೋಗ ಇದ್ದರೆ ಇದು ಪೂರ್ತಿಯಾಗಿ ಯಶಸ್ವಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದಸ್ಕಾಗಿ ಅವಶ್ಯ ಬಿದ್ದಾಗ ಇದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಬೇಕಾದರೆ ಹೇಳುತ್ತೇನೆ. ಈ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ. ಬಹುಶಃ ಇನ್ನು ಕೆಲವು ದಿವಸಗಳಲ್ಲಿ ಈ ಯೋಜನೆ ತಯಾರಾಗಿ ಕೇಂದ್ರ ಸರ್ಕಾರಕ್ಕೆ ಮುಟ್ಟುತ್ತದೆ. ಆವೇಳೆಗೆ ತಮಗೂ ತಿಳಿಸುತ್ತೇನೆ. ಶ್ರೀಮಾನ್ ಯಡಿಯೂರಪ್ಪನವರಿಗೂ ತಿಳಿಸುತ್ತೇನೆ. ಅವಶ್ಯ ಬಿದ್ದರೆ ತಾವುಗಳು ದಯಮಾಡಿ ಕೇಂದ್ರದ ಹಣಕಾಸಿನ ಮಂತ್ರಿಗಳ ಮೇಲೆ, ಕೇಂದ್ರ ಸರ್ಕಾರದ ಮೇಲೆ ತಾವೆಲ್ಲರೂ ಪ್ರಭಾವ ಬೀರಿ ಪಬ್ಲಿಕ್ ಸೆಕ್ಟಾರ್ ಬ್ಯಾಂಕಿಗೆ ಮತ್ತು ರೀಜನಲ್ ಬ್ಯಾಂಕ್‌ಗೆ ಏನು ಕಾಂಪೆನ್‌ಸೇಷನ್ ಕೊಡುತ್ತಾರೋ ಅದೇ ಸ್ಕೀಮ್ ಕೆಳಗೆ ರಾಜ್ಯ ಸರ್ಕಾರಕ್ಕೂ ಕಾಂಪನ್‌ಸೇಷನ್ ಪಡೆಯುವಂಥ ಪ್ರಯತ್ನ ಮಾಡುವುದರಲ್ಲಿ ತಾವುಗಳೆಲ್ಲರೂ ಸಹಕಾರಿಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

## 2. ಕಾವೇರಿ ಜಲ ವಿವಾದದ ಪ್ರಸ್ತಾವನೆ ಮತ್ತು ಚರ್ಚೆ: 4ನೇ ಜೂನ್ 1990

ಶ್ರೀ ವೀರೇಂದ್ರ ಪಾಟೀಲ್ :- (ಮುಖ್ಯ ಮಂತ್ರಿಗಳು):

ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಪ್ರಸ್ತಾವನೆಯನ್ನು ಮಂಡಿಸುತ್ತೇನೆ ಅದು ಹೀಗಿದೆ. ತಮಿಳುನಾಡು ಮುಂತಾದ ರಾಜ್ಯಗಳು ಮತ್ತು ಕರ್ನಾಟಕ ರಾಜ್ಯದ ಮಧ್ಯೆ ಉಂಟಾಗಿರುವ ಕಾವೇರಿ ಜಲ ವಿವಾದದ ಪ್ರಸ್ತಾವನೆಯನ್ನು ಮಂಡಿಸುತ್ತೇನೆ ಮತ್ತು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ಜಲ ವಿವಾದ ಮತ್ತು ಅದರ ಇತಿಹಾಸ ಕರ್ನಾಟಕದ ಇಡೀ ಜನತೆಗೆ ಮತ್ತು ವಿಶೇಷವಾಗಿ ಕಾವೇರಿ ನದಿ ಪಾತ್ರದಲ್ಲಿರತಕ್ಕ ಎಲ್ಲರಿಗೂ ಗೊತ್ತಿದ್ದ ವಿಚಾರ. ಆದರೆ ಸುಮಾರು ಒಂದು ನೂರು ವರ್ಷಗಳ ನಂತರ ಕಾವೇರಿ ನದಿ ಜಲ ವಿವಾದವು ಒಂದು ಸೂಕ್ಷ್ಮ ಹಂತದಲ್ಲಿ ಇವತ್ತು ಬಂದು ನಿಂತಿದೆ. ಮಾನ್ಯ ಅಧ್ಯಕ್ಷರೇ ತಾವು ಪ್ರಸ್ತಾಪ ಮಾಡಿದ ಹಾಗೆ ಇದು ಒಂದು ಪ್ರಶ್ನೆ. ಇದು ಕರ್ನಾಟಕದ ಪ್ರಶ್ನೆ. ಕರ್ನಾಟಕದ ಜನತೆಯ ಪ್ರಶ್ನೆ ಇದ್ದು ಇದು ಯಾವುದೋ ಒಂದು ರಾಜಕೀಯ ಪಕ್ಷದ ಪ್ರಶ್ನೆಯಲ್ಲಿ. ಅದಕ್ಕಾಗಿ ನಾವೆಲ್ಲ ನಮ್ಮ ಪಕ್ಷ ಆಶ್ರಮಗಳನ್ನು ಮರೆತು ಪಕ್ಷದಿಂದ ಮೇಲಕ್ಕೆ ಎದ್ದು ಕರ್ನಾಟಕದ ಹಿತ ದೃಷ್ಟಿಯಿಂದ ಮತ್ತು ಕರ್ನಾಟಕದ ಜನತೆಯ ಹಿತದೃಷ್ಟಿಯಿಂದ ಇವತ್ತು ಉದ್ಭವಿಸಿರುವಂಥ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಸಮಾಲೋಚನೆ ಮಾಡಬೇಕಾಗಿದೆ ಮತ್ತು ಬಹಳ ಗಂಭೀರವಾಗಿ ಸಮಾಲೋಚನೆ ಮಾಡಬೇಕಾದಂಥ ಅಗತ್ಯವೂ ಇದೆ. ಕಾವೇರಿ ನದಿ ಜಲವಿವಾದದ ಪೂರ್ತಿ ಇತಿಹಾಸವನ್ನು ಇವತ್ತು ಸದನದ ಮುಂದೆ ಇಡುವುದಕ್ಕೆ ನಾನು ಹೋಗುವುದಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಆದರೆ ನಮ್ಮ ಪಕ್ಷ ಮತ್ತು ನಾನು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದ್ದೇವೆ ಮತ್ತು ಇವೊತ್ತು ಪರಿಸ್ಥಿತಿ ಯಾವ ರೀತಿ ಉದ್ಭವವಾಗಿದೆ ಎನ್ನುವುದರ ಬಗ್ಗೆ ಸೂಕ್ಷ್ಮ ಪರಿಚಯವನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಫೆಬ್ರವರಿಯಲ್ಲಿ ತಮಿಳುನಾಡು ಮುಖ್ಯಮಂತ್ರಿಯವರಿಗೆ ಒಂದು ಪತ್ರ ಬರೆದೆ. ಕಾವೇರಿ ನದಿ ಜಲವಿವಾದದ ಪ್ರಶ್ನೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದೆ. ಈ ಪ್ರಶ್ನೆಯನ್ನು ಪರಸ್ಪರವಾಗಿ ಚರ್ಚೆ ಮಾಡಿ, ವಿಚಾರ ಮಾಡಿ ಕೊಟ್ಟು ತೆಗೆದುಕೊಳ್ಳುವಂಥ ಮನೋಭಾವನೆಯಿಂದ ಬಗೆಹರಿಸಲಿಕ್ಕೆ ಸಾಧ್ಯವಿದೆ. ಅದಕ್ಕಾಗಿ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕಾಗಿ ನಾವು ಮನಸ್ಸು ಮಾಡಬೇಕು ಮತ್ತು ನಾವುಗಳು ಒಂದು ಕಡೆ ಸೇರಬೇಕು. ಅದಕ್ಕಾಗಿ ತಾವು ದಯಮಾಡಿ ಬೆಂಗಳೂರಿಗೆ ಬರಬೇಕೆಂದು ತಿಳಿಸಿದೆ. 12ನೇ ಫೆಬ್ರವರಿ 1990ಕ್ಕೆ ತಾವು ಬೆಂಗಳೂರಿಗೆ ಬರಬೇಕೆಂದು ನಾನು ಮೊದಲನೇ ಸಲ ಆಹ್ವಾನಿಸಿದ್ದೆ. ಆಗ ಅವರು ಒಪ್ಪಿ ಕೊಂಡಿದ್ದರು. ನಾವು ಕೂಡ ಅವರು ಬರುತ್ತಾರೆಂದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೆವು

ದುರ್ದೈವದಿಂದ ಎರಡು ಕಾರಣಗಳಿಗಾಗಿ ಅವರು ಬರಲಿಲ್ಲ. ಅದು ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಒಂದು ದೊಡ್ಡ ಪ್ಲೇನಿನ ದುರಂತವಾಯಿತು, ಏರ್ ಕ್ರ್ಯಾಷ್, ಇನ್ನೊಂದು ಕಾರಣ ನಮ್ಮ ಸಿಬ್ಬಂದಿ ವರ್ಗದವರಿಗೆ ಒಮ್ಮಿದೊಂಮ್ಮೆಗೆ ಸ್ಟ್ರೈಕ್‌ಗೆ ಹೋದರು. ಅದಕ್ಕಾಗಿ ನಾನು ಅವರಿಗೆ ಮತ್ತೆ ತಿಳಿಸಿದೆ. ಈ ಪರಿಸ್ಥಿತಿಯಲ್ಲಿ ಸೇರುವುದು ಕಷ್ಟವಾಗುತ್ತದೆ. ಅನಂತರ ಮತ್ತೊಂದು ದಿನಾಂಕ ನಿಗದಿ ಮಾಡಿ ಹೇಳುತ್ತೇನೆ ಆವಾಗ ಬರಬೇಕೆಂದು ಕೇಳಿಕೊಂಡಿದ್ದೆ. ಆದಾದ ಮೇಲೆ ಅದೇ ರೀತಿ ಇನ್ನೊಂದು ಸಲ ದಿನಾಂಕ 12-3-1990ಕ್ಕೆ ನಿಗದಿ ಮಾಡಿ ಬೆಂಗಳೂರಿಗೆ ತಾವು ಬರಬೇಕೆಂದು ತಮ್ಮ ಜೊತೆಯಲ್ಲಿ ತಮ್ಮ ಸಹೋದ್ಯೋಗಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೂಂಡು ಬನ್ನಿ. ಇದರ ಬಗ್ಗೆ ಚರ್ಚೆ ಮಾಡೋಣ ಅದರ ಜೊತೆಗೆ ನೀರು ಬಿಡುವುದಾಗಲಿ ಮತ್ತು ನೀರಿನ ಬದಲು ಪವರ್ ಸರಬರಾಜು ಮಾಡುವುದಾಗಲೀ ಹಾಗೂ ನಮ್ಮ ನದಿ ಪಾತ್ರದಲ್ಲಿರತಕ್ಕ ಶಿವನಸಮುದ್ರದ ಪ್ರಾಜೆಕ್ಟ್ ಬಗ್ಗೆ ತಮಿಳುನಾಡಿನಲ್ಲಿರು ವಂಥ ಪವರ್ ಪ್ರಾಜೆಕ್ಟ್ ಬಗ್ಗೆ ನೆನಗುದಿಗೆ ಬಿದ್ದಿರುವ ಎಲ್ಲಾ ವಿಚಾರವನ್ನು ಚರ್ಚೆ ಮಾಡೋಣವೆಂದು ಅವರಿಗೆ ಹೇಳಿದ್ದೆ. ಅವರೂ ಒಪ್ಪಿಕೊಂಡಿದ್ದರು.

ದಿನಾಂಕ 12-3-90ಕ್ಕೆ ನಾವು ಸೇರಬೇಕಾಗಿತ್ತು. ಆದರೆ ಈ ಮಧ್ಯದಲ್ಲಿ ಅವರು ತಿಳಿಸಿದರು. ಕೇಂದ್ರ ಸರ್ಕಾರದವರು ಈಗಾಗಲೇ ಕಾವೇರಿ ಜಲ ವಿವಾದದ ಬಗ್ಗೆ ಒಂದು ಮೀಟಿಂಗ್ ಕರೆದಿದ್ದಾರೆ. ಅದಕ್ಕೆ ನಾವು ಇಲ್ಲಿ ಪ್ರತ್ಯೇಕ ಮೀಟಿಂಗ್ ಮಾಡುವ ಅವಶ್ಯಕತೆ ಇಲ್ಲ. ನಾವು ಏನಾದರೂ ಮಾತನಾಡುವುದಿದ್ದರೆ ಅಲ್ಲಿಯೇ ಮೀಟಿಂಗ್‌ನಲ್ಲಿ ಮಾತನಾಡೋಣ ಎಂದು ಹೇಳಿ ನಾವು ಇಲ್ಲಿ ಕರೆದಿದ್ದ ಮೀಟಿಂಗ್‌ಗೆ ಅವರು ಬರಲಿಲ್ಲ. ಅಲ್ಲಿಂದ ಕೇಂದ್ರದಲ್ಲಿ ಬೇರೆ ಸರ್ಕಾರ ಅಧಿಕಾರ ಸ್ವೀಕಾರ ಮಾಡಿದ ಮೇಲೆ ಮೊದಲನೆಯ ಪ್ರಯತ್ನ ಏನೆಂದರೆ ಕಾವೇರಿ ಜಲ ವಿವಾದದ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ದಿನಾಂಕ 5-4-90ಕ್ಕೆ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟಂತೆ ಈ ಭಾಗದ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ದಿಲ್ಲಿಯಲ್ಲಿ ಸೇರಿಸಿದರು, ಆ ಸಭೆಗೆ ನಾನೂ ಹೋಗಿದ್ದೆ. ತಮಿಳುನಾಡಿನ ಮುಖ್ಯಮಂತ್ರಿಗಳು ಬಂದಿದ್ದರು. ಕೇರಳ ಮುಖ್ಯಮಂತ್ರಿಗಳು ಮತ್ತು ಪಾಂಡಿಚೇರಿ ಮುಖ್ಯಮಂತ್ರಿಗಳು ಸಹ ಬಂದಿದ್ದರು. ನಮ್ಮ ಜೊತೆಯಲ್ಲಿ ನಮ್ಮ ಸಹೋದ್ಯೋಗಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡ ಇದ್ದರು. ನಾವು ಇಲ್ಲಿ ಹೋದಾಗ ಈ ಜಲವಿವಾದವನ್ನು ಯಾವ ರೀತಿ ಬಗೆಹರಿಸಬೇಕು. ಯಾವ ರೀತಿ ಇತ್ಯರ್ಥ ಮಾಡಬೇಕೆನ್ನುವ ಪ್ರಶ್ನೆ ಬಂದಾಗ ನಾನು ಸ್ಪಷ್ಟವಾಗಿ ಮೀಟಿಂಗ್‌ನಲ್ಲಿ ಹೇಳಿದೆ ನಾವು ಇವತ್ತು ಕೂಡ ಗೀವ್ ಅಂಡ್ ಟೇಕ್ ಪಾಲಿಸಿಯಿಂದ ಈ ಪ್ರಶ್ನೆ ಬಗೆಹರಿಸುವ ವಿಚಾರದಲ್ಲಿದ್ದೇವೆ. ಒಂದು ವೇಳೆ ಇದರಿಂದ ಈ ವಿವಾದವನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಪ್ರಶ್ನೆ ಬಂದಾಗ ಟ್ರಿಬ್ಯೂನಲ್ ನೇಮಕ ಮಾಡುವ ವಿಚಾರ ಮಾಡಬೇಕೆಂದು ಹೇಳಿದೆ ಇವೊತ್ತಿನ ಪರಿಸ್ಥಿತಿಯಲ್ಲಿ ಟ್ರಿಬ್ಯೂನಲ್ ರಚಿಸುವಂಥಹ ಸನ್ನಿವೇಶ ಉದ್ಭವವಾಗಿಲ್ಲ. ಅದಕ್ಕೆ ನಮಗೆ ಬೇಕಾಗಿರುವಂತಹ ಎಲ್ಲಾ ಅಂಕಿ ಅಂಶಗಳನ್ನು ನೀವು ಒದಗಿಸಬೇಕು. ಯಾವ ರೀತಿಯಿಂದ ಕೇಂದ್ರ ಸರ್ಕಾರದವರು ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬಹುದು ನೀವು ನೀರನ್ನು ಯಾವ ಒಂದು ಪ್ರಿನ್ಸಿಪಾಲ್ ಮೇಲೆ ಹಂಚಬೇಕು, ಇದನ್ನೆಲ್ಲಾ ಮಾಡಬೇಕಾದ ಅವಶ್ಯಕತೆ ಇದೆ. 1972ನೇ ಇಸವಿಯಲ್ಲಿ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಇತ್ತು. ಆ ಕಮಿಟಿ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ

ಅವರು ತಮ್ಮ ರಿಪೋರ್ಟ್‌ನಲ್ಲಿ ಬರೆದಿದ್ದಾರೆ. ಅವರು ಹೇಳಿದಂತೆ ಅವರೇನು ಅಂಕಿ ಅಂಶಗಳು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಆ ಅಂಕಿ ಅಂಶಗಳು ಪ್ರತಿಯೊಂದು ರಾಜ್ಯದವರು ಏನು ಅಂಕಿ ಅಂಶಗಳನ್ನು ಒದಗಿಸಿರುತ್ತಾರೋ ಅದನ್ನು ನಾವು ಒಟ್ಟಿಗೆ ಸೇರಿಸಿ ಒಂದು ರಿಪೋರ್ಟ್ ಮಾಡಿದ್ದೇವೆ. ಎಂದು ಅದಕ್ಕೆ ನಾನು ಹೇಳಿದೆ ಇದು ಬಹಳ ಸೂಕ್ಷ್ಮವಾದ ಪ್ರಶ್ನೆ ನೀರಿನ ಹಂಚಿಕೆ ಮಾಡುವಾಗ ಎಷ್ಟು ನೀರು ಇದೆ. ಯಾವ ಪ್ರಮಾಣದಲ್ಲಿ ನೀರು ಇದೆ ಎನ್ನುವುದು ಮೊದಲು ನಿರ್ಧಾರವಾಗಬೇಕು ನೀರನ್ನು ಪ್ರತಿಯೊಂದು ಏರಿಯಾದಲ್ಲಿ ನೀರಿನ ಈಲ್ಡ್ ಎಷ್ಟು ಇದೆ ಕರ್ನಾಟಕದಲ್ಲಿ ನೀರಿನ ಈಲ್ಡ್ ಎಷ್ಟು ಇದೆ. ಅಂದರೆ ತಮಿಳುನಾಡಿನಲ್ಲಿ ಎಷ್ಟು ಇದೆ ಅದೇ ರೀತಿಯಲ್ಲಿ ತಮಿಳುನಾಡಿನವರು ಎಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕೇರಳದಲ್ಲಿ ಎಷ್ಟು ನೀರು ಉಪಯೋಗವಾಗುತ್ತಿದೆ. ಪಾಂಡಿಚೆರಿಯಲ್ಲಿ ಎಷ್ಟು ನೀರು ಉಪಯೋಗವಾಗುತ್ತಿದೆ. ಪಾಂಡಿಚೆರಿಯಲ್ಲಿ ಎಷ್ಟು ನೀರು ಉಪಯೋಗವಾಗುತ್ತಿದೆ. ಈ ಎಲ್ಲಾ ಅಂಕಿಅಂಶಗಳ ಆಧಾರದ ಮೇಲೆ ಈ ಪ್ರಶ್ನೆಯನ್ನು ಚರ್ಚೆ ಮಾಡಬೇಕಾಗುತ್ತದೆಂದು ನಾನು ಹೇಳಿದೆ. ಅದರೆ ದುರಾದೃಷ್ಟವಶಾತ್ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರು ಯಾವ ರೀತಿಯಿಂದ ಸೈಂಟಿಫಿಕ್ ಆಗಿ ಸ್ಟಡಿ ಮಾಡಿ ರಿಪೋರ್ಟ್ ಸಲ್ಲಿಸಬೇಕಾಗಿತ್ತೋ ಆ ರೀತಿ ಸಲ್ಲಿಸಲಾಗಲಿಲ್ಲ. ಅದಕ್ಕೆ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಬೇಕು. ಆ ಕಮೀಷನ್ ವರದಿ ಮಾಡಿದರೆ ಆಗ ಯಾವ ತರಹ ಮಾಡಬಹುದೆನ್ನುವುದು ಗೊತ್ತಾಗುತ್ತದೆ. ಈ ಮಧ್ಯೆ ನಮ್ಮ ನೆಗೋಷಿಯೇಶನ್ಸ್ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಯಾವಾಗ ಹೇಳಿದೆ ಆಗ ಕೇಂದ್ರ ಸರ್ಕಾರದ ನೀರಾವರಿ ಸಚಿವರು ತಮ್ಮ ಛೇಂಬರ್‌ನಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಯಿಸಿ ಈ ಜಲವಿವಾದವನ್ನು ಏನಾದರೂ ಮಾಡಿ ಬಗೆಹರಿಸಬೇಕು. ಅದಕ್ಕೆ ಅಡ್‌ಹಾಕ್ ಆಗಿ ನೀವು ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳಿ ಎಂದು ಅವರು ಹೇಳಿದರು. ದುರಾದೃಷ್ಟವಶಾತ್ ತಮಿಳುನಾಡಿನ ಮುಖ್ಯಮಂತ್ರಿಗಳು ಇಲ್ಲಾ ಇದನ್ನು ಇಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಇದು ಟ್ರಿಬ್ಯೂನಲ್‌ಗೆ ಹೋಗಬೇಕೆಂದು ಒತ್ತಾಯ ಮಾಡಿದರು. ಅದಕ್ಕೆ ನಾವು ಒಪ್ಪಲಿಲ್ಲ. ಅದಕ್ಕೆ ನಾನು ಬಹಳ ಮಟ್ಟಿಗೆ ಪ್ರಯತ್ನ ಮಾಡಿ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಒಪ್ಪಿಸಿ ತಾವು ಈ ರೀತಿ ಅವಸರ ಮಾಡಬೇಡಿ. ತಾವು ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾಯಿತು. ನಾವು ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾಯಿತು. ಕೇಂದ್ರ ಸರ್ಕಾರ ಕೂಡ ಅಧಿಕಾರ ವಹಿಸಿಕೊಂಡು ನಾಲ್ಕು ತಿಂಗಳಾಗಿದೆ. ಇದು ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪ್ರಶ್ನೆಯನ್ನು 3-4 ತಿಂಗಳುಗಳಲ್ಲಿ ಇತ್ಯರ್ಥ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾವು ಇವತ್ತೂ ಗೀವ್ ಅಂಡ್ ಟೇಕ್ ಪಾಲಿಸಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ತಾವು ಇಂತಹ ಒಳ್ಳೆಯ ವಾತಾವರಣವನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಸಮಾಲೋಚನೆ ಮಾಡಿ ಇತ್ಯರ್ಥ ಮಾಡಿಕೊಳ್ಳೋಣವೆಂದು ನಾನು ಅವರನ್ನು ಒತ್ತಾಯ ಮಾಡಿದೆ. ಅದಕ್ಕೆ ಅವರೂ ಸಹ ಒಪ್ಪಿಕೊಂಡರು. ನೀವು ಮತ್ತು ನಾವು ಮಾತ್ರ ಬೈ ಲ್ಯಾಟರ್‌ಲ್ ಆಗಿ ಚರ್ಚೆ ಮಾಡಬೇಕೆಂದು ಹೇಳಿದರು. ತಮಿಳುನಾಡು ಮತ್ತು ಕರ್ನಾಟಕ ಎರಡೇ ರಾಜ್ಯಗಳು ಮೊದಲು ಚರ್ಚೆಯಾಗಬೇಕೆಂದು ಹೇಳಿದ್ದಕ್ಕೆ ಒಪ್ಪಿ ಮದ್ರಾಸ್‌ನಲ್ಲಿ ಸೇರೋಣವೆಂದು ಒಪ್ಪಿಕೊಂಡೆವು. ಇದಾದ ಮೇಲೆ ಎಲ್ಲಾ ರಾಜ್ಯಗಳ ಚರ್ಚೆ ಆಗಬೇಕೆಂದು ನಾನು ಹೇಳಿದೆ. ಇದಾದ ಮೇಲೆ

ಮೀಟಿಂಗ್ ಮುಂದೆ ಹೋಗುವಂತಹ ಪ್ರಸಂಗ ಬಂತು ಸುಪ್ರೀಂ ಕೋರ್ಟ್‌ನವರು 24ಕ್ಕೆ ಫೈನಲ್ ಹಿಯರಿಂಗ್ ಡೇಟ್ ಇಟ್ಟುಕೊಂಡಿದ್ದರು. 24ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದವರು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರದವರು ತಮ್ಮ ತಮ್ಮ ನಿಲುವು ಏನಿದೆ ಎಂಬುದನ್ನು ನಮಗೆ ತಿಳಿಸಬೇಕೆಂದು ಅವರು ಹೇಳಿದ್ದರು. ಅಲ್ಲದೆ ಇನ್ನು ಮುಂದೆ ನಾವು ಯಾವ ಅಡ್ಜರ್ನಮೆಂಟ್ ಕೊಡುವುದಕ್ಕಾಗುವುದಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದ್ದರು. ಅದಕ್ಕಾಗಿ ತಮಿಳುನಾಡಿನ ಮುಖ್ಯಮಂತ್ರಿಗಳು ಏನಾಗಬೇಕಾಗಿದ್ದರೂ 24ನೇ ತಾರೀಖಿನೊಳಗೆ ಆಗಬೇಕೇ ಹೊರತು ನಾನು 24ನೇ ತಾರೀಖಿನ ಡೆಡ್‌ಲೈನ್‌ನ್ನು ದಾಟುವುದಕ್ಕೆ ತಯಾರಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದರು. ಆಗ ನಾನು ಕೇಂದ್ರದ ಮಂತ್ರಿಗಳಿಗೂ ಮತ್ತು ತಮಿಳುನಾಡಿನ ಮುಖ್ಯ ಮಂತ್ರಿಗಳಿಗೂ ನಾವೇನು ಡಿಲೇ ಮಾಡಬೇಕು ಅಥವಾ ಯಾವ ರೀತಿಯಿಂದಲಾದರೂ ಈ ಪ್ರಶ್ನೆ ಮುಂದೆ ಹೋಗಬೇಕೆನ್ನುವ ವಿಚಾರ ಮಾಡುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಒಂದು ವೇಳೆ 24ನೇ ತಾರೀಖಿನೊಳಗೆ ಮಾಡಬೇಕೆನ್ನುವ ಪ್ರಶ್ನೆ ಇದ್ದರೆ. ಬೈಲ್ಯಾಟರಲ್ ಡಿಸ್ಕಷನ್ 19ನೇ ತಾರೀಖೇ ಆಗಲಿ ಎಂದು ಹೇಳಿದ್ದೇ. ಆದಾದ ಮೇಲೆ ಮರು ದಿವಸವೇ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಯಲ್ಲಿ ಕೇಂದ್ರದ ಮಂತ್ರಿಗಳು ಚರ್ಚೆ ಮಾಡಲಿ ಆಮೇಲೆ ನಮ್ಮ ನಮ್ಮ ನಿಲುವು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಎನ್ನುವ ಮಾತನ್ನು ಹೇಳಲಾಯಿತು. ಆಮೇಲೆ ಒಂದು ನಿರ್ಣಯವನ್ನು ನಾವೆಲ್ಲಾ ಸೇರಿ ಮಾಡಿದೆವು. 19ನೇ ತಾರೀಖು ಮದ್ರಾಸ್‌ನಲ್ಲಿ ಬೈಲ್ಯಾಟರಲ್ ಡಿಸ್ಕಷನ್ ಆಗಬೇಕು. ಆದಾದಮೇಲೆ 20ನೇ ತಾರೀಖು ಎಲ್ಲಾ ಮುಖ್ಯಮಂತ್ರಿಗಳು ಸೇರಿ ಚರ್ಚೆ ಮಾಡಬೇಕು ಎನ್ನುವ ನಿರ್ಣಯ ಆಯಿತು. ಅದಾಗಿಬಂದ ಮೇಲೆ ಮಾನ್ಯ ಅಧ್ಯಕ್ಷರೇ ಇದೇ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇದು ಪಕ್ಷದ ಸಮಸ್ಯೆಯಲ್ಲ, ಇದು ರಾಜ್ಯದ ಸಮಸ್ಯೆ ಇರುವುದರಿಂದ ನಾನು ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇದರ ಬಗ್ಗೆ ನಮ್ಮ ಟೀಕೆ ಏನು ಇರಬೇಕು. ನಮ್ಮ ಧೋರಣೆ ಏನಿರಬೇಕು. ನಮ್ಮ ಕಾರ್ಯಕ್ರಮ ಏನಿರಬೇಕು ಎನ್ನುವಂತಾದ್ದನ್ನು ಹಂತ ಹಂತವಾಗಿ ನಿರೂಪಿಸುವುದಕ್ಕೆ ನಾನು ಪ್ರಯತ್ನ ಮಾಡಿದೆ. ಅಲ್ಲಿ ಮೀಟಿಂಗ್ ಆದ ತಕ್ಷಣ ಇಲ್ಲಿಗೆ ಬಂದು ಸರ್ವ ಪಕ್ಷದ ನಾಯಕರ ಸಭೆ ಕರೆಯಿಸಿದೆ. ನಾವೆಲ್ಲರೂ 10ನೇ ಏಪ್ರಿಲ್‌ಗೆ ಸೇರಿದೆವು. ಆಗ ಕೇಂದ್ರದ ಮಟ್ಟದಲ್ಲಿ ಯಾವ ರೀತಿ ಚರ್ಚೆಯಾಯಿತು ಮತ್ತು ಅವರು ಏನು ಹೇಳಿದರು, ತಮಿಳುನಾಡಿನವರು ಏನು ಹೇಳಿದರು, ನಾವು ಏನು ಹೇಳಿದ್ದೇವೆ ನಮ್ಮ ನಿಲುವ ಏನು, ಪಾಂಡಿಚೆರಿ, ಕೇರಳ ರಾಜ್ಯಗಳ ನಿಲುವು ಏನಿತ್ತು ಎಂದು ಸ್ಪಷ್ಟವಾಗಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳಿಗೂ ನಾನು ತಿಳಿಸಿದ್ದೇನೆ. ಇವತ್ತು ನಾನು ಬಹಳ ಅಭಿಮಾನದಿಂದ ಮತ್ತು ಸಂತೋಷದಿಂದ ಹೇಳುತ್ತಿದ್ದೇನೆ. ಆ ದಿವಸ ಎಲ್ಲಾ ವಿರೋಧಪಕ್ಷದ ನಾಯಕರು ನನ್ನ ಕರೆಗೆ ಓಗೊಟ್ಟು ಎಲ್ಲರೂ ಬಂದು ಪೂರ್ತಿಯಾಗಿ ನನ್ನ ಸರ್ಕಾರಕ್ಕೆ ಮತ್ತು ನನಗೆ ಸಹಕಾರ ನೀಡಿದ್ದಾರೆ. ಇದು ರಾಜಕೀಯ ಪ್ರಶ್ನೆಯಲ್ಲ. ಇದನ್ನು ರಾಜಕೀಯದಿಂದ ಮೇಲಕ್ಕೆ ಎತ್ತಿಕೊಂಡು ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕೇ ಹೊರತಾಗಿ ಒಬ್ಬರಿಗೊಬ್ಬರು ನೀವು ಜವಾಬ್ದಾರರು ನಾವು ಜವಾಬ್ದಾರರು ಎಂದು ಬಯ್ದುಕೊಂಡು ದೋಷಾರೋಪಣೆ ಮಾಡಿದರೆ ಬಹುಶ: ನದಿ ಪ್ರಾಂತದಲ್ಲಿರತಕ್ಕಂಥ ಜನರುಗಳಿಗೆ ಧಕ್ಕೆ ಯಾಗುತ್ತದೆ ಮತ್ತು ಕರ್ನಾಟಕಕ್ಕೂ ತೊಂದರೆಯಾಗುತ್ತದೆ ಎಂದು ಎಲ್ಲರೂ ಒಪ್ಪಿಕೊಂಡರು.

ಅವೊತ್ತಿನ ದಿವಸ, ಸುಪ್ರೀಂ ಕೋರ್ಟ್‌ನವರು 24ನೇ ತಾರೀಖಿನೊಳಗೆ ಏನಾದರೂ ನಿರ್ಣಯಕ್ಕೆ ಬರಬಹುದೆಂದು ನಮಗೆ ಭಯ ಇತ್ತು. ಆಗ 24ನೇ ತಾರೀಖಿನೊಳಗೆ ಸರ್ವ ಪಕ್ಷದ ನಾಯಕರುಗಳು ಮತ್ತು ಪಾರ್ಲಿಮೆಂಟಿನ ಸದಸ್ಯರುಗಳು ಸೇರಿ ಪ್ರಧಾನ ಮಂತ್ರಿಗಳಿಗೆ ಮತ್ತು ಸಂಬಂಧ ಪಟ್ಟ ಕೇಂದ್ರದ ನೀರಾವರಿ ಮಂತ್ರಿಗಳಿಗೆ ಒಂದು ಮೆಮೋರಾಂಡಮ್ ಕೊಡಬೇಕೆಂದು ನಿರ್ಣಯವಾಯಿತು. ಮೊದಲೇ ನಿಗದಿಯಾಗಿದ್ದಂತೆ ನಾನು 19ನೇ ತಾರೀಖು ಏಪ್ರಿಲ್‌ನಲ್ಲಿ ಮದ್ರಾಸ್‌ಗೆ ಹೋದೆ 19ನೇ ತಾರೀಖು ಏಪ್ರಿಲ್‌ಗೆ ಸೇರಬೇಕಾದ್ದರಿಂದ 18ನೇ ತಾರೀಖು ಏಪ್ರಿಲ್‌ಗೆ ನಾನು ರೈಲು ಮುಖಾಂತರ ರಾತ್ರಿ ಹೊರಟಿದ್ದರೆ ರೈಲು ಹತ್ತಿ ಕಂಪಾರ್ಟ್‌ಮೆಂಟ್‌ಗೆ ಬಂದಿದ್ದೆನೋ ಇಲ್ಲವೋ ಆಗ ಒಂದು ಮೆಸೇಜ್ ಬಂತು, ಮೀಟಿಂಗ್ ಕ್ಯಾನ್ಸಲ್ ಆಯಿತೆಂದು. ಆಗ ನಾನು ಮುಂದಕ್ಕೆ ಹೋಗಬೇಕೋ ಬೇಡವೋ ಎಂದು ಗೊತ್ತಾಗಲಿಲ್ಲ. ಆಮೇಲೆ ನಮ್ಮ ಕಚೇರಿಯವರು ವಿಚಾರಿಸಿ ಕೊಂಡಮೇಲೆ 20ನೇ ತಾರೀಖು ನಡೆಯುವ ಮೀಟಿಂಗ್‌ಗೆ ಕೇಂದ್ರದ ಮಂತ್ರಿಗಳು ಬರುವುದಕ್ಕೆ ಆಗದೇ ಇರುವುದರಿಂದ 20ನೇ ತಾರೀಖಿನ ಮೀಟಿಂಗ್ ಕ್ಯಾನ್ಸಲ್ ಆಗಿದೆ. ಈಗ 19ನೇ ತಾರೀಖು ನಡೆಯುವ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯ ಮೀಟಿಂಗ್ ನಡೆಯುತ್ತದೆಂದು ಹೇಳಿದ ಮೇಲೆ ನಾನು ಮದ್ರಾಸ್‌ಗೆ ಹೋದೆ. 19ನೇ ತಾರೀಖು ಮದ್ರಾಸ್‌ನಲ್ಲಿ ಬಹಳ ದೀರ್ಘವಾಗಿ ಚರ್ಚೆಯಾಯಿತು. ಒಳ್ಳೆಯ ವಾತಾವರಣದಲ್ಲಿ ಚರ್ಚೆಯಾಯಿತು. ನಾವು ಸ್ಪಷ್ಟವಾಗಿ ತಮಿಳುನಾಡಿಗೆ ಹೇಳಿದೆವು. ಯಾವ ರೀತಿಯಿಂದಲೂ ಇವನ್ನು ಮುಂದಕ್ಕೆ ಹಾಕಬೇಕೆನ್ನುವ ವಿಚಾರವನ್ನು ನಾವು ಮಾಡುತ್ತಿಲ್ಲ. ನಿಮಗೆ ಗೊತ್ತಿದ್ದ ಹಾಗೆ ನಮಗೆ ಬೇಕಾಗಿರುವ ಅಂಕಿ ಸಂಖ್ಯೆಗಳನ್ನು ಸೆಂಟ್ರಲ್ ವಾಟರ್ ಕಮಿಷನರ್‌ರವರು ಹೇಳಿದರೂ ಕೊಡುತ್ತಿಲ್ಲ. ಅಂಕಿ ಸಂಖ್ಯೆಗಳು ನಮ್ಮ ಹತ್ತಿರ ಇಲ್ಲವೆಂದು ಕೂಡ ಅವರು ಕಾಗದ ಬರೆದು ತಿಳಿಸುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನಾನು ಯಾವ ಆಧಾರದ ಮೇಲೆ ಚರ್ಚೆ ಮಾಡಬೇಕು ಎಂದು ನಾನು ಹೇಳಿದೆ. ಅದಕ್ಕೆ ತಡೆಯುವುದಕ್ಕೆ ನಾವು ತಯಾರಾಗಿಲ್ಲ. ವೈಟ್ ಮಾಡುವುದಕ್ಕೆ ತಯಾರಾಗಿಲ್ಲ ಎಂದು ನೀವೇ ಹೇಳುವುದಾದರೆ, ನೀವು ನಿಮ್ಮ ಡಿಮ್ಯಾಂಡ್ ಎಷ್ಟು ಎಂದು ಹೇಳಿ ನಾವು ನಮ್ಮ ಡಿಮ್ಯಾಂಡ್ ಎಷ್ಟು ಎಂದು ಹೇಳುತ್ತೇವೆ. ಅಲ್ಲಿಂದ ಟೋಟಲ್ ಈಲ್ಡ್ ಕಾವೇರಿಯಲ್ಲಿ ಎಷ್ಟಿದೆ ಏನು ಕೊರತೆ ಬರುತ್ತದೆ. ಏನು ಶಾರ್ಟ್‌ಫಾಲ್ ಇದೆ, ಅದರಲ್ಲಿ 50 ಪರ್‌ಸೆಂಟ್ ನೀವು ಒಪ್ಪಿಕೊಳ್ಳಿ 50 ಪರಸೆಂಟ್ ಕಡಿಮೆ ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದೆ. ಇವೊತ್ತು ಕೆಲವು ವಿಷಯಗಳನ್ನು ನಾವು ಇಲ್ಲಿ ಹೇಳಬಾರದ್ದು ಅಲ್ಲಿಯೂ ಕೂಡ ಮಾನ್ಯ ಕರುಣಾನಿಧಿಯವರಿಗೆ ಬಹುಶ: ರಾಜಕೀಯ ಒತ್ತಡ ಇತ್ತು ಎಂದು ಕಾಣಿಸುತ್ತದೆ. ಹಾಗೆಂದು ನನಗೆ ಅವರೇನೂ ಹೇಳಲಿಲ್ಲ. ಆದರೆ ನೋಡಿದಾಗ, ವಾತಾವರಣದ ಮೇಲೆ ಆ ಸಂದರ್ಭದಲ್ಲಿ ರಾಜಕೀಯ ಒತ್ತಡ ಇತ್ತು ಎಂದು ಅರ್ಥವಾಗುವಂತಿತ್ತು. ಇಲ್ಲದೇ ಹೋಗಿದ್ದರೆ ಅವರು ಈ ವಿಚಾರವನ್ನು ಸಮಾಧಾನದಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗುತ್ತಾ ಇತ್ತು. ಇವೊತ್ತಿನ ದಿವಸ ಅವರು ನನಗೆ ನಾಳೆ ಬೆಳಿಗ್ಗೆ ಮತ್ತೆ ಸೇರೋಣ ಈ ಬಗ್ಗೆ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ನಾನು ಸಮಾಲೋಚನೆ ಮಾಡುತ್ತೇನೆ, ನೀವು ಏನೊಂದು ಪ್ರಪೋಸಲ್ ಕೊಟ್ಟಿದ್ದೀರಿ ಅದನ್ನು ಕೂಡ ನಮ್ಮ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಪ್ರಸ್ತಾಪ ಮಾಡುತ್ತೇನೆ

ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ನಾಳೆ ಮಾಧ್ಯಾಹ್ನದವರೆಗೆ ನಾನು ಇಲ್ಲಿ ಇದ್ದೇನೆ. ಆಮೇಲೆ ನನಗೆ ಕೃಷ್ಣ ನದಿ ನೀರಿನ ಬಗ್ಗೆ ಚರ್ಚೆ ಮಾಡುವುದಕ್ಕೆ ತಿರುಪತಿಗೆ ಹೋಗಬೇಕಾಗಿದೆ. ತಮಗೆ ಏನಾದರೂ ಹೇಳಬೇಕಾಗಿದ್ದರೆ ನಾಳೆ 10-30 ರಿಂದ 11ರ ವರೆಗೆ ದಯಮಾಡಿ ಹೇಳಿ ಎಂದು ಹೇಳಿದೆ. ಅವರೂ ಕೂಡ ಆಯಿತು. ಹೇಳುತ್ತೇನೆ ಎಂದು ಹೇಳಿದರು. ಆದರೆ ದುರ್ದೈವದ ಸಂಗತಿ ಎಂದು ಹೇಳಬೇಕಾಗಿದೆ. ನಾನು ರಾತ್ರಿ ಎಲ್ಲಾ ಅವರಿಂದ ಫೋನ್ ಬರುತ್ತದೆ ಎಂದು ಕಾದಿ ನೋಡಿದೆ. ಬೆಳಿಗ್ಗೆಯೂ ಫೋನ್‌ಗಾಗಿ ಕಾದು ಕುಳಿತೆ. ಆದರೆ ಅವರಿಂದ ಫೋನ್ ಕರೆ ಬರಲೇ ಇಲ್ಲ. ಮಾನ್ಯರು ಅಸೆಂಬ್ಲಿಗೆ ಹೋಗಿ ಆ ಬಗ್ಗೆ ಡಿಕ್ಲೇರ್ ಮಾಡಿದರು talks have failed' ಎಂದು ಹೀಗೆ ಮಾಡಿದ್ದಾರೆ ಎಂದು ಕೆಲವು ಪತ್ರಕರ್ತರು ಹೇಳಿದರು. ಅದಕ್ಕೆ ನಾನು ಹೇಳಿದೆ. ಇದು ನಿಜವಾಗಿಯೂ ದುರ್ದೈವದ ಸಂಗತಿ ಬಹುಶ: ಚರ್ಚೆ ಮೂಲಕ ಈ ಕುರಿತು ಏನಾದರೂ ಒಂದು ಇತ್ಯರ್ಥಕ್ಕೆ ಬರುವುದಕ್ಕೆ ಸಾಧ್ಯತೆಗಳು ಇದ್ದವು ಎನ್ನುವಂಥ ಒಂದು ವಾತಾವರಣ ನಿನ್ನೆಯ ಸಂದರ್ಭದಲ್ಲಿತ್ತು ಆದರ ಆ ಮಾತುಕತೆಯ ಲಾಭ ಏನೂ ಆಗಲಿಲ್ಲ. ಪರವಾಗಿಲ್ಲ. ಮುಂದೆ ಏನು ಮಾಡಬೇಕೆಂದು ವಿಚಾರ ಮಾಡೋಣ ಎಂದು ಹೇಳಿ ಅಲ್ಲಿಂದ ನಾವು ಬಂದು ಬಿಟ್ವೆ. ಮೊದಲೇ ನಿಗದಿ ಮಾಡಿದ ಹಾಗೆ ಕೇವಲ ನಾಲ್ಕು ದಿವಸಗಳು ಉಳಿದಿದ್ದು ಅದರೊಳಗಾಗಿ ನಾನು ಡೆಲ್ಲಿಗೆ ಹೋಗಬೇಕಾಗಿತ್ತು. 24ನೇ ತಾರೀಖಿಗೆ ಡೆಲ್ಲಿಯ ಕೇಂದ್ರ ಸರಕಾರದ ನಿಲುವು ಈ ಬಗ್ಗೆ ಏನು? ಎನ್ನುವುದನ್ನು ಕೂಡ ತಿಳಿಯಬೇಕಾಗಿದ್ದು ಅದು ಬಹಳ ಮಹತ್ವವುಳ್ಳ ವಿಚಾರವಾಗಿತ್ತು. ಸುಪ್ರೀಂ ಕೋರ್ಟಿನ ನಿರ್ಣಯವು ಅವರ ಮೇಲೆ ಬಹಳಮಟ್ಟಿಗೆ ನಿರ್ಭರವಾಗುತ್ತದೆ. ಅದುವರಿಂದ ವಿಷಯಕ್ಕೆ ಬಹಳ ಮಹತ್ವ ಇದೆ. ನಾವು ಅದನ್ನು ತಿಳಿದುಕೊಂಡು ವಿರೋಧ ಪಕ್ಷದ ನಾಯಕರಿಗೆ ಹೇಳಿದೆ. ನಾವುಗಳು 22ನೇ ತಾರೀಖಿಗೆ ಡೆಲ್ಲಿಗೆ ತಲುಪಬೇಕಾಗಿದೆ. 23ಕ್ಕೆ ಭೇಟಿ ಮಾಡುವುದಕ್ಕೆ ವಿನಂತಿಸಿ ಕೊಂಡು ನಾನು ಪ್ರಧಾನ ಮಂತ್ರಿಯವರಿಗೆ ಕೇಳಿಕೊಂಡಿದ್ದೇನೆ, ಅದಕ್ಕಾಗಿ ತಾವುಗಳು ಬರಬೇಕೆಂದು ಕೇಳಿಕೊಂಡ ಪ್ರಕಾರ, 22ನೇ ತಾರೀಖಿಗೆ ಅನೇಕ ಮಾನ್ಯ ಸದಸ್ಯರು. ವಿರೋಧ ಪಕ್ಷದ ನಾಯಕರು ನನ್ನ ಜೊತೆಗೆ ಬಂದರು. ಆ ಪ್ರಕಾರ 22ನೇ ತಾರೀಖು ನಾವು, ನಮ್ಮ ಪಾರ್ಲಿಮೆಂಟ್ ಸದಸ್ಯರು ಎಲ್ಲರೂ ಸೇರಿ ಕರ್ನಾಟಕ ಭವನದಲ್ಲಿ ಚರ್ಚಿಸಿ ಒಂದು ನಿರ್ಣಯ ಮಾಡಿದ್ದೇವೆ. ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಮೆಮೋರಾಂಡಂ ಕೊಡುವುದು ಎಂದು ನಿರ್ಣಯಿಸಿದ್ದೆವು. 23 ರಂದು ಬೆಳಿಗ್ಗೆ 9-00 ಗಂಟೆಗೆ ಪ್ರಧಾನ ಮಂತ್ರಿಯವರು ನಮಗೆ ಸಂದರ್ಶನದ ಸಮಯವನ್ನು ಕೊಟ್ಟಿದ್ದರು. ಆದರೆ ಬೆಳಿಗ್ಗೆ ವರ್ತಮಾನ ಬಂದು ಪ್ರಧಾನ ಮಂತ್ರಿಯವರ ಆರೋಗ್ಯ ಸರಿಯಾಗಿಲ್ಲವಾದ ಕಾರಣ ನಿಗದಿತ ಸಮಯದಲ್ಲಿ ಭೇಟಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಬಹುಶ: ಅವರ ಭೇಟಿ ಮಾಡುವುದಕ್ಕೆ ನಮಗೆ ಆಗುತ್ತದೆಯೋ ಇಲ್ಲವೋ ಎಂಬ ಒಂದು ಪರಿಸ್ಥಿತಿಯು ಆಗ ಉದ್ಭವವಾಗಿತ್ತು. ನಮಗೆ ಆದ ಚಿಂತೆ ಏನು ಅಂದರೆ, 23ಕ್ಕೆ ಅವರನ್ನು ಭೇಟಿ ಮಾಡುವುದಕ್ಕೆ ಆಗದಿದ್ದರೆ 24ಕ್ಕೆ ಕೇಸ್ ಬಂದೇ ಬರುತ್ತದೆ. ಆ ಮೇಲೆ ಭೇಟಿ ಆಗಿ ಏನು ಪ್ರಯೋಜನ ಇಲ್ಲ ಭೇಟಿ ಆಗುವುದಿದ್ದರೆ ಅದರೊಳಗಾಗಿ ಭೇಟಿಯಾಗ ಬೇಕೆಂದು ವಿಚಾರ ಮಾಡಿದ್ದೆವು. ಆಗ ಬಹಳ ಮಟ್ಟಿಗೆ ಪ್ರಯತ್ನ ಮಾಡಿದಾಗ ಸಾಯಂಕಾಲ 6 ಗಂಟೆಗೆ ನೀವು ಬಂದು ಭೇಟಿಯಾಗಬಹುದು ಎಂದು ಪ್ರಧಾನ ಮಂತ್ರಿಯವರಿಂದ ಸಂದೇಶ ಬಂತು. ಅವೊತ್ತು ನಮ್ಮ

ಜೊತೆಯಲ್ಲಿ ಬಂದಿದ್ದಂಥ ಮಾನ್ಯ ಸದಸ್ಯರುಗಳು. ಪಾರ್ಲಿಮೆಂಟ್ ಸದಸ್ಯರು ಮತ್ತು ವಿರೋಧಪಕ್ಷದ ನಾಯಕರು ಮತ್ತು ಮಾಜಿ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಬೊಮ್ಮಾಯಿಯವರು. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಕೂಡ ನಮ್ಮ ಜೊತೆಗೆ ಬಂದರು. ಯೋಜನಾ ಆಯೋಗದ ಡೆಪ್ಯುಟಿ ಚೇರ್‌ಮನ್‌ರವರಾದ ರಾಮಕೃಷ್ಣ ಹೆಗಡೆಯವರು ನಮ್ಮ ಡೆಲಿಗೇಷನ್‌ನಲ್ಲಿ ಇದ್ದರು ಎಂಬುದನ್ನು ಮಾನ್ಯ ಕರುಣಾನಿಧಿಯವರು ಕಂಡೆಮ್ ಮಾಡಿದಂಥ ಸ್ಟೇಟ್‌ಮೆಂಟ್‌ನ್ನು ಪತ್ರಿಕೆಯಲ್ಲಿ ತಾವುಗಳೆಲ್ಲರೂ ನೋಡಿದ್ದೀರಿ. ನಾವೆಲ್ಲರೂ ಜೊತೆಯಲ್ಲಿ ಹೋಗಿ ಪ್ರಧಾನ ಮಂತ್ರಿಯವರಿಗೆ ಮೆಮೋರಾಂಡಂ ಕೊಟ್ಟಿದ್ದೇವೆ. ಹಾಗೆಯೇ ನಾಳೆಯ ದಿವಸ ಈ ಪ್ರಶ್ನೆ ಬರುತ್ತಾ ಇದೆ. ಇದಕ್ಕಾಗಿ ಅವರು ಅವಸರವಾಗಿ ಏನಾದರೂ ಮಾಡಬೇಕೆಂದು ವಿಚಾರ ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಇದನ್ನು ದಯಮಾಡಿ ಮಾತುಕತೆಯ ಮೂಲಕ ಇತ್ಯರ್ಥ ಮಾಡಬೇಕೇ ಹೊರತಾಗಿ ಏಕಪಕ್ಷೀಯ ರೀತಿಯಿಂದ ಇದನ್ನು ಟ್ರಿಬ್ಯೂನಲ್‌ಗೆ ಹಾಕಬೇಕೆಂಬ ಒಂದು ತರಾತುರಿ ಏನು ಇದೆ. ಅದು ಸಮಂಜಸವಲ್ಲ ನೀವೂ ಕೂಡ ಅಧಿಕಾರಕ್ಕೆ ಬಂದು ಕೇವಲ ನಾಲ್ಕೈದು ತಿಂಗಳುಗಳು ಮಾತ್ರಸಂದಿವೆ ಅದುದರಿಂದ ಇಂಥ ಒಂದು ಪ್ರಶ್ನೆಯನ್ನು ತೀವ್ರಗತಿಯಿಂದ ಅವಸರವಾಗಿ ಮಾಡತಕ್ಕಂಥದ್ದು ಸಾಧುವಲ್ಲ ಎಂದು ನಾವು ಒಂದು ಮೆಮೋರಾಂಡಂನ್ನು ಕೊಟ್ಟಿದ್ದೇವೆ. ಎಲ್ಲರೂ ಅದಕ್ಕೆ ಸಹಿ ಹಾಕಿದ್ದಾರೆ. ಆದರೆ ನಾವು ಏನು ನಿರ್ಣಯ ಮಾಡಿದ್ದೇವೆ, ಅದರಲ್ಲಿ ನಾವು ಕೇಂದ್ರವನ್ನು ಯಾವ ರೀತಿಯಲ್ಲಿ ವಿನಂತಿ, ಮಾಡಿಕೊಂಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಕೊನೆಯ ಪ್ಯಾರಾದಲ್ಲಿ ಏನು ಹೇಳಿದ್ದೇನೆ ಎಂದರೆ ಮೇಲಿನನ್ವಯ, ತಾವು ಕೆಳಕಂಡ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ.

1. ಕೇಂದ್ರವು ಸಂಧಾನಗಳ ಮೂಲಕ, ವಿಷಯವನ್ನು ಇತ್ಯರ್ಥಗೊಳಿಸುತ್ತದೆ, ಎಂಬುದನ್ನು ರಿಟ್ ಅರ್ಜಿಗಳು ತೀರ್ಪಿಗಾಗಿ ಬಂದಾಗ, 24, ಏಪ್ರಿಲ್ 1990 ರಂದು ಸುಪ್ರೀಮ ಕೋರ್ಟಿಗೆ ತಿಳಿಸಬೇಕು.

2. ಸಂಧಾನಗಳ ಸಹಾಯಕ್ಕಾಗಿ ಅವಶ್ಯ ಮಾಹಿತಿಯನ್ನು ಸಂಗ್ರಹಿಸಲು, ಕೇಂದ್ರವು "ತಾಂತ್ರಿಕ ಸತ್ಯಾಂಶ ಕಂಡುಹಿಡಿಯುವ ಸಮಿತಿಯನ್ನು" ರಚಿಸಲು, ಪರಿಶೀಲಿಸುತ್ತಿದೆಯೆಂದು, ಕೋರ್ಟಿಗೆ ತಿಳಿಸಬೇಕು.

3. ಅಂತರ - ರಾಜ್ಯ ನದಿಗಳ ನೀರಿನ ಹಂಚುವಿಕೆಗಾಗಿ, ರಾಷ್ಟ್ರೀಯ ಜಲನೀತಿಯ ನೀತಿಯಲ್ಲಿ ಮಾರ್ಗ ಸೂಚಿಗಳನ್ನು, ಗುರಿಗಳನ್ನು ಮತ್ತು ತತ್ವಗಳನ್ನು ಅಳವಡಿಸಿ, ಅಂತರ ರಾಜ್ಯ ನೀರಿನ ವಿವಾದಗಳ ಕಾಯ್ದೆ 1956ನ್ನು ತಿದ್ದುಪಡಿ ಮಾಡಬೇಕು.

4. ಕರ್ನಾಟಕದಲ್ಲಿನ, ಕಾವೇರಿ ಜಲಾನಯನದಲ್ಲಿ ಅಣೆಕಟ್ಟುಗಳ ಪೂರ್ತಿಗಾಗಿ ಆಜ್ಞೆ ನೀಡಬೇಕು.

ನಾವು 23ನೇ ತಾರೀಖು ಈ ರೀತಿ ಮೆಮೋರಾಂಡಂ ಕೊಟ್ಟೆವು. ಒಂದು ವಿಚಾರವನ್ನು ಇವತ್ತು ವಿಷಾದದಿಂದ ಹೇಳಬೇಕಾಗುತ್ತದೆ. ಏನೆಂದರೆ ಕೇಂದ್ರ ಸರ್ಕಾರದವರೇ ಒಪ್ಪಿ 20ನೇ ತಾರೀಖು ಮದ್ರಾಸ್‌ನಲ್ಲಿ ಮೀಟಿಂಗ್ ಇಟ್ಟರು ಇದುವರೆಗೂ ನಾವು ಸ್ಪಷ್ಟವಾಗಿ ಹಂತ ಹಂತವಾಗಿ

ನಮ್ಮ ಧೋರಣೆ ಏನು ಇದೆ ಡಿಲೇಯಿಂದ ಟ್ಯಾಕ್ಟಿಕ್ಸ್ ಅಲ್ಲ ಎಂದು ಹೇಳಿದ್ದೇವೆ, ಕುಂಟು ನೆಪಹಾಕಿ ಮುಂದೂಡಬೇಕೆಂದು ನಾವು ಇಲ್ಲ. ಅವರು 20ನೇ ತಾರೀಖು ಮದ್ರಾಸ್‌ನಲ್ಲಿ ಮೀಟಿಂಗ್ ಇಟ್ಟರು ಅದಕ್ಕೆ ಕೇಂದ್ರ ಮಂತ್ರಿಗಳೇ ಬರಲಿಲ್ಲ. ಆಮೇಲೆ ಈ ಮೆಮೋರಾಂಡಂನ್ನು ನಾವು ಸಲ್ಲಿಸಬೇಕೆಂದು ಯಾವತ್ತು ತೆಗೆದುಕೊಂಡು ಹೋದೆವೋ ಅವತ್ತು ಪ್ರಧಾನ ಮಂತ್ರಿಗಳಿಗೆ ಹುಷಾರಿಲ್ಲವೆಂದು ಹೇಳಲಾಗಿ ಅವತ್ತು ಸಂಜೆಗೆ ಭೇಟಿ ಮಾಡಬಹುದು ಎಂದು ತಿಳಿಸಲಾಯಿತು. ಸರಿ ನಾವು ಮಧ್ಯಾಹ್ನಕ್ಕೆ ಕೇಂದ್ರ ನೀರಾವರಿ ಸಚಿವರನ್ನಾದರೂ ಭೇಟಿ ಆಗೋಣ ಅವರು ಕಠೋರಿಯಾ ಇರಬಹುದು ಪಾಪ ಅವರೂ ಹೊಸಬರು. ಈ ಸಮಸ್ಯೆಗಳ ಪರಿಚಯ ಇರುವುದಿಲ್ಲ ಅಂದುಕೊಂಡು ನಾವೆಲ್ಲ ಹೋದೆವು. ನಾವು ಅವರನ್ನು 20ನೇ ತಾರೀಖು ಮೀಟಿಂಗ್ ಕರೆದು ಏಕೆ ಕ್ಯಾನ್ಸಲ್ ಮಾಡಿದಿರಿ, ನಮಗೆ ಕಾರಣವನ್ನು ತಿಳಿಸಲಿಲ್ಲ. ಈಗ ಮೀಟಿಂಗ್ ಕರೆಯುತ್ತೀರೋ ಇಲ್ಲವೋ ಎಂದು ಕೇಳಿದೆವು. ಅಲ್ಲದೆ 5ನೇ ಏಪ್ರಿಲ್‌ನಲ್ಲಿ ನಡೆದ ಮೀಟಿಂಗ್‌ನಲ್ಲಿ 20ನೇ ತಾರೀಖು ಸೇರಬೇಕೆಂದು ನಿರ್ಣಯವಾಗಿತ್ತು. ಎಲ್ಲಾ ಮುಖ್ಯಮಂತ್ರಿಗಳು ಮದ್ರಾಸ್‌ನಲ್ಲಿ ಮೀಟಿಂಗ್ ಮಾಡಬೇಕೆಂದು ನಿರ್ಣಯ ಮಾಡಿ ಅದು ಕ್ಯಾನ್ಸಲಾದ ಮೇಲೆ ಇನ್ನೊಂದು ಭೇಟಿಗೆ ಕರೆಯಬೇಕಲ್ಲ. ಈಗ ನೀವು ಯಾವಾಗ ಮೀಟಿಂಗ್ ಕರೆಯಲು ಅನುಕೂಲವಾಗುತ್ತದೆ ಎಂಬುದನ್ನು ತಿಳಿಸಿದರೆ ನಮಗೆ ಅಪ್ರೊತ್ತಿಗೆ ಬರುವುದಕ್ಕೆ ಆಗುತ್ತದೋ ಇಲ್ಲವೋ ಎಂದು ಹೇಳಿ ಬಂದೆವು. ಇಲ್ಲಿಗೆ ಬಂದ ಮೇಲೆ ಪೋಸ್ಟ್‌ಪೋನ್ ಮಾಡಿದ ಮೀಟಿಂಗ್‌ನ್ನು 10ನೇ ತಾರೀಖು ಇಟ್ಟುಕೊಂಡಿದ್ದೇವೆ. ಮೇ ತಿಂಗಳಲ್ಲಿ ನೀವು ಡೆಲ್ಲಿಗೆ ಬನ್ನಿ ಎಂದು ಟೆಲೆಕ್ಸ್ ಮೆಸೇಜ್ ಬಂತು. ಅದಕ್ಕೆ ನಾನು ಅವತ್ತೇ 10ನೇ ತಾರೀಖು ಆಗುವುದಿಲ್ಲ ಏಕೆಂದರೆ ಪ್ರಧಾನ ಮಂತ್ರಿಗಳು ಮೊದಲಬಾರಿಗೆ 11ನೇ ತಾರೀಖು ರಾಜ್ಯಕ್ಕೆ ಪ್ರವಾಸ ಬರುತ್ತಿದ್ದಾರೆ ಆದ್ದರಿಂದ ನಾವು ಇಲ್ಲಿಂದ ಬರುವುದಕ್ಕೆ ಆಗುವುದಿಲ್ಲ ಒಂದು ವೇಳೆ ಲೇಟಾಯಿತು ಎಂದರೆ ಬೇಕಾದರೆ 8ನೇ ತಾರೀಖೇ ಮೀಟಿಂಗನ್ನು ಇಟ್ಟುಕೊಳ್ಳಿ ನಾವು ಡಿಲೇಯಿಂಗ್ ಟ್ಯಾಕ್ಟಿಕ್ಸ್ ಮಾಡುತ್ತಿದ್ದೇವೆ ಎಂದು ಗೂಬೆ ಕೂರಿಸಬೇಡಿ, ಲೇಟಾದರೂ ಪರವಾಗಿಲ್ಲ ಎಂದರೆ 15ನೇ ತಾರೀಖಿಗೆ ಇಟ್ಟುಕೊಳ್ಳಿ ನಾವೆಲ್ಲರೂ ಅದಕ್ಕೆ ಬರುತ್ತೇವೆ ಅಥವಾ ದಕ್ಷಿಣ ರಾಜ್ಯಗಳ ಮುಖ್ಯ ಮಂತ್ರಿಗಳೆಲ್ಲಾ ಇಲ್ಲೇ ಇರುವುದರಿಂದ ಬೆಂಗಳೂರಿನಲ್ಲೇ ಮೀಟಿಂಗ್ ವ್ಯವಸ್ಥೆ ಮಾಡುವುದಕ್ಕೆ ತಯಾರಾಗಿದ್ದೇವೆಂದೂ ಟೆಲೆಕ್ಸ್ ಮೆಸೇಜ್ ಕೊಟ್ಟೆವು. ಹೀಗಾಗಿ ಈ ವಿಷಯವನ್ನು ದುರ್ದೈವದ ಡೆವಲಪ್‌ಮೆಂಟ್ ಎಂದು ಏಕೆ ಹೇಳಿದೆನೆಂದರೆ ದಕ್ಷಿಣದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ನಿರ್ಣಯ ಮಾಡಿದ ತಾರೀಖಿನಲ್ಲಿ ಮೀಟಿಂಗ್ ಕರೆಯಲಿಲ್ಲ. ಮುಂದೆ ನಾವು ಮೆಮೊರಾಂಡಂ ಕೊಡುವಾಗ ಇನ್ನೂ ನೆಗೋಷಿಯೇಷನ್ ನಡೆಯುತ್ತಿದೆ ಅದಕ್ಕಾಗಿ ಇದನ್ನು ಇತ್ಯರ್ಥ ಮಾಡಬೇಡಿ ಎಂದು ಸುಪ್ರೀಂ ಕೋರ್ಟಿಗೆ ಹೇಳಿ ಎಂದು ಹೇಳಿದೆವು. ಅವರು ಅದನ್ನು ಮಾಡಲಿಲ್ಲ. 24ನೇ ತಾರೀಖು ಆರ್ಗ್ಯುಮೆಂಟ್ ಆಯಿತು. ಜಡ್ಜ್‌ಮೆಂಟ್ ಬಂದಿದೆ ಅದರಲ್ಲಿ ಕೇಂದ್ರದ ಧೋರಣೆ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಮಾತ್ರ ಇಲ್ಲಿ ಓದುತ್ತೇನೆ. ಇಲ್ಲಿ ಕೇಂದ್ರ ಸರ್ಕಾರದ ನಿಲುಮೆ ಏನು ಇತ್ತು ರಾಜ್ಯ ಸರ್ಕಾರಗಳ ನಿಲುಮೆ ಏನು ಇತ್ತು ಎನ್ನುವುದನ್ನು ಡಿಟೈಲ್ ಆಗಿ ಹೇಳಿದ್ದಾರೆ. ಇಲ್ಲಿ ಕೇಂದ್ರ ಸರ್ಕಾರದ ಸ್ಟ್ಯಾಂಡ್ ಏನು ಎಂದು ಜಡ್ಜ್‌ಮೆಂಟ್‌ನಲ್ಲಿ ಹೇಳಿದ್ದಾರೆ.

" Mr Goswami. learned additional solicitor General. appearing for the union of India informed us on the 25th April

1990 in the presence of the counsel for the other parties that the Central government did not want to under take any further negotiations and left the matter for disposal by the court".

ಮೀಟಿಂಗ್ ನೋಟೀಸ್ ಕೊಟ್ಟು ಮೀಟಿಂಗ್ ಕರೆದಿದ್ದರು. ಆದರೆ ಅದು ನಡೆಯಲಿಲ್ಲ. ಅಲ್ಲಿಂದ ಎಲ್ಲಾ ಮಾನ್ಯ ಮುಖ್ಯಮಂತ್ರಿಗಳು ನಿರ್ಣಯವನ್ನು ಮಾಡಿ ಮೀಟಿಂಗ್ ಮಾಡಲಾರದೆ ಅದರ ಮೇಲೆ ನಾವು ಮೆಮೋರಾಂಡಂನ್ನು ಕೊಟ್ಟಿದ್ದೇವೆ. ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ನಾನು ಸೇರಿ ಮೆಮೋರಾಂಡಂನ್ನು ಕೊಟ್ಟಿದ್ದೇವೆ. ಈ ಮೆಮೋರಾಂಡಂನಲ್ಲಿ ನಾವು ಏನು ರಿಕ್ವೆಸ್ಟ್ ಮಾಡಿದ್ದೇವೆ ಎಂದು ಹೇಳಿದರೆ "to inform the Supreme Court on 24th April 1990 when the wirt petitions come up for hearing that the matter can be settled through negotiations."

ಈ ರೀತಿ ನಾವು ರಿಕ್ವೆಸ್ಟ್ ಮಾಡಿದ್ದೇವೆ ಅದರ ಪ್ರಕಾರ ಇನ್ನೊಂದು ಮೀಟಿಂಗ್‌ನ್ನು ಕರೆದಿದ್ದಾರೆ. 10ನೇ ತಾರೀಖಿಗೆ ಮೀಟಿಂಗ್‌ನ್ನು ಕರೆದು ಸಾಲಿಸಿಟರ್ ಜನರಲ್‌ರವರು ಏನು ಹೇಳುತ್ತಾರೆ ಎಂದರೆ" Mr Goswami, the learned additional solicitor general, appearing for the union of India, informed us on the 25th April 1990 in the presence of the counsel for the other parties that the Central Govt. did not want to under take any further negotiations and left the matter for disposal by the court".s

ಇದನ್ನು ಅವರು ನಮಗೆ ಹೇಳಬಹುದಾಗಿತ್ತು. ಮತ್ತು ನಾವು ಪ್ರಧಾನಮಂತ್ರಿಯವರ ಹತ್ತಿರ ಮೆಮೋರಾಂಡಂನ್ನು ತೆಗೆದುಕೊಂಡು ಹೋದಾಗ ಅವರು ಹೇಳಬಹುದಾಗಿತ್ತು. ಇದು ಆಗುವ ಹಾಗೆ ಇಲ್ಲ. ಈ ರೀತಿ ನಿರ್ಣಯವನ್ನು ಮಾಡಿದ್ದೇವೆ. ನೆಗೋಷಿಯೇಷನ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಅವರೇ ಹೇಳಬಹುದಾಗಿತ್ತು. ಮತ್ತು ಅದೇ ಮಧ್ಯಾಹ್ನ ನೀರಾವರಿ ಮಂತ್ರಿಗಳ ಹತ್ತಿರ ಹೋಗಿದ್ದೆವು. ಈಗ ಮೀಟಿಂಗ್ ಆಗಿಲ್ಲ ಮತ್ತೆ ಮೀಟಿಂಗ್‌ನ್ನು ಕರೆಯುತ್ತೇವೆ ಇಂಥ ದಿವಸ ಮೀಟಿಂಗ್‌ನ್ನು ಕರೆಯುತ್ತೇವೆ. ಎಂದು ಹೇಳಿ ಒಂದು ಕಡೆ ಮೀಟಿಂಗ್ ಕರೆಯುವುದಕ್ಕೆ ನೋಟೀಸನ್ನು ಕೊಟ್ಟಿದ್ದಾರೆ. ಮತ್ತು ಮೀಟಿಂಗ್ ತಾರೀಖನ್ನು ನಿಗದಿ ಮಾಡಿದ್ದಾರೆ. ಇನ್ನೊಂದು ಕಡೆ ನಾವು ಇನ್ನು ಮುಂದೆ ಯಾವ ತರಹದ ನೆಗೋಷಿಯೇಷನ್ಸ್‌ನ್ನು ಮಾಡುವುದಕ್ಕಾಗುವುದಿಲ್ಲ. ಸುಪ್ರೀಂ ಕೋರ್ಟ್‌ನವರು ಏನು ನಿರ್ಣಯವನ್ನು ಮಾಡುತ್ತಾರೋ ಅದನ್ನು ಒಪ್ಪಿಕೊಳ್ಳೋಣ ಎನ್ನತಕ್ಕಂಥ ಒಂದು ನಿಲುಮೆಯನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇದು ನಿಜವಾಗಿಯೂ ಇದು ದುರದೃಷ್ಟಕರ ಇಂಥ ನಿಲುವೆಯನ್ನು ಅವರು ತೆಗೆದುಕೊಳ್ಳಬಾರದಾಗಿತ್ತು ಮತ್ತು ಇದು ಒಂದು ಕನ್‌ಸಿಸ್ಟೆಂಟ್ ಸ್ಟ್ಯಾಂಡ್ ಅಲ್ಲ. ಒಂದು ಕಡೆ ನೆಗೋಷಿಯೇಷನ್ಸ್ ಎಂದು ಹೇಳಿದರೆ ಇನ್ನೊಂದು ಕಡೆ ಸುಪ್ರೀಂ ಕೋರ್ಟ್‌ನಲ್ಲಿ ಇನ್ನೊಂದು ಹೇಳುತ್ತಾರೆ, ಇನ್ನೊಂದು ಕಡೆ ಎಲ್ಲಾ ಮುಖ್ಯ ಮಂತ್ರಿಗಳ ಸಭೆ ಎಂದು ಹೇಳಿದಲ್ಲಿ ಒಂದು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ನಾನು

ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ಸಮಸ್ಯೆ ಬಹಳ ಸೂಕ್ಷ್ಮವಾದ ಸಮಸ್ಯೆ. ಜಟಿಲವಾದಂಥ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಹೆಚ್ಚಿಗೆ ಏನು ಹೇಳುವುದಕ್ಕೆ ಹೋಗುವುದಿಲ್ಲ.

ಅಲ್ಲಿಂದ ಅವರು 4ನೇ ಮೇನಲ್ಲಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಒಂದು ಡೈರೆಕ್ಟಿವ್ ಕೊಟ್ಟರು. ನೀವು ಒಂದು ತಿಂಗಳೊಳಗೆ ಟ್ರಿಬ್ಯೂನಲ್ ಮಾಡಬೇಕೆಂದು ಅವರು ಒಂದು ಡೈರೆಕ್ಟಿವ್ ಕೊಟ್ಟರು. ಅದಾದಮೇಲೆ ನಾವು ಮತ್ತೆ ಇಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳನ್ನು ಎರಡು ಸಲ ಮೀಟಿಂಗಿಗೆ ಕರೆದೆ. ಸುಪ್ರೀಂ ಕೋರ್ಟಿನವರು ಈ ರೀತಿಯ ಒಂದು ನಿರ್ಣಯವನ್ನು ಮಾಡಿದ್ದಾರೆ. ಈಗ ನಾವು ಏನು ಮಾಡಬೇಕೆಂಬುದರ ವಿಚಾರದ ಸಲುವಾಗಿ 9-5-90ರಂದು ನಾನು ಆಲ್‌ಪಾರ್ಟಿ ಲೀಡರ್ಸ್ ಮೀಟಿಂಗ್ ಮಾಡಿದ್ದೇನೆ. ಮತ್ತೆ ಕೆಲವು ಸಮಸ್ಯೆಗಳು ಬಂದಿದ್ದು. 12-5-90ರಂದು ಮತ್ತೊಂದು ಆಲ್‌ಪಾರ್ಟಿ ಲೀಡರ್ಸ್ ಮೀಟಿಂಗನ್ನು ಮಾಡಿದ್ದೇನೆ. ಎಲ್ಲಾ ಪಕ್ಷದ ನಾಯಕರುಗಳು ಈ ಮೀಟಿಂಗ್‌ಗೆ ಬಂದಿದ್ದರು. ಅಲ್ಲಿ ನಾವು ಒಂದು ನಿರ್ಣಯಕ್ಕೆ ಬಂದೆವು. ನಾವು ಒಂದು ರಿವ್ಯೂ ಪಿಟಿಷನ್ ಹಾಕೋಣ. ಇವತ್ತು ಈ ರಿವ್ಯೂ ಪಿಟಿಷನ್ ಹಾಕಬೇಕೆಂದು ಅನೇಕ ರೀತಿಯಿಂದ ಬೇಡಿಕೆಗಳು ಬರುತ್ತಿವೆ. ನಾವು ರಿವ್ಯೂ ಪಿಟಿಷನ್ ಹಾಕದಿದ್ದರೆ ನಾಳೆ ಜನಗಳಿಗೆ ಬೇರೆ ರೀತಿಯ ಭಾವನೆ ಬರಬಹುದು ರಿವ್ಯೂ ಪಿಟಿಷನ್ ಹಾಕಿದ್ದರೆ, ನಮ್ಮ ಕೇಸ್ ಫೇಲಾಗುತ್ತಿರಲಿಲ್ಲ. ಇವರು ರಿವ್ಯೂ ಪಿಟಿಷನ್ ಹಾಕದೆ ಇರುವುದರಿಂದ ಈ ರೀತಿ ಆಯಿತೆಂಬ ಭಾವನೆ ನಾಳೆ ಬರಬಾರದೆಂಬ ಉದ್ದೇಶದಿಂದ ನಾವೆಲ್ಲರೂ ಸೇರಿ ರಿವ್ಯೂ ಪಿಟಿಷನ್ ಹಾಕಬೇಕೆಂದು ನಿರ್ಣಯ ಮಾಡಿದೆವು. ನಮ್ಮ ಅಡ್ವೋಕೇಟ್‌ರವರು ಏನು ಹೇಳಿದರು ಅದನ್ನೆಲ್ಲಾ ಕೂಲಂಕುಷವಾಗಿ ಚರ್ಚೆ ಮಾಡಿದಮೇಲೆ ಕೊನೆಗೆ ರಿವ್ಯೂ ಪಿಟಿಷನ್ ಹಾಕಬೇಕೆಂದು ನಿರ್ಣಯ ಮಾಡಿದೆವು. ಅದೇ ರೀತಿಯಿಂದ ರಿವ್ಯೂ ಪಿಟಿಷನ್ ಅನ್ನು 16-5-90ರಂದು ನಮ್ಮ ಅಡ್ವೋಕೇಟ್ ಅವರು ಫೈಲ್ ಮಾಡಿದ್ದಾರೆ. ನಮ್ಮ ಲಾ ಡಿಪಾರ್ಟ್‌ಮೆಂಟ್ ಆಫೀಸರ್‌ರವರು ಮುಂತಾದವರೆಲ್ಲರೂ ಹೋಗಿ ಅದನ್ನು ಆ ತಾರೀಖಿನೊಳಗಾಗಿ ಹಾಕಿದರು. ಆದರೆ ಪರಿಸ್ಥಿತಿ ದುರಾದೃಷ್ಟವಶಾತ್ ಏನಾಗಿದೆಯೆಂದರೆ ನಾವು ಯಾವಾಗ ರಿವ್ಯೂ ಪಿಟಿಷನ್ ಹಾಕಿದೆವು, ಆಗ ಸುಪ್ರೀಂ ಕೋರ್ಟಿಗೆ ವೆಕೇಷನ್ ರಜೆ ಪ್ರಾರಂಭವಾಯಿತು. ಸುಪ್ರೀಂ ಕೋರ್ಟಿನಲ್ಲಿ ವೆಕೇಷನ್ ಜಡ್ಜ್‌ಗಳನ್ನು ಬಿಟ್ಟರೆ ಬೇರೆಯಾರೂ ಆ ವೇಳೆಯಲ್ಲಿ ಇರುವುದಿಲ್ಲ. ನಮ್ಮ ಕಾನೂನು ತಜ್ಞರು ಏನು ಹೇಳುತ್ತಾರೆಂದರೆ ಈ ರಿವ್ಯೂ ಪಿಟಿಷನ್‌ನ್ನನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದರೆ ಯಾರು ಜಡ್ಜಮೆಂಟ್ ಕೊಟ್ಟಿದ್ದಾರೆ. ಅದೇ ಜಡ್ಜ್‌ಸ್‌ಗಳು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹಾಗೂ ಇದು ಎರಡನೆಯವರ ಮುಂದೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಇನ್ನು ನಮಗೆ ಜಡ್ಜ್‌ಮೆಂಟ್ ಕೊಟ್ಟ ಆ ಜಡ್ಜ್‌ಸ್‌ಗಳು ಎಲ್ಲಿದ್ದಾರೆ? ವೆಕೇಷನ್ ಕಾಲದಲ್ಲಿ ಅವರು ಎಲ್ಲಿ ಹೋಗುತ್ತಾರೆಂಬುದು ಗೊತ್ತಿಲ್ಲ. ಇವತ್ತಿನವರೆಗೆ ನಮ್ಮ ರಿವ್ಯೂ ಪಿಟಿಷನ್ ಗತಿ ಏನಾಗಿದೆ ಎಂಬುದು ಕೂಡ ಗೊತ್ತಾಗಿಲ್ಲ. ಮೊನ್ನೆ ನಾನು ದೆಹಲಿಗೆ ಹೋದಾಗ ನಮ್ಮ ಪರವಾಗಿ ಅಪಿಯರ್ ಆಗಿದ್ದ ಲಾಯರನ್ನು ಕರೆಯಿಸಿದ್ದೆ ಅವರೂ ಸಹ ಈ ಕೇಸ್ ಏನಾಗಿದೆ ಎಂಬುದು ಗೊತ್ತಿಲ್ಲವೆಂದು ಹೇಳಿದರು. ಆ ಮೂರು ಜಡ್ಜಸ್‌ಗಳು ದೆಹಲಿಯಲ್ಲಿ ಇಲ್ಲವೆಂದು ಹೇಳಿದರು. ಇನ್ನೂ ವೆಕೇಷನ್ಸ್ ಮುಗಿದಿರಲಿಲ್ಲ.

ಬಹುಶ: ಇದು ಅವರ ಮುಂದೆ ಯಾವಾಗ ಬರುತ್ತದೆಂಬುದು ಗೊತ್ತಿಲ್ಲ ಈ ರಿವ್ಯೂ ಪಿಟಿಷನ್ ಪರಿಸ್ಥಿತಿ ಏನಾಗುತ್ತದೆಂಬುದು ಕೂಡ ಗೊತ್ತಾಗುತ್ತಿಲ್ಲ. ಇದಾದ ನಂತರ ಮೊನ್ನೆ ದಿವಸ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಕೇಂದ್ರ ಸರ್ಕಾರದವರು ಟ್ರಿಬ್ಯೂನಲ್ ಅನ್ನು ನೇಮಕ ಮಾಡಿದ್ದಾರೆ. ಇದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೀರಿ. ಈ ಪರಿಸ್ಥಿತಿಯಿಂದ ನಾವು ಮುಂದೆ ಯಾವ ರೀತಿಯಲ್ಲಿ ಸಾಗಬೇಕು? ಯಾವ ದಿಕ್ಕಿನಲ್ಲಿ ಸಾಗಬೇಕು? ಹಾಗೂ ಮುಂದೆ ನಾವು ಯಾವ ಹೆಜ್ಜೆಯಿಟ್ಟರೆ ಕರ್ನಾಟಕ ರಾಜ್ಯದ ಕಾವೇರಿ ನದಿಯ ಪ್ರಾಂತದ ಜನತೆಯ ಹಿತರಕ್ಷಣೆ ಆಗುತ್ತದೆ ಎನ್ನತಕ್ಕದ್ದನ್ನು ಇವತ್ತು ಬಹಳ ಕೂಲಂಕುಷವಾಗಿ ಗಂಭೀರವಾಗಿ ವಿಚಾರ ಮಾಡುವಂತಹ ಒಂದು ಪರಿಸ್ಥಿತಿಯಲ್ಲಿ ಇದ್ದೇವೆ ಈಗ ಒಂದು ವಿಚಾರ ಹೇಳಬೇಕೆಂದರೆ ಒಂದು ಭಾವನೆ ಹೊರಗಡೆಯಿದೆ. ಈ ಕಾವೇರಿ ಜಲವಿವಾದ ಈ ಘಟ್ಟಕ್ಕೆ ಬಂದು ನಿಂತಾಗ ಈ ಸದಸ್ಯರೆಂದು ನಾನು ಹೇಳುವುದಿಲ್ಲ ಆದರೆ ಈ ಸದನದಲ್ಲಿ ನಾನಾ ರೀತಿಯಿಂದ ನಾನಾ ವಿಧದಲ್ಲಿ ಕೆಲಸ ಮಾಡಿದಂಥ ಕೆಲವು ನಮ್ಮ ಸ್ನೇಹಿತರು ಹೊರಗಡೆಯಿಂದ ಹೇಳಿಕೆಗಳನ್ನು ಕೊಡುವಂಥದ್ದನ್ನು ನಾನು ಪ್ರತಿಕೆಗಳಲ್ಲಿ ಓದಿದ್ದೇನೆ. ಅದು ಎಷ್ಟರ ಮಟ್ಟಿಗೆ ಕರ್ನಾಟಕ ಹಿತದೃಷ್ಟಿಯಿಂದ ಸರಿಯಾಗಿದೆಯೇ ಹೇಗೆ ನನಗೆ ಗೊತ್ತಿಲ್ಲ ಅದನ್ನು ನಾವು ಪರಿಶೀಲನೆ ಮಾಡೋಣ ಆದರೆ ಅವರು ಹೇಳುವುದೇನೆಂದರೆ "ಹೋಗಿ" ಎಲ್ಲಾ ಮುಗಿದು ಹೋಯಿತು, ಕರಾಳ ದಿವಸ, ನಾವೆಲ್ಲ ಕಾವೇರಿ ನದಿಯಲ್ಲಿ  ಮುಳುಗಿ ಹೋದೆವು. ಈ ರೀತಿಯ ಹೇಳಿಕೆಗಳು ಕೆಲವು ನಾಯಕರುಗಳಿಂದ ಹೊರಗಡೆಯಿಂದ ಬರುತ್ತಿವೆ. ಇದರಿಂದ ನನಗೆ ಅನ್ನಿಸುತ್ತದೆ, ಅದು ನಮ್ಮ ಹಿತರಕ್ಷಣೆಗೆ ಅನುಕೂಲವಾಗುವುದಿಲ್ಲ. ಮತ್ತು ಪ್ರತಿಕೂಲವಾಗುತ್ತದೆ ಏತಕ್ಕೆಂದರೆ ಟ್ರಿಬ್ಯೂನಲ್ ಬೇಡವೆಂದು ಹೇಳುವುದು ಯಾವುದೇ ಭಯದಿಂದ ಅಲ್ಲ. ಕರ್ನಾಟಕದ ಮುಖ್ಯ ಮಂತ್ರಿಯಾಗಿ ಸ್ಪಷ್ಟ ಪಡಿಸುತ್ತೇನೆ ಮತ್ತು ಕರ್ನಾಟಕ ಸರ್ಕಾರದ ಪತಿಯಿಂದ ಹೇಳುತ್ತಿದ್ದೇನೆ. ನಾನು ಟ್ರಿಬ್ಯೂನಲ್‌ಕ್ಕೆ ಅಂಜುವುದಿಲ್ಲ. ಟ್ರಿಬ್ಯೂನಲ್‌ಗೆ ಹೋಗುವುದರಲ್ಲಿ ನನಗೇನೂ ಹೆದರಿಕೆ ಇಲ್ಲ, ನಮ್ಮ ಕೇಸ್ ವೀಕ್ ಆಗಿದೆ, ಅಲ್ಲಿ ಬಿದ್ದು ಹೋಗುತ್ತದೆ ಎನ್ನುವ ಪರಿಸ್ಥಿತಿ ಏನೂ ಇಲ್ಲ. ನಾವು ಬೇಕಾದರೆ ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕೆ ತಯಾರು ಇದ್ದೇವೆ. ಆ ಮೂರು ಜನ ಜಡ್ಜಸ್ ಏನು ಇದ್ದಾರೆ. ಅವರ ಬಗ್ಗೆ ವೈಯಕ್ತಿಕವಾಗಿ ನಾನೂ ಏನೂ ಹೇಳುವುದಿಲ್ಲ ಅಥವಾ ವಿರುದ್ಧವಾಗಿಯೂ ಹೇಳುವುದಿಲ್ಲ. ಏನಾದರೂ ಹೇಳುವುದಾದರೆ, ಅವರೂ ಸಹ ಎಮಿನೆಂಟ್ ಜಡ್ಜಸ್ ಇದ್ದಾರೆ. ಅವರ ಕೈಯಿಂದ ನ್ಯಾಯ ಸಿಗುತ್ತದೆ, ಅನ್ಯಾಯ ಆಗುತ್ತದೆ, ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ, ನಾನು ಅದಕ್ಕೆ ತಯಾರು ಇಲ್ಲ. ಪ್ರಶ್ನೆ ಏನು ಅಂದರೆ ಟ್ರಿಬ್ಯೂನಲ್‌ಗೆ ಏಕೆ ಹೋಗುವ ಹಾಗೆ ಇಲ್ಲ ಎಂದರೆ ಟ್ರಿಬ್ಯೂನಲ್‌ಗೆ ಹೋಗುವಂತಹ ಒಂದು ಪಕ್ವತೆ ಅಥವಾ ರೈಟ್ ಈ ಕೇಸ್‌ನಿಂದ ಆಗಿದೆಯೇ ಎನ್ನುವುದು ಪ್ರಶ್ನೆ. ನಮ್ಮ ಲೆಕ್ಕದಲ್ಲಿ ಆಗಿಲ್ಲ. ಅದನ್ನು ನಾವು ಹೇಳಿದ್ದೇವೆ. ಏಕೆಂದರೆ ಟ್ರಿಬ್ಯೂನಲ್‌ಗೆ ಹೋಗಬಹುದು. ಟ್ರಿಬ್ಯೂನಲ್‌ನಲ್ಲಿ ಮೂರು ಜನ ಕುಳಿತು ಯಾವ ರೀತಿ ನದಿ ನೀರನ್ನು ಹಂಚಬೇಕು ಎಂದು ಕೇಂದ್ರ ಸರ್ಕಾರದವರು ಇದುವರೆಗೆ ಯಾವುದೇ ಗೈಡಲೈನ್ ಮಾಡಿಲ್ಲ. ಯಾವುದಾದರೂ ಅಂತಹ ರಾಜ್ಯದ ನದಿಯಲ್ಲಿರುವಂತಹ ನೀರು ಸಂಬಂಧಪಟ್ಟ ರಾಜ್ಯಗಳಿಗೆ ಯಾವ ರೀತಿ ಹಂಚಬೇಕು. ಯಾವ ಪದ್ಧತಿ ಮೇಲೆ ಹಂಚಬೇಕು, ಯಾವ ಯಾರ್ಡ್‌ಸ್ಟಿಕ್ ಅಥವಾ ನಾರ್ಮ್ಸ್‌ನಲ್ಲಿ ಹಂಚಬೇಕು ಎಂಬ ಬಗ್ಗೆ ಇವೊತ್ತಿನವರೆಗೆ ಕೇಂದ್ರದ

ಯಾವುದೇ ಗೈಡ್‌ಲೈನ್ಸ್ ಇಲ್ಲ. ಇದರ ಬಗ್ಗೆ ನಿರ್ಣಯ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಗೈಡ್ ಲೈನ್ಸ್ ಅನ್ನು ಹಾಕಿಕೊಂಡು ಕೆಲವು ನಾರ್ಮ್ಸ್‌ಗಳನ್ನು ಫ್ರೇಂ ವರ್ಕ್ ಮಾಡಿಕೊಂಡು ನೀರನ್ನು ಹಂಚಿ ಎಂದು ನಾವು ಅವರಿಗೆ ಹೇಳಿದ್ದೇವೆ. ಇದನ್ನು ನಾವು ನಮ್ಮ ಮೆಮೋರಾಂಡಂನಲ್ಲಿಯೂ ಸಹ ಹೇಳಿದ್ದೇವೆ ಹಾಗೂ ನಾಲ್ಕನೆಯ ಏಪ್ರೀಲ್‌ನ ಮೀಟಿಂಗ್‌ನಲ್ಲಿ ಸಹ ಸ್ಪಷ್ಟವಾಗಿ ಹೇಳಿದ್ದೇವೆ. ಗೈಡ್‌ಲೈನ್ಸ್ ಇಲ್ಲ ದುರ್ದೈವ ಎಂದರೆ ನೀರಿನ  ಗಾತ್ರದ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ಸಹ ಇಲ್ಲ. ಮೊದಲನೆಯ ಸಹ 5ನೇ ಏಪ್ರಿಲ್ ಮೀಟಿಂಗ್‌ನಲ್ಲಿ ಬಹಳ ಜನ ಸೆಂಟ್ರಲ್ ವಾಟರ್ ಕಮೀಷನ್ ಅಧಿಕಾರಿಗಳು ಬಂದಿದ್ದರು. ನಾನು ಹೇಳಿದೆ, ಇದು ಎಂತಹ ಆರ್ಗನೈಸೇಷನ್ ಎಂದು ಈ ಮಾತಿನಿಂದ ವಾಟರ್ ಕಮೀಷನ್ ಅಧಿಕಾರಿಗಳಿಗೆ ಬೇಸರ ಆಗಿರಬಹುದು. ಇಡೀ ಭಾರತ ಖಂಡದಲ್ಲಿ ರಿವರ್ ಬಗ್ಗೆ ವಾಟರ್‌ಯಿಲ್ಡ್ ಬಗ್ಗೆ ಫ್ಲೋ ಬಗ್ಗೆ ಯುಟಿಲೈಸೇಷನ್ ಬಗ್ಗೆ ಅಧಿಕಾರ ವಾಣಿಯಿಂದ ಹೇಳುವಂತಹ ಸಂಸ್ಥೆ ಎಂದರೆ ಅದು ಸೆಂಟ್ರಲ್ ವಾಟರ್ ಕಮೀಷನ್, ಅಲ್ಲಿ ಅಂಕಿಅಂಶಗಳು ಇಲ್ಲ. ಎಂದು ಅವರು ನಮಗೆ ಬರೆದುಕೊಟ್ಟಿದ್ದಾರೆ. ಕ್ಷಮಿಸಬೇಕು, ಆ ಮಾಹಿತಿಯನ್ನು ಒದಗಿಸಲು ಸಾಧ್ಯವಿಲ್ಲ, ಎಂದು ಹೇಳಿದ್ದಾರೆ. ನೀವು ಯಾವ ಆಧಾರದ ಮೇಲೆ ಟ್ರಿಬ್ಯೂನಲ್ ಮಾಡಿದ್ದೀರಿ. ಇದಕ್ಕೆ ಡಾಕ್ಯುಮೆಂಟ್ಸ್ ಬೇಕು, ಸ್ಟಾಟಿಸ್ಟಿಕ್ಸ್ ಬೇಕು ಎಂದು ನಾನು ಕೇಳಿದ ಮೇಲೆ ಅವರು ರೈಟಿಂಗ್‌ನಲ್ಲಿ ಕೊಟ್ಟಿದ್ದಾರೆ. ನಾವು ಯಾವ ಸಾಮಗ್ರಿಗಳು ಬೇಕು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ಅಲ್ಲಿ ಸ್ಟ್ಯಾಟಿಸ್ಟಿಕ್ಸ್ ಇಲ್ಲದಿದ್ದರೆ ಹೇಗೆ? ಗೈಡ್‌ಲೈನ್ಸ್ ಇಲ್ಲದೆ ಇದ್ದರೆ ಟ್ರಿಬ್ಯೂನಲ್‌ನಲ್ಲಿ ಏನು ಮಾಡಬೇಕು ? ಹೇಗೆ ಕೆಲಸ ಮಾಡುವುದು ? ನನಗೆ ಒಂದು ಭಯ ಏನು ಇದೆ ಅಂದರೆ ಟ್ರಿಬ್ಯೂನಲ್ ರಚನೆ ಆದರೆ ಅದರ ತೀರ್ಮಾನ ಎಷ್ಟು ವರ್ಷ ಹಿಡಿಯುತ್ತದೆಯೋ ಗೊತ್ತಿಲ್ಲ. ಏಕೆಂದರೆ ಕೃಷ್ಣಾದ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಗೊತ್ತಾಗುತ್ತದೆ. ಕೃಷ್ಣಾದ ಟ್ರಿಬ್ಯೂನಲ್ ಅಂತಿಮ ತೀರ್ಮಾನ ಆಗುವುದಕ್ಕೆ ಏಳುವರ್ಷ ಆಯಿತು. ಏಳು ವರ್ಷಗಳು ಆಯಿತು ಅಂದರೆ, ಎರಡನೆಯ ಟ್ರಿಬ್ಯೂನಲ್‌ಗಳು ಗೋದಾವರಿ ಹಾಗೂ ನರ್ಮದಾ ಹತ್ತು ವರ್ಷ ಆಯಿತು. ನಾನು ಹೇಳಿದೆ 10 ವರ್ಷ ಅಥವಾ 7ವರ್ಷಗಳವರೆಗೆ ಕಾಯ್ದುಕೊಂಡು ಕೂಡೋಣವೇ ಎಂದು. ನಾವು ಲೆಕ್ಕ ಹಾಕಿದರೆ 60 ಅಥವಾ 70 ಟಿ.ಎಂ.ಸಿ. ನೀರು ಆ ಕಡೆ ಅಥವಾ ಈ ಕಡೆ ಹೆಚ್ಚು ಕಡಿಮೆ ಹಾಕಿದರೆ ಈ ಪ್ರಶ್ನೆ ಬಗೆ ಹರಿದು ಹೋಗಬಹುದು. ಇಂತಹ ಪರಿಸ್ಥಿತಿ ಇರುವಾಗ ನಾವು ಇದನ್ನು ಒಂದು ಟ್ರಿಬ್ಯೂನಲ್ ಕೊರಳಿಗೆ ಕಟ್ಟಿ 8-10 ವರ್ಷ ಕಾಯುವುದು ಯೋಗ್ಯವಾಗುತ್ತದೆಯೋ? ಟ್ರಿಬ್ಯೂನಲ್‌ಗೆ ಹೋಗುವುದರಿಂದ ಟೈಮ್ ಕನ್‌ಸ್ಯೂಮ್ ಆಗುತ್ತದೆ. ಈ ಕಾರಣದಿಂದ ನಾವು ನೀವು ಕುಳಿತು ಸಮಾಧಾನ ಕರವಾಗಿ ಇತ್ಯರ್ಥ ಮಾಡಿಕೊಳ್ಳೋಣವೆಂದು ಪಕ್ಕದ ರಾಜ್ಯದವರಿಗೆ ಹೇಳಿದೆ. ಟ್ರಿಬ್ಯೂನಲ್‌ಗೆ ಹೋಗುವುದರಿಂದ ನಮಗೆ ಹೆದರಿಕೆ ಆಗುತ್ತದೆ ಎಂಬ ನಿಲುಮೆಯನ್ನು ನಾವು ತಾಳಿಲ್ಲ. ಈ ಮಾತನ್ನು ಇವೊತ್ತು ಸ್ಪಷ್ಟಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ನಾನು ಅಂತಿಮವಾಗಿ ಹೇಳುವುದು ಏನು ಎಂದರೆ ಮಾನ್ಯ ವಿರೋಧ ಪಕ್ಷದ ಅನೇಕ ನಾಯಕರು ಈ ವಿಷಯದಲ್ಲಿ ನಾನು ಎಷ್ಟು ಅಧ್ಯಯನ ಮಾಡಿದ್ದೇನೋ ಅದಕ್ಕೂ ಹೆಚ್ಚು ಅಧ್ಯಯನ ಮಾಡಿದ್ದಾರೆ. ಅವರು ಈ ಸಮಸ್ಯೆ ಬಗ್ಗೆ ಯೋಗ್ಯವಾದ ಸಲಹೆ ಮತ್ತು ಮಾರ್ಗದರ್ಶನವನ್ನು ನಮ್ಮ ಸದನಕ್ಕೆ ನಮ್ಮ ಸರ್ಕಾರಕ್ಕೆ ಮಾಡುತ್ತಾರೆಂದು ನಾನು

ತಿಳಿದುಕೊಂಡಿದ್ದೇನೆ. ಕೊನೆಯದಾಗಿ ಹೇಳುವುದಾದರೆ ಇವೊತ್ತು ಕೇಂದ್ರ ಸರ್ಕಾರದವರು ಅಪ್ತಾಲೋಚನೆಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುತ್ತೇವೆಂದು ಮನಸ್ಸು ಮಾಡಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ ಇವೊತ್ತು ಇದಕ್ಕೆ ಅವಕಾಶ ಇದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನನಗೆ ಗೊತ್ತಿರುವ ಹಾಗೆ ನರ್ಮದಾ ಟ್ರಿಬ್ಯೂನಲ್ ಆದ ಮೇಲೂ ಎರಡು ಸಲ ಟ್ರಿಬ್ಯೂನಲ್ ಬೇಡ ನಾವು ಹೊರಗಡೆ ಹೋಗಿ ಇತ್ಯರ್ಥ ಮಾಡಿಕೊಳ್ಳೋಣ. ಎಂದು ಹೇಳಿದಂತಹ ಘಟನೆಗಳು ಇವೆ ಹಾಗೂ ನಿದರ್ಶನಗಳೂ ಇವೆ. ಅದಕ್ಕಾಗಿ ಟ್ರಿಬ್ಯೂನಲ್ ಆದ ಕೂಡಲೇ ನೆಗೊಷಿಯೇಷನ್‌ನ ಬಾಗಿಲುಗಳು ಯಾವತ್ತೊ ಮುಚ್ಚಿದ್ದವು ಸದಕಾಲ ಮುಚ್ಚಿದ್ದವು, ಎನ್ನುವಂಥ ಭಾವನೆ ನನ್ನದಲ್ಲ. ಅದಕ್ಕಾಗಿ ನಾನು ಇವತ್ತು ಹೇಳುತ್ತೇನೆ. ನಾನು ಮತ್ತೆ ಟ್ರಿಬ್ಯೂನಲ್‌ಗೆ ಹೆದರಿ ಈ ಮಾತನ್ನು ಹೇಳುತ್ತೇನೆ ಎಂದು ಯಾರೂ ಭಾವಿಸಬಾರದು. ಏಕೆಂದರೆ ಟ್ರಿಬ್ಯೂನಲ್‌ನಲ್ಲಿ ಯಾವತ್ತು ನಿರ್ಣಯ ಬರುತ್ತದೋ ಯಾವಾಗ ನಿರ್ಣಯ ಬರುತ್ತದೋ ನಿರ್ಣಯ ಬರುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೋ ಏನೇನು ಸಮಸ್ಯೆಗಳು ಉದ್ಭವವಾಗುತ್ತವೋ, ಇದನ್ನು ನೋಡಿಕೊಂಡು ಮತ್ತು ನಮ್ಮ ಅನುಭವವನ್ನು ಹಿನ್ನೆಲೆಯಾಗಿಟ್ಟುಕೊಂಡು ನಾನು ಇವತ್ತು ಕೇಂದ್ರಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅವರು ಇವತ್ತೂ ಕೂಡ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳನ್ನು ಕರೆಯಬಹುದು. ನಾನು ಬಹಳ ಹೆಮ್ಮೆಯಿಂದ ಹೇಳುತ್ತಾ ಇದ್ದೇನೆ. ಇಲ್ಲಿ ಟ್ರಿಬ್ಯೂನಲ್‌ಗೆ ಹೋಗಿರಿ ಎಂದು ಮೊದಲನೇ ಸಲ ಕೇರಳ ಮುಖ್ಯಮಂತ್ರಿಗಳೇ ಹೇಳಿದರು. ಆ ನಂತರ ನಾನು ಬೇಡಿ ಟ್ರಿಬ್ಯೂನಲ್‌ಗೆ ಹೋದರೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿದಾಗ ಅವರೂ ಕೂಡ ತಮ್ಮ ನಿಲುಮೆಯನ್ನು ಬದಲಾಯಿಸಿ ಟ್ರಿಬ್ಯೂನಲ್ ಬೇಡ ಸೌಹಾರ್ದಯುತವಾಗಿ ಪರಸ್ಪರಿಕ ಚರ್ಚೆಯಿಂದ ನಾವು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ ಎಂಬ ನಿಲುವನ್ನು ಕೇರಳದ ಮುಖ್ಯ ಮಂತ್ರಿಗಳೇ ತೆಗೆದುಕೊಂಡರು. ನಾನು ಏನು ನಿಲುವನ್ನು ತೆಗೆದುಕೊಂಡಿದ್ದೇನೋ ಅದೇ ಒಂದು ಸ್ಟ್ಯಾಂಡನ್ನು ಅವರೂ ಕೂಡ ತೆಗೆದುಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ಈ ಪ್ರಶ್ನೆ ಮತ್ತೆ ಟ್ರಿಬ್ಯೂನಲ್‌ಗೆ ಹೋಯಿತು. ಇನ್ನೇನು ನಮ್ಮ ಕೆಲಸ ಆಗಿಯೋಯಿತು ಎಂದು ಕೇಂದ್ರ ಸರ್ಕಾರ ಸುಮ್ಮನೆ ಕೂಡುವುದಕ್ಕಿಂತಲೂ ಇನ್ನೂ ಇವತ್ತು ಪ್ರಯತ್ನ ಮಾಡುತ್ತಿದ್ದರೆ ಕರ್ನಾಟಕದ ಪರವಾಗಿ, ಕರ್ನಾಟಕ ಸರ್ಕಾರದ ಪರವಾಗಿ ಸಂಪೂರ್ಣ ಸಹಕಾರ ನೀಡುವುದಕ್ಕೆ ನಾನು ತಯಾರಿದ್ದೇನೆ ಮತ್ತು ಅವರು ಎಲ್ಲಿಗೆ ಕರೆದರೂ ಯಾವಾಗ ಕರೆದರೂ ನಾನು ಬರುವುದಕ್ಕೆ ತಯಾರಿದ್ದೇನೆ ಮತ್ತು ಟ್ರಿಬ್ಯೂನಲ್ ಇದ್ದರೂ ಕೂಡ ಟ್ರಿಬ್ಯೂನಲ್ ಹೊರಗಡೆ ಕೂಡ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಇಂತಹ ಒಂದು ಜಟಿಲವಾದಂಥ ಸೂಕ್ಷ್ಮವಾದಂಥ ಗಹನವಾದಂಥ ಗಂಭೀರವಾದಂಥ ಸಮಸ್ಯೆಯನ್ನು ಅಷ್ಟೇ ಗಂಭೀರತೆಯಿಂದ ನಾವೆಲ್ಲರೂ ಈ ಸದನದಲ್ಲಿ ಚರ್ಚೆ ಮಾಡಬೇಕು ಎಂದು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## 3. ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ ರಾಜ್ಯದಲ್ಲಿ ರೈತರ ಸಾಲ ಮಾನ್ನಾ ಮಾಡುವ ಬಗ್ಗೆ. ಶ್ರೀ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಗಳು ಇವರ ಸ್ಪಷ್ಟೀಕರಣ. (6ನೇ ಜೂನ್, 1990).

ಉಪಾಧ್ಯಕ್ಷಿಣಿಯರು: –

ಈಗ ನಿಯಮ 68ರ ಮೇಲೆ ಅಲ್ಪ ಕಾಲಾವಧಿ ಚರ್ಚೆ ಮಾನ್ಯ ಸದಸ್ಯರಾದ ಹೆಚ್. ಏಕಾಂತಯ್ಯನವರು ನಿಯಮ 68ರ ಮೇರೆಗೆ ಚರ್ಚೆಯನ್ನು ಪ್ರಾರಂಭಿಸಬೇಕು.

ಶ್ರೀ ಹೆಚ್. ಏಕಾಂತಯ್ಯ :

ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ರೈತರ ಸಾಲದ ಮನ್ನಾ ಬಗ್ಗೆ....

ಶ್ರೀ ವೀರೇಂದ್ರ ಪಾಟೀಲ್ :

ಮಾನ್ಯ, ಉಪಾಧ್ಯಕ್ಷಿಣಿಯವರೇ ಚರ್ಚೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಮಾನ್ಯ ಸದಸ್ಯರು ಸಾಲ ಮನ್ನಾ ಮಾಡುವುದರ ಬಗ್ಗೆ ಚರ್ಚೆಯನ್ನು ಮಾಡುವ ಮುನ್ನ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಅವರ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೆ ನನಗೆ ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಈ ಒಂದು ವಿಷಯದ ಬಗ್ಗೆ ಈಗಾಗಲೇ ಸುಮಾರು ಮೂರು ಸಲ ಚರ್ಚೆಯಾಗಿ ಇದು ನಾಲ್ಕನೇ ಸಲದ ಚರ್ಚೆ ಎಂದು ನನಗನ್ನಿಸುತ್ತದೆ. ಕೇವಲ ಸಾಲ ಮನ್ನಾ ಆಗಬೇಕು ಸಾಲ ಮನ್ನಾ ಆಗಬೇಕು ಎಂದು ಹೇಳಿದರೆ, ಸಾಲ ಎಂದರೆ ಯಾವುದು ? ಯಾವ ಸಾಲ ಮನ್ನಾ ಆಗಬೇಕು ಎನ್ನುವಂತಹ ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ಯಾರ್‍ಯಾರು ಈ ಒಂದು ಚರ್ಚೆಯಲ್ಲಿ ಭಾಗವಹಿಸುತ್ತಾರೋ ಅವರು ತಮ್ಮ ಸ್ಪಷ್ಟವಾದ ನಿಲುಮೆಯನ್ನು ಹೇಳಬೇಕು. ಈಗ ಕೆಲವು ವಿಚಾರಗಳ ಬಗ್ಗೆ ತಮ್ಮನ್ನು ಹೇಳುತ್ತಿದ್ದೇನೆ. ಅದನ್ನು ತಾವು ಬರೆದುಕೊಂಡರೆ ಒಳ್ಳೆಯದು. ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಹೇಳಬಹುದು. ಅಥವಾ ಆ ವಿಷಯದ ಮೇಲೆ ಬೆಳಕು ಚೆಲ್ಲಿದರೆ ನನಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಒಂದನೆಯದು ಸಾಲ ಅಂದರೆ ಯಾವ ತರಹದ ಸಾಲ? ಏಕೆಂದರೆ ಸರ್ಕಾರಿ ಕ್ಷೇತ್ರದಲ್ಲಿ ಮೂರು ತರಹದ ಸಾಲಗಳು ಇವೆ. ಈಗ ನೀವು ವಿಚಾರ ಮಾಡುತ್ತಿರುವುದು ಸಹಕಾರಿ ಬ್ಯಾಂಕಿನ ಮುಖಾಂತರ ವಿತರಣೆ ಆದ ಸಾಲಗಳ ಬಗ್ಗೆ. ಸಹಕಾರಿ ಬ್ಯಾಂಕ್‌ಗಳ ಮುಖಾಂತರ ಕೊಟ್ಟಿರುವಂತಹ ಸಾಲಗಳು ಮೂರು ತರಹ. ಒಂದು ಅಲ್ಪಾವಧಿ ಸಾಲ, ಅಂದರೆ ಕ್ರಾಪ್ ಲೋನ್, ಎರಡನೆಯದು ಮಧ್ಯಮಾವಧಿ ಸಾಲ, ಮೂರನೆಯದು ದೀರ್ಘಾವಧಿ ಸಾಲ, ಮನ್ನಾ ಮಾಡುವಾಗ ಅಲ್ಪಾವಧಿ ಸಾಲವನ್ನು ಮನ್ನಾ ಮಾಡಬೇಕೋ ಅಥವಾ ಮಧ್ಯಮಾವಧಿ ಸಾಲವನ್ನು ಮನ್ನಾ ಮಾಡಬೇಕೋ ಅಥವಾ ಎಲ್ಲಾ ರೀತಿಯ ಸಾಲವನ್ನು ಮನ್ನಾ ಮಾಡಬೇಕೋ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಇನ್ನು ಎರಡನೆಯ ವಿಚಾರದ ಅಂದರೆ, ಸಾಲಮನ್ನಾ ಮಾಡಬೇಕಾದಾಗ ಕಟ್ ಆಫ್ ಡೇಟ್ ಇರಬೇಕು. ಎಲ್ಲಿಯವರೆಗೆ

ಸಾಲ ಮನ್ನಾ ಮಾಡಬೇಕು. ಮತ್ತು ಕಟ್ ಆಫ್ ಡೇಟ್ ಸಾಲ ಔಟ್ ಸ್ಟ್ಯಾಂಡಿಂಗ್ ಇರಬೇಕೋ ಅಥವಾ ಓವರ್ ಡ್ಯೂ ಇರಬೇಕೋ ಎಂದು ತಮ್ಮನ್ನು ಕೇಳುತ್ತಿದ್ದೇನೆ. ಯಾಕೆಂದರೆ ಶ್ರೀ ಏಕಾಂತಯ್ಯನವರು ಸಹಕಾರಿ ಕ್ಷೇತ್ರದಲ್ಲಿ ಇದ್ದವರು. ಮಾನ್ಯ ಮಂತ್ರಿಗಳಾಗಿದ್ದವರು. Let him enlight me as to that should be the cut off date and as on that date, whehter the amount out standing or the whole loan should be waived off. ಸಾಲ ಮನ್ನಾ ಮಾಡಬೇಕಾಗಿದ್ದರೆ ಕಟ್ ಆಫ್ ಡೇಟ್ ದಿವಸದಿಂದ ಸಾಲ ಆಗಿರಬೇಕೋ ಅಥವಾ ಓವರ್ ಡ್ಯೂ ಆಗಿರಬೇಕೇ? ಸಾಲ ತೆಗೆದುಕೊಂಡಿದ್ದು ಮನ್ನಾ ಆಗಬೇಕೋ ಅಥವಾ ಓವರ್ ಡ್ಯೂ ಸಾಲವನ್ನು ಮನ್ನಾ ಮಾಡಬೇಕೋ ಎಂಬ ಬಗ್ಗೆ ಒಂದು ಸ್ಪಷ್ಟೀಕರಣವನ್ನು ತಾವು ಕೊಡಬೇಕು. ಅಲ್ಲಿಂದ period of default for waiver ಏಕೆಂದರೆ ಸಾಲ ತೆಗೆದುಕೊಂಡು ಬಹುಶ: 7ವರ್ಷ, 8 ವರ್ಷ, 10 ವರ್ಷ, ಆಗಿದೆ, ಅದನ್ನು ತಿರುಗಿ ಕೊಟ್ಟಿಲ್ಲ. ಕೆಲವರು ಒಂದು ವರ್ಷದಲ್ಲಿ ತೆಗದುಕೊಂಡಿದ್ದ ಸಾಲವನ್ನು ತಿರುಗಿಕೊಟ್ಟಿಲ್ಲ ಮತ್ತೆ ಕೆಲವರು ಎರಡು ವರ್ಷ, ಮೂರು ವರ್ಷದಲ್ಲಿ ತೆಗೆದುಕೊಂಡಿದ್ದನ್ನು ಸಹ ತಿರುಗಿ ಕೊಡದೇ ಇರಬಹುದು. ಆದ್ದರಿಂದ ಯಾವ ಪಿರಿಯಡ್‌ನ್ ಸಾಲ ಮನ್ನಾ ಮಾಡಬೇಕು ಎಂಬ ಎಂಬ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು. ಸಾಲ ಮನ್ನಾ ಮಾಡಬೇಕು ಎಂದರೆ ಯಾವ ರೈತನ ಸಾಲ ಮನ್ನಾ ಮಾಡಬೇಕು. ಯಾರದ್ದು ಮಾಡಬಾರದು ಎಂದು ಹೇಳಬೇಕು. ಏಕೆಂದರೆ 10 ಸಾವಿರದ ಒಳಗಡೆ ತೆಗೆದುಕೊಂಡಿರತಕ್ಕ ಸಾಲ ಮನ್ನಾ ಮಾಡಬೇಕು ಒಂದು ವಾದ ಇದೆ. ಇನ್ನೊಂದು ವಾದ ಏನಿದೆ ಎಂದರೆ, 10 ಸಾವಿರ ಅಥವಾ 15 ಸಾವಿರ ಸಾಲ ಇದ್ದರೆ ಎಲ್ಲವನ್ನೂ ಮನ್ನಾ ಮಾಡಬೇಕು ಎಂದು ಕೆಲವರವಾದ ಇದೆ. ಅದಕ್ಕಾಗಿ ಸಾಲ ಮನ್ನಾ ಮಾಡಬೇಕಾಗಿದ್ದರೆ ಎಷ್ಟರ ಮಟ್ಟಿಗೆ ಸಾಲ ಮನ್ನಾ ಮಾಡಬೇಕು ಎಂದು ತಾವು ಹೇಳಬೇಕು. who should be eligible for waiver ? ಈ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು ಎಷ್ಟು ಸಾಲವನ್ನು ಮನ್ನಾ ಮಾಡಬೇಕೆಂಬುದನ್ನು ಸಹ ತಾವು ಸ್ಪಷ್ಟೀಕರಣ ಮಾಡಬೇಕು. ಕೇವಲ 10 ಸಾವಿರದವರೆಗೆ ಇರುವಂತಹ ಸಾಲವನ್ನು ಮನ್ನಾ ಮಾಡಬೇಕೇ ಅಥವಾ 11 ಸಾವಿರ ರೂಪಾಯಿ ಸಾಲ ತೆಗೆದುಕೊಂಡ್ಡಿದ್ದರೆ 10 ಸಾವಿರ ಮಾತ್ರ ಮನ್ನಾ ಮಾಡಿ ಇನ್ನುಳಿದ ಒಂದು ಸಾವಿರ ರೂಪಾಯಿಯನ್ನು ಮಾತ್ರ ವಾಪಸ್ ತೆಗೆದುಕೊಳ್ಳಬೇಕೇ ಎಂಬುದರ ಬಗ್ಗೆ ತಾವು ವಿಚಾರ ಮಾಡಿ ತಿಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿಂದ ಸಾಲ ಮನ್ನಾ ಮಾಡುವುದು ಒಂದು ಬೇಡಿಕೆ ಬಹುಶ: ಕರ್ನಾಟಕ ರಾಜ್ಯದ ರೈತರಿಗೆ ಮಾತ್ರ ಸಾಲ ಇದೆ ಉಳಿದ ಕಡೆ ಸಾಲ ಇಲ್ಲವೆಂದು ಪ್ರಶ್ನೆ ಅಲ್ಲ ಎಲ್ಲಾ ರಾಜ್ಯಗಳಲ್ಲಿ ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ನಮ್ಮ ಪ್ರಶ್ನೆ ಬರುವುದು ಏನೆಂದರೆ ಉತ್ತರ ಹಿಂದೂಸ್ಥಾನದಲ್ಲಿ ತೆಗೆದುಕೊಂಡ ಸಾಲದ ಕಡೆ ನಾವು ಹೋಗುವ ಹಾಗೆ ಇಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ನಮ್ಮ ನೆರೆ ರಾಜ್ಯದವರು ಯಾವ ರೀತಿ ಇದಕ್ಕೆ ನಿಯಮವನ್ನು ಮಾಡಿದ್ದಾರೆ ಅದೇ ರೀತಿ ನಾವು ಮಾಡಬೇಕು. ಅಥವಾ ಅವರು ಯಾವುದೇ ರೀತಿಯಲ್ಲಿ ಮಾಡಿಕೊಳ್ಳಲಿ ನಾವು ನಮ್ಮದೇ ಆದ ಬೇರೆ ರೀತಿಯಲ್ಲಿ ಇರಬೇಕು ಎನ್ನುವುದು ತಮ್ಮ ವಿಚಾರ ಇದೆಯೇ ಎಂಬುದನ್ನು ತಾವು ಹೇಳಬೇಕು.

ಇನ್ನೊಂದು ಬಹಳ ಗಹನವಾದ ವಿಚಾರ ತಮ್ಮ ಮುಂದೆ ಇಡುವುದು ಏನೆಂದರೆ, ಈಗ ಸಾಲ ಮನ್ನಾ ಮಾಡಬೇಕು ಸರಿ. ಈಗ ತಮಗೆ ಗೊತ್ತಿದೆ. ಸಾಲ ಎಷ್ಟಿದೆ ಎಂಬುದು, ಇದನ್ನು ಮನ್ನಾ ಮಾಡಬೇಕು ಅಂದರೆ ಎಷ್ಟಾಗುತ್ತದೆ, ಕೇಂದ್ರ ಸರ್ಕಾರದವರು ಎಷ್ಟು ಕೊಡುವುದಕ್ಕೆ ಒಪ್ಪಿದ್ದಾರೆ. ನಾವು ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ತಾವು ಸಾಲ ಮನ್ನಾ ಮಾಡಬೇಕು ಅಂದಾಗ ಆ ದುಡ್ಡನ್ನು ನಾವು ಒದಗಿಸಬೇಕಲ್ಲ. ಈಗ ತಮ್ಮ ಮುಂದೆ ಬಡ್ಜೆಟ್ ಇದೆ. ಆದ್ದರಿಂದ ಏನಪ್ಪ ನಮ್ಮದು ಬಜೆಟ್ ಇನ್ನೂ ಬಂದಿಲ್ಲ ಎನ್ನುವಂಥಾದ್ದು ಇಲ್ಲವೇ ಇಲ್ಲ. ಅದರ ಸಲುವಾಗಿ ಇವತ್ತು ಸಾಲ ಮನ್ನಾ ಮಾಡಬೇಕು ಎಂದು ಹೇಳುವ ಮುಂಚೆ ಈ ದುಡ್ಡನ್ನು ಯಾವ ರೀತಿಯಿಂದ, ಯಾವ ಬಾಬಿನಿಂದ ಕಟ್ ಮಾಡಬೇಕು, ಇದಕ್ಕೆ ಬೇಕಾದರೆ ಹೊಸ ಟ್ಯಾಕ್ಸ್ ಹಾಕಬೇಕೋ, ಈಗ ವೇವ್ ಮಾಡುವಂಥ ದುಡ್ಡು ಏನಿದೆಯೋ ಅದು ಎಲ್ಲಿಂದ ಬರಬೇಕು ಬಜೆಟ್‌ನಿಂದ ಬರಬೇಕಾಗಿದ್ದರೆ ಯಾವ ಬಾಬಿನಲ್ಲಿ ಇದನ್ನು ಕಟ್ ಮಾಡಿಕೊಂಡು ನಾವು ಕೊಡಬೇಕು ಎನ್ನುವಂತಾದ್ದನ್ನು ತಾವು ನಮ್ಮ ಮುಂದೆ ಹೇಳಿದರೆ ಬಹುಶ: ನನಗೆ ಉತ್ತರ ನೀಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಇವೆಲ್ಲದರ ಬಗ್ಗೆ ಬಹುಶ: ಮಾನ್ಯ ಏಕಾಂತಯ್ಯನವರನ್ನು ಹಿಡಿದುಕೊಂಡು ಮಾನ್ಯ ಯಡಿಯೂರಪ್ಪನವರನ್ನು ಹಿಡಿದುಕೊಂಡು ಯಾರ್‍ಯಾರು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ಇದ್ದಾರೊ ಅವರೆಲ್ಲರೂ ನಾನು ಹೇಳಿರುವಂಥ ಇಷ್ಯೂಸ್ ಮೇಲೆ ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದರೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

## 4. ಬೆಲೆ ಏರಿಕೆ ಗಮನ ಸೆಳೆಯುವ ನಿಲುವಳಿ ಕುರಿತು ಚರ್ಚೆಯ ಮೇಲೆ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ. (ದಿನಾಂಕ: 6ನೇ ಜೂನ್ 1990).

ಶ್ರೀ ವೀರೇಂದ್ರ ಪಾಟೀಲ್ :

ಮಾನ್ಯ ಉಪಾಧ್ಯಕ್ಷಿಣಿಯವರೇ, ಬಸ್ ದರ ಏರಿಕೆ ಬಗ್ಗೆ ಸರ್ಕಾರದ ಗಮನ ಸೆಳೆಯುವ ಅವಕಾಶವನ್ನು ವಿರೋಧ ಪಕ್ಷದ ನಾಯಕರುಗಳು, ಪೂರ್ತಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಮತ್ತು ಅವರು ಹೇಳಬೇಕಾದಂಥಹ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಸರ್ಕಾರದ ಪರವಾಗಿ ನನ್ನ ಸಹೋದ್ಯೋಗಿಗಳಾದ ಶ್ರೀಮಾನ್ ಜಾರ್ಜರವರು ನೀಡಬೇಕಾದಂತಹ ಎಲ್ಲಾ ಸ್ಪಷ್ಟೀಕರಣವನ್ನು ನೀಡಿದ್ದಾರೆ. ನನಗೆ ಹೇಳುವುದಕ್ಕೆ ಅವಕಾಶ ಇಲ್ಲ. ಆದರೂ ಇವೊತ್ತು ತಮ್ಮ ಎದುರು ನಾನು ನಿಂತಿರುವಂತಹ ಉದ್ದೇಶ ಇಷ್ಟೇ. ನಾನು ಅನೇಕ ವರ್ಷಗಳಿಂದ ಆಡಳಿತದಲ್ಲಿ ಇದ್ದೇನೆ. ಆಡಳಿತದ ಹೊರಗೂ ಇದ್ದೇನೆ. ಒಂದು ಮಾತು ನಾವು ಎಲ್ಲರೂ ಒಪ್ಪತಕ್ಕದ್ದು ಇಲ್ಲಿಯವರೆಗೂ ಇತಿಹಾಸ ಸಾಕ್ಷಿಯಾಗಿದೆ. ಸರ್ಕಾರ ಹೊರಡಿಸುವಂತಹ ಯಾವುದೇ ಟ್ಯಾಕ್ಸ್‌ನ್ನು ವಿರೋಧ ಪಕ್ಷದವರಾಗಲಿ, ಜನ ಸಾಮಾನ್ಯರಾಗಲಿ ಸ್ವಾಗತಿಸಿಲ್ಲ; ಸ್ವಾಗತಿಸುವುದೂ ಇಲ್ಲ. ಆದರೆ ಟ್ಯಾಕ್ಸ್ ಹಾಕಲಾರದೆ ಅಭಿವೃದ್ಧಿ ಕೆಲಸ ಕಾರ್ಯಗಳು ಆಗುವುದಿಲ್ಲ. ಮತ್ತು ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಪ್ಪತ್ತೈದು ಪರ್ಸೆಂಟ್ ಟ್ಯಾಕ್ಸ್, ಒಮ್ಮೆಗೆ ಹೆಚ್ಚಾಯಿತು ಎನ್ನುವಂತಹ ವಿಚಾರ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದು ವೇಳೆ ಹಿಂದಿದ್ದಂತಹ ಸರ್ಕಾರ 85 ರಿಂದ 89ರ ವರೆಗೆ ಏನು ಅಧಿಕಾರದಲ್ಲಿತ್ತು ಆಗ ಅವರು ಈ ವೇಳೆಗೆ ಬಸ್ ದರವನ್ನು ಪುನರ್ ವಿಮರ್ಶೆ ಮಾಡಿ ಹೆಚ್ಚು ಮಾಡಿದ್ದಾರೆ, ಈ ಪ್ರಮಾಣದಲ್ಲಿ ಹೆಚ್ಚು ಮಾಡಬೇಕಾದಂತಹ ಅವಶ್ಯಕತೆ ನಮಗೆ ಇರುತ್ತಿರಲಿಲ್ಲ. ಅದು ಏಕೆ ಮಾಡಲಿಲ್ಲ ಎನ್ನುವುದು ಅವರಿಗೆ ಗೊತ್ತಿದೆಯೇ ಹೊರತಾಗಿ ನಾನು ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಸಿಂಧ್ಯಾರವರು ಒಂದು ವಿಚಾರ ಹೇಳಿರುವರು, ಏಕೆಂದರೆ ಅವರು ಆಡಳಿತದಲ್ಲಿದ್ದರು, ಮತ್ತು ಅವರು ಇದೇ ಖಾತೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಪ್ರತಿ ವರ್ಷ ನಾವು ಯೋಜನಾ ಆಯೋಗಕ್ಕೆ ಹೋಗುತ್ತೇವೆ, ಹೋಗಿ ಮುಂದಿನ ವರ್ಷದ ಯೋಜನೆಯ ಗಾತ್ರ ಎಷ್ಟು ಇರಬೇಕು ಎನ್ನುವಂಥದ್ದು ನಾವು ನಮ್ಮಲ್ಲಿ ಎಕ್ಸ್‌ರ್‌ಸೈಜ್ ಮಾಡಿ ಪ್ಲಾನಿಂಗ್ ಕಮೀಷನ್ನಿನ ಡೆಪ್ಯುಟಿ ಚೇರ್‌ಮನ್ ಹಾಗೂ ಅದರ ಸದಸ್ಯರ ಜೊತೆಯಲ್ಲಿ ಕುಳಿತು ಸಮಾಲೋಚನೆ ಮಾಡಬೇಕು. ವರ್ಷ ವರ್ಷವೂ ನಮ್ಮ ಪ್ಲಾನ್ ಗಾತ್ರ ಹೆಚ್ಚಾಗುತ್ತದೆಯೇ ಹೊರತಾಗಿ ಕಡಿಮೆಯಾಗುವುದಿಲ್ಲ. ಅದು ಹೆಚ್ಚು ಆಗಲೇ ಬೇಕಾಗುತ್ತದೆ. ಇಲ್ಲದೇಹೋದರೆ ಅಭಿವೃದ್ಧಿ ಕಾರ್ಯಗಳಾಗುವುದಿಲ್ಲ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನೆಯ ಗಾತ್ರ ಒಂದುವರೆ ಲಕ್ಷ ಕೋಟಿ ಇತ್ತು. ಇವತ್ತು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಅದು 6 ಲಕ್ಷ ಕೋಟಿಯಾಗಿದೆ. 6 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಧನಗಳನ್ನು ನಾವು ಕ್ರೋಢಿಕರಿಸಿಕೊಳ್ಳಬೇಕು. ಹಿಂದೆ ಹಾಕಿದ ಟ್ಯಾಕ್ಸ್‌ನಲ್ಲಿ ಒಂದು ನಯಾಪೈಸೆಯನ್ನು ಜಾಸ್ತಿ ಮಾಡದೇ ಯಾವುದೇ ಟ್ಯಾಕ್ಸ್ ಕೇಳಲಾರದಂತೆ ಕೆಲಸಮಾಡಿ, ಯೋಜನೆಯ ಗಾತ್ರ ದೊಡ್ಡದು ಮಾಡಿ, ಆಡಳಿತವನ್ನು ಚೆನ್ನಾಗಿ ನಡೆಸಬೇಕು

ಎಂದು ಕೇಳುವಂತಾದ್ದು ಸಾಧುವಾದುದಲ್ಲ. ಇದನ್ನು ಯಾರು ಮಾಡುವುದಕ್ಕೆ ಆಗುವುದಿಲ್ಲ. ಮತ್ತು ಇದೀಗ ಶ್ರೀ ಸಿಂಧ್ಯಾರವರು ಹಾಗೆ, ನಾವು ಪ್ರತಿ ವರ್ಷ ಅಷ್ಟೇ ಅಲ್ಲ, ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಕರ್ನಾಟಕದ ಎಂಟನೇ ಪಂಚವಾರ್ಷಿಕ ಯೋಜನೆಯ ಗಾತ್ರ ಎಷ್ಟು ಇರಬೇಕು ಎಂದು ನಿರ್ಣಯ ಮಾಡುವ ಮುನ್ನ ನಾವು ಎಷ್ಟು ಗಾತ್ರ ಇರಬೇಕು ಎಂದು ಕೇಳಿದರೆ, ಯೋಜನಾ ಆಯೋಗದವರು ಕಣ್ಣು ಮುಚ್ಚಿ ತಲೆದೂಗುವ ಹಾಗಿಲ್ಲ. ಅವರು ನಮ್ಮನ್ನು ಕೇಳುತ್ತಾರೆ. ನಿಮ್ಮ ಸಾಧನಾ ಸಂಪತ್ತುಗಳು ಏನು ? ನಿಮ್ಮ ರಿಸೋರ್ಚ್ ಏನು ಯಾವ ರೀತಿಯಿಂದ ನಿಮಗೆ ಹಣ ಬರುತ್ತದೆ ? ಎಂದು ಕೇಳಿದಾಗ ನಾವು ಸವಿಸ್ತಾರವಾಗಿ ಐಟಂ ವೈಸಾಗಿ ಹೇಳಬೇಕಾಗುತ್ತದೆ. ಅವರನ್ನು ಸಮಾಧಾನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಒಪ್ಪುವುದಿಲ್ಲ. ಅದು ಅಲ್ಲದೆ ಒಂದು ಕಟ್ಟಪ್ಪಣೆ ಹಾಕುತ್ತಾರೆ. ಎಲೆಕ್ಟ್ರಿಸಿಟಿ ಬೋರ್ಡ್ ಆಗಲಿ ಕೆ.ಎಸ್.ಆರ್.ಟಿ.ಸಿ.ಆಗಲಿ, ಐದು ವರ್ಷಗಳ ಅವಧಿಯಲ್ಲಿ ಎರಡು ಸಲ ಅದರೂ ದರಗಳ ಪುನರ್‌ವಿಮರ್ಶೆ ಮಾಡಿ, ಹೆಚ್ಚು ಮಾಡಬೇಕೆಂದು ಅವರು ಹೇಳುತ್ತಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಟ್ಯಾಕ್ಸ್ ಹಾಕುವಂತಹದ್ದು ಸ್ವಾಭಾವಿಕ. ಇದನ್ನು ನಾನು ಉದಾಹರಣೆಗೆ ಹೇಳಬೇಕಾಗಿದ್ದರೆ, ಮೊದಲನೆಯ ಸಲ ನ್ಯಾಷನಲ್ ಫ್ರಂಟ್ ಗೌರ್ನಮೆಂಟ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಾಲ್ಕು ತಿಂಗಳಲ್ಲಿ ಎಷ್ಟು ಟ್ಯಾಕ್ಸ್ ಹಾಕಿದ್ದಾರೆ ? ನನಗೆ ಗೊತ್ತಿರುವ ಹಾಗೆ 3,325 ಕೋಟಿ ರೂಪಾಯಿಗಳ ಹೊಸ ಕರಭಾರ ಜನರ ಮೇಲೆ ಅನೇಕ ರೀತಿಯಲ್ಲಿ ಹಾಕಿದ್ದಾರೆ. ಇದರ ಸವಿಸ್ತಾರ ವಿವರಗಳನ್ನು ಕೊಡಬೇಕೆಂದು ಕೊಡುತ್ತೇನೆ. ತೆರಿಗೆಗಳನ್ನು ಪೆಟ್ರೋಲ್ ಮೇಲೆ ಹಾಕಿದ್ದಾರೆ, ಡಿಸೇಲ್ ಮೇಲೆ ಹಾಕಿದ್ದಾರೆ. ರೈಲ್ವೇ ಮೇಲೆ, ಪೋಸ್ಟ ಕಾರ್ಡ್ ಮೇಲೆ, ಟೆಲಿಫೋನ್ ಮೇಲೆ, ಎಸ್.ಟಿ.ಡಿ ಮೇಲೆ, ಕರಭಾರ ಹಾಕಿದ್ದಾರೆ. ಆ ವೇಳೆಗೆ ಸ್ವಾಭಾವಿಕವಾಗಿ ಕರಭಾರ ಹಾಕಿದ್ದಾರೆ. ಇದನ್ನು ಅಲ್ಲಿ ವಿರೋಧ ಪಕ್ಷದವರು ಸ್ವಾಗತ ಮಾಡಿದ್ದಾರೆಯೇ? ಅಂದರೆ ಯಾವ ತರಹದ ಸ್ವಾಗತ ಮಾಡಿಲ್ಲ. ಹಿಂದೆ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ. ಇದನ್ನು ಮಾಡದೇ ಗತ್ಯಂತರವಿಲ್ಲ. ನಾವು 25 ಪ್ರತಿಷತ್ ಹೆಚ್ಚು ಮಾಡಿದ್ದೇವೆ. ಬಹುಶ: ಅನೇಕ ಮಾನ್ಯ ಸದಸ್ಯರು ಇದು ಹೆಚ್ಚಾಯಿತು ಎಂದು ಹೇಳಿದ್ದಾರೆ. ಇದು ಸ್ವಲ್ಪಮಟಿಗೆ ಹೆಚ್ಚಾಗಿರಬಹುದು, ಸ್ವಲ್ಪ ನೋವಾಗುತ್ತದೆ, ಸ್ವಲ್ಪ ಸಮಯದವರಿಗೆ ನೋವಾಗುತ್ತದೆ ಈಗ ಮಹಾರಾಷ್ಟ್ರದವರು ಹೆಚ್ಚು ಮಾಡಿದ್ದಾರೆ. ಅಂಧ್ರದವರು ಹೆಚ್ಚು ಮಾಡಿದ್ದಾರೆ. ತಮಿಳು ನಾಡಿನವರು ಇನ್ನು ಕೆಲವೇ ದಿವಸಗಳಲ್ಲಿ ಹೆಚ್ಚು ಮಾಡುತ್ತಾರೆ. ಕೇರಳದವರು ಹೆಚ್ಚು ಮಾಡುವವರಿದ್ದಾರೆ, ಇವರೆಲ್ಲಾ ಲೆಕ್ಕಾಚಾರ ಮಾಡುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರ ಪಕ್ಷದವರು ಆಳುವಂತಹ ರಾಜ್ಯಗಳಾದ ಮಧ್ಯ ಪ್ರದೇಶ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶಗಳವರೂ ಹೆಚ್ಚು ಮಾಡುತ್ತಾರೆ. ಬೇಕಾದರೆ ನಿಮಗೆ ಅಂತಹ ತರಾತುರಿ ಇದ್ದರೆ ಟೆಲಿಫೋನ್ ಮಾಡಿ ಕೇಳಿ, ಹೆಚ್ಚು ಮಾಡುತ್ತಾರೋ ಅಥವಾ ಇಲ್ಲವಾ ಎಂದು. ಇವತ್ತು ಡಿಸೇಲ್ ಬೆಲೆ ಹೆಚ್ಚಾಯಿತು. ಇದರಿಂದ ಮೊದಲನಷ್ಟೇ ಷೇರು ಮೇಲೆ ನಡೆಸಲಿಕ್ಕಾಗುವುದಿಲ್ಲ. ನಮ್ಮ ಸಹೋದ್ಯೋಗಿಗಳು ಎಲ್ಲಾ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಡಿಸೇಲ್ ಬೆಲೆ ಹೆಚ್ಚಾಗಿದೆ, ಬಿಡಿ ಭಾಗಗಳ ಬೆಲೆ ಜಾಸ್ತಿಯಾಗಿದೆ, 1985 ರಿಂದ ಇಲ್ಲಿಯವರೆಗೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ತಾವು ನೋಡಿ. ಮಾನ್ಯ ಸಿಂಧ್ಯಾರವರು ಒಂದು ವಿಚಾರ ಹೇಳಿದ್ದರು. ಬಸ್ ಚಾಸಿಸ್

1985-86ರಲ್ಲಿ 3.37,532 ರೂಪಾಯಿ ಇತ್ತು. ಈಗ ಅಂದರೆ 1990-91ರಲ್ಲಿ 4,75,000 ಆಗಿದೆ ಎಂದು; ಅಂದರೆ 40,7 ಪರ್ಸೆಂಟ್ ಹೆಚ್ಚಾಯಿತು. 1985-86ರಲ್ಲಿ ಡಿಸೇಲ್ ಬೆಲೆ ಒಂದು ಲೀಟರಿಗೆ 3.91 ಪೈಸೆ ಇತ್ತು 1990-91ರಲ್ಲಿ ಮೊನ್ನೆ ದರ ಹೆಚ್ಚು ಮಾಡಿದ ಮೇಲೆ 4.69 ಪೈಸೆ ಆಗಿದೆ. ಇದರಿಂದ ಸರಾಸರಿ ಶೇಕಡ ಹೆಚ್ಚಳ 19.9 ಆಗಿದೆ. ಇನ್ನು ಟೈರ್ ಟ್ಯೂಬ್‌ಗಳು 1985-86ರಲ್ಲಿ 3.392 ರೂಪಾಯಿ ಇದ್ದದ್ದು, ಇವತ್ತು 1990-91ಕ್ಕೆ 4.635 ರೂಪಾಯಿ ಆಗಿದೆ. ಪರ್ಸೆಂಟೇಜ್ ಅಫ್ ಇನ್‌ಕ್ರೀಜ್ 36.6 ಪರ್ಸೆಂಟ್. ಇನ್ನ ವೇಜೆಸ್ ಅಫ್ ಎಂಪ್ಲಾಯಿಸ್ 30 ಪರ್ಸೆಂಟ್‌ಗೆ ಹೆಚ್ಚಿಗೆ ರಾಷ್ಟ್ರಪತಿ ಆಳ್ವಿಕೆಯಲ್ಲಿ ಕೊಟ್ಟಿದ್ದಾರೆ. ರಾಷ್ಟ್ರ್ಯಪತಿ ಆಳ್ವಿಕೆಯಲ್ಲಿ ಏನು ಮಾಡಿದ್ದಾರೆ ಎಂಬ ಬಗ್ಗೆ ನಾನು ಟೀಕೆ ಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಜನರ ಹಿತಕ್ಕೆ ಬಿಡುತ್ತೇನೆ. ಮತ್ತು ನಿಮ್ಮ ಹಿತಕ್ಕೆ ಬಿಡುತ್ತೇನೆ. 1985-86ರಲ್ಲಿ ಸರಾಸರಿ ವೇಜ್‌ಸ್ 1543 ಇದ್ದರೆ, ಈಗ 2802 ಆಗಿದೆ. ಪರ್ಸೆಂಟೇಜ್ ಅಫ್ ಇನ್‌ಕ್ರೀಜ್ 81.5 ಆಗಿದೆ. ಇಂಟರೆಸ್ಟ್ ಆನ್ ಕ್ಯಾಪಿಟಲ್ 1,265.92 ಇದ್ದುದ್ದು ಈಗ 2,88 ಆಗಿದೆ. ಅಂದರೆ 128 ಪರ್ಸೆಂಟ್ ಇನ್‌ಕ್ರೀಜ್ ಆಗಿದೆ. ಇನ್ನು ಬಿಡಿ ಭಾಗಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಟೋಟಲ್ ಕಾಸ್ಟ್ ಆಫ್ ಆಪರೇಷನ್ ಪರ್ ಕಿಲೋ ಮೀಟರ್ 1985-86ರಲ್ಲಿ 433.5 ರೂಪಾಯಿ ಇದ್ದದ್ದು ಈಗ 5,947 ಆಗಿದೆ. ಪರ್ಸೆಂಟೇಜ್ 37.2 ಆಗಿದೆ.

ಇಂತಹ ಪರಿಸ್ಥಿತಿಯಲ್ಲಿ ತಾವು ವಿಚಾರ ಮಾಡಿ, ನಾವು ಏನು ಮಾಡಬೇಕು ಎನ್ನುವಂತದ್ದು ಏನು ಹೇಳಿ. ದರ ಹೆಚ್ಚು ಮಾಡಬೇಕಾಗಿತ್ತೋ, ಅಥವಾ ಇದು ಪಬ್ಲಿಕ್ ಸೆಕ್ಟರ್, ಸೇಕ್ರೆಡ್ ಕ್ಲಾಸ್ ಎಂದು ಏನು ಮಾಡಬಾರದಾಗಿತ್ತೋ ಎಂದು ಹೇಳಿ? ಏನು ಮಾಡದೇ ಇದ್ದರೆ ಹೋದ ವರ್ಷ, 53 ಕೋಟಿ ಇದ್ದದ್ದು ಈ ವರ್ಷ 96 ಕೋಟಿ ಆಗುತ್ತಿತ್ತು. ಇದನ್ನು ನಾವು ನೀವು ಕೊಡುವುದಿಲ್ಲ. ನಾವು ನೀವು ಕಾರಿನಲ್ಲಿ ಓಡಾಡುತ್ತೇವೆ ಇದನ್ನು ಕೊಡುವವರು ಯಾರು ಎಂದರೆ ಟ್ಯಾಕ್ಸ್ ಕೊಡತಕ್ಕ ಬಡ ಬೋರೇಗೌಡ. ಈಗ ಆಗಿರುವಂತಹ ನಷ್ಟವನ್ನು ತುಂಬುವ ಜವಾಬ್ದಾರಿ ಟ್ಯಾಕ್ಸ್ ಕಟ್ಟುವವರ ಮೇಲೆ ಇದೆ. ನಮ್ಮೆಲ್ಲರ ಮೇಲೆ ಇಲ್ಲ. ಇದನ್ನು ವಿಚಾರ ಮಾಡಿಕೊಂಡು ಮಾಡಬೇಕಾದ ಅವಶ್ಯಕತೆ ಬಂತು. ಅದಕ್ಕೋಸ್ಕರ ಇದನ್ನು ಹೆಚ್ಚು ಮಾಡಿದ್ದೇವೆ. ಒಂದು ವಿಚಾರವನ್ನು ಯಡಿಯೂರಪ್ಪನವರು ಹೇಳಿದ್ದಾರೆ, ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಹುಶ: ವಿಚಾರ ಮಾಡಬೇಕಾದ ಸಲಹೆಗಳು ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಖಾಸಗಿಯವರಿಗೆ ಏತಕ್ಕೆ ಅವಕಾಶ ಮಾಡಿಕೊಡವುದಿಲ್ಲ. ಎಲ್ಲವನ್ನು ನೀವೆ ಏತಕ್ಕೆ ಮಾಡುವುದಕ್ಕೆ ಹೋಗುತ್ತೀರಿ; ಎಂದು ಹೇಳಿದ್ದಾರೆ. ಅದನ್ನು ಹೇಳುತ್ತಾ ದೆಹಲಿಯ ವಿಚಾರ ಹೇಳಿದ್ದಾರೆ. ಮೂರು ವರ್ಷ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದೆ. ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ರವರು ತಾವಾಗಿಯೇ ಬಸ್‌ಗಳನ್ನು ಖರೀದಿ ಮಾಡುವುದಕ್ಕೆ ಬಸ್‌ನ್ನು ಹೈರ್ ಮಾಡುತ್ತಾರೆ. ಅದರಲ್ಲಿ ರೇಟ್ಸ್ ಇರುತ್ತದೆ. ಬಸ್ ಮಾಲೀಕ ಬಸ್ಸನ್ನು ಬೆಳಿಗ್ಗೆ 5 ಗಂಟೆಗೆ ತಂದು ನಿಲ್ಲಿಸಿ ಬಿಡುತ್ತಾನೆ. ಡ್ರೈವರ್ ಕ್ಲೀನರ್ ಅವನ ಕಡೆಯವರು, ಕಂಡೆಕ್ಟರ್ ನಮ್ಮವನು. ಅವನಿಗೆ ದಿನಕ್ಕೆ ಇಷ್ಟು ಬರುತ್ತದೆ ಎಂದು ಮಿನಿಮಮ್ ಗ್ಯಾರಂಟಿ ಇರುತ್ತದೆ. ಇಷ್ಟು ಓಡಿದರೆ ಇಷ್ಟು ಎಂದು ದುಡ್ಡನ್ನು ಟ್ರಾನ್ಸ್‌ಪೋರ್ಟ್ ಕಾರ್ಪೊರೇಶನ್‌ನವರು ಕೊಡಬೇಕು, ಅದರ ಮೇಲೆ ಓಡಿದರೆ ಇಷ್ಟು ಎಂದು ಕೊಡಬೇಕೆಂದಿರುತ್ತದೆ. ಆದರೆ ಅದರ ಕಂಟ್ರೋಲ್, ಕಂಡಕ್ಟರ್ ಫೇರ್ ವಸೂಲಿ

ಮಾಡುವುದು, ಪ್ಯಾಸೆಂಜರ್‌ಗಳನ್ನು ಇಷ್ಟು ಎಂದು ಹತ್ತಿಸಿಕೊಳ್ಳಲು ಕಾರ್ಪೋರೇಷನ್ನರವರ ಜವಾಬ್ದಾರಿ ರಾತ್ರಿ ಹೊತ್ತು ಬಸ್ ತಂದು ಬಿಟ್ಟ ಮೇಲೆ ಅದನ್ನು ತೆಗೆದುಕೊಂಡು ಹೋಗಿ ಮೆಂಟೇನ್ ಮಾಡಿಕೊಂಡು ಮರುದಿವಸ ಬೆಳಿಗ್ಗೆ ತಂದು ನಿಲ್ಲಿಸುವುದು ಅವನ ಅಂದರೆ ಬಸ್ ಮಾಲೀಕನ ಜವಾಬ್ದಾರಿ. ಅದನ್ನು ಇಲ್ಲೂ ಜಾರಿಗೆ ತರಬೇಕೆಂದು ಪದೇ ಪದೇ ಆರು ತಿಂಗಳಿಂದ ನಾನು ನಮ್ಮ ಅಧಿಕಾರಿಗಳಿಗೆ ಹೇಳುತ್ತಿದ್ದೇನೆ. ಬಹುಶ: ಅವರಿಗೆ ಇದು ಇನ್ನೂ ಹಿಡಿಸುತ್ತಿಲ್ಲ. ನಮ್ಮ ನಿಮ್ಮ ಮಧ್ಯದಲ್ಲಿ ಅವರು ಇಲ್ಲಿ ಇದ್ದಾರೆ, ಅವರು ತಿಳಿದುಕೊಳ್ಳಲಿ ಇದನ್ನು ಹೇಳುತ್ತಿದ್ದೇನೆ. ಅವರು ಬಂದು ಕರ್ನಾಟಕದಲ್ಲಿ ಇದು ಬಹಳ ಲಾಸ್ ಆಗುತ್ತದೆ ಸರಿಯಾಗಿ ಜಾರಿಯಾಗಲಿಕ್ಕಿಲ್ಲ ಎಂಬ ಮಾತನ್ನು ಹೇಳುತ್ತಿರುವುದರಿಂದ, ಇದೀಗ ನಮ್ಮ ಸಹೋದ್ಯೋಗಿಗಳು ಹೇಳಿದ ಹಾಗೆ ನಮಗೆ ಸಮಾಧಾನ ಆಗಲಾರದಕ್ಕೆ, ಇದರ ಬಗ್ಗೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಇದು ಎಷ್ಟರ ಮಟ್ಟಿಗೆ ಜಾರಿ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ನೋಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :

ನೀವು ಹೇಳಿದ್ದನ್ನು ಮಾಡಿದರೆ ಅವರೇನು ಭ್ರಷ್ಟಾಚಾರ ಮಾಡುತ್ತಿದ್ದರು, ಅದು ಜನತೆಗೆ ಗೊತ್ತಾಗುತ್ತದೆ ಎಂದು ಆ ರೀತಿ ಹೇಳುತ್ತಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್ :

ಹಾಗೆ ಅರ್ಥ ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅವರು ಹೇಳಿದ್ದನ್ನು ವಿಚಾರ ಮಾಡಿ ಅಂತಿಮ ನಿರ್ಣಯ ಮಾಡಬೇಕಾಗುತ್ತದೆ. ಏತಕ್ಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನಲ್ಲಿ ನಾವು ಅನೇಕ ಖಾಸಗಿ ಬಸ್ಸುಗಳನ್ನು ನೋಡುತ್ತಿದ್ದೇವೆ. ಅದರ ಮೇಲೆ ಒಂದು ಲೈನ್ ಬರೆದಿರುತ್ತಾರೆ. ಅಂಡರ್ ಡಿ.ಟಿ.ಸಿ. ಆಪರೇಷನ್ ಎಂದು ಬರೆದಿರುತ್ತಾರೆ. ಡಿ.ಟಿ.ಸಿ.ಗೆ ಇದನ್ನು ನಾವು ವಹಿಸಿಕೊಟ್ಟಿದ್ದೇವೆ; ಎಂದು ಅದರ ಅರ್ಥ. ಇದನ್ನು ನಡೆಸುವುದು ಡಿ.ಟಿ.ಸಿ.ಯವರ ಜವಾಬ್ದಾರಿ, ಪೂರ್ತಿ ಒಳಗಡೆ ಇರುವಂತಹ ಫೇರ್ ವಸೂಲಿ ಮಾಡಿಕೊಳ್ಳತಕ್ಕಂಥದ್ದು, ಟಿಕೇಟು ಕೊಡುವುದು, ದುಡ್ಡು ವಸೂಲು ಮಾಡಿಕೊಳ್ಳುವುದು ಇಷ್ಟೇ ಪ್ಯಾಸಿಂಜರ್‌ನ್ನು ಕೂಡಿಸಬೇಕೆಂಬ ಎಲ್ಲಾ ಜವಾಬ್ದಾರಿ ಡಿ.ಟಿ.ಸಿ.ಯವರದ್ದು.? ಬಸ್ ಮೆಂಟೇನೆನ್ಸ್ ಮಾಡುವ ಜವಾಬ್ದಾರಿ, ನಡೆಸುವ ಜವಾಬ್ದಾರಿ, ಎಲ್ಲಾ ಮಾಲಿಕನದು. ಈ ಪದ್ಧತಿಯನ್ನು ಒಂದು ವೇಳೆ ಇಲ್ಲಿ ಜಾರಿ ಮಾಡಿದರೆ ಅದರಿಂದ ನಮಗೆ ಲಾಭ ಏನಾದರೂ ಆಗುತ್ತದೆಯೇ ಎಂಬುದನ್ನು ನೋಡಬೇಕು. ಬಹುಶ: ಜಾರ್ಜ್‌ರವರು ಅನೇಕ ಸಲ ಬಂದು ಹೇಳಿದರು. ನಮ್ಮಲ್ಲಿರುವ ಬಸ್‌ಗಳು 5-6-7 ವರ್ಷಗಳ ಹಳೇ ಬಸ್ಸುಗಳಾಗಿವೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಲ್ಲಿ ಮುರಿದು ಬೀಳುತ್ತವೆ. ಆ್ಯಕ್ಸಿಡೆಂಟ್ ಆಗುತ್ತವೆ ಎಕ್ಸಲ್ ಮುರಿದು ಬೀಳುತ್ತವೆ. ಆದ್ದರಿಂದ ಹೊಸ ಚಾಸೀಸ್ ಖರಿದೀ ಮಾಡಬೇಕೆಂದು ಹೇಳಿದರು. ಹೊಸ ಚಾಸೀಸ್ ಖರೀದಿ ಮಾಡಬೇಕಾದರೆ ದುಡ್ಡುಬೇಕು. ಮೊದಲೇ ನಷ್ಟವಾಗಿ ಜಡ್ಡು ಬಿದ್ದಿರುವಾಗ ದುಡ್ಡು ಎಲ್ಲಿಂದ ತರುವುದು ಎಂಬ ಪ್ರಶ್ನೆ ಬರುತ್ತದೆ. ಅಲ್ಲಿಂದ ಒಂದು ಹೊಸ ಬಸ್ ನಾವು ಹಾಕಿದರೆ ಏಳು ಜನರನ್ನು ಹಾಕಬೇಕು. ಪರ್ ಬಸ್ ಏಳು ಎಂಪ್ಲಾಯೀಜ್ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲಸ ಮಾಡುತ್ತಾರೆ. ಈಗ ಪ್ರೈವೇಟ್‌ನವರು ಏನು ಮಾಡುತ್ತಾರೆಂದರೆ

ತಾವು ಬಸ್ ಓಡಿಸುತ್ತಾರೆ. ತಮ್ಮ ಮಗನಿಗೆ ಕ್ಲೀನರ ಕೆಲಸ ಕೊಡುತ್ತಾರೆ. ಆದರಿಂದ ಅವರಿಗೆ ಅನುಕೂಲ ಇದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ನಮ್ಮ ಲೇಬರ್ ಆ್ಯಕ್ಟ್ ಪ್ರಕಾರ, ಒಂದು ಬಸ್‌ಗೆ ಇಷ್ಟು ಜನ ನೌಕರರು ಇರಲೇಬೇಕು. ಇಷ್ಟು ಜನರನ್ನು ಮೆಂಟೇನ್ ಮಾಡಬೇಕೆಂದು ಇರುತ್ತದೆ. ಈ ರೀತಿ ಇರುವುದರಿಂದ ಬಹುಶ: ಇವತ್ತು ಪಬ್ಲಿಕ್ ಸೆಕ್ಟರ್‌ಗೆ ಪ್ರೈವೇಟ್ ಸೆಕ್ಟರ್ ಜೊತೆ ಕಾಂಪೀಟ್ ಮಾಡುವುದಕ್ಕೆ ಅನೇಕ ಸಲ ಕಷ್ಟವಾಗುತ್ತದೆ. ಅಲ್ಲದೆ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎರಡನೇ ಜವಾಬ್ದಾರಿ ಕೂಡ ಇರುತ್ತದೆ. ಹಿಂದಿನ ಸರ್ಕಾರದವರು ಎಲ್ಲಾ ಮಕ್ಕಳು, ವೃದ್ಧರು ಮುಫತ್ತಾಗಿ ಬಸ್‌ಗಳಲ್ಲಿ ಹೋಗಲಿ ಎಂದು ಹೇಳಿದರು. ಇದರಲ್ಲಿ ನಮಗೆ 300 ಕೋಟಿ ರೂ. ಹೋಗುತ್ತವೆ, ಖಾಸಗಿ ಬಸ್ಸಿನವರು ಈ ರಿಯಾಯಿತಿ ಕೊಡುತ್ತಾರಾ ? ದುಡ್ಡುಕೊಟ್ಟು ಒಳಗೆ ಏರು, ಇಲ್ಲದಿದ್ದರೆ ಅಚೆಗೆ ನಡೆ ಎಂದು ಹೇಳುತ್ತಾರೆ, ಅದು ಸ್ವಾಭಾವಿಕ. ಏಕೆಂದರೆ ದುಡ್ಡಿನ ಸಲುವಾಗಿಯೇ ಆತ ಇದ್ದಾನೆ. ಹೊರತು ಸೋಷಿಯಲ್ ಸರ್ವಿಸ್ ಎನ್ನುವ ಭಾವನೆ ಆತನಲ್ಲಿ ಇರುವುದಿಲ್ಲ. ಇದೆಲ್ಲಾ ಕಷ್ಟ ಇದೆ. ಮತ್ತೆ ಕಾರ್ಪೋರೇಷನ್ ವತಿಯಿಂದ ಬಸ್ ಶೆಲ್ಟರ್ ಕಟ್ಟಿಸುತ್ತೇವೆ. ಡೀಪೋ ಸ್ಥಾಪನೆ ಮಾಡಿಸುತ್ತೇವೆ, ಅಲ್ಲಲ್ಲಿ ಗೆಸ್ಟ್ ಹೌಸ್‌ಗಳನ್ನು ನಿರ್ಮಿಸುತ್ತೇವೆ. ಇದೆಲ್ಲಾ ಕಾರ್ಪೋರೇಶನ್‌ನಿಂದಲೇ ಬರುತ್ತದೆ ಹೊರತು ಖಾಸಗಿಯವರಿಂದ ಇದು ಆಗುವುದಿಲ್ಲ ಎಂದು ನಾನು ಹೇಳುತ್ತೇನೆ. ಇವತ್ತು ಇರುವುದೇ ಒಂದು. ನಿಗಮವನ್ನು ಮಾಡುವ ಉದ್ದೇಶ ಏನು? ಪ್ರಯಾಣಿಕರಿಗೆ ಅನುಕೂಲ ಮಾಡಬೇಕು, ಒಳ್ಳೆಯ ಸೌಕರ್ಯ ಪ್ರಯಾಣಿಕರಿಗೆ ಸಿಗಬೇಕು ಮತ್ತು ಅವರಿಗೆ ಒಗ್ಗುವಂತ ದರ ಇರಬೇಕು. ಇವತ್ತು ಏನಾಗಿದೆ ? ಇವತ್ತು ಇದನ್ನೇ ಬೆಳೆಸಿಕೊಳ್ಳಬೇಕು ಎನ್ನುವ ಥಿಯರಿ. ಐಡಿಯಾಲಾಜಿ ಇಲ್ಲಿ ನಾವು ಹೋಗುವುದಕ್ಕೆ ತಯಾರಿಲ್ಲ. ಜನರಿಗೆ ಸೌಕರ್ಯ ಅನುಕೂಲ ಆಗಬೇಕೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಅವರ ಭಾಗದಲ್ಲಿ ಒಂದು ಕಡೆ, ಪ್ರೈವೇಟ್ ಬಸ್‌ನಲ್ಲಿ 2 ರೂಪಾಯಿ ಕೊಟ್ಟು ಹೋಗುವ ಕಡೆ ನಮ್ಮ ಬಸ್ಸುಗಳಲ್ಲಿ 3 ರೂಪಾಯಿ 50 ಪೈಸೆ ಟಿಕೆಟ್ ಪಡೆಯಬೇಕಾಗಿದೆ ಎಂದು ಹೇಳಿದರು. ನನಗೆ ಯಾರೋ ದಕ್ಷಿಣ ಕನ್ನಡದ ನನ್ನ ಸ್ನೇಹಿತರು ಮಂಗಳೂರಿನಿಂದ ಉಡುಪಿಗೆ ಖಾಸಗಿ ಬಸ್ಸಿನಲ್ಲಿ 6 ರೂಪಾಯಿ ಆದರೆ ನಮ್ಮ ಸಾರಿಗೆ ಸಂಸ್ಥೆ ಬಸ್‌ನಲ್ಲಿ 9 ರೂಪಾಯಿ ದರ ಆಗುತ್ತದೆ ಎಂದು ಹೇಳಿದರು. ಹಾಗಿದ್ದರೆ ನಮ್ಮ ಬಸ್‌ಗಳನ್ನು ವಿಥ್‌ಡ್ರಾ ಮಾಡುತ್ತೇವೆ. ಅಷ್ಟಕ್ಕೆ ಖಾಸಗಿಯವರೇ ನಡೆಸಿಕೊಂಡು ಹೋಗಲಿ, ಎಂದು ನಾನು ಹೇಳಿದೆ, ನಾನು ಇದರ ಬಗ್ಗೆ ಹಿಂದು ಮುಂದು ನೋಡುತ್ತೇನೆಂದು ತಿಳಿದುಕೊಳ್ಳಬಾರದು. ನಮ್ಮ ದೇಶದಲ್ಲಿ ಏನಾದರೂ ಆಗಲಿ ಎಲ್ಲಾ ಪಬ್ಲಿಕ್ ಸೆಕ್ಟರ್‌ನಿಂದಲೇ ಆಗಬೇಕು, ಪ್ರೈವೇಟ್ ಸೆಕ್ಟರ್ ಜನರಿಗೆ ಅವಕಾಶ ಆಗಬಾರದು ಎನ್ನತಕ್ಕ ಕೆಲವು ರಾಜಕೀಯ ಪಕ್ಷಗಳು ನಮ್ಮ ದೇಶದಲ್ಲಿವೆ. ಇದರ ಬಗ್ಗೆ ನಾನು ತಲೆ ಕೆಡೆಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ನಮ್ಮ ರಾಜ್ಯದಲ್ಲಿ ಶೇಕಡಾ 70ರಷ್ಟು ರೂಟ್ಸ್ ನ್ಯಾಷನಲೈಸ್ ಆಗಿವೆ. ಇನ್ನು ಮಿಕ್ಕ ಭಾಗವನ್ನು ನ್ಯಾಷನಲ್ ಲೈಸ್ ಮಾಡಬೇಕೇ ಎನ್ನುವ ಪ್ರಶ್ನೆಯನ್ನು ನನ್ನ ಸಹೋದ್ಯೋಗಿ ಜಾರ್ಜ್ ಅವರು ಹೇಳಿದರು. ಈಗ ನಾನು ನ್ಯಾಷನಲೈಸ್ಡ್ ರೂಟ್ಸ್ ಏರಿಯಾ ಏನಿದೆ ಅದರ ಬಗ್ಗೆ ಕೂತು ವಿಚಾರ ಮಾಡೋಣ ಎನ್ನುವ ಪರಿಸ್ಥಿತಿಗೆ ಬಂದಿದ್ದೇವೆ. Extension is not our immediate concern or proposal under consideration. ಇದ್ದದ್ದನ್ನು ಕನ್‌ಸಾಲಿಡೇಟ್ ಮಾಡುವುದು ಹೇಗೆಂದು

ಚಿಂತನೆ ಮಾಡುತ್ತಿದ್ದೇವೆ, ನಾನು ನ್ಯಾಷನಲೈಸ್ಡ್ ಏರಿಯಾದಲ್ಲಿ ಯಾರಾದರೂ ಬಸ್ ಪರ್ಮಿಟ್ ಕೇಳುವುದಕ್ಕೆ ಬಂದರೆ ಜರೂರಾಗಿ ಲೈಸನ್ಸ್ ಕೊಡಿ ಎಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಪ್ರಯಾಣಿಕರಿಗೆ ಅನುಕೂಲವಾಗುವುದಾದರೆ ಅದನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಆದರಿಂದ ಸರ್ಕಾರಕ್ಕೂ ರೆವಿನ್ಯೂ ಬರುತ್ತದೆ. ಇನ್ನೊಂದು ವಿಷಯದ ಬಗ್ಗೆ ವಿಚಾರ ಮಾಡಿದ್ದೇನೆ. ಅದನ್ನು ಕ್ಯಾಬಿನೆಟ್ ಸಭೆ ಕಮಿಟಿಗೆ ಪರಿಶೀಲಿಸಲು ಹೇಳಿದ್ದೇನೆ. ಅದೇನೆಂದರೆ ಮ್ಯಾಕ್ಸಿಕ್ಯಾಬ್ ಪರ್ಮಿಟುಗಳನ್ನು ಧಾರಾಳವಾಗಿ ಕೊಡಬೇಕೆಂಬ ಬಗ್ಗೆ ಒಂದು ವಿಚಾರ ಮಾಡಿದ್ದೇನೆ. ಇದರಲ್ಲಿ 12 ಪ್ಲಸ್ 1 ಜನರು ಕೂಡುವ ವ್ಯವಸ್ಥೆ ಇರುತ್ತದೆ. ಆದರೆ ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಸಿಜನ್ ಆ್ಯಕ್ಟ್ 1976ನ್ನು ತಿದ್ದುಪಡಿ ಮಾಡಲಾರದೆ ಈ ವ್ಯವಸ್ಥೆ ಜಾರಿಗೆ ತರುವುದಕ್ಕಾಗುವುದಿಲ್ಲ. ಈ ವ್ಯವಸ್ಥೆ ಜಾರಿಗೆ ಬಂದರೆ ಅನೇಕ ಜನರಿಗೆ ಉದ್ಯೋಗ ಅವಕಾಶವಾಗುತ್ತದೆ. ಪ್ರಯಾಣಿಕರಿಗೂ ಅನೇಕ ರೀತಿಯ ಅನುಕೂಲವಾಗುತ್ತದೆ. ಅದಕ್ಕಾಗಿ ಈ ಆ್ಯಕ್ಟ್‌ನ್ನು ತಿದ್ದುಪಡಿ ಮಾಡುವುದಕ್ಕೆ ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಸಬ್ ಕಮಿಟಿ ಪರಿಶೀಲನೆ ಮಾಡುತ್ತಿದೆ. ಇದರ ಬಗ್ಗೆ ಸ್ವಲ್ಪ ದಿನಗಳ ನಂತರ ಒಂದು ಬಿಲ್‌ನ್ನು ಕೂಡ ಈ ಸದನದಲ್ಲಿ ಮಂಡನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇದಲ್ಲದೆ ಸ್ಪೆಷಲ್ ಪರ್ಮಿಟ್ ಕೊಡುವುದಕ್ಕೆ ಕೂಡ ನಾವು ವಿಚಾರ ಮಾಡುತ್ತಿದ್ದೇವೆ. ಇದೆಲ್ಲವನ್ನು ಮಾಡುತ್ತಿರುವುದು ನಮ್ಮ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಆಗಲಿ ಎಂದು, ಎಲ್ಲಾ ನಾವೇ ಮಾಡುತ್ತೇವೆಂದು ಹೊರಟರೆ ಪ್ರಯಾಣಿಕರಿಗೆ ಅನಾನುಕೂಲವಾಗಬಹುದು. ಇದು ಡಾಗ ಇನ್ ಮ್ಯಾನೇಜರ್ ಪಾಲಿಸಿ ಆಗುತ್ತದೆ. ಮಾಡುವುದಾದರೆ ನಾವು ಎಲ್ಲವನ್ನು ಮಾಡಬೇಕು. ಇಲ್ಲದಿದ್ದರೆ ಯಾರು ಮಾಡುವುದಕ್ಕೆ ಮುಂದೆ ಬರುತ್ತಾರೋ. ಅವರಿಗೆ ಅವಕಾಶ ಕೊಡಬೇಕೆನ್ನುವ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಇದಕ್ಕೆ ಕೂಡ ಕಾಂಟ್ರಾಕ್ಟ್ ಕ್ಯಾರೇಜ್ ಅಕ್ವಿಸಿಷನ್ ಆ್ಯಕ್ಟ್‌ನಲ್ಲಿ ತಿದ್ದುಪಡಿ ತರಬೇಕಾಗುತ್ತದೆ. ಅದನ್ನು ಕೂಡಾ ನಾವು ವಿಚಾರ ಮಾಡುತ್ತಿದ್ದೇವೆಂದು ಹೇಳುತ್ತೇನೆ. ಇನ್ನೂ ಎರಡರ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಒಂದು, ರಾಷ್ಟ್ರಪತಿ ಆಳ್ವಿಕೆ ಕಾಲದಲ್ಲಿ ಬಸ್ ದರಗಳನ್ನು ಹೆಚ್ಚು ಮಾಡುತ್ತೇವೆಂದು ಹೇಳಿದಾಗ ನೀವು ಪ್ರತಿಭಟನೆ ಮಾಡಿದ್ದಿರಿ, ಈಗ ನೀವೇ ಹೆಚ್ಚು ಮಾಡಿದ್ದೀರಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಶ್ರೀಮಾನ್ ಜಾರ್ಜ್ ಅವರು ಉತ್ತರ ಹೇಳಿದ್ದಾರೆ. ಪ್ರತಿಭಟನೆ ಮಾಡಿದ್ದು, ಏಕೆಂದರೆ ರಾಷ್ಟ್ರಪತಿ ಆಳ್ವಿಕೆ ಕಾಲ ಅಲ್ಪಕಾಲದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ :

ಎಲೆಕ್ಷನ್ ಆಗಿಲಿ. ಗೆದ್ದ ಮೇಲೆ ಮಾಡೋಣವೆಂದು ನೀವು ಆ ರೀತಿ ಮಾಡಿದಿರಿ.

ಶ್ರೀ ವೀರೇಂದ್ರ ಪಾಟೀಲ್:

ಹಾಗಲ್ಲ. ತಾತ್ವಿಕ ದೃಷ್ಟಿಯಿಂದ ನಾನು ಆ ಮಾತನ್ನು ಹೇಳಿದ್ದೇನೆ; ಈ ಒಂದು ನೀತಿ ಮತ್ತು ನಿಲುಮೆಯನ್ನು ತಾವು ತಿಳಿಯಬೇಕು. ಪ್ರೆಸಿಡೆಂಟ್ ರೂಲ್ ಅಂದರೆ ಕೇರ್ ಟೇಕರ್ ಅಡ್ಮಿನ್ಸಿಟ್ರೇಷನ್. ಆ ಕಾಲದಲ್ಲಿ ಪಾಲಿಸಿ ಡಿಸಿಜನ್ ತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :

ಸಂಬಳಗಳನ್ನು ಜಾಸ್ತಿ ಮಾಡುವುದಕ್ಕೆ ಆಗಬಹುದೋ ?

ಶ್ರೀ ವೀರೇಂದ್ರ ಪಾಟೀಲ್ :

ಆ ಪಿರಿಯಡ್‌ನಲ್ಲಿ ಏನಾಗಿದೆಯೋ, ಅದರ ಬಗ್ಗೆ ಟೀಕೆ ಟಿಪ್ಪಣಿ ಕಾಮೆಂಟ್ ಮಾಡುವ ಹಾಗಿಲ್ಲವೆಂದು ನಾನು ಏನಾದರೂ ಹೇಳಿದ್ದೇನೆಯೇ ? ನಾನು ಅದರ ಬಗ್ಗೆ ಮತ್ತು ಸಹ ಪ್ರತಿಭಟನೆ ಮಾಡಿದ್ದು ರೆಕಾರ್ಡಿನಲ್ಲಿದೆ, ಅವರಿಗೆ ಅಧಿಕಾರದಲ್ಲಿ ಇದ್ದುದ್ದೇ ಆರು ತಿಂಗಳು. ಆ ಆರು ತಿಂಗಳಿನಲ್ಲಿ ಕರ್ನಾಟಕದ ಎಲ್ಲಾ ಸಾಧನೆಗಳನ್ನು ಇಂಪ್ರೂವ್ ಮಾಡುತ್ತೇವೆ. ಕರ್ನಾಟಕವನ್ನು ಶ್ರೀಮಂತ ರಾಜ್ಯವನ್ನಾಗಿ ಮಾಡುತ್ತೇನೆ ಎನ್ನುವ ಕೆಲಸಗಳು ಪಾಲಿಸಿ ಡಿಸಿಜನ್ ಆಗಿರುವುದರಿಂದ ಆ ಕೆಲಸಗಳನ್ನು ಕೇರ್ ಟೇಕರ್ ಗೌರ್ನಮೆಂಟ್ ಮಾಡಬಾರದೆಂದು ನಾನು ಪ್ರತಿಭಟನೆ ಮಾಡಿದ್ದೇನೆಯೇ ಹೊರತಾಗಿ ಯಾವುದೇ ಟ್ಯಾಕ್ಸ್‌ಗಳನ್ನಾಗಿಲಿ, ದರಗಳನ್ನಾಗಲಿ ಹೆಚ್ಚಿಸಬಾರದೆಂದು ಎನ್ನುವ ದೃಷ್ಟಿಯಿಂದ ಮಾಡಿಲ್ಲ. ಇನ್ನು ಕೊನೆಯದಾಗಿ ಶ್ರೀಮಾನ್ ಸಿಂಧ್ಯಾರವರು ಬಸ್ ದರಗಳನ್ನು ಏನು ಹೆಚ್ಚು ಮಾಡಿದ್ದೀರೋ, ಅದು ಸಾಧುವಾದದ್ದೇ ಅಥವಾ ಇಲ್ಲವೇ ? ಎಂದು ಪರಶೀಲನೆ ಮಾಡುವುದಕ್ಕಾಗಿ ಒಂದು ಸದನದ ಸಮಿತಿ ಮಾಡಬೇಕು ಎಂದು ಹೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ನಾನು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. ಈಗ ಹೆಚ್ಚಾಗಿರುವುದು 32.2 ಪರ್ಸೆಂಟ್ ಎಂದು ಹೇಳಿದ್ದಾರೆ. ನಾನು ಇಷ್ಟೇ ವಿನಂತಿ ಮಾಡಿಕೊಳ್ಳುವುದು, ಅವರು ಹೇಳಿದ ಹಾಗೆ 89ರ ವರೆಗೂ ಆ ಕಡೆಯವರು ಈ ಕಡೆ ಇದ್ದರು ಪ್ರಜಾ ಪ್ರಭುತ್ವದಲ್ಲಿ ಈ ಕಡೆ ಇದ್ದವರು ಆ ಕಡೆ ಹೋಗಬಹುದು, ಆ ಕಡೆ ಇದ್ದವರು ಈ ಕಡೆ ಇರಬಹುದು. ಇದು ಪರ್ಮನೆಂಟ್ ಎಂದು ನಾವು ತಿಳಿದುಕೊಳ್ಳಬಾರದು. ಇವೊತ್ತು ನಾವು ಏನೋ ಸ್ಟ್ಯಾಂಡ್ ತೆಗೆದುಕೊಂಡರೂ ಅದು ಒಂದು ತತ್ವದ ಆಧಾರದ ಮೇಲೆ ಇರಬೇಕು. ಅದಕ್ಕಾಗಿ ನಾನು ಸಲಹೆ ಮಾಡಿದ್ದಿಷ್ಟೇ ಇದನ್ನು ಪರಿಶೀಲನೆ ಮಾಡುವುದಕ್ಕಾಗಿ ಸದನದ ಸಮಿತಿಯನ್ನು ನೇಮಕ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಪಬ್ಲಿಕ್ ಅಂಡರ್ ಟೇಕಿಂಗ್ ಕರ್ಮಿಟಿ ಇರುವುದರಿಂದ ಹೊಸದಾಗಿ ಸದನದ ಸಮಿತಿ ರಚನೆ ಮಾಡುವುದು ಏಕೆ ? ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯಲ್ಲಿ ಬಸ್ ದರ ಹೆಚ್ಚಿಸಿರುವ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳಿ. ಆ ಸಮಿತಿಯ ಮುಂದೆ ನಾವು ಎಲ್ಲಾ ಅಂಕಿ ಸಂಖ್ಯೆಗಳನ್ನು ಹಾಜರು ಪಡಿಸುತ್ತೇವೆ. ಅಲ್ಲಿ ನೀವು ವಿಚಾರ ಮಾಡಿ ಬಸ್ ದರವನ್ನು ಹೆಚ್ಚಿಸಿರುವುದು ತಪ್ಪು ಎಂದು ನೀವು ನಿರ್ಣಯ ಮಾಡಿದರೆ ಅದಕ್ಕೆ ನಾನು ತಲೆಬಾಗುವುದಕ್ಕೆ ತಯ್ಯಾರಿದ್ದೇನೆ. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈ ತರಹ ನಾವು ನಮ್ಮ ಸಾಧನೆಗಳನ್ನು ಹೆಚ್ಚು ಮಾಡಿಕೊಳ್ಳದಿದ್ದರೆ, ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆ ಮೇಲೆ ನಿನ್ನೆ ದಿವಸ ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ, ಈ ರೀತಿ ಮಾಡಿದರೆ ಆಗುವುದಿಲ್ಲ, ಸಾಧನೆಗಳನ್ನು ಹೆಚ್ಚು ಮಾಡಿಕೊಂಡು ತೀವ್ರಗತಿಯಿಂದ ಕೆಲಸಗಳನ್ನು ಮಾಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಪಿ.ಡಬ್ಲ್ಯೂ.ಡಿ. ಸಚಿವರು ಹೆಚ್ಚುವರಿಯಾಗಿ 150 ಕೋಟಿ ರೂಪಾಯಿಗಳನ್ನು

ಕಾವೇರಿ ಬೇಸಿನ್ ಕೆಲಸಕ್ಕಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಮೊದಲು ನಮ್ಮ ಸಾಧನ ಸಂಪತ್ತುಗಳನ್ನು ಹೆಚ್ಚು ಮಾಡಿಕೊಳ್ಳಬೇಕು. ಸಾಧನಗಳೇನ್ನೇನಾದರೂ ದುರುಪಯೋಗ ಮಾಡುತ್ತಿದ್ದರೆ ಈಗ ನೀವು ನಮ್ಮ ಕಿವಿ ಹಿಂಡಿಬಹುದು. ಸಾಧನಗಳು ಇಲ್ಲದೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ನಾನು 1968ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ನನಗೆ ಒಬ್ಬರು ನನ್ನ ಸ್ನೇಹಿತರು ಹೇಳಿದರು, ಅವರ ಹೆಸರು ಹೇಳುವ ಹಾಗಿಲ್ಲ. ಅವರು ಈಗ ನಿಧನರಾಗಿ ಹೋಗಿದ್ದಾರೆ. ಟ್ಯಾಕ್ಸ್ ಹಾಕದೇ ಸರ್ಕಾರವನ್ನು ನಡೆಸಬಹುದೆಂದು ಹೇಳಿದ್ದರು. ನೀವು ಟ್ಯಾಕ್ಸ್ ಹಾಕದೇ ಸರ್ಕಾರ ನಡೆಸುತ್ತೀರೆಂದು ಜನರು ತಿಳಿದುಕೊಂಡಿರುವುದರಿಂದಲೇ ನಿಮ್ಮ ಕೈಗೆ ಅಧಿಕಾರ ಬಂದಿಲ್ಲವೆಂದು ನಾನು ಅವರಿಗೆ ಹೇಳಿದ್ದೆ. ಟ್ಯಾಕ್ಸ್ ಇಲ್ಲದೇ ಅಭಿವೃದ್ಧಿ ಕೆಲಸಗಳನ್ನು ಚುರುಕುಗೊಳಿಸುವುದಕ್ಕೆ ಮತ್ತು ಜನರು ನಿರೀಕ್ಷೆ ಮಾಡುವ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ನಾವು ಮಾಡುವ ಕಾರ್ಯಗಳ ಬಗ್ಗೆ ವಿರೋಧ ಪಕ್ಷದವರಾದ ನೀವು ಸ್ವಾಗತ ಮಾಡುವ ಹಾಗಿಲ್ಲ. ಕೇವಲ ಪ್ರೊಟೆಸ್ಟ್ ಮಾಡಬೇಕೆಂದು ನೀವು ಪ್ರೊಟೆಸ್ಟ್ ಮಾಡುತ್ತಿದ್ದೀರಿ ಅಷ್ಟೇ.

## 5. ರೈತರ ಸಾಲ ಮನ್ನಾ ಕುರಿತು ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಸ್ಪಷ್ಟೀಕರಣ. (7ನೇ ಜೂನ್, 1990).

ಶ್ರೀ ವೀರೇಂದ್ರ ಪಾಟೀಲ್ : (ಮುಖ್ಯ ಮಂತ್ರಿಗಳು):

ಮಾನ್ಯ ಸಭಾಧ್ಯಕ್ಷರೇ, ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ನಿನ್ನೆ ಸಾಯಂಕಾಲದಿಂದ ಈ ಸದನದ ಅನೇಕ ಮಾನ್ಯ ಸದಸ್ಯರುಗಳು, ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ನಾನು ತಿಳಿದುಕೊಂಡ ಹಾಗೆ ಬಿ.ಜೆ.ಪಿ. ಪಕ್ಷದ ಸದಸ್ಯರ ಹೊರತಾಗಿ ಉಳಿದಿಲ್ಲ. ಆ ಭಾಗದಲ್ಲಿ ಕುಳಿತಂಥ ಸದಸ್ಯರು ಕೇಂದ್ರ ಸರ್ಕಾರದ ಈ ಯೋಜನೆಯನ್ನು ರಾಜ್ಯ ಸರ್ಕಾರ ಸ್ವಾಗತಿಸಬೇಕು. ಪೂರ್ತಿಯಾಗಿ ಒಪ್ಪಿಕೊಳ್ಳಬೇಕು ಮತ್ತು ಅವರು ಕೊಡುವಂಥ ದೇಣಿಗೆಯನ್ನು ಒಪ್ಪಿಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಮತ್ತು ಬಿ.ಜೆ.ಪಿಯ ಮಾನ್ಯ ಸದಸ್ಯರು ತಮ್ಮ ನಿಲುಮೆಯನ್ನು ಸಾಲ ಮನ್ನಾ ಮಾಡುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ ಆದರೆ ಅವರು ಏನು ಅಭಿಪ್ರಾಯ ಪಟ್ಟಿದ್ದಾರೆ ? ಕೇಂದ್ರದಿಂದ ಬಂದ ಯೋಜನೆ ರಾಜ್ಯ ಸರ್ಕಾರದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆಯೇ ಹೊರತು ಹೊಂದಿಕೊಳ್ಳುವ ಯೋಜನೆಯಾಗಿಲ್ಲ. ಹೀಗಿದ್ದರೂ ಕೂಡ ಇವತ್ತು ಈ ಯೋಜನೆ ಬಗ್ಗೆ ಸ್ವಲ್ಪ ಮಟ್ಟಿಗೆ ವಿವರಗಳನ್ನು ಹೇಳುವುದು ಅವಶ್ಯ. ಏಕೆಂದರೆ, ಎಲ್ಲಾ ಮಾನ್ಯ ಸದಸ್ಯರೂ ಕೇಂದ್ರ ಸರ್ಕಾರದ ಯೋಜನೆ ಮತ್ತು ಅದರ ಸಾರಾಂಶ ಹಾಗೂ ನಾವು ಏನು ನೀಡಿದ್ದೇವೆ. ಈ ವಿವರಗಳನ್ನು ಓದಿ ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಥವಾ ಪೂರ್ತಿಯಾಗಿ ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಯೋಜನೆ ಪ್ರಕಾರ ಮೊದಲು 10 ಸಾವಿರ ರೂಪಾಯಿಗೆ ಯಾರು ಸಾಲ ಬಾಕಿ ಇಟ್ಟುಕೊಂಡಿರುತ್ತಾರೋ, ಯಾರು ಡಿಫಾಲ್ಟರ್ಸ್ ಇದ್ದಾರೋ, 2ನೇ ಅಕ್ಟೋಬರ್ 1989ಕ್ಕೆ ಕಟ್ ಆಫ್ ಡೇಟ್ ಫಿಕ್ಸ್ ಮಾಡಿದ್ದು ಆ ಡೇಟಿಗೆ ಯಾರು ಡಿಫಾಲ್ಟರ್ಸ್ ಇದ್ದಾರೆ, ಅವರ ಸಾಲ ಮಾತ್ರ ಮನ್ನಾ ಮಾಡಬೇಕೆಂಬುದು ಯೋಜನೆ, ಮತ್ತು ಈ ಯೋಜನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. 2ನೇ ಅಕ್ಟೋಬರ್ 1989ರ ನಂತರ ಯಾರೇ ಡಿಫಾಲ್ಟರ್ ಆದರೆ ಅವರಿಗೆ ಈ ಯೋಜನೆಯ ಲಾಭ ಇಲ್ಲ, ಅವರು ಲಾಭ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಾಲ ಮನ್ನಾ ಮಾಡುವ ಹಾಗೆ ಇಲ್ಲಿ ಎಂದು ಕೇಂದ್ರ ಸರ್ಕಾರದವರು ನಮಗೆ ಸ್ಪಷ್ಟವಾಗಿ ಹೇಳಿದ್ದರು. ಅಂದರೆ 1989-90ರಲ್ಲಿ ರೈತರಿಗೆ ಏನು ಸಾಲವನ್ನು ಕೊಟ್ಟಿದ್ದೇವೆ ಆ ಸಾಲವನ್ನು ವಸೂಲು ಮಾಡಬೇಕೆಂದು ಕೇಂದ್ರ ಸರ್ಕಾರ ಹೇಳಿದೆ ಅದೇ ಒಂದು ಆದೇಶವನ್ನು ನಬಾರ್ಡ್‌ಗೂ ಕಳುಹಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಇಲ್ಲಿ ಮರೆಯಬಾರದು. ಈ ಸಾಲವನ್ನು ಮನ್ನಾ ಮಾಡುವುದಕ್ಕೆ ಇನ್ನೊಂದು ಷರತ್ತನ್ನು ಹಾಕಿದ್ದಾರೆ. 1-4-1986 ರಿಂದ ಇತ್ತೀಚಿಗಿನ ಸಾಲ ಮನ್ನಾ ಮಾಡುವುದಕ್ಕೆ ಹಾಕಿರುವ ಷರತ್ತು ಏನೆಂದರೆ, ಯಾವ ವರ್ಷ ಸಾಲ ಮನ್ನಾ ಮಾಡಬೇಕೋ ಆ ವರ್ಷದ ಸಾಲದ ಆ ಭಾಗದಲ್ಲಿ ಆ ಏರಿಯಾದಲ್ಲಿ ಅಲೇವಾರಿ 50ಕ್ಕಿಂತಲೂ ಕಡಿಮೆ ಇರಬೇಕು. 50ಕ್ಕಿಂತ ಮೇಲೆ ಇದ್ದರೆ ಲಾಭ ಇಲ್ಲ. ಅಂದರೆ 1-4-86 ರಿಂದ ಎಲ್ಲಿ 50ಕ್ಕಿಂತಲೂ ಕಡಿಮೆ ಅಲೇವಾರಿ ಇದೆ ಅಂತಹ ಭಾಗದ ರೈತರಿಗೆ ಲಾಭವೇ

ಹೊರತು ಬೇರೆಯವರಿಗೆ ಲಾಭ ಇಲ್ಲ. ಯಾವುದೇ ಷರತ್ತು ಇಲ್ಲದೆ ಹಾಗೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಸ್ಪಷ್ಟವಾಗಿ ಯೋಜನೆಯಲ್ಲಿ ಹೇಳಿದ್ದು 1-4-86ರ ಪೂರ್ವದಲ್ಲಿ ಅದಕ್ಕೆ ಕ್ರಾನಿಕ್ ಡಿಫಾಲ್ಟರ್ ಎಂದು ಅವರು ಹೇಳಿದ್ದಾರೆ. 1-4-86ರ ಪೂರ್ವದಲ್ಲಿ ಸಾಲ ಏನಾದರೂ ಇದ್ದರೆ ಯವುದೂ ಷರತ್ತು ಇಲ್ಲದೆ ಮಂಜೂರು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಇದರ ಅರ್ಥ ಏನೆಂದರೆ, ನೀರಾವರಿ ಪ್ರದೇಶದ ರೈತರಿಗೆ ಏನೂ ಸಾಲ ಮನ್ನಾ ಆಗಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಇದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನೀರಾವರಿ ಪ್ರದೇಶದಲ್ಲಿ ಬರಗಾಲ ಬರುವ ಪ್ರಶ್ನೆಯೇ ಇಲ್ಲ ಅಲ್ಲಿ ಅಲೇವಾರಿ ಶೇಕಡಾ 50ಕ್ಕಿಂತ ಕಡಿಮೆ ಆಗುವ ಪ್ರಶ್ನೆ ಇಲ್ಲ. ಇವತ್ತು ಅಲ್ಲಿ ಬೆಳೆ ಹೋಯಿತು ಏನ್ನುವ ಪ್ರಶ್ನೆ ಇಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರ ಹಾಕಿದ ಯೋಜನೆ ಪ್ರಕಾರ ನೀರಾವರಿ ಪ್ರದೇಶದ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಬಹುಶ: ಕೆಲವು ಸದಸ್ಯರ ವಿಚಾರ ಇರಬಹುದು ಏನೆಂದರೆ ಕೇಂದ್ರ ಸರ್ಕಾರ ಯೋಜನೆ ಮಾಡಿದರೂ ರಾಜ್ಯ ಸರ್ಕಾರ ಇನ್ನೂ ನಿರ್ಲಕ್ಷ್ಯ ಮಾಡುತ್ತಾ ಇದೆ. ಯಾವ ಒಂದು ಯೋಜನೆಯನ್ನು ಉತ್ಸಾಹ ಉಲ್ಲಾಸದಿಂದ ತೆಗೆದುಕೊಂಡು ಆ ಯೋಜನೆಯನ್ನು ಸ್ವಾಗತ ಮಾಡಿ ಆ ಯೋಜನೆಯ ಲಾಭ ಪಡೆಯಬೇಕಾಗಿತ್ತು ಅದರಲ್ಲಿ ನಿಧಾನ ಮಾಡುತ್ತಿದೆ ಎನ್ನುವ ವಾತಾವರಣ ತಮ್ಮಲ್ಲಿ ಮೂಡಬಹುದು ಅದಕ್ಕಾಗಿ ನಾನು ಈ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇವೆ. ಈ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದ್ದು 18ನೇ ಮೇ 1990ಕ್ಕೆ ಕೇಂದ್ರದಿಂದ ಈ ಯೋಜನೆಯ ಬಗ್ಗೆ ವಿವರ ಬಂದಿದೆಯೇ ಎಂದು ನಾವು ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ವಿಚಾರಿಸಬೇಕು. ಈ ಮಧ್ಯೆದಲ್ಲಿ ನಾವು ಅದರ ಪ್ರತಿಯನ್ನು ನಾಬಾರ್ಡ್‌ದಿಂದ ಪಡೆದಿದ್ದೇವೆ. ಅದನ್ನು ಪ್ರತಿ ಮಾಡಿ ನಾವು ಇಲ್ಲಿ ಎಲ್ಲರಿಗೂ ಹಂಚಿದ್ದೇವೆ. ನಾಬಾರ್ಡ್‌ನಲ್ಲಿ 25 ಮೇ, 1990ರಲ್ಲ ನಮಗೆ ಇದು ಸಿಕ್ಕಿತು. ಈ ಮಧ್ಯೆ ಕೇಂದ್ರ ಸರ್ಕಾರದವರು ಈ ಯೋಜನೆ ಬಗ್ಗೆ ಏನಾದರೂ ಸಮಸ್ಯೆ ಇದ್ದರೆ, ಶಂಕೆ ಇದ್ದರೆ ಅದನ್ನು ಪರಿಹರಿಸಿಕೊಳ್ಳಲಿಕ್ಕೆ ಬರಬಹುದು ಎಂದು ಹೇಳಿದ್ದಾರೆ. ಆ ಪ್ರಕಾರ ನಮ್ಮ ಅಧಿಕಾರಿಗಳು 31-5-1990 ರಲ್ಲಿ ಡೆಲ್ಲಿಗೆ ಹೋಗಿ ಚರ್ಚೆ ಮಾಡಿಕೊಂಡು ಬಂದಿದ್ದಾರೆ. ಆದರೆ ಇವತ್ತು ಈ ಸಾಲ ಮನ್ನಾ ಕೇಂದ್ರದಿಂದ ಏನು ಸ್ಪಷ್ಟೀಕರಣ ಬಂದಿದೆ ಅದರಲ್ಲಿ ಸಾಲದ ಗಾತ್ರ ಎಷ್ಟೇ ಇರಲಿ ಲಾಭ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಿಂದೆ ನಾವು ಕೇಳಿದ್ದಕ್ಕೆ ಈ ಯೋಜನೆ ವ್ಯತಿರಿಕ್ತವಾಗಿ ನಾವು ಯೋಚನೆ ಮಾಡುವುದಕ್ಕೆ ತಯಾರು ಇಲ್ಲ ಎಂದು ಹೇಳಿದ್ದರು. ಇದರ ಬಗ್ಗೆ ನಾನು ಒಂದು ಕ್ಲಾರಿಫಿಕೇಶನ್ ಕೊಡುತ್ತೇನೆ. ನೀರಾವರಿ ಪ್ರದೇಶಕ್ಕೆ ಈ ಯೋಜನೆಯು ಅನ್ವಯವಾಗುವುದೇ ಇಲ್ಲ. ನೀರಾವರಿ ಪ್ರದೇಶದಲ್ಲಿ 1986ಕ್ಕೆ ಪೂರ್ವದಲ್ಲಿ ಸಾಲ ಇದ್ದರೆ ಅದು ಮನ್ನಾ ಆಗುತ್ತದೆ.

50 ಪರ್ಸೆಂಟ್ ಅಣೆವಾರಿ ಬರುವುದಿಲ್ಲ. 1986ರ ಪೂರ್ವದಲ್ಲಿ ಸಾಲ ಇದ್ದರೆ ಅಣೆವಾರಿ ಪ್ರಶ್ನೆ ಇಲ್ಲ. 1986ರ ಪೂರ್ವದಲ್ಲಿ ರೈತರು ಡಿಫಾಲ್ಟರ್ ಆಗಿದ್ದರೆ, ಮಾತ್ರ ನೀರಾವರಿ ಪ್ರದೇಶದ ರೈತರಿಗೂ ಈ ಯೋಜನೆಯ ಅನುಕೂಲವಾಗುತ್ತದೆ. ಅದರೆ 1986ರ ನಂತರ ಸಾಲ ಏನಾದರೂ ಇದ್ದರೆ ಈ ಯೋಜನೆ ಅವರಿಗೆ ಅನ್ವಯವಾಗುವುದಿಲ್ಲ. 31ರ ಡಿಸೆಂಬರ್‌ಗೆ ನಾವು ಕೇಳಿದಂತ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಸಹ ಹೋಗಿ

ಬಂದಿದ್ದಾರೆ. ಪ್ರಶ್ನೆ ಏನೆಂದರೆ ಇವತ್ತು ಏನು ವಿಚಾರ ಮಾಡಬೇಕಾಗಿದೆ ಎಂದರೆ ಕೇಂದ್ರ ಸರ್ಕಾರದವರು ಏನೆಂದೂ ನೀತಿಯನ್ನು ತಾಳಿದ್ದಾರೆ. ಇದರಲ್ಲಿ ನನಗೆ ಸ್ಪಷ್ಟವಾದ ದ್ವಂದ್ವ ನೀತಿ ಕಂಡು ಬರುತ್ತಿದೆ. ಅಂದರೆ ಡಬಲ್ ಸ್ಟಾಂಡರ್ಡ್. ನಿನ್ನೆ ಯಡಿಯೂರಪ್ಪನವರು ಅದನ್ನು ಒಪ್ಪಿಕೊಂಡಿದ್ದಾರೆ. ರೈತರ ಸಾಲ ಏನಿದೆ ಅದರ ಜವಾಬ್ದಾರಿ ನಮ್ಮದು ಎಂದು ಕೇಂದ್ರ ಸರ್ಕಾರದವರು ನಮಗೆ ಬರೆದು ಕೊಟ್ಟಿದ್ದಾರೆ. ಸಾಲವನ್ನು ಮನ್ನಾ ಮಾಡುವ ಜವಾಬ್ದಾರಿ ನಮ್ಮದು ನಾವು ಜನರಿಗೆ ಭರವಸೆಯನ್ನು ಕೊಟ್ಟಿದ್ದೇವೆ, ವಚನವನ್ನು ಕೊಟ್ಟಿದ್ದೇವೆ, ಅದನ್ನು ವಜಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶ: ಇದೇನು ಮೊದಲನೇ ಸಲ ಚರ್ಚೆ ಆಗುತ್ತಿಲ್ಲ. ಇವತ್ತು ಚರ್ಚೆಯಾಗುತ್ತಿರುವುದು ನಾಲ್ಕನೇ ಸಲ. ಹಿಂದಕ್ಕೆ ನಾನು ಪತ್ರ ವ್ಯವಹಾರ ಮಾಡಿದಾಗ ಕೇಂದ್ರದ ಹಣಕಾಸಿನ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ ಅವರ ಜೊತೆಯಲ್ಲಿ ಚರ್ಚೆ ಕೂಡಿದಾಗ, ಅವರು ಸ್ಪಷ್ಟವಾಗಿ ನಮಗೆ ಲಿಖಿತ ಮೂಲಕ ಬರೆದುಕೊಟ್ಟಿದ್ದಾರೆ, ರೈತರ ಸಾಲ ಮನ್ನಾ ಮಾಡುವುದು ನಮ್ಮ ಜವಾಬ್ದಾರಿ ಇದೆ ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆಯನ್ನು ಕೊಟ್ಟಿದ್ದೇವೆ. ನೀವು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿಲ್ಲ, ನಾವು ಕೊಟ್ಟಿದ್ದೇವೆ. ಆ ಭರವಸೆಯನ್ನು ಈಡೇರಿಸುವ ಜವಾಬ್ದಾರಿ ನಮ್ಮದೆಂದು ಕಾಗದ ಬರೆದುಕೊಟ್ಟ ಮೇಲೆ ಅವರು ಒಪ್ಪಿಕೊಂಡ ಮೇಲೆ ಸಾಲ ಸಾಲವೇ ಇದನ್ನು ತಾವು ವಿಚಾರ ಮಾಡಿ. ಕಮರ್ಷಿಯಲ್ ಬ್ಯಾಂಕ್‌ನಿಂದ ತೆಗೆದುಕೊಂಡರೆ ಸಾಲ ಬೇರೆ, ಕೋ-ಆಪರೇಟಿವ್ ಬ್ಯಾಂಕ್‌ನಿಂದ ತೆಗೆದುಕೊಂಡರೆ, ಸಾಲ ಬೇರೆ ಎಂದು ಏನಾದರೂ ಇದ್ದರೆ ಅದು ನನ್ನ ತಲೆ ಹಿಡಿಯುವುದಿಲ್ಲ. ಸಾಲ ಅಂದರೆ ಸಾಲ. ಸಾಲವನ್ನು ಯಾವ ಬ್ಯಾಂಕಿನಿಂದ ತೆಗೆದುಕೊಂಡಿರಲಿ, ಕಮರ್ಷಿಯಲ್ ಬ್ಯಾಂಕ್‌ನಿಂದ ತೆಗೆದುಕೊಳ್ಳಲಿ, ಸೊಸೈಟಿಯಿಂದ ತೆಗೆದುಕೊಳ್ಳಲಿ, ಕೋ-ಆಪರೇಟಿವ ಬ್ಯಾಂಕ್‌ನಿಂದ ತೆಗೆದುಕೊಳ್ಳಲಿ ಅದು ಸಾಲವೇ. ನಾನು ಕೇಳುವಂಥದ್ದು ಕಮರ್ಷಿಯಲ್ ಬ್ಯಾಂಕ್. ಗ್ರಾಮೀಣ ರೀಜನಲ್ ಬ್ಯಾಂಕ್ ಈ ಬ್ಯಾಂಕುಗಳ ಮುಖಾಂತರ ರೈತ ತೆಗೆದುಕೊಂಡಿದ್ದಂಥ ಸಾಲಕ್ಕೆ ಪೂರ್ತಿ ಕೇಂದ್ರ ಸರ್ಕಾರ ಜವಾಬ್ದಾರಿ ವಹಿಸಿಕೊಳ್ಳುವುದಕ್ಕೆ ತಯಾರಿ. ಅದರೆ ಕೋ-ಆಪರೇಟಿವ್ ಬ್ಯಾಂಕಿನ ಸಾಲಕ್ಕೆ ಮಾತ್ರ ಇದು ನಮ್ಮ ಜವಾಬ್ದಾರಿ ಅಲ್ಲ. ರಾಜ್ಯ ಸರ್ಕಾರ ಜವಾಬ್ದಾರಿ ಎಂದು ಹೇಳುತ್ತಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಇವತ್ತು ಸಹಕಾರಿ ಬ್ಯಾಂಕುಗಳಿಗೆ ಬರುವಂಥ ಹಣ ರಿಸರ್ವ್ ಬ್ಯಾಂಕಿನಿಂದ ಬರುತ್ತದೆ. ನಮ್ಮ ತಿಜೋರಿಯಿಂದ ಸಹಕಾರಿ ಬ್ಯಾಂಕುಗಳಿಗೆ ನಾವು ಸಾಲವನ್ನು ಕೊಡುತ್ತಿಲ್ಲ. ಈಗ ತೆಗೆದುಕೊಂಡು ಹೋಗಿ ರೈತರಿಗೆ ಹಂಚಿ ಎಂದು ನಾವು ಯಾರಿಗೂ ಹೇಳುತ್ತಿಲ್ಲ. ಬಹುಶ: ಮಾನ್ಯ ಏಕಾಂತಯ್ಯನವರು ಕೋ-ಅಪರೇಟಿವ್ ಮಂತ್ರಿಗಳಾಗಿದ್ದವರು, ಅವರಿಗೇ ಗೊತ್ತಿದೆ. ಈ ಸಾಲ ಬರುವುದು ನಬಾರ್ಡ್‌ನಿಂದ. ಅದಕ್ಕೆ ಬ್ಯಾಂಕಿನವರು ಬಾಂಬೆಗೆ ಹೋಗಿ ನಬಾರ್ಡ್ ಸಾಲ ತೆಗೆದುಕೊಂಡು ಬರುತ್ತಾರೆ. ನಬಾರ್ಡ್ ಎಂದರೆ ರಿಸರ್ವ್ ಬ್ಯಾಂಕಿನದು ಅವರು ಎರಡು ಬ್ರ್ಯಾಂಚ್ ಮಾಡಿಕೊಂಡಿದ್ದಾರೆ, ಒಂದು ರೈತರಿಗೆ ಸಾಲ ಕೊಂಡುವಂಥದ್ದು, ರೂರಲ್ ಏರಿಯಾಗೆ ಸಾಲ ಕೊಡುವುದು ನಾಬಾರ್ಡ್ ಮತ್ತೊಂದು ಇಂಡಸ್ಟ್ರೀಯಲ್ ಡೆವಲಪ್‌ಗೆ ಸಾಲ ಕೂಡುವಂತಹದು ಐ.ಡಿ.ಬಿ.ಎಲ್.ರೈತರಿಗೆ ಸಾಲ ಕೊಡುವಂಥದ್ದು, ನಾಬಾರ್ಡ್ ಇಂಡಸ್ಟ್ರೀಗಳಿಗೆ ಸಾಲ ಕೊಡುವಂತಹದ್ದು, ಐ.ಡಿ.ಬಿ.ಐ. ಅರ್ಬನ್ ಏರಿಯಾಗಳಿಗೆ ಸಾಲ ಕೊಡುವಂಥದ್ದು.

ಐ.ಡಿ.ಬಿ.ಡಿ. ಯವರು ಇಂಡಸ್ಟ್ರೀಯಲ್ ಅವರಿಗೆ ಸಾಲ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಸಾಲ ಕೊಡುವಂತಾದ್ದು ರೈತಾಪಿ ಜನರಿಗೆ ಸಾಲ ಕೊಡುವಂತದ್ದು ನಾಬಾರ್ಡ್. ನಾಬಾರ್ಡ್‌ನಿಂದ ಸಾಲವನ್ನು ತಂದು ಅಪೆಕ್ಸ್‌ನವರು ತನ್ನ ಕೆಳಗಡೆ ಇರತಕ್ಕ ಬ್ಯಾಂಕುಗಳಿಗೆ, ಸೊಸೈಟಿಗಳಿಗೆ ಹಂಚುತ್ತಾರೆ. ಮತ್ತು ವಸೂಲಿ ಮಾಡುತ್ತಾರೆ. ವಸೂಲಿ ಮಾಡಿ ಮತ್ತೆ ಹಣವನ್ನು ತುಂಬುತ್ತಾರೆ. ಮುಂದಿನ ವರ್ಷ ಮತ್ತೆ ಸಾಲ ತರುತ್ತಾರೆ. ಕಮರ್ಷಿಯಲ್ ಬ್ಯಾಂಕುಗಳಲ್ಲಿ ಗ್ರಾಮೀಣ ಬ್ಯಾಂಕುಗಳಲ್ಲಿ ಇರುವಂತಹ ಹಣ ಕೇಂದ್ರ ಸರ್ಕಾರದ್ದು. ನಾಬಾರ್ಡ್‌ನಲ್ಲಿರತಕ್ಕ ದುಡ್ಡು ಕೇಂದ್ರ ಸರ್ಕಾರದ್ದು. ನಮ್ಮದು ಯಾವುದೂ ಇಲ್ಲ. ಅಂದ ಮೇಲೆ ದುಡ್ಡು ಅವರದು ಇದ್ದಾಗೆ, ಕಮರ್ಷಿಯಲ್ ಬ್ಯಾಂಕಿನ ಸಾಲಕ್ಕೆ ಒಂದು ನೀತಿ ಒಂದು ಸ್ಟ್ಯಾಂಡರ್ಡ್ ಮತ್ತು ಕೋ-ಆಪರೇಟಿವ್ ಬ್ಯಾಂಕುಗಳಿಗೆ ಒಂದು ನೀತಿ ಮತ್ತು ಒಂದು ಸ್ಟ್ಯಾಂಡರ್ಡ್ ಎಂದರೆ ನನಗೆ ಅರ್ಥವಾಗುವುದಿಲ್ಲ; ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಏನೋ ಬರುತ್ತದೆ ಹಿಡಿಯಿರಿ. ಬರುತ್ತದೆ ಬಿಟ್ಟು ಹೋಗುತ್ತದೆ, ಹಿಡಿಯಿರಿ ಎಂದರೆ ಏನು ಹಿಡಿಯುವುದು ? ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ, ನಾನು ಹೇಳಿದೆ, ಇವತ್ತು ನೀವು ಸಾಲ ಕೊಡುತ್ತಿದ್ದೀರಿ, ನಾವೆಲ್ಲ ಬರಿ

'ಜೆ 'ಏಜೆನ್ಸಿ co-operative institutions are only agents to bring money from NABARD: disburse the money through co-operative societies to farmers: recover that money. returned that money to NABARD and for the next year. ಇಷ್ಟೇ ನಮ್ಮ ಕೆಲಸ. ಈ ಪರಿಸ್ಥಿತಿ ಇದ್ದಾಗ ನಾನು ಇಷ್ಟೇ ತಮ್ಮನ್ನು ಕೇಳುವಂಥದ್ದು. ನಾವು ಬಿಚ್ಚು ಮನಸ್ಸಿನಿಂದ ಪಕ್ಷದ ಕನ್ನಡಕ ತೆಗೆದಿಟ್ಟು ಮಾತಾಡೋಣ ಇವತ್ತು ತಾವೇ ಹೇಳಿ ಇದು ಯಾವ ರೀತಿ ರಾಜ್ಯ ಸರ್ಕಾರಕ್ಕೆ ಜವಾಬ್ದಾರಿ? ಈಗ ವಿರೋಧ ಪಕ್ಷದ ಕೆಲವು ಸದಸ್ಯರು ಹೇಳಿದರು, ಬಿ.ಜೆ.ಪಿ. ನಾಯಕರು ಹೇಳಿದರು, ವಿರೋಧ ಪಕ್ಷದ ನಾಯಕರು ಹೇಳಿದರು. ಮಧ್ಯೆ ಪ್ರದೇಶದಲ್ಲಿ ಹಾಗೇ ಆಯಿತು, ಗುಜರಾತಿನಲ್ಲಿ ಹೀಗೆ ಆಯಿತು ಎಂದು ಹೇಳಿದರು. ನಾನು ಅದಕ್ಕೆ ಬರುತ್ತೇನೆ. ಏಕೆ ಆಯಿತು ಏನು ಆಯಿತು, ಏನಾಗಿದೆ, ಇನ್ನೂ ಮುಂದೆ ಏನಾಗುತ್ತದೆ ಅದನ್ನು ವಿಚಾರ ಮಾಡೋಣ. ಆದರೆ ಪ್ರಶ್ನೆ ಏನು ಎಂದರೆ, ಈ ಸಾಲದ ಜವಾಬ್ದಾರಿ ಕೇಂದ್ರ ಸರ್ಕಾರದ್ದೋ ಅಥವಾ ರಾಜ್ಯ ಸರ್ಕಾರದ್ದೋ ಇದನ್ನು ವಿಚಾರ ಮಾಡಬೇಕಾಗಿದೆ. ಇವತ್ತು ನನಗೆ ತಿಳಿದಂತೆ ಸ್ಪಷ್ಟವಾಗಿ ತಮಗೆ ಹೇಳಬೇಕಾಗಿದ್ದರೆ.............

ಶ್ರೀ ಬಿ. ಎಚ್. ಬನ್ನಿಕೋಡ್ :

ಹಿಂದಿನ ಸರ್ಕಾರ ರೈತರ ಸಾಲ ಮನ್ನಾ ಮಾಡುವುದಕ್ಕೆ ವಿರೋಧವಾಗಿತ್ತು. ಇವರು ಅಷ್ಟಾದರೂ ಹೇಳಿದ್ದಾರೆ;

ಅಧ್ಯಕ್ಷರು :-

ಅವರು ಈಲ್ಡ್ ಆಗದೇ ಹೋದರೆ ನೀವು ಯಾರು ಮಾತನಾಡಬೇಡಿ. ನೀವು ಹೇಳುವುದನ್ನು ಅವರು ಸಾವಧಾನವಾಗಿ ಕೇಳಿದ್ದಾರೆ. ಅವರು ಹೇಳುವುದನ್ನು ನೀವು ಕೇಳುವಂಥ ಔದಾರ್ಯ ತೋರಿಸಬೇಕು. ಅವರು ಈಲ್ಡ್ ಆದರೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್:

ಮಾನ್ಯ ಚಂದ್ರೇಗೌಡರು ಒಂದು ಮಾತು ಹೇಳಿದ್ದಾರೆ. ನಿಜವಿದ್ದರೆ ಅದನ್ನು ಸ್ವಾಗತ ಮಾಡುವುದಕ್ಕೆ ತಯಾರಾಗಿದ್ದೇನೆ. ಯಾವುದೇ ರಾಜಕೀಯ ಪಕ್ಷ ಚುನಾವಣೆ ಪ್ರಣಾಳಿಕೆ ಮುಖಾಂತರ ಏನು ಆಶ್ವಾಸನೆ ಕೊಡುತ್ತದೆ; ಅದು ಆರು ತಿಂಗಳದ್ದಲ್ಲ. ಒಂದು ವರ್ಷದ್ದಲ್ಲ, ಅದು ಐದು ವರ್ಷದ ಆಶ್ವಾಸನೆ ಎಂದು ಒಪ್ಪಿಕೊಳ್ಳುತ್ತೇನೆ. ಇದು ಐದು ವರ್ಷದ ಆಶ್ವಾಸನೆ. ಅದರಲ್ಲಿ ಇದು ಮೊದಲನೇ ಕಂತು ಎಂದು ಕೇಂದ್ರ ಸರ್ಕಾರ ಹೇಳಿದರೆ ನನಗೆ ಯಾವ ತರಹದ ಅಡ್ಡಿ ಇಲ್ಲ. ಅವರು ಇದು ಮೊದಲನೇ ಕಂತು, ಇದೇ ಫೈನಲ್ ಅಲ್ಲ ಎಂಬ ಮಾತನ್ನು ಹೇಳಿದ್ದರೆ ಯಾವ ತರಹದ ಅಡ್ಡಿಯೂ ಇರಲಿಲ್ಲ. ಅದರೆ ವಾತಾವರಣ ಹಾಗೆ ಇದ್ದ ಹಾಗೆ ಕಾಣುವುದಿಲ್ಲ. ಅವರು ಇದೇ ಫಸ್ಟ್ ಆ್ಯಂಡ ಫೈನಲ್, ಫಸ್ಟ್ ಆ್ಯಂಡ್ ಲಾಸ್ಟ್ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಹೇಳಿಕೆಗೂ ಅವರು ಕೊಟ್ಟ ಭರವಸೆಗೂ ಬಹಳ ವ್ಯತ್ಯಾಸ ಇದೆ. ಹೇಗೆ ವ್ಯತ್ಯಾಸ ಇದೆ ಎಂಬುದನ್ನು ಕ್ಲೀಯರಾಗಿ ಹೇಳಿದ್ದೇನೆ. ಯಾರೋ ಬರೆದರು, ಯಾರೋ ಹಂಚಿದರು? ಯಾರೋ ಓದಿದರು ಎಂದು ಹೇಳಬಹುದು. ಇದು ಆಗುತ್ತದೆ ಎಂದು ಹೇಳುವುದಿಲ್ಲ. ವ್ಯಾಲ್ಯೂ ಬೆಸ್ಟ್ ಪಾಲಿಟಿಕ್ಸ್ ಪ್ರಾಕ್ಟೀಸ್ ಮಾಡುವ ನಾಯಕರಲ್ಲಿ ಮಾರಲ್ ಕರೇಜ್ ಅಂದರೆ ನೈತಿಕ ಧೈರ್ಯ ಬೇಕು. ಮಹಾತ್ಮಾಗಾಂಧೀಯವರು ಹಿಂದೆ ಹೇಳಿದರು, ತಪ್ಪು ಮಾಡಿದ್ದಾಗ ಮಾಡಿದ್ದೇನೆ ಎಂದು ಹೇಳುವುದಕ್ಕೆ ಅವರು ಹಿಂದೆ ಮುಂದೆ ನೋಡಿಲಿಲ್ಲ. ಇವತ್ತು ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿಗಳು, ಹಣಕಾಸಿನ ಮಂತ್ರಿಗಳು ಈ ರೀತಿ ಆಗುತ್ತದೆ ಎಂದು ಗೊತ್ತಿರಲಿಲ್ಲ. ಏನೋ ಹೇಳಿ ಬಿಟ್ಟಿದ್ದೇವೆ ಆಗುವುದಿಲ್ಲ ಕ್ಷಮಿಸಬೇಕು. ಎಂದು ಹೇಳಿದರೆ ಏನು ಅಡ್ಡಿ ಇಲ್ಲ. ಆ ರೀತಿ ಹೇಳಿದರೆ ಯಾರೇನು ಹೇಳುವುದಿಲ್ಲ. ಅದರೆ ನಾವು ಅಶ್ವಾಸನೆ ಕೊಟ್ಟ ಪ್ರಕಾರ ಯೋಜನೆ ಮಾಡಿದ್ದೇವೆ ಎಂದು ಹೇಳಿದರೆ. ಅದು ಜನರ ಕಣ್ಣಲ್ಲಿ ಮಣ್ಣು ಹಾಕುವ ಪ್ರಯತ್ನ ಮಾಡಿದ್ದಾರೆ ಎಂಬ ಮಾತನ್ನು ಹೇಳುತ್ತಾರೆ. ನೀವು ಏನು ಭರವಸೆ ಕೊಟ್ಟಿದ್ದೀರಿ ಎಂದರೆ, loans upto Rs.10,000 of small and marginal farmer and landless cultivators and artisians as on october 2nd, 1989 would be written off " ನಾವು ಬಾಕಿ ಇರುವಂತಹ ಲೋನ್ಸ್ ಮಾಫಿ ಮಾಡುತ್ತೇವೆಂದು ನೀವು ಹೇಳಿಲ್ಲ. ಲೋನ್ಸ್ ಎಂದರೆ ಅವತ್ತಿನ ದಿವಸ ಲೋನ್ ಇದ್ದರೆ ಆಯಿತು. ಅವತ್ತಿನ ದಿವಸ ಸಾಲಗಾರ ಇದ್ದರೆ; ಸಾಲ ಪಡೆದಿದ್ದರೆ ಸಾಕು. ನೀವು ಹೇಳುವ ಪ್ರಕಾರ, " Loan supto Rs. 10,000 of small and marginal farmers and landless cultivators and artisians as an october 2nd, 1989 would be written off." NABARD will provide loans for farmers at concessional rate of interest through co-operative banks" ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಅದರಲ್ಲಿ ಇಂಟರ್‌ಪ್ರಿಟೇಷನ್ ಮಾಡುವುದಕ್ಕೆ ವಾದ ಮಾಡುವುದಕ್ಕೆ ಯಾವ [illegible]ಯಾದರೂ ಎರಡನೇ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶವಿಲ್ಲ. ಅಲ್ಲಿಂದ ಇನ್ನು ಮುಂದೆ ಈ ರೀತಿ ಹೇಳಿದ್ದೀರಿ NABARD ಪರಿಸ್ಥಿತಿ ಏನಾಗಿದೆ ಎಂದರೆ ನಾವು ಕನ್‌ಸೇಷನಲ್ ರೇಟ್ ಆಫ್ ಇಂಟರೆಸ್ಟ್ ಕೊಡುತ್ತೇವೆಂದು ಹೇಳಿದ್ದರೂ, ರೇಟ್ ಆಫ್

ಇಂಟರೆಸ್ಟ್‌ನಲ್ಲಿ ಸಬ್ಸಿಡಿ ಕೊಡುತ್ತೇವೆಂದು ಎಂದರೂ ನಮ್ಮ ಕುತ್ತಿಗೆ ಹಿಡಿದಿದ್ದಾರೆ ನಿಮ್ಮ ಕುತ್ತಿಗೆ ಹಿಡಿದಿದ್ದರು. ನೀವು ಇದ್ದ ಕಾಲಕ್ಕೆ ಈಲ್ಡ್ ಆಗಿದ್ದೀರಿ. ನಾವು ಈಲ್ಡ್ ಆಗಿ ಬೇರೆ ದಾರಿ ಹುಡುಕುತ್ತಿದ್ದೇವೆ. ಅದನ್ನು ಒಪ್ಪುತ್ತೇನೆ. ಸಾಲ ಮನ್ನಾ ಮಾಡುವ, ಜವಾಬ್ದಾರಿ ತೆಗೆದುಕೊಂಡದ್ದು, ಕೇಂದ್ರ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿ ಬಂದಿರುವಂಥ ಪಕ್ಷವೇ ಹೊರತಾಗಿ ನನ್ನ ಪಕ್ಷ ಅಲ್ಲ. ನಾನು ಈಗಾಗಲೇ ಹೇಳಿದ್ದೇನೆ. ನನ್ನ ಪಕ್ಷ ಸರ್ವತಾ: ಈ ಜವಾಬ್ದಾರಿಯನ್ನು ತೆಗೆದುಕೊಂಡಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಕೇಂದ್ರದ ಮೇಲೆ ಒತ್ತಾಯ ತರುವಂಥ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಇಲ್ಲಿಯವರಿಗೆ ಶಕ್ತ್ಯಾನುಸಾರ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು, ಹೇಳಬಹುದು. ಇದರ ಬಗ್ಗೆ ಸಾಲ ಪಡೆದುಕೊಳ್ಳುವಂಥ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನನಗೆ ಅವರು ಲಿಖಿತ ಮೂಲಕ ಜವಾಬ್ದಾರಿಯುತವಾದ ಪತ್ರ ಬರೆದಿದ್ದಾರೆ ಆ ಪತ್ರದ ಕಾಪಿ ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳುಹಿಸಿಕೊಡಿ.

ಶ್ರೀ ವೀರೇಂದ್ರ ಪಾಟೀಲ್ :

ಇದರ ಬಗ್ಗೆ ಇವತ್ತು ನಾವು ಸಾಲ ಪಡೆದುಕೊಳ್ಳಬೇಕಾಗಿಲ್ಲ. ಕೋ- ಆಪ್‌ರೇಟಿವ್ ಲೋನ್ಸ್ ನಮ್ಮ ಲೋನ್ಸ್ ಅಲ್ಲ ಎಂದು ಅವರು ಸಾಕಷ್ಟು ಸಾರಿ ಹೇಳಿದ್ದಾರೆ. ಮತ್ತೆ ನಾನು ಆ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಏನೆಂದರೆ, ಸಾಲ ಎಷ್ಟು ಇದೆ, ಅದನ್ನು ನಾವು ವಿಚಾರ ಮಾಡಬೇಕು. ಈಗ ನಾವು ನಮ್ಮಲ್ಲಿ ಸಾಲ ಕೊಟ್ಟಿದ್ದೇವೆ. ಅದನ್ನು ನಾನು ಹೇಳುತ್ತೇವೆ. ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು ಇದು ಅಂತರ್ಗತವಾಗಿ ಈಗ ಸಂಬಂಧ ಬರುವುದಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. 1989-90ಕ್ಕೆ ಕೋ- ಆಪರೇಟಿವ್ ಲೋನ್ಸ್ ಕೊಟ್ಟಿರುವುದು, ಅಲ್ಪಾವಧಿ ಸಾಲ 185.89 ಕೋಟಿ ರೂಪಾಯಿಗಳು. ಅಲ್ಲಿಂದ ಮಧ್ಯಮಾವಧಿ ಸಾಲ ಬಹಳ ಕಡಿಮೆ, ಇದೆ. 7,81 ಕೋಟಿ ರೂಪಾಯಿಗಳು, ಇನ್ನು ದೀರ್ಘಾವಧಿ ಸಾಲದ ಬಗೆ ಹೋಗತಕ್ಕಂಥ ಅವಶ್ಯಕತೆ ಇಲ್ಲ. ಡಿಫಾಲ್ಟರ್ ಆಗುವುದು ಬೇರೆ. ಆದಾಗ ಆ ಪ್ರಶ್ನೆ ಬರುತ್ತದೆ. 1989-90 ಆಯಿತು. ಇನ್ನು ಹಿಂದಕ್ಕೆ ಹೋದರೆ 1988-89ಕ್ಕೆ ಅಲ್ಪಾವಧಿ ಸಾಲ 229.18ಕೋಟಿ ರೂಪಾಯಿಗಳು. ಮಧ್ಯಮಾವಧಿ ಸಾಲ 8.66ಕೋಟಿ ರೂಪಾಯಿಗಳು. 1987-88ರಲ್ಲಿ ಕೋ-ಆಪರೇಟಿವ್ ಅಲ್ಪಾವಧಿ ಸಾಲ 136-86 ಕೋಟಿ ರೂಪಾಯಿಗಳು. ಮಧ್ಯಮಾವಧಿ ಸಾಲ 8.68 ಕೋಟಿ ರೂಪಾಯಿಗಳು. ಇಲ್ಲಿರುವ ಪ್ರಶ್ನೆ ಏನೆಂದರೆ 1989-90ರಲ್ಲಿ ಕೊಟ್ಟಿರತಕ್ಕಂಥ ಸಾಲದ ಬಗ್ಗೆ ನಾವು ವಿಚಾರ ಮಾಡಬೇಕಾಗಿಲ್ಲ. ಆ ಯೋಜನೆಗೂ ಇದಕ್ಕೂ ಸಂಬಂಧ ಇಲ್ಲ. ಇನ್ನು 1988-89ರಲ್ಲಿ 229.00 ಕೋಟಿ ರೂಪಾಯಿಗಳು ಇದೆ. 1987-88ರಲ್ಲಿ 138 ಕೋಟಿ

ರೂಪಾಯಿಗಳು ಮಾತ್ರ ಇದೆ. ಇದರ ಹಿಂದಿನ ಸಾಲ ಎಷ್ಟು ಉಳಿದಿದೆ. ಅದು ಎಷ್ಟು ಮನ್ನಾ ಮಾಡುವುದಕ್ಕೆ ಸಾಧ್ಯ ಇದೆ; ಅದರ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿಲ್ಲ. ಅದರಲ್ಲಿ ಅವರೇನು ಈಗ ಅರ್ಧ ಹಣ ಕೊಡುವಂತೆ ಹೇಳುತ್ತಿದ್ದಾರೆ. ಈ ಸಾಲದಲ್ಲಿ ಮನ್ನಾ ಮಾಡುವಂತ ಕಮರ್ಷಿಯಲ್ ಬ್ಯಾಂಕ್ಸ್ ಸಾಲವನ್ನು ಅವರು ಕೊಡುತ್ತಾರೆ ಅದು ನಮ್ಮ ಜವಾಬ್ದಾರಿ ಅಲ್ಲ. ನಾವು ಅದರ ಸಾಲ ಕೊಡುವಂತಹ ಅವಶ್ಯಕತೆ ಇಲ್ಲ. ಅನೇಕ ಜನಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಒಟ್ಟು ಸಾಲ ಮನ್ನಾ ಮಾಡುತಕ್ಕಂಥ ಮೊತ್ತ ಎಷ್ಟು ಎಂದು ಕೇಳಿದರು. ಅದರ ಬಗ್ಗೆ ನಮಗೊಂದು ಕಲ್ಪನೆ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳಿದರು. ನಾನು ನಮ್ಮ ಅಧಿಕಾರಿಗಳಿಗೆ ಅವಸರ ಅವಸರವಾಗಿ ಹೇಳಿದೆ. ಒಂದು ರಫ್ ಎಸ್ಟಿಮೇಟ್ ಮಾಡಿ ನನಗೆ ಕೊಡಿ ಎಂದು ಹೇಳಿದೆ. ಅವರು ಕೊಟ್ಟಿದ್ದು ಸರಿ ಇದೆ ಎಂದು ನಾನು ಹೇಳುವುದಿಲ್ಲ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಇರಬಹುದು ಇವತ್ತು ಅವರು ಕೊಟ್ಟಂತಹ ಅಂಕಿ ಅಂಶಗಳನ್ನು ನಾನು ಹೇಳಿದರೆ ಹಳೆಯ ಸ್ಕೀಮ್ ಪ್ರಕಾರ 1989-90ಕ್ಕೆ 175 ಕೋಟಿ ರೂಪಾಯಿಗಳು ಬರುತ್ತದೆ. ಇವತ್ತು ಕ್ಲಾರಿಫಿಕೇಷನ್ ಏನು ಬಂದಿದೆ ಎಂದರೆ ಅದು ಇನ್ನೂ ಲಿಖಿತ ಮೂಲಕ ಬಂದಿಲ್ಲ. ಅದು ಲಿಖಿತ ಮೂಲಕ ಬಂತು ಎಂದರೆ ಅದರ ಪ್ರಕಾರ 224 ಕೋಟಿ ರೂಪಾಯಿಗಳಾಗುತ್ತವೆ. ಸ್ವಲ್ಪ ಅಂದರೆ 10-15 ಕೋಟಿ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು, ಅದು ಬೇರೆ, ಒಂದು ವೇಳೆ, ಇದರಲ್ಲಿ 50 ಪರ್ಸೆಂಟ್ ಸಾಲ ನಾವು ಹೊತ್ತುಕೊಳ್ಳುತ್ತೇವೆ ಎನ್ನುವಂಥದ್ದು ಅಂದರೆ ರೌಂಡ್ ಎಬಾಟ್ 112-120 ಕೋಟಿ ರೂಪಾಯಿ ಬರುತ್ತದೆ. ಇವತ್ತಿನ ದಿವಸ ಅವರು ನನಗೆ ರಫ್ ಎಸ್ಟಿಮೇಟ್ ಕೊಟ್ಟಿದ್ದಾರೆ. ಅಲ್ಲಿಂದ ನಾವು ಎತ್ತಿರುವ ಪ್ರಶ್ನೆ ಏನೆಂದರೆ, ಬಹಳ ಗಹನವಾಗಿ ವಿಚಾರ ಮಾಡುವುದೇನೆಂದರೆ, ಚುನಾವಣೆ ಆದ ತಕ್ಷಣ ಒಂದು ಅವಕಾಶ ನಿರ್ಮಾಣವಾಯಿತು. ಸಾಲ ಮನ್ನಾ ಮಾಡಬೇಕು, ಸಾಲ ಮನ್ನಾ ಮಾಡಬೇಕು ಎಂದು ನಾವೇ, ನಾಯಕರುಗಳು ಹೇಳಿದಾಗ ಯಾರು ಸಾಲವನ್ನು ವಾಪಸ್ಸು ಮಾಡುವುದಕ್ಕೆ ಮುಂದೆ ಬರುತ್ತಾರೆ. 1989-90 ಸಾಲದ ರಿಕವರಿ ಬಗ್ಗೆ ನಾನು ಹೇಳುತ್ತಿದ್ದೇನೆ. 1990ರ ಏಪ್ರಿಲ್ ಎಂಡ್‌ವರೆಗೆ ಶಾರ್ಟ್ ಟರ್ಮ್ ಲೋನ್ ರಿಕವರಿ ಎಷ್ಟಾಗಿದೆ. ಎಂದರೆ 12.79 ಪರ್ಸೆಂಟ್ ಮಾತ್ರ ಆಗಿದೆ. ಕಲೆಕ್ಷನ್ ಆಗಿದ್ದು ಏಪ್ರಿಲ್ ತನಕ. ಈಗ ನಾವು ಮೇ ತಿಂಗಳಿನಲ್ಲಿದ್ದೇವೆ. ಏಪ್ರಿಲ್ ಎಂಡ್‌ವರೆಗೆ ಒಟ್ಟು ರೆಕವರಿಆಗಿದ್ದ ಹಣ 29 ಕೋಟಿ 55 ಲಕ್ಷ ಮಾತ್ರ. ಅಂದರೆ 85 ಕೋಟಿ ರೂಪಾಯಿ ಸಾಲ ವಿತರಣೆಯನ್ನು ಹೋದ ವರ್ಷ ಮಾಡಿದ್ದೇವೆ, ಅದರಲ್ಲಿ ಏಪ್ರೀಲ್ ಎಂಡ್‌ವರೆಗೆ 29-55 ಕೋಟಿ ರೂಪಾಯಿಗಳು ಮಾತ್ರ ರಿಕವರಿ ಆಗಿದೆ. ಅಂದರೆ 12.79 ಪರ್ಸೆಂಟ್ ಅಥವಾ 13 ಪರ್ಸೆಂಟ್ ಎಂದು ಇಟ್ಟುಕೊಳ್ಳಿ. ಇದು ತಮ್ಮೆಲ್ಲರಿಗೂ ಗೊತ್ತಿದೆ. ತಾವೆಲ್ಲರೂ ಸಹಕಾರಿ ಕ್ಷೇತ್ರದಲ್ಲಿ ಬೇಕಾದಷ್ಟು ದುಡಿದವರು ಇದ್ದೀರಿ. ನಾಬಾರ್ಡ್ ರೂಲ್ಸ್ ಪ್ರಕಾರ 45 ಪರ್ಸೆಂಟ್ ರೆಕವರಿ ಆಗದಿದ್ದರೆ ಮುಂದಿನ ಸಾಲ ಕೊಡುವುದಿಲ್ಲ. ಇದರ ಬಗ್ಗೆ ಅವರ ಜೊತೆ ಮಾತನಾಡಿದ್ದೇವೆ; ಪತ್ರ ಬರೆದಿದ್ದೇವೆ, ಕೇಂದ್ರದ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ನಮ್ಮ ಚುನಾವಣಾ ಭಾವನೆಗಳೇ ಬೇರೆ. ನಿಮ್ಮ ಪಕ್ಷದವರು ಹಾಗೂ ಎಲ್ಲಾ ರಾಜಕೀಯ ಪಕ್ಷದವರು ಸಾಲವನ್ನು ಮನ್ನಾ ಆಯಿತು; ಸಾಲ ಮನ್ನಾ ಆಯಿತು ಎಂದು ಹೇಳುತ್ತಿರುವಾಗ ರೈತರುಗಳು ಸಾಲ ವಾಪಸ್ಸು ಮಾಡುತ್ತಿಲ್ಲ. ಇದರಿಂದ

ನಾವು ರಿಕವರಿ ಮಾಡುವುದು ಹೇಗೆ ಎಂದು ಅವರಿಗೆ ತಿಳಿಸಿದ್ದೇವೆ 45 ಪರ್ಸೆಂಟ್ ರಿಕವರಿ ಈ ವರ್ಷ ಆಗುವುದಕ್ಕೆ ಸಾಧ್ಯವಿಲ್ಲ; ಮುಂದೆ ನೀವು ಸಾಲ ಕೊಡದೇ ಇದ್ದರೆ ರೈತರುಗಳು ಹಾಳಾಗುತ್ತಾರೆ. ರೈತರುಗಳಿಗೆ ಬಹಳ ಕಷ್ಟವಾಗುತ್ತದೆ, ಸಾಲ ಕೊಡದೇ ಇದ್ದರೆ ಸಾಹುಕಾರರ ಮನೆ ಬಾಗಿಲಿಗೆ ಹೋಗುವ ಪರಿಸ್ಥಿತಿ ರೈತರುಗಳಿಗೆ ಬರುತ್ತದೆ. ಆದ್ದರಿಂದ ಈ ವರ್ಷದ ಮಟ್ಟಿಗೆ ರಕ್ವರಿ ಪರ್ಸೆಂಟೇಜ್ ಷರತ್ತು ಏನಿದೆಯೋ ಅದನ್ನು ಸಡಲಿಸಬೇಕೆಂದು ನಾವು ಹೇಳಿದೆವು. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಈ ವರ್ಷದ ರೆಕವರಿ ಕಡಿಮೆಯಾದರೂ ಪರವಾಗಿಲ್ಲ. 1990-91 ನೇ ಸಾಲಿಗಾಗಿ ನಾವು ಸಾಲ ಕೊಡುವುದಕ್ಕೆ ತಯಾರಿದ್ದೇವೆ. ಅದರೆ ಅವರು ಏನು ಷರತ್ತು ಹಾಕಿದ್ದಾರೆಂದರೆ, ಇನ್ನು ಮುಂದಾದರೂ 1989-90 ವಸೂಲಾತಿಯನ್ನು ಬಹಳ ತೀವ್ರತೆಯಿಂದ ಮಾಡಬೇಕು, ಹಾಗೂ 31ರ ಡಿಸೆಂಬರ್ 1990 ರಂದು ಸಬ್‌ಸ್ಟಾ ್ಯನಿಯಲ್ ರೆಕವರಿ ತೋರಿಸಬೇಕು ಎಂದು ಹೇಳಿದ್ದಾರೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಒಪ್ಪಿಕೊಳ್ಳದಿದ್ದರೆ, ಮುಂದೆ ರೈತರಿಗೆ ಸಾಲ ಸಿಗುತ್ತಿರಲಿಲ್ಲ. ಇದನ್ನು ಒಪ್ಪಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈವತ್ತಿನಿಂದ 1989-90 ಸಾಲ ವಸೂಲು ಮಾಡಿ ಎಂದು ಹೇಳಿದೆ. ಇದ್ದಿದ್ದರೆ ಬೇರೆ ಗತ್ಯಂತರವಿಲ್ಲ.

ಈಗ ಒಂದು ವಿಚಾರವನ್ನು ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಆದರ ಬಗ್ಗೆ ನಾನು ಹೋಗುವುದಿಲ್ಲ, ಈ ಸ್ಕೀಮ್ ಪ್ರಕಾರ ನೀವು ಹೋಗಿ ಎನ್ನುವ ಮಾತನ್ನು ಹೇಳಿದ್ದೀರಿ. ಬಿ.ಜೆ.ಪಿ ಯವರು ಬಿಟ್ಟರೆ ಎಲ್ಲರೂ ಒಂದೇ ಸ್ವರದಲ್ಲಿ ಈ ಮಾತನ್ನಾಡಿದ್ದೀರಿ. ಅದಕ್ಕೆ ನಾನು ಅದರ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಇವತ್ತಿನ ದಿವಸ ಏನಾಗಿದೆ ಎಂದರೆ, ಮೊದಲು ಕೇಂದ್ರ ಸರ್ಕಾರದವರು ಏನು ಭರವಸೆಯನ್ನು ಕೊಟ್ಟಿದ್ದಾರೆ. ಬಹುಶ: ಯೋಜನೆ ಪ್ರಕಾರ ಕೂಡ 13-14 ಸಾವಿರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೀರಿ. ಅದರೆ ನನಗನಿಸುವಂತದ್ದು ಇವೊತ್ತು ಕೇಂದ್ರ ಸರ್ಕಾರದವರಿಗೆ ಅವರಿಗೆ ಗೊತ್ತಿಲ್ಲ, ತಾವು ಎಲ್ಲಿ ನಿಂತಿದ್ದೇವೆಂಬುದು ಅವರಿಗೆ ಗೊತ್ತಿಲ್ಲ. ಸಾಲ ಮನ್ನಾ ಮಾಡುವಂತಹ ಮೊತ್ತ ಅದರ ಪ್ರಕಾರ 13-14 ಸಾವಿರ ಕೋಟಿ ರೂಪಾಯಿಗಳು ಇದ್ದರೆ ಈ ವರ್ಷದ ಬಜೆಟ್‌ನಲ್ಲಿ ಕೇವಲ ಒಂದು ಸಾವಿರ ಕೋಟಿ ರೂಪಾಯಿಗಳು ಮಾತ್ರ ಅವರು ಇದರ ಸಲುವಾಗಿ ತೆಗೆದು ಇಟ್ಟಿದ್ದಾರೆ. ಅದು ಯಾವುದಕ್ಕೂ ಸರಿ ಹೋಗುವುದಿಲ್ಲ. ಈಗ ನಾವು ಏನು ಹೇಳಿದ್ದೀವಿ ಅಂದರೆ ಅರ್ಧ ದುಡ್ಡು ಬರುತ್ತದೆ; ಯಾವಾಗ ಬರುತ್ತದೆ, ಪೇಪರ್‌ನಲ್ಲಿ ಬರುತ್ತದೋ ಹೇಗೆ ಬರುತ್ತದೋ ಇನ್ನೂ ನನಗಂತೂ ಗೊತ್ತಿಲ್ಲ; ನನಗೆ ಇನ್ನೂ ಅದರ ಬಗ್ಗೆ ಸಂಶಯ ಇದೆ. ಅದಕ್ಕಾಗಿಯೋ ಇವತ್ತು ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು. ಇನ್ನೊಂದು ವಿಚಾರ ನಾನು ಹೇಳುತ್ತೇನೆ, ಎಲ್ಲರೂ ರೈತರಿದ್ದುದರಿಂದ ನಾವು ವಿಚಾರ ಮಾಡಬೇಕು. ಬಹುಶ: ತಮ್ಮಲ್ಲಿ ನಾಯಕರುಗಳು ಒಂದು ವಾತಾವರಣವನ್ನು ಏನು ನಿರ್ಮಾಣ ಮಾಡಿದ್ದಾರೆಂದರೆ, ಈ ಒಂದು ಸಾಲ ಮನ್ನಾ ಮಾಡಿದರೆ, ರೈತ ಮಾಡಿದಂಥ ಎಲ್ಲಾ ಸಾಲ ಮನ್ನಾ ಆಯಿತು ಎನ್ನುವಂಥ ಒಂದು ವಾತಾವರಣ ನಿರ್ಮಾಣ ಆಗಿದೆ. ಅದರೆ ಇವತ್ತು ನಾವು ನೆನಪು ಇಟ್ಟುಕೊಳ್ಳಬೇಕು. ಕೋ-ಆಪರೇಟಿವ್ ಸಾಲದಿಂದಲೇ ರೈತರು ಇವತ್ತು ತನ್ನ ವ್ಯವಸಾಯವನ್ನು ಮಾಡುತ್ತಿಲ್ಲ. ತಾವು ತಿಳಿದುಕೊಳ್ಳಬೇಕು. ನನ್ನ ಹತ್ತಿರ ಅಂಕಿ ಸಂಖ್ಯೆಗಳು ಇದೆ. ಹೋದ ಸಲ

ನಾನು ಕೊಟ್ಟಿರಬಹುದು. 40-45ವರ್ಷ ಅದಕ್ಕೂ ಪೂರ್ವದ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಕೋ-ಆಪರೇಟಿವ್ ನೆಟ್‌ವರ್ಕ್ ನಮ್ಮ ರಾಜ್ಯದಲ್ಲಿ 2ನೇ ರಾಜ್ಯದಲ್ಲಿ ಸ್ಪ್ರೆಡ್ ಆಗಿದೆ ಎಂದು ಹೇಳಿದರೂ ಕೂಡ so far we have not been able to cover 25/ of the farmers. ಇದನ್ನು ನೀವು ತಿಳಿದುಕೊಳ್ಳಬೇಕು. ರೈತರು, ರೈಕ ಸಂಘದ ಮುಖಂಡರಿಗೂ ನಾನು ಹೇಳುತ್ತಿದ್ದೇನೆ. ಇವತ್ತು 75 ಪ್ರತಿಶತ್ of our farmers are depending upon the money-lenders. ಏಕೆಂದರೆ ಒಂದು ವಾತಾವರಣ ಏನಿದೆ ಅಂದರೆ ಈ ಸಾಲ ಮನ್ನಾವಾದರೆ ಆಗಿಹೋಯಿತು ಅವನು ಮುಕ್ತಿ ಹೊಂದಿದ ರೈತ ಸ್ವರ್ಗಕ್ಕೆ ಹೋಗಿ ಸ್ವರ್ಗದಲ್ಲಿ ಕುಳಿತುಬಿಡುತ್ತಾನೆಂಬ ಭಾವನೆ ಏನು ಇದೆ ಅದು ಇಲ್ಲ. ಏಕೆಂದರೆ ನಮ್ಮ ರಾಜ್ಯದ ಮಟ್ಟಿಗೆ ನಾನು ಹೇಳಬೇಕಾಗಿದ್ದರೆ, ನಮ್ಮ ರಾಜ್ಯದಲ್ಲಿ total number of agri-culture families in Karnataka is 44.14 lakhs. ಇಷ್ಟು ಫ್ಯಾಮಿಲೀಸ್ ಇದೆ. ಈಗ ಸೊಸೈಟಿಯ ಮುಖಾಂತರ ಸಾಲ ಪಡೆಯುವಂತಹ ಫ್ಯಾಮಿಲೀಸ್ ಎಷ್ಟಿದೆ ಎಂದರೆ 11.56 ಲಕ್ಷ ಅದರ ಅರ್ಥ ಶೇಕಡ 25ರಷ್ಟು ರೈತರು ಸೊಸೈಟಿಯಿಂದ ಹಣವನ್ನು ಪಡೆಯುತ್ತಿದ್ದಾರೆಯೋ ಹೊರತಾಗಿ ಎಲ್ಲಾ ರೈತರು ಸೊಸೈಟಿಯಿಂದ ಹಣ ಪಡೆಯುತ್ತಿಲ್ಲ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದು ಭಾವನೆ ಏನು ಇದೆಯೆಂದರೆ ಸಾಲ ಮನ್ನಾವಾಯಿತು; ನಾವು ನೀವು ಕೂಡ ಒಂದು ರೆಸಲ್ಯೂಷನ್ ಮಾಡಿದ್ದೆವು. ನಾನು ಯಡಿಯೂರಪ್ಪನವರನ್ನು ಕೇಳುತ್ತೇನೆ. 128 ಕೋಟಿ, ಎಷ್ಟೋ ನಿಮ್ಮ ಮುಂದೆ ಹೇಳಿದ್ದೆನಲ್ಲಾ 112 ಕೋಟಿ ನಾನು ಕೊಡುತ್ತೇನೆ ಎಂದು ಒಂದು ರೆಜಲ್ಯೂಷನ್ ಮಾಡಿದ ಕೂಡಲೇ ಕರ್ನಾಟಕ ರಾಜ್ಯದ ಇಡೀ ಸಾಲ ಮನ್ನಾ ಆಗುವುದಿಲ್ಲ. ಅದನ್ನು ತಾವು ವಿಚಾರ ಮಾಡಬೇಕಾಗಿದೆ. ಇನ್ನೂ ಶೇಕಡ 75ರಷ್ಟು ಜನ ಹೊರಗಡೆ ಇದ್ದಾರೆ. ಯಾರ್‍ಯಾರ ಹತ್ತಿರ ಸಾಲ ತೆಗೆದುಕೊಂಡಿದ್ದಾರೋ ಎಷ್ಟು ಬಡ್ಡಿ ದರದ ಮೇಲೆ ಸಾಲ ತೆಗೆದುಕೊಂಡಿದ್ದಾರೋ ಎಷ್ಟು ಬಡ್ಡಿ ಅದರ ಮೇಲೆ ಬಡ್ಡಿಯಾಗಿದೆಯೋ, ಎಷ್ಟು ಭೂಮಿಯನ್ನು ಒತ್ತೆಯಿಟ್ಟಿದ್ದಾರೋ ದೇವರಿಗೇ ಗೊತ್ತು. ಆ ಅಂಕಿ ಅಂಶ ಯಾರ ಹತ್ತಿರವೂ ಇಲ್ಲ. ಅದಕ್ಕಾಗಿ ಇವತ್ತು ಏನೋ ಈ ಸಾಲದಿಂದ ಎಲ್ಲಾ ರೈತರು ಉದ್ಧಾರವಾಗುತ್ತಾರೆ ಎನ್ನುವಂತಹದ್ದನ್ನು ಏನಾದರೂ ತಿಳಿದುಕೊಂಡಿದ್ದರೆ ಅದು ತಪ್ಪು ಆಗುತ್ತದೆ. ಇದು ಆಗಿಹೋಯಿತು. ಈ ಮಾತನ್ನು ಸ್ಪಷ್ಟವಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನೊಂದು ಬಹಳ ಇಲ್ಲಿ ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದು ಏನೆಂದರೆ, ನಮ್ಮ ರೈತ ಇಲ್ಲಿ ಎಲ್ಲರೂ ರೈತರೆ ಇದ್ದೇವೆ. ಬಹುಶ: ನಮ್ಮ ಸಭಾಧ್ಯಕ್ಷರು ಕೂಡ ರೈತರಿದ್ದಾರೆ. ನಾವು ಈ ಕಡೆ ಕುಳಿತಿರುವವರು ರೈತರಿದ್ದೇವೆ. ಆ ಕಡೆ ಅವರು ಕುಳಿತಿರುವವರೂ ರೈತರಿದ್ದಾರೆ. ಎಲ್ಲರೂ ರೈತರ ಮಕ್ಕಳೇ ಹೊರತಾಗಿ ಏನೋ ಯಾರಾದರೂ ಶೇಕಡಾ ಒಂದರಷ್ಟು ಬಹುಶ: ದೊಡ್ಡ ಪಟ್ಟಣದಿಂದ ಬಂದವರು ಈ ಸದನದಿಂದ ಬಂದವರು ಈ ಸದನದಲ್ಲಿ ನನಗೇನೂ ಕಂಡು ಬಂದಿಲ್ಲ. ಪ್ರಶ್ನೆ ಏನೆಂದರೆ, ರೈತ ಹಳ್ಳಿಯಲ್ಲಿದ್ದಾನೆ. ರೈತ ಇವತ್ತು ಹೊರಗಡೆಯಿಂದ ಯಾರೇ ಬಂದು ಹೇಳಿದರೂ, ನಂಬುತ್ತಾನೆ. ಇದನ್ನು ನಾವು ತಿಳಿದುಕೊಳ್ಳಬೇಕು. ಏನೆಂದರೆ, ವ್ಯವಸಾಯ ಬಿಟ್ಟು ಎರಡನೆಯ ಕೆಲಸವನ್ನು ಮಾಡುವುದಕ್ಕೆ ಅವನಿಗೆ ಸಮಯ ಇಲ್ಲ. ಅದು ಮಾಡಿದರೂ

ಕೂಡ ಇವತ್ತು ಎರಡು ಹೊತ್ತು ಊಟ ಮಾಡಲಾರದಂತಹ ಪರಿಸ್ಥಿತಿ ಇದ್ದಾಗೆ, ಇವತ್ತು ಏನು ನಡೆಯುತ್ತಿದೆ ಎನ್ನುವಂತಹದ್ದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನು ಸಾಧಕ ಬಾಧಕಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ರಾಜಕೀಯ ಪಕ್ಷ ಯಾವ ಉದ್ದೇಶದಿಂದ ಬಂದು ಇದನ್ನು ಹೇಳುತ್ತಿದೆ ಎನ್ನುವಂತಹದ್ದನ್ನು ಕೂಡ ಅವನಿಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. he is innocent. ಅವನು ಇವತ್ತು ಇನ್ನೋಸೆಂಟ್ ಇದ್ದಾನೆ. ಅವನು ಇವತ್ತು ಶೋಷಣೆಗೆ ಒಳಗಾಗಿದ್ದಾನೆ. ಅದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಅಂತಹ ರೈತರಿಗೆ ನಾವೇನಾದರೂ ಭರವಸೆ ಕೊಡಬೇಕಾದರೆ, ಯಾವುದೇ ರಾಜಕೀಯ ಪಕ್ಷ ಇರಲಿ, ಇವತ್ತು ಅಧಿಕಾರದಲ್ಲಿ ಇರಲಿ. ವಿರೋಧ ಪಕ್ಷದಲ್ಲಿ ಇರಲಿ, ಬಹಳ ಜವಾಬ್ದಾರಿಯಿಂದ ಅವನಿಗೆ ಭರವಸೆಯನ್ನು ಕೊಡಬೇಕು. ಏಕೆಂದರೆ, ನೀರು ಏನು ಹೇಳುತ್ತೀರಿ, ಇವತ್ತು ಅವತ್ತು ನಂಬುವ ಪರಿಸ್ಥಿತಿಯಲ್ಲಿದ್ದಾನೆ ಪೇಪರ್‌ನಲ್ಲಿ ಬಂದ ಕೂಡಲೇ ಹೇಗೆ ನಂಬುತ್ತಾನೋ, ಆ ರೀತಿ ರಾಜಕೀಯ ಧುರೀಣರ ಮಾತನ್ನು ಅವನು ನಂಬುವ ಪರಿಸ್ಥಿತಿಯಲ್ಲಿದ್ದಾನೆ. ಅದಕ್ಕಾಗಿ ಅವನಿಗೆ ನಾವು ಏನು ಭರವಸೆಗಳನ್ನು ಕೊಡುತ್ತಿದ್ದೇವೋ ಅದು ಈಡೇರಿಸುವಂತಹ ಭರವಸೆಗಳು ಇದ್ದರೆ ಮಾತ್ರ ಕೊಡಬೇಕೆ ಹೊರತಾಗಿ ಇಲ್ಲದಿದ್ದರೆ ಕೊಡುವುದಕ್ಕೆ ಆಗುವುದಿಲ್ಲ.

ನಾನು ಮಾನ್ಯ ಯಡಿಯೂರಪ್ಪನವರಿಗೆ ಈ ಮಾತನ್ನು ಏಕೆ ಹೇಳುತ್ತಾ ಇದ್ದೇನೆ ಅಂದರೆ, ಸಾಲ ಮನ್ನಾ ಮಾಡುವಾಗ 1989-90ನೇ ಸಾಲಿನ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಹೇಳಿದರೆ ನಾನು ಕೂಡ ನಿಮ್ಮ ಜೊತೆಯಲ್ಲಿ ಚಪ್ಪಾಳೆ ಹೊಡೆಯಬಹುದು. ಆದರೆ ಅದು ಸಾಧ್ಯವೆ ? ಹಾಗೆ 1989-90ರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಕೇಂದ್ರದಿಂದ ಮಾಡಿಸಿಕೊಂಡು ಬರುತ್ತೀರಾ? ನಮಗೆ ಇವೊತ್ತು ಬೇಕಾದಷ್ಟು ನಷ್ಟ ಪಡಬೇಕಾದ ಪರಿಸ್ಥಿತಿಯು ಇದ್ದಾಗ ಮತ್ತೆ ಪುನ: ಹೋಗಿ 1989-90ರ ಸಾಲವನ್ನು ಕೂಡ ಮನ್ನಾ ಮಾಡಿ ಎಂದು ಅವರಿಗೆ ಹೇಳಿದರೆ ಮತ್ತು ಅದೇ ಮಾತನ್ನು ನಾವು ರೈತರಿಗೆ ಹೇಳಿದರೆ ಅವರು ಸಂತೋಷ ಪಟ್ಟಾರು. ಆದರೆ ಮುಂದೆ ನಾವು ಹೇಳಿದ ಹಾಗೆ ಮಾಡದಿದ್ದರೆ ನಮ್ಮ ಬೆನ್ನು ಬೀಳುತ್ತಾರೆ. ಕೊಟ್ಟ ಸಾಲವನ್ನು ಮನ್ನಾ ಮಾಡದೆ ಮುಂದೆ ವಸೂಲಿಗೆ ನಮ್ಮ ಅಧಿಕಾರಿಗಳಿಗೆ ರೈತರ ಮನೆಬಾಗಿಲಿಗೆ ಹೋಗಿ ಕೇಳಿದಾಗ, ಜಪ್ತಿ ಮಾಡಿದಾಗ ಅದೇ ರೈತರು ಹಿಂದೆ ಏನು ಹೇಳಿದ್ದಿರಿ. ಮತ್ತು ಈಗ ಏನು ಮಾಡುತ್ತಿದ್ದೀರಿ ಎಂದು ಹೊಗಳುವ ಬದಲು ಶಪಿಸುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಜನರಿಗೆ ನಾವು ಕೊಡುವ ಯಾವುದೇ ಭರವಸೆಗಳನ್ನು ವಸ್ತುಶ: ಈಡೇರಿಸುವ ಕಾರ್ಯವನ್ನು ಮಾಡಬೇಕಾಗುತ್ತದೆ. ಕೊಟ್ಟ ಭರವಸೆಗಳನ್ನು ಸ್ವಲ್ಪವಾದರೂ ಅವರಿಗೆ ಮುಟ್ಟಿಸುವಂಥ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಜನರಿಗೆ ಅಂಗೈಯಲ್ಲಿ ಸ್ವರ್ಗವನ್ನು ತೋರಿಸುವಂಥ ಕೆಲಸವನ್ನು ಮತ್ತು ಈಡೇರಿಸಲಾರದಂಥ ಭರವಸೆಗಳನ್ನು ಕೊಡಬಾರದು ಎಂದು ಹೇಳುತ್ತಾ ಇದ್ದೇನೆ.

ಈ ವಿಚಾರದಲ್ಲಿ ಎರಡನೆ ರಾಜ್ಯಗಳವರು ಏನು ಮಾಡಿದ್ದಾರೆ ಎಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ನಾನು ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಓದಿ ಈ ಒಂದು ವಿಷಯವನ್ನು ಸದನಕ್ಕೆ ತಿಳಿಸುತ್ತಾ ಇಲ್ಲ. ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟು

ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಧ್ಯಪ್ರದೇಶ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳನ್ನು ಸಂಪರ್ಕಿಸಿ, ಈ ವಿಚಾರದ ಬಗ್ಗೆ ಆ ರಾಜ್ಯಗಳವರು ತೆಗೆದುಕೊಂಡ ಕ್ರಮ ಮತ್ತು ಯೋಜನೆಗಳನ್ನು ಅವರಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಫೋನ್ ಮೂಲಕ ಅವರು ಸಂಬಂಧ ಪಟ್ಟವರನ್ನು ಸಂಪರ್ಕಿಸಿ ಮಾಹಿತಿಗಳನ್ನು ಪಡೆದಿದ್ದಾರೆ ಅದನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ವಿಶೇಷತ: ಮಧ್ಯ ಪ್ರದೇಶ ಸರಕಾರದ ವಿಚಾರವನ್ನು ಇಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರ ಕಾರಣ, ಅಲ್ಲಿಯ ವಿಚಾರಗಳನ್ನೂ ಕೂಡ ನಾವು ಪಡೆದುಕೊಂಡಿದ್ದೇವೆ. ಆ ಪ್ರಕಾರ ತಮಿಳುನಾಡಿನಲ್ಲಿ ಅವರು ಇನ್ನೂ ಆ ಬಗ್ಗೆ ಯೋಚನೆ ಮಾಡಿಲ್ಲ. ಈ ಯೋಜನೆ ಆಗಬೇಕು. ಆದರೆ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಏಕೆಂದರೆ, ಒಮ್ಮೆಯೇ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ನಮ್ಮ ದೇಶ ಒಂದೇ ಆಡಳಿತ ಅನುಕೂಲತೆಗಾಗಿ ಬೇರೆ ಬೇರೆ ರಾಜ್ಯಗಳು ಆಗಿವೆ. ಆದರೆ ದೇಶ ಒಂದೇ, ನಾವೆಲ್ಲರೂ ಅಖಂಡ ಭಾರತದ ನಾಗರೀಕರು ಎಂಬುದನ್ನು ನಾವ್ಯರೂ ಮರೆಯಬಾರದು. ಅದಕ್ಕಾಗಿ ನಮ್ಮ ನೆರೆಯ ರಾಜ್ಯಗಳವರು ಈ ಬಗ್ಗೆ ಯಾವ ರೀತಿಯಿಂದ ವಿಚಾರ ಮಾಡುತ್ತಾರೆ ಎಂಬುದನ್ನು ನಾವು ಅವಶ್ಯಕವಾಗಿ ತಿಳಿದುಕೊಳ್ಳಬೇಕು ನಾವು ಅವರಿಂದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಂತೆ ಅವರುಗಳೂ ನಮ್ಮಿಂದ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಆ ಪ್ರಕಾರ ತಮಿಳು ನಾಡಿನಲ್ಲಿ ಇದುವರೆಗೂ ಈ ವಿಚಾರದ ಬಗ್ಗೆ ಯೋಜನೆ ಮಾಡಿಲ್ಲ. ಅಂತೆಯೇ ತಮಿಳುನಾಡಿನ ಮುಖ್ಯ ಮಂತ್ರಿಗಳು ಈ ವಿಚಾರವಾಗಿ ಏನು ಮಾಡಿದ್ದಾರೆ ಎನ್ನುವುದನ್ನು ಅಲ್ಲಿಯ ಮುಖ್ಯ ಕಾರ್ಯದರ್ಶಿಯವರು ಹೇಳಿದರು. ಕೇರಳ ರಾಜ್ಯದವರು ಈ ಯೋಜನೆ ನಮಗೆ ಮಾನ್ಯ ಇದ್ದ ಕೇಂದ್ರದ ಯೋಜನೆಯನ್ನು ನಾವು ಒಪ್ಪುತ್ತೇವೆ. ಆದರೆ ಇದಕ್ಕೆ ಬೇಕಾಗುವ 50 ಪರ್‌ಸೆಂಟ್‌ನಷ್ಟು ಹಣವನ್ನು ನೀವೇ ಕೂಡಿ ಎಂದು ಕೇಂದ್ರದವರಿಗೆ ಕೇಳಿಕೊಳ್ಳುವವರಿದ್ದಾರೆ. ಈ ಕುರಿತು ಅವರು ಕೇಂದ್ರಕ್ಕೆ ಪತ್ರ ಬರೆಯುತ್ತಾರೋ ಅಥವಾ ಬರೆಯುವ ಸ್ಟೇಜ್‌ನಲ್ಲಿ ಇದ್ದಾರೋ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮ ಮುಂದೆ ಇರುವ ಮಾಹಿತಿಗಳನ್ನು ನಾನು ತಮಗೆ ಹೇಳುತ್ತೇನೆ. ಏಕೆಂದರೆ, ನಮ್ಮ ಮುಖ್ಯ ಕಾರ್ಯದರ್ಶಿಯವರು ನನಗೆ ಬರೆದು ಕಳುಹಿಸಿದ್ದಾರೆ. ಅದನ್ನು ನಾನು ಓದಿ ಹೇಳುತ್ತೇನೆ. ಏಕೆಂದರೆ ಅದು ರಿಕಾರ್ಡ್‌ಗೂ ಆಗುತ್ತದೆ. Tamil Nadu Govt. has not taken any policy decision regarding the loan waiver information given by the Chief Secretary Kerala Govt. is of the view that full money should be reimbursed by Govt. of India for implementation of the scheme, whether the scheme requires any modification and if so what are the policy matters under consideration of the Govt. Secretary Co-operations Kerala.

ಆಂಧ್ರದ ಮುಖ್ಯಮಂತ್ರಿಗಳು ಕೂಡ ಇದು ನಮ್ಮ ಜವಾಬ್ದಾರಿ ಅಲ್ಲ. ನಾವು ಇದನ್ನು ಒಪ್ಪಿಕೊಳ್ಳುವುದಿಲ್ಲ. 50 ಪರ್‌ಸೆಂಟ್‌ನಷ್ಟು ಹಣವನ್ನು ಕೇಂದ್ರದವರು ಕೊಡಬೇಕೆಂದು

ಹೇಳಿದ್ದಾರೆ. ಹಾಗೆಯೇ ಮಹಾರಾಷ್ಟ್ರ ಮುಖ್ಯ ಮಂತ್ರಿಯವರು ಜೊತೆಯಲ್ಲಿ ಕೂಡ ನಾನು ಮಾತನಾಡಿದ್ದೇನೆ. ನಾವು ಮೂರು ಜನರೂ ಸೇರಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವುಗಳು ಏನು ವಿಚಾರ ಮಾಡಿದ್ದೇವೆ ಅಂದರೆ, ಉಳಿದ 50 ಪರ್‌ಸೆಂಟ್ ಕೇಂದ್ರದಿಂದ ಬರಬೇಕಾಗಿದೆ. ಹೊರತಾಗಿ ನಮ್ಮ ಹತ್ತಿರ ಆ ಒಂದು ಹಣವನ್ನು ಕೊಡುವ ಶಕ್ತಿ ಇಲ್ಲ ಎಂದು ಅಂದರೆ ಮಹಾರಾಷ್ಟ್ರದವರೂ ಕೂಡ ಆ 50 ಪರ್‌ಸೆಂಟ್ ಹಣವನ್ನು ನೀವೆ ಕಳುಹಿಸಿಕೊಡಿ, ನಿಮ್ಮ ಸ್ಕೀಮ್‌ನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಇನ್ನು ಗುಜರಾತ್ ಒಪ್ಪಿದೆ. ಮಧ್ಯಪ್ರದೇಶ ಸರಕಾರ ಈ ಸ್ಕೀಮ್ ಒಪ್ಪಿದೆ ಎಂದು ತಾವುಗಳು ಹೇಳಿದ್ದೀರಿ. ನನಗೆ ಅದರ ಬಗ್ಗೆ ವಿವರ ಗೊತ್ತಿಲ್ಲ. ನೀವು ಬಹುಶ: ಪತ್ರಿಕೆಯ ಮುಖಾಂತ ತಿಳಿದುಕೊಂಡು ಈ ಮಾತನ್ನು ಹೇಳಿರಬಹುದು ಎಂದು ಅಂದುಕೊಂಡಿದ್ದೇನೆ.

## 6. ಟೆಲಿಫೋನ್ ಕದ್ದಾಲಿಕೆ ಹಗರಣದ ಬಗ್ಗೆ ಮುಖ್ಯಮಂತ್ರಿಗಳಾದ, ಶ್ರೀವೀರೇಂದ್ರ ಪಾಟೀಲ್‌ರ ಸ್ಪಷ್ಟೀಕರಣ (26ನೇ ಜೂನ್ 1990)

**ಶ್ರೀ ರಾಮಕೃಷ್ಣ ಹೆಗಡೆ :**

ನಾನು ಹಾಗೆ ಹೇಳಲಿಲ್ಲ, ನಾನು ಎಂದೆಂದೂ ಆ ಫೈಲ್‌ನ್ನು ನೋಡಿಲ್ಲ, ಆ ಫೈಲು ನನ್ನ ಎದುರಿಗೆ ಬಂದಿಲ್ಲ. ನಾನು ಬೊಮ್ಮಾಯಿಯವರನ್ನು ಕೇಳಿದಾಗ, ಬೊಮ್ಮಾಯಿಯವರು ಹೇಳಿದರು. ನಾನು ಆ ಫೈಲನ್ನು ತರಿಸಿ ನೋಡಿದೆ. ಎಲ್ಲಾ ಪೇಜುಗಳಿಗೂ ನಂಬರ್ ಇದೆ. ಅದರಲ್ಲಿ ಒಂದು ಅಥವಾ ಎರಡೋ ಲೂಸ್ ಸೀಟ್ ಇತ್ತು, ಅದರಲ್ಲಿ ಲಿಸ್ಟ್ ಇದೆ ಎಂದು ಅವರು ಹೇಳಲಿಲ್ಲ. ಅದರಲ್ಲಿ ಹೆಸರನ್ನು ಆಡ್ ಮಾಡುವುದು ಮತ್ತು ಡಿಲೀಟ್ ಮಾಡುವುದು

" With the permission of the Chief Minister",

ಹಾಗೆ ಬರೆದ ಹಾಗೆ ನನಗೆ ನೆನಪಿದೆ ಎನ್ನುವುದನ್ನು ಅವರು ಹೇಳಿದರು. obviously those one or two pages were not originally the part of the file. ಇದನ್ನು ಬೊಮ್ಮಾಯಿಯವರು ಹೇಳಿದರು. ಅದನ್ನೇ ನಾನು ಪೇಪರಿಗೆ ಹೇಳಿದೆ. ಅಷ್ಟೇ, ಆದರೆ ಆ ಫೈಲನ್ನು ನಾನು ನನ್ನ ಜೀವಮಾನದಲ್ಲಿ ನೋಡಿಲ್ಲ.

**ಶ್ರೀ ವೀರೇಂದ್ರ ಪಾಟೀಲ್:**

ನಾನು ಶ್ರೀಮಾನ್ ಹೆಗಡೆಯವರು ಫೈಲನ್ನು ನೋಡಿದ್ದಾರೆಂದು ಹೇಳಲಿಲ್ಲ. ಫೈಲು ನೋಡಿದ್ದು ಶ್ರೀಮಾನ್ ಬೊಮ್ಮಾಯಿಯವರು. ಬೊಮ್ಮಾಯಿಯವರು, ಫೈಲು ನೋಡಿ ಶ್ರೀಮಾನ್ ಹೆಗಡೆಯವರಿಗೆ ಹೇಳಿದ್ದಾರೆ ಎಂದು ಹೆಗಡೆಯವರು ಪ್ರೆಸ್‌ಗೆ ಹೇಳುತ್ತಾರೆ. ಆದರೆ ಬೊಮ್ಮಾಯಿಯವರು ಹೇಳುವುದಿಲ್ಲ. ಆದರೆ ಬೊಮ್ಮಾಯಿಯವರು ನನಗೆ ಗೊತ್ತಿಲ್ಲ, ನನಗೆ ನೆನಪು ಇಲ್ಲವೆಂದು ಹೇಳಿಬಿಟ್ಟಿದ್ದಾರೆ. ಆದರೆ ಮುಖ್ಯಮಂತ್ರಿಯಾಗಿ ನಾನು ಹೇಳುವುದೇನೆಂದರೆ, ನಾನು ಬರವಣಿಗೆಯಲ್ಲಿ ತೆಗೆದುಕೊಂಡಿದ್ದೇನೆ ಲೂಸ್ ಸೀಟ್ ಎನ್ನುವುದು ನಿಮ್ಮ ಅರ್ಥದಲ್ಲಿ ಲೂಸ್ ಸೀಟ್ ಅಲ್ಲ. ನೀವು ಹೇಳಿದಂತೆ ಒಳಗೆ ಒಂದು ಸೀಟ್ ಇರಬಹುದು. ಅದಕ್ಕೆ ನಂಬರ್ ಇರಲಾರದಂತೆ ಇರಬಹುದು. ಅದರಲ್ಲಿ ಈ ಲಿಸ್ಟ ಎಂದರೆ ಹೆಸರು ಬರೆದಿರಬಹುದು; ಬರೆಯಲಾರದೆ ಹೋಗಿರಬಹುದು. ಪ್ರೋಸೀಜರ್ ಬರೆದಿರಬಹುದು, ಅವರು ಹೇಳುವುದೇನೆಂದರೆ, ಈ ಲಿಸ್ಟ್ ನಾನು ಮುಖ್ಯಮಂತ್ರಿಯಾಗಿ, ನನ್ನ ಪರ್ಮಿಷನ್ನಿನಿಂದ ಮಾಡಿದ್ದೇನೆ ಎನ್ನುವಂತೆ ಬರೆದಿದ್ದಾರೆ ಇದು after-thought. ಏನೋ ನನ್ನ ಮೇಲೆ ಜವಾಬ್ದಾರಿ ಹೊರುವುದಕ್ಕೆ ಮಾಡಿದ್ದಾರೆ. ಎನ್ನುವಂಥ ರೀತಿಯಲ್ಲಿ ತಾವು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ನಾನು ಅದರ ಸಲುವಾಗಿ ಇಂಟಲಿಜೆನ್ಸ್ ಅಫೀಸರಿಂದ ತರಿಸಿದೆ. ಅವರು ಹೇಳಿದರು. ಈ ತರಹದ್ದು ಯಾವುದೂ ಇಲ್ಲ, ಆ ಫೈಲ್‌ನಲ್ಲಿ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಏನಾದರೂ ಮಾಹಿತಿ ಬೇಕಾದರೆ ಕೇಳಿ, ನಾನು ತರಿಸಿಕೊಂಡು ಆದರೂ ಹೇಳುತ್ತೇನೆ. ಅಥವಾ ಶ್ರೀಮಾನ್ ಯಡಿಯೂರಪ್ಪನವರು ಹೇಳಿದ ಹಾಗೆ, ನಾನೇ ಖುದ್ದು ಫೈಲ್ ನೋಡಿಕೊಂಡು ಹೇಳುವುದಕ್ಕೆ ಹಿಂದೆ ಮುಂದೆ ನೋಡುವ ಹಾಗಿಲ್ಲ; ಏಕೆಂದರೆ, ಸತ್ಯಾಂಶ ಮುಚ್ಚುವಂತಹ ಉದ್ದೇಶ ನನಗೆ ಇಲ್ಲ. ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :-

ನಿಮ್ಮ ಉತ್ತರ ಕೇಳಿ ನಮಗೆ ತೃಪ್ತಿಯಾಗಿದೆ. ಎಲ್ಲಾ ಅರ್ಥ ಆಯಿತು ಸ್ಪಷ್ಟವಾಗಿ.

ಶ್ರೀ ವೀರೇಂದ್ರ ಪಾಟೀಲ್ :-

ಈಗ ನಮ್ಮ ಹತ್ತಿರ ವಿಚಾರ ಮಾಡುವಂಥ ಒಂದು ವಿಚಾರ ಇದೆ. ಇಷ್ಟೆಲ್ಲಾ ಚರ್ಚೆ ಆದ ಮೇಲೂ ಕೊನೆಗೂ ಬಂದು ನಿಲ್ಲುವುದು. ಆ ಅಫೀಸರಿಗೆ ಅಥಾರಿಟಿ ಯಾರು ಕೊಟ್ಟರು? ಇದೇ ಇವತ್ತು ನಮ್ಮ ಮುಂದೆ ಇರತಕ್ಕಂಥದ್ದು. ಒಂದು ಕಡೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು, ಇನ್ನೊಂದು ಕಡೆ ಐ.ಜಿ.ಪಿ. ಇಂಟಲಿಜೆನ್ಸ್ ಆಗಿ ಕೆಲಸ ಮಾಡಿದರು. ಮೂರನೆಯವರು, ಚೀಫ್ ಸೆಕ್ರೆಟ್ರಿ. ಈಗಾಗಲೇ ಚೀಫ್ ಸೆಕ್ರೆಟರಿಗೆ ಸಂಬಂಧ ಇಲ್ಲ ಎಂದು ನಾನು ಹೇಳಿದ್ದೇನೆ. ಅಂದಮೇಲೆ.

ಶ್ರೀ ಬಿ.ಎಚ್. ಬನ್ನಿಕೋಡ್ :-

ಹಾಗೆ ರೂಲ್ಸ್ ಇದೆಯೇ ? ಚೀಫ್ ಸೆಕ್ರೆಟರಿಗೆ ಸಂಬಂಧ ಇಲ್ಲ ಎಂದು ರೂಲ್ಸ್ ಅಥವಾ ಕಾನೂನು ಏನಾದರೂ ಇದೆಯೇ ? ಎನ್ನುವ ಪ್ರಶ್ನೆ ಕೇಳುತ್ತೇನೆ ?

ಶ್ರೀ ವೀರೇಂದ್ರ ಪಾಟೀಲ್ :-

ಈಗ ಪ್ರಶ್ನೆ ಇರುವುದು, who authorised the intelligence officer to intercept those telephones and whether he has done without any authority ? ಈ ಪ್ರಶ್ನೆಗೆ ಉತ್ತರ ನೀಡುವವರು ಕೇವಲ ಇಬ್ಬರು. ಏಕೆಂದರೆ ವಿರೋಧ ಪಕ್ಷದ ನಾಯಕರು ವೀರೇಂದ್ರ ಪಾಟೀಲರೇ ಇದಕ್ಕೆಲ್ಲಾ ಉತ್ತರ ನೀಡುತ್ತಾರೆ ಎಂದು ನಮ್ಮದೇನೂ ಇಲ್ಲ; ಇದಕ್ಕೆ ಉತ್ತರ ನೀಡಬೇಕಾದರೆ ಒಂದು ಕಡೆ ಶ್ರೀಮಾನ್ ಹೆಗಡೆಯವರು ಇದ್ದಾರೆ. ಇನ್ನೊಂದು ಕಡೆ ಆ ವೇಳೆಗೆ ಐ.ಜಿ.ಪಿ. ಇಂಟಲಿಜೆನ್ಸ್ ಆಗಿದ್ದ ರಘುರಾಮ ಇವತ್ತು ಅವರು one of the Directors. G.P. ಇದ್ದಾರೆ. ಇಲ್ಲಿ ಪ್ರಶ್ನೆ ಏನು ಬರುತ್ತದೆ. ಇವತ್ತು ಮುಖ್ಯ ಮಂತ್ರಿಯಾಗಿ ನಾನು ಹೆಗಡೆಯವರಿಗೆ ಕೇಳುವ ಅಧಿಕಾರ ಇಲ್ಲ. ಮತ್ತು ಈಗಾಗಲೇ ಅವರು ಹೇಳಿಬಿಟ್ಟಿದ್ದಾರೆ. ಹೇಳಬೇಕಾದ ಅವಕಾಶವೇ ಇಲ್ಲ. ಪಬ್ಲಿಕ್‌ನಲ್ಲಿ I have not authorised any body. ಎಂದು ಹೇಳಿದ್ದಾರೆ. ಇನ್ನೂ ಅವರಿಗೆ ಕೇಳುವುದೇನು? ಇನ್ನು ಏನಾದರೂ ಕೇಳಬೇಕಾಗಿದ್ದರೆ, ಒಬ್ಬನೇ ಆಫೀಸರ್, ಅವನಿಗೆ ಹೇಳಬೇಕು. ಬಹುಶಃ ಜ್ಯುಡಿಷಿಯಲ್ ಎನ್‌ಕ್ವಯರಿ ಆದರೂ ಇವರಿಬ್ಬರ ಮೇಲೇ ಹೋಗುತ್ತದೆ. ರಿಕಾರ್ಡ್ ಮತ್ತು ಇವರಿಬ್ಬರ ಎವಿಡಿಯನ್ಸ್ ಸಾಕು. ಈಗ ಪ್ರಶ್ನೆ ಏನಾಗಿದೆ ಎಂದರೆ, ಹೆಗಡೆಯವರು ಇಲ್ಲಿದ್ದಾರೆ, ಅದಕ್ಕಾಗಿ ಈ ಪ್ರಶ್ನೆ ಕೇಳುತ್ತಿದ್ದೇನೆ, ಯಾವ ಅಫೀಸರ್ ಟ್ಯಾಪ್ ಮಾಡಿದ್ದಾನೆ. ಇಂಟರ್‌ಸೆಪ್ಟ್ ಮಾಡಿದ್ದಾನೆ, ಒಂದು ವಿಚಾರ ಮಾಡೋಣ. He is not an oridinary officer. He is holding the highest office in the police department today as one of the directors general of police. ಮತ್ತು ಮುಖ್ಯಮಂತ್ರಿಯಾಗಿ ಅವನ ಕೆಲಸ ನೋಡಿದ್ದೇನೆ.; ಆರು ತಿಂಗಳಿಂದ ಏನೂ ಅವನನ್ನೂ ಭೇಟಿ ಆಗಿಲ್ಲ. ಏನಪ್ಪ ಚರ್ಚೆ ಮಾಡುವುದು ಮತ್ತೊಂದು

ನನಗೆ ಗೊತ್ತಿಲ್ಲ. ನಾನು ಸಹವಾಸಕ್ಕೆ ಹೋಗಿಲ್ಲ. But according to the information as I got he is one of our finest officers with an unblemished record for the last 30 years. ಪ್ರಶ್ನೆ ಏನು ಬರುತ್ತದೆ.? ನಾವು ವಿಚಾರ ಮಾಡೋಣ. ಎಲ್ಲರೂ ವಿಚಾರ ಮಾಡೋಣ. ಪ್ರಶ್ನೆ ಏನು ಬರುತ್ತದೆ ಎಂದರೆ ಇದರಲ್ಲಿ ಎರಡು ಸ್ಟ್ಯಾಂಡ್. ಒಂದು ಲೀಗಲ್ ಸ್ಟ್ಯಾಂಡ್, ಇನ್ನೊಂದು ಮಾಡಲ್ ಸ್ಟ್ಯಾಂಡ್, ಎಲ್ಲಿ ಲಾ ಮತ್ತೆ ಯಾವುದೂ ಇಲ್ಲ ಅಪ್ಲೈ ಮಾಡುವುದಕ್ಕೆ ಆಗುವುದಿಲ್ಲ, We have to apply our common sense. where you don`t have any direct evidence. you have to go by circumstantial evidence. There is no other possibility, there is no other way. ಇಲ್ಲಿ ಪ್ರಶ್ನೆ ಏನೆಂದರೆ. ಐವತ್ತೊಂದು ಜನ ರಾಜಕೀಯ ವ್ಯಕ್ತಿಗಳ ಟೆಲಿಫೋನನ್ನು ಟ್ಯಾಪ್ ಮಾಡಿದ್ದಾರೆ. ಇದರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿದ್ದಂಥ ಮಂತ್ರಿಗಳ ಟೆಲಿಫೋನ್‌ನ್ನು ಟ್ಯಾಪ್ ಮಾಡಿದ್ದಾರೆ. What interest that police officer had in intercepting the telephone of 51 politicians of whom some were the ministers in them their government ? ಇದರಲ್ಲಿ ಏನಾದರೂ ಉದ್ದೇಶ ಇರಲೇಬೇಕಲ್ಲ. ಪಾಲಿಟಿಸಿಯನ್ಸ್ ಟೆಲಿಫೋನ್ ಟ್ಯಾಪ್ ಮಾಡುವಂತ ಉದ್ದೇಶ ಏನು ಇದೆ ? ಆ ಉದ್ದೇಶ ಸಾಧನೆ ಮಾಡಿಕೊಳ್ಳಬೇಕಲ್ಲವೇ? ನಾನು ಅದನ್ನು ಬಿಚ್ಚಿ ಹೇಳುವಂತಿಲ್ಲ. If without his authority he has intercepted it, that fact has to come to the notice of the govt. then Mr. Hegade was there. In the normal course as an administrator if an officer does anything which is illegal, which is improper, and which amounts to an offence, what action either Mr. Hegade of Mr. Bommai look against that officer ? ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ? ಈ ಆಫೀಸರ್ ಟೆಲಿಫೋನನ್ನು ಮಾಡಿರತಕ್ಕಂಥದ್ದು 1988ಕ್ಕೆ ಗೊತ್ತಾಗಿತ್ತು ಎಂದು ತಿಳಿದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ: -

ಆ ವೇಳೆಗೆ ಅವರು ರಾಜೀನಾಮೆ ಕೊಟ್ಟಿದ್ದರು.

ಶ್ರೀ ವೀರೇಂದ್ರ ಪಾಟೀಲ್ :

ಅದಕ್ಕೂ ನಾನು ಬರುತ್ತೇನೆ. ಆ ಪ್ರಶ್ನೆಗೆ ನಾನು ಉತ್ತರಿಸುತ್ತೇನೆ. 1988ಕ್ಕೆ ಗೊತ್ತಾಗಿದ್ದು; ಗೊತ್ತಾದ ಮೇಲೆ ಪತ್ರಿಕೆಗಳಲ್ಲಿ ಬಂದ ಮೇಲೆ ಅಲ್ಲಿಂದ ಅದಕ್ಕೂ ಮೊದಲು ಏನು ಆಯಿತು? ಪೂರ್ತಿಯಾಗಿ ವರ್ ಬಾಟಮ್ ರಿಪೋರ್ಟ್ ಟ್ಯಾಪ್ ಆಗಿದ್ದು ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ ಬಂತು. ಆಗ ಶ್ರೀಮಾನ್ ಹೆಗಡೆಯವರಿಗೆ ಗೊತ್ತಾಗಲಿಲ್ಲವೇ ? ಈ ಇಂಟಲಿಜೆನ್ಸ್ ಆಫೀಸರ್ ಟೆಲಿಫೋನ್ ಅನ್ನು ಇಂಟರ್‌ಸಿಪ್ಟ್, ಮಾಡುವುದು ಗೊತ್ತಾಗಲಿಲ್ಲವೇ? ಆವಾಗ ಅವರಿಗೆ ಏನಾದರೂ ಹೇಳಿದ್ದೀರೇನು? ಅವರಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೀರೇನು?

ಅವರ ಮೇಲೆ ಏನಾದರೂ ಆ್ಯಕ್ಷನ್ ತೆಗೆದುಕೊಂಡಿದ್ದೀರೇನು? ನೀವು ಹೇಳಿದಿರಿ. ಟೈಮ್ ಇರಲಿಲ್ಲ ಕೊಡಲಿಲ್ಲ ಎಂದು ಹೇಳಿದರು. But even after Mr. Hegde resigned from the Chief Ministership, his own party mens continued as Chief Minister. Mr. Bommai, was your own party man. ನಾವು ಯಾರೂ ಬರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ:-

If I could remind you, in a statement in the press conference I said as soon as I come to know that the list of people whos telephones were intercepted include many politician, I issued a direction that hereafter untill I was not aware it must not be resorted to. you may find in the old filed. I have announced in the press.

ಶ್ರೀ ವೀರೇಂದ್ರ ಪಾಟೀಲ್ :-

ಮಾನ್ಯ ಅಧ್ಯಕ್ಷರೇ ಅವರ ಪ್ರಶ್ನೆ ಏನು ? ಇನ್ನು ಮುಂದೆ ಏನು ಮಾಡಬೇಡಿ ಎಂದು ಆರ್ಡರ್ ಮಾಡಿದೆ ಎಂದು, ಆ ಪ್ರಶ್ನೆ ಅಲ್ಲ. ಪ್ರಶ್ನೆ ಏನೆಂದರೆ ಯಾರೋ ಒಬ್ಬರು ಕಾನ್ಸ್‌ಟೇಬಲ್, ಹೆಟ್ ಕಾನ್ಸ್‌ಟೇಬಲ್, ಸಬ್ ಇನ್ಸ್‌ಪೆಕ್ಟರ್ ಟೆಲಿಫೋನ್ ಇಂಟರ್‌ಸೆಪ್ಟ್ ಮಾಡಿರತಕ್ಕ ಪ್ರಶ್ನೆ ಅಲ್ಲ. ಅವರೊಬ್ಬ ದೊಡ್ಡ ಅಫೀಸರ್ ಇದ್ದಾರೆ. Who is holding a very highrank, who was enjoying the confidence of the Chief Minister and he has tapped the telephone without the knowledge of the Chief Minister, do you think it is a small, offence that is committed if at all it is committed ?

ನೀವು ಬರೀ ಇದರ ಮುಂದೆ ಮಾಡಬೇಡಿ ಎಂದು ಆರ್ಡ್‌ರ್ ಮಾಡಿರುವುದರಿಂದ ಎಲ್ಲಾ ಪಾಪ ತೊಳೆದ ಹಾಗೆ ಆಗುತ್ತದೆ ಎಂದು ಏನಾದರೂ ತಿಳಿದುಕೊಂಡಿದ್ದೀರೇನು? what prevented the then government to immediately at least issue a show-case notice ? ಅವರಿಗೆ ಶೋಕಾಸ್ ನೋಟೀಸ್ ಏತಕ್ಕೆ ಕೊಡಲಿಲ್ಲ. ಅವರ ಮೇಲೆ ಆ್ಯಕ್ಷನ್ ಏತಕ್ಕೆ ತೆಗೆದುಕೊಳ್ಳಲಿಲ್ಲ. ಏನಪ್ಪಾ ಏನಾದರೂ ನೀನು ಮಾಡಿದ್ದೀಯಾ? ನಮ್ಮ ಮಂತ್ರಿಗಳ ಟೆಲಿಫೋನ್ ಕದ್ದು ಕೇಳಿದಿಯಾ, ಸರಿಯೇ ನೀನು ಇಂಟಲಿಜೆನ್ಸ್ ವ್ಯವಹಾರ ನೋಡಿ ಕೊಳ್ಳುವವರು ಈ ರೀತಿ ಮಾಡಬಹುದೇ ಎಂದು ಏನಾದರೂ ವಿಚಾರ ಮಾಡಿದ್ದೀರಾ? ಇವತ್ತು ಒಬ್ಬ ಅಫೀಸರ್ ಅಧಿಕಾರ ದುರುಪಯೋಗ ಮಾಡಿದ್ದಾನೆ. ಅಂದರೆ ಆ ಆಫೀಸರ್‌ನನ್ನು ಟಾಲರೇಟ್ ಮಾಡಬೇಕು. whether it is in the interest of public safety? ಒಂದು ವೇಳೆ ನೀವು ಹೇಳಿದ ಪ್ರಕಾರ. you have not authorised ನಾನು ಒಪ್ಪಿಕೊಳ್ಳುತ್ತೇನೆ. The he must have done it on his own. when he has

done it on his own, that the a heinous crime, ಈ ದೇಶದ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಹಾಕಿ ಇನ್ನು ಮುಂದೆ ಮಾಡಬೇಡಿ ಎಂದು ಹೇಳಿ ಸುಮ್ಮನೇ ಬಿಟ್ಟು ಬಿಡಬೇಕೇನು? ಇದನ್ನು ನಾನು ಕೇಳುತ್ತೇನೆ. ಮತ್ತೊಂದು ವಿಚಾರ ಅದನ್ನು ನಂತರ ವಿಚಾರ ಮಾಡೋಣ. ಏನು ಆ್ಯಕ್ಷನ ತೆಗೆದುಕೊಂಡಿದ್ದೀರಿ ಎಂದರೆ ಟೈಮ್ ಇರಲಿಲ್ಲ ಎಂದರು. Mr, Bommai was your own party man, your own nominee, you could have advised Mr. Bommai, " here is a fellow who has misused the authority of the government; take action against him; immediately suspend him". ನಾವು ಮಾಡುತ್ತಿಲ್ಲ, ಈಗ ನೋಡುತ್ತಿದ್ದೀರಿ. ಕಳೆದ ಐದಾರು ತಿಂಗಳುಗಳಲ್ಲಿ ಅನೇಕ ಐ.ಎ.ಎಸ್. ಆಫೀಸರುಗಳು, ಮತ್ತು ಐ.ಪಿ.ಎಸ್. ಅಫೀಸರುಗಳು ಸಸ್ಪೆಂಡ್ ಆದರು. ತಪ್ಪು ಮಾಡಿದವನು ಅನುಭವಿಸಬೇಕು. ನಾನು ಕೇಳುತ್ತೇನೆ, ಅವನ ಮೇಲೆ ಏಕೆ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ ? ಇಷ್ಟನ್ನು ಹೇಳಿದ ಮೇಲೆ ನಾನು ಇಷ್ಟಕ್ಕೆ ಬಿಡುವುದಿಲ್ಲ. ಅವನಿಗೆ ನಾನು ಬರೆದು ಕೇಳಿದ್ದೇನೆ. whether you have intercepted these telephones on your own or with the authority of the Chief Minister? ಎಂದು ನಾನು ಕೇಳಿದ್ದೇನೆ. ಆ ಲೆಟರನ್ನು ಓದುತ್ತೇನೆ. ಬಹುಶ: ಈಗ ಕೊನೆ ಅಧ್ಯಾಯಕ್ಕೆ ಬಂದುಬಿಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :-

ನಿನ್ನೆಯಿಂದ ಇದರ ಬಗ್ಗೆ ಚರ್ಚೆ ಆಗುತ್ತಿದ್ದಾಗ ಸುಮ್ಮನೆ ಕುಳಿತುಕೊಂಡು ಈಗ ಒಂದೊಂದೇ ಕಡತ ತೆಗೆಯುತ್ತಿದ್ದೀರಲ್ಲ.

ಶ್ರೀ ವೀರೇಂದ್ರ ಪಾಟೀಲ್ :

ಆ ಲೆಟರ್ ಇಲ್ಲೆ ಇದೆ. ಚೀಫ್ ಸೆಕ್ರೆಟರಿ ಬರೆದಿದ್ದಾರೆ.

" My dear Raghuraman,

I have been asked by the Chief Minister to as certain from you whether in your then capacity as special I.G.P. you had intercepted the telephone messages of the political leaders, you have done this with or without the approval of then Chief Minister. kindly reply to this immediately ".

ಅಲ್ಲಿಂದ ರಘುರಾಮನ್ ಕಳುಹಿಸಿದ್ದಾರೆ.

"please refer to your letter dated 25th June 1990, This is to state that for the past many years, commencing December 1962, the officers who were incharge of the intelligence, have been intercepting telephone messages in consultation and with the prior permission with the concerned Chief Ministers, during my ten-

ure as I.G.P. ( Intelligence). I have only continued this practice."

ಹೀಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. the I have continued this practice of preparing the list of telephones to be intercepted in consultation and with the prior approval of the Chief Minister.

ಇಷ್ಟು ಹೇಳಿದ ಮೇಲೆ ನಾನು ಹೇಳುವುದು ಏನೂ ಉಳಿದಿಲ್ಲವೆಂದು ನನಗನಿಸುತ್ತದೆ. ಫೈಲ್‌ನಲ್ಲಿ ಏನಿದೆ ಎಲ್ಲವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇವತ್ತು ಪ್ರಶ್ನೆ ಏನೆಂದರೆ ಬಹುಶ: ಒಂದು ಕಡೆ ಮಾಜಿ ಮುಖ್ಯ ಮಂತ್ರಿಗಳು ಇದ್ದಾರೆ; ಇನ್ನೊಂದು ಕಡೆ ಹೈಯರ್ ರ್‍ಯಾಂಕಿಂಗ್ ಆಫೀಸರ್ ಇದ್ದಾರೆ. ಇವರಿಬ್ಬರಲ್ಲಿ ಯಾರಾದರೊಬ್ಬರು ತಪ್ಪಿಸ್ಥರಾಗುತ್ತಾರೋ ಇಲ್ಲವೋ ? ಇದರಲ್ಲಿ ಮೂರನೆಯವರು ಯಾರೂ ಇಲ್ಲ. ಇವರು ಅಪ್ರೂವಲ್ ಕೊಡದೆ ಅವರು ಮಾಡಿರಲಾರರು. ಈ ಎಂಟೈರ್ ಡ್ರಾಮಾದಲ್ಲಿ ಇಬ್ಬರೇ ಇರುವುದು. ಒಂದು ಮಾಜಿ ಮುಖ್ಯ ಮಂತ್ರಿಗಳು ಇನ್ನೊಂದು ಕಡೆ ಐ.ಜಿ.ಪಿ. ಇವತ್ತು ಅವರು ಡಿ.ಜಿ.ಪಿ. ಆಗಿದ್ದಾರೆ. ತಮ್ಮ ಮುಂದೆ ಆ ಅಧಿಕಾರಿಯು ಪರಿಸ್ಥಿತಿಯನ್ನು ಹೇಳಿದ್ದೇನೆ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಹಿಂದಿನ ಪ್ರಾಕ್ಟೀಸ್‌ನ್ನು ಮುಂದುವರಿಸಿಕೊಂಡು ಬಂದಿದ್ದೇನೆಯೇ ಹೊರತಾಗಿ ನಾನಾಗಿ ಏನನ್ನು ಮಾಡಿಲ್ಲ. ಎಂಬುದನ್ನು ಆ ಅಧಿಕಾರಿ ಹೇಳಿದ್ದಾರೆ. ಇದೆಲ್ಲವನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ನೀವುಗಳು ಯಾರಾದರೂ ಹೆಗಡೆಯವರು ಹೀಗೆ ಇಂಟರ್‌ಸಿಪ್ಟ್ ಮಾಡಿ ಎಂದು ಬರೆದಿದ್ದಾರೆಯೇ? ಅದು ಎಲ್ಲಿದೆ ? ಅದನ್ನು ಪ್ರೋಡ್ಯೂಸ್ ಮಾಡಿ ಎಂದು ಕೇಳಿದರೆ ಅದು ಇಲ್ಲ. ಅದಕ್ಕಾಗಿ ನಾನು ಪ್ರಥಮದಲ್ಲೇ ಹೇಳಿದ್ದೆ. the Intelligence department works in a different way. ಅದಕ್ಕೆ ಪ್ರತಿಯೊಂದಕ್ಕೂ ನೀವು ರೆಕಾರ್ಡ್ ಕೊಡಿ. ಅಂದರೆ ರಿಕಾರ್ಟ್ ಕೊಡುವುದಕ್ಕೆ ಆಗುವುದಿಲ್ಲ ರಿಕಾರ್ಡ್ ಕೊಡುವ ಹಾಗೆ ಇಲ್ಲ. ರಿಕಾರ್ಡ್ ಮಾಡಿಲ್ಲ. ರಿಕಾರ್ಡು ಮಾಡುವ ಹಾಗಿಲ್ಲ. ಹಿಂದೆಯೂ ರಿಕಾರ್ಡ್ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ಇವೊತ್ತು ಮಾಡಿಲ್ಲ. ಮಾಡುವುದಿಲ್ಲ. circumstantial evidence only. ಇನ್ನು ಅನೇಕ ಜನ ದೊಡ್ಡ ದೊಡ್ಡವರು ಹೇಳುತ್ತಾರೆ ಬಹುಶ: ಅದು ಗಾದೆ ಮಾತು.

ಆಧಾರ- ವಿಧಾನ ಮಂಡಲದ ನಡುವಳಿಕೆಗಳು

# ಭಾ ಗ - 6

# ತಮ್ಮ ಕ್ಷೇತ್ರಕ್ಕಾಗಿ ಕೈಗೊಂಡ ಕೆಲವು ಮಹತ್ವದ ಅಭಿವೃದ್ಧಿ ಕಾರ್ಯಗಳು.

# ಭಾಗ - 6

## ಶ್ರೀ ವೀರೇಂದ್ರ ಪಾಟೀಲರು, ತಮ್ಮ ಕ್ಷೇತ್ರಕ್ಕಾಗಿ ಕೈಗೊಂಡ ಕೆಲವು ಮಹತ್ವದ ಅಭಿವೃದ್ಧಿ ಕಾರ್ಯಗಳು.

ಶ್ರೀ ವೀರೇಂದ್ರ ಪಾಟೀಲರು, ಸಂಸದೀಯ ಪಟುವಾಗಿ, ರಾಜ್ಯಕ್ಕಾಗಿ ಮತ್ತು ರಾಷ್ಟ್ರಕ್ಕಾಗಿ ನೀಡಿದ ಸೇವೆಯ, ಕೊಡುಗೆಗಳು ಅವಿಸ್ಮರಣೀಯ. ಅವರು, ಮುಂದಿನ ಪೀಳಿಗೆಯು, ಸ್ಮರಿಸುವಂತೆ, ತಮ್ಮ ಕಾರ್ಯ ನಿರ್ವಹಿಸಿದ್ದು ಭಾರತದ ಸಂಸದೀಯ ಇತಿಹಾಸದಲ್ಲಿ, ಸುವರ್ಣಾಕ್ಷರಗಳಲ್ಲಿ ಬರೆಯಲು, ಸಮಂಜಸವಾಗಿದೆ. ಅದೇ ಅವರ ಧೀಮಂತ ರಾಜಕೀಯ ಧುರೀಣತ್ವದ ಮತ್ತು ಮುತ್ಸದ್ದಿತನದ ವೈಶಿಷ್ಟ್ಯ.

ಕರ್ನಾಟಕ ರಾಜ್ಯ, ಮಂತ್ರಿಮಂಡಲದಲ್ಲಿ ವಿವಿಧ ಖಾತೆಗಳ ಸಚಿವರಾಗಿ, ಮತ್ತು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿ, ರಾಜ್ಯದ ಸರ್ವತೋಮುಖದ ಅಭಿವೃದ್ಧಿಗಾಗಿ, ಅದೆಷ್ಟೋ ಕಾರ್ಯಕ್ರಮಗಳನ್ನು, ಕೈಗೆತ್ತಿಕೊಂಡು, ಅನುಷ್ಠಾನಕ್ಕೆ ತಂದಿದ್ದುಂಟು. ಅಲ್ಲದೇ, ಕೇಂದ್ರ ಮಂತ್ರಿಮಂಡಲದಲ್ಲಿ, ಕೆಲವು ಖಾತೆಗಳ ಸಚಿವರಾಗಿ ರಾಷ್ಟ್ರ ಸೇವೆಯೂ ಮಾಡಿದ್ದು, ಯಾವ ಭಾರತೀಯನೂ ಮರೆಯುವಂತಿಲ್ಲ. ಅವರು, ಕೇವಲ ತಮ್ಮ ಕ್ಷೇತ್ರವನ್ನಷ್ಟೇ ಅಭಿವೃದ್ಧಿ ಮಾಡಲು, ಧ್ಯೇಯ ಹೊಂದಿದವರಲ್ಲ. ರಾಷ್ಟ್ರದ ಅಭಿವೃದ್ಧಿಯೇ ರಾಜ್ಯದ ಮತ್ತು ರಾಜ್ಯದ ಅಭಿವೃದ್ಧಿಯೇ ಕ್ಷೇತ್ರದ ಅಭಿವೃದ್ಧಿಯೆಂಬುವ ಸತ್ಯಾಂಶದಲ್ಲಿ ನಂಬಿಕೆಯುಳ್ಳವರಾಗಿದ್ದರು. ರಾಷ್ಟ್ರದ ನಾಯಕರ ಪಂಕ್ತಿಗೆ ಸೇರಿದ ವೀರೇಂದ್ರ ಪಾಟೀಲರನ್ನು, ಕೇವಲ ಕ್ಷೇತ್ರ ನಾಯಕರ ಪಂಕ್ತಿಗೆ ಸೇರಿಸುವುದು ಸಮಂಜಸವಲ್ಲ. ಆದರೂ, ಅವರು ರಾಷ್ಟ್ರದ ಮತ್ತು ರಾಜ್ಯದ ಅಭಿವೃದ್ಧಿಯನ್ನು ಸಾಧಿಸುವಲ್ಲಿ, ಕ್ಷೇತ್ರದ ಅಭಿವೃದ್ಧಿ, ತಾನಾಗೀಯೇ ಆಗುತ್ತದೆಯೆಂಬುದರಲ್ಲಿ ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿದ್ದರು.

ಶ್ರೀ ವೀರೇಂದ್ರ ಪಾಟೀಲರು, ಸಮಸ್ತ ಗುಲಬರ್ಗಾ ವಿಭಾಗದ ಅಭಿವೃದ್ಧಿಗಾಗಿ, ಆರ್ಥಿಕ ಮತ್ತು ಇನ್ನಿತರ ಕಾರ್ಯಕ್ರಮಗಳನ್ನು ಕೈಗೊಂಡರು, ಅವುಗಳನ್ನು ಅನುಷ್ಠಾನಕ್ಕೆ ತರಲು, ತಮ್ಮ ಸರ್ವ ಪ್ರಯತ್ನ ಮಾಡಿದರು. ಅವರು ಒಬ್ಬ ಧೀಮಂತ ಧುರೀಣರಾಗಿ ಮತ್ತು ಮುತ್ಸದ್ದಿಯಾಗಿ, ತಮ್ಮ ಮತ್ತು ಗುಲಬರ್ಗಾ ವಿಭಾಗದ ಅಭಿವೃದ್ಧಿಗಾಗಿ, ಕೈಗೊಂಡ ಕಾರ್ಯಕ್ರಮಗಳಲ್ಲಿ, ಕೆಳಗಿನವುಗಳು ಪ್ರಾಮುಖ್ಯವಾಗಿವೆ.

1. ಪ್ರಪ್ರಥಮವಾಗಿ, 1947ರಲ್ಲಿ, ಶ್ರೀ ವೀರೇಂದ್ರ ಪಾಟೀಲರು, ತಮ್ಮ ವಕೀಲ ವೃತ್ತಿ ಪ್ರಾರಂಭಿಸಿ, ಅಲ್ಪ ಕಾಲದಲ್ಲಿಯೇ ಅದನ್ನು ತ್ಯಜಿಸಿ, ಸಮಯದ ಕರೆಗೆ ಓಗೊಟ್ಟು ರಜಾಕರ ಹಾವಳಿಯನ್ನು ಹತ್ತಿಕ್ಕಲು, ತಮ್ಮ ಮಹತ್ವದ ಪಾತ್ರ ವಹಿಸಿ, ' ರಾಜಕೀಯದಲ್ಲಿ ' ಸಕ್ರೀಯ:ವಾಗಿ ಭಾಗವಹಿಸಿದರು. ಮುಂದೆ, " ಚಲೇ ಜಾವ್ ಚಳವಳಿ " ಯಲ್ಲಿ ಭಾಗವಹಿಸಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಭಾರತದ ಸ್ವಾತಂತ್ರ್ಯಕ್ಕಾಗಿ, ತಮ್ಮ ಕೊಡುಗೆಯನ್ನು ನೀಡಿ, ರಾಷ್ಟ್ರನಾಯಕರ ಪಂಕ್ತಿಗೆ ಸೇರಿದರು.

2. 1948ರಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಕಾಂಗ್ರೆಸ್ ಪ್ರವೇಶಿಸಿದ ಶ್ರೀ ವೀರೇಂದ್ರ ಪಾಟೀಲರು, 1952ರ ಚುನಾವಣೆಯಲ್ಲಿ, ಹಿಂದೆ ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ್ದ ಆಳಂದ

ಕ್ಷೇತ್ರದಿಂದ ಸ್ಪರ್ಧಿಸಿ, ಜಯಗಳಿಸಿ, ಹೈದರಾಬಾದ್ ವಿಧಾನ ಸಭೆಯ ಸದಸ್ಯರಾದರು. ಹಾಗೆಯೇ, ಮುಂದುವರೆದು, ಹೈದರಾಬಾದಿನ " ಹಿಡುವಳಿ ವ್ಯವಸಾಯ ಕಾಯ್ದೆ " ಸಮಿತಿಯ ಸದಸ್ಯರಾಗಿ, ವ್ಯವಸಾಯದ ಅಭಿವೃದ್ಧಿಯ ಕಾರ್ಯವನ್ನು ಚುರುಕು ಗೊಳಿಸಲು, ತಮ್ಮ ಮಹತ್ವದ ಪಾತ್ರ ವಹಿಸಿದರು.

3. ಕಾಂಗ್ರೆಸ್ ಕಾರ್ಯಕರ್ತನಾಗಿ, ಭಾಷಾವಾರು ಆಧಾರದ ಮೇಲೆ, ಪ್ರಾಂತ್ಯಗಳ ಪುನರ್‌ರಚನೆಯ ಪ್ರಕ್ರಿಯೆಗೆ, ತಮ್ಮ ಕೊಡುಗೆ ನೀಡಿ, ಪ್ರಸಿದ್ಧಿ ಪಡೆದರು.

4. 1960-61ರ ಅವಧಿಯಲ್ಲಿ ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಮತ್ತು ಕಲ್ಬುರ್ಗಿ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, ಕ್ಷೇತ್ರ ಅಭಿವೃದ್ಧಿ ಸಾಧಿಸುವುದನ್ನು ಗಮನದಲ್ಲಿಟ್ಟುಕೊಂಡು, ಪಕ್ಷದ ಸಂಘಟನೆ ಮಾಡಿದರು. 1968-69ರಲ್ಲಿ, ಕಾಂಗ್ರೆಸ್ಸಿನಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳ ಮೂಲಕ ಬಿಕ್ಕಟ್ಟು ತಲೆದೋರಿದಾಗ, ಅದನ್ನು ಕೊನೆಗಾಣಿಸಲು ಮತ್ತು ಕಾಂಗ್ರೆಸ್ ಹೋಳಾಗದಂತೆ ಪ್ರಯತ್ನ ಮಾಡಿದವರಲ್ಲಿ, ವೀರೇಂದ್ರರೂ ಒಬ್ಬರಾಗಿದ್ದರು.

5. 1957 ರಿಂದ 1971ರ ವರೆಗೆ, " ಆಡು ಮುಟ್ಟದ ಸೊಪ್ಪಿಲ್ಲ " ಎಂಬುವಂತೆ, ಸತತವಾಗಿ, ಗುಲಬರ್ಗಾ ಜಿಲ್ಲೆಯ ಚಿಂಚೋಳಿ ಕ್ಷೇತ್ರದಿಂದ (ಸ್ವಕ್ಷೇತ್ರ) ಮೈಸೂರು ರಾಜ್ಯದ ವಿಧಾನ ಸಭೆಗೆ ಆಯ್ಕೆಯಾಗಿ, ಮಂತ್ರಿಮಂಡಲದಲ್ಲಿ, ವಿವಿಧ ಖಾತೆಗಳ ಸಚಿವರಾಗಿ, (ಲೋಕೋಪಯೋಗಿ, ನೀರಾವರಿ, ಸಾರಿಗೆ ಹಾಗೂ ವಿದ್ಯುಚ್ಛಕ್ತಿ ಖಾತೆಗಳು), ಅದಷ್ಟೋ ಅಭಿವೃದ್ಧಿಯ ಕಾರ್ಯಗಳನ್ನು ಕೈಗೆತ್ತಿಕೊಂಡರು.

1957 ರಲ್ಲಿ ಮೊದಲಬಾರಿ, ರಾಜ್ಯ ಸಚಿವ ಸಂಪುಟ ಸೇರಿ, ಲೋಕೋಪಯೋಗಿ ಮಂತ್ರಿಯಾಗಿ, ಕಲಬುರ್ಗಿ ಇಂದ ಬೆಂಗಳೂರು ರಾಜಧಾನಿಗೆ ಸಂಪರ್ಕ ಕಲ್ಪಿಸಲು, ನೇರ ರಸ್ತೆಯನ್ನು ನಿರ್ಮಿಸಿದರು. ಕಲಬುರ್ಗಿ ಪ್ರದೇಶದಲ್ಲಿ ಹರಿಯುವ ನೀರನ್ನು ಕೃಷಿಗೆ ಬಳಕೆಯಾಗುವ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿದರು.

ಪಾಟೀಲರು ಆದೇಶ ನೀಡಿದಂತೆ, ಕಲ್ಬುರ್ಗಿ ಜಿಲ್ಲೆಯ ಅಮರ್ಜಾ ನೀರಾವರಿ ಯೋಜನೆ, ಬೆಣ್ಣೆತೊರೆ, ಗಂಡೋರಿ ನಾಲಾ, ಭೀಮಾ ಏತ ನೀರಾವರಿ, ಭೀಮಾ ಹರಿನೀರಾವರಿ, ಮುಲ್ಲಾ ಮಾರಿ ಕೆಳದಂಡೆ ಯೋಜನೆ, ಬೀದರ ಜಿಲ್ಲೆಯ, ಕಾರಂಜಾ, ಚುಳಕಿ ನಾಲಾ, ರಾಯಚೂರು ಜಿಲ್ಲೆಯ ಮಸ್ಕಿನಾಲಾ ಮತ್ತು ಹಿರೇಹಳ್ಳ ಯೋಜನೆ, ಹೀಗೆ ಒಟ್ಟು 12 ನೀರಾವರಿ ಯೋಜನೆಗಳನ್ನು ಪ್ರಾರಂಭಿಸಲಾಯಿತು ಮತ್ತು ಅವುಗಳ ಸಮೀಕ್ಷಾ ವರದಿಯನ್ನು ಸಲ್ಲಿಸಲಾಯಿತು. ತಮ್ಮ ಕ್ಷೇತ್ರದ (ಚಿಂಚೋಳಿ), ಚಂದ್ರಂಪಳ್ಳಿ ನೀರಾವರಿ ಯೋಜನೆಯನ್ನು ಪ್ರಾರಂಭಿಸಿ, ಅದನ್ನು ಪೂರ್ಣಗೊಳಿಸಿದರು. ಆ ಎಲ್ಲ ನೀರಾವರಿಯ ಯೋಜನೆಗಳು, ಒಕ್ಕಲುತನದ ಹುಟ್ಟುವಳಿಯನ್ನು ಹೆಚ್ಚಿಸಲು, ಪೂರಕವಾದುವು. ಅಲ್ಲದೇ ಆ ಯೋಜನೆಗಳಿಂದ ಅದೆಷ್ಟೋ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶಗಳು ಲಭಿಸಿದವು. ಆ ಎಲ್ಲ ಯೋಜನೆಗಳು, ಪೂರ್ಣಗೊಳ್ಳಲು, ಶ್ರೀ ವೀರೇಂದ್ರರ ಕೊಡುಗೆಯೇ ಕಾರಣವಾಯಿತು.

ಅಲ್ಲದೇ ಕಲಬುರ್ಗಿ ಸಮಸ್ತ ವಿಭಾಗದ ತಾಲೂಕುಗಳಲ್ಲಿ ಮತ್ತು ಹಳ್ಳಿಗಳಲ್ಲಿ, ಹೊಸ ರಸ್ತೆಗಳ ನಿರ್ಮಾಣ ಮತ್ತು ವಿದ್ಯುಚ್ಛಕ್ತಿಯ ಪೂರೈಕೆಯನ್ನು ಕಲ್ಪಿಸಲು, ಶ್ರೀ ವೀರೇಂದ್ರ ಪಾಟೀಲರು ತಮ್ಮ ಮಹತ್ವದ ಪಾತ್ರ ವಹಿಸಿದರು.

1968ರಲ್ಲಿ ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ, ಚಿಂಚೋಳಿ ತಾಲೂಕಿನ ಹೂಡದಳ್ಳಿ ಮತ್ತು ಮತ್ತಿತರ ಹಳ್ಳಿಗಳಿಗೆ ಮುಲ್ಲಾಮಾರಿ ಯೋಜನೆಯಿಂದ ನೀರಾವರಿ ಯೋಜನೆಗೆ ಆಡಳಿತದ ಮಂಜೂರಾತಿಯನ್ನು ನೀಡಿದರು.

1969ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ 'ನೀರಾವರಿ ಯೋಜನೆಯ ಅವಶ್ಯಕತೆಯ ಬಗ್ಗೆ ಸಮೀಕ್ಷೆ ನಡೆಸಲು, ಆದೇಶ ನೀಡಿ, ಸಮೀಕ್ಷೆಗಾಗಿ, ಮುಂಗಡ ಪತ್ರದಲ್ಲಿ 12 ಲಕ್ಷ ರೂಪಾಯಿಯನ್ನು ಒದಗಿಸಿದರು. ಪ್ರತಿ ಸಮಸ್ಯೆಯ ಪರಿಹಾರಕ್ಕೆ ತಾವೇ ಧುರೀಣತ್ವ ವಹಿಸಿ ಅಗತ್ಯ ಮತ್ತು ಅವಶ್ಯಕತೆಯನುಸಾರ, ಹಣ ಬಿಡುಗಡೆ ಮಾಡುವ ಹೊಣೆಯನ್ನು ತಾವೇ ಸ್ವತ: ಹೊರುತ್ತಿದ್ದರು.

ರಾಜ್ಯದ ಮುಖ್ಯ ಮಂತ್ರಿಯಾಗಿ, ರಾಜ್ಯದ ಸಮಸ್ತ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರಿಗಳ ದಕ್ಷತೆಯನ್ನು ಹೆಚ್ಚಿಸಲು, ಅಧಿಕಾರಿಗಳ ಮೇಲೆ ದಾಳಿ ಮಾಡಿ, ಭ್ರಷ್ಟಾಚಾರದ ನಿರ್ಮೂಲನೆಗಾಗಿ, ಅದೆಷ್ಟೋ ಕ್ರಮಗಳನ್ನು ಕೈಗೊಂಡು, ತಮ್ಮ ಆಡಳಿತ ಧುರೀಣತ್ವದ ದಕ್ಷತೆಯನ್ನು ಪ್ರತಿಬಿಂಬಿಸಿದರು. ಇದೇ ಅವಧಿಯಲ್ಲಿಯೇ ಗುಲಬರ್ಗಾ ವಿಭಾಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಲು ಶ್ರೀ ವೀರೇಂದ್ರ ಪಾಟೀಲರೇ ಸರಕಾರದ ಮಂಜೂರಾತಿ ನೀಡಿದರು. ಅವರ ಪ್ರಯತ್ನದ ಫಲವಾಗಿಯೇ 1980ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಬಂದಿತು.

ಶ್ರೀ ವೀರೇಂದ್ರರು ಕೇವಲ ಅಧಿಕಾರಕ್ಕಾಗಿ ಹೋರಾಡಿದ ವ್ಯಕ್ತಿಗಳಲ್ಲ. ಅಧಿಕಾರದಲ್ಲಿದ್ದರೇನು, ಅಥವಾ ಇರದಿದ್ದರೇನು, ಅವರು ಯಾವಾಗಲೂ ರಾಜ್ಯದ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿಯೇ ಹಗಲಿರುಳು, ಚಿಂತನೆ ಮಾಡುವ ಧೀಮಂತ ಮುತ್ಸದ್ಧಿಯಾಗಿದ್ದರು. ಅದಕ್ಕಾಗಿಯೇ, 1971-72ರಲ್ಲಿ ಗುಲಬರ್ಗಾ ವಿಭಾಗವು ಭೀಕರ ಬರಗಾಲಕ್ಕೆ ಗುರಿಯಾದಾಗ, ಅದಕ್ಕೆ ಶಾಶ್ವತ ಪರಿಹಾರ ಸಿಗುವಂತೆ ಸರಕಾರವು ಎಲ್ಲ ನೀರಾವರಿಯ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು, ಅಗ್ರಹಿಸಿ ಜಿಲ್ಲಾಧಿಕಾರಿಯವರ ಕಛೇರಿಯ ಮುಂದೆ ಇಡೀ ದಿನ ಧರಣಿ ನಡೆಸಿದ್ದನ್ನು ಯಾರೂ ಮರೆಯುವಂತಿಲ್ಲ.

1972 ರಿಂದ 1978ರ ವರೆಗೆ ಸಂಸತ್ತಿನ, ರಾಜ್ಯ ಸಭೆಯ ಸದಸ್ಯರಾಗಿ, ಮತ್ತು 1980ರಲ್ಲಿ 8ನೇ ಲೋಕಸಭೆಗೆ ಬಾಗಲ ಕೋಟೆ ಕ್ಷೇತ್ರದಿಂದ ಶ್ರೀ ವೀರೇಂದ್ರರು ಆಯ್ಕೆಯಾದರು. ಬಾಗಲಕೋಟೆ ಕ್ಷೇತ್ರದ ಅಭಿವೃದ್ಧಿಗಾಗಿಯೂ ಅವರು ತಮ್ಮ ಕೊಡುಗೆ ನೀಡಿದ್ದುಂಟು.

1989ರಲ್ಲಿ ಮತ್ತೆ ರಾಜ್ಯದ ಮುಖ್ಯ ಮಂತ್ರಿಯಾಗಿ, ಅವರು ಕೈಗೆತ್ತಿಕೊಂಡ ಅಭಿವೃದ್ಧಿಯ ಕಾರ್ಯಗಳು ಗಮನಾರ್ಹ. ಅವುಗಳಲ್ಲಿ ಕೆಳಕಂಡ ಕಾರ್ಯಗಳು ಅತೀ ಮುಖ್ಯವಾದವುಗಳಾಗಿವೆ.

1. 1989ರಲ್ಲಿ, ಹಿಂದಿನ ಜನತಾ ಸರಕಾರವು ಖಜಾನೆಯನ್ನು ಖಾಲಿ ಮಾಡಿದ್ದನ್ನು ಕೇವಲ ಆರು ತಿಂಗಳಲ್ಲೇ ಖಜಾನೆಯು 720 ಕೋಟಿ ರೂ. ಹೊಂದುವಂತೆ ಶ್ರೀ ವೀರೇಂದ್ರರು ತಮ್ಮ ಮುತ್ಸದ್ದಿತನದ ಪ್ರಾಮುಖ್ಯತೆಯನ್ನು ಪ್ರದರ್ಶಿಸಿ, ರಾಜ್ಯದ ಮತ್ತು ಕ್ಷೇತ್ರದ ಆರ್ಥಿಕ ಅಭಿವೃದ್ಧಿಯ ಕಾರ್ಯಗಳನ್ನು ಚುರುಕುಗೊಳಿಸಿದರು.

2. ತಾವು ಸಮೀಕ್ಷೆ ನಡೆಸಿದ ನೀರಾವರಿ ಯೋಜನೆಗಳ ಸಮೀಕ್ಷಾ ವರದಿಯನ್ನು ಪರಿಶೀಲಿಸಿ, ಆ ಎಲ್ಲ ಯೋಜನೆಗಳು ಪೂರ್ಣಗೊಳ್ಳಲು, ಸರಕಾರದಿಂದ ಹಣ ಬಿಡುಗಡೆ ಮಾಡುವಂತೆ ಆದೇಶ ನೀಡಿದರು. ಬಾಗಲಕೋಟೆ ಮುಳುಗಡೆ ಹಾಗೂ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಬಗ್ಗೆಯೂ ಗಂಭೀರವಾದ ಸಭೆಯನ್ನು ಯೋಜನಾ ಸ್ಥಳದಲ್ಲೇ ಶ್ರೀ ವೀರೇಂದ್ರರು ನಡೆಸಿದರು.

ಕಳೆದ ಮೂರು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಅಣೆಕಟ್ಟಿಗೆ ಶ್ರೀ ವೀರೇದ್ರರೇ ಚಾಲನೆ ಸಿಗುವಂತೆ ಮಾಡಿದ್ದುಂಟು.

ಚಿಂಚೋಳಿ ತಾಲೂಕಿನ ಮುಲ್ಲಾಮಾರಿ ನೀರಾವರಿ ಯೋಜನೆಗೆ ಕಾಯಕಲ್ಪ ಕೊಡುವ ನಿರ್ಧಾರ ತೆಗೆದುಕೊಂಡವರೇ ಶ್ರೀ ವೀರೇಂದ್ರರು.

3. ಚಿಂಚೋಳಿಯಲ್ಲಿ ಮತ್ತು ತುಮಕೂರಿನ ಪಾವಗಡದಲ್ಲಿ ನಕ್ಸಲಿಯರ ಹಿಂಸಾತ್ಮಕ ಚಟುವಟಿಕೆಗಳು ಉಗ್ರ ಸ್ವರೂಪ ತಾಳಿದಾಗ, ಶ್ರೀ ವೀರೇಂದ್ರರು, ಆ ಪ್ರದೇಶಗಳನ್ನು ಆ ಚಟುವಟಿಕೆಗಳಿಂದ ಮುಕ್ತಗೊಳಿಸಲು ಎರಡು ವರ್ಷ ಕಾಲಾವಧಿಯ ಯೋಜನೆಯನ್ನು ಹಾಕಿಕೊಂಡರು. ಮೊದಲ ವರ್ಷ, ಅಗತ್ಯವಿರುವ ಹಣವನ್ನು ಸರಕಾರದಿಂದ ಬಿಡುಗಡೆ ಮಾಡಿಸಿ, ಆ ಪ್ರದೇಶಗಳ ಅಭಿವೃದ್ಧಿಗಾಗಿ ಪ್ರಯತ್ನ ಮಾಡಿದರು. ಶ್ರೀ ವೀರೇಂದ್ರರು "ಗಡಿ ಪ್ರದೇಶ ಅಭಿವೃದ್ಧಿ ಯೋಜನೆ" ಯ ರೂವಾರಿಯೂ ಆಗಿದ್ದರು. ಇಂದಿಗೂ, ಯೋಜನೆಯು ಮುಂದುವರಿಯುತ್ತಿದೆ.

4. ಲಿಕ್ಕರ್ ಲಾಬಿಯನ್ನು ಹತ್ತಿಕ್ಕಿಸಿ ಮತ್ತು ತೆರಿಗೆ ಸೋರಿಕೆಯನ್ನು ನಿಯಂತ್ರಿಸಿ, ರಾಜ್ಯದ ಬೊಕ್ಕಸದ ಆದಾಯ ಹೆಚ್ಚಿಸಿದ ಶ್ರೇಯಸ್ಸು ಶ್ರೀ ವೀರೇಂದ್ರ ಪಾಟೀಲರಿಗೆ ಸಲ್ಲುತ್ತದೆ. ಅಲ್ಲದೆ, ಎಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಕ್ಷೇತ್ರಕ್ಕಾಗಿ ಮತ್ತು ರಾಜ್ಯಕ್ಕಾಗಿ ಅದೆಷ್ಟೋ ಕಾರ್ಯಕ್ರಮಗಳನ್ನು, ಕೈಗೆತ್ತಿಕೊಂಡರು. ಅವರ ಹನ್ನೊಂದು (11) ತಿಂಗಳ ಅಧಿಕಾರದ ಅವಧಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರು.

5. ಗುಲಬರ್ಗಾ ಕ್ಷೇತ್ರದ ಸರ್ವತೋಮುಖದ ಅಭಿವೃದ್ಧಿಯಾಗಲು ಅವರ ಅಳಿಯ ಡಾ:: ಬಿ.ಜಿ ಜವಳಿಯವರಿಗೆ ಅಶೀರ್ವದಿಸಿ, ಲೋಕಸಭೆಗೆ, ಅವರನ್ನು ಆಯ್ಕೆಮಾಡಿ, ರಾಜಕೀಯದಲ್ಲಿ ಸಕ್ರೀಯವಾಗಿ ಪ್ರವೇಶ ಮಾಡಲು ಯಶಸ್ವಿಯಾದರು, ಹಾಗೆಯೇ, ತಮ್ಮ ಉತ್ತರಾಧಿಕಾರಿಯಾಗಿ, ಚಿಂಚೋಳಿ ಕ್ಷೇತ್ರದ ಅಭಿವೃದ್ಧಿಗಾಗಿ, ತಮ್ಮ ಪುತ್ರ ಶ್ರೀ ಕೈಲಾಸನಾಥ

ಪಾಟೀಲರನ್ನು ಆಶೀರ್ವದಿಸಿದರು. ಮೊದಲ ಬಾರಿ, ಶ್ರೀ ಕೈಲಾಸನಾಥ ಪಾಟೀಲರು, ರಾಜ್ಯದ ವಿಧಾನ ಸಭೆಗೆ ಆಯ್ಕೆಯಾಗದಿದ್ದರೂ, ಈಗ ಅಂದರೆ, 1999ರಲ್ಲಿ ನಡೆದ ಚುನಾವಣೆಯಲ್ಲಿ ವಿಧಾನ ಸಭೆಗೆ ಅವರು ಚಿಂಚೋಳಿಯಿಂದ ಆಯ್ಕೆಯಾದದ್ದು ಮತ್ತು ರಾಜಕೀಯ ಪ್ರವೇಶ ಮಾಡಿದ್ದು, ಶ್ರೀ ವೀರೇಂದ್ರರ ಅನುಗ್ರಹದಿಂದಲೇ ಎಂದು ಹೇಳಬಹುದು.

6. "ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಲಿ (ಹೆಚ್.ಕೆ.ಡಿ.ಬಿ), ಎಂದರೆ, ಶ್ರೀ ವೀರೇಂದ್ರ ಪಾಟೀಲರು ಮತ್ತು ಶ್ರೀ ವೀರೇಂದ್ರ ಪಾಟೀಲರು, ಅಂದರೆ ಹೆಚ್.ಕೆ.ಡಿ.ಬಿ." ಎಂಬುದು ಅತಿಶೋಯೋಕ್ತಿಯೇನಲ್ಲ, 'ಹೆಚ್. ಕೆ.ಡಿ.ಬಿ.' ಯು, ಸಮಸ್ತ ಹೈದರಾಬಾದ್ - ಕರ್ನಾಟಕ ಅಭಿವೃದ್ಧಿಗಾಗಿ, 'ಕಾಮಧೇನು' ಎಂಬಂತೆ, ಅಸ್ತಿತ್ವದಲ್ಲಿ ಬರಲು, ಶ್ರೀ ವೀರೇಂದ್ರರೇ ತಮ್ಮ ಮುತ್ಸದ್ಧಿತನದ ಪಾತ್ರ ವಹಿಸಿದ್ದುಂಟು. ಶ್ರೀ ವೀರೇಂದ್ರರು, ಹೈದರಾಬಾದ ಕರ್ನಾಟಕ ಪ್ರದೇಶಕ್ಕೆ, ನೀಡಿದ ಕೊಡುಗೆಗಳಲ್ಲಿ, "ಹೆಚ್.ಕೆ.ಡಿ.ಬಿ."ಯು, ಎಲ್ಲಕ್ಕಿಂತ ಮಿಗಿಲಾದ ಕೊಡುಗೆಯೆಂದೇ ಹೇಳಬಹುದು. ಈ ಪ್ರದೇಶದ ಅಭಿವೃದ್ಧಿಯ ಬಗ್ಗೆ ಇದ್ದ ಶ್ರೀ ವೀರೇಂದ್ರರ ಕಳಕಳಿ ಮತ್ತು ಚಿಂತನೆಯನ್ನು ಸಮಸ್ತ ಹೈದರಾಬಾದ್ ಕರ್ನಾಟಕ ಪ್ರದೇಶದ ಜನತೆಯು ಎಂದಿಗೂ ಮರೆಯುವಂತಿಲ್ಲ. ಇದರ ಜೊತೆಗೆ, ಶ್ರೀ ವೀರೇಂದ್ರರು, ಅಧಿಕಾರ ಕಳೆದುಕೊಂಡರೂ, ಅದರ ಬಗ್ಗೆ ಅಷ್ಟು ದು:ಖ ಪಡುತ್ತಿರಲಿಲ್ಲ. ಹೈದರಾಬಾದ ಕರ್ನಾಟಕದ ಅಭಿವೃದ್ಧಿಯನ್ನು ಸಾಧಿಸುವುದೇ ಅವರ ಮುಖ್ಯ ಧ್ಯೇಯ ಮತ್ತು ಗುರಿಯಾಗಿತ್ತು. ಅವರು ಪದೇ ಪದೇ ಹೇಳುತ್ತಿರುವುದು, "ನೀರಾವರಿ ಯೋಜನೆಗಳು ಪೂರ್ಣಗೊಳ್ಳುವವರೆಗೂ, ಈ ಭಾಗದ ಆರ್ಥಿಕ ಅಭಿವೃದ್ಧಿ ಯಾಗುವುದಿಲ್ಲ, ಮತ್ತು ಪ್ರಾದೇಶಿಕ ಅಸಮಾನತೆ ಹೋಗುವುದಿಲ್ಲ".

ಶ್ರೀ ವೀರೇಂದ್ರರು, ಗುಲಬರ್ಗಾ ವಿಭಾಗಕ್ಕೆ ಒಂದು "ವಿಮಾನ ನಿಲ್ದಾಣ" ಸ್ಥಾಪಿಸುವ ಬಗ್ಗೆಯೂ, ಯೋಜನೆಯನ್ನು ಹಾಕಿ ಕೊಂಡಿದ್ದರು. ಆದರೆ, ಅವರ ಕನಸ್ಸು ಹಾಗೆಯೇ ಉಳಿದದ್ದು ಗುಲಬರ್ಗಾ ವಿಭಾಗದ ಜನರ ದುರ್ದೈವವೆಂದೇ ಹೇಳಬಹುದು.

ಹೀಗೆ, ಶ್ರೀ ವೀರೇಂದ್ರ ಪಾಟೀಲರು, ಕ್ರಿಯಾಶೀಲ ಮುಖ್ಯ ಮಂತ್ರಿಯಾಗಿ, ಮತ್ತು ದಕ್ಷ ಆಡಳಿತಗಾರರಾಗಿ, ರಾಷ್ಟ್ರದ, ರಾಜ್ಯದ ಮತ್ತು ಕ್ಷೇತ್ರದ ಸೇವೆಗೆ ಮತ್ತು ಅಭಿವೃದ್ಧಿಗೆ, ತಮ್ಮ ಸರ್ವಸ್ವವನ್ನೇ ಮುಡಿಪಿಟ್ಟು, ಒಬ್ಬ ರಾಷ್ಟ್ರೀಯ ಧುರೀಣರಾಗಿ ಮತ್ತು ಮುತ್ಸದ್ದಿಗಳಾಗಿ, ಸೇವೆಸಲ್ಲಿಸಿರುವುದು, ನಿಜವಾಗಿಯೂ, ಒಂದು ಮಹಾನ್ ಕೊಡುಗೆಯೆಂದು ಹೇಳಬೇಕಾಗುತ್ತದೆ. ಅದಕ್ಕಾಗಿಯೇ, ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರು, ಶ್ರೀ ವೀರೇಂದ್ರರ ನಿಧನದ ನಂತರ ಅವರ ಬಗ್ಗೆ ಈ ರೀತಿ ಹೇಳಿದ್ದುಂಟು.

" ಮುಖ್ಯ ಮಂತ್ರಿಯಾಗಿ, ತಮ್ಮ ಕರ್ತವ್ಯ ಏನು ಎಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಕರ್ನಾಟಕದ ಸಮರ್ಥ ಮತ್ತು ದಕ್ಷ ಮುಖ್ಯ ಮಂತ್ರಿಯಾಗಿದ್ದರು. ಕರ್ನಾಟಕವನ್ನು ಹಾಗೂ ದೇಶವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿದ್ದರು".

ಒಟ್ಟಾರೆ, ಹೇಳುವುದಾದರೆ, ಶ್ರೀ ವೀರೇಂದ್ರ ಪಾಟೀಲರು, ಒಬ್ಬ ಧೀಮಂತ

ಮುತ್ಸದ್ದಿಯಾಗಿ, ರಾಜ್ಯದ ಅಭಿವೃದ್ಧಿಗಾಗಿ, ಎಷ್ಟೋ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಜಾರಿಯಲ್ಲಿ ತಂದರು. ಅವರು ಯಾವಾಗಲೂ, ವಿಶಾಲ ಮನೋಭಾವನೆಯಿಂದ, ಕೇವಲ ಒಂದೇ ಕ್ಷೇತ್ರದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡವರಲ್ಲ. ಅಂಥ ಟೀಕೆಗಳಿಂದ ಮುಕ್ತರಾಗಿ, ಅವರು ಯಾವಾಗಲೂ ಹೇಳುತ್ತಿದ್ದುದು,

"ಇಡೀ ರಾಜ್ಯವೇ ನನ್ನ ಊರಾಗಿತ್ತು. ಸಮಗ್ರ ಕರ್ನಾಟಕದ ಅಭಿವೃದ್ಧಿ ಮಾಡುವುದನ್ನು ಬಿಟ್ಟು ಕೇವಲ ನನ್ನ ಊರಿಗೆ ಮಾತ್ರ ಒಂದಿಷ್ಟು ಕೆಲಸ ಮಾಡಿ ಕೊಟ್ಟರೆ ಯಾವ ಪುರುಷಾರ್ಥ ಸಾಧಿಸಿದಂತಾಗುತ್ತದೆ", ಎಂದಾಗಿತ್ತು.

ಅವರು ಮುಖ್ಯಮಂತ್ರಿಯಾಗಿದ್ದಾಗ, ರಾಜ್ಯದ ಉತ್ತರ ಭಾಗವಾಗಿರಲಿ ಅಥವಾ ದಕ್ಷಿಣ ಭಾಗವಾಗಲೀ, ಯಾವುದೇ ಪ್ರದೇಶವನ್ನು ಪಕ್ಷ ಪಾತದಿಂದ ನೋಡಿದ ನಿದರ್ಶನಗಳಿಲ್ಲ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯೂ, ಅವರ ಕನಸ್ಸಿನ ಕೂಸೇ ಆಗಿದ್ದರೂ, ಆ ಮಂಡಲಿಯಿಂದ, ಈಗ ಹೆಚ್ಚಿನ ಪ್ರಗತಿ ಆಗುತ್ತಿಲ್ಲ ಎಂಬ ಕೊರಗು ಅವರಲ್ಲಿ ಕೊನೆಯವರೆಗೂ ಇತ್ತು. ಶ್ರೀ ವೀರೇಂದ್ರರು, ಕಲಬುರ್ಗಿ ಜಿಲ್ಲೆಯಷ್ಟೇ ಅಲ್ಲ, ಕರ್ನಾಟಕ ಅಷ್ಟೇ ಅಲ್ಲ, ಇಡೀ ನಾಡೇ ನೆನಪಿನಲ್ಲಿಡುವ, ಕಣ್ಮಣಿಯಾಗಿ, ಬಾಳಿ ಬದುಕಿದರು.

ಕಾಸೂ.8050, ಸಶಾಮು. ತುಮಕೂರು, 1,000 ಪ್ರತಿಗಳು ದಿ: 31-07-2001.